ಪ್ರಭುಲಿಂಗಲೀಲೆ : ಒಂದು ದಾರ್ಶನಿಕ ಅಧ್ಯಯನ

ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಡಿ. ಎ. ಬಾಗಲಕೋಟ

ಬಿ.ಎಸ್‌ಸಿ., ಎಂ.ಎ., ಬಿ.ಎಡ್.

ನಿವೃತ್ತ ಶಿಕ್ಷಕ

ಎಸ್. ಆರ್. ಎ. ಸಂಯುಕ್ತ ಪದವಿಪೂರ್ವ ಕಾಲೇಜ

ಬನಹಟ್ಟಿ (೫೮೭೩೧೧) - ಬಾಗಲಕೋಟ ಜಿಲ್ಲೆ

ಮಾರ್ಗದರ್ಶಕರು

ಡಾ. ಎಫ್. ಟಿ. ಹಳ್ಳಿಕೇರಿ

ಎಂ.ಎ., ಪಿಎಚ್.ಡಿ.

ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೨

76

ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬.

SHREE MRITYUNJAYA
XEROX & BOOK BINDING
Ph. 441135
M.D. KUMBAR
AKKIPETH, NEAR C.B.T., DHARWAD-1

76

'ಡಿಂಗಣ್ಣನ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

76

76

ಪ್ರಭುಲಿಂಗಲೀಲೆ: ಒಂದು ದಾರ್ಶನಿಕ ಅಧ್ಯಯನ

ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಡಿ. ಎ. ಬಾಗಲಕೋಟ

ಬಿ.ಎಸ್‌ಸಿ., ಎಂ.ಎ., ಬಿ.ಎಡ್.

ನಿವೃತ್ತ ಶಿಕ್ಷಕ

ಎಸ್. ಆರ್.ಎ. ಸಂಯುಕ್ತ ಪದವಿಪೂರ್ವ ಕಾಲೇಜ

ಬನಹಟ್ಟಿ (೫೮೭೩೧೧) - ಬಾಗಲಕೋಟ ಜಿಲ್ಲೆ

ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾರ್ಗದರ್ಶಕರು

ಡಾ. ಎಫ್. ಟಿ. ಹಳ್ಳಿಕೇರಿ

ಎಂ.ಎ., ಪಿಎಚ್.ಡಿ.

ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೨

AKSHARA GRANTHALAYA

ACC.NO. 050712

8K0.9
BAG

050712

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗೌರವಕಾಣಿಕೆ ಆಗಿದೆ.

ಪ್ರಮಾಣ ಪತ್ರ

"ಪ್ರಭುಲಿಂಗಲೀಲೆ: ಒಂದು ದಾರ್ಶನಿಕ ಅಧ್ಯಯನ" ಎಂಬ ಈ ಮಹಾಪ್ರಬಂಧವನ್ನು ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಾದರ ಪಡಿಸಲು ಶ್ರೀ ಡಿ. ಎ. ಬಾಗಲಕೋಟ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಅಧ್ಯಯನದ ಯಾವುದೇ ಭಾಗವನ್ನು ಇದು ವರೆಗೆ ಯಾವುದೇ ಪದವಿಗೆ ಅವರು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ (೫೮೩೨೭೬)

ಮಾರ್ಗದರ್ಶಕರು

(ಡಾ. ಎಫ್.ಟಿ. ಹಳ್ಳಿಕೇರಿ)

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಘೋಷಣಾ ಪತ್ರ

"ಪ್ರಭುಲಿಂಗಲೀಲೆ: ಒಂದು ದಾರ್ಶನಿಕ ಅಧ್ಯಯನ" ಎಂಬ ಈ ಮಹಾಪ್ರಬಂಧವನ್ನು ಡಾ. ಎಫ್. ಟಿ. ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಸಿದ್ಧಪಡಿಸಿದ್ದೇನೆ. ಇದು ನನ್ನ ಮೂಲ ಸಂಶೋಧನಾ ಮಹಾಪ್ರಬಂಧವಾಗಿದ್ದು, ಈ ಅಧ್ಯಯನದ ಯಾವುದೇ ಭಾಗವನ್ನು ಇದು ವರೆಗೆ ಯಾವುದೇ ಪದವಿಗೆ ಇಡಿಯಾಗಿ ಇಲ್ಲವೆ ಬಿಡಿಯಾಗಿ ಯಾರೂ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇನೆ

ದಿನಾಂಕ :

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ (೫೮೩೨೭೬)

ಸಂಶೋಧಕರು

(ಡಿ. ಎ. ಬಾಗಲಕೋಟ)

[illegible]

[illegible]

[illegible]

ನಿವೇದನೆ

ಅಜ್ಜ ಮಹಾಲಿಂಗಪ್ಪನ ಭಕ್ತಿ, ನಿಷ್ಠೆ, ಪೂಜೆ, ಜಪ, ತಪ ಮುಂತಾದವುಗಳಿಂದ ಪ್ರಭಾವಿತನಾಗಿದ್ದ ನಾನು ಒಂಬತ್ತನೆಯ ವರ್ಗದಲ್ಲಿ ಓದುತ್ತಿದ್ದಾಗಲೇ ಶ್ರಾವಣಮಾಸದಲ್ಲಿ ಪ್ರಭುಲಿಂಗಲೀಲೆ ಕುರಿತು ಪ್ರವಚನ ಕೇಳಿದ್ದೆ. ಬಸವಾದಿ ಪ್ರಮಥರ ಆಚಾರ-ವಿಚಾರಗಳಿಂದ ಪ್ರಭಾವಿತನಾಗಿ ಆಗಲೇ ಶರಣ-ಶರಣೆಯರ ಕಥೆಗಳನ್ನು ಓದತೊಡಗಿದ್ದೆ. ಆದರೆ ಬದುಕಿಗೆ ಮಹತ್ವದ ತಿರುವು ದೊರೆತದ್ದು ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಗುರುಗಳಾದ ಮಹಾಲಿಂಗಪುರದ ಶ್ರೀ ಚೆನ್ನವೀರ ಶಿವಯೋಗಿಗಳನ್ನು ಕಂಡಾಗ. ಅವರ ನಡೆನುಡಿಗಳಿಗೂ ಶಿವಶರಣರ ತತ್ತ್ವಗಳಿಗೂ ವ್ಯತ್ಯಾಸವನ್ನು ಕಾಣದ ನಾನು ಅವರೊಂದಿಗೆ ನಡೆಸುತ್ತಿದ್ದ ಚರ್ಚೆಗಳಲ್ಲಿ ಷಟ್‌ಸ್ಥಲಮಾರ್ಗದ ಬಗ್ಗೆ ಸ್ಪಷ್ಟ ತಿಳುವಳಿಕೆಯನ್ನು ಪಡೆದುಕೊಂಡೆ. ಆಗ ಶಿವಶರಣರ ವಚನಗಳಿಗೆ ಹಾಗೂ ಶಿವಯೋಗಿಗಳ ತತ್ತ್ವಪದಗಳಿಗೆ ನಿಖರವಾದ ಅರ್ಥ ಗೋಚರಿಸತೊಡಗಿತು. ಈ ಅವಧಿಯಲ್ಲಿಯೇ ಆಕಸ್ಮಿಕವಾಗಿ ಚಾಮರಸನ ಪ್ರಭುಲಿಂಗಲೀಲೆ ಗ್ರಂಥವನ್ನು ಖರೀದಿಸುವಂತಾಯಿತು.

ಸ್ಥಳೀಯ ಮಾಸಿಕವೊಂದರಲ್ಲಿ ಪ್ರಕಟವಾಗುತ್ತಿದ್ದ, ತತ್ತ್ವಜ್ಞಾನವನ್ನು ಕುರಿತ ನನ್ನ ಲೇಖನಗಳನ್ನು ಓದುತ್ತಿದ್ದ ಹಿತೈಷಿಗಳು ಅವುಗಳನ್ನು ಒಟ್ಟಾಗಿ ಪ್ರಕಟಿಸಲು ತಿಳಿಸಿದರು. ಪ್ರಭುಲಿಂಗಲೀಲೆಯ ಸಂರಚನೆಯನ್ನು ಕುರಿತಾಗಿ ಅಲ್ಲಲ್ಲಿ ಮಾತನಾಡಿದುದನ್ನು ಕೇಳಿದವರು ಅದನ್ನು ಬರಹದ ರೂಪದಲ್ಲಿ ಕಾಯ್ದಿಡಲು ಸೂಚಿಸಿದರು. ತೊಂಬತ್ತರ ದಶಕದ ಉತ್ತರಾರ್ಧದಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತನಾಗಬೇಕಿದ್ದ ನಾನು ಆ ನಂತರ ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ ಬರಹದಲ್ಲಿ ತೊಡಗುವ ವಿಚಾರ ಇಟ್ಟುಕೊಂಡಿದ್ದೆ. ಆ ವೇಳೆಯಲ್ಲಿಯೇ ಚಾಮರಸನ ಕಾವ್ಯವನ್ನು ಕುರಿತು ಸಂಶೋಧನೆಗೆ ತೊಡಗುವ ವಿಚಾರ ಮೂಡಿ ಬಂದದ್ದು.

ಸಂಶೋಧನೆಯ ಪೂರ್ವಸಿದ್ಧತೆಯಾಗಿ ಪ್ರಭುಲಿಂಗಲೀಲೆ ಕಾವ್ಯವನ್ನು ಹಾಗೂ ಕವಿ ಚಾಮರಸನನ್ನು ಕುರಿತ ವಿಮರ್ಶೆಯನ್ನು ಸಂಗ್ರಹಿಸಲಾಯಿತು. ಕಾವ್ಯವನ್ನು ಪ್ರತ್ಯೇಕವಾಗಿ

[illegible]

[illegible]

[illegible]

[illegible]

ವಿಮರ್ಶಿಸಿದ ಕೃತಿಗಳಲ್ಲಿ, ಅದನ್ನು ಸಂಪಾದಿಸಿ ಪ್ರಸ್ತಾವನೆ ಅಥವಾ ಟೀಕೆ ಬರೆದಿರುವಲ್ಲಿ, ನಿಯತಕಾಲಿಕೆಗಳ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರೀಶಿಲಿಸುತ್ತ ಹೋದಂತೆ ಅವು ಏಕಮುಖವಾಗಿರದಿರುವುದು ಕಂಡು ಬಂದಿತು. ಅವುಗಳಲ್ಲಿ ಚಾಮರಸನ ಪ್ರತಿಭಾವಿಲಾಸವನ್ನು ಒಪ್ಪಿಕೊಳ್ಳುತ್ತಲೇ ಕಾವ್ಯದಲ್ಲಿ ಅನೇಕ ಕೊರತೆಗಳನ್ನು, ದೋಷಗಳನ್ನು ಎತ್ತಿ ತೋರಿಸಲಾಗಿತ್ತು. ಕೆಲವರು ಕಾವ್ಯದ ಒಗಟಿನ ಕಡೆಗೆ ಬೆರಳು ತೋರಿಸುತ್ತ ಅದರ ವಿವೇಚನೆಯಲ್ಲಿ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರು. ಪರಸ್ಪರ ಹೊಂದಾಣಿಕೆಯಾಗದ ಅನೇಕ ಅಂಶಗಳನ್ನು ಪರಿಶೀಲಿಸುತ್ತ ಹೋದಂತೆ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಇಂಥ ಸನ್ನಿವೇಶದಲ್ಲಿ ಒಂದು ದಿನ ದೇವದುರ್ಗದ ಝುಹಿರುದ್ದೀನ್ ಸಾಹೇಬರು ಮನೆಗೆ ಬಂದರು. ಶಿವಯೋಗಿಗಳ ತತ್ತ್ವಪದಗಳನ್ನು ಸುಶ್ರಾವ್ಯವಾಗಿ ಹಾಡುವ ಅವರು, ನಾನು ಪ್ರಭುಲಿಂಗಲೀಲೆ ಕುರಿತು ಸಂಶೋಧನೆಯಲ್ಲಿ ತೊಡಗಿದ್ದುದನ್ನು ಕೇಳಿ ಶಿಶುನಾಳ ಶರೀಫರ 'ಓದುವವಗ ಎಚ್ಚರಿರಬೇಕೋ ಪ್ರಭುಲಿಂಗಲೀಲಾ' ಪದವನ್ನು ಹಾಡಿದರು. ಅದನ್ನು ಕೇಳುತ್ತ ಹೋದ ನನಗೆ ಕತ್ತಲೆಯ ಕೋಣೆಯಲ್ಲಿ ಹಣತಿ ಹಚ್ಚಿಟ್ಟಂತಾಯಿತು. ಮತ್ತೆ ಮತ್ತೆ ಕಾವ್ಯವನ್ನು ಓದುತ್ತ ಹೋದಂತೆ ಮನಸ್ಸಿನ ದಿಗಂತದಾಚೆ ಬೆಳಕು ಹರಿಯತೊಡಗಿತು. ಇದೇ ವಿಚಾರದಲ್ಲಿ ಒಮ್ಮೆ ಧಾರವಾಡದ ಶ್ರೀಶೈಲ ಜತ್ತಿಯವರನ್ನು ಭೆಟ್ಟಿಯಾಗಿ ನನ್ನ ಆತಂಕವನ್ನು ತೋಡಿಕೊಂಡೆ. ಅವರು 'ಪ್ರಭುಲಿಂಗಲೀಲೆಯಲ್ಲಿ ಅಲ್ಲಮಪ್ರಭುವೆಂದರೆ ಶಿವ, ಶಿವನೆಂದರೆ ಅಲ್ಲಮಪ್ರಭು' ಎಂದು ನುಡಿದರು. ಅದನ್ನು ಕೇಳಿ ನನ್ನ ತಲೆಯಲ್ಲಿ ಮಿಂಚು ಸಂಚರಿಸಿದಂತಾಯಿತು.

ತೀರಾ ಅನಿರೀಕ್ಷಿತವಾಗಿ ಖರಿದಿಸಿದ್ದ ಡಾ. ವ್ಹಿ. ಎಸ್. ಕಂಬಿಯವರ 'ಚಾಮರಸನ ಅಮನಸ್ಕ ಕಾವ್ಯ', ಓದಿ, ಅಮನಸ್ಕತೆಯೇ ಚಾಮರಸನ ಕಾವ್ಯದ ವಸ್ತುವಾಗಿರಬಹುದೆಂದು ತಿಳಿದು ಕಂಬಿಯವರ ಕೃತಿಯಲ್ಲಿ ಚರ್ಚಿತವಾದ ಅಂಶಗಳೊಂದಿಗೆ ಶ್ರೀಶೈಲ ಜತ್ತಿಯವರ ಹೇಳಿಕೆಯನ್ನು ಸಮೀಕರಿಸಿ ಪ್ರಭುಲಿಂಗಲೀಲೆಯನ್ನು ಪರಿಶೀಲಿಸುತ್ತ ಹೋದೆ. ಆಗ ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಭಾರತೀಯ ಅಲಂಕಾರಿಕರ ಅಭಿಪ್ರಾಯಗಳನ್ನು ಗಮನಿಸುವುದರೊಂದಿಗೆ ಕಳೆದೆರಡು ಶತಮಾನಗಳಲ್ಲಿ ಮೈದಳೆದ ಪಾಶ್ಚಾತ್ಯ ಕಾವ್ಯಮೀಮಾಂಸೆಯನ್ನು ಪರಿಶೀಲಿಸಿದೆ. ಎರಡನ್ನೂ ಸಮೀಕರಿಸಿ ರಚಿಸಿದ ಕೃತಿಗಳನ್ನೂ

[illegible]

[illegible]

ಪರಿಶೀಲಿಸಿದೆ. ಇದೆಲ್ಲದರ ಹಿನ್ನಲೆಯಲ್ಲಿ ಸಮಗ್ರ ಕಾವ್ಯವೇ ಅಮನಸ್ಕತೆಗೆ ಪ್ರತಿಮೆಯಾಗಿರಬಹುದೆಂದು ಕಾವ್ಯವನ್ನು ಅವಲೋಕಿಸುತ್ತ ಹೋದಂತೆ ಅದ್ಭುತ ಲೋಕವೊಂದನ್ನು ಕಂಡ ಅನುಭವವಾಯಿತು. ಹೀಗೆ 'ಪ್ರಭುಲಿಂಗಲೀಲೆ' ಶಿವಯೋಗದ ಪ್ರತಿಮಾರೂಪವೆಂದು ತಿಳಿದು ಸಾಂಕೇತೀಕರಣವನ್ನು ಲಕ್ಷಿಸುತ್ತ ಸಾಗುತ್ತಿದ್ದಂತೆ ರೂಪುಗೊಂಡದ್ದು ಪ್ರಸ್ತುತ ಮಹಾಪ್ರಬಂಧದ ಚೌಕಟ್ಟು.

ಚಾಮರಸನ ಕಾವ್ಯ ತತ್ತ್ವಜ್ಞಾನದ ಮಹಾಸಾಗರ. ಅದರ ನೀರಿಗಿಳಿದು ಆಳ, ಹರವುಗಳನ್ನು ಪರಿಶೀಲಿಸುವುದು ಸಹಜವೆಂದು ತಿಳಿದಿದ್ದ ನನಗೆ ಪ್ರಬಂಧದ ವಿಷಯವನ್ನು ಸಂಯೋಜಿಸುವುದು ಬಹಳ ಕಠಿಣವಾಗಿ ಪರಿಣಮಿಸಿತು. ಇಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಂಯೋಜಿಸಿ, ಸಾಂದ್ರೀಕರಿಸಿ ಪ್ರಸ್ತುತಪಡಿಸಲು ಪ್ರಯತ್ನಿಸಿದ್ದೇನೆ.

ಪಿಎಚ್. ಡಿ. ಅಧ್ಯಯನ ಮಾಡಲು ಅವಕಾಶ ಮಾಡಿ ಕೊಟ್ಟ ಕನ್ನಡ ವಿಶ್ವವಿದ್ಯಾಲಯದ ನಿಕಟಪೂರ್ವ ಕುಲಪತಿಗಳಾಗಿದ್ದ ಡಾ. ಎಂ. ಎಂ. ಕಲಬುರ್ಗಿ ಹಾಗೂ ಇಂದಿನ ಕುಲಪತಿಗಳಾದ ಡಾ. ಎಚ್. ಜೆ. ಲಕ್ಕಪ್ಪಗೌಡ, ಆಡಳಿತಾತ್ಮಕ ಅನುಮೋದನೆ ನೀಡಿ ಅಧ್ಯಯನ ಮಾಡಲು ಸಹಕರಿಸಿದ ಕುಲಸಚಿವರಾದ ಡಾ. ಕೆ. ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ, ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎ. ವಿ. ನಾವಡಾ, ಮಾರ್ಗದರ್ಶನ ಮಾಡಲು ಒಪ್ಪಿಗೆ ನೀಡಿ ಸಂಶೋಧನೆಗೆ ಸಂಬಂಧಿಸಿದ ತಾಂತ್ರಿಕ ಅಂಶಗಳನೆಲ್ಲ ಸ್ಪಷ್ಟಗೊಳಿಸುತ್ತ ಪ್ರಬಂಧವನ್ನು ಮನ್ನಡೆಸುವುದಕ್ಕೆ ಸಮಯೋಚಿತ ಸಲಹೆ ಸೂಚನೆಗಳನ್ನು ಕೊಡುತ್ತ ಅದು ಪರಿಪೂರ್ಣ ರೂಪು ಪಡೆಯುವಲ್ಲಿ ಸಹಕರಿಸಿದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರವಾಚಕರಾದ ಡಾ. ಎಫ್. ಟಿ. ಹಳ್ಳಿಕೇರಿ, ಅಧ್ಯಯನದ ಸಂದರ್ಭದಲ್ಲಿ ಸೂಕ್ತವಾದ ಸಲಹೆ ಸೂಚನೆಗಳನ್ನು ನೀಡಿದ ಅಧ್ಯಾಪಕರಾದ ಡಾ. ಕೆ. ರವೀಂದ್ರನಾಥ ಇವರೆಲ್ಲರಿಗೆ ತುಂಬುಹೃದಯದ ಕೃತಜ್ಞತೆಗಳು.

ಸಂಶೋಧನೆಯ ಕ್ರಮವನ್ನು ಹಾಗೂ ಅದನ್ನು ಬರಹದಲ್ಲಿ ಒಡಮೂಡಿಸುವುದನ್ನು ತಿಳಿಸಿದ ಪ್ರೊ. ವ್ಹಿ.ಜಿ. ಮಾರೀಹಾಳ; ಶಿವಶರಣರಿಗೂ ನನಗೂ ಸೇತುವೆಯಾಗಿ ಪರಿಣಮಿಸಿದ ಶ್ರೀ ಶ್ರೀಶೈಲ ಜತ್ತಿ; ಬರಹದ ವಿಷಯದಲ್ಲಿ ಉಪಯುಕ್ತ ಸಲಹೆಗಳನ್ನು ನೀಡಿರುವ ಶ್ರೀ ಬ. ಗಿ. ಯಲ್ಲಟ್ಟಿ

ಹಾಗೂ ಡಾ. ಬಸವರಾಜ ಜಗಜಂಪಿ; ಕುರ್‌ಆನ್‌ದ ನೀತಿಗೂ ಶಿವಶರಣರ ನೀತಿಗೂ ವ್ಯತ್ಯಾಸವಿಲ್ಲವೆಂಬುದುದನ್ನು ತಿಳಿಸಿದ ಶ್ರೀ. ಎ. ಎ. ಕಲಾದಗಿಕರ, ಶ್ರೀ ಎಂ. ಎಂ. ಮೆಹರ, ಶ್ರೀ ಎನ್. ಎ. ಘನಿಬಂದ, ಶ್ರೀ ಎಸ್. ಟಿ. ಝುಂರೆ ಇವರೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ.

ಕನ್ನಡ ವಿಶ್ವವಿದ್ಯಾಲಯದ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಪಾಲರು ಆವಶ್ಯಕ ಗ್ರಂಥಗಳನ್ನು ಪರಿಶೀಲಿಸಲು ಅವಕಾಶ ಮಾಡಿ ಕೊಟ್ಟದ್ದಾರೆ. ಶ್ರೀ ಜಿ. ಎಸ್. ವಡಗಾಂವಿ ಹಾಗೂ ಶ್ರೀ ಎಸ್. ಟಿ. ಹಾವಿನಾಳ ಇವರೀರ್ವರು ತಮ್ಮ ಕಾಲೇಜದ ಗ್ರಂಥಾಲಯದ ತಮಗೆ ಸೇರಿದ ವಿಭಾಗಗಳನ್ನು ನನಗೆ ಮುಕ್ತವಾಗಿರಿಸುತ್ತ ಬಂದಿದ್ದಾರೆ. ಶ್ರೀಮತಿ ರಮಾ ಮುರಗೋಡ ಹಾಗೂ ಶ್ರೀ ಆಯ್. ಎಚ್. ಕಡ್ಲಿಮಟ್ಟಿ ಅಚ್ಚುಕಟ್ಟಾದ ಕಂಪ್ಯೂಟರ್ ಟೈಪಿಂಗ ತಯಾರಾಗಲು ಸಹಕಾರಿಯಾಗಿದ್ದಾರೆ. ಶ್ರೀ ಎಂ. ಡಿ. ಕುಂಬಾರ ಅಷ್ಟೇ ಅಚ್ಚುಕಟ್ಟಾದ ಬೈಂಡಿಂಗ್ ಕೆಲಸ ಮಾಡಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಸಂಶೋಧನೆಯ ವಿವಿಧ ಹಂತಗಳಲ್ಲಿ ಸಹೋದರ ಡಾ. ರಾಜೇಂದ್ರ, ಸಹಧರ್ಮಿಣಿ ಸೌ. ಶೋಭಾ ಹಾಗೂ ಮಕ್ಕಳೆಲ್ಲರೂ ನೀಡಿದ ಸಹಕಾರ ಮರೆಯಲಾಗದಂಥದು. ಅವರೆಲ್ಲರಿಗೆ ನನ್ನ ನೆನಕೆಗಳು.

ವಿದ್ಯಾರಣ್ಯ, ಹಂಪಿ

ದಿನಾಂಕ :

(ಡಿ. ಎ. ಬಾಗಲಕೋಟ)

ಪರಿವಿಡಿ

ಪುಟ

೧. ಪೀಠಿಕೆ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೨. ದರ್ಶನ ೧೨

೧. ಪ್ರಕೃತಿ–ಮಾನವ–ತರ್ಕ
೨. ಸಂಪ್ರದಾಯ ಮತ್ತು ತತ್ತ್ವಜ್ಞಾನ
೩. ಭಾರತೀಯ ದರ್ಶನಗಳು
೪. ತತ್ತ್ವಶಾಸ್ತ್ರ ಎಂದರೇನು ?
೫. ಶೈವ ಮತ್ತು ಅದರ ಪ್ರಭೇದಗಳು

೩. ಯೋಗದರ್ಶನ ೪೫

೧. ಶರಣಸಂಸ್ಕೃತಿ ಮತ್ತು ಸಾಹಿತ್ಯ
೨. ಷಟ್‌ಸ್ಥಲಮಾರ್ಗ
೩. ಯೋಗ ಎಂದರೇನು?
೪. ಚಿತ್ತವೃತ್ತಿ ಎಂದರೇನು?
೫. ಚಿತ್ತವೃತ್ತಿನಿರೋಧ ಹೇಗೆ ಸಾಧ್ಯ?
೬. ಅನುಭಾವ
೭. ಆಧಾರ ಗ್ರಂಥಗಳು
೮. ಕಾವ್ಯದಲ್ಲಿ ಯೌಗಿಕ ಅಂಶಗಳು
೯. ಶಿವಯೋಗ ನಿರೂಪಣೆಯ ಉದ್ದೇಶ

೪. ಲೋಕದರ್ಶನ ೧೬೩

೧. ಲೋಕವ್ಯವಹಾರ
೨. ಲೌಕಿಕರು
೩. ತಾಟಸ್ಥ್ಯದಿಂದ ಶರಣಾಮಾರ್ಗಕ್ಕೆ ಬಂದವರು
೪. ಊರ್ಧ್ವಕುಂಡಲಿನಿಯವರು
೫. ಅನುಭವಮಂಟಪದ ಸುತ್ತಮುತ್ತ
೬. ಪರಮಾರ್ಥಕ್ಕೆ ಏಣಿ

೫. ಕಾವ್ಯದರ್ಶನ ೨೧೪

ಭಾಗ ೧ : ಕಾವ್ಯವಿಚಾರ
೧. ಕಾವ್ಯ ಮತ್ತು ಅದರ ಸ್ವರೂಪ
೨. ವಸ್ತು ಮತ್ತು ರಚನೆ
೨.೧ ಕವಿ–ಕಾವ್ಯ–ಕಾಲ–ಜೀವನವಿಚಾರ
೨.೨ ಪ್ರಭುಲಿಂಗಲೀಲೆಯ ವಸ್ತು
೨.೩ ಕಾವ್ಯದ ಸಂರಚನೆ
೨.೪ ಕಾವ್ಯತತ್ತ್ವ–ನಿರೂಪಣೆ
೨.೫ ಪ್ರಭುಲಿಂಗಲೀಲೆಯ ವಾಚ್ಯ–ವ್ಯಂಗ್ಯ–ಧ್ವನಿ
(ಅ) ವಾಚ್ಯ : ಅಲ್ಲಮಪ್ರಭು ಚರಿತ್ರೆಯ ರೂಪದಲ್ಲಿ
(ಆ) ವ್ಯಂಗ್ಯ: ಪ್ರಭುವಿನ ಲೀಲೆಯ ರೂಪದಲ್ಲಿ
(ಇ) ಧ್ವನಿ : ಶಿವಯೋಗದ ಪ್ರತಿಮೆಯಾಗಿ
೨.೬ ಚಾಮರಸನ ಪ್ರತಿಮಾವಿಧಾನ
೨.೭ ಸಾಂಕೇತೀಕರಣ

ಭಾಗ ೨ : ಪ್ರತಿಮಾವ್ಯವಹಾರ ೨೮೧

೧. ಪ್ರತಿಮಾಕಾವ್ಯ–ನಿರೂಪಣೆ
೧.೧. ಗುರುಸ್ಥಲ
೧.೨. ಪಿಂಡೋತ್ಪತ್ತಿ ಸ್ಥಲ
೧.೩ ಮಾಯಾವಿಲಾಸವಿಡಂಬನ ಸ್ಥಲ
೧.೪ ಗುರುಮಹಾತ್ಮೆಯ ಸ್ಥಲ
೧.೫ ಪ್ರಸಾದಮಹಾತ್ಮೆಯ ಸ್ಥಲ
೧.೬ ತಾಮಸನಿರಸನ ಸ್ಥಲ
೧.೭ ಗುರುಕಾರುಣ್ಯಸ್ಥಲ
೧.೮ ಲಿಂಗಮಾಹಾತ್ಮ್ಯಸ್ಥಲ
೧.೯ ಜಂಗಮಮಾಹಾತ್ಮ್ಯಸ್ಥಲ
೧.೧೦ ಕ್ರಿಯಾಗಮಸ್ಥಲ
೧.೧೧ ಭಾವಾಗಮಸ್ಥಲ
೧.೧೨ ಜ್ಞಾನಾಗಮಸ್ಥಲ
೧.೧೩ ಭಾವಾರ್ಪಿತಸ್ಥಲ
೧.೧೪ ಸೇವ್ಯಸ್ಥಲ
೧.೧೫ ಜ್ಞಾನನಿಷ್ಪತ್ತಿಸ್ಥಲ
೧.೧೬ ಭಾವಪ್ರಕಾಶಸ್ಥಲ

೧.೧೭ ಜ್ಞಾನಪ್ರಕಾಶಸ್ಥಲ
೧.೧೮ ಅಂತ್ಯಪ್ರಸಾದಿಸ್ಥಲ
೧.೧೯. ಸೇವ್ಯಪ್ರಸಾದಿಸ್ಥಲ
೧.೨೦ ಭಾವಾಭಾವನಷ್ಟಸ್ಥಲ
೧.೨೧ ಜ್ಞಾನಶೂನ್ಯಸ್ಥಲ
೨ ನಾಮ-ರೂಪು-ಕ್ರಿಯೆಗಳು

ಭಾಗ ೩ ಕಾವ್ಯಸಾಮಗ್ರಿ ೩೫೫

೧. ಪಾತ್ರಚಿತ್ರಣ
೧.೧ ಚಾರಿತ್ರಿಕ ವ್ಯಕ್ತಿಗಳು ಹಾಗೂ ಕಾಲ್ಪನಿಕ ಪಾತ್ರಗಳು
(ಅ) ಅಲ್ಲಮಪ್ರಭು
(ಆ) ಮಾಯಾದೇವಿ
(ಇ) ಪ್ರಭು-ಮಾಯೆ-ವಿಮಳೆ-ಅಹಂಕಾರಾಚಾರ್ಯ
(ಈ) ಅಕ್ಕಮಹಾದೇವಿ
(ಉ) ಬಸವಣ್ಣ
(ಊ)ಇತರ ಪಾತ್ರಗಳು

೨. ಕಾವ್ಯದ ಪರಿಕರಗಳು
೨.೧ ಪ್ರಾರ್ಥನೆ
೨.೨ ವಚನಗಳು ಮತ್ತು ಪ್ರಭುಲಿಂಗಲೀಲೆ

೩ ಶಿವಯೋಗದ ಹೆಜ್ಜೆಗಳು

೪ ತತ್ತ್ವಕ್ಕೆ ಕಾವ್ಯದ ರೂಪ

೫. ಕಾವ್ಯದ ಶರೀರ
೫.೧ ಶೈಲಿ
೫.೨ ಭಾಷೆ ಮತ್ತು ಛಂದಸ್ಸು
೫.೩ ಅಲಂಕಾರ
೫.೪ ರಸ

೬. ಸಮಾರೋಪ ೪೨೫

ಗ್ರಂಥಋಣ ೪೩೩

ಅಧ್ಯಾಯ – ಒಂದು

ಪೀಠಿಕೆ

ಅಧ್ಯಾಯ-೧

ಪೀಠಿಕೆ

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ವೀರಶೈವ ಕವಿಗಳಿಗೂ ತತ್ತ್ವನಿರೂಪಣೆಗೂ ಅವಿನಾಭಾವ ಸಂಬಂಧ. ಇದಕ್ಕೆ ಕಾರಣವೆಂದರೆ ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಜರುಗಿದ ಬಸವಾದಿ ಪ್ರಮಥರ ಸಮಗ್ರ ಕ್ರಾಂತಿ. ಸಾಮಾನ್ಯರಿಂದ ಮೊದಲುಗೊಂಡು ತೀವ್ರ ವಿಚಾರವಾದಿಗಳ ವರೆಗೆ ಎಲ್ಲ ವರ್ಗದ ಚಿಂತಕರನ್ನೂ ತನ್ನ ಅಳವಿನಲ್ಲಿ ಸೆಳೆದುಕೊಂಡ ಈ ಕ್ರಾಂತಿ ಸಾಹಿತ್ಯಕ್ಷೇತ್ರಕ್ಕೊಂದು ಹೊಸ ದಿಕ್ಕನ್ನೇ ಸೂಚಿಸಿತು. ಸಂಪ್ರದಾಯದ ರೊಜ್ಜಿನಿಂದ ಹೊರಬರಲು ಬಯಸಿದವರೆಲ್ಲರೂ ಈ ಕ್ರಾಂತಿಯನ್ನು ಅಪ್ಪಿಕೊಂಡಿದ್ದಾರೆ. ಇದಕ್ಕೆ ಕಾರಣರಾದ ಬಸವಾದಿ ಪ್ರಮಥರನ್ನು ಶಿವನ ಪ್ರತಿರೂಪವೆಂದು ತಿಳಿದು ಭಕ್ತಿಯ ಕಾಣಿಕೆಯನ್ನು ಅರ್ಪಿಸಿದ್ದಾರೆ.

ಶಿವಶರಣರು ಜನಸಾಮಾನ್ಯರಿಂದ ಬಹಳಷ್ಟು ದೂರದಲ್ಲಿದ್ದ ಕೇವಲ ಪಂಡಿತರ ಸ್ವತ್ತಾಗಿದ್ದ ಸಂಸ್ಕೃತದ ಬಳಕೆಯನ್ನು ತಿರಸ್ಕರಿಸಿ ಸರಳಗನ್ನಡದಲ್ಲಿ ವಚನ ಸಾಹಿತ್ಯವನ್ನು ರಚಿಸಿದರು. ಕನ್ನಡವನ್ನು ಓದಿ ಬರೆಯಬಹುದಾಗಿದ್ದವರೆಲ್ಲರಿಗೂ ತಿಳಿಯುವಂತೆ ರಚಿತವಾದ ವಚನವಾಙ್ಮಯವು ಷಟ್‌ಸ್ಥಲ ಚೌಕಟ್ಟನ್ನು ಪಡೆದುಕೊಂಡಿದೆ. ತಮ್ಮ ನಡೆನುಡಿಗಳನ್ನು ಹಾಗೂ ಅಂತರಂಗ ಬಹಿರಂಗಗಳನ್ನು ಸಮನ್ವಯಗೊಳಿಸಿ ಷಟ್‌ಸ್ಥಲಗಳಲ್ಲಿ ತತ್ತ್ವವನ್ನು ನಿರೂಪಿಸಿದ ಶರಣರು ಸಾಹಿತ್ಯ ರಚನೆಯಲ್ಲಿಯೂ ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟರು.

ಅಲ್ಲಮಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದವರು ತಮ್ಮ ನಡೆನುಡಿಗಳಿಂದ ಸಾಹಿತ್ಯ ರಚನಾಕಾರರಲ್ಲಿ ಎಂಥ ಪರಿಣಾಮವನ್ನುಂಟು ಮಾಡಿದರೆಂದರೆ ಶಿವನ ಲೀಲೆಗಳನ್ನು ಕೊಂಡಾಡುವುದು ಹಾಗೂ ಶಿವಶರಣರ ನಡೆನುಡಿಗಳನ್ನು ಕೀರ್ತಿಸುವುದು ಒಂದೇ ಎಂಬ ಭಾವ ಕವಿಗಳಲ್ಲಿ ಗಟ್ಟಿಗೊಂಡಿತು. ಅಂತೆಯೇ ಅಗ್ರಗಣ್ಯ ಕವಿಗಳಲ್ಲಿ ಸ್ಥಾನ ಪಡೆದಿರುವ ಹರಿಹರ ತನ್ನ

ಆರಾಧ್ಯದೈವ ಹಂಪೆಯ ವಿರೂಪಾಕ್ಷನನ್ನು ಮಾತ್ರ ಹೊಗಳುವ, ಅನ್ಯ ದೇವರನ್ನು ಹೊಗಳದ ವೀರವ್ರತವನ್ನು ಕೈಗೊಂಡನು.[1] ಈ ವಿರೂಪಾಕ್ಷನಿಗೂ, ಶಿವಶರಣರಿಗೂ ಅಭೇದವನ್ನು ಕಲ್ಪಿಸಿ ಹರಿಹರ ರಚಿಸಿದ ಸಾಹಿತ್ಯ ವೀರಶೈವ ಕವಿಗಳಿಗೆಲ್ಲ ದಾರಿದೀಪವಾಯಿತು.

"ಸಾಹಿತ್ಯವನ್ನು ಚೆನ್ನಬಸವಣ್ಣ ಕಾಯಸಾಹಿತ್ಯ, ಆತ್ಮಸಾಹಿತ್ಯವೆಂದು ವರ್ಗೀಕರಿಸುತ್ತ 'ಕಾಯಸಾಹಿತ್ಯ ಎಲ್ಲರಿಗೂ ಉಂಟು, ಆತ್ಮ ಸಾಹಿತ್ಯ ಅಪೂರ್ವ' ಎನ್ನುತ್ತಾನೆ."[2] ಇಂಥ ಅಪೂರ್ವವಾದ ಆತ್ಮಸಾಹಿತ್ಯವನ್ನು ವಚನಗಳ ಮುಖಾಂತರ ಸೂರೆಗೊಂಡ ಶಿವಶರಣರು ಮುಂದೆ ವೀರಶೈವ ಕವಿಗಳು ರಚಿಸಿದ ಬಹುಮುಖ ಸಾಹಿತ್ಯಕ್ಕೆ ಕಾರಣೀಭೂತರಾದರು. ಗದ್ಯವೂ ಅಲ್ಲದ ಪದ್ಯವೂ ಅಲ್ಲದ, ಆದರೆ ಹೃದ್ಯ ಸಾಹಿತ್ಯವಾಗಿರುವ ವಚನವಾಙ್ಮಯದ ಜೊತೆಗೆ ಅನೇಕ ಶಿವಶರಣರು ಸ್ವರವಚನಗಳನ್ನು ರಚಿಸಿದ್ದಾರೆ. ಚೆನ್ನಬಸವಣ್ಣ ರಚಿಸಿದ ಕರಣಹಸಿಗೆ ತತ್ತ್ವಸಾಹಿತ್ಯದ ಬಹುಶ್ರೇಷ್ಠ ಕೃತಿಯಾಗಿದ್ದು ವೀರಶೈವತ್ವದ ವಿವರಣೆಗೆ ಆಧಾರವಾಗಿದೆ. ಹೀಗೆ ಶಿವಶರಣರಿಂದ ಪ್ರಯೋಗಿಸಲ್ಪಟ್ಟ ಈ ಎರಡು ಸಾಹಿತ್ಯ ಪ್ರಕಾರಗಳು ವೀರಶೈವ ಕವಿಗಳಿಗೆ ಪ್ರೇರಣೆಯಾಗಿವೆ.

ವೀರಶೈವ ಕವಿಗಳಿಗೆ ಷಟ್‌ಸ್ಥಲಾಚರಣೆಯನ್ನು ನಿರೂಪಿಸುವ ಮಹದಾಸೆ ಒಂದು ಕಡೆಯಾದರೆ ಅದನ್ನು ನಡೆನುಡಿಗಳಲ್ಲಿ ಬಿಂಬಿಸಿದ್ದ ಶಿವಶರಣರ ಬದುಕಿನ ಪ್ರಸಂಗಗಳನ್ನು ಕಾವ್ಯದ ವಸ್ತುವನ್ನಾಗಿ ಮಾಡುವ ವಿಚಾರ ಇನ್ನೊಂದೆಡೆಗೆ. ಹೀಗೆ ಈ ಎರಡನ್ನೂ ಸಮೀಕರಿಸಿ ರಚಿಸಿದ ಸಾಹಿತ್ಯಕೃತಿಗಳು ಯಥೇಷ್ಟವಾಗಿವೆ. ಕರಣಹಸಿಗೆಯನ್ನು ಅನುಸರಿಸುವಂಥ ಶುದ್ಧ ತತ್ತ್ವಸಾಹಿತ್ಯದ ರಚನೆಯಲ್ಲಿ ಕೆಲವರು ತಮ್ಮನ್ನು ತೊಡಗಿಸಿಕೊಂಡರೆ ಹಲವಾರು ಕವಿಗಳು ಶಿವಶರಣರ ಬದುಕಿನ ಪ್ರಸಂಗಗಳೊಂದಿಗೆ ತತ್ತ್ವಸಾಹಿತ್ಯದ ರಸಮಿಶ್ರಣವನ್ನು ಸಾಧಿಸಿದವರಾಗಿದ್ದಾರೆ. ಚಾಮರಸನ 'ಪ್ರಭುಲಿಂಗಲೀಲೆ' ಇಂಥ ಅಪೂರ್ವ ಮಿಶ್ರಣವನ್ನು ಹೊಂದಿರುವ ಅತ್ಯಪೂರ್ವ ವೀರಶೈವ ಸಾಹಿತ್ಯಕೃತಿಯಾಗಿದೆ.

ಹದಿನೈದನೆಯ ಶತಮಾನದಲ್ಲಿ, ವಿಜಯನಗರದ ಪ್ರೌಢದೇವರಾಯನ ಆಳ್ವಿಕೆಯಲ್ಲಿ ವೀರಶೈವ ಸಾಹಿತ್ಯ ಮತ್ತೊಮ್ಮೆ ಮೈದುಂಬಿಕೊಂಡಿತು. ಹರಿಹರ-ರಾಘವಾಂಕರ ಕಾಲದ ತೀವ್ರತೆ ವೀರಶೈವ ಸಾಹಿತ್ಯಕ್ಕೆ ಮತ್ತೊಮ್ಮೆ ಪ್ರಾಪ್ತವಾದುದು ಈ ಕಾಲದಲ್ಲಿಯೇ. ಅವುಗಳಲ್ಲಿ ಚಾಮರಸನ ಪ್ರಭುಲಿಂಗಲೀಲೆ ಹಾಗೂ ಶೂನ್ಯ ಸಂಪಾದನೆಗಳು ಪ್ರಮುಖ ಸ್ಥಾನ ಪಡೆದುಕೊಳ್ಳುತ್ತವೆ. ಎರಡರ ಗುರಿ ಒಂದೇ ಆದರೂ

[illegible]

[illegible]

[illegible]

[illegible]

ಮಾರ್ಗ ಬೇರೆ ಬೇರೆ. 'ಶೂನ್ಯಸಂಪಾದನೆಗಳದು ತತ್ತ್ವದೃಷ್ಟಿ, ಚಾಮರಸನದು ಕಾವ್ಯದೃಷ್ಟಿ'[೩]. ಈ ಕಾರಣದಿಂದಾಗಿಯೇ ವೀರಶೈವತತ್ವಕ್ಕೆ ಸಂಬಂಧ ಪಡುವ ಆತ್ಮಸಾಹಿತ್ಯವನ್ನು ಚರ್ಚಿಸುವಾಗೆಲ್ಲ ಪ್ರಭುಲಿಂಗಲೀಲೆಯನ್ನು ಉದ್ಧರಿಸುವುದು ಅನಿವಾರ್ಯವಾಯಿತು. ವೀರಶೈವ ಸಾಹಿತ್ಯವನ್ನು ಪರಿಶೀಲಿಸುವವರೆಲ್ಲರೂ ಈ ಮಾತನ್ನು ಅನುಮೋದಿಸುತ್ತಾರೆ. ಆದರೆ ಚಾಮರಸನ ನಿರೂಪಣೆ ಎಂಥ ಒಗಟಿನ ಸ್ವರೂಪವನ್ನು ಪಡೆದುಕೊಂಡಿದೆಯೆಂದರೆ ಆತನ ಕಾವ್ಯದೃಷ್ಟಿಯನ್ನು ಅರ್ಥೈಸುವುದಕ್ಕೆ ಪ್ರಯತ್ನಿಸಿದವರೆಲ್ಲರೂ ಪರಿಪೂರ್ಣತೆಯನ್ನು ಕಾಣದೆ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣವೆಂದರೆ ಪ್ರಭುಲಿಂಗಲೀಲೆಯನ್ನು ಪರಿಶೀಲಿಸುವ ದೃಷ್ಟಿಕೋನಗಳು ಚಾಮರಸನ ವಿಶಿಷ್ಟ ದೃಷ್ಟಿಕೋನದಿಂದ ಬೇರೆಬೇರೆಯಾಗಿರುವುದು.

ತನ್ನ ಏಕೈಕ ಕೃತಿಯಿಂದ ಅತ್ಯಂತ ಜನಪ್ರಿಯನಾಗಿರುವ ಈ ಚಾಮರಸನ ಪ್ರತಿಭೆಯನ್ನು ಕುರಿತು ಹಾಗೂ ಆತನ ಕಾವ್ಯವನ್ನು ಕುರಿತು ತನ್ನ ಕಾಲದಿಂದಲೇ ಆತ ಚರ್ಚೆಗೊಳ್ಳುತ್ತ ಬಂದಿರಬಹುದೆಂದು ತೋರುತ್ತದೆ. ಚಾಮರಸನ ನಂತರದ ಪ್ರತಿಯೊಂದು ಶತಮಾನದಲ್ಲಿಯೂ ಈ ಕುರಿತು ಕಾವ್ಯಗಳು ರಚಿತವಾಗಿವೆ. ಇತ್ತೀಚೆಗೆ, ಕಳೆದ ಶತಮಾನದಲ್ಲಿ, ಈ ವಿಷಯವಾಗಿ ವಿಪುಲವಾದ ಚರ್ಚೆ ಹಾಗೂ ವಿಮರ್ಶೆ ನಡೆದುಕೊಂಡು ಬಂದಿದೆ, ಈಗಲೂ ನಡೆಯುತ್ತಿದೆ.

ಚಾಮರಸನಿಗೆ ಸಂಬಂಧಿಸಿದಂತೆ ಉಲ್ಲೇಖಗಳನ್ನು ಹೊಂದಿರುವ ಕಾವ್ಯಗಳೆಂದರೆ ಅದೃಶ್ಯ ಕವಿಯ 'ಪ್ರೌಢರಾಯನ ಕಾವ್ಯ'[೪] (ಕ್ರಿ.ಶ. ೧೫೨೫), ಸಿದ್ಧನಂಜೇಶನ 'ಗುರುರಾಜಚಾರಿತ್ರ'[೫] (ಕ್ರಿ.ಶ. ೧೫೮೦), ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ'[೬](ಕ್ರಿ.ಶ. ೧೬೭೨) ಹಾಗೂ ಶಂಕರ ಕವಿಯ 'ಚೋರಬಸವ ಚರಿತ್ರೆ'[೭] (ಕ್ರಿ.ಶ. ೧೭೬೩). ಈ ಕಾವ್ಯಗಳಲ್ಲಿ, ವಿಶೇಷವಾಗಿ ಪ್ರೌಢರಾಯನ ಕಾವ್ಯದಲ್ಲಿ, ಬರುವ ಸನ್ನಿವೇಶಗಳ ಸತ್ಯಾಸತ್ಯತೆಗಳಿಗಿಂತ ಅವುಗಳನ್ನು ಆಯ್ದುಕೊಂಡ ಉದ್ದೇಶದ ಹಿನ್ನೆಲೆ ಸ್ಪಷ್ಟವಾಗುತ್ತದೆ. ಅದೆಂದರೆ ಅದ್ಭುತ ಪ್ರತಿಭೆಯ ಚಾಮರಸನ ಕೃತಿ ಪ್ರಭುಲಿಂಗಲೀಲೆ ಶ್ರೇಷ್ಠ ಕೃತಿ ಎಂಬುದು.[೮] ಇದಕ್ಕೆ ಸಾಕ್ಷಿಯಾಗಿ ಚಾಮರಸನ ನಂತರ ಒಂದೆರಡು ಶತಮಾನಗಳಲ್ಲಿಯೇ ಅದು ಸಂಸ್ಕೃತ, ತಮಿಳು, ತೆಲುಗು ಹಾಗೂ ಮರಾಠಿ ಭಾಷೆಗಳಲ್ಲಿ ಅನುವಾದ ಮಾಡಲ್ಪಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಅದು ಪೂರ್ಣರೂಪದಲ್ಲಾಗಲಿ, ಖಂಡರೂಪದಲ್ಲಾಗಲಿ ವಿಶ್ವವಿದ್ಯಾಲಯಗಳ

[illegible]

[illegible]

[illegible]

ಯಾವುದಾದರೊಂದು ಹಂತದಲ್ಲಿ ಪ್ರತಿವರ್ಷವೂ ಪಠ್ಯವಾಗಿ ಅಭ್ಯಸಿಸಲ್ಪಡುತ್ತಿದೆ. ಈಗ ಈ ಪ್ರವೃತ್ತಿ ಕಡಲಿನಾಚೆಗೂ ವಿಸ್ತರಿಸುತ್ತಿದೆ.

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿಯೇ ವೀರಪ್ಪ ಬಸವಪ್ಪ ಬಿಳಿಅಂಗಡಿಯವರು 'ಗದ್ಯಾತ್ಮಕ ಪ್ರಭುಲಿಂಗಲೀಲೆ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಅದೇ ರೀತಿ ಬಿ. ಸಿ. ಜವಳಿ ಮತ್ತು ಮ. ವೀರಭದ್ರಪ್ಪಾ ಇವರು ಕೂಡ ೧೯೬೨ ರಲ್ಲಿ 'ಚಾಮರಸ ಕವಿಯ ಪ್ರಭುಲಿಂಗಲೀಲೆ-ಗದ್ಯಾನುವಾದ' ಕೃತಿಯನ್ನು ಪ್ರಕಟಿಸಿದ್ದಾರೆ. 'ಪ್ರಭುಲಿಂಗಲೀಲೆಯ ಸಂಗ್ರಹ'ವನ್ನು ಎಂ. ಎಸ್. ಬಸವಲಿಂಗಯ್ಯ ಹಾಗೂ ಎಂ. ಆರ್. ಶ್ರೀನಿವಾಸಮೂರ್ತಿ ಇವರೀರ್ವರು ಸಂಪಾದಿಸಿ ಸುದೀರ್ಘವಾದ ಪೀಠಿಕೆಯೊಂದಿಗೆ ೧೯೩೪ ರಲ್ಲಿ ಪ್ರಕಟಿಸಿದ್ದಾರೆ. ಪ್ರಾರಂಭದಲ್ಲಿ ಒಂದನೆಯ ಪರಿಶಿಷ್ಟದಲ್ಲಿ ಪ್ರಕ್ಷಿಪ್ತವೆಂದು ತೋರುವ ನಾಲ್ಕು ಕಂದ ಪದ್ಯಗಳು ಹಾಗೂ ಒಂದು ವೃತ್ತ ಇವೆ. ಜೊತೆಯಲ್ಲಿ ಅದಕ್ಕೆ ಸಂಬಂಧಿಸಿದ ಪೀಠಿಕಾ ಪ್ರಕರಣದ ಕಥೆ ಇದೆ. ಎರಡನೆಯ ಪರಿಶಿಷ್ಟದಲ್ಲಿ ಹರಿಹರ ಕವಿಯ 'ಪ್ರಭುದೇವರ ರಗಳೆ' ಇದೆ. ಕೊನೆಯಲ್ಲಿ ಆಯ್ದ ೪೧ ಪದ್ಯಗಳಿಗೆ ಅರ್ಥವಿವರಣೆ ಇದೆ. ಪ್ರೊ. ಶಿ. ಶಿ. ಬಸವನಾಳರು ಕಾವ್ಯವನ್ನು ಇಡಿಯಾಗಿ ಸಂಪಾದಿಸಿ ಉಚಿತ ಪ್ರಸ್ತಾವನೆಯೊಂದಿಗೆ ೧೯೩೮ ರಲ್ಲಿ ಪ್ರಕಟಿಸಿದ್ದಾರೆ. ಅದೇ ರೀತಿ ಡಾ. ಎಂ. ಎಸ್. ಸುಂಕಾಪುರ ಅವರು ಕಾವ್ಯವನ್ನು ಇಡಿಯಾಗಿ ಸಂಪಾದಿಸಿ ಪ್ರಸ್ತಾವನೆಯೊಂದಿಗೆ ೧೯೭೬ರಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ನಾಲ್ಕು ಕಂದಪದ್ಯಗಳು ಹಾಗೂ ಒಂದು ವೃತ್ತವನ್ನು ಕಾವ್ಯದ ಪ್ರಾರಂಭದಲ್ಲಿ ಕೊಟ್ಟಿದ್ದಾರೆ. ಡಾ. ಎಸ್. ವಿದ್ಯಾಶಂಕರ್ ಕಾವ್ಯದ ಪ್ರತಿಯೊಂದು ಪದ್ಯದ ಸರಳ ಗದ್ಯಾನುವಾದ ಸಹಿತವಾಗಿ ೧೯೭೬ರಲ್ಲಿ ಪ್ರಕಟಿಸಿದ್ದಾರೆ.

ಮೇಲೆ ತಿಳಿಸಿದ ಮಹನೀಯರುಗಳ ಪ್ರಯತ್ನಗಳಲ್ಲಿ ಪ್ರಭುಲಿಂಗಲೀಲೆಯು ಪದ್ಯರೂಪದಲ್ಲಾಗಲಿ, ಗದ್ಯರೂಪದಲ್ಲಾಗಲಿ ಪ್ರಕಟಗೊಳ್ಳುವುದರ ಜೊತೆಗೆ ಉಪಯುಕ್ತ ವಿಮರ್ಶೆಯೂ ಮೂಡಿ ಬಂದಿದೆ. ಇನ್ನು ಕೆಲವರು ಕಾವ್ಯವನ್ನು ಇಡಿಯಾಗಿ ವಿಮರ್ಶೆಯ ನೆಲೆಯಲ್ಲಿಯೇ ನಿಂತು ನೋಡಿದವರಿದ್ದಾರೆ. ರಂ. ಶ್ರೀ. ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆ ಗ್ರಂಥದಲ್ಲಿ 'ಚಾಮರಸ' ಎಂಬ ಉಪಶಿರೋನಾಮೆಯಡಿಯಲ್ಲಿ ಕಾವ್ಯದ ವಿಮರ್ಶೆಗೆ ಐದು ಪುಟಗಳನ್ನು ಮೀಸಲಿರಿಸಿದ್ದಾರೆ. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿಯವರು 'ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ' ಎಂಬ ಸಂಶೋಧನ ಮಹಾಪ್ರಬಂಧದಲ್ಲಿ 'ಪ್ರಭುಲಿಂಗಲೀಲೆಯಲ್ಲಿ ಪ್ರಭು-ಲಿಂಗ-ಲೀಲೆ' ಎಂಬ ವಿಭಾಗದಲ್ಲಿ

ಪ್ರಭುಲಿಂಗಲೀಲೆಯ ಹಿನ್ನೆಲೆ, ಮಾಯಾಸಂಪುಟ, ಶಿವಶರಣ ಲೀಲಾ ಸಂಪುಟ ಎಂದು ವಿಂಗಡಿಸಿ ಚರ್ಚಿಸಿದ್ದಾರೆ. ಕೊನೆಯಲ್ಲಿ ಪ್ರಭುಲಿಂಗಲೀಲೆಯ ಒಟ್ಟು ನೋಟವನ್ನು ಲಕ್ಷಿಸುತ್ತ ಅಲ್ಲಿಯ ದರ್ಶನವನ್ನು ಎತ್ತಿ ತೋರಿಸಲು ಪ್ರಯತ್ನಿಸಿದ್ದಾರೆ. ಡಾ. ಜಿ. ಎಸ್. ಛಿವಾರಿಯವರು 'ದಾರ್ಶನಿಕ ಕವಿ ಚಾಮರಸನ ಜೀವನ, ಸಾಹಿತ್ಯ, ತತ್ತ್ವಗಳ ವಿಮರ್ಶಾತ್ಮಕ ಅಧ್ಯಯನ' ಎಂಬ ಸಂಶೋಧನ ಮಹಾಪ್ರಬಂಧ (ಅಪ್ರಕಟಿತ)ದಲ್ಲಿ ಚಾಮರಸನ ಜೀವನ, ಪ್ರಭುಲಿಂಗಲೀಲೆಯ ತಾತ್ವಿಕ ತಳಹದಿ, ಜಂಗಮಲಿಂಗನ ಲೋಕಕಲ್ಯಾಣಯಾತ್ರೆ, ಪ್ರಭುಲಿಂಗಲೀಲೆಯ ದಿವ್ಯ ದರ್ಶನ ಈ ಅಧ್ಯಾಯಗಳನ್ನು ನಿರ್ಮಿಸಿಕೊಂಡು ಚರ್ಚಿಸಿದ್ದಾರೆ. ಅನುಬಂಧದಲ್ಲಿ ಪ್ರಭುಲಿಂಗಲೀಲೆ ಮತ್ತು ಶೂನ್ಯಸಂಪಾದನೆ, ಪ್ರಭುಲಿಂಗಲೀಲೆಯ ಭಾಷಾಂತರಗಳು, ಪ್ರಭು ಚರಿತೆಯುಳ್ಳ ಅನ್ಯಕೃತಿಗಳು ಎಂಬ ಮೂರು ವಿಷಯಗಳನ್ನು ಲಕ್ಷಿಸಿದ್ದಾರೆ. ಕೊನೆಯದಾಗಿ ಪರಿಶಿಷ್ಟದಲ್ಲಿ ಪ್ರಭುಚರಿತ್ರೆಯುಳ್ಳ ಕೃತಿಗಳನ್ನು ತಿಳಿಸಿದ್ದಾರೆ. ಡಾ. ವಿ. ಎಸ್. ಕಂಬಿಯವರು 'ಚಾಮರಸನ ಅಮನಸ್ಕ ಕಾವ್ಯ' ಕೃತಿಯಲ್ಲಿ ಚಾಮರಸನ ತಾತ್ವಿಕ ಪ್ರಣಾಲಿ, ಪ್ರಭುಲಿಂಗಲೀಲೆಯಲ್ಲಿ ಭಕ್ತಿಯ ಪ್ರಭೇದಗಳು, ಬಸವರಾಜನ ರಾಜಯೋಗ, ಮಾಯಾವಿಚಾರ, ಕರ್ಮವಿಚಾರ ಹಾಗೂ ಅಮನಸ್ಕ ಯೋಗ ಇವುಗಳನ್ನು ಪ್ರಮುಖ ಅಂಶಗಳನ್ನಾಗಿ ಪರಿಗಣಿಸಿ ಚರ್ಚಿಸಿದ್ದಾರೆ.

ಇದೇ ರೀತಿ ಚಾಮರಸನನ್ನು ಹಾಗೂ ಅವನ ಕಾವ್ಯವನ್ನು ಕುರಿತಾಗಿ ಕೃತಿಗಳನ್ನು ರಚಿಸಿದವರಿದ್ದಾರೆ. ಕಾವ್ಯದಲ್ಲಿ ಬರುವ ಅಲ್ಲಮಪ್ರಭು, ಮಾಯಾದೇವಿ, ಅಕ್ಕಮಹಾದೇವಿ, ಸಿದ್ಧರಾಮ, ಮರುಳುಶಂಕರದೇವ ಈ ಪಾತ್ರಗಳನ್ನು ಎತ್ತಿಕೊಂಡು ಚರ್ಚಿಸಿದವರಿದ್ದಾರೆ; ಒಂದೊಂದು ಪ್ರಸಂಗವನ್ನು ಎತ್ತಿಕೊಂಡು ಚರ್ಚಿಸಿದವರೂ ಇದ್ದಾರೆ. ಕೆಲವರು ಚಾಮರಸನನ್ನು ರಾಘವಾಂಕ ಹಾಗೂ ಕುಮಾರವ್ಯಾಸ ಇವರೊಂದಿಗೆ ತುಲನಾತ್ಮಕವಾಗಿ ವಿವೇಚಿಸಿದ್ದಾರೆ. ಕವಿಯ ದರ್ಶನವನ್ನು ಚರ್ಚಿಸಿದವರಿದ್ದಾರೆ. ಕಾವ್ಯದಲ್ಲಿ ತೋರುವ ತಾತ್ವಿಕ ರೂಪ, ಶೈಲಿ, ಕಾವ್ಯಗುಣ, ಪಾಠಾಂತರಗಳು, ಷಟ್ಸ್ಥಲದಿರೂಪ, ಶಿವಯೋಗ ಇವುಗಳನ್ನು ಎತ್ತಿಕೊಂಡು ಕೃತಿಗಳನ್ನು ರಚಿಸಿದ್ದಾರೆ; ಲೇಖನಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲ ಕೃತಿಗಳ ಹಾಗೂ ಸಂಬಂಧಿಸಿದ ಲೇಖಕರ ಪಟ್ಟಿ ಕೆಳಗಿನಂತಿದೆ. ಕ್ರಮವು ವಿಷಯಕ್ಕೆ ಅನುಗುಣವಾಗಿದೆ.

೧. ಚಾಮರಸ — ಎಚ್. ತಿಪ್ಪೇರುದ್ರಸ್ವಾಮಿ (೧೯೭೧)

ಕಮಲಾ ಹಂಪನಾ(೧೯೭೩)

		ವ್ಹಿ. ಎಂ. ಗುಂಡಾರಾಧ್ಯ
೨.	ಚಾಮರಸನ ವ್ಯಕ್ತಿತ್ವ	ಎ. ಕೆ. ಕುಲಕರ್ಣಿ(೧೯೭೨)
೩.	ಚಾಮರಸನ ಪ್ರಭುಲಿಂಗಲೀಲೆ	ಕೆ. ಸುಬ್ಬರಾಯಪ್ಪ (೧೯೫೫)
		ಶಿ. ಚೆ. ನಂದಿಮಠ (೧೯೬೨)
		ವಿ. ರು. ಕೊಪ್ಪಳ
		ಅನಸೂಯಾ ಗದುಗಿನಮಠ
		ದ. ರಾ. ಬೇಂದ್ರೆ
೪.	ಚಾಮರಸನ ಅಲ್ಲಮಪ್ರಭು	ನಾರಾಯಣ ಹುಲಗಿ (೧೯೬೪)
		ಬಿ. ಎಸ್. ಮೂರ್ತಿರಾವ್
೫.	ಚಾಮರಸನ ಮಾಯೆ	ಸಂಗಮನಾಥ .ಜಿ. ಹಂಡಿ (೧೯೭೦)
೬.	ಚಾಮರಸನ ಮಾಯಾದೇವಿ ಹಾಗೂ ಅಕ್ಕಮಹಾದೇವಿ	ವೀರೇಶ ವಾಲಿ (೧೯೭೦)
೭.	ಮಾಯಾಕೋಲಾಹಲ	ಮಲ್ಲಿಕಾರ್ಜುನ ಶಿವಯೋಗಿ(೧೯೬೩)
		ಎಂ. ಎಸ್. ಸುಂಕಾಪುರ್ ಮತ್ತು
		ಕೆ. ಎಸ್. ಪಾಟೀಲ (೧೯೬೬)
		ಸಂಗಮನಾಥ. ಜಿ. ಹಂಡಿ (೧೯೭೦)
		ದ. ಲ. ಕೆರೂರ
೮.	ಚಾಮರಸನ ಮರುಳು ಶಂಕರದೇವರ ಗುಪ್ತಭಕ್ತಿ	ಎಂ. ಜಿ. ನಂಜುಂಡಾರಾಧ್ಯ
೯.	ಚಾಮರಸ ರಾಘವಾಂಕರ	
	ಕಾವ್ಯಗಳಲ್ಲಿ ನಿರೂಪಿತ ಸಿದ್ಧರಾಮ	ಬಸವಲಿಂಗಯ್ಯ ಮತ್ತು ಮಲ್ಲಾಪುರ
೧೦.	ಚಾಮರಸನ ಶಿವಯೋಗದ ನಿಲವು	ನಿಜಲಿಂಗಮ್ಮ. ವೀ. ಕೊಪ್ಪಳ
೧೧.	ಚಾಮರಸನ ಪ್ರತಿಮಾ ಪ್ರಪಂಚ	ಬಿ. ವಿ. ವೀರಭದ್ರಪ್ಪ (೧೯೭೧)
೧೨.	ಅನುಪಮ ಅಲ್ಲಮಪ್ರಭು	ಅಮಲಾನಂದ ಬೆಟ್ಟದೂರು (೧೯೬೨)
೧೩.	ಚಾಮರಸ–ಕವಿ, ಕೃತಿದರ್ಶನ	ಕಮಲಾ ಹಂಪನಾ
೧೪.	ಚಾಮರಸ–ಕುಮಾರವ್ಯಾಸ	ಭೀಮರಾವ ಚಿಟಗುಪ್ಪಿ(೧೯೭೪)

೧೫.	ಚಾಮರಸನು ಚಿತ್ರಿಸಿದ ಅಲ್ಲಮಪ್ರಭುವಿನ ವ್ಯಕ್ತಿತ್ವ	ವೀರೇಶ ವಾಲಿ
೧೬.	ತಾಮಸಕಳೆ ಮಾಯೆಯನ್ನು ಗೆದ್ದ ಅಲ್ಲಮ	ಶಿವಪುತ್ರ ದೇವರು.
೧೭.	ಪ್ರಭುದೇವನ ವ್ಯಕ್ತಿತ್ವ	ಸ. ಸ. ಮಾಳವಾಡ(೧೯೬೩)
೧೮.	ಪ್ರಭುಲಿಂಗಲೀಲೆಯ ತಾತ್ತ್ವಿಕ ರೂಪಕ	ಎಲ್. ಆರ್. ಹೆಗಡೆ.
೧೯.	ಪ್ರಭುಲಿಂಗಲೀಲಾ ಪ್ರವಚನ	ಷ. ಬ್ರ. ಶ್ರೀ. ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ ತೆಲಸಿಂಗ(೧೯೯೬)
೨೦.	ಪ್ರಭುಲಿಂಗಲೀಲೆಯ ಶೈಲಿ ಹಾಗೂ ಕಾವ್ಯ ಗುಣ.	ವೀರೇಶ ವಾಲಿ
೨೧.	ಪ್ರಭುಲಿಂಗಲೀಲೆಯ ಸಂಗ್ರಹ	ಮ. ಪ್ರ. ಪೂಜಾರ ದ. ರಾ. ಬೇಂದ್ರೆ
೨೨.	ಪ್ರಭುಲಿಂಗಲೀಲೆ ಎರಡು ವಿಚಾರಗಳು	ದ. ರಾ. ಬೇಂದ್ರೆ(೧೯೪೦)
೨೩.	ಚಾಮರಸ	ಸಂ. ಜಿ. ಎಸ್. ಕಾಪಸೆ
೨೪.	ಅಲ್ಲಮ ಲೀಲೆ	ಸಂ. ಡಾ. ರಾಮಕೃಷ್ಣ ಮರಾಠೆ.
೨೫.	ಪ್ರಭುಲಿಂಗಲೀಲೆಯ ಪಾಠಪರಿಶೋಧನೆ	ವ್ಹಿ. ಶಿವಾನಂದ
೨೬.	ಷಟ್ಪದಿರೂಪಕ್ಕೆ ಚಾಮರಸನ ಕೊಡುಗೆ	ಗುರುಲಿಂಗ ಕಾಪಸೆ(೧೯೭೫)

ಕೊನೆಯ ಎರಡು ಪ್ರಯತ್ನಗಳು ಕಾವ್ಯದ ತಾಂತ್ರಿಕ ವ್ಯವಸ್ಥೆಗೆ ಸಂಬಂಧ ಪಡುತ್ತವೆ. ಉಳಿದ ಲೇಖಕರು–ಲೇಖಕಿಯರು ತಮ್ಮ ದೃಷ್ಟಿಕೋನಗಳಿಗೆ ಪ್ರಮುಖವಾಗಿ ಎರಡು ನೆಲೆಗಳನ್ನು ಆಯ್ದುಕೊಂಡಿದ್ದಾರೆ. ಮೊದಲನೆಯದು 'ಅಲ್ಲಮಪ್ರಭುವಿನ ಚರಿತ್ರೆ', ಎರಡನೆಯದು 'ಅಲ್ಲಮಪ್ರಭುವಿನ ಲೀಲೆ'. ಇನ್ನು ಕೆಲವರು ಈ ಎರಡು ನೆಲೆಗಳ ಸಮನ್ವಯವನ್ನು ಲಕ್ಷಿಸಿದ್ದಾರೆ. ಕವಿ–ಕಾವ್ಯದರ್ಶನವನ್ನು ಎತ್ತಿಕೊಂಡಾಗಲೂ ಈ ಎರಡು ನೆಲೆಗಳನ್ನು ಮಾತ್ರ ಆಶ್ರಯಿಸಿದ್ದಾರೆ. ಹೀಗಾಗಿ ಅವರ ಅಭಿಪ್ರಾಯಗಳೆಲ್ಲ ಚರಿತ್ರೆ, ಲೀಲೆ ಈ ಎರಡು ನೆಲೆಗಳ ಪರಿಸರದಲ್ಲಿಯೇ ಸುತ್ತುತ್ತವೆ.

ಡಾ. ವ್ಹಿ. ಎಸ್. ಕಂಬಿಯವರು 'ಚಾಮರಸನ ಅಮನಸ್ಕ ಕಾವ್ಯ' ದಲ್ಲಿ ಅಮನಸ್ಕಾವಸ್ಥೆಯ ನೆಲೆಯಲ್ಲಿ ನಿಂತು ವಿವಿಧ ಸನ್ನಿವೇಶಗಳನ್ನು ಪರಿಶೀಲಿಸುತ್ತಾರೆ. ಆದರೆ ಅಮನಸ್ಕಾವಸ್ಥೆಯನ್ನೇ

ಲಕ್ಷ್ಯದಲ್ಲಿಟ್ಟು ಚಾಮರಸ ರಚಿಸಿದ ಇಷ್ಟಲಿಂಗದ ಗತಿ, ಸಾಧಕಾಂಗದ ಗತಿ ಹಾಗೂ ಮನೋಲಯದ ಗತಿ ಇವುಗಳನ್ನು ಪ್ರತ್ಯೇಕವಾಗಿ ಚರ್ಚಿಸಬೇಕಾದ ಅವಶ್ಯಕತೆಯನ್ನು ಲಕ್ಷಿಸುವುದಿಲ್ಲ. ಅದೇ ರೀತಿ ನಿಜಲಿಂಗಮ್ಮ ವಿ. ಕೊಪ್ಪಳ ಅವರ 'ಚಾಮರಸನ ಶಿವಯೋಗದ ನಿಲವು' ಲೇಖನದಲ್ಲಿ ಬರುವ ಶಿವಯೋಗದ ಪರಿಶೀಲನೆಯು ಶಿವಯೋಗವನ್ನು ಪ್ರಬಲವಾಗಿ ಪ್ರತಿಪಾದಿಸುವ ಕೃತಿಗಳ ಸಮಾನವಾದ ಅಂಶಗಳನ್ನು ಒಳಗೊಂಡಿಲ್ಲ. ಅಷ್ಟೇ ಅಲ್ಲದೆ ಮೇಲೆ ತಿಳಿಸಿದ ಮೂರು ಗತಿಗಳ ಸ್ಪಷ್ಟ ವಿವರಣೆಯನ್ನು ಒಳಗೊಂಡಿಲ್ಲ. ಆದರೂ ಲೇಖನದ ಸೀಮಿತ ವ್ಯಾಪ್ತಿಯಲ್ಲಿ ಕಾವ್ಯದ ಆಶಯವನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

ಇವುಗಳಲ್ಲದೆ ಕನ್ನಡ ವಿಶ್ವಕೋಶ, ಕನ್ನಡ ಸಾಹಿತ್ಯಚರಿತ್ರೆಯ ಬೇರೆ ಬೇರೆ ರಚನೆಗಳಲ್ಲಿ ಚಾಮರಸನನ್ನು ಹಾಗೂ ಪ್ರಭುಲಿಂಗಲೀಲೆಯನ್ನು ಕುರಿತು ಬರೆಯಲಾಗಿದೆ. ಈ ಎಲ್ಲ ಆಕರ ಸಾಮಗ್ರಿಯನ್ನು ಪರಿಶೀಲಿಸುವುದರ ಜೊತೆಗೆ ಬನವಾಸಿ, ಹಂಪಿ ಮೊದಲಾದ ಶರಣರ ಕಾರ್ಯಕ್ಷೇತ್ರಗಳಿಗೆ ಭೆಟ್ಟಿ ಕೊಟ್ಟು ಸ್ಥಳ ಪರಿವೀಕ್ಷಣೆ ಮಾಡಿದ್ದೇನೆ. ವೀರಶೈವ ಸಾಹಿತ್ಯದಲ್ಲಿ ಅಧ್ಯಯನ ನಡೆಸಿದ ವಿದ್ವಾಂಸರನ್ನು ಭೆಟ್ಟಿಯಾಗಿ ಚರ್ಚೆ ಮಾಡಿದ್ದೇನೆ. ಷಟ್‌ಸ್ಥಲ ಮಾರ್ಗಾನುಸರಣೆಯವರನ್ನು, ಅನುಭಾವಿಗಳನ್ನು ಸಂದರ್ಶಿಸಿ ಚರ್ಚಿಸಿದ್ದೇನೆ. ಈ ಎಲ್ಲ ಸಾಮಗ್ರಿಯನ್ನು ಬಳಸಿಕೊಂಡು ಈ ಅಧ್ಯಯನಕ್ಕೆ ಸಮಗ್ರತೆಯನ್ನು ತಂದು ಕೊಡಲು ಪ್ರಯತ್ನಿಸಿದ್ದೇನೆ.

ಪ್ರಸ್ತುತ ಆಯ್ದುಕೊಂಡಿರುವ 'ಪ್ರಭುಲಿಂಗಲೀಲೆ ಒಂದು ದಾರ್ಶನಿಕ ಅಧ್ಯಯನ' ಎಂಬ ಸಂಶೋಧನ ಮಹಾಪ್ರಬಂಧಕ್ಕೆ ಡಾ. ಕಂಬಿಯವರ ಕೃತಿ ಹಾಗೂ ನಿಜಲಿಂಗಮ್ಮ. ವಿ. ಕೊಪ್ಪಳ ಅವರ ಲೇಖನ ಪ್ರೇರಣೆಗಳಾಗಿವೆ. ಇದುವರೆಗಿನ ಲೇಖಕರು ಆಯ್ದುಕೊಂಡ ನೆಲೆಗಳಾದ ಅಲ್ಲಮಪ್ರಭುವಿನ ಚರಿತ್ರೆ ಹಾಗೂ ಅಲ್ಲಮಪ್ರಭುವಿನ ಲೀಲೆ ಇವುಗಳೊಂದಿಗೆ ಮೂರನೆಯ ನೆಲೆಯೊಂದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಅದೆಂದರೆ ಶಿವಯೋಗ. ಈ ನೆಲೆಯಲ್ಲಿ ನಿಂತು ಕಾವ್ಯವನ್ನು ಒಂದು ಪ್ರತಿಮೆಯ ರೂಪದಲ್ಲಿ ಪರಿಶೀಲಿಸಲಾಗಿದೆ. ಹಾಗೂ ಮೂರೂ ನೆಲೆಗಳ ಸಂಯೋಜಿತ ಪ್ರಯತ್ನದಲ್ಲಿ ಮಹಾಪ್ರಬಂಧದ ವಿಷಯವನ್ನು ರೂಪಿಸಲಾಗಿದೆ.

ಪ್ರಬಂಧವು ಆರು ಅಧ್ಯಾಯಗಳ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಈಗ ನೋಡಿರುವಂತೆ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ಮೊದಲನೆಯ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಕೃತಿಯೊಂದಿಗಿನ ಮಾನವನ ಸಂಬಂಧದಲ್ಲಿ ಮೂಡಿ ಬಂದ ತರ್ಕ, ವೈಜ್ಞಾನಿಕ ಸಂಶೋಧನೆ, ಸಾಂಪ್ರದಾಯಕ ಆಚಾರ ವಿಚಾರ ಇವುಗಳನ್ನು ಲಕ್ಷಿಸುತ್ತ ವಿಜ್ಞಾನ, ಸಂಪ್ರದಾಯ ಮತ್ತು ತತ್ವಜ್ಞಾನ ಇವುಗಳ ನಡುವಿನ ಸಂಬಂಧವನ್ನು ಗ್ರೀಕ್ ಹಾಗೂ ಭಾರತೀಯ ವಿಚಾರಧಾರೆಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. ಭಾರತೀಯ ದರ್ಶನಗಳನ್ನು ಚರ್ಚಿಸುತ್ತ ತತ್ವಶಾಸ್ತ್ರಕ್ಕೆ ಅರ್ಥವನ್ನು ಹುಡಕಲಾಗಿದೆ. ಶೈವ ಮತ್ತು ಅದರ ಪ್ರಭೇದಗಳನ್ನು ಲಕ್ಷಿಸುತ್ತ ಧರ್ಮ ಮತ್ತು ದರ್ಶನ ಇವುಗಳನ್ನು ಸಂಯೋಜಿಸುವ ಪ್ರಯತ್ನ ಮಾಡಲಾಗಿದೆ. ಧರ್ಮ ಮತ್ತು ದರ್ಶನಗಳ ಸಂಯೋಜಿತ ನೆಲೆಯಲ್ಲಿ ಪ್ರಭುಲಿಂಗಲೀಲೆ ಕಾವ್ಯದ ದರ್ಶನವನ್ನು ಅಭ್ಯಸಿಸುವ ವಿಚಾರವನ್ನು ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಶರಣ ಸಂಸ್ಕೃತಿಗೂ ಸಾಹಿತ್ಯಕ್ಕೂ ಇರುವ ಸಂಬಂಧವನ್ನು ಲಕ್ಷಿಸುತ್ತ ಕನ್ನಡ ನಾಡಿನಲ್ಲಿ ಹನ್ನೆರಡನೆಯ ಶತಮಾನದಲ್ಲಾದ ಕ್ರಾಂತಿಯ ಪರಿಣಾಮಗಳು ಸಾಹಿತ್ಯದ ಮೇಲೆ ಮೂಡಿಸಿದ ಛಾಪುಗಳನ್ನು ಲಕ್ಷಿಸಿದ್ದೇನೆ. ಇದಕ್ಕನುಗುಣವಾಗಿ ಶರಣರ ಬದುಕಿನ ಪರಿಸರದಲ್ಲಿ ರೂಪುಗೊಂಡ ಪ್ರಭುಲಿಂಗಲೀಲೆಯ ನಿರೂಪಣೆಯನ್ನು ಷಟ್‌ಸ್ಥಲಾಚರಣೆಯ ಹಿನ್ನೆಲೆಯಲ್ಲಿ ಪರಿಶೀಲಿಸಿದ್ದೇನೆ. ಇದಕ್ಕಾಗಿ ಯೋಗ, ಚಿತ್ತವೃತ್ತಿ, ಚಿತ್ತವೃತ್ತಿನಿರೋಧ, ಅನುಭಾವ ಇವುಗಳನ್ನು ಎತ್ತಿಕೊಂಡು ವಿವೇಚಿಸಿದ್ದೇನೆ. ಶಿವಯೋಗವನ್ನು ನಿರೂಪಿಸುವ ಮಹತ್ವದ ಗ್ರಂಥಗಳಲ್ಲಿ ಬರುವ ಅದರ ಅಂಶಗಳನ್ನು ಪ್ರಭುಲಿಂಗಲೀಲೆಯಲ್ಲಿ ವ್ಯಾಪ್ತವಾಗಿರುವ ಶಿವಯೋಗದ ಅಂಶಗಳೊಂದಿಗೆ ಎದುರು ಬದುರಾಗಿಟ್ಟು ನೋಡಿದ್ದೇನೆ.

ನಾಲ್ಕನೆಯ ಅಧ್ಯಾಯದಲ್ಲಿ ಲೋಕವ್ಯವಹಾರವೆಂದರೇನೆಂದು ಲಕ್ಷಿಸುತ್ತ ಪ್ರಭುಲಿಂಗಲೀಲೆಯಲ್ಲಿ ಬರುವ ಪಾತ್ರಗಳನ್ನು ಈ ವ್ಯವಹಾರದ ಹಿನ್ನೆಲೆಯಲ್ಲಿ ಅಭ್ಯಸಿಸಲಾಗಿದೆ. ಆದುದರಿಂದ ಅವುಗಳನ್ನು ಲೌಕಿಕರು(ಅಧೋಕುಂಡಲಿನಿಯವರು), ತಟಸ್ಥ ಬದುಕಿನವರು (ಮಧ್ಯಕುಂಡಲಿನಿಯವರು) ಹಾಗೂ ಶರಣ ಮಾರ್ಗದಲ್ಲಿರುವವರು (ಊರ್ಧ್ವಕುಂಡಲಿನಿಯವರು) ಎಂದು ವಿಂಗಡಿಸಿದ್ದೇನೆ. ಅಧೋಕುಂಡಲಿನಿಯ ಮಾಯಾದೇವಿಯನ್ನು ಕವಿ ಕಾಮಶಾಸ್ತ್ರಜ್ಞನಾಗಿ ಹಾಗೂ ನಾಟ್ಯಶಾಸ್ತ್ರಜ್ಞನಾಗಿ ಲಕ್ಷಿಸುತ್ತ ಚಿತ್ರಿಸಿರುವುದನ್ನು ಪರಿಶೀಲಿಸಿದ್ದೇನೆ. ಮಧ್ಯಕುಂಡಲಿನಿಯವರು ಅಲ್ಲಮನ ಸಂಪರ್ಕದಲ್ಲಿ ಶರಣಮಾರ್ಗಾವ-ಲಂಬಿಗಳಾಗುವುದನ್ನು ಹಾಗೂ ಊರ್ಧ್ವಕುಂಡಲಿನಿಯವರು ಷಟ್‌ಸ್ಥಲಾಚರಣೆಯಲ್ಲಿ

ಮುಂದುವರೆಯುವುದನ್ನು ವಿವೇಚಿಸಲಾಗಿದೆ. ಈ ಮೂರೂ ನೆಲೆಗಳ ಹಿನ್ನೆಲೆಯಲ್ಲಿ ಪರಮಾರ್ಥದ ಏಣಿಯನ್ನು ಏರುವಲ್ಲಿ ಯಾರು ಹೇಗೆ ಪ್ರತಿಕ್ರಿಯೆ ತೋರುತ್ತಾರೆಂಬುದನ್ನು ಲಕ್ಷಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ 'ಕಾವ್ಯ' ಪದವನ್ನು ವ್ಯಾಖ್ಯಾನಿಸಿದವರ ಪ್ರಯತ್ನಗಳನ್ನು ನೋಡಲಾಗಿದೆ. ಭಾರತೀಯ ತತ್ತ್ವಜ್ಞಾನದ ಹಿನ್ನೆಲೆಯಲ್ಲಿ ಕಾವ್ಯದ ಉದ್ದೇಶವೆಂದರೆ ಪುರುಷಾರ್ಥಗಳ ಸಾಧನೆಗೆ ಪ್ರೇರೇಪಿಸುವುದು ಎಂದು ಪರಿಗಣಿಸುತ್ತ ಈ ಪುರುಷಾರ್ಥಗಳ ಸಾಧನೆಗೆ ಶಿವಶರಣರು ಕೊಟ್ಟ ಅರ್ಥವನ್ನು ಲಕ್ಷಿಸಿದ್ದೇನೆ ಹಾಗೂ ತತ್ತ್ವಜ್ಞಾನದ ಈ ನೆಲೆಯಲ್ಲಿ ರೂಪುಗೊಂಡಿರುವ ಪ್ರಭುಲಿಂಗಲೀಲೆಯನ್ನು ವಿಶ್ಲೇಷಿಸುವ ದಾರಿಯಲ್ಲಿ ಹಂತಗಳನ್ನು ರೂಪಿಸಿದ್ದೇನೆ. ಮುಂದೆ ಕವಿ, ಕಾಲ, ಜೀವನವಿಚಾರಗಳನ್ನು ಲಕ್ಷಿಸುತ್ತ ಕಾವ್ಯದ ವಸ್ತು ಹಾಗೂ ಅದರ ಸಂರಚನೆಯನ್ನು ಗಮನಿಸಿದ್ದೇನೆ.

ಪ್ರಭುಲಿಂಗಲೀಲೆಯಲ್ಲಿ ಕಾವ್ಯತತ್ತ್ವವನ್ನು ಲಕ್ಷಿಸುತ್ತ ಅದು 'ಪರಶಿವಸ್ವರೂಪದಿಂದುದಯಿಸಿ ಮರಳಿ ಪರಶಿವಸ್ವರೂಪದೆಡೆಗೆ' ಎಂಬ ವೀರಶೈವ ತತ್ತ್ವವನ್ನು ಒಳಗೊಂಡಿದೆ ಎಂದು ಚರ್ಚಿಸಿಲಾಗಿದೆ. ಇದರ ಸಾಧನೆಗಾಗಿ ಚಾಮರಸ ವಾಚ್ಯಾರ್ಥದಲ್ಲಿ ಅಲ್ಲಮಪ್ರಭುವಿನ ಚರಿತ್ರೆಯನ್ನು, ವ್ಯಂಗ್ಯಾರ್ಥದಲ್ಲಿ ಆವನ ಲೀಲೆಯನ್ನು ಹಾಗೂ ಧ್ವನ್ಯಾರ್ಥದಲ್ಲಿ ಶಿವಯೋಗವನ್ನು ರೂಪಿಸಿದ್ದಾನೆಂದು ವಿವೇಚಿಸಲಾಗಿದೆ. ಇದಕ್ಕನುಗುಣವಾಗಿ ಚಾಮರಸನ ಪ್ರತಿಮಾವಿಧಾನ ಹಾಗೂ ಸಾಂಕೇತೀಕರಣ ಇವುಗಳ ಹಿನ್ನೆಲೆಯಲ್ಲಿ ಕಾವ್ಯದ ನಿರೂಪಣೆಯನ್ನು ಪರಿಶೀಲಿಸಲಾಗಿದೆ.

ನಾಮ–ರೂಪ–ಕ್ರಿಯೆಗಳು ಮಾಯೆಯೆಂದೂ ಅವುಗಳಿಂದ ದೂರಾಗಿ ಲಿಂಗಾಂಗ–ಸಾಮರಸ್ಯವನ್ನು ಹೊಂದುವುದು ಪರಿಪೂರ್ಣಾವಸ್ಥೆಯೆಂದೂ ತಿಳಿಸುತ್ತ ಇದನ್ನು ಚಾಮರಸ ಕಾವ್ಯದ ನಿರೂಪಣೆಯಲ್ಲಿ ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ಚರ್ಚಿಸಿದೇನೆ. ಈ ಉದ್ದೇಶವನ್ನು ಸಾಧಿಸಿಲು ಚಾರಿತ್ರಿಕ ಹಾಗೂ ಕಾಲ್ಪನಿಕ ಪಾತ್ರಗಳನ್ನು ಹೇಗೆ ಸಂಯೋಜಿಸಿದ್ದಾನೆಂಬುದನ್ನು ಪರಿಶೀಲಿಸಿದ್ದೇನೆ.

ಕಾವ್ಯದ ಪರಿಕರಗಳನ್ನು ಪೂರೈಸುವಲ್ಲಿ ಪ್ರಾರ್ಥನೆ ಹಾಗೂ ವಚನಗಳು ಹೇಗೆ ಸಹಾಯಕಾರಿಯಾಗಿವೆಯೆಂಬುದನ್ನು ಪರಿಶೀಲಿಸುತ್ತ ವಸ್ತುವಿನ ನಿರೂಪಣೆಯಲ್ಲಿ ಶಿವಯೋಗದ ಹೆಜ್ಜೆಗಳನ್ನು ಗುರುತಿಸಲಾಗಿದೆ. ತತ್ತ್ವವನ್ನು ನೇರವಾಗಿ ಪ್ರತಿಪಾದಿಸುವ ಕೃತಿ ರಚಿಸದೆ ಅದಕ್ಕೆ ಕಾವ್ಯದ ರೂಪು ಕೊಡಲು ಯಶಸ್ವಿಯಾಗಿರುವುದನ್ನು ಎತ್ತಿ ತೋರಿಸಲಾಗಿದೆ. ಕಾವ್ಯದ ಶರೀರದಲ್ಲಿ ಶೈಲಿ, ಭಾಷೆ,

ಛಂದಸ್ಸು, ಅಲಂಕಾರ ಹಾಗೂ ರಸಗಳನ್ನು ಲಕ್ಷಿಸಿದ್ದೇನೆ. ಕಾವ್ಯದ ಉದ್ದೇಶಕ್ಕೆ ಇವುಗಳನ್ನು ಹೇಗೆ ಬಳಸಿಕೋಡಿದ್ದಾನೆಂಬುದನ್ನು ಪರಿಶೀಲಿಸುತ್ತ ಶಾಂತರಸವೇ ಕಾವ್ಯದ ಜೀವಾಳವೆಂದು ನಿರ್ಣಯಿಸಿದ್ದೇನೆ. 'ಪುರುಷಾರ್ಥಗಳ ಸಾಧನೆಯೆಂದರೆ ಸಚ್ಚಿದಾನಂದ ಸ್ವರೂಪನನ್ನು ಕೂಡುವುದು ಹಾಗೂ ಅದು ವೀರಶೈವಾಚರಣೆಯ ಆದ್ಯತೆ' ಎಂಬುದು ಕವಿಯ ವಿಚಾರವೆಂದು ನಿರ್ಣಯಿಸಿದ್ದೇನೆ.

ಕೊನೆಯ ಅಧ್ಯಾಯದಲ್ಲಿ ಪ್ರಭುಲಿಂಗಲೀಲೆಯ ವಸ್ತುವಿನ ವ್ಯಾಪ್ತಿಯ ಅನಂತತೆಯನ್ನು ಊಹಿಸುತ್ತ ಅದನ್ನು ಗ್ರಹಿಸುವ ಪ್ರಯತ್ನ ಕೇವಲ ಸಾಹಸವೆಂದು ಭಾವಿಸಲಾಗಿದೆ. ಪ್ರಸ್ತುತ ಅಭ್ಯಾಸವು ಚಾಮರಸನ ಅನಂತ ದರ್ಶನದ ಒಂದು ಭಾಗ ಮಾತ್ರ ಎಂದು ತಿಳಿಸುತ್ತ ಇನ್ನು ಮುಂದೆ ಕಾವ್ಯವನ್ನು ಕುರಿತು ಸಂಶೋಧನೆಗೆ ಪ್ರಯತ್ನಿಸುವವರ ನೆಲೆಗಳನ್ನು ಗುರುತಿಸಲಾಗಿದೆ.

ಟಿಪ್ಪಣಿಗಳು

೧. ಸಂ. ಎಂ. ಎಂ. ಕಲಬುರ್ಗಿ: ಹರಿಹರನ ರಗಳೆಗಳು, ಪೀಠಿಕೆ, ಪುಟ VIII.

೨. ಸಂ. ಎಂ. ಎಂ. ಕಲಬುರ್ಗಿ: ಪೀಠಿಕೆ, ಪುಟ XVIII.

೩. ಎಸ್. ಎಂ. ವೃಷಭೇಂದ್ರಸ್ವಾಮಿ : ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ , ಅಡಿ ಟಿಪ್ಪಣಿ, ಪುಟ ೧೯೩.

೪. ಸಂ. ಶಿ. ಶಿ. ಬಸವನಾಳ: ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ, ಪುಟ ೨.

೫. – ಅದೇ–

೬. – ಅದೇ–

೭. – ಅದೇ–

೮. ರಂ. ಶ್ರೀ. ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ , ಪುಟ ೩೩೧ ರಿಂದ ೩೩೫.

❋

ಅಧ್ಯಾಯ – ಎರಡು

ದರ್ಶನ

[illegible]

[illegible]

ಅಧ್ಯಾಯ -೨

ದರ್ಶನ

೧. ಪ್ರಕೃತಿ – ಮಾನವ – ತರ್ಕ

ವಿಚಾರ ಮಾಡುವುದು, ಬುದ್ಧಿಶಕ್ತಿಯನ್ನುಪಯೋಗಿಸಿಕೊಂಡು ಕಾರ್ಯಪ್ರವೃತ್ತನಾಗುವುದು ಹಾಗೂ ಪರಿಸ್ಥಿತಿಗನುಗುಣವಾಗಿ ಪ್ರತಿಕ್ರಿಯಿಸುವುದು ಮುಂತಾದ ಗುಣಗಳು ಮಾನವನಲ್ಲಿ ದಟ್ಟೈಸಿಕೊಂಡಿರುವುದನ್ನು ಕಾಣುತ್ತೇವೆ. ಉಳಿದೆಲ್ಲ ಜೀವಿಗಳಿಗಿಂತ ಪ್ರತ್ಯೇಕವಾಗಿ ಹಾಗೂ ಮೇಲ್ಮಟ್ಟದಲ್ಲಿ ನಿಂತು ವ್ಯವಹರಿಸುವ ಮಾನವ ವಿಶಿಷ್ಟವಾಗಿದ್ದಾನೆ, ವಿಚಿತ್ರವಾಗಿದ್ದಾನೆ ಹಾಗೂ ನಿಗೂಢವೂ ಆಗಿದ್ದಾನೆ. ಅವನಲ್ಲಿರುವ ತಾರ್ಕಿಕ ಗುಣಗಳಿಂದಾಗಿ ಆಧುನಿಕ ಜಗತ್ತಿನ ಬೆಳವಣಿಗೆಗಳು ಮೂಡಿ ಬಂದಿದ್ದು ಇಂದಿನ ಬದುಕಿಗೆ ಸಾಕ್ಷಿಯಾಗಿ ನಿಂತಿವೆ.

ಮಾನವನ ಪ್ರಗತಿ ಬಹುಮುಖವಾಗಿದ್ದು ಅದು ಅವನ ಬದುಕಿಗೆ ಆಧಾರವಾಗಿ ನಿಂತಿದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಅದ್ಭುತವಾಗಿದೆ. ಇದರೊಂದಿಗೆ ಸಾಂಸ್ಕೃತಿಕವಾಗಿಯೂ ಉನ್ನತ ಮಟ್ಟದಲ್ಲಿರುವ ಅವನು ಕಲೆ ಮತ್ತು ಸಾಹಿತ್ಯಗಳಲ್ಲಿ ತುಂಬ ಮುಂದುವರೆದಿದ್ದಾನೆ. ಕಾಲದಿಂದ ಕಾಲಕ್ಕೆ ಬೇರೆ ಬೇರೆ ರೀತಿಯ ಮಾತುಗಳಲ್ಲಿ ನಂಬಿಕೆ ಇಡುತ್ತ ಬಂದಿರುವ ಅವನ ನಂಬಿಕೆಗಳೆಲ್ಲವನ್ನೂ ಒಪ್ಪಿಕೊಳ್ಳಬೇಕಾಗಿಲ್ಲ. ಕುತೂಹಲಿಯಾಗುತ್ತ ಹೋಗುವ ಈ ಮಾನವನ ಹುಡುಕಾಟವು ಕ್ರಮೇಣ ಮುಂದುವರೆದಂತೆ ಹಾಗೂ ಅವನ ವಿಚಾರಗಳಿಗನುಗುಣವಾಗಿ ಪರಿಸರದ ಬದಲಾವಣೆಗಳು ಹೊಂದಿಕೆಯಾಗತೊಡಗಿದಂತೆ ಇನ್ನೂ ಸೂಕ್ಷ್ಮವಾಗಿ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದಾನೆ. ಆ ಪ್ರಯತ್ನದಲ್ಲಿ ವಾಸ್ತವಿಕ ಪರಿಜ್ಞಾನವು ಆಳವೂ ವಿಸ್ತೃತವೂ ಆಗುತ್ತ ಹೋಗಿದೆ. ಒಂದು ಕ್ರಮವರಿತ ವಿಷಯಗ್ರಹಣದಿಂದಾಗಿ ನಂಬಿಕೆಯು ಗಟ್ಟಿಗೊಳ್ಳುತ್ತ ಹೋಗಿದೆ.

ಶಿಲಾಯುಗದ ಆದಿಮಾನವನಿಂದ ಇಂದಿನ ಸ್ಥಿತಿಗೆ ಕ್ರಮಿಸುತ್ತ ಬಂದಿರುವ ನಾವು ಜಗತ್ತಿನ ವಿವಿಧ ಭೂಭಾಗಗಳಲ್ಲಿ ಒಂದೇ ಮಟ್ಟದ ಇರುವಿಕೆಯನ್ನು ಬುದ್ಧಿಮತ್ತೆಯನ್ನು ಹಾಗೂ ಸಾಂಸ್ಕೃತಿಕ

[illegible]

[illegible]

[illegible]

[illegible]

[illegible]

[illegible]

[illegible]

ಪರಂಪರೆಯನ್ನು ಕಾಣುವುದಿಲ್ಲ. ಕಾಡುಜನಾಂಗದ ರೂಪದಲ್ಲಿ ಬದುಕುತ್ತಿರುವ ಅನೇಕ ಬುಡಕಟ್ಟುಗಳು ಇಂದಿಗೂ ಜಗತ್ತಿನ ವಿವಿಧೆಡೆಗಳಲ್ಲಿ ಕಂಡು ಬರುತ್ತಿವೆ. ಸಾಂಸ್ಕೃತಿಕವಾಗಿ ಉನ್ನತ ಮಟ್ಟದಲ್ಲಿರುವ ಜನಾಂಗಗಳು ರೂಪುಗೊಂಡಿರುವ ಮೂಲವನ್ನು ಶೋಧಿಸುತ್ತ ಹೋದಂತೆ ಆಗಾಗ ಬದಲಾವಣೆಗಳಿಗೆ ಒಳಗಾದ ಘಟ್ಟಗಳನ್ನು ಕಾಣುತ್ತೇವೆ.

ಆದಿಮಾನವನ ಇರುವಿಕೆ ಅತ್ಯಂತ ಸರಳವಾಗಿತ್ತು. ಆಹಾರವನ್ನು ಹುಡುಕುವುದೊಂದೇ ಅವನ ಕೆಲಸವಾಗಿತ್ತು. ಗುಂಪುಗಳಲ್ಲಿ ವಾಸಿಸತೊಡಗಿದಂತೆ ಪರಿಸರಕ್ಕೆ ಅನುಗುಣವಾದ ಬದಲಾವಣೆಗಳನ್ನು ಮಾಡಿಕೊಂಡ ಅವನು ಬಟ್ಟೆ ಹಾಗೂ ವಸತಿಗಳಿಗಾಗಿ ವಿಚಾರಿಸತೊಡಗಿರಬೇಕು. ಆದರೆ ಸುತ್ತಲೂ ಕಾಣುವ ಪ್ರಾಕೃತಿಕ ಬದಲಾವಣೆಗಳ ವಿಷಯದಲ್ಲಿ ಚಿಂತನೆ ಪ್ರಾರಂಭವಾದಂತೆ ವಿವಿಧ ನಂಬಿಕೆಗಳು ಮನಸ್ಸಿನಲ್ಲಿ ಮೂಡತೊಡಗಿರಬೇಕು. ಆ ಯುಗದ ಇಂಥ ನಂಬಿಕೆಗಳು ವಿಚಿತ್ರವಾಗಿದ್ದವು 'ಈ ನಂಬಿಕೆಗಳು ಭೀತಿಯಿಂದ ಉದ್ಭವಿಸಿರಬಹುದೆಂದು ಕೆಲವರ ಅಭಿಪ್ರಾಯವಾಗಿದೆ.'[1]

ಪ್ರಕೃತಿಗೆ ಅನೇಕ ಮುಖಗಳು. ಕ್ರೂರವಾಗಿ ಯಾವಾಗ ಯಾವ ಮುಖದಿಂದ ಅದು ಪ್ರತ್ಯಕ್ಷ್ಯವಾಗುತ್ತದೆಂಬುದನ್ನು ಹೇಳುವುದು ಸಾಧ್ಯವಿಲ್ಲ. ಮೋಡಗಳು ಮುಪ್ಪುರಿಗೊಂಡು ಗರ್ಜಿಸಿ ಬರಸಿಡಿಲು ಅಪ್ಪಳಿಸಬಹುದು, ಚಂಡಮಾರುತವಾಗಿ ಬೀಸಿದಾಗ ಸಾವಿರಾರು ಜೀವಿಗಳು ಪ್ರಾಣಕ್ಕೆ ಎರವಾಗಬಹುದು, ಸಾಂಕ್ರಾಮಿಕ ರೋಗಗಳಿಂದಾಗಿ ಮನುಷ್ಯರು ಹೆಣವಾಗಿ ಹೋಗಬಹುದು, ಭೂಕಂಪನದಿಂದ ಜೀವಜಗತ್ತು ಭೂಮಿಯಲ್ಲಿ ಇಳಿದು ಹೋಗಬಹುದು, ಜ್ವಾಲಾಮುಖಿಯಿಂದಾಗಿ ವಸತಿ ಪ್ರದೇಶಗಳು ಲಾವಾರಸದಲ್ಲಿ ಮುಳುಗಿಹೋಗಿ ಶಿಲಾಪರ್ವತಗಳ ರೂಪ ತಾಳಬಹುದು. ಇದೆಲ್ಲವನ್ನೂ ಶತಮಾನಗಳಿಂದ ಜಗತ್ತಿನ ವಿವಿಧ ಭಾಗಗಳಲ್ಲಿ ಜನರು ಅನುಭವಿಸುತ್ತ ಬಂದಿರುವುದನ್ನು ಕಾಣುತ್ತೇವೆ.

ಪ್ರಕೃತಿ ಕ್ರೂರವಾಗಿ ವರ್ತಿಸುವಂತೆ ಸ್ನೇಹಮಯಿಯಾಗಿಯೂ ವರ್ತಿಸುವುದನ್ನು ಕಾಣುತ್ತೇವೆ. ಹಸಿರು ಸಸ್ಯಗಳು ತಂಪು ತಾಣಗಳಿಗೆ ಕಾರಣವಾಗುವುದರೊಂದಿಗೆ ಆಹಾರವನ್ನೂ ಒದಗಿಸುತ್ತವೆ. ಮರಗಿಡಗಳ ಈ ಗುಣಗಳನ್ನು ಬಳಸಿಕೊಂಡ ಆದಿಮಾನವ ಗವಿಗಳಿಂದ ಹೊರಬಂದು ಬೃಹದಾಕಾರದ ಮರಗಳ ಮೇಲೆ ಆಶ್ರಯ ತಾಣಗಳನ್ನು ನಿರ್ಮಿಸಿಕೊಂಡಿರುವುದು ತಿಳಿದು ಬರುತ್ತದೆ. ನದಿಯ ದಂಡೆಗಳಲ್ಲಿ ಫಲವತ್ತಾದ ಭೂಮಿಯಲ್ಲಿ ಸಹಜವಾಗಿ ಬೆಳೆದ ಕಾಳುಗಳು ಅವನ ಆಹಾರವನ್ನು ಶುದ್ಧ

[illegible]

[illegible]

[illegible]

[illegible]

ಮಾಂಸಾಹಾರದಿಂದ ಸಸ್ಯಾಹಾರದೊಂದಿಗಿನ ಮಿಶ್ರಣಕ್ಕೆ ಪರಿವರ್ತಿಸಿರಬಹುದು. ಇವೆಲ್ಲವುಗಳ ಅನುಭವಗಳೊಂದಿಗೆ ಅಪಾಯಕಾರಿಯಾದ ಘಟನೆಗಳಿಗೆ ಕಾರಣವಾಗಿರಬಹುದೆನ್ನುವ ಅದೃಶ್ಯ ಶಕ್ತಿಗಳನ್ನು ಕುರಿತಾಗಿ ವಿಚಾರಿಸತೊಡಗಿದ ಆತ ಭೀತಿಗೊಂಡು ಆ ಶಕ್ತಿಗಳ ವಿಷಯದಲ್ಲಿ ಗೌರವಭಾವ ತಾಳಿರಬೇಕು.

ವಿವಿಧ ಶಕ್ತಿಗಳನ್ನು ವ್ಯಕ್ತಿಗಳ ರೂಪದಲ್ಲಿ ಕಲ್ಪಿಸುತ್ತ, ಅವುಗಳಿಗೆ ದೈವೀಸ್ವರೂಪವನ್ನು ಆರೋಪಿಸುತ್ತ ಅವುಗಳ ಪ್ರೀತ್ಯರ್ಥಕ್ಕಾಗಿ ಬೇರೆ ಬೇರೆ ರೀತಿಯ ಆಚರಣೆಗಳು ಜಗತ್ತಿನಾದ್ಯಂತ ಕಂಡು ಬರುತ್ತವೆ. ಆಚರಣೆಗಳ ಸ್ವರೂಪ ಏನೇ ಇರಲಿ ಉದ್ದೇಶ ಮಾತ್ರ ಅಂಥ ಶಕ್ತಿಗಳು ಸ್ನೇಹಮಯವಾಗಿ ವರ್ತಿಸಲಿ, ತಮ್ಮ ದಿನ ನಿತ್ಯದ ಬದುಕು ಆಘಾತಗಳಿಂದ ದೂರವಿರಲಿ ಎಂಬುದೇ ಆಗಿರುತ್ತದೆ. ಭಾರತದಲ್ಲಿ ಇಂಥ ಶಕ್ತಿಗಳ ಪ್ರೀತ್ಯರ್ಥಕ್ಕಾಗಿ ಹಾಗೂ ಅವುಗಳ ಕೃಪೆ ದೊರಕಿಸುವುದಕ್ಕಾಗಿ ಪೂಜೆ, ವೃತ, ಜಪ, ತಪ ಮುಂತಾದವುಗಳನ್ನು ಆಚರಿಸುತ್ತ ಬಂದಿರುವುದನ್ನು ಕಾಣುತ್ತೇವೆ.

ಪೂಜೆ, ವೃತ, ಜಪ, ತಪ ಇವುಗಳನ್ನು ಅರ್ಥೈಸುವಲ್ಲಿ, ವಿವರಿಸುವಲ್ಲಿ ವಿವಿಧ ವ್ಯಕ್ತಿಗಳು ತಮ್ಮ ತಮ್ಮ ದೃಷ್ಟಿಕೋನಗಳಿಗೆ ಅನುಗುಣವಾಗಿ ವಿವಿಧ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಕೆಲವರ ಅಭಿಪ್ರಾಯದಂತೆ ದೇವರ ಪಾದದಲ್ಲಿ ಹೂವನ್ನು ಅರ್ಪಿಸುವುದು ಮತ್ತು ಅವನಿಂದ ಸ್ವಂತಕ್ಕೆ ಏನಾದರೂ ದಯೆಯನ್ನು ಪಡೆಯುವುದು ಪೂಜೆಯಾಗಿದೆ. ಪೂಜಿಸಲ್ಪಡುವ ದೇವರ ಮೇಲೆ ಪ್ರೀತಿಪೂರ್ವಕವಾದ ಒತ್ತಾಯವನ್ನು ಸೃಷ್ಟಿಸಿ ಆ ಮನೋಭಿಲಾಷೆಯನ್ನು ಈಡೇರಿಸಿ ಕೊಡುವಂತೆ ಮಾಡಲು ಆಜ್ಞೆ ಮಾಡುವುದು ಅವರ ದೃಷ್ಟಿಯಲ್ಲಿ ವೃತ.[5] ಇದೇ ರೀತಿ ಜಪ, ತಪ ಮುಂತಾದ ಆಚರಣೆಗಳಿಗೆ ತಮ್ಮದೇ ಆದ ದೃಷ್ಟಿಕೋನದಲ್ಲಿ ಅರ್ಥವನ್ನು ಹುಡುಕಲು ಅವರು ಪ್ರಯತ್ನಿಸಿದ್ದಾರೆ.

ನಿಸರ್ಗದ ಎಷ್ಟೋ ಆಗು ಹೋಗುಗಳು ಅನಾಗರಿಕ ಜನಕ್ಕೆ ತಿಳಿದಿರುವುದಿಲ್ಲ. ಆಕಸ್ಮಿಕವಾಗಿ ಘಟಿಸುವ ಇಂಥ ಸಹಜ ವಿಷಯಗಳು ಅವರ ಅನುಭವಕ್ಕೆ ಬಂದಿರಬಹುದು ಅಥವಾ ಬಾರದೇ ಇರಬಹುದು. ಅವುಗಳ ಯಾವ ಕಲ್ಪನೆಯೂ ಅವರಿಗಿರುವುದಿಲ್ಲ. ಮಳೆ ಬರುವುದು ಅವರಿಗೆ ಕೌತುಕದ ವಿಷಯ ಆದರ ಯಾವ ವೈಜ್ಞಾನಿಕ ಬೆಳವಣಿಗೆಯ ವಿಚಾರವೂ ಅವರಿಗಿರುವುದಿಲ್ಲ. ಭಯ ಭಕ್ತಿಗಳಿಂದ ಹಿಂದಿನವರು ಅನುಸರಿಸುತ್ತಾ ಬಂದ ಪೂಜೆಯನ್ನೂ ಅವರು ಯಾಂತ್ರಿಕವಾಗಿ ಮುಂದುವರೆಸುತ್ತಾರೆ. ಮಳೆ, ಬೆಳೆ, ಗಾಳಿ ಬಿಸಿಲು ಮುಂತಾದವುಗಳ ವೈಜ್ಞಾನಿಕ ವಿಚಾರಗಳು ಈಗ ನಮಗೆ ತಿಳಿದಿರುವಂತೆ ಅನಾಗರಿಕ

[illegible]

[illegible]

[illegible]

[illegible]

[illegible]

ಜನಕ್ಕೆ ತಿಳಿದಿರುವುದಿಲ್ಲ. ಅದೇ ರೀತಿ ದೇವರು, ಪೂಜೆ, ಧರ್ಮ ಮುಂತಾದವುಗಳ ಬಗ್ಗೆಯೂ ಅವರದು ಅದೇ ವಿಚಾರ. ಹೀಗಾಗಿ 'ಅವರ ಮನಸ್ಸಿನ ಆಳವಾದ ನಂಬಿಕೆಗಳು ವಿಜ್ಞಾನಕ್ಕೂ ಸೇರುವುದಿಲ್ಲ, ಧರ್ಮಕ್ಕೂ ಸೇರುವುದಿಲ್ಲ."[೩]

ವಿಶ್ವದಲ್ಲಿ ಲೆಕ್ಕವಿಲ್ಲದಷ್ಟು ಘಟನೆಗಳು ಜರುಗುತ್ತವೆ. ಪ್ರತಿಯೊಂದು ಘಟನೆ ಜರುಗಬೇಕಾದರೆ ಅದಕ್ಕೊಂದು ಕಾರಣವಿದ್ದೇ ಇರುತ್ತದೆ. ಆದರೆ ಈ ಕಾರಣವನ್ನು ನೋಡುವ ದೃಷ್ಟಿಕೋನವು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಬಹುದು. ಈ ಕಾರ್ಯಕಾರಣ ಸಂಬಂಧವನ್ನು ಪ್ರಪಂಚದ ಸ್ವರೂಪದಲ್ಲಿ ನೋಡುವುದು ಒಂದು ದೃಷ್ಟಿಯಾದರೆ ಪ್ರಪಂಚದಿಂದ ದೂರ ನಿಂತು ನೋಡುವುದು ಮತ್ತೊಂದು ದೃಷ್ಟಿ. 'ಯಾವುದೇ ಘಟನೆಯನ್ನು ಪ್ರಪಂಚದ ಸ್ವರೂಪದಲ್ಲಿ ಗುರುತಿಸಿದರೆ ಅದನ್ನು ವೈಜ್ಞಾನಿಕ ದೃಷ್ಟಿ ಎನ್ನುತ್ತಾರೆ. ಯಾವ ಕಾರಣವೂ ಇಲ್ಲದೆ ಘಟನೆ ಸಂಭವಿಸುವುದಿಲ್ಲ. ಇರಬಹುದಾದ ಕಾರಣವು ಭೌತಜಗತ್ತಿನ ನಿಯಮಗಳಿಗೆ ಒಳಪಟ್ಟಿರುತ್ತದೆ. ಹೀಗೆ ಪ್ರತಿಯೊಂದು ಘಟನೆಯ ಹಿಂದೆ ಏನಾದರೊಂದು ನಿಯಮವಿದ್ದೇ ಇರುತ್ತದೆ. ಭೌತಜಗತ್ತಿನ ನಿಯಮಗಳನ್ನು ಮಾನವ ಎಷ್ಟು ಚೆನ್ನಾಗಿ ಗುರುತಿಸಬಲ್ಲನೋ ಅಷ್ಟೇ ಚೆನ್ನಾಗಿ ಅವನು ವಿಶ್ವವನ್ನು ರೂಢಿಸಿಕೊಳ್ಳಬಲ್ಲವನಾಗಿರುತ್ತಾನೆ. ಇಂಥ ನಂಬಿಕೆಗಳನ್ನು ನಾವು ವೈಜ್ಞಾನಿಕ ನಂಬಿಕೆಗಳೆನ್ನುತ್ತೇವೆ."[೪]

ಜಗತ್ತಿನಲ್ಲಿ ಮೂಡಿ ಬಂದಿರುವ ವೈಜ್ಞಾನಿಕ ಸಂಶೋಧನೆಗಳನ್ನು ಚಾರಿತ್ರಿಕ ಹಾಗೂ ಧಾರ್ಮಿಕ ಅಂಶಗಳೊಂದಿಗೆ ಸಮಾನಾಂತರವಾಗಿಟ್ಟು ನೋಡಿದರೆ ಯುರೋಪ ಖಂಡದಲ್ಲಿ ಪ್ರಗತಿಪರವಾಗಿ ಬೆಳೆದು ಬಂದ ವೈಜ್ಞಾನಿಕ ಸತ್ಯಗಳು ಪ್ರಾರಂಭದಲ್ಲಿ ಧಾರ್ಮಿಕ ಕ್ಷೇತ್ರದಲ್ಲಿದ್ದ ಜನರ ನಂಬಿಕೆಗಳೊಡನೆ ಘರ್ಷಣೆಗೆ ಒಳಗಾಗಬೇಕಾಯಿತು ಎಂಬ ಮಾತು ಸ್ಪಷ್ಟವಾಗುತ್ತದೆ. ಒಂದು ನಿರ್ದಿಷ್ಟ ಜ್ಞಾನದ ಪ್ರತಿಪಾದಕರಾದ ವಿಜ್ಞಾನಿಗಳು ಕೆಲವು ಅಂಶಗಳನ್ನು ಗಾಢವಾಗಿ ನಂಬಿದ್ದ ಜನರೊಂದಿಗೆ ಹೊಂದಿಕೊಳ್ಳುವುದು ಸಾಧ್ಯವಾಗದೇ ಹೋಯಿತು. ಈ ಜನರು ಧಾರ್ಮಿಕ ಕ್ಷೇತ್ರಕ್ಕೆ ಒಳಪಟ್ಟವರಾಗಿದ್ದರು. ಇಂಥ ಪರಸ್ಪರ ವಿರುದ್ಧವಾಗಿರುವ ಅಭಿಪ್ರಾಯಗಳು ಒಂದಾಗಿ ಹೋಗುವುದು ಸಾಧ್ಯವಾಗಲಿಲ್ಲ.

ಧರ್ಮ ಹಾಗೂ ವಿಜ್ಞಾನಗಳ ನಡುವೆ ಬಹಳ ಅಂತರವಿದೆ. ಭೌತಜಗತ್ತಿಗೆ ಒಳಪಡುವ ವಿಜ್ಞಾನವು ಒಂದು ತಾರ್ಕಿಕ ಕ್ರಮವನ್ನು ಅನುಸರಿಸುತ್ತದೆ. ಹಾಗೂ ಭೌತಜಗತ್ತಿಗೆ ಸಂಬಂಧಪಡದ

[illegible]

[illegible]

[illegible]

[illegible]

ಯಾವುದನ್ನೂ ಸ್ವೀಕರಿಸುವುದಿಲ್ಲ. ಧರ್ಮವು ಇದರ ವಿರುದ್ಧ ಗತಿಯನ್ನು ಅನುಸರಿಸುತ್ತದೆ. ಲೋಕಕ್ಕೆ ಸಂಬಂಧಿಸಿದ್ದು ಅದಕ್ಕೆ ಅಗ್ರಾಹ್ಯ. ವಿಜ್ಞಾನವು ಭೌತಜಗತ್ತಿನ ರಹಸ್ಯವನ್ನು ಭೇದಿಸುತ್ತ ಪೃಥ್ವಿಯ ಮೇಲೆ ಹತೋಟಿ ಸಾಧಿಸಿರುವುದು ಮಾತ್ರವಲ್ಲ ಪೃಥ್ವಿಯ ಉಪಗ್ರಹವಾದ ಚಂದ್ರನ ರಹಸ್ಯವನ್ನು ಹೊರಗೆಡವಿದೆ. ಇದೀಗ ಮಂಗಳ ಗ್ರಹದ ಮೇಲೆ ಇಳಿಯುವ ತಂತ್ರಜ್ಞಾನ ರೂಪುಗೊಳ್ಳುತ್ತಿದೆ, ಸೌರಮಂಡಲದ ಆಚೆಗೆ ಹೋಗಲಿರುವ ಕೃತಕ ಆಕಾಶಕಾಯ ತೂರಲ್ಪಟ್ಟಿದೆ. ಇದೆಲ್ಲ ಸಾಧ್ಯವಾಗಿರುವುದು ಭೌತಜಗತ್ತಿನ ನಿಖರವಾದ ಜ್ಞಾನದಿಂದ ಮಾತ್ರ! ಇದಕ್ಕೆ ಪ್ರತಿಯಾಗಿ ಪೃಥ್ವಿಯನ್ನು ಗೆಲ್ಲಬೇಕೆಂಬ ಮಾತೇ ಸೋಜಿಗದ್ದೆಂದು ಧರ್ಮವು ಬಗೆಯುತ್ತದೆ."

ದೇವರ ಪಾದದಲ್ಲಿ ಹೂವನ್ನು ಅರ್ಪಿಸಿ ಸ್ವಂತಕ್ಕೆ ಏನಾದರೂ ದಯೆಯನ್ನು ಪಡೆಯುವುದು ಧರ್ಮವೆನ್ನುವುದಾದರೆ ಜಾಗತಿಕ ರಂಗದಲ್ಲಿ ವಿವಿಧ ಧರ್ಮಾನುಯಾಯಿಗಳು ಈ ಕ್ರಿಯೆಯಲ್ಲಿಯೇ ಧರ್ಮವನ್ನು ಆಚರಿಸುತ್ತಾರೆಂದು ಹೇಳಲಿಕ್ಕಾಗುವುದಿಲ್ಲ. ಕ್ರಿಶ್ಚಿಯನ್ನರು ತಮ್ಮ ತಂದೆ ಏಸುವಿನ ರೂಪವನ್ನು ಲಕ್ಷ್ಯದಲ್ಲಿರಿಸಿಕೊಂಡು ಕೀರ್ತನೆಗಳನ್ನು ಹಾಡುತ್ತಾರೆ, ಬೈಬಲ್‌ದ ಭಾಗಗಳನ್ನು ಓದಿ ಹೇಳುತ್ತಾರೆ ಇಲ್ಲವೆ ಕೇಳುತ್ತಾರೆ. ಕೆಲವೊಮ್ಮೆ ಮೌನವಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಇಸ್ಲಾಂ ಅನುಯಾಯಿಗಳು ಸಾಕಾರ ದೇವರನ್ನು ನಂಬುವುದಿಲ್ಲವಾದ್ದರಿಂದ ದೇವರ ಪಾದದಲ್ಲಿ ಹೂವನ್ನು ಅರ್ಪಿಸುವುದನ್ನಾಗಲಿ, ದಯೆಯನ್ನು ಪಡೆಯುವುದನ್ನಾಗಲಿ ಮಾಡುವುದು ಅವರಿಗೆ ಸಾಧ್ಯವಿಲ್ಲದ ಮಾತು. ಅವರು ನಿರಾಕಾರ ಸರ್ವಶಕ್ತನಿಗೆ ಸಲ್ಲಿಸುವುದು ಪ್ರಾರ್ಥನೆಯನ್ನು ಮಾತ್ರ. ಹೀಗೆ ಧರ್ಮಾಚರಣೆಯಲ್ಲಿ ತೊಡಗಬಯಸುವ ವಿವಿಧ ಮಾರ್ಗಾನುಯಾಯಿಗಳೆಲ್ಲ ಒಂದು ನಿರ್ದಿಷ್ಟ ಕ್ರಮದಿಂದ ಆ ಆಚರಣೆಯಲ್ಲಿ ತೊಡಗುವುದಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂಥ ಎಲ್ಲ ಆಚರಣೆಗಳ ಹಿನ್ನಲೆಯಲ್ಲಿ 'ಧರ್ಮ'ಕ್ಕೆ ಅರ್ಥವನ್ನು ಹುಡುಕುವುದಾದರೆ ಧರ್ಮಾಚರಣೆಯ ಆಳ ಮತ್ತು ವ್ಯಾಪ್ತಿಗಳನ್ನು ಲಕ್ಷಿಸಬೇಕಾಗುತ್ತದೆ. ಹೀಗಿರುವಾಗ ಧರ್ಮವು ನಾವೀಗ ಲಕ್ಷಿಸಿರುವುದಕ್ಕಿಂತ ವಿಶಾಲಾರ್ಥವನ್ನು ಪಡೆದುಕೊಂಡಿರುವ ಎಲ್ಲ ಸಾಧ್ಯತೆಗಳೂ ಇವೆ.

೨ ಸಂಪ್ರದಾಯ ಮತ್ತು ತತ್ತ್ವಜ್ಞಾನ

ಜಗತ್ತಿನಾದ್ಯಂತ ವಿವಿಧ ದೇಶಗಳಲ್ಲಿ ಜನರು ಆಚರಿಸುವ ರೀತಿನೀತಿಗಳು, ಆಚಾರವಿಚಾರಗಳು, ರೂಢಿಸಂಪ್ರದಾಯಗಳು ಅವರವರ ಸಾಂಸ್ಕೃತಿಕ ಬದುಕಿನೊಂದಿಗೆ ಬೆರೆತು ಹೋಗಿರುತ್ತವೆ. ಅವರ ಈ

ಆಚರಣೆಗಳನ್ನು ಬದುಕಿನ ಪ್ರವಾಹದೊಂದಿಗೆ ತೇಲಿಕೊಂಡು ಹೋಗುವ ಸಹಜ ಕ್ರಿಯೆಗಳೆಂದು ತಿಳಿಯಬಹುದು. ಇವುಗಳಲ್ಲಿ ಕೆಲವನ್ನು ಧಾರ್ಮಿಕ ಆಚರಣೆಗಳೆಂದು ಭಾವಿಸಲಾಗುತ್ತದೆ. ಅವರ ಸಾಂಸ್ಕೃತಿಕ ಬದುಕಿಗೆ ತಿಳುವಳಿಕೆಯನ್ನೂ ವಿಶೇಷಾರ್ಥವನ್ನೂ ಹಾಗೂ ಒಂದು ರೀತಿಯ ಮೆರಗನ್ನೂ ತರುವ ಈ ಆಚರಣೆಗಳು ಹಲವೊಮ್ಮೆ ಧಾರ್ಮಿಕ ಆಚರಣೆಗಳಾಗಿರದೆ ಧಾರ್ಮಿಕ ಆಚರಣೆಗಳ ಸಾಂಕೇತಿಕ ಕ್ರಿಯೆಗಳಾಗಿರುತ್ತವೆ. ಇಂಥ ಆಚರಣೆಗಳು ಹಲವರ ದೃಷ್ಟಿಯಲ್ಲಿ ಅಂಧಾನುಕರಣೆಯ ಆಚರಣೆಗಳಾಗಿರಬಹುದು. ಜನನ, ಮರಣ, ಹಬ್ಬಗಳು, ವಿವಾಹವಿಧಿ ಇವೇ ಮುಂತಾದ ಪ್ರಸಂಗಗಳು ಜಗತ್ತಿನಾದ್ಯಂತ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಜನಾಂಗಗಳಲ್ಲಿ ಆಚರಣೆಗೊಳಗಾದಾಗ ಸಾಂಸ್ಕೃತಿಕ ಪ್ರವಾಹದಿಂದ ಮೇಲೆದ್ದು ಬಂದು ಧಾರ್ಮಿಕ ಕ್ರಿಯೆಗಳಾಗಿ ಪರಿಣಮಿಸುತ್ತವೆ. ಮುಂದೆ ಅವು ಅನಿವಾರ್ಯ ಕ್ರಿಯೆಗಳಾಗಿ ರೂಪಿತಗೊಂಡು ಅವುಗಳಿಗೊಂದು ತತ್ತ್ವ ರೂಪಿತಗೊಳ್ಳುತ್ತದೆ, ಆ ತತ್ತ್ವವು ಸಿದ್ಧಾಂತದ ರೂಪದಲ್ಲಿ ಸ್ವೀಕಾರವಾಗುತ್ತದೆ. ಬರಹಗಳ ರೂಪದಲ್ಲಿ ಮೂಡಿ ಬಂದಿರುವ ಇಂಥ ಈ ವಿಧಿವಿಧಾನಗಳ ಗ್ರಂಥಗಳು ಶಾಸ್ತ್ರಗಳೆಂದು ಹೆಸರು ಪಡೆದಿವೆ. ಈ ಕ್ರಿಯೆಗಳನ್ನು ಆಚರಿಸುವವರು ಹಲವರಾದರೆ ಶಾಸ್ತ್ರಗಳ ಬೋಧನೆಯನ್ನೇ ವೃತ್ತಿಯನ್ನಾಗಿಸಿಕೊಂಡವರು ಆಚರಣೆಯ ಬೋಧಕರಾಗಿದ್ದಾರೆ. ಈ ಬೋಧಕರು ಅನಿವಾರ್ಯ ವ್ಯಕ್ತಿಗಳಾಗಿ ರೂಪುಗೊಳ್ಳುತ್ತ ಹೋದಂತೆ ಸಮುದಾಯದ ವಿಶೇಷ ಆಚರಣೆಗಳು ಧಾರ್ಮಿಕ ಆಚರಣೆಗಳಾಗಿವೆ. ಇವುಗಳನ್ನು ಆಚರಿಸಲು ಸಹಾಯಕರಾಗುವವರು ಆಚಾರ್ಯರೆನಿಸಿಕೊಂಡಿದ್ದಾರೆ.

ವಿವಿಧ ಕಾಲಘಟ್ಟಗಳಲ್ಲಿ ಹಿರಿಯರಾಗಿ ಅಥವಾ ಗುರುಗಳಾಗಿ ರೂಪುಗೊಂಡವರು ತಲೆಮಾರುಗಳು ಕಳೆದಂತೆ ತಮ್ಮ ಗುರುತ್ವವನ್ನು ಮುಂದಿನ ತಲೆಮಾರಿನವರಿಗೆ ಹಸ್ತಾಂತರ ಮಾಡುತ್ತ ಹೋಗಿದ್ದಾರೆ, ಅದಕ್ಕೆ ಗುರುತ್ವದೀಕ್ಷೆ ಎಂದು ಹೆಸರಿಸಿದ್ದಾರೆ. ಹೀಗೆ ಗುರುಸ್ಥಾನದಲ್ಲಿ ಮುಂದುವರೆದವರು ತಮ್ಮ ಆಚರಣಾಮಾರ್ಗದ ಗುರುಪರಂಪರೆಯನ್ನು ಗುರುತ್ವಹಸ್ತಾಂತರದ ವಂಶಾವಳಿಯ ರೂಪದಲ್ಲಿ ನಿವೇದಿಸಿರಬಹುದು. ಇಂಥ ಸಂಪ್ರದಾಯವು ಧರ್ಮ ಸಂಪ್ರದಾಯವೆಂದು ರೂಪುಗೊಂಡು ಅದಕ್ಕೊಬ್ಬ ಮೂಲಪುರುಷನು ಮೂಡಿ ಬಂದಿರಬಹುದು. ಆ ಧರ್ಮದ ಆಚಾರವಿಚಾರಗಳನ್ನು ವಿಧಿ ವಿಧಾನಗಳನ್ನು ರೂಪಿಸಿದ ವ್ಯಕ್ತಿಯಾಗಿ ಅವನು ವೈಭವೀಕರಣಕ್ಕೆ ಒಳಗಾಗಿರಬಹುದು. ಈ ಎಲ್ಲ ಧಾರ್ಮಿಕ ಕ್ರಿಯೆಗಳ

ದೃಷ್ಟಾರನಾಗಿ ರೂಪುಗೊಂಡ ಅವನು ದಾರ್ಶನಿಕವಾಗಿ ಕಂಡಿರಬಹುದು, ಅವನ ದರ್ಶನವು ಧರ್ಮದ ರೂಪದಲ್ಲಿ ವಿಜೃಂಭಿಸುತ್ತಿರುವುದು ಈಗ ನಮ್ಮ ಮುಂದಿರುವ ಸ್ಥಿತಿಯಾಗಿದೆ.

ದಾರ್ಶನಿಕರ ಚರಿತ್ರೆಯು ಜಗತ್ತಿನ ವಿವಿಧ ಪ್ರಾದೇಶಗಳ ಸಂಸ್ಕೃತಿಗಳೊಂದಿಗೆ, ನಾಗರಿಕತೆಗಳೊಂದಿಗೆ ಸಮ್ಮಿಳಿತವಾಗಿದೆ. ವಿವಿಧ ಸಂಸ್ಕೃತಿಗಳು ಉದಯಿಸಿ ಪ್ರವರ್ಧಮಾನವಾಗುವುದ–ರೊಂದಿಗೆ ಅವು ತಮ್ಮ ಸಂಬಂಧಗಳನ್ನು ಆಯಾ ಪ್ರದೇಶಗಳ ದಾರ್ಶನಿಕರೊಂದಿಗೆ ಬೆಸೆದುಕೊಂಡಿರುವುದನ್ನು ಕಾಣಬಹುದು.

ಕ್ರಿಸ್ತಪೂರ್ವ ೫೮೫ ರಲ್ಲಿ ಪ್ರಾಚೀನ ಈಜಿಪ್ಟದಲ್ಲಿ ಬದುಕಿದ್ದ ಥೇಲಿಸ್ ಎನ್ನುವವನು ಗ್ರಹಣಗಳು ಕಂಡು ಬರುವ ಅಂಶಗಳನ್ನು ನಿಖರವಾಗಿ ಹೇಳಿದ್ದರಿಂದ ಅದು ಕೇವಲ ವೈಜ್ಞಾನಿಕ ಸತ್ಯ ಮಾತ್ರವೆಂದು ಪ್ರತಿಪಾದಿಸಿದ್ದರಿಂದ ಅವನು ವಿಶ್ವದ ಮೊದಲ ವಿಜ್ಞಾನಿಯೆಂದು ಪ್ರಸಿದ್ದನಾದನು. ಯುರೋಪಿನ ಚರಿತ್ರೆಯಲ್ಲಿ ಈ ಥೇಲಿಸ್ ಮೊದಲ ತತ್ವಜ್ಞಾನಿಯಾಗಿಯೂ, ದಾರ್ಶನಿಕನಾಗಿಯೂ ಖ್ಯಾತಿಯನ್ನು ಪಡೆದಿದ್ದಾನೆ. 'ವೈಜ್ಞಾನಿಕ ಆವಿಷ್ಕಾರಗಳಿಗೆ ಮೂಲ ಪ್ರೇರಣೆಯಾಗಿರುವ ಸತ್ಯದ ಹುಡುಕಾಟದಲ್ಲಿ ವಿಶ್ವದ ಆಗು ಹೋಗುಗಳನ್ನು ಅರ್ಥ ಮಾಡಿಕೊಳ್ಳುವ ಗುಣದಿಂದಾಗಿ ಅವನು ವಿಶ್ವದ ಮೊದಲ ವಿಜ್ಞಾನಿ ಎನಿಸಿದರೆ ಇಡೀ ವಿಶ್ವದ ರಹಸ್ಯವನ್ನು ಭೇದಿಸಿ ಬಿಡಬೇಕೆಂಬ ಆಶೆಯನ್ನು ಹೊಂದಿದವನಾಗಿ ವಿಶ್ವದ ಮೊದಲ ದಾರ್ಶನಿಕನೂ ಎನಿಸಿದ್ದಾನೆ.' [೬]

ಗ್ರೀಸಿನ ಮುಂದಿದ್ದ ಪ್ರಧಾನ ಸಮಸ್ಯೆ ಪರಮಸತ್ಯದ ಅವಿಷ್ಕಾರ ಮಾಡಿಕೊಳ್ಳುವುದಾಗಿತ್ತು. ಅವರ ದೃಷ್ಟಿಯಲ್ಲಿ ಮೊದಲು ನೀರು ಪರಮಸತ್ಯವಾಗಿತ್ತೆಂದೂ ನಂತರ ಪ್ರಕೃತಿ ಪರಮಸತ್ಯವೆಂದು ತಿಳಿಯಲಾಯಿತೆಂದೂ ಆ ನಂತರ ಈ ಪರಮ ಸತ್ಯತ್ವವು ವಾಯುವಿಗೆ ವರ್ಗಾಯಿಸಿಲ್ಪಟ್ಟಿತೆಂದೂ ಅಭಿಪ್ರಾಯ ಪಡಲಾಗಿದೆ.[೭] ಇಂದ್ರಿಯಗಳಾಚೆ ನಿರ್ಮಲ ವಿವೇಕದಿಂದ, ಕೇವಲ ಮನಸ್ಸಿನಿಂದ ವಿಶ್ವವನ್ನು ತಿಳಿಯಲು ಪ್ರಯತ್ನಿಸಿದರೆ ಸರಿಯಾದ ತಿಳುವಳಿಕೆ ಮೂಡಲು ಸಾಧ್ಯವೆಂದು ಅವರ ಅಭಿಪ್ರಾಯವಾಗಿತ್ತು. ಈ ಪ್ರಪಂಚವು ಮಾಯೆ ಅಥವಾ ಮಿಥ್ಯೆ, ಪರಮಸತ್ಯವೆಂದು ಯಾವುದಿದೆಯೊ ಅದು ನಿರ್ಗುಣ ಮತ್ತು ಅದ್ವಿತೀಯವಾದದ್ದು ಎಂಬುದು ಅವರ ಧೋರಣೆಯಾಗಿತ್ತು. ಅವರ ದೃಷ್ಟಿಯಲ್ಲಿ ನಿರ್ಗುಣ, ನಿರ್ವಿಕಾರ ಮತ್ತು ಅದ್ವಿತೀಯವಾದದ್ದೇ ಬ್ರಹ್ಮವಾಗಿ ಅದು ಮಾತ್ರ ಕೇವಲ ಸತ್ಯವಾಗಿತ್ತು.[೮] ಹೀಗೆ ವಿವಿಧ

ಪಂಥದವರ ಗತಿಸ್ಥಿತಿಗಳ ನಡುವೆ ಸಮನ್ವಯ ಸಾಧಿತವಾಗಿ ಅವರ ವಾದಗಳ ನಡುವೆ ಹೊಂದಾಣಿಕೆ ರೂಪುಗೊಡಿತು.[೯]

'ಎಲ್ಲರಿಗೂ ಸಾಧುವಾದದ್ದು, ನ್ಯಾಯವಾದದ್ದು ಒಳ್ಳೆಯದು ಹಾಗೂ ಚಿರಂತನವಾದದ್ದು ಒಂದಿದೆ. ಅದಕ್ಕೆ ಸಾರ್ವಭೌಮತ್ವವಿದೆ ಹಾಗೂ ತನ್ನದೇ ಆದ ಅಸ್ತಿತ್ವವಿದೆ.' ಎಂದು ಗ್ರೀಸಿನ ಇನ್ನೊಬ್ಬ ಜ್ಞಾನಿ ಸಾಕ್ರೆಟೀಸ್ ಹೇಳಿದನು.[೧೦] ಅವನ ಶಿಷ್ಯ ಪ್ಲೇಟೊ, ಪ್ಲೇಟೊನ ಶಿಷ್ಯ ಅರಿಸ್ಟಾಟಲ್ ಇವರು ಸಾಕ್ರೆಟೀಸನ ಅಭಿಪ್ರಾಯಗಳನ್ನು ಅಲ್ಲಲ್ಲಿ ಬದಲಾಯಿಸಿ ತಮ್ಮ ಮತವನ್ನು ಮಂಡಿಸಿದರು. ಇಂದ್ರಿಯಗಳ ಸಹಾಯದಿಂದ ನಾವು ನೋಡುವ ಕೋಟಿ ಕೋಟಿ ವಸ್ತುಗಳು ನಮ್ಮ ಕಲ್ಪನೆ ಹಾಗೊ ನಂಬಿಕೆಗಳ ಛಾಯೆ ಮಾತ್ರವೆಂದೂ ಪ್ರಪಂಚದಲ್ಲಿ ನಾವು ತಿಳಿದಿರುವ, ಕೇಳಿರುವ, ನೋಡಿರುವ ಎಲ್ಲದಕ್ಕೂ ಇದು ಅನ್ವಯಿಸುತ್ತದೆಂದೂ ಪ್ಲೇಟೊ ಹೇಳಿದರೆ ಪ್ರಕೃತಿಯನ್ನು ತಿಳಿಯುವುದು ಹಾಗೂ ಗುರುತಿಸುವುದು ಅರಿಸ್ಟಾಟಲ್‌ನ ಉದ್ದೇಶವಾಗಿತ್ತು.[೧೧]

ಹೀಗೆ ಸತ್ಯ-ಮಿಥ್ಯ ಪ್ರಪಂಚ, ಚೈತನ್ಯ-ವಾಸ್ತವ ಪ್ರಕೃತಿ, ಸ್ಥಿತಿ-ಗತಿ, ಆಲೋಚನೆ-ವಿರೋಧ ಈ ನಾಲ್ಕು ಸಮಸ್ಯೆಗಳ ಗಂಭೀರ ಪರಿಕಲ್ಪನೆ ಪ್ರಾಚೀನ ಗ್ರೀಕರ ದರ್ಶನವಾಗಿ ರೂಪುಗೊಂಡಿತು. ಅವರ ಸಂಸ್ಕೃತಿಯ ವಿಶಿಷ್ಟ ಗುಣಗಳಾಗಿ ಮೂಡಿ ಬಂದ ಸೌಂದರ್ಯೋಪಾಸನೆ ಹಾಗೂ ವಿಚಾರ ಪ್ರಿಯತೆ ಇವುಗಳೊಂದಿಗೆ ಯಹೂದ್ಯ ಸಂಸ್ಕೃತಿಯ ಧರ್ಮಶ್ರದ್ಧೆ ಹಾಗೂ ಆಚಾರ ನಿಷ್ಠೆಗಳ ಸಮ್ಮಿಶ್ರಣವು ಯುರೋಪ ಸಂಸ್ಕೃತಿಯ ಮೇಲೆ ಪರಿಣಾಮ ಬೀರಿತು. ಈ ಎರಡು ಸಂಸ್ಕೃತಿಗಳ ಸಮ್ಮಿಶ್ರಣದ ಪರಿಣಾಮ ಪಾಶ್ಚಾತ್ಯ ಸಂಸ್ಕೃತಿಯ ವಿಶೇಷ ಲಕ್ಷಣವಾಯಿತು.[೧೨]

ಜಗತ್ತಿನ ನಾನಾ ಪ್ರದೇಶಗಳಲ್ಲಿ ಸಣ್ಣ ಪುಟ್ಟ ಜನಾಂಗಗಳ ಸಾಂಸ್ಕೃತಿಕ ಬೆಳವಣಿಗೆಗಳನ್ನು ಗಮನಿಸಬಹುದು. ಆದರೆ ಅವುಗಳಲ್ಲಿ ಸಂಸ್ಕೃತಿ ಹಾಗೂ ಸಾಹಿತ್ಯ ಇವುಗಳ ನಡುವೆ ಸಂಬಂಧ ಆಳವಾಗಿ ಮೂಡಿ ಬಂದಿರುವಂತೆ ತೋರುವುದಿಲ್ಲ. ಸಂಸ್ಕೃತಿ ಹಾಗೂ ಸಾಹಿತ್ಯಗಳ ಸಂಬಂಧದಲ್ಲಿ ಗ್ರೀಕ್ ತತ್ವಜ್ಞಾನವು ಹೇಗೆ ಮೂಡಿ ಬಂದಿದೆಯೆಂಬುದನ್ನು ಈ ವರೆಗೆ ಗಮನಿಸಿದೆವು. ಈಗ ಇಂಥ ಇನ್ನೊಂದು ಮಾದರಿಯಾದ ಭಾರತೀಯ ಪರಂಪರೆಯನ್ನು ಲಕ್ಷಿಸಬೇಕು. ಸಾಂಸ್ಕೃತಿಕ ಪರಂಪರೆಗೆ ತೂಗು

ತೊಟ್ಟಿಲಾಗಿರುವ ಭಾರತೀಯ ಸಂಸ್ಕೃತಿ ತನ್ನ ಆಳ ಹಾಗೂ ವೈಶಾಲ್ಯತೆಗಳಿಂದಾಗಿ ಜಗತ್ತಿನಾದ್ಯಂತ ಆಕರ್ಷಣೆಗೆ ಒಳಗಾಗಿದೆ.

೩. ಭಾರತೀಯ ದರ್ಶನಗಳು

ಬದುಕು ಮತ್ತು ಆದರ ಮೇಲಾಗುವ ಪರಿಸರದ ಪರಿಣಾಮ ಇವುಗಳ ರಹಸ್ಯವನ್ನು ಕುರಿತಾಗಿ ಅರಿಯುವ ಪ್ರಯತ್ನವನ್ನು ತತ್ತ್ವಜ್ಞಾನ ಎನ್ನಬಹುದು. ಭಾರತೀಯ ತತ್ತ್ವಜ್ಞಾನವು ವಿಶ್ವದ ಇಂಥ ಇನ್ನಿತರ ದೃಷ್ಟಿಕೋನಗಳಂತೆಯೇ ಇಲ್ಲಿಯ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿದೆ. ಈ ಸಂಸ್ಕೃತಿಯ ಬೆಳವಣಿಗೆಯೊಂದಿಗೆ ಪ್ರವರ್ಧಮಾನವಾಗಿರುವ ಭಾರತೀಯ ತತ್ವಶಾಸ್ತ್ರವು ವಿಶ್ವದ ಮೂಲ ಅವಸ್ಥೆ ಚೈತನ್ಯರೂಪ ಅಥವಾ ನಿರ್ಗುಣವೊ ಇಲ್ಲವೇ ವಸ್ತುರೂಪ ಅಥವಾ ಸಗುಣವೊ ಎಂಬ ಪ್ರಶ್ನೆಯ ಜೊತೆಗೆ ಇದಕ್ಕೆ ಸಂಬಂಧಿಸಿದ ಇನ್ನಿತರ ಅಂಶಗಳನ್ನು ವಿವೇಚಿಸುತ್ತದೆ. ಈ ವಿವೇಚನೆಯೇ ಭಾರತೀಯ ದರ್ಶನಗಳ ಮೂಲಭೂತ ವಿಷಯವಾಗಿದೆ.

ಭಾರತದೇಶದ ದರ್ಶನ ಸಾಹಿತ್ಯದಲ್ಲಿ ಷಡ್‌ದರ್ಶನಗಳು ಮಹತ್ವ ಪಡೆದಿವೆ. ಅವುಗಳನ್ನು (ಅ) ಸಾಂಖ್ಯ (ಆ) ಯೋಗ (ಇ) ನ್ಯಾಯ (ಈ) ವೈಶೇಷಿಕ (ಉ) ಮೀಮಾಂಸಾ ಮತ್ತು (ಊ) ವೇದಾಂತ ಎಂದು ಹೆಸರಿಸಲಾಗಿದೆ. ಪೂರ್ವ ಮೀಮಾಂಸೆಯು 'ಮೀಮಾಂಸಾದರ್ಶನ' ಎನಿಸಿಕೊಂಡರೆ ಉತ್ತರ ಮೀಮಾಂಸೆಯು 'ವೇದಾಂತ' ಎನಿಸಿಕೊಳುತ್ತದೆ.

(ಅ) ಸಾಂಖ್ಯದರ್ಶನ

'ಇದು ಕಪಿಲಮುನಿ ಪ್ರಣೀತವಾದುದು. ೨೫ ತತ್ವಗಳನ್ನು, ೬೪ ವಸ್ತುಗಳನ್ನು ನಿರ್ದಿಷ್ಟಪಡಿಸಿದುದರಿಂದ ಇವರಿಗೆ ಸಾಂಖ್ಯರೆಂಬ ಹೆಸರು ಬಂದಿರುವ ಸಂಭವವಿದೆ. ಇಲ್ಲವೆ, ಸಂಖ್ಯೆ ಅಂದರೆ ಜ್ಞಾನ, ಜೈಮಿನಿಯ ಕರ್ಮಶಾಸ್ತ್ರಕ್ಕೆ ಪ್ರತಿಯಾಗಿ ಕಪಿಲಮುನಿಗಳು ಜ್ಞಾನಮಾರ್ಗವನ್ನು ಪ್ರತಿವಾದಿಸಿದುದರಿಂದ ಈ ದರ್ಶನಕ್ಕೆ ಸಾಂಖ್ಯದರ್ಶನವೆಂಬ ಅಭಿದಾನ ಪ್ರಾಪ್ತವಾಗಿರಬೇಕು.'[೧೩]

'ಸಾಂಖ್ಯದರ್ಶನವು ರಾಜಯೋಗಕ್ಕೆ ಆಧಾರವಾಗಿದೆ. ಸಾಂಖ್ಯದರ್ಶನದ ಅಭಿಮತದಂತೆ ಬಾಹ್ಯೇಂದ್ರಿಯಗಳು, ಮೆದುಳು, ಮನಸ್ಸು, ಬುದ್ಧಿ ಹಾಗೂ ಆತ್ಮ ಈ ಕ್ರಮದಲ್ಲಿ ಗ್ರಹಣಕ್ರಿಯೆ

[illegible]

[illegible]

[illegible]

[illegible]

[illegible]

[illegible]

ಮುಂದುವರೆಯುತ್ತದೆ. ಕ್ರಮವಾಗಿ ಸಾಗುವ ಜ್ಞಾನವನ್ನು ಬುದ್ಧಿಯಿಂದ ಪುರುಷನು ಸ್ವೀಕರಿಸಿದಾಗ ಬಾಹ್ಯ ವಸ್ತುವಿನ ಪರಿಚಯವಾಗುತ್ತದೆ. ಅನಂತರ ಕರ್ಮೇಂದ್ರಿಯಗಳಿಗೆ ಅವಶ್ಯಕವಾದ ಕೆಲಸವನ್ನು ಮಾಡುವಂತೆ ಅಪ್ಪಣೆ ಕೊಡಲಾಗುವುದು. ಹೀಗೆ ಪುರುಷಮಾತ್ರ ಅಜಡ, ಉಳಿದುದೆಲ್ಲವೂ ಜಡ. ಆದರೆ ಮನಸ್ಸು ಬಾಹ್ಯೇಂದ್ರಿಯಗಳಿಗಿಂತಲೂ ಸೂಕ್ಷ್ಮ. ಮನಸ್ಸು ಯಾವ ವಸ್ತುವಿನಿಂದ ನಿರ್ಮಿತವಾಗಿದೆಯೋ ಅದೇ ವಸ್ತುವೇ ತನ್ಮಾತ್ರವೆಂಬ ಸೂಕ್ಷ್ಮ ವಸ್ತುವಿನ ರಚನೆಗೂ ಹೋಗುತ್ತದೆ. ಇದೇ ಸ್ಥೂಲವಾಗಿ ಬಾಹ್ಯ ವಸ್ತುವಾಗುವುದು. ಇದು ಸಾಂಖ್ಯರ ಮಾನಸಿಕಶಾಸ್ತ್ರ.'[೧೪]

ಸಾಂಖ್ಯರು ಪ್ರತಿಪಾದಿಸಿದ ಪಂಚವಿಂಶತಿ ತತ್ತ್ವಗಳು ಹೀಗಿವೆ:

೧. ಪಂಚಜ್ಞಾನೇಂದ್ರಿಯಗಳು : ಘ್ರಾಣ, ಜಿಹ್ವೆ ನೇತ್ರ, ತ್ವಕ್, ಶ್ರೋತ್ರ

೨. ಪಂಚಕರ್ಮೇಂದ್ರಿಯಗಳು : ಪಾಣಿ, ಪಾದ, ವಾಕ್, ಪಾಯು (ಗುಧ), ಉಪಸ್ಥ (ಗುಹ್ಯ)

೩. ಪಂಚ ತನ್ಮಾತ್ರೆಗಳು : ಗಂಧ, ರೂಪ ,ರಸ, ಸ್ಪರ್ಶ, ಶಬ್ದ

೪. ಪಂಚಭೂತಗಳು : ಪೃಥ್ವಿ, ಅಪ್,ತೇಜ, ವಾಯು, ಆಕಾಶ

೫. ಅಂತಃ ಕರಣ ಪಂಚಕ : ಪ್ರಕೃತಿ, ಮಹತ್, ಅಹಂಕಾರ, ಮನಸ್ಸು, ಜೀವಾತ್ಮ

'ಸಾಂಖ್ಯದರ್ಶನದ ಪ್ರಕಾರ ವಿಶ್ವ ಅಥವಾ ಜಗತ್ತು ಪ್ರಕೃತಿಯ ಲೀಲೆಯಾಗಿದೆ.'[೧೫] 'ಪ್ರಕೃತಿಯು ಪುರುಷಸಾನ್ನಿಧ್ಯದಲ್ಲಿ ಸಮಸ್ತ ಸೃಷ್ಟಿಯನ್ನು ನಿರ್ಮಿಸುತ್ತದೆ. ಪುರುಷನಿಗೆ ಅಂದರೆ ಆತ್ಮನಿಗೆ ಪ್ರಕೃತಿಯ ವಸ್ತುಗಳ ದೃಕ್, ದೃಶ್ಯ, ಸಂಬಂಧ ಸಹಜವಾಗಿ ಸಾಕ್ಷಾತ್ತಾಗಿ ಇದ್ದರೆ ಅಂತಹ ಆತ್ಮನಿಗೆ ಮೋಕ್ಷವಿಲ್ಲ. ಮೋಕ್ಷವೆಂದರೆ ಸಾಂಖ್ಯರ ಅಭಿಮತದಲ್ಲಿ ಸರ್ವದುಃಖನಿವೃತ್ತಿ. ಪುರುಷಾರ್ಥಗಳ ಕಲ್ಪನೆ ಸಾಂಖ್ಯರಿಂದಲೇ ಪ್ರಾರಂಭವಾದಂತಿದೆ.'[೧೬]

(ಆ) ಯೋಗದರ್ಶನ

'ಯೋಗದರ್ಶನದ ಮೂಲಪುರುಷ ಹಿರಣ್ಯಗರ್ಭಯೋಗೀಶ್ವರ. ಆದರೂ ಸೂತ್ರಕಾರರಾದ ಪತಂಜಲ ಮಹರ್ಷಿಗಳ ಹೆಸರಿನಿಂದಲೇ ಇದು ಪಾತಂಜಲಯೋಗವೆಂದು ಪ್ರಸಿದ್ಧವಾಗಿದೆ. ಜೀವಾತ್ಮ ಪರಮಾತ್ಮರ ಸಂಯೋಗವೇ ಯೋಗವೆನಿಸಿದರೆ ಅವರ ಸಾಮ್ಯದರ್ಶನವೇ ಸಮಾಧಿಯೆನಿಸುತ್ತದೆ.

ಜೀವಾತ್ಮನು ಪ್ರಪಂಚದಿಂದ ನಿವೃತ್ತಿ ಹೊಂದಿ ತನ್ನ ಮೂಲಸ್ವರೂಪದಲ್ಲಿ ನಿಲ್ಲುವುದು ಮೋಕ್ಷವೆನಿಸಿದೆ, ಕೈವಲ್ಯವೆನಿಸಿದೆ. ಪ್ರಪಂಚದ ನಿವೃತ್ತಿಯನ್ನು ಸಾಧಿಸುವುದೇ ಯೋಗದ ಉದ್ದೇಶ.’[೧೭]

ಪಾತಂಜಲ ಸೂತ್ರವು ಯೋಗಾಚರಣೆಗೆ ಅಷ್ಟಾಂಗಗಳನ್ನು ಸೂಚಿಸುತ್ತದೆ. ಅವುಗಳೆಂದರೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿ. ಪಂಚೇಂದ್ರಿಯಗಳ ನಿಗ್ರಹ ಹಾಗೂ ನಿಗ್ರಹಾಚರಣೆಗೆ ನಿಯಮಗಳನ್ನು ರೂಪಿಸಿಕೊಳ್ಳುವುದು ಪ್ರಾರಂಭದ ಹಂತಗಳು. ಲೋಕಜೀವಿಗಳಾದವರು, ಪಂಚೇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ ಇವುಗಳ ಮುಖಾಂತರ ವಿಷಯಗ್ರಹಣ ಮಾಡಿಕೊಳ್ಳುತ್ತಾರೆ. ‘ರಾಜಯೋಗದಲ್ಲಿ ಪ್ರತ್ಯಕ್ಷ, ಅನುಮಾನ, ಆಪ್ತವಾಕ್ಯ ಎಂದು ಮೂರು ವಿಧಧ ಪ್ರಮಾಣಗಳಿವೆ. ನಿರ್ಮಲಚಿತ್ತರಾದ ಯೋಗಿಗಳು ವಿಚಾರವೆಂಬ ದಾರಿಯನ್ನು ಮೀರಿ ಹೋಗಿರುತ್ತಾರೆ. ಅವರೆದುರಿಗೆ ಭೂತ, ಭವಿಷ್ಯತ್, ವರ್ತಮಾನಗಳೆಲ್ಲಾ ಓದುವ ಒಂದು ಪುಸ್ತಕದಂತಿರುತ್ತವೆ.’[೧೮]

ಯೋಗಾಚರಣೆಗೆ ಪೂರಕವಾಗುವಂತೆ ಸ್ಥಿರವಾದ ಭಂಗಿಯೊಂದರಲ್ಲಿ ಆವಶ್ಯಕ ಸಮಯದ ವರೆಗೆ ಕುಳಿತುಕೊಳ್ಳುವುದಕ್ಕೆ ಆಸನ ಎಂದೂ ಆ ಆಸನದಲ್ಲಿ ನಿಯಂತ್ರಿತವಾದ ಹಾಗೂ ಕ್ರಮವರಿತ ಶ್ವಾಸೋಚ್ಛ್ವಾಸವನ್ನು ಮಾಡುವುದಕ್ಕೆ ಪ್ರಾಣಾಯಾಮ ಎಂದೂ ಕರೆಯುವರು. ಯೋಗಾಚರಣೆಗೆ ಸೂಕ್ತವಾಗುವ ಹಾಗೂ ಪೂರಕವಾಗುವ ಆಹಾರ ಸೇವನೆ ಪ್ರತ್ಯಾಹಾರವೆನಿಸುತ್ತದೆ. ಚಿತ್ತವನ್ನು ಸ್ಥಿರೀಕರಿಸಿ ಅದನ್ನು ಧ್ಯೇಯವಸ್ತುವಿನಲ್ಲಿ ನಿಲ್ಲಿಸುವುದು ಹಾಗೂ ಆ ಧ್ಯೇಯವಸ್ತು ಸ್ವರೂಪದಲ್ಲಿ ಲೀನವಾಗುವುದು ಇವು ಧ್ಯಾನ, ಧಾರಣ ಮತ್ತು ಸಮಾಧಿಗೆ ಸಂಬಂಧಿಸಿದ ಕ್ರಿಯೆಗಳು.

‘ಚೇತನ ತತ್ತ್ವವು ಪುರುಷ (ಆತ್ಮ), ಈಶ್ವರ ಎಂದು ಎರಡು ವಿಧವಾಗಿದೆ. ಯೋಗದಿಂದ ಆತ್ಮ ಪರಿಶುದ್ಧವಾಗಿ ಪರಮಾತ್ಮನ ಸಾಕ್ಷಾತ್ಕಾರವಾಗುವುದು. ಪುರುಷನ ಸಾನ್ನಿಧ್ಯಮಾತ್ರದಿಂದಲೆ ಪ್ರಕೃತಿಯು ಸೃಷ್ಟಿಕಾರ್ಯವನ್ನು ಪೂರೈಸುವುದು.ಈ ಕಾರ್ಯದಲ್ಲಿ ಪುರುಷನ ಕೆಲಸವೇ ಇಲ್ಲ. ಅವನ ಸಾನ್ನಿಧ್ಯ ಮಾತ್ರವಿರುತ್ತದೆ ಎಂಬುದು ಮುಖ್ಯವಾದ ವಿಷಯ. ಆತನ ಸಾನ್ನಿಧ್ಯವಿಲ್ಲದೆ ಪ್ರಕೃತಿಯ ಕಾರ್ಯವೇ ಇಲ್ಲವೆಂಬುದು ಅಷ್ಟೇ ಸತ್ಯ.’[೧೯]

(೯) ನ್ಯಾಯದರ್ಶನ

'ನ್ಯಾಯಶಾಸ್ತ್ರವು ಗೌತಮಮುನಿ ಪ್ರಣೀತವಾದುದು. ಇದು ತರ್ಕದ ಆಧಾರದ ಮೇಲೆ ನಿಂತ ಶಾಸ್ತ್ರ. ಆತ್ಮ, ಅನಾತ್ಮ ತತ್ವಗಳನ್ನು ತರ್ಕಶಾಸ್ತ್ರವನ್ನು ಆಧರಿಸಿ ನಿರ್ಣಯಿಸಲಾಗುತ್ತದೆ. ನ್ಯಾಯದರ್ಶನದಲ್ಲಿ ಕೆಳಗೆ ಕಾಣಿಸಿದ ಹದಿನಾರು ತತ್ವಗಳು ಪ್ರತಿಪಾದಿತವಾಗಿವೆ. (೧) ಪ್ರಮಾಣ (೨) ಪ್ರಮೇಯ (೩) ಸಂಶಯ (೪) ಪ್ರಯೋಜನ (೫) ದೃಷ್ಟಾಂತ (೬) ಸಿದ್ಧಾಂತ (೭) ಅವಯವ (೮) ತರ್ಕ (೯) ನಿರ್ಣಯ (೧೦) ವಾದ (೧೧) ಜಲ್ಪ (೧೨) ವಿತಂಡ (೧೩) ಹೇತ್ವಾಭಾಸ (೧೪) ಫಲ (೧೫) ಜಾತಿ (೧೬) ನಿಗ್ರಹಸ್ಥಾನ'[೨೦]

'ನ್ಯಾಯದರ್ಶನವು ವ್ಯವಸ್ಥಿತವಾದ ಒಂದು ವಿಶಿಷ್ಟ ಸದಸತ್ ಪದಾರ್ಥವಾದದಲ್ಲಿ ನಿಂತಿರುವುದು. ಅಂದರೆ ಸಕಲ ವಸ್ತುಗಳಿಗೂ ಸತ್‌ಸ್ವರೂಪವುಂಟು; ಅಸತ್‌ಸ್ವರೂಪವೂ ಉಂಟು. ಅಸತ್‌ಸ್ವರೂಪವೆಂದರೆ ಅಭಾವಸ್ಥಿತಿ. ಭಾವವಸ್ತು ಅಭಾವವಾಗುವುದಿಲ್ಲ. ಇದೇ ವ್ಯವಸ್ಥಿತವಾದ ಸದಸತ್ ಪದಾರ್ಥವಾದ. ನ್ಯಾಯಶಾಸ್ತ್ರದಲ್ಲಿ ಪ್ರಮೇಯವನ್ನು ಅಂದರೆ ವಿಷಯವನ್ನು ಆತ್ಮ, ಶರೀರ, ಇಂದ್ರಿಯ, ಅಧರ್ಮ, ಬುದ್ಧಿ, ಮನಸ್ಸು ಪ್ರವೃತ್ತಿ, ದೋಷ, ಪ್ರತ್ಯಭಾವ, ಫಲ, ದುಃಖ, ಅಪವರ್ಗವೆಂದು ಹನ್ನೆರಡು ವಿಧವಾಗಿ ವಿಭಜಿಸಲಾಗಿದೆ. ಈ ಹನ್ನೆರಡು ವಿಧವಾದ ಪ್ರಮೇಯದಲ್ಲಿ ಆತ್ಮನೇ ಮೋಕ್ಷಕ್ಕೆ ಅಧಿಕಾರಿ. ಇಪ್ಪತ್ತೊಂದು ಬಗೆಯ ದುಃಖಗಳು ಆತ್ಯಂತಿಕವಾಗಿ ನಿರ್ವರ್ತಿಸುತ್ತಿರುತ್ತವೆ. ಅಧರ್ಮ, ಮಿಥ್ಯಾ ಧ್ಯಾನಗಳಿಲ್ಲದೆ ದರ್ಮಜ್ಞಾನ, ಸಮಾಧಿಗಳಿಂದ ಕೂಡಿದ ಆತ್ಮನೇ ಪರಮಾತ್ಮ. ಅವನಿಗೆ ಧರ್ಮಸಂಕಲ್ಪ ಮಾತ್ರದಿಂದ ಅಣಿಮಾದಿ ಅಷ್ಟಸಿದ್ಧಿ, ಸಮಾಧಿಯ ಫಲ ಮುಂತಾದುವು ಪ್ರಾಪ್ತವಾಗುವುವು. ಅವನು ಪ್ರತಿ ಆತ್ಮನಲ್ಲಿರುವ ಧರ್ಮಾಧರ್ಮ ವಿವೇಚನೆಯನ್ನು ಪ್ರೇರೇಪಿಸುವನು. ಸೃಷ್ಟಿಸಾಮರ್ಥ್ಯ ಈಶ್ವರನ ಧರ್ಮಫಲ. ಇವನೇ ತಂದೆ, ತಾಯಿ, ಬಂಧು, ಬಳಗ, ದೃಷ್ಟಾ, ಬೋದ್ಧಾ, ಸರ್ವಜ್ಞತಾ ಎಂಬುದು ಈಶ್ವರನ ಸ್ವರೂಪ. ಇವನ ಸ್ವರೂಪಜ್ಞಾನವೇ ಬುದ್ಧಿ.'[೨೧]

(ಈ) ವೈಶೇಷಿಕ ದರ್ಶನ

'ವೈಶೇಷಿಕ ದರ್ಶನವು ಕಣಾದ ಋಷಿಯಿಂದ ಪ್ರಾರಂಭವಾಯಿತು. ಇದರಲ್ಲಿ ನ್ಯಾಯಶಾಸ್ತ್ರ ಪ್ರತಿಪಾದಿಸುವ ಹದಿನಾರು ತತ್ತ್ವಗಳಿಗೆ ಪ್ರತಿಯಾಗಿ ಕೆಳಗಿನ ಏಳು ತತ್ತ್ವಗಳನ್ನು ಮಾತ್ರ ಸ್ವೀಕರಿಸಲಾಗಿದೆ. (೧) ದ್ರವ್ಯ (೨) ಗುಣ (೩) ಕರ್ಮ (೪) ಸಾಮಾನ್ಯ (೫) ವಿಶೇಷ (೬) ಸಮವಾಯ (೭) ಅಭಾವ.'

'ವೈಶೇಷಿಕ ದರ್ಶನವನ್ನು ಪ್ರಮೇಯಶಾಸ್ತ್ರವೆಂದು ಕರೆಯಲಾಗುತ್ತದೆ. ಇದರಲ್ಲಿ ಆತ್ಮ, ಅನಾತ್ಮ, ವೈರಾಗ್ಯ, ಮೋಕ್ಷ, ಮೋಕ್ಷಸಾಧನ ಇತ್ಯಾದಿಗಳ ವಿಚಾರ ಅಡಕವಾಗಿರುತ್ತದೆ. ಪ್ರತ್ಯಕ್ಷದಿಂದ ತಿಳಿದ ಆತ್ಮಸ್ವರೂಪವನ್ನು ಯುಕ್ತಿಯಿಂದ ವಿಚಾರಿಸಿ ಸಂದೇಹವಿಲ್ಲದೆ ನಿರ್ಣಯಿಸಿಕೊಳ್ಳಬೇಕೆಂದು ಕಣಾದರು ಹೇಳುತ್ತಾರೆ.'[೨೨]

'ದುಃಖರೂಪವಾದ ಸಂಸಾರವು ತತ್ತ್ವಜ್ಞಾನಕ್ಕೆ ಪ್ರತಿಬಂಧಕವಾಗಿರುತ್ತದೆ. ಪ್ರಾಣಿಹಿಂಸೆ, ಅಸತ್ಯ ನುಡಿ, ಕಳ್ಳತನ, ಶಾಸ್ತ್ರವಿಹಿತ ಕರ್ಮತ್ಯಾಗ ಮುಂತಾದುವು ಕರ್ಮಕ್ಕೆ ಕಾರಣ. ಜ್ಞಾನಮೂಲಕವಾಗಿ, ಫಲಾಪೇಕ್ಷೆಯಿಲ್ಲದೆ ಮಾಡಿದ ಕರ್ಮದಿಂದ ಷಟ್‌ಪದಾರ್ಥಗಳ ಜ್ಞಾನವುಂಟಾಗುತ್ತದೆ. ಇದರಿಂದ ಸಂಚಿತ ಕರ್ಮಕ್ಷಯವಾಗಿ, ಆಗಾಮಿಕರ್ಮ ನಿಂತು ಹೋಗುತ್ತದೆ. ಇದೇ ಮೋಕ್ಷ. ಈ ಸ್ಥಿತಿಯಲ್ಲಿ ಆತ್ಮನು ತನ್ನ ಸ್ವಾಭಾವಿಕ ಸ್ಥಿತಿಯಲ್ಲಿರುವನು, ಅಂದರೆ ದುಃಖರಹಿತನಾಗಿರುವನು. ದುಃಖವಿಲ್ಲದಿರುವ ಸ್ಥಿತಿಯನ್ನೇ ಸ್ವಾಭಾವಿಕ ಸುಖಾನುಭವವೆನ್ನುವರು. ಇವರ ಮತದಂತೆ ಪರಮೇಶ್ವರನು ಸಕಲಕಾರ್ಯ ಕಾರಣನಾಗಿರುವನು. ಆದರೆ ಅವನಿಗೆ ನಿಗ್ರಹಾನುಗ್ರಹ ಶಕ್ತಿಯಿಲ್ಲ. ಭ್ರಾಂತಿಯಿಂದ ಬಂದ ಬಂಧವು ತತ್ತ್ವಜ್ಞಾನದಿಂದ ನಿವೃತ್ತಿಯಾಗುವುದರಿಂದ ನಡುವೆ ಪರಮೇಶ್ವರನ ಅನುಗ್ರಹಕ್ಕೆ ಅವಕಾಶವೇ ಇಲ್ಲ.'[೨೩]

(ಉ) ಪೂರ್ವಮೀಮಾಂಸಾ ದರ್ಶನ

'ವೇದದ ಪೂರ್ವಭಾಗವನ್ನು ಅಂದರೆ ಕರ್ಮಕಾಂಡದ ಭಾಗವನ್ನು ಪರಿಶೀಲಿಸಿ ವಿವರಿಸುವುದು ಪೂರ್ವಮೀಮಾಂಸೆಯಾಗಿದೆ. ಇದರ ಪ್ರತಿಪಾದಕ ಜೈಮಿನಿ'. ಈ ಮೀಮಾಂಸೆ ಯಜ್ಞಯಾಗಾದಿಗಳ ಆಚರಣೆಗೆ ಸಂಬಂಧಪಟ್ಟ ಸೂಕ್ತಿಗಳ ಸರಿಯಾದ ಅರ್ಥವಿವರಣೆ ಮಾಡುವುದು ಮತ್ತು ಸಂದಿಗ್ಧ ಭಾಗಗಳ ಪಥ್ಯ ಭಾಗಗಳ ರೂಪಗಳನ್ನು ನಿರ್ದಿಷ್ಟಗೊಳಿಸುವುದು. ಶ್ರುತಿ, ಸ್ಮೃತಿ, ಆಚಾರಗಳಿಂದ ಯಜ್ಞಯಾಗಾದಿಗಳನ್ನು ಮಾಡತಕ್ಕ ರೀತಿಯನ್ನೂ, ಕ್ರಮವನ್ನೂ, ಮಾಡತಕ್ಕವರ ಯೋಗ್ಯತೆಯನ್ನೂ

[illegible]

ಇವುಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನೂ ಪರಾಮರ್ಶಿಸಿ ಪೂರ್ವಮೀಮಾಂಸೆಯಲ್ಲಿ ನಿರ್ಣಯ ಮಾಡಲಾಗಿದೆ. ಅಂತೆಯೇ "ಮೀಮಾಂಸಾಶಾಸ್ತ್ರವೆಂದರೆ ವೇದಾರ್ಥ ವಿಚಾರಶಾಸ್ತ್ರವೆಂದರ್ಥ. ಈ ಮೀಮಾಂಸಾದರ್ಶನದಲ್ಲಿ ಮೋಕ್ಷವೆಂಬ ಪುರುಷಾರ್ಥವಿದೆ. 'ಆತ್ಮ'ವೆಂಬ ವಸ್ತುವನ್ನು ಮೀಮಾಂಸಕರು ಉಪನಿಷತ್ತುಗಳಿಂದ ತಿಳಿದುಕೊಂಡಿದ್ದರೂ ಅದನ್ನು ಯುಕ್ತಿಯಿಂದ ಸಾಧಿಸುವುದಾಗಿ ಹೇಳುತ್ತಾರೆ. ಇವರು ಸನ್ಯಾಸ ಹಾಗೂ ಸರ್ವಕರ್ಮಪರಿತ್ಯಾಗವನ್ನು ಒಪ್ಪುವುದಿಲ್ಲ. ಗೃಹಸ್ಥಾಶ್ರಮದಲ್ಲಿದ್ದು ಯಜ್ಞಯಾಗಾದಿ ಕರ್ಮಗಳನ್ನು ವಿಧ್ಯುಕ್ತವಾಗಿ ಆಚರಿಸಬೇಕೆಂಬ ಕಟ್ಟುನಿಟ್ಟು ಪೂರ್ವಮೀಮಾಂಸೆಯಲ್ಲಿದೆ."[೨೪]

'ಮೀಮಾಂಸಕರ ದೃಷ್ಟಿಯಲ್ಲಿ ಸೃಷ್ಟಿ-ಪ್ರಳಯಗಳು ಎಂದೂ ಸಂಪೂರ್ಣವಾಗಿರುದಿಲ್ಲ. ಈ ಜಗತ್ತು ಈಗಿರುವ ಹಾಗೆ ಯಾವಾಗಲೂ ಇರುತ್ತದೆ. ಇದಕ್ಕೆ ಆದಿಯಿಲ್ಲ, ಅಂತ್ಯವಿಲ್ಲ. ಕಾರಣವೂ ಬೇಕಿಲ್ಲ. ಪ್ರತಿಯೊಂದು ವಸ್ತುವಿಗೂ ಅಚಿಂತ್ಯ ಶಕ್ತಿಯುಂಟು.'[೨೫]

(ಊ) ಉತ್ತರ ಮೀಮಾಂಸೆ (ವೇದಾಂತ)

'ವೇದಾಂತವೆನಿಸಿದ ಉತ್ತರ ಮೀಮಾಂಸೆಗೆ ಬಾದರಾಯಣರು ಸೂತ್ರಗಳನ್ನು ರಚಿಸಿರುವರು. ಈ ಕೃತಿಗೆ 'ಬ್ರಹ್ಮಸೂತ್ರ' ಎನ್ನುತ್ತಾರೆ. ವೇದಗಳ ವಾಙ್ಮಯ ಬಹುಕಾಲದವರೆಗೆ ವ್ಯಾಪಕವಾಗಿ ಬೆಳೆದು ನಿಂತಿದೆ. ಇದನ್ನು ಸಂಹಿತೆ, ಬ್ರಾಹ್ಮಣ, ಅರಣ್ಯಕ ಎಂದು ಮೂರು ಭಾಗವಾಗಿ ವಿಂಗಡಿಸಬಹುದು. ಮೊದಲನೆಯ ಭಾಗ ಸಂಹಿತೆಗಳಿಂದೊಡಗೂಡಿದೆ. ಸಂಹಿತೆಗಳು ಗದ್ಯಪದ್ಯ ರೂಪದ ಮಂತ್ರಗಳು. ಬ್ರಾಹ್ಮಣಗಳು ಈ ಮಂತ್ರಗಳಿಗೆ ಬರೆದ ವ್ಯಾಖ್ಯಾನಗಳು. ಅರಣ್ಯದಲ್ಲಿದ್ದು ಋಷಿಗಳು ಸಾಧಿಸುತ್ತಿದ್ದ ರಹಸ್ಯಭಾಗಕ್ಕೆ ಅರಣ್ಯಕವೆಂಬ ಅಭಿದಾನ ಸಂದಿದೆ. ಸಾಮಾನ್ಯವಾಗಿ ಉಪನಿಷತ್ತುಗಳೆಂದರೆ ವೇದಗಳ ಕೊನೆಯ ಭಾಗವೆಂದರ್ಥ. ಮುಖ್ಯ ಉಪನಿಷತ್ತುಗಳು ಹತ್ತು, ಹನ್ನೆರಡು ಇಲ್ಲವೆ ಹದಿಮೂರು ಎಂದು ತಿಳಿದು ಬರುತ್ತದೆ. ಆದರೆ ಈ ಉಪನಿಷತ್ತುಗಳ ಸಂಖ್ಯೆ ನೂರಕ್ಕೂ ಹೆಚ್ಚಾಗಿದೆ. ಈಶಾವಾಸ್ಯೋಪನಿಷತ್ತು ಇವುಗಳಲ್ಲಿ ಮೊದಲನೆಯದೆನಿಸಿದೆ. ಇದು ಕೇವಲ ಹದಿನೆಂಟು ಮಂತ್ರಗಳನ್ನೊಳಗೊಂಡ ಕಿರಿಯ ಗಾತ್ರದ ಹಿರಿಯ ಅರ್ಥದ ಹೊತ್ತಿಗೆ.'[೨೬]

[illegible]

[illegible]

[illegible]

[illegible]

ಶಂಕರಾಚಾರ್ಯರು ಭಾಷ್ಯ ಬರೆದ ಉಪನಿಷತ್ತುಗಳ ಸಂಖ್ಯೆ ಹತ್ತು. ಅವುಗಳ ಕ್ರಮ ಹೀಗಿದೆ: (೧) ಈಶ (೨) ಕೇನ (೩) ಕಠ (೪) ಪ್ರಶ್ನ (೫) ಮುಂಡಕ (೬) ಮಾಂಡೂಕ್ಯ (೭) ತೈತ್ತಿರೀಯ (೮) ಐತರೇಯ (೯) ಛಾಂದೋಗ್ಯ (೧೦) ಬೃಹದಾರಣ್ಯಕ.

'ಶ್ವೇತಾಶ್ವತರವು ಹನ್ನೊಂದನೆಯ ಉಪನಿಷತ್ತೆನಿಸಿದೆ. ಈ ಉಪನಿಷತ್ತುಗಳನ್ನು ಪರಾಮರ್ಶಿಸಿ ಬಾದರಾಯಣರು ಬ್ರಹ್ಮಸೂತ್ರಗಳ ಗ್ರಂಥವನ್ನು ರಚಿಸಿದರು. ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತಾ ಇವು ಮೂರನ್ನೂ ಸೇರಿಸಿ ಪ್ರಸ್ಥಾನತ್ರಯೀ ಎಂದು ಕರೆದರು. ಶಂಕರ, ರಾಮಾನುಜ, ಮಧ್ವ ಈ ಆಚಾರ್ಯತ್ರಯರು ಅನುಕ್ರಮವಾಗಿ ತಮ್ಮ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಸಿದ್ಧಾಂತಗಳನ್ನು ಪ್ರಸ್ಥಾನತ್ರಯೀ ವ್ಯಾಖ್ಯಾನಗಳಿಂದ ಪ್ರತಿಷ್ಠಾಪಿಸಿರುವರು. ವೇದಾಂತದ ಸಾರ ಹೀಗಿದೆ. ಮಾನವನಲ್ಲಿ ದಿವ್ಯತೆಯಿದೆ, ಆತ್ಮ ಪ್ರಕಾಶವೇ ಆ ದಿವ್ಯತೆ. ಬ್ರಹ್ಮದಲ್ಲಿ ಸಕಲ ವಿಶ್ವದ ಆಧ್ಯಾತ್ಮಿಕ ಐಕ್ಯತೆಯಿದೆ.'[೨೭]

'ವೇದಾಂತವೆಂದರೆ ಧರ್ಮ ಹಾಗೂ ತತ್ತ್ವಶಾಸ್ತ್ರ ಎಂದು ಎರಡೂ ಅರ್ಥಗಳುಂಟು. ಧರ್ಮವೆಂದರೆ ಅದು ಅಂತರಂಗದ ಸತ್ಯಗಳನ್ನು ಕಂಡು ಹಿಡಿಯುತ್ತದೆ. ತತ್ತ್ವಶಾಸ್ತ್ರವಾಗಿ ಸಮಗ್ರ ಸತ್ಯದ ಐಕ್ಯದರ್ಶನ ಮಾಡಿಸುತ್ತದೆ. ಧರ್ಮವೆಂದರೆ ವೇದಾಂತದ ಅಭಿಮತದಂತೆ ಅತೀಂದ್ರಿಯಜ್ಞಾನ.'[೨೮] ಅಂದರೆ ಅದು ಅಪರಿಪೂರ್ಣತೆಯಿಂದ ಪರಿಪೂರ್ಣತೆಯೆಡೆಗೆ ಸಾಗುವ ಕ್ರಿಯೆ.

'ಪ್ರಸ್ಥಾನತ್ರಯಿಗಳಿಗೆ ಶಂಕರಾಚಾರ್ಯ, ರಾಮಾನುಜಾಚಾರ್ಯ, ಶ್ರೀಪತಿಪಂಡಿತ, ಮಧ್ವಾಚಾರ್ಯ, ವಲ್ಲಭಾಚಾರ್ಯ ಮುಂತಾದವರು ಭಾಷ್ಯಗಳನ್ನು ಬರೆದು ಅನುಕ್ರಮವಾಗಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ದ್ವೈತಾದ್ವೈತ, ಸಿದ್ಧಾಂತಗಳನ್ನು ಪ್ರತಿಷ್ಠಾಪಿಸಿದರು.'[೨೯]

೪. ತತ್ತ್ವಶಾಸ್ತ್ರ ಎಂದರೇನು?

'ತತ್ತ್ವ' ಎಂದರೆ ಹೊಸಸ್ವಭಾವವುಳ್ಳ ವಸ್ತು. ಮೂಲಪ್ರಕೃತಿ ಮೊದಲನೆಯ ತತ್ತ್ವ ಹಾಗೂ ಅನಂತಕೋಟಿ ಬ್ರಹ್ಮಾಂಡಗಳು ಹುಟ್ಟಿ ಲಯ ಹೊಂದುವ ಈ ಸರ್ವವ್ಯಾಪಿ ಮೂಲಪ್ರಕೃತಿಯೇ ಬ್ರಹ್ಮ ಪದಕ್ಕೆ ಅರ್ಹ[೩೦] ಶೂನ್ಯದಿಂದ ಹೊಸ ಸ್ವಭಾವ ಪಡೆದುಕೊಂಡವುಗಳನ್ನು ತತ್ತ್ವಗಳೆಂದು ತಿಳಿಸುತ್ತ ಪೃಥ್ವಿ,

ಅಪ್ಪು, ತೇಜ, ವಾಯು, ಆಕಾಶ ಈ ತತ್ತ್ವಗಳ ಕೂಡುವಿಕೆಯಿಂದ ಇಪ್ಪತ್ತೈದು ತತ್ತ್ವಗಳಾಗಿರುವುದನ್ನು ಷಡುದರ್ಶನಗಳ ಅಭ್ಯಾಸದಲ್ಲಿ ನೋಡಿದ್ದೇವೆ.

ವಿಶ್ವದ ಮೂಲ ಅವಸ್ಥೆ ಚೈತನ್ಯರೂಪವೊ, ವಸ್ತುರೂಪವೊ? ನಿರ್ಗುಣವೊ, ಸಗುಣವೊ? ಎಂಬ ಪ್ರಶ್ನೆಗಳ ವಿವೇಚನೆಯು ತತ್ತ್ವಶಾಸ್ತ್ರದ ಮೂಲಭೂತ ವಿಷಯವಾಗಿದೆ. 'ಚೈತನ್ಯವೇ ಮೂಲ, ಚೈತನ್ಯದಿಂದಲೇ ವಸ್ತು ಉದ್ಭವಿಸಿತು. ಅರಿವಿನಂತೆ ಇರವು ಎಂದು ಭಾವಿಸುವ ತತ್ತ್ವವೇತ್ತರು ಆಧ್ಯಾತ್ಮವಾದಿಗಳೆಂದು ಕರೆಯಲ್ಪಟ್ಟರೆ ವಸ್ತುವಿಗೆ ಪ್ರಾಧಾನ್ಯ ಕಲ್ಪಿಸುತ್ತ ಭೌತಿಕ ವಸ್ತುವಿನಿಂದಲೇ ಚೈತನ್ಯವೂ ಭಾವನೆಯೂ ವಿಚಾರವೂ ಉದ್ಭವಿಸುತ್ತವೆಯೆಂದು ಪ್ರತಿಪಾದಿಸುವ ತತ್ತ್ವವೇತ್ತರು ಭೌತಿಕವಾದಿಗಳೆಂದು ತಿಳಿಯಲ್ಪಡುತ್ತಾರೆ.'[೩೧] 'ಆಧ್ಯಾತ್ಮಿಕವಾದಿಗಳು ಈ ಜಗತ್ತು ಚೈತನ್ಯಮಯವಾದ, ನಿರ್ಗುಣಾತ್ಮಕವಾದ, ನಿರಾಕಾರವಾದ ಕೈವಲ್ಯದಿಂದ ಉದ್ಭವಿಸಿತೆಂದು ತಿಳಿಸಿದರೆ ನಿಸರ್ಗ ಅಥವಾ ಭೌತಿಕ ಜಗತ್ತು ಪ್ರಾಥಮಿಕವಾಗಿದೆ, ಅನಾದಿಯಾಗಿದೆ, ಅನಂತವಾಗಿದೆ, ಎಲ್ಲದಕ್ಕೂ ಮೂಲವಾಗಿದೆ ಹಾಗೂ ಚೈತನ್ಯವೂ ಅದರ ಅಂಶವಾಗಿದೆಯೆಂದು ಭೌತಿಕವಾದಿಗಳು ತಿಳಿಸುತ್ತಾರೆ.'[೩೨] 'ಯಾಥಾರ್ಥ್ಯವು ಮನುಷ್ಯನ ತಿಳುವಳಿಕೆಗೆ ಸಿಲುಕದ್ದೆಂಬ ಆಧ್ಯಾತ್ಮಿಕವಾದಿಗಳ ಅಂಬೋಣವನ್ನು ಭೌತಿಕವಾದಿಗಳು ಒಪ್ಪುವುದಿಲ್ಲ.'[೩೩] ಒಟ್ಟಿನಲ್ಲಿ ತತ್ತ್ವಜ್ಞಾನದ ನೆಯ್ಗೆಯಲ್ಲಿ ವಾದದ ಲಾಳಿಯು ಸಗುಣ-ನಿರ್ಗುಣ ಅಥವಾ ಪ್ರಕೃತಿ ಚೈತನ್ಯ ಈ ಎರಡು ಅಂಚುಗಳ ನಡುವೆ ಓಡಾಡುತ್ತದೆ.

ವೇದಗಳಲ್ಲಿ ಮನಃಪೂರ್ವಕವಾಗಿ ಒಪ್ಪಿಕೊಳ್ಳಬಹುದಾದ ಅಂಶಗಳು ಗೋಚರಿಸುವಂತೆ ನೇರವಾಗಿ ತಿರಸ್ಕಾರಕ್ಕೆ ಪಾತ್ರವಾಗುವ ಅಂಶಗಳೂ ಮೂಡಿ ಬಂದಿವೆ. ಅವುಗಳಲ್ಲಿಯ ದಾರ್ಶನಿಕ ವಿಚಾರಗಳು ನಮ್ಮನ್ನು ಸೆರೆಹಿಡಿಯುತ್ತಿದ್ದರೆ ಯಜ್ಞಯಾಗಾದಿಗಳು, ಕರ್ಮಕಾಂಡಗಳು ಮುಂತಾದವುಗಳ ಅರ್ಥವಿವರಣೆ ಅಗ್ರಾಹ್ಯವೆನಿಸುತ್ತದೆ. ಬಾಯಿಯಿಂದ ಬಾಯಿಗೆ ವರ್ಗಾವಣೆಯಾಗುತ್ತ ಬಂದಿರುವ ಈ ವಾಙ್ಮಯವು ಕಾಲಾನುಕ್ರಮದಲ್ಲಿ ಪರಿಷ್ಕರಿಸಲ್ಪಟ್ಟಿದ್ದು ಅಲ್ಲಲ್ಲಿ ಆಸಕ್ತ ಅಂಶಗಳು ಸೇರಿಕೊಂಡು ವೇದಗಳ ಮೂಲವನ್ನೇ ಸಂಶಯದಿಂದ ನೋಡುವಂತೆ ಮಾಡಿವೆ. ವೇದಗಳ ವಿಷಯಕ್ಕೂ, ಅದನ್ನು ಅರ್ಥೈಸುವವರ ನಡತೆಗೂ ವ್ಯತ್ಯಾಸ ತೋರತೊಡಗಿದಂತೆ ಆಸಕ್ತ ವರ್ಗದ ವಿಚಾರಗಳನ್ನು ಪ್ರತಿಭಟಿಸುವ ಪ್ರಸಂಗಗಳೂ ಗೋಚರಿಸುತ್ತವೆ. ವೇದಗಳ ಉದ್ದೇಶವನ್ನು ತಿರಸ್ಕರಿಸದೆ ವೈದಿಕರೆಂದೆನಿಸಿಕೊಳ್ಳುವವರನ್ನು ಪ್ರತಿಭಟಿಸಿದ

ಪ್ರಸಂಗಗಳನ್ನು ರಾಮಾಯಣ-ಮಹಾಭಾರತಗಳ ಕಾಲಕ್ಕಿಂತ ಮೊದಲು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾದುದೆಂದರೆ ಚಾರ್ವಾಕವಾದ ಅಥವಾ ಚಾರ್ವಾಕದರ್ಶನ. ಅದೇ ರೀತಿ ಬೌದ್ಧದರ್ಶನ, ಜೈನದರ್ಶನ ಇವೂ ವೇದಗಳಲ್ಲಿ ಸೇರಿಸಲ್ಪಟ್ಟಿರುವ ಆಸಕ್ತ ವರ್ಗದ ಆಚರಣೆಯ ಅಂಶಗಳನ್ನು ತಿರಸ್ಕರಿಸುತ್ತ ಸಮ್ಯಕ್‌ದರ್ಶನಕ್ಕೆ ಒತ್ತು ಕೊಡುತ್ತವೆ. ವೇದಪ್ರಮಾಣವನ್ನು ಒಪ್ಪದ, ವರ್ಣಾಶ್ರಮ ಧರ್ಮವನ್ನು ಸ್ವೀಕರಿಸದ, ಯಜ್ಞಯಾಗಾದಿಗಳ ಆಚರಣೆಯಲ್ಲಿ ನಂಬುಗೆಯಿಲ್ಲದ, ಜಾತಿಪದ್ಧತಿಯನ್ನು ಧಿಕ್ಕರಿಸಿದ ಈ ದರ್ಶನಗಳೊಂದಿಗೆ ಪುರಾಣ ಕಸ್ಸಪನ ಅಕ್ರಮಸಿದ್ಧಾಂತ, ಪಕಡಕಚ್ಚಾಯನನ ಅಣುವಾದ, ಮಕ್ಕಾಲಿಗೋಸಾಲನ ಆಜೀವಿಕವಾದ, ಅಜಿತಕೇಶಕಂಬಲನ ಉಚ್ಛೇದವಾದ, ಸಂಜಯಬೇಲಠ್ಠಿ ಪುತ್ತನ ವಿಕ್ಷೇಪವಾದ ಇವೂ ಸೇರಿಕೊಳ್ಳುತ್ತವೆ ಇವುಗಳನ್ನು ಶ್ರಮಣದರ್ಶನ ಎನ್ನುತ್ತಾರೆ.[೩೪] ಇವುಗಳಲ್ಲಿ ಚಾರ್ವಾಕದರ್ಶನ, ಜೈನದರ್ಶನ ಹಾಗೂ ಬೌದ್ಧದರ್ಶನ ಇವುಗಳನ್ನು ಈಗ ಒಂದೊಂದಾಗಿ ಪರಿಶೀಲಿಸಲಾಗುವುದು.

(ಅ) ಚಾರ್ವಾಕದರ್ಶನ

'ಚಾರ್ವಾಕದರ್ಶನವು ಅತಿ ಪ್ರಾಚೀನ ಭೌತಿಕವಾದ.'[೩೫] 'ಯಾವ ಐತಿಹಾಸಕ ದಾಖಲೆಗಳನ್ನೂ ಬಿಟ್ಟು ಹೋಗಿರದ ಚಾರ್ವಾಕನ ಕುರಿತು ವಿವರಗಳು ಲಭ್ಯವಿಲ್ಲ ಹಾಗೂ ಅವನ ದರ್ಶನವು ಲುಪ್ತವಾಗಿದೆ.'[೩೬] 'ಅವನ ದರ್ಶನವು ಒಳಗೊಂಡ ತತ್ತ್ವಗಳು ಸಾಂಖ್ಯ, ವೈಶೇಷಿಕ, ಬೌದ್ಧ, ಜೈನ, ಇತ್ಯಾದಿ ದರ್ಶನಗಳಲ್ಲಿ ಸೇರಿಕೊಂಡು ಉಳಿದಿವೆ ಅವೈದಿಕ ದರ್ಶನಗಳಲ್ಲಿ ಅನ್ಯಮತಗಳ ಖಂಡನೆಯ ವಿಭಾಗಗಳಲ್ಲಿ ಚಾರ್ವಾಕರ ಮಾತುಗಳನ್ನು ಅಲ್ಲಲ್ಲಿ ಎತ್ತಿಕೊಂಡು ಟೀಕಿಸಿದ್ದು ಕಂಡು ಬರುತ್ತದೆ.'[೩೭]

'ವಿರೋಧಭಕ್ತಿ'ಯಿಂದ ಟೀಕಿಸುತ್ತಲೇ ವೈದಿಕ, ಆಸ್ತಿಕ ದರ್ಶನಗಳು ಚಾರ್ವಾಕನನ್ನು ದಾರ್ಶನಿಕನೆಂದು ಒಪ್ಪಿಕೊಂಡಿರುತ್ತವೆ. ರಾಮಾಯಣ-ಮಹಾಭಾರತಗಳಲ್ಲಿಯೂ ಅವನ ಉಲ್ಲೇಖವು ನಿಂದಾವ್ಯಂಜಕವಾಗಿ ಬಂದಲ್ಲಿಯೂ ಚಾರ್ವಾಕನನ್ನು ಬ್ರಾಹ್ಮಣತಪಸ್ವಿ ಬ್ರಾಹ್ಮಣೋತ್ತಮ, ಮಹಾತಪಸ್ವಿ, ಬ್ರಹ್ಮನನ್ನು ಪ್ರಸನ್ನಗೊಳಿಸಿಕೊಂಡವ ಎಂದೆಲ್ಲ ಬಣ್ಣಿಸಿದ್ದುಂಟು.[೩೮]

'ಚಾರ್ವಾಕದರ್ಶನದ ಪ್ರತಿಪಾದಕರು ಪ್ರಖರ ವಿಚಾರವಾದಿಗಳು, ಆದರೂ ಹೆಚ್ಚಾಗಿ ಪರಮತ ಖಂಡನೆ ಮಾಡುವವರು. ಇವರು ವೇದಗಳನ್ನು ಯಜ್ಞ-ಯಾಗಾದಿಗಳನ್ನು ಉಗ್ರವಾಗಿ

ವಿರೋಧಿಸುತ್ತಿದ್ದರು; ವೈದಿಕ ಕರ್ಮಕಾಂಡವನ್ನು ನಂಬುತ್ತಿರಲಿಲ್ಲ. ಅವರ ನಿಲುವು ಅತ್ಯಂತ ತರ್ಕಶುದ್ಧವಾಗಿತ್ತು. ಲೌಕಿಕವಾದೀ ವಿಚಾರಧಾರೆಯಿಂದ ಪಟ್ಟಭದ್ರ ಚಾತುರ್ವರ್ಣ್ಯ ವ್ಯವಸ್ಥೆಗೆ ಅಪಾಯದ ಭಯವುಂಟಾಗಿತ್ತು.'[೩೯] 'ಮುಂದೆ ತಲೆ ಎತ್ತಿದ ಬೌದ್ಧ, ಜೈನ ಧರ್ಮಕ್ರಾಂತಿಗಳಿಗೆ ಚಾರ್ವಾಕರು ವೈಚಾರಿಕ ಕ್ಷೇತ್ರವನ್ನು ಉತ್ತು ಹದಗೊಳಿಸಿದರು. [೪೦]

'ಚಾರ್ವಾಕರು ಸುಖವಾದವನ್ನು ಪುರಸ್ಕರಿಸುವವರು, ಕೃಷಿ, ಗೋರಕ್ಷಾ, ವಾಣಿಜ್ಯಾದಿ ನೇರ ದಾರಿಗಳಿಂದ ಸುಖವನ್ನು ಗಳಿಸಿರಿ ಎನ್ನುವುದು ಚಾರ್ವಾಕರ ಸೂಚನೆಯಾಗಿತ್ತು.'[೪೧] ಆದರೆ ಅವರು ಸ್ವೈರ ಸ್ವಚ್ಛಂದ ಸುಖದ ಪ್ರತಿಪಾದಕರಲ್ಲ. ದಂಡದ ಭಯವನ್ನು ಎತ್ತಿ ಹಿಡಿದ ಅವರು ಅದಿಲ್ಲದಿದ್ದರೆ ಮನುಷ್ಯನು ಪಶುವಾಗಿ ರೂಪಾಂತರ ಹೊಂದುವುದಕ್ಕೆ ತಡವಾಗಲಾರದು ಎಂದು ಅಭಿಪ್ರಾಯ ಪಡುತ್ತಿದ್ದರು. 'ಸುಖದುಃಖಗಳಿಗಾಗಿ ಪರಲೋಕದತ್ತ ನೋಡದೆ ಅವನ್ನು ನಮ್ಮ ಸುತ್ತಲೇ ಹುಡುಕಬೇಕು, ಅವು ಈ ಲೋಕದಲ್ಲಿಯೇ ಸಿಗುವುವು. ಬದುಕು ದುಃಖದಿಂದ ಸೋಂಕಿದೆಯೆಂದು ಸುಖವು ತ್ಯಾಜ್ಯವೆಂಬ ವಿಚಾರ ಮೂರ್ಖತನದ್ದು. ದುಃಖವನ್ನು ತಪ್ಪಿಸಲಿಕ್ಕೆ ಆಗುವುದಿಲ್ಲ, ಆದರೆ ಅದನ್ನು ಪರಿಹರಿಸಿ ಸುಖವನ್ನು ಭೋಗಿಸಬೇಕು ಎಂಬುದು ಅವರ ವಿಚಾರವಾಗಿತ್ತು.'[೪೨]

"ಜಡದಿಂದಲೇ ಜೀವವೆಂಬುದು ಚಾರ್ವಾಕರ ವಾದ. ವಿಶ್ವಸೃಷ್ಟಿಯಲ್ಲಿ ವಿವಿಧ ವಸ್ತುಗಳು ಮೊದಲು ಅಸ್ತಿತ್ವ ಪಡೆದಿವೆ. ಅವುಗಳಲ್ಲಿ ಮೊದಲು ಮೂಡಿದ್ದು ಬೆಳಕು. ಅದನ್ನು ಗ್ರಹಿಸುವ, ಅದಕ್ಕೆ ಪ್ರತಿಕ್ರಿಯಿಸುವ ದೃಷ್ಟಿ ಆ ನಂತರ ಒಡಮೂಡಿತು. ಹಾಗೆಯೇ ಶಬ್ದ, ರಸ, ಗಂಧ, ಸ್ಪರ್ಶಗಳ ತನ್ಮಾತ್ರೆಗಳು, ಇವುಗಳಿಗೆ ಪ್ರೇರಕವಾದ ಭೂತಗಳು ನಂತರ ಉಂಟಾದವು. ಈ ಭೂತಗಳ ಸಂಘಾತದಿಂದ ಉಂಟಾದದ್ದು ಚೈತನ್ಯ. ಈ 'ಚೈತನ್ಯ ವಿಶಿಷ್ಟವಾದ ಕಾಯ'ವೇ ಪುರುಷ. ಅಂದರೆ ಆತ್ಮವಿಷಯಗಳ ಇಂದ್ರಿಯ ಸಂವೇದನೆಯೇ ಸಂಜ್ಞೆ. ಸಂಜ್ಞೆ ಎಲ್ಲ ಪ್ರಾಣಿಗಳಲ್ಲಿಯ ಚೈತನ್ಯದ ಆವಿಷ್ಕಾರ, ಜಡದೊಳಗಿಂದ ಜೀವಸೃಷ್ಟಿ. ಸಂಜ್ಞೆ ಪ್ರಜ್ಞೆಯಾಗಿ ಮಾರ್ಪಟ್ಟಾಗ ಅದು ಆತ್ಮಸ್ವಯಂ ಪ್ರಜ್ಞೆ, ಅಹಂ ಎಂಬ ಪ್ರಜ್ಞೆ. ಇದು ದೇಹದಲ್ಲಿ ದೇಹದೊಂದಿಗೆ ಹುಟ್ಟಿ ದೇಹದೊಂದಿಗೇ ಲಯವಾಗುವಂತಹ ಅನನ್ಯ ಶಕ್ತಿ. ಆತ್ಮವೆಂಬುದೇ ದೇಹದ ಸ್ವಭಾವ."[೪೩] ಇದು ಚಾರ್ವಾಕ ದೃಷ್ಟಿ.

(ಅ) ಜೈನದರ್ಶನ

'ಜೈನಸಿದ್ಧಾಂತದಲ್ಲಿ ಸತ್ವವೇ ತತ್ವ. ಸತ್ವವೆಂಬುದು ಉತ್ಪತ್ತಿ, ವಿನಾಶ, ಸ್ಥಿರತ್ವವೆಂಬ ಮೂರು ಸ್ವಭಾವವುಳ್ಳದ್ದು. ಆತ್ಮಾದಿ ಸಕಲ ವಸ್ತುಗಳಿಗೆ ಉತ್ಪತ್ತಿ, ಸ್ಥಿರತ್ವ, ವಿನಾಶ ಈ ಗುಣಗಳುಂಟು. ಆತ್ಮನಿಗೆ ಸುಕೃತದಿಂದ ದೇವತ್ವ ಪ್ರಾಪ್ತವಾದರೆ ಮನುಷ್ಯತ್ವ ನಾಶವಾಗುವ್ರದು; ಆದರೆ ಆತ್ಮಭಾವ ಉಭಯ ಸ್ಥಿತಿಯಲ್ಲಿಯೂ ಸ್ಥಿರವಾಗಿರವುದು. ವಸ್ತುವಿಗೆ ದ್ರವ್ಯವೆಂಬ ಹೆಸರು.'[೪೪]

'ಜೈನದರ್ಶನದಲ್ಲಿ ತತ್ವಗಳನ್ನು ಎರಡು, ಐದು, ಆರು, ಏಳು, ಒಂಬತ್ತು ಎಂದು ವಿಭಜಿಸಲಾಗಿದೆ. ಜೀವ-ಅಜೀವ ಎಂಬುದು ಇನ್ನೊಂದು ಬಗೆಯ ವಿಭಜನೆ. ಅಜೀವ ತತ್ವವು ಧರ್ಮ, ಅಧರ್ಮ, ಆಕಾಶ, ಕಾಲ, ಪುದ್ಗಲವೆಂದು ಐದು ವಿಧವಾಗಿದೆ. ಹೀಗೆ ತತ್ವವು ಜೀವ, ಧರ್ಮ, ಅಧರ್ಮ, ಆಕಾಶ, ಕಾಲ ಪುದ್ಗಲವೆಂಬ ಆರು ಬಗೆಯಾಯಿತು. ದ್ರವ್ಯಗಳು ಪೃಥ್ವಿ. ಅಪ್, ತೇಜ ವಾಯು, ಮನಸ್ಸು ಎಂಬವು ಪುದ್ಗಲವೆನಿಸುತ್ತವೆ.'[೪೫]

'ಅಣುಗಳ ಪುಂಜವನ್ನು ಪುದ್ಗಲವೆಂದು ಕರೆಯುವರು. ಇದು ಸ್ಕಂಧರೂಪವಾಗಿರುತ್ತದೆ; ಭೂತ, ಭೌತಿಕ ಪ್ರಪಂಚದ ಮೂಲ ಕಾರಣವೆನಿಸುತ್ತದೆ; ರೂಪ, ರಸ, ಗಂಧ, ಸ್ಪರ್ಶವೆಂಬ ಗುಣಸ್ವಭಾವವನ್ನು ಪಡೆದಿರುತ್ತದೆ. ಮನಸ್ಸು ದ್ರವ್ಯ, ಭಾವ ಎಂದು ಎರಡು ತೆರನಾಗಿದೆ. ದ್ರವ್ಯವು ಪುದ್ಗಲದಲ್ಲಿ ಸೇರುತ್ತದೆ. ದೇಹ, ಇಂದ್ರಿಯ ಸಮೂಹ ಮೊದಲಾದ ಸಮಸ್ತ ವಸ್ತುಗಳು ಪುದ್ಗಲವೆನಿಸುತ್ತವೆ. ರೂಪ, ರಸ, ಗಂಧ, ಶಬ್ದ, ಸ್ಪರ್ಶ ಮೊದಲಾದ ಗುಣಗಳು ಪುದ್ಗಲದ ಪರ್ಯಾಯಗಳೆನಿಸುತ್ತವೆ. ಆರು ದ್ರವ್ಯಗಳಲ್ಲಿ ಜೀವದ್ರವ್ಯವು ಜ್ಞಾನ ಸ್ವರೂಪವಾದುದು. ಅದು ಚೇತನ ದ್ರವ್ಯವೆನಿಸಿದೆ. ಉಳಿದುದೆಲ್ಲ ಅಚೇತನ ದ್ರವ್ಯಗಳು. ಜೀವ ಪುದ್ಗಲಗಳೆರಡೂ ಕ್ರಿಯಾಶ್ರಯ ದ್ರವ್ಯಗಳು, ಪರಿಣಾಮಿ ದ್ರವ್ಯಗಳು, ಜೀವ ದ್ರವ್ಯವೊಂದೇ ಕರ್ತೃದ್ರವ್ಯ, ಉಳಿದವು ಕಾರಣ ದ್ರವ್ಯಗಳು, ಈ ಆರು ದ್ರವ್ಯಗಳು ಪರಸ್ಪರ ಪ್ರವೇಶ ಮಾಡಿ ಸಂಕೀರ್ಣವಾಗುತ್ತವೆ. ಆದರೆ ಅವುಗಳ ಸ್ವರೂಪ ಹಾನಿಯಾಗುವುದಿಲ್ಲ. ಪುಣ್ಯ-ಪಾಪಗಳೆಂಬವು ಪುದ್ಗಲದಲ್ಲಿ ಸೇರುತ್ತವೆ. ಜೀವನ ಕರ್ಮಾಧೀನವಾಗಿ ಪುದ್ಗಲ ಪರಮಾಣಗಳು ಪುಣ್ಯರೂಪವಾಗಿಯೂ,

[illegible]

[illegible]

[illegible]

[illegible]

ಪಾಪರೂಪವಾಗಿಯೂ ಪರಿಣಮಿಸುತ್ತವೆ; ಜೀವರಿಗೆ ಸುಖ–ದುಃಖವನ್ನುಂಟು ಮಾಡುತ್ತವೆ. ಈ ಪುದ್ಗಲಗಳು ಮನುಷ್ಯರಲ್ಲಿ ಸೇರಿಕೊಳ್ಳುತ್ತವೆ'.[೪೬]

'ಜೀವಾಜೀವಾಸ್ರವಸಂವರನಿರ್ಜರಬಂಧಮೋಕ್ಷವೆಂಬ ಸೂತ್ರದಲ್ಲಿ ಜೈನ ದರ್ಶನದ ಸಾರ ಅಡಕವಾಗಿದೆ. ಜೀವನು ಕಾಯಾ, ವಾಚಾ, ಮನಸಾ ಕರ್ಮಗಳನ್ನು ಮಾಡುತ್ತಿರುವನು ಶುಭಾಶುಭ ಕರ್ಮ ಮಾಡುವ ಜೀವನು ಪುಣ್ಯ, ಪಾಪ, ಪುದ್ಗಲಗಳನ್ನು ಎಳೆದುಕೊಂಡು ಬದ್ಧನಾಗುವನು. ಇದೇ ಆಸ್ರವ. ಪಾಪ ಪುಣ್ಯ ಪುದ್ಗಲಗಳ ಪ್ರವಾಹವನ್ನು ತಡೆಯುವುದೇ ಸಂವರ. ಇದು ಕಾಯ, ವಾಕ್, ಮನೋನಿಗ್ರಹ ರೂಪದಲ್ಲಿರುವುದು. ಸಂಚಿತ ಕರ್ಮಗಳನ್ನು ದ್ವಾದಶವಿಧ ತಪಸ್ಸು, ಅಣುವ್ರತ, ಗುಣವ್ರತಗಳಿಂದ ಜಯಿಸುವುದೇ ನಿರ್ಜರೆ. ನಿರೋಧದಿಂದ ಹೊಸಕರ್ಮ ಬಂಧವಿಲ್ಲ. ಹೀಗೆ ನಿರೋದ ನಿರ್ಜರೆಗಳಿಂದ ಕರ್ಮ ಸಂಪೂರ್ಣವಾಗಿ ಕ್ಷಯವಾದರೆ ಮುಕ್ತಿಯಾಗುವುದು. ಕರ್ಮಬಂಧದಿಂದ ಮುಕ್ತನಾಗುವುದೇ ಮೋಕ್ಷವೆನಿಸುತ್ತದೆ. [೪೭]

'ಇಂಥ ಮೋಕ್ಷಸಾಧನೆಯ ಮಾರ್ಗವೆಂದರೆ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ ಚಾರಿತ್ರವೆಂಬ ರತ್ನತ್ರಯಗಳು. ಸಮ್ಯಕ್‌ದರ್ಶನವೆಂದರೆ ಜಿನೋಪದಿಷ್ಟ ಆತ್ಮ ಮೊದಲಾದ ವಸ್ತುಗಳಲ್ಲಿ ಪರಿಶುದ್ಧವಾದ ಶ್ರದ್ಧೆಯನ್ನಿಡುವುದು. ಈ ಶ್ರದ್ಧೆ ಜನ್ಮಾಂತರದ ಪುಣ್ಯದಿಂದಲೂ, ಮಹಾತ್ಮರ ಅನುಗ್ರಹದಿಂದಲೂ ಪ್ರಾಪ್ತವಾಗುವುದು. ಸಮ್ಯಕ್‌ಜ್ಞಾನವೆಂದರೆ ಜಿನನಿರ್ದಿಷ್ಟ ತತ್ತ್ವಗಳಲ್ಲಿ ನಿಶ್ಚಯಜ್ಞಾನ ಪಡೆದಿರುವುದು. ಆ ಜ್ಞಾನ ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃ ಪರ್ಯಯಜ್ಞಾನ, ಕೇವಲಜ್ಞಾನ ಎಂದು ಐದು ಬಗೆಯಾಗಿದೆ. ಪಾಪ ಪರಿಹಾರಕ್ಕಾಗಿ ಇರುವ ಒಳ್ಳೆಯ ನಡತೆಗೆ ಸಮ್ಯಕ್ ಚಾರಿತ್ರವೆನ್ನುವರು. ಕೆಟ್ಟ ಕೆಲಸಗಳನ್ನು ಮಾಡದಿರುವುದು ಉತ್ತಮ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹವೆಂಬ ಐದು ಅಂಗವುಳ್ಳದು ಮಹಾವ್ರತ. ಇಂಥ ಸಚ್ಚಾರಿತ್ರದಿಂದ, ತತ್ತ್ವಜ್ಞಾನದಿಂದ ಜೀವನು ಕೇವಲಿಯಾಗುವನು. ಇವನೇ ತೀರ್ಥಂಕರ. ಆತನು ಗಂಧಕುಟಿಯಲ್ಲಿ ಕುಳಿತು ವಿಶ್ವಕ್ಕೆಲ್ಲ ಅವರವರ ಭಾಷೆಯಲ್ಲಿ ಅರ್ಥವಾಗುವಂತೆ 'ಜೀವದಯೆ–ಜೈನಧರ್ಮ' ಎಂಬ ಸಂದೇಶವನ್ನು ದಿವ್ಯಧ್ವನಿಯಿಂದ ಬೋಧಿಸುವನು.[೪೮]

[illegible]

[illegible]

[illegible]

[illegible]

'ಜೈನರಲ್ಲಿ ಭವಾವಳಿಯ ನಂಬುಗೆ ವಿಶಿಷ್ಟವಾಗಿದೆ. ಮನುಷ್ಯನಿಗೆ ಪೂರ್ವಸುಕೃತದಿಂದ ಯಾವುದೋ ಒಂದು ನಿಮಿಷದಲ್ಲಿ ಸಂಸಾರದ ಅಸಾರತೆಯ ಅರಿವುಂಟಾಗಿ ಧರ್ಮದತ್ತ ಮನಸ್ಸು ತಿರುಗುತ್ತದೆ. ಇದಕ್ಕೆ ಕಾಲಲಬ್ಧಿಯೆನ್ನುವರು. ಕಾಲಲಬ್ಧಿಯಾದಂದಿನಿಂದ ಅನೇಕ ಜನ್ಮದಾಂಟಿ ಸಿದ್ಧಿಯನ್ನು ಪಡೆಯಲಾಗುತ್ತದೆ.'[೪೯]

(೩) ಬೌದ್ಧದರ್ಶನ *

ಶಾಕ್ಯದೊರೆ ಶುದ್ಧೋಧನನ ಪುತ್ರ ಸಿದ್ಧಾರ್ಥನು ರಾಜವೈಭವವನ್ನು ತೊರೆದು, ಸತಿಸುತರನ್ನು ಬಿಟ್ಟು, ಯೋಗವನ್ನು ಆಚರಿಸಿ ಜ್ಞಾನೋದಯವಾಗಿ ಬುದ್ಧನೆನಿಸಿದನು. ಆತನ ಬದುಕು, ಬೋಧನೆಗಳು ಬೌದ್ಧಧರ್ಮವೆನಿಸಿದುವು.

'ಮಹಾಮಾನವತಾವಾದಿಯಾದ ಬುದ್ಧನು ತಾನು ಒಂದು ನೂತನ ದರ್ಶನವನ್ನು ಕಂಡುಕೊಂಡವನೆಂದು ಕರೆದುಕೊಳ್ಳಲಿಲ್ಲ. ಭಿಕ್ಕುಗಳು ಪರೀಕ್ಷಿಸಿ ತಮ್ಮ ಬುದ್ಧಿಗೆ ಒಪ್ಪಿಗೆಯಾದರೆ ಮಾತ್ರ ತನ್ನ ಉಪದೇಶ ವಾಕ್ಯಗಳನ್ನು ಸ್ವೀಕರಿಸಬೇಕಲ್ಲದೆ ತಾನು ಹೇಳಿರುವೆನೆಂಬ ಭಾವನೆಯಿಂದಲ್ಲವೆಂದು ಅವನು ಹೇಳುತ್ತಿದ್ದನು. ಅವನ ಉಪದೇಶವು ಒಬ್ಬ ವ್ಯಕ್ತಿಯ ನಿಯಂತ್ರಣಕ್ಕೆ ಸಿಲುಕದೆ ಹಲವು ಕಾಲದ, ಹಲವು ಪ್ರದೇಶದ, ಹಲವು ಬಗೆಯ ಭಿಕ್ಕುಗಳ ಸಮಾಲೋಚನೆಗೆ ಗುರಿಯಾದುದರಿಂದ ಬೌದ್ಧಧರ್ಮದಲ್ಲಿ ಬಹು ಬೇಗನೆ ಅನೇಕ ಶಾಖೆಗಳು ಕಂಡು ಬಂದವು. ಇದಕ್ಕೆ ಅಲ್ಲಲ್ಲಿ ತಲೆದೋರಿದ ಮತಭೇದಗಳೇ ಕಾರಣ. ಬುದ್ಧವಚನಗಳನ್ನು ಅರ್ಥೈಸುವಲ್ಲಿ, ಅನುಷ್ಠಾನಕ್ಕೆ ತರುವಲ್ಲಿ ಭಿನ್ನಮತ ತಲೆದೋರಿದುದಕ್ಕೆ ಇದು ಕಾರಣವಾಯಿತು.'[೫೦]

---

* ಬೌದ್ಧದರ್ಶನವನ್ನು ಇಡಿಯಾಗಿ 'ಮಾಹಾಯಾತ್ರೆ' ಯಿಂದ ರೂಪಿಸಲಾಗಿದೆ

ಪಾಲಿ ಭಾಷೆಯಲ್ಲಿರುವ ಸುತ್ತ ಪಿಟಕಗಳ ಸೂತ್ರೋಪದೇಶ ಸಂಪ್ರದಾಯಕ್ಕೆ ಸೇರಿದ ಮಹಾಸಾಂಘಿಕರು ಸೌತ್ರಾಂತಿಕರೆನಿಸಿದರು. ವಿನಯಪಿಟಕವನ್ನು ಅನುಸರಿಸಿದವರು ವೈಭಾವಿಕರೆನಿಸಿದರು. ಅಭಿಧರ್ಮ, ವಿಭಾಷ್ಯ ಸಂಪ್ರದಾಯಕ್ಕೆ ಸೇರಿದವರು ಕ್ರಮವಾಗಿ ಯೋಗಾಚಾರ್ಯರೂ ಮಾಧ್ಯಮಿಕರೂ ಎನಿಸಿದರು. ಮುಂದೆ ಈ ಮಾಧ್ಯಮಿಕ ಸಂಪ್ರದಾಯವೇ ಮಹಾಯಾನವೆನಿಸಿತು. ಯೋಗಾಚಾರ ಸಂಪ್ರದಾಯ ಹೀನಯಾನವೆನಿಸಿತು. ಸೌತ್ರಾಂತಿಕರೂ, ವೈಭಾಷಿಕರೂ, ಬಾಹ್ಯಾಂತರ ವಸ್ತುಗಳನ್ನು ಒಪ್ಪಿದ್ದರಿಂದ ಸರ್ವಾಸ್ತಿವಾದಿಗಳೆನಿಸಿದರು.

ಬೌದ್ಧರು ಆರ್ಯಸತ್ಯವೆಂಬ ನಾಲ್ಕು ಸತ್ಯಗಳನ್ನು ಹೇಳುವರು. ದುಃಖ, ದುಃಖಸಮುದಯ, ದುಃಖನಿರೋಧಮಾರ್ಗ,ದುಃಖನಿರೋಧವೆಂಬವು ಆರ್ಯಸತ್ಯಗಳು. ಪ್ರಪಂಚವೇ ದುಃಖಮಯವಾದುದರಿಂದ ಆರ್ಯಸತ್ಯದ ಮೊದಲ ಹೆಜ್ಜೆ ದುಃಖವೆನಿಸಿದೆ. ಅದು ರೂಪ, ವಿಜ್ಞಾನ, ವೇದನೆ, ಸಂಜ್ಞೆ, ಸಂಸ್ಕಾರ, ಎಂದು ಐದು ಸ್ಕಂಧಗಳಾಗಿರುವುದು. ಸ್ಕಂಧವೆಂದರೆ ಗುಂಪು. ಅದನ್ನು ಕೆಲವರು ಪ್ರವಾಹವೆಂದೂ ಕರೆವರು. ರೂಪ ಸ್ಕಂಧವೆಂದರೆ ಪಂಚಜ್ಞಾನೇಂದ್ರಿಯಗಳು. ಇವುಗಳಿಗೆ ವಿಷಯಗಳಾದ ರೂಪ, ರಸ, ಗಂಧ, ಶಬ್ದ, ಸ್ಪರ್ಶ ಇವು ಸೇರಿ ರೂಪಸ್ಕಂಧ ಹತ್ತು ಬಗೆಯಾಗುವುದು. ಇಂದ್ರಿಯಪಂಚಕ, ವಿಷಯಪಂಚಕ, ಭೂತಪಂಚಕ ಹೀಗೆ ರೂಪಸ್ಕಂಧ ಹದಿನೈದು ಬಗೆಯೆಂದು ಹೇಳುವವರೂ ಉಂಟು. ವಿಜ್ಞಾನ ಸ್ಕಂಧವು ಮನಸ್ಸು, ಚಿತ್ತ, ಬುದ್ಧಿ ಎಂದು ಮೂರು ಬಗೆಯಾಗಿದೆ.

ವೇದನಾ ಸ್ಕಂಧವು ಸುಖ, ದುಃಖ, ಅಪೇಕ್ಷೆಗಳಿಂದ ಕೂಡಿದೆ.

ಸಂಜ್ಞಾ ಸ್ಕಂಧವು ಸವಿಕಲ್ಪಕ ಪ್ರತ್ಯಯವಾಗಿದೆ.

ಸಂಸ್ಕಾರ ಸ್ಕಂಧದಲ್ಲಿ ರಾಗ ದ್ವೇಷ, ಮದ, ಮತ್ಸರಗಳೂ, ಜನ್ಮಮರಣಾದಿ ಕ್ಲೇಶಗಳೂ ಅಡಕವಾಗುವವು.

ಈ ಸ್ಕಂಧ ಪಂಚಕವು ದುಃಖ ಮೂಲವಾಗಿದೆ; ದುಃಖ ಮಿಶ್ರವಾಗಿದೆ; ದುಃಖವೇ ಆಗಿದೆ. ಇದರಲ್ಲಿರುವ ಪಂಚಜ್ಞಾನೇಂದ್ರಿಯಗಳು ಹಾಗೂ ಅವುಗಳ ವಿಷಯಗಳು ಮನಸ್ಸು ಮತ್ತು ಬುದ್ಧಿ

[illegible]

[illegible]

[illegible]

[illegible]

[illegible]

[illegible]

ಇವುಗಳ ಸಮಾವೇಶಕ್ಕೆ ದ್ವಾದಶಾಯತನವೆಂದು ಹೆಸರು. ಹೀಗೆಯೇ ಷಡ್ವಿಧ ವಿಜ್ಞಾನಗಳನ್ನು ದ್ವಾದಶಾಯತನಕ್ಕೆ ಸೇರಿಸಿ ಅವನ್ನು ಹದಿನೆಂಟು ಧಾತುಗಳೆಂದು ಕರೆದಿರುವರು.

'ಸ್ಕಂಧ ಪಂಚಕದ ಉತ್ಪತ್ತಿಗೆ ಸಮುದಯ ಇಲ್ಲವೆ ಪ್ರತೀತ್ಯ ಸಮುತ್ಪಾದವೆಂದು ಕರೆಯುವರು. ಉತ್ಪತ್ತಿಯು ಹೇತೂಪನಿಬಂಧನ ಮತ್ತು ಪ್ರತ್ಯಯೋಪನಿಬಂಧನ ಎಂದು ಎರಡು ಬಗೆಯಾಗಿದೆ. ಮೊದಲನೆಯದು ಸಮುದಾಯ ಕಾರಣಕ್ಕೆ ಸಮನಾದುದು. ಎರಡನೆಯದು ಸಹಕಾರಿ ಕಾರಣವನ್ನು ಹೋಲುತ್ತದೆ.'[೫೧]

ದೇಹ ಇಂದ್ರಿಯ ಮೊದಲಾದುವನ್ನು ವಿಜ್ಞಾನ ಸಂಘಾತವೆಂದು ಕರೆಯುವರು. ವಿಜ್ಞಾನವೆಂದರೆ ಮನಸ್ಸು-ಚಿತ್ತ. ಇದರ ಪರಿಣಾಮಗಳಾದ ಸುಖ, ದುಃಖ, ರಾಗ, ದ್ವೇಷ, ಇತ್ಯಾದಿಗಳನ್ನು ಚೈತ್ಯವೆಂದು ಕರೆಯುವರು. ಮಿಕ್ಕ ದಾರ್ಶನಿಕರ ಜೀವಾತ್ಮವೆಂಬುದರ ಸ್ಥಾನದಲ್ಲಿ ಬೌದ್ಧ ದರ್ಶನದ ವಿಜ್ಞಾನವಿರುವದು. ಇದು ಪ್ರತಿಕ್ಷಣದಲ್ಲಿಯೂ ಹುಟ್ಟಿ ನಾಶವಾಗುತ್ತಿದ್ದರೂ ಇದರ ಸಂತತಿ ಪ್ರವಾಹರೂಪವಾಗಿ ಸ್ಥಿರವಾಗಿರುವಂತೆ ಕಾರ್ಯನಿರ್ವಹಿಸುತ್ತದೆ. ಈ ಸಂತತಿಯಲ್ಲಿ ಸಂಸ್ಕಾರ-ವಾಸನೆ ಎಂಬ ಶಕ್ತಿಯಿರುವುದು. ಇದರಲ್ಲಿ ಜ್ಞಾನವಾಸನೆ, ಕರ್ಮವಾಸನೆ ಎಂದು ಎರಡು ಬಗೆ ಇದೆ. ಕರ್ಮವಾಸನೆ ಪಾಪಪುಣ್ಯಗಳಿಗೆ ಹೇತುವಾಗಿರುತ್ತದೆ. ಜ್ಞಾನವಾಸನೆ ಸಂಸ್ಕಾರವೆಂಬುದಕ್ಕೆ ಕಾರಣವಾಗಿದೆ. ಈ ಚಿತ್ತವು ನಾರಕ, ಭೂತ, ದೇವ, ಮಾನವ, ತಿರ್ಯಕ್ ಎಂಬ ಐದು ವಿಧವಾದ ಶರೀರಗಳಲ್ಲಿ ತೋರುತ್ತದೆ. ಆಕಾಶದಲ್ಲಿ ಪ್ರಭೆಯಾಗಿ ಕಾಣುವುದು, ಬತ್ತಿಯಲ್ಲಿ ಜ್ವಾಲೆಯಾಗಿ ಕಾಣುವುದು ಈ ಚಿತ್ತೇ. ಇದು ಅಂಟಿಯೂ ಅಂಟದಂತೆ ಅಂತರಾಳದಲ್ಲಿರುವುದು.

'ವಿಜ್ಞಾನಸಂತತಿ ಸೂಕ್ಷ್ಮಚಿತ್ತವೆಂಬ ರೂಪ ಧರಿಸಿರುವುದು. ಈ ರೂಪದಲ್ಲಿ ಇದು ಕರ್ಮವಾಸನೆಯಿಂದ ಗರ್ಭಕೋಶವನ್ನು ಸೇರುವುದು. ಬೀಜಸ್ಥಾನದಲ್ಲಿ ಉಳಿಯುವದು. ಈ ಸೂಕ್ಷ್ಮ ಚಿತ್ತವು ಅವಿದ್ಯೆ, ಸಂಸ್ಕಾರ, ವಿಜ್ಞಾನ, ನಾಮರೂಪ ಷಡಾಯತನ, ಸ್ಪರ್ಶವೇದನೆ ತೃಷ್ಣೆ, ಭವ, ಜಾತಿ, ಮರಣ, ವ್ಯಾಧಿ ಎಂಬ ರೂಪಗಳನ್ನು ತಾಳಿ ಕಾರ್ಯಕಾರಣ ಪ್ರಕ್ರಿಯೆ ಪಡೆಯುವುದು.'[೫೨]

'ಬೌದ್ಧದರ್ಶನದಲ್ಲಿ ಎಲ್ಲ ವಸ್ತುಗಳೂ ಪ್ರತೀತ್ಯ ಸಮುತ್ಪಾದವೆನುಸುತ್ತವೆ. ಅಂದರೆ ಅವೆಲ್ಲ ಕಾರಣಗಳಿಂದ ಜನ್ಯವಾಗಿವೆ ಎಂದರ್ಥ. ಅಂದರೆ ಕ್ಷಣಿಕವಾಗಿ ಸದಾ ವಿನಾಶವಾಗುತ್ತಲೇ ಇರುತ್ತವೆ. ಈ

[illegible]

[illegible]

[illegible]

[illegible]

[illegible]

ಪ್ರತೀತ್ಯ ಸಮುತ್ಪಾದಕ್ಕೆ ಪ್ರತಿಯಾಗಿರುವುದು ನಿತ್ಯ, ಶಾಶ್ವತ, ಸ್ಥಿರ ಎಂಬುದು. ಅಂದರೆ ಕಾರಣವಿಲ್ಲದೆ ಜನ್ಯವಾಗದ, ಮರಣವಿಲ್ಲದ, ವಸ್ತುಗಳು ಎಂದರ್ಥ. ಸ್ಕಂಧ ಪಂಚಕಕ್ಕೆ ಕಾರಣವಾಗುವುದು ಸಮುದಯವೆನಿಸುವುದು. ಬೌದ್ಧ ಸಿದ್ಧಾಂತದಲ್ಲಿ ಮುಖ್ಯವಾಗಿರಬೇಕಾದ ಭಾವನೆಗಳು ನಾಲ್ಕು : ಸರ್ವಂ ೧) ಸ್ವಲಕ್ಷಣಂ ಸ್ವಲಕ್ಷಣಂ ೨) ಕ್ಷಣಿಕಂ ಕ್ಷಣಿಕಂ ೩) ದುಃಖಂ ದುಃಖಂ ೪) ಶೂನ್ಯಂ ಶೂನ್ಯಂ ಈ ಭಾವನೆ ಬಲಿತರೆ ಸಂಸಾರದ ದುಃಖಕ್ಕೆ ಮೂಲಕಾರಣವಾದ ಭ್ರಾಂತಿ ಇಲ್ಲವೆ ಅವಿದ್ಯೆ ಎಂಬುದು ತೊಲಗುತ್ತದೆ. ಇದೇ ಬುದ್ಧನ ಉಪದೇಶ. ಇದನ್ನೇ ಆರ್ಯ ಚತುಷ್ಟಯವೆಂದು ಕರೆಯುವರು. ಅಷ್ಟಾಂಗಯೋಗದಿಂದ ಪರಮಸಿದ್ಧಿ ಸಾಧ್ಯವಾಗುವುದು. ಆರ್ಯ ಚತುಷ್ಟಯ ಮತ್ತು ಅಷ್ಟಾಂಗಯೋಗಗಳು ಬೌದ್ಧ ಧರ್ಮದ ಸಾರವೆಂದು ಹೇಳಬಹುದು.'[೫೩]

ಸಮ್ಯಕ್‌ದೃಷ್ಟಿ ಮತ್ತು ಸಮ್ಯಕ್ ಸಂಕಲ್ಪಗಳಿಂದ ಸಮ್ಯಕ್‌ಪ್ರಜ್ಞೆ ಅಥವಾ ಸಮ್ಯಕ್ ಜ್ಞಾನವುಂಟಾಗುತ್ತದೆ. ಇದರಿಂದ ಸಾಧಕನ ಶೀಲ ಶುದ್ಧಿಯಾಗುತ್ತದೆ. ಇದು ಆತನ ಮಾತು, ಕೃತಿ, ನಡೆವಳಿಕೆಯ ದ್ಯೋತಕವಾಗುತ್ತದೆ.

ಶೀಲ ಶುದ್ಧಿಯಾದರೆ ಸಮಾಧಿ ಸುಗಮವಾಗುತ್ತದೆ. ಈ ಸಮಾಧಿ ಪ್ರಾಪ್ತಿಯಾದ ಮೇಲೆ ಸುಜ್ಞಾನವುಂಟಾಗುತ್ತದೆ. ಆದುದರಿಂದ ಸಾಧಕರಿಗೆ ಈ ಅಷ್ಟಾಂಗ ಮಾರ್ಗ ಮುಖ್ಯವಾದುದು. ವಸ್ತುಗಳು ಸ್ಥಿರವೆಂಬ ಭಾವನೆಯೇ ದುಃಖಮಯ ಸಂಸಾರಕ್ಕೆ ಕಾರಣವಾಗುತ್ತದೆ. ಅವು ಕ್ಷಣಿಕವೆಂಬ ಭಾವನೆಯಿಂದ ಪರಮವೈರಾಗ್ಯ ಬರುತ್ತದೆ. ಸರ್ವಕಲ್ಪನಾನಿವೃತ್ತಿಯನ್ನು ಬೌದ್ಧದರ್ಶನದಲ್ಲಿ ಶೂನ್ಯವೆಂದು ಕರೆಯುತ್ತಾರೆ.

'ಶೂನ್ಯವಾದ, ಕ್ಷಣಿಕವಾದ, ನೈರಾತ್ಮ್ಯವಾದ ಇವು ಬೌದ್ಧ ಧರ್ಮದ ಸಾರವೆನಿಸಿವೆ'.[೫೪]

ಶೈವ ಮತ್ತು ಅದರ ಪ್ರಭೇದಗಳು

'ಶೈವವು ಜಗತ್ತಿನ ಅತ್ಯಂತ ಪ್ರಾಚೀನ ಧರ್ಮವೆಂಬುದಕ್ಕೆ ಪ್ರಬಲವಾದ ಆಧಾರಗಳು ದೊರೆತಿವೆ'.[೫೫] 'ಮೊಹೆಂಜೋದಾರೋ-ಹರಪ್ಪಾ ಉತ್ಖನನದಲ್ಲಿ ದೊರೆತ ಪಳೆಯುಳಿಕೆಗಳಲ್ಲಿ ಯೋಗಾರೂಢನಾದ ಶಿವನ ಪ್ರತಿಮೆಯನ್ನು ಹೋಲುವ ಪಳೆಯುಳಿಕೆಯೂ ಒಂದು.'[೫೬]

'ಶಿವ ಮತ್ತು ಆದಿಶಕ್ತಿ ಇವೆರಡೂ ಆ ಕಾಲದ ಜನತೆಯ ಪ್ರಧಾನ ದೇವತೆಗಳಾಗಿದ್ದವು.'[೫೭]

'ಶೈವವೆಂಬ ಶಿವಾಗಮ ವಿಭಾಗದಲ್ಲಿ ನಾಲ್ಕು ಪ್ರಭೇದಗಳುಂಟು. ಈ ಭೇದವು ಆರಾಧ್ಯ ದೇವತೆಗಳನ್ನು ಆಧರಿಸಿದೆಯೆಂಬುದು 'ಸಿದ್ಧಾಂತ ಶಿಖಾಮಣಿ'ಯಲ್ಲಿ ವ್ಯಕ್ತವಾಗಿದೆ. ಅಂದರೆ ಶಕ್ತಿಪರವಾದುದು ವಾಮ, ಭೈರವಪರವಾದುದು ದಕ್ಷಿಣ, ಸಪ್ತಮಾತೃಕಾಪರವಾದುದು ಮಿಶ್ರ, ಪರಶಿವಪರವಾದುದು ಸಿದ್ಧಾಂತವೆಂದು ವಿದಿತವಾಗುತ್ತದೆ.'[೫೮]

ಸಾಮಾನ್ಯ ಶೈವ

'ವಿಭೂತಿಧಾರಣದಿಂದ ಶುದ್ಧಾತ್ಮನಾಗಿ, ಸ್ವಯಂಭೂಲಿಂಗವನ್ನಾಗಲಿ, ಸ್ಥಾವರಲಿಂಗವನ್ನಾಗಲಿ, ಪೂಜಿಸುತ್ತ ಶಿವಭಕ್ತ ಜನವಾತ್ಸಲ್ಯ, ಶಿವಪೂಜಾರತಿ, ಶಿವಾರ್ಚನೆ, ಶಿವಾರ್ಥವಾದ ವ್ಯಾಪಾರ, ಶಿವಕಥಾ ಶ್ರವಣ, ಶಿವಧ್ಯಾನ, ಶಿವಕಥಾನುಕೂಲತೆ, ಪರಮಸಾತ್ವಿಕವೆಂಬ ಅಷ್ಟವಿಧ ಭಕ್ತಿಯುಕ್ತನಾಗಿರುವಾತ ಸಾಮಾನ್ಯ ಶೈವ.'[೫೯]

ಮಿಶ್ರ ಶೈವ

'ಮಿಶ್ರಶೈವದಲ್ಲಿ ಶಿವಲಿಂಗಪೂಜೆಯೊಡನೆ ವಿಷ್ಣು, ಉಮೆ, ಷಣ್ಮುಖ, ವಿಘ್ನೇಶ್ವರ, ಸೂರ್ಯರೆಂಬ ಪಂಚದೈವತಗಳ ಪೂಜೆಯೂ ನಡೆಯುತ್ತದೆ. ಮಿಕ್ಕ ಬ್ರಹ್ಮ-ಇಂದ್ರಾದಿ ದೇವತೆಗಳ ಆರಾಧನೆಯೂ ನಡೆಯುತ್ತದೆ. ಆದರೆ ಶಿವನೇ ಸರ್ವಾತ್ಮನು. ಮಿಕ್ಕ ದೇವತೆಗಳೆಲ್ಲ ಆತನ ಭಕ್ತರು ಎಂಬ ಭಾವನೆ ಮಿಶ್ರ ಶೈವದಲ್ಲಿ ಬಲವಾಗಿರುತ್ತದೆ.'[೬೦]

ಶುದ್ಧ ಶೈವ

'ಅನಾದಿಶೈವನಾದ ಸದಾಶಿವನ ಸದ್ಯೋಜಾತಾದಿ ಪಂಚ ಮುಖಗಳಿಂದ ದೀಕ್ಷಿತರಾದ ಕೌಶಿಕ, ಕಾಶ್ಯಪ, ಭರದ್ವಾಜ, ಅತ್ರಿ, ಗೌತಮರೇ ಮೊದಲಾದ ಶೈವಋಷಿಗಳ ಗೋತ್ರಜರಾದ ಮಹಾಶೈವರೆಂದೆನಿಸುವ ಶಿವ ದ್ವಿಜರೇ ಶುದ್ಧಶೈವರು'.[೬೧] 'ಶುದ್ಧಶೈವನಿಗೆ ಗುರುವು ತನ್ನ ನಿರೀಕ್ಷಣ ಮಾತ್ರದಲ್ಲಿ ಅವನನ್ನು ಶುದ್ಧಾಂಗನನ್ನಾಗಿ ಮಾಡಿ ಆತನ ಕರ್ಣದ್ವಾರದಲ್ಲಿ ಪಂಚಾಕ್ಷರಿಯನ್ನು ಉಪದೇಶ ಮಾಡುವನು. ಶುದ್ಧಶೈವನು ಲಿಂಗವನ್ನು ಪೀಠದಲ್ಲಿರಿಸಿ ಭಿನ್ನಭಾವಿಯಾಗಿ ಅರ್ಚನೆ ಮಾಡುವನು.'[೬೨]

‘ಶೈವದಲ್ಲಿ ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅಂತರಶೈವ, ಪ್ರವರಶೈವ, ಅಂತ್ಯಶೈವ ಎಂಬ ಏಳು ಪ್ರಭೇದಗಳನ್ನೂ ತಿಳಿಸಲಾಗಿದೆ.’ [೬೩]

ವೀರಶೈವ

ವೀರಶೈವದ ಬೇರುಗಳನ್ನು ಶಿವಾಗಮಗಳಲ್ಲಿ ಗುರುತಿಸಲಾಗಿದೆ. ಡಾ ಆರ್. ಸಿ. ಹಿರೆಮಠರು ಈ ಶಿವಾಗಮಗಳ ಕಾಲವನ್ನು ಕ್ರಿಸ್ತಪೂರ್ವವೆಂದು ಸಾಧಾರವಾಗಿ ಸಾಧಿಸಿದ್ದಾರೆ.

‘ಆತ್ಮನಲ್ಲಿ ಪರಶಿವತತ್ತ್ವವನ್ನು ಅಭಿವ್ಯಕ್ತಗೊಳಿಸುವುದನ್ನು ಸಾಧಿಸಲು ಯೋಗ ಮುಖ್ಯವೆಂದು ಹೇಳುವ ಆಗಮಗಳು ಸೃಷ್ಟಿ ಸತ್ಯವೆಂದು ನಂಬುತ್ತವೆ; ಅವುಗಳ ದೃಷ್ಟಿಯಲ್ಲಿ ಅದು ಪರಬ್ರಹ್ಮನ ಪರಿವರ್ತನ ರೂಪ. ವಿಕಾಸಸ್ವರೂಪವೇ ಸೃಷ್ಟಿ ಹಾಗೂ ಪ್ರಕಾಶಸ್ವರೂಪವೇ ಶಿವ ಆಗಿದ್ದು ಇವೆರಡೂ ಅಭಿನ್ನ. ಶಿವಶಕ್ತಿಯಿಂದಾದುದೇ ಸೃಷ್ಟಿ.[೬೪] ವೀರಶೈವದ ಗುರಿ ಲಿಂಗಾಗಸಾಮರಸ್ಯವಾಗಿದ್ದು ಶಿವಯೋಗ ಅದನ್ನು ಸಾಧಿಸುವ ಸಾಧನ ಹಾಗೂ ಶಿವಾನುಭವ ಆದರ ಪರಿಣಾಮ.’[೬೫] ಪಾವನಾತ್ಮಕ ಶಿವಸಾಯುಜ್ಯ ಪಡೆಯುವುದಕ್ಕಾಗಿ ಅಂತರಂಗಶುದ್ಧಿ, ಬಹಿರಂಗಶುದ್ಧಿಗಳನ್ನು ಸಂಪಾದಿಸಿ ಕರ್ಮಬಂಧವನ್ನು ಕಳೆದುಕೊಳ್ಳಬೇಕು’.[೬೬] ‘ಶಿವಾಗಮದವರು ಶಿವ, ಸೃಷ್ಟಿ, ಜೀವರ ಬಗೆಗಿನ ತತ್ತ್ವಜ್ಞಾನವನ್ನು ಜ್ಞಾನವೆಂದೂ ಶಿವಲಿಂಗಾರ್ಚನೆ ಪೂಜಾವೈಭವರೂಪವಾದ ಕ್ರಿಯೆಯನ್ನು ಯೋಗವೆಂದೂ ಕರೆಯುತ್ತಿದ್ದರು.’[೬೭]

‘ಲಿಂಗವು ವೀರಶ್ಯವದ ಮುಖ್ಯ ಲಕ್ಷಣ. ಅದು ಶಿಲೆಯಲ್ಲ, ಸ್ಪಟಿಕವಲ್ಲ, ಬೇರೆ ಯಾವ ವಸ್ತುವೂ ಆಗಿರದೆ ನಾದ–ಬಿಂದುಯುಕ್ತವಾಗಿದೆ, ಬಿಂದುವೇ ಶಕ್ತಿ; ಶಿವನೇ ನಾದ. ಈ ಲಿಂಗವು ಹೊರಗಿನಿಂದ ಬಂದುದಲ್ಲ ಅದು ಮಾನವನಲ್ಲಿಯೇ ಇದೆ, ಅದು ಆತ್ಮಲಿಂಗ. ಅವನು ಆತ್ಮಸ್ವರೂಪವನ್ನು ಸುಲಭವಾಗಿ ತಿಳಿಯಲಾರನು. ಅವನಿಗೆ ಪ್ರಬಲವಾದ ಆವರಣವಿರುವುದರಿಂದ ಅವನು ಅದನ್ನು ಭೇದಿಸಿ ಒಳಹೊಕ್ಕು ತನ್ನನ್ನು ಕಾಣಲು ಅಸಮರ್ಥನಾಗಿರುವನು.’[೬೮] ಪಾವನಾತ್ಮಕ ಗುರು ಶಿಷ್ಯನ ಹೃತ್ಕಮಲದಿಂದ ತೆಗೆದು ಅದನ್ನು ಆತನ ದೇಹದ ಮೇಲೆ ಧಾರಣ ಮಾಡುತ್ತಾನೆ.’[೬೯] ಶ್ರೀ ಗುರುವಿನಿಂದ ಹಸ್ತಮಸ್ತಕ ಸಂಯೋಗ, ವಿಭೂತಿಪಟ್ಟ ಹಾಗೂ ಲಿಂಗಧಾರಣೆ, ಶಿವಮಂತ್ರೋಪದೇಶಗಳನ್ನು ಪಡೆದ ಶಿಷ್ಯನು ದೇಹವೆಲ್ಲ ಶಿವಮಯವೆಂದು ಭಾವಿಸುವನು, ಸರ್ವಪಾಪವಿಮುಕ್ತನಾಗುವನು. [೭೦]

‘ಅಷ್ಟಾವರಣ, ಪಂಚಾಚಾರ ಹಾಗೂ ಆರವತ್ತೂರು ಶೀಲ ಇವು ವೀರಶೈವದ ಪ್ರಮುಖ ಅಂಶಗಳು. ಗುರು, ಲಿಂಗ ಜಂಗಮ ಪಾದೋದಕ ಪ್ರಸಾದ, ಭಸ್ಮ, ರುದ್ರಾಕ್ಷಿ, ಮಂತ್ರ ಇವು ಅಷ್ಟಾವರಣಗಳು ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರ ಇವು ಪಂಚಾಚಾರಗಳು.’[೨೧] ‘ವೀರಶೈವಧರ್ಮದ ಮೂಲಪುರುಷರು ಪಾದೋದಕ ಪ್ರಸಾದಗಳನ್ನು ಅಷ್ಟಾವರಣಗಳಲ್ಲಿ ಸೇರಿಸಿರುವಲ್ಲಿ ಒಂದು ಸಾಮಾಜಿಕ ಮತ್ತು ತಾತ್ವಿಕ ಉದ್ದೇಶವಿರುವಂತೆ ತೋರುತ್ತದೆ.’[೨೨]

‘ವೀರಶೈವ ದರ್ಶನವು ಪರವಸ್ತುವನ್ನು ಸ್ಥಲ, ಮಹಾಲಿಂಗ ಮುಂತಾಗಿ ಕರೆದಿದೆ. ಈ ಚರಾಚರವಾದ ಜಗತ್ತು ಸೃಷ್ಟಿಗೆ ಮೊದಲು ಎಲ್ಲಿ ಅವ್ಯಕ್ತವಾಗಿದ್ದು, ಅವನು ಸಂಕಲ್ಪಿಸಿದಾಗ ಯಾವುದರಿಂದ ಹೊರಹೊಮ್ಮುತ್ತದೆಯೋ; ಮತ್ತೆ ಕಡೆಯಲ್ಲಿ(ಪ್ರಳಯದಲ್ಲಿ) ಎಲ್ಲಿ ಅಡಗುತ್ತದೆಯೋ ಅದೇ ಸ್ಥಲತತ್ತ್ವ.’ [೨೩]

‘ವೀರಶೈವರಿಗೆ ಷಟ್‌ಸ್ಥಲವು ಸಾಧನಪಥವಾಗಿಯೂ ಶಿವಯೋಗವು ಸಾಮರಸ್ಯ ರೂಪದ ಪರಮಸಿದ್ಧಿಯಾಗಿಯೂ ಮುಂದೆ ಅಭಿವೃದ್ಧಿ ಹೊಂದುವುದು.’[೨೪] ‘ಪಾರಮೇಶ್ವರಾಗಮವು ಷಟ್‌ಸ್ಥಲಗಳನ್ನು ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿ, ಶರಣಸ್ಥಲ, ಐಕ್ಯಸ್ಥಲ ಎಂದು ವಿವರಿಸುತ್ತದೆ. ಒಳಗೆ ಆತ್ಮದ ಅನುಭವ ಹೊರಗೆ ಚರಾಚರ ಸೃಷ್ಟಿಯ ಸ್ವರೂಪವೇ ಆದ ಪರಮಾತ್ಮನ ಅನುಭವ ಒಂದಾಗಿ ಮುಂದುವರಿದು ಬಲಿತ ಶಿವಾನುಭವವಾಗಿ ಆನಂದಭಕ್ತಿ ಉದಿಸುತ್ತದೆ. ಶಿವಯೋಗ–ಶಿವಜ್ಞಾನಗಳ ವೈಭವದಿಂದ ಶಿವಾನಂದವನ್ನನುಭವಿಸುತ್ತ, ಪ್ರಚಂಡವಾಗಿ ಉರಿಯುತ್ತಿರುವ ಬೆಂಕಿಯ ಮಧ್ಯದಲ್ಲಿ ಇರುವ ಶುದ್ಧ ಕರ್ಪೂರದ ದೀಪದಂತೆ ಕೋಟಿಸೂರ್ಯ ಪ್ರಕಾಶಮಾನವಾದ ಪರಮಾತ್ಮನೆಂಬ ಪರಾಕಾಶದಲ್ಲಿ ತನ್ನ ಚಿತ್ತವೃತ್ತಿಗಳೆಲ್ಲವೂ ವಿಲೀನವಾಗಿ ಶಿವಭಾವದಲ್ಲಿ ನೆಲಸುವನು.’[೨೫] ‘ಕೊನೆಗೆ ಆನಂದವು ಲಿಂಗಾಂಗಸಾಮರಸ್ಯದಲ್ಲಿ ಪರ್ಯವಸಾನ ಹೊಂದುತ್ತದೆ.’[೨೬]

ಶೈವ ಮತ್ತು ಶಾಕ್ತ ತಂತ್ರಗಳ ಉಪದೇಶದಂತೆ ಬ್ರಹ್ಮವು ಪರಮಸತ್ಯವಾಗಿದೆ. ವೇದಾಂತದ ನೆಮ್ಮದಿ ಹಾಗೂ ಬೌದ್ಧರ ಶೂನ್ಯ ತಿಳಿಸುವ ಸತ್ಯದಲ್ಲಿ ಕಲ್ಪನೆಯ ತೆಳುವಾದ ಪ್ರತಿಬಿಂಬವಿದೆ. ಸಾಂಖ್ಯಯೋಗದ ಗ್ರಹಿಕೆಯಲ್ಲಿ ಸತ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕಲ್ಪನೆ ಕೂಡಿದೆ, ಅದಕ್ಕೂ ಹೆಚ್ಚಿನ

ಕಲ್ಪನೆ ನ್ಯಾಯ ಹಾಗೂ ವೈಶೇಷಿಕಗಳ ತಾಟಸ್ಥ್ಯದಲ್ಲಿದೆ. ವೈಷ್ಣವರ, ಮೀಮಾಂಸಕರ ತತ್ತ್ವಗಳಲ್ಲಿ ಪರಮಸತ್ಯವು ಕಲ್ಪನೆಯ ಆವರಣದಲ್ಲಿ ಅಡಗಿದೆ. ಚಾರ್ವಾಕರಲ್ಲಿ ಅದು ವಾಸ್ತವಿಕತೆಗೊಳಗಾದ ಕಲ್ಪನೆಯ ಮುದ್ದೆಯಲ್ಲಿ ಹೂತು ಹೋಗಿದೆ. ಈ ಎಲ್ಲ ಮೆಟ್ಟಲುಗಳು ಭಗವಂತನನ್ನು ಸದಾ ಮೇಲಕ್ಕೂ ಕೆಳಕ್ಕೂ ಒಯ್ಯುತ್ತಲೇ ಇವೆ. ಎಲ್ಲಕ್ಕಿಂತ ಮೇಲ್ಮಟ್ಟದಲ್ಲಿರುವ ಅವನೇ ಎಲ್ಲವೂ ಆಗಿದ್ದಾನೆ. ಅವನಿಲ್ಲದೆ ಯಾವುದಕ್ಕೂ ಅಸ್ತಿತ್ವವಿಲ್ಲ. ‘ಪರದಲ್ಲಿ ಶಿವರೂಪದಲ್ಲಿರುವ ಅವನು ವಿಶ್ವದಲ್ಲಿ ಶಕ್ತಿಯ ರೂಪದಲ್ಲಿದ್ದಾನೆ.’[೨೨]

ಪಾಶ್ಚಾತ್ಯ ಹಾಗೂ ಭಾರತೀಯ ದರ್ಶನಗಳನ್ನು ಪರಶೀಲಿಸುವಾಗ ಪ್ರಮುಖ ಅಂಶವೊಂದು ಗೋಚರಿಸುತ್ತದೆ. ಅದೆಂದರೆ ಆ ಎಲ್ಲ ದರ್ಶನಗಳ ಗುರಿ ಪರಮಸತ್ಯದ ಆವಿಷ್ಕಾರ ಮಾಡಿಕೊಳ್ಳುವುದಾಗಿತ್ತು ಎಂಬುದು. ಜೀವಿಗಳಿಗೆ ಹುಟ್ಟು–ಸಾವುಗಳು ಸಹಜವಾಗಿರುವಂತೆ ಭೌತಜಗತ್ತಿಗೂ ಇಂಥ ಗುಣ ಅನ್ವಯಿಸುತ್ತದೆಯೇ ಎಂಬುದು ಅವರ ಜಿಜ್ಞಾಸೆಯಾಗಿತ್ತು. ಜೀವನ ಹುಟ್ಟು–ಸಾವುಗಳಿಗೆ ಕಾರಣವನ್ನು ತಿಳಿಯುವುದೂ ಅವರ ಜಿಜ್ಞಾಸೆಯ ಪ್ರಮುಖ ಅಂಶವಾಗಿತ್ತು. ಸಗುಣ ಜಗತ್ತು ನಿರ್ಮಾಣವಾಗುವುದಕ್ಕೆ ನಿರ್ಗುಣ ಅಂಶವೇ ಕಾರಣವಾಗಿರಬೇಕೆಂಬ ದೃಢವಾದ ನಿಲುವು ವಿವಿಧ ದರ್ಶನಗಳಿಗೆ ಮೂಲಾಧಾರವಾಗಿ ಪರಿಣಮಿಸಿದೆ. ಸೃಷ್ಟಿಯ ಆದಿ ಅಂತ್ಯಗಳ ವಿಷಯದಲ್ಲಿ ನಿರ್ಧಾರಾತ್ಮಕ ದೃಷ್ಟಿಯನ್ನು ಹೊಂದಿರುವ ವೀರಶೈವ ದರ್ಶನವು ಈ ವಿಷಯದಲ್ಲಿ ಅತ್ಯುನ್ನತ ಸ್ಥಾನ ಪಡೆದುಕೊಳ್ಳುತ್ತದೆ.

ಧರ್ಮಕ್ಕೂ ದರ್ಶನಕ್ಕೂ ಅವಿನಾಭಾವ ಸಂಬಂಧವಿರುವಂತೆ ತೋರುತ್ತದೆ. ಧರ್ಮಗಳೆಂದು ತಿಳಿಯಲ್ಪಡುವ ವಿವಿಧ ದಾರ್ಶನಿಕರ ಮತಗಳು ಒಂದೇ ಒಂದು ಧರ್ಮದ ವಿವಿಧ ಮಗ್ಗಲುಗಳಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹೀಗೆ ಧರ್ಮವೆಂದರೆ ಪರಿಪೂರ್ಣತೆಯನ್ನು ಸಾಧಿಸುವ ಕ್ರಮವೆಂದು ಭಾವಿಸಿದರೆ ಜಗತ್ತಿನ ವಿವಿಧ ಮತಗಳ ಸಾರ ಸ್ಪಷ್ಟವಾಗುತ್ತದೆ. ಅವೆಲ್ಲ ನಮ್ಮನ್ನು ಇಂದ್ರಿಯಗಳ ದಾಸ್ಯದಿಂದ ಜಿತೇಂದ್ರಿಯತ್ವದೆಡೆಗೆ, ಅಪರಿಪೂರ್ಣತೆಯಿಂದ ಪರಿಪೂರ್ಣತೆಯೆಡಗೆ ಕರೆದೊಯ್ಯುವ ದಾರಿದೀಪಗಳಾಗುತ್ತವೆ. ಆ ದಾರಿಯಲ್ಲಿ ಕ್ರಮಿಸುವವರಿಗೆ ಗುರಿ ತಲುಪುವುದು ಸಾಧ್ಯವಾಗುತ್ತದೆ. ಹೀಗೆ ಅಪರಿಪೂರ್ಣತೆಯಿಂದ ಪರಿಪೂರ್ಣತೆಯೆಡೆಗೆ ಕ್ರಮಿಸುವುದೇ ಧರ್ಮವೆಂದು ನಿರ್ಧಾರವಾಗುತ್ತದೆ. ಇದರ ಆಧಾರದ ಮೇಲೆ ‘ಜಗತ್ತಿನ ವಿವಿಧ ವಸ್ತುಗಳ ಧರ್ಮಾಂಶದ ತತ್ತ್ವವನ್ನು ಕಾಣುವುದೇ

ದರ್ಶನವಾಗುತ್ತದೆ'. ಸರ್ವಸಮತಾಭಾವದಲ್ಲಿ ಮುನ್ನಡೆದು ಇಂಥ ಧರ್ಮಾಂಶದ ತತ್ತ್ವವನ್ನು ಕಾಣುವವನು ದೃಷ್ಟಾರ ಅಥವಾ ಋಷಿ ಎಂದು ಗುರುತಿಸಲ್ಪಡುತ್ತಾನೆ. 'ಜಗತ್ತಿನ ಮೂಲ ತತ್ತ್ವಗಳ ಬಗೆಗೆ ಜಿಜ್ಞಾಸೆ ನಡೆಸುವ ಶಾಸ್ತ್ರಗ್ರಂಥಗಳು ದರ್ಶನಗಳಾಗುತ್ತವೆ.'[೭೯]

ದರ್ಶನವೆಂಬ ಪದದ ಸರಿಯಾದ ಅರ್ಥವೇನೆಂಬುದರ ಬಗ್ಗೆ ಅನುಮಾನಗಳಿವೆ. ಈ ಪದವು 'ದೃಶ್'ಎಂಬ ಧಾತುವಿನಿಂದ ಹುಟ್ಟಿದೆ. 'ದೃಶ್' ಎಂದರೆ ನೋಡು ಎಂದು ಅರ್ಥ. ಆದುದರಿಂದ ದರ್ಶನ ಎಂದರೆ ನೋಡುವ ಕ್ರಿಯೆ, ವೀಕ್ಷಣೆ ಕಂಡರಿಯುವಿಕೆ ಎಂದು ಅರ್ಥವಾಗುತ್ತದೆ. [೮೦]

ರೆವರೆಂಡ ಕಿಟೆಲ್‌ರು 'ದರ್ಶನ' ಪದಕ್ಕೆ ಕೊಟ್ಟಿರುವ ಅರ್ಥಗಳಲ್ಲಿ ಪ್ರಮುಖವಾದುವು ಹೀಗಿವೆ:

೧. Seeing, looking, seeing in the mind, experiencing.

೨. Sight, vision, observation; Inspection, Examination, perception (ಲಕ್ಷಣ, ಧ್ಯಾನ, ಅವಲೋಕನ, ನೋಟ)

೩. View, theory, doctrine,

೪. A system of school of philosophy.[೮೧]

ಮಾರಿಸ್ ವೇಯ್ಟ್ (Maurice Waite) 'vision' ಶಬ್ದಕ್ಕೆ ಕೊಟ್ಟಿರುವ ಪ್ರಮುಖ ಅರ್ಥವಿವರಣೆಗಳು ಹೀಗಿವೆ :

Act or faculty of seeing, sight, thing or person seen in dream or trance.[82]

'trance' ಶಬ್ದಕ್ಕೆ ಕೊಟ್ಟಿರುವ ಮಹತ್ವದ ಅರ್ಥವಿವರಣೆಗಳು ಹೀಗಿವೆ :

ಜೀವ ದೇಹವನ್ನು ಬಿಟ್ಟಿರುವಂತೆ ತೋರುವ ಸ್ಥಿತಿ, ಯೋಗಸಮಾಧಿ ಸ್ಥಿತಿ; ಬ್ರಹ್ಮಾನಂದ, ಪರಮಾನಂದ, ಆನಂದಪರವಶತೆ.[೮೩]

ಈ ಎಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸಿದಾಗ ದರ್ಶನಕ್ರಿಯೆ ಒಮ್ಮುಖವಾಗಿರದೆ ಅದು ಅಂತರ್ದರ್ಶನ ಮತ್ತು ಬಹಿರ್ದರ್ಶನ ಎಂದು ಎರಡು ತೆರನಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಆಂತರಿಕ ದರ್ಶನದಲ್ಲಿ ಧ್ಯಾನ, ಅವಲೋಕನ, ನೋಟ, ಯೋಗಸಮಾಧಿ ಸ್ಥಿತಿ, ಬ್ರಹ್ಮಾನಂದ, ಪರಮಾನಂದ ಈ ಎಲ್ಲ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ. ಅವುಗಳಿಗೆ ಪೂರಕವಾಗುವ ಅಂಶಗಳ ಆಳ ಹರವುಗಳನ್ನು ಪರಿಶೀಲಿಸುವುದು ಅವಶ್ಯವೆನಿಸುತ್ತದೆ. ಬಾಹ್ಯವಾಗಿರುವ ದರ್ಶನವೆಂದರೆ ಯಾವುದೇ ವಿಷಯದಲ್ಲಿ ಯಾವುದೇ ರೀತಿಯ ಪೂರ್ವಾಗ್ರಹ ವಿಚಾರಗಳಿಲ್ಲದೆ ಆಯಾ ಅಂಶಗಳನ್ನು ಆಳವಾಗಿಯೂ ವಸ್ತುನಿಷ್ಠವಾಗಿಯೂ ನೋಡುವುದು ಹಾಗೂ ಪರಿಪೂರ್ಣತೆಯನ್ನು ಗಮನಿಸುವುದು ಎಂದಾಗುತ್ತದೆ.

"ನಿರ್ದಿಷ್ಟ ತತ್ತ್ವವನ್ನು ಇದ್ದದ್ದನ್ನು ಇದ್ದ ಹಾಗೆ ತಿಳಿಸುವ ಸಾಧನವೇ ದರ್ಶನವೆನಿಸುವುದು, 'ದೃಶ್ಯತೇ ವಸ್ತುತತ್ತ್ವಂ ಅನೇನೇತಿ ದರ್ಶನಂ'. ವಸ್ತುತತ್ತ್ವವೆಂದರೆ ಇಲ್ಲಿ ಆತ್ಮತತ್ತ್ವ. ಅದರ ವಾಸ್ತವಸ್ವರೂಪ ಹೀಗೆಯೇ ಇದೆ ಎಂದು ನಿಷ್ಕರ್ಷಿಸಿ ತಿಳಿಸುವ ಸಾಧನವು ದರ್ಶನವೆನಿಸುವುದು."[೮೪] ಹೀಗೆ ವಿಜ್ಞಾನ, ಸಾಹಿತ್ಯ, ತತ್ತ್ವಜ್ಞಾನ ಅಥವಾ ಇನ್ನಾವುದಾದರೂ ವಿಭಾಗವನ್ನು ತೆಗೆದುಕೊಂಡು ಅದನ್ನು ವಸ್ತುನಿಷ್ಠವಾಗಿ ಅರಿಯುವುದೇ ದಾರ್ಶನಿಕ ಅಧ್ಯಯನವೆನಿಸುತ್ತದೆ.

ಪ್ರಸ್ತುತ ಆಯ್ದುಕೊಂಡಿರುವ ಚಾಮರಸನ ಪ್ರಭುಲಿಂಗಲೀಲೆಯು ಭಾರತೀಯ ದರ್ಶನಗಳ – ಅದರಲ್ಲಿಯೂ ವೀರಶೈವ ದರ್ಶನದ–ಹಿನ್ನಲೆಯಲ್ಲಿ ರೂಪುಗೊಂಡ ಕಾವ್ಯವಾಗಿದೆ. ವೀರಶೈವದ ಸಾಧನರೂಪವಾದ ಶಿವಯೋಗವು ಈ ಕೃತಿಗೆ ಮೂಲಾಧಾರವಾಗಿರುವುದರಿಂದ ಚಾಮರಸ ಕವಿಯು ತನ್ನ ಕಾವ್ಯದಲ್ಲಿ ವೀರಶೈವದ ಅಂತಿಮ ಹಂತವಾದ ಲಿಂಗಾಂಗಸಾಮರಸ್ಯದ ನಿರೂಪಣೆಯಲ್ಲಿ ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವ ವಿವಿಧ ಅಂಶಗಳನ್ನು ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ಸಮಗ್ರವಾಗಿ ಲಕ್ಷಿಸುವುದು ಇಲ್ಲಿಯ ಉದ್ದೇಶವಾಗಿದೆ. ಪ್ರಭುಲಿಂಗಲೀಲೆ ಕಾವ್ಯದ ವಿವೇಚನೆಯಲ್ಲಿ (೧) ಯೋಗದರ್ಶನ (೨) ಲೋಕದರ್ಶನ ಹಾಗೂ (೩) ಕಾವ್ಯದರ್ಶನ ಎಂದು ಮೂರು ಪ್ರಮುಖ ವಿಭಾಗಗಳನ್ನು ರೂಪಿಸಿಕೊಳ್ಳಲಾಗುತ್ತಿದೆ.

ಟಿಪ್ಪಣಿಗಳು

೧. ಡಾ. ಎಚ್. ತಿಪ್ಪೇರುದ್ರಸ್ವಾಮಿ , ಶರಣರ ಅನುಭಾವ ಸಾಹಿತ್ಯ, ಪುಟ ೨
೨. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೩೦
೩. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೩೪ ಮತ್ತು ೩೫.
೪. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೭೧
೫. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೭೨
೬. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೮೦
೭. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೮೬
೮. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೯೩
೯. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೯೩
೧೦. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೧೦೫
೧೧. ದೇವಿಪ್ರಸಾದ ಚಟ್ಟೋಪಾಧ್ಯಾಯ , ದರ್ಶನ , ಪುಟ ೧೦೯
೧೨. ಎನ್. ಬಾಲಸುಬ್ರಹ್ಮಣ್ಯ, ಅರಿಸ್ಟಾಟಲನ ಕಾವ್ಯಮೀಮಾಂಸೆ, ಪುಟ ೧
೧೩. ಡಾ. ಆರ್. ಸಿ. ಹಿರೇಮಠ , ಮಹಾಯಾತ್ರೆ ಪುಟ ೩
೧೪. ಸ್ವಾಮಿ ವಿವೇಕಾನಂದ ,ರಾಜಯೋಗ , ಪುಟ ೧೨
೧೫. ಎಸ್. ಜಿ. ಸರದೇಸಾಯಿ , ಭಾರತೀಯ ತತ್ತ್ವಜ್ಞಾನ , ಪುಟ ೧೨೦
೧೬. ಮಹಾಯಾತ್ರೆ , ಪುಟ ೪
೧೭. ಮಹಾಯಾತ್ರೆ , ಪುಟ ೪
೧೮. ರಾಜಯೋಗ , ಪುಟ ೯೬
೧೯. ಮಹಾಯಾತ್ರೆ , ಪುಟ ೫
೨೦. ಮಹಾಯಾತ್ರೆ , ಪುಟ ೫
೨೧. ಮಹಾಯಾತ್ರೆ , ಪುಟ ೫
೨೨. ಮಹಾಯಾತ್ರೆ , ಪುಟ ೬
೨೩. ಮಹಾಯಾತ್ರೆ , ಪುಟ ೬
೨೪. ಮಹಾಯಾತ್ರೆ , ಪುಟ ೬ ಮತ್ತು ೭
೨೫. ಮಹಾಯಾತ್ರೆ , ಪುಟ ೭
೨೬. ಮಹಾಯಾತ್ರೆ , ಪುಟ ೭
೨೭. ಮಹಾಯಾತ್ರೆ , ಪುಟ ೮
೨೮. ಮಹಾಯಾತ್ರೆ , ಪುಟ ೮
೨೯. ಮಹಾಯಾತ್ರೆ , ಪುಟ ೮

[illegible]

೩೦. ಮಹಾಯಾತ್ರೆ , ಪುಟ ೩ ಮತ್ತು ೪
೩೧. ಭಾರತೀಯ ತತ್ವಜ್ಞಾನ , ಪುಟ ೪೬
೩೨. ಭಾರತೀಯ ತತ್ವಜ್ಞಾನ , ಪುಟ ೪೭ ಮತ್ತು ೪೮
೩೩. ಭಾರತೀಯ ತತ್ವಜ್ಞಾನ , ಪುಟ ೪೮
೩೪. ಮಹಾಯಾತ್ರೆ , ಪುಟ ೧೦ ರಿಂದ ೧೨
೩೫. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೧೫
೩೬. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೯
೩೭. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೧೦
೩೮. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೧೦
೩೯. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೨೭
೪೦. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೨೮
೪೧. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೩೨
೪೨. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೩೩
೪೩. ಗೌರೀಶ ಕಾಯ್ಕಿಣಿ , ಲೋಕಾಯತ , ಪುಟ ೩೪
೪೪. ಮಹಾಯಾತ್ರೆ , ಪುಟ ೧೨
೪೫. ಮಹಾಯಾತ್ರೆ , ಪುಟ ೧೨
೪೬. ಮಹಾಯಾತ್ರೆ , ಪುಟ ೧೨ ಮತ್ತು ೧೩
೪೭. ಮಹಾಯಾತ್ರೆ , ಪುಟ ೧೩
೪೮. ಮಹಾಯಾತ್ರೆ , ಪುಟ ೧೩
೪೯. ಮಹಾಯಾತ್ರೆ , ಪುಟ ೧೩
೫೦. ಮಹಾಯಾತ್ರೆ , ಪುಟ ೧೪
೫೧. ಮಹಾಯಾತ್ರೆ , ಪುಟ ೧೫ ಮತ್ತು ೧೬
೫೨. ಮಹಾಯಾತ್ರೆ , ಪುಟ ೧೬
೫೩. ಮಹಾಯಾತ್ರೆ , ಪುಟ ೧೭
೫೪. ಮಹಾಯಾತ್ರೆ , ಪುಟ ೨೦
೫೫. ಮಹಾಯಾತ್ರೆ , ಪುಟ ೨೩
೫೬. ಮಹಾಯಾತ್ರೆ , ಪುಟ ೨೩
೫೭. Shiva was one of the principal deities of the people along with Mother goddess.
Allen and Unvin , Vedic age
ಮಹಾಯಾತ್ರೆ , ಪುಟ ೨೩
೫೭. ಮಹಾಯಾತ್ರೆ , ಪುಟ ೨೬
೫೮. ಮಹಾಯಾತ್ರೆ , ಪುಟ ೨೬ ಮತ್ತು ೨೭
೫೯. ಮಹಾಯಾತ್ರೆ , ಪುಟ ೨೭
೬೦. ಮಹಾಯಾತ್ರೆ , ಪುಟ ೨೭

೬೧. ಸಮಗ್ರ ವಚನ ಸಂಪುಟ ೧೫ , ವಚನ ಪರಿಭಾಷಾಕೋಶ , ಪುಟ ೨೪೨
೬೨. ಸಮಗ್ರ ವಚನ ಸಂಪುಟ ೧೫ , ವಚನ ಪರಿಭಾಷಾಕೋಶ , ಪುಟ ೨೪೨
೬೩. ಮಹಾಯಾತ್ರೆ , ಪುಟ ೭೬
೬೪. ಮಹಾಯಾತ್ರೆ , ಪುಟ ೮೯
೬೫. ಮಹಾಯಾತ್ರೆ , ಪುಟ ೯೦
೬೬. ಮಹಾಯಾತ್ರೆ , ಪುಟ ೯೧
೬೭. ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ , ಶಕ್ತಿವಿಶಿಷ್ಟಾದ್ವೈತದರ್ಶನ , ಪುಟ ೩
೬೮. ಮಹಾಯಾತ್ರೆ , ಪುಟ ೯೧
೬೯. ಮಹಾಯಾತ್ರೆ , ಪುಟ ೧೦೦
೭೦. ಮಹಾಯಾತ್ರೆ , ಪುಟ ೯೨ ಮತ್ತು ೯೩
೭೧. ಡಾ. ಎಸ್. ಸಿ. ನಂದಿಮಠ , ವೀರಶೈವ ಧರ್ಮದ ಕೈಪಿಡಿ , ಪುಟ ೪೯
೭೨. ಡಾ. ಎಂ.ಜಿ.ನಂಜುಂಡಾರಾಧ್ಯ , ಮಗ್ಗೆ ಮಾಯಿದೇವ ವಿಭು ಕಂಡ ವೀರಶೈವ ದರ್ಶನ , ಪುಟ ೪೧
೭೩. ಮಹಾಯಾತ್ರೆ , ಪುಟ ೯೧
೭೪. ಶಿವಯೋಗ ಶಿವಜ್ಞಾನವಿಭವಾನಂದಸಂಯುತಃ
ಪ್ರಚಂಡಾತಪಮಧ್ಯಸ್ಥಶುದ್ಧಕರ್ಪೂರದೀಪವತ್
ಶಿವಾಕಾರೇ ಪರಾಕಾಶೇ ಕೋಟಿಸೂರ್ಯಪ್ರಕಾಶಕೇ
ವಿಲೀನಚಿತ್ತವೃತ್ತಿಸ್ತು ಮುಕ್ತಜೀವ ಇತಿ ಸ್ಮೃತಃ
ಶಕ್ತಿವಿಶಿಷ್ಟಾದ್ವೈತದರ್ಶನ , ಪುಟ ೧೩೦
೭೫. ಮಹಾಯಾತ್ರೆ , ಪುಟ ೯೫
೭೬. Dr. B.N.Pandit , Aspects of Kashmir Saivism , page 12
೭೭. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ , ಪುಟ ೧೨೬
೭೮. ಸ್ವಾಮಿ ಹರ್ಷಾನಂದ , ಹಿಂದೂ ಧರ್ಮ, ಪುಟ ೭
೭೯. ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯ , ಭಾರತೀಯ ದರ್ಶನಗಳು , ಪುಟ ೫೨
೮೦. ರೆ. ಕಿಟೆಲ್ , ಕನ್ನಡ ಇಂಗ್ಲಿಷ್ ಡಿಕ್ಷನರಿ , ಪುಟ ೭೭೬
೮೨. Maurice Waite , Little Oxford Dictionary , page 742
೮೩. ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್-ಕನ್ನಡ ನಿಘಂಟು , ಪುಟ ೧೩೪೨
೮೪. ಶಕ್ತಿವಿಶಿಷ್ಟಾದ್ವೈತದರ್ಶನ , ಪುಟ ೧೧

ಅಧ್ಯಾಯ – ಮೂರು

ಯೋಗದರ್ಶನ

ಅಧ್ಯಾಯ – ೩

ಯೋಗದರ್ಶನ

೧. ಶರಣಸಂಸ್ಕೃತಿ ಮತ್ತು ಸಾಹಿತ್ಯ

ಸಾಹಿತ್ಯ ಮತ್ತು ಸಂಸ್ಕೃತಿ ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ದೇಶದ ಅಥವಾ ಒಂದು ಜನಾಂಗದ ಸಾಹಿತ್ಯವು ಸಂಸ್ಕೃತಿಯನ್ನು ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಹಿನ್ನೆಲೆ–ಯಾಗಿಟ್ಟುಕೊಂಡು ರೂಪುಗೊಳ್ಳುವುದು ಸಹಜ. ಒಂದು ಸಾಹಿತ್ಯಿಕ ರಚನೆಯು ಸಂಸ್ಕೃತಿಯ ಪರವಾಗಿರಬಹುದು ಇಲ್ಲವೆ ವಿರುದ್ಧವಾಗಿರಬಹುದು. ಆದರೆ ಅದರ ವಸ್ತು ಮಾತ್ರ ಸಂಸ್ಕೃತಿಯೇ ಆಗಿರಬೇಕಾದುದು ಅನಿವಾರ್ಯ. ಇಂಥ ವಿವಿಧ ತಾತ್ತ್ವಿಕ ನೆಲೆಗಳಲ್ಲಿ ಭಾರತೀಯ ಸಾಹಿತ್ಯವು ರೂಪುಗೊಳುತ್ತ ಬಂದಿರುವುದನ್ನು ಗುರುತಿಸುತ್ತೇವೆ. ರಾಮಾಯಣ–ಮಹಾಭಾರತಗಳು ಭಾರತೀಯ ಸಂಸ್ಕೃತಿಯ ಪ್ರತಿರೂಪಗಳಾಗಿ ಮೂಡಿ ಬಂದಿವೆ. ಅವು ವೇದ, ಆಗಮ, ಉಪನಿಷತ್ತು ಮುಂತಾದವುಗಳ ಸಮಗ್ರ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿರುವುದನ್ನು ಕಾಣುತ್ತೇವೆ.

ಭಾರತೀಯ ಸಾಹಿತ್ಯದ ರಚನೆಯ ಕಾಲವು ಕ್ರಿಸ್ತಶಕಕ್ಕೆ ಬಹಳ ಹಿಂದೆ ಹೋಗುತ್ತದೆ. ಸಂಕೀರ್ಣವೂ ವೈವಿಧ್ಯಪೂರ್ಣವೂ ಆಗಿರುವ ಇದನ್ನು ನಿಖರವಾಗಿ ವರ್ಗೀಕರಿಸುವುದು ಸುಲಭದ ಮಾತಲ್ಲ. ವಿವಿಧ ವಿಷಯವ್ಯಾಪ್ತಿಗಳಲ್ಲಿ ವಿಂಗಡಿಸುವ ಬದಲಾಗಿ ಅದನ್ನು ವಿವಿಧ ಕಾಲಘಟ್ಟಗಳಲ್ಲಿ ವಿಂಗಡಿಸಲು ಪ್ರಯತ್ನಿಸಿದ್ದಾರೆ. ಈ ಕಾಲಘಟ್ಟಗಳನ್ನು ವಿಧವಿಧವಾಗಿ ವ್ಯಾಖ್ಯಾನಿಸುತ್ತ ಬಂದಿರುವುದಲ್ಲದೆ ಸಂಸ್ಕೃತಿಯ ವಿಭಿನ್ನ ರೂಪಗಳಲ್ಲಿ ಅವುಗಳನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ಆದರೆ ಈ ಎಲ್ಲ ರಚನೆಗಳ ಸಾಂಸ್ಕೃತಿಕ ಹಿನ್ನೆಲೆಗೆ ಅರ್ಥಪೂರ್ಣ ಬದುಕೇ ಆಧಾರವಾಗಿದೆಯೆಂಬುದನ್ನು ಲಕ್ಷಿಸಬೇಕು. ಜಗತ್ತಿನಲ್ಲಿ ಅರಳಿ ನಿಂತ ಸಂಸ್ಕೃತಿಗಳೆಲ್ಲ ಅರ್ಥಪೂರ್ಣ ಬದುಕನ್ನು ಪ್ರತಿಬಿಂಬಿಸುವಂಥವುಗಳೇ ಆಗಿವೆ ಹಾಗೂ ಪ್ರತಿಬಿಂಬವು ಮಾನವನ ಪರಿಪೂರ್ಣತೆಯೆಡೆಗೆ ಬೆರಳು ತೋರಿಸುವಂಥದ್ದಾಗಿದೆ. ಅಂದರೆ

[illegible]

[illegible]

[illegible]

[illegible]

[illegible]

ಮಾನವನ ಪರಿಪೂರ್ಣತೆಯೆನ್ನುವುದು ಸಾಂಸ್ಕೃತಿಕ ಲಕ್ಷಣಗಳನ್ನು ಸಮಗ್ರವಾಗಿ ರೂಢಿಸಿಕೊಂಡು ಬಂದಿರುವ ಸಂಪ್ರದಾಯವಾಗಿದ್ದು ಧಾರ್ಮಿಕ ಆಚರಣೆಗಳು ಮಾನವನನ್ನು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವ ಸಾಧನಗಳಾಗಿವೆ. ಇಂಥ ಧರ್ಮಾಚರಣೆಯ ಸ್ಪಷ್ಟ ಪ್ರತಿರೂಪವಾಗಿರುವ ಭಾರತೀಯ ಸಂಸ್ಕೃತಿಯು ಮೂಲದಲ್ಲಿಯೇ 'ಯೋಗ' ವನ್ನು ಉಸಿರಾಗಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಭಾರತೀಯ ಸಂಸ್ಕೃತಿಯ ಒಂದು ವಿಶಿಷ್ಟ ಭಾಗವಾಗಿರುವ ಕನ್ನಡ ನಾಡಿನ ಸಂಸ್ಕೃತಿಯು ಸಾಹಿತ್ಯದ ಸಮೃದ್ಧ ಭಂಡಾರವನ್ನು ಹೊಂದಿದೆ. ಅನೇಕ ಕೃತಿಗಳಲ್ಲಿ ಧಾರ್ಮಿಕ ಆಚರಣೆಯು ಅವುಗಳ ಪ್ರಾಣವಾಗಿರುವುದು ಈ ನೆಲದ ವಿಶೇಷತೆಯಾಗಿದೆ. ಅಶೋಕನ ಶಿಲಾಶಾಸನಗಳು ಕರ್ನಾಟಕದಲ್ಲಿ ಕಂಡು ಬರುತ್ತಿವೆಯಾದರೂ ಬೌದ್ಧ ಕೃತಿಗಳು ಲಭ್ಯವಿಲ್ಲ. ಲಭ್ಯವಿರುವ ಕನ್ನಡ ಸಾಹಿತ್ಯವನ್ನು ಪರಿಶೀಲಿಸಿದರೆ ಅದರ ಉಗಮವೇ ಜೈನ ಸಾಹಿತ್ಯಕೃತಿಗಳಿಂದಾಗಿರುವುದು ಸ್ಪಷ್ಟವಾಗುತ್ತದೆ. ಕನ್ನಡ ಸಾಹಿತ್ಯದ ಬೆಳವಣಿಗೆಯ ಪ್ರಾರಂಭದ ಶತಮಾನಗಳನ್ನು ಪ್ರಮುಖವಾಗಿ ಜೈನ ಕೃತಿಗಳೇ ಪ್ರತಿನಿಧಿಸುವುದನ್ನು ಕಾಣುತ್ತೇವೆ. ಶ್ರೀ ಶಂಕರಾಚಾರ್ಯರು ವೈದಿಕ ಮಾರ್ಗಾನುಸರಣೆಯನ್ನು ಪುನರುಜ್ಜೀವನಗೊಳಿಸಿ ಅದ್ವೈತ ಸಿದ್ಧಾಂತವನ್ನು ಜನಪ್ರಿಯಗೊಳಿಸಿದರು ಈ ಪ್ರಸಂಗದಲ್ಲಿ ಅನೇಕ ಕೃತಿಗಳು ವೈದಿಕ ಆಚರಣೆಗಳ ಹಿನ್ನೆಲೆಯಲ್ಲಿ ರೂಪುಗೊಂಡವು. ರಾಮಾಯಣ, ಮಹಾಭಾರತಗಳ ವಸ್ತುವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿತವಾದ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ವಿಪುಲವಾಗಿವೆ. ಆದರೆ ಹನ್ನೆರಡನೆಯ ಶತಮಾನದಲ್ಲಿ ಕಂಡು ಬರುವ ಬಸವಾದಿ ಪ್ರಮಥರ ಶರಣಮಾರ್ಗವು ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ತಿರುವನ್ನು ಕೊಟ್ಟಿರುವುದನ್ನು ಕಾಣುತ್ತೇವೆ. ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಂಡು ಬಂದ ಅದ್ಭುತ ಬದಲಾವಣೆಯು ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲ ಭಾರತೀಯ ಸಾಹಿತ್ಯದಲ್ಲೇ ಸಾಗರದ ದೀಪಸ್ತಂಭದ ಬೆಳಕಿನಂತೆ ತೋರುತ್ತದೆ. ವಚನ ವಾಙ್ಮಯವು ಜನಸಾಮಾನ್ಯರ ಸಾಹಿತ್ಯಕ ಹಾಗೂ ಧಾರ್ಮಿಕ ಆಸ್ತಿಯಾಗಿ ಮೂಡಿ ಬಂದಿದ್ದರೆ ಶಿವಶರಣರ ಬದುಕನ್ನು ವಸ್ತುವಾಗುಳ್ಳ ಕಾವ್ಯಸಂಪತ್ತು ಶರಣಧರ್ಮದ ಹೊಳೆಯಾಗಿ ಹರಿದಿದೆ. ಈ ಶಿವಶರಣರಲ್ಲಿ ಪ್ರಮುಖ ವ್ಯಕ್ತಿಗಳಾದ ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮಯ್ಯ, ಅಕ್ಕಮಹಾದೇವಿ ಇವರನ್ನು ಕುರಿತು ಅನೇಕ ಕಾವ್ಯಗಳು ರಚಿಸಲ್ಪಟ್ಟಿವೆ.

[illegible]

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಧಾರ್ಮಿಕ ಆಚರಣೆಯು ಪಡೆದುಕೊಂಡ ತಿರುವು ಬಸವಾದಿ ಪ್ರಮಥರ ನಡೆನುಡಿಗಳೊಂದಿಗೆ ತಳಕು ಹಾಕಿಕೊಳ್ಳುತ್ತದೆ. ವೈದಿಕ ಆಚರಣೆಗಳ ನೆಪದಲ್ಲಿ ಪುರೋಹಿತ ವರ್ಗವು ಯಜ್ಞಯಾಗಾದಿಗಳನ್ನು ನಡೆಸುತ್ತ ಜನಸಾಮಾನ್ಯರ ಬದುಕಿನೊಂದಿಗೆ ಚೆಲ್ಲಾಟವಾಡತೊಡಗಿತ್ತು. ಸ್ವರ್ಗದ ಆಶೆ, ನರಕದ ಭಯ ಇವುಗಳಲ್ಲಿ ಅವರನ್ನು ಅದ್ದಿ ತೆಗೆಯತೊಡಗಿತ್ತು. ಅದು ದೇವರ ದಲ್ಲಾಳಿಯಾಗಿ ಮಾರ್ಪಟ್ಟು ಭಕ್ತರ ಜತೆಗೆ ವ್ಯವಹರಿಸತೊಡಗಿತ್ತು. ಹೀಗೆ ಪುರೋಹಿತರ ನಡೆ ಹಾಗೂ ನುಡಿಗಳಲ್ಲಿ ತೋರಿದ ಆಳವಾದ ಕಂದಕದಿಂದಾಗಿ ಜನಸಾಮಾನ್ಯರಿಗೆ ಬದುಕು ಅಸಹನೀಯವಾಗತೊಡಗಿತ್ತು. ಬೇಸಿಗೆಯ ಬಿಸಿಲಿಗೆ ಹುರಿದು ಹೋದ ನೆಲವು ಮಳೆಯ ತಂಪಾದ ಸಿಂಚನಕ್ಕೆ ಬಾಯಿ ಬಿಡುತ್ತಿದ್ದಿತು. ಈ ಪ್ರಸಂಗದಲ್ಲಿ ಕಾರಣಿಕ ಪುರುಷನಾಗಿ ಮೂಡಿ ಬಂದವನು ಬಸವಣ್ಣ. ಶುಷ್ಕ ಆಚರಣೆಗಳನ್ನೆಲ್ಲ ತಿರಸ್ಕರಿಸಿ ಸರಳ ಬದುಕಿಗೆ ಅವನು ರಾಜಮಾರ್ಗವನ್ನು ನಿರ್ಮಿಸಿದನು. ಕಾಯಕತತ್ತ್ವದ ಶುದ್ಧವಾದ ಆಚರಣೆಗಳ ಮೇಲೆ ರೂಪಿಸಿದ ಸರಳ ವಿಧಾನಗಳನ್ನು ಉಪದೇಶಿಸಿದನು. ನಡೆನುಡಿಗಳಲ್ಲಿ ವ್ಯತ್ಯಾಸ ತೋರದ, ಸಾಮರಸ್ಯದ ಬದುಕನ್ನು ಸಾಗಿಸುವ ಮಾರ್ಗದಲ್ಲಿ ಜನಸಮೂಹವನ್ನು ಕೊಂಡೊಯ್ದನು. ಅನುಭವ ಮಂಟಪದ ಗೋಷ್ಠಿಗಳಲ್ಲಿ ಹೊರಹೊಮ್ಮಿದ ಅನುಭಾವದ ತುಣುಕುಗಳು ವಚನಗಳ ರೂಪದಲ್ಲಿ ಕಾಣಿಸಿಕೊಂಡವು. ಶಿವಶರಣರ ಶಾಸನಗಳಂತೆ ಮೂಡಿ ಬಂದ ವಚನಾಚರಣೆಗಳು ಕಲ್ಪಿತ ಅಂಶಗಳಾಗಿರದೆ ಅಂತರಂಗದಲ್ಲಿ ಕಂಡುಕೊಂಡ ಸತ್ಯದ ಸಾಕಾರವಾಗಿದ್ದವು. ಧಾರ್ಮಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಮೂಡಿಬಂದ ಈ ಕ್ರಾಂತಿಗೆ ಬಸವಣ್ಣ ನೇತೃತ್ವ ವಹಿಸಿದರೆ ಎಲ್ಲ ಶಿವಶರಣರು ಹಾಗೂ ಶರಣೆಯರು ಮನಃಪೂರ್ವಕವಾಗಿ ಕೈಜೋಡಿಸಿದರು. ಶಿವಾನುಭವದ ಪೀಠವೊಂದನ್ನು ನಿರ್ಮಿಸಿದ ಬಸವಣ್ಣ ಅದರ ಪ್ರಥಮಾಧಿಕಾರಿಯಾಗಲು ಅಲ್ಲಮಪ್ರಭುವನ್ನು ಕೇಳಿಕೊಂಡನು. ಹೀಗೆ ಅಲ್ಲಮಪ್ರಭು ಶೂನ್ಯ ಸಿಂಹಾಸನದ ಪ್ರಥಮಾಧಿಕಾರಿಯಾಗಿ ಅತ್ಯಂತ ಪ್ರಮುಖ ವ್ಯಕ್ತಿಯಾಗಿದ್ದಾನೆ.

ಕರ್ನಾಟಕದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಶಿವಶರಣರ ಸ್ಥಾನ ಅನನ್ಯವಾಗಿ ರೂಪಗೊಂಡರೆ ಶಿವಶರಣರಲ್ಲಿ ಅಲ್ಲಮಪ್ರಭುವಿನ ಸ್ಥಾನ ಅನನ್ಯವಾಗಿ ರೂಪುಗೊಂಡಿತು. ಶಿವಶರಣರು ತಮ್ಮ ನಡೆ ಹಾಗೂ ನುಡಿಗಳಿಂದಾಗಿ ಪರಶಿವನ ಅಪರಾವತಾರಿಗಳಂತೆ ಬದುಕಿದುದರಿಂದ ಅವರ ಬದುಕಿನ ಘಟನೆಗಳನ್ನು ಕೊಂಡಾಡುವುದೆಂದರೆ ಶಿವನ ಲೀಲೆಗಳನ್ನು ಕೊಂಡಾಡಿದಂತೆಯೇ ಎಂಬ

ದೃಢವಾದ ತಿಳುವಳಿಕೆಗೆ ಅವರು ಪಾತ್ರರಾದರು. ಕನ್ನಡ ಕಾವ್ಯನದಿಗೆ ಮಹತ್ವದ ತಿರುವನ್ನು ತಂದು ಕೊಟ್ಟ ಹಂಪೆಯ ಹರಿಹರನು ಶಿವಶರಣರ ನಡೆನುಡಿಗಳನ್ನು ಶಿವನ ಲೀಲೆಗಳೆಂದೇ ಗ್ರಹಿಸಿ ಕಾವ್ಯರಚನೆ ಮಾಡಿದ್ದಾನೆ. ತಮಿಳುದೇಶದ ಶಿವಶರಣರಿಗೆ ಹಾಗೂ ಹನ್ನೆರಡನೆಯ ಶತಮಾನದ ಬಸವಾದಿ ಪ್ರಮಥರಿಗೆ ಹರಿಹರನ ದೃಷ್ಟಿಯಲ್ಲಿ ಯಾವ ವ್ಯತ್ಯಾಸವೂ ಇಲ್ಲವೆಂಬುದನ್ನು ಕಾಣುತ್ತೇವೆ. ಆದುದರಿಂದ ಹರಿಹರನ ರಚನೆಗಳಲ್ಲಿ ತಮಿಳುದೇಶದ ಶಿವಶರಣರು ಹಾಗೂ ಬಸವಾದಿ ಪ್ರಮಥರು ಸಮಾನ ಮಟ್ಟದಲ್ಲಿ ಕಾವ್ಯಕ್ಕೆ ವಸ್ತುವಾಗಿದ್ದಾರೆ. ಅವರವರ ವೈಯಕ್ತಿಕ ಬದುಕಿನ ಘಟನೆಗಳಲ್ಲಿ ವ್ಯತ್ಯಾಸ ತೋರುತ್ತಿದ್ದರೂ ಆಧ್ಯಾತ್ಮಿಕ ನೆಲೆಯಲ್ಲಿ ಅವರೆಲ್ಲ ಶಿವನ ಅಪರಾವತಾರಿಗಳಾಗಿ ಚಿತ್ರಣಗೊಂಡಿದ್ದಾರೆ. ಹರಿಹರನ ಈ ದೃಷ್ಟಿಕೋನವು ಮುಂದಿನ ವೀರಶೈವ ಕವಿಗಳಿಗೆ ಸೋಪಾನವಾಗಿ ಪರಿಣಮಿಸಿತು. ಹೀಗಾಗಿ ವೀರಶೈವ ಕವಿಗಳಾದವರು ತಮಿಳುದೇಶದ ಶಿವಶರಣರ ಅಥವಾ ಬಸವಾದಿ ಪ್ರಮಥರ ಬದುಕನ್ನು ವಸ್ತುವಾಗಿಟ್ಟುಕೊಂಡು ಕಾವ್ಯ ರಚಿಸತೊಡಗಿದರು. ಈ ಶಿವಶರಣರ ಬದುಕನ್ನು ಚಿತ್ರಿಸುವ ಒಂದಾದರೂ ಕಾವ್ಯವನ್ನು ರಚಿಸುವುದು ಪ್ರತಿಯೊಬ್ಬ ವೀರಶೈವ ಕವಿಗೆ ಅಂತಿಮ ಗುರಿಯಾಗಿ ಪರಿಣಮಿಸಿತು.

ವೀರಶೈವ ಕವಿಗಳು ರಚಿಸಿದ ಕಾವ್ಯಗಳು ಹನ್ನೆರಡನೆಯ ಶತಮಾನದಲ್ಲಿ ಬದುಕಿದ್ದ ಶಿವಶರಣರನ್ನು ಕುರಿತಾಗಿದ್ದರೂ ಅವು ಆ ಶಿವಶರಣರ ಚಾರಿತ್ರಿಕ ಅಂಶಗಳನ್ನು ಸಮಗ್ರವಾಗಿ ದಾಖಲಿಸುವ ಕೃತಿಗಳಾಗಿಲ್ಲ. ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇಲ್ಲವೆ ಅದಕ್ಕೆ ಪೂರಕವಾಗಿರುವಂತೆ ಇರುವ ಶಿವಶರಣರ ಬದುಕಿನ ಘಟನೆಗಳು ಈ ಕಾವ್ಯಗಳಿಗೆ ವಸ್ತುವಾಗಿವೆ. ವೈಶಿಷ್ಟ್ಯವೆಂದರೆ ಈ ಘಟನಾವಳಿಗಳಿಗೆ ಪೌರಾಣಿಕ ಸ್ಪರ್ಶವನ್ನು ಕೊಟ್ಟ ವೀರಶೈವ ಕವಿಗಳು ಪುರಾಣಕಾವ್ಯದ ಸಾಂಪ್ರದಾಯಿಕ ಅಂಶಗಳನ್ನೆಲ್ಲ ತಮ್ಮ ಕಾವ್ಯಗಳಲ್ಲಿ ಒಡಮೂಡಿಸಿದ್ದಾರೆ. ಹೀಗಾಗಿ ಶಿವಶರಣರನ್ನು ಕುರಿತಾಗಿ ರಚಿಸಲ್ಪಟ್ಟ ಕಾವ್ಯಗಳು ಚರಿತ್ರೆ ಮತ್ತು ಪುರಾಣ ಎರಡೂ ಅಂಶಗಳನ್ನು ಮೇಳೈಸಿದವುಗಳು ಎಂಬುದು ಸ್ಪಷ್ಟವಾಗುತ್ತದೆ. ಈ ಕಾರಣದಿಂದಾಗಿ ಕಥಾನಾಯಕನು ಶಿವಾಂಶಸಂಭೂತನಾಗಿರುವುದು ಆವಶ್ಯಕ ಅಂಶ. ಇಲ್ಲಿಯ ನಾಯಕನು ಶಿವನ ಸಾನ್ನಿಧ್ಯದಲ್ಲಿ ಮೊದಲು ಇದ್ದುಕೊಂಡು ಗಣನಾಗಿರುತ್ತಾನೆ. ಶಾಪಗ್ರಸ್ತನಾಗಿಯೋ, ಶಿವನ ಆಜ್ಞೆಯನ್ನು ಹೊತ್ತವನಾಗಿಯೋ ಇಲ್ಲವೇ ಸಂಕಲ್ಪದಿಂದಾಗಿಯೋ ಭೂಲೋಕದಲ್ಲಿ ಜನ್ಮವೆತ್ತಿ ಬರುತ್ತಾನೆ. ಲೌಕಿಕರಂತೆ ಬದುಕು ನಡೆಸದೆ ಲೀಲೆಗಳನ್ನು ಪ್ರದರ್ಶಿಸುತ್ತ, ಲೌಕಿಕರನ್ನು ಉದ್ಧರಿಸುತ್ತ ಧರ್ಮಜಾಗೃತಿಯಲ್ಲಿ ಮುಂದುವರಿಯುತ್ತಾನೆ. ಹಾಗೂ ಕೊನೆಯಲ್ಲಿ ಕೈಲಾಸಕ್ಕೆ ಮರಳುತ್ತಾನೆ. ಹೀಗೆ

ವೀರಶೈವ ಕಾವ್ಯಗಳಲ್ಲಿ ಶಿವನು ಆದೇಶಿಸಿದ ಕಾರ್ಯವನ್ನು ಪೂರೈಸುವುದು ಹಾಗೂ ತನ್ನ ಸ್ಥಾನಕ್ಕೆ ಆ ಗಣನು ಮರಳುವುದು ಪ್ರತಿಯೊಂದು ಕಾವ್ಯದಲ್ಲಿ ನಾವು ಕಾಣುವ ಸಾಮಾನ್ಯ ಚೌಕಟ್ಟು. ಶಿವಶರಣರ ಈ ಕಾವ್ಯಗಳನ್ನು ಚರಿತ್ರೆರೂಪದ ಕಾವ್ಯಗಳೆಂದೂ, ಪುರಾಣಗಳೆಂದೂ ಹಲವಾರು ಕವಿಗಳು ಹೆಸರಿಸಿದ್ದರೆ ಹರಿಹರನು ಮಾತ್ರ ಆಯಾ ಕಥಾನಾಯಕನ ರಗಳೆ ಎಂದು ಹೆಸರಿಸುತ್ತಾನೆ. ಸಿದ್ಧರಾಮ ಚಾರಿತ್ರ, ಬಸವರಾಜ ಚಾರಿತ್ರ, ಪ್ರಭುದೇವರ ಪುರಾಣ, ಚೆನ್ನಬಸವ ಪುರಾಣ, ಆದಯ್ಯನ ರಗಳೆ, ಹಾವಿನಹಾಳ ಕಾಲ್ಲಯ್ಯನ ರಗಳೆ, ಮಹಾದೇವಿಯಕ್ಕನ ರಗಳೆ ಮುಂತಾಗಿ ಹೆಸರಿಸಿದ್ದನ್ನು ಕಾಣಬಹುದು.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣ ಹಾಗೂ ಆತನ ಸಮಕಾಲೀನ ಶಿವಶರಣರು ಚಾರಿತ್ರಿಕವಾಗಿ ಬಿಟ್ಟು ಹೋದ ಹಲವು ದಾಖಲೆಗಳು ಸಿಗುತ್ತವೆ. ಆದರೆ ಯಾವುದೆ ಒಂದು ವ್ಯಕ್ತಿಯ ಬಗೆಗಿನ ಸಮಗ್ರ ದಾಖಲೆ ಎಲ್ಲಿಯೂ ಸಿಗುವುದಿಲ್ಲ. ಹೀಗಾಗಿ ಶಿವಶರಣರ ಬದುಕಿನ ಚಾರಿತ್ರಿಕ ಅಂಶಗಳನ್ನು ಪೌರಾಣಿಕ ಮೂಲಗಳಿಂದ ಸಂಗ್ರಹಿಸಲಾಗುತ್ತಿದೆ. ಎಲ್ಲ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ. ಅದೆಂದರೆ, ಶರಣ-ಶರಣೆಯರಿಗೆಲ್ಲ ಅಲ್ಲಮಪ್ರಭು ಹಿರಿಯ ಮಾರ್ಗದರ್ಶಕನಾಗಿದ್ದಾನೆ, ಗುರುವಾಗಿದ್ದಾನೆ. ಅನೇಕ ವೀರಶೈವ ಕಾವ್ಯಗಳಲ್ಲಿ ಶರಣರ ಹಾಗೂ ಶರಣೆಯರ ಚಿತ್ರಣವನ್ನು ಕಾಣುತ್ತೇವಾದರೂ ಅಲ್ಲಮಪ್ರಭು ಕಾಣಿಸಿಕೊಂಡ ಕಡೆಯಲ್ಲೆಲ್ಲ ಹಿರಿಯವನ ಸ್ಥಾನದಲ್ಲಿಯೇ ಚಿತ್ರಣಗೊಂಡಿದ್ದಾನೆ. ಕಲ್ಯಾಣಕ್ರಾಂತಿಗೆ ಮೂಲಪ್ರೇರಕನಾದ ಬಸವಣ್ಣನಿಗೂ ಅಲ್ಲಮಪ್ರಭು ಗುರುಸ್ಥಾನದಲ್ಲಿ ನಿಂತು ಮಾರ್ಗದರ್ಶನ ಮಾಡಿರುವುದನ್ನು ಹಲವು ಕಾವ್ಯಗಳಲ್ಲಿ ಕಾಣುತ್ತೇವೆ. ಆದರೆ ಯಾವ ಕಾವ್ಯದಲ್ಲಿಯೂ ಅಲ್ಲಮಪ್ರಭುವನ್ನು ಭಕ್ತನ ಸ್ಥಾನದಲ್ಲಿ ಚಿತ್ರಿಸಿರುವುದನ್ನು ಕಾಣುವುದಿಲ್ಲ.

ಹಿರಿಯನಾದ ಅಲ್ಲಮಪ್ರಭುವನ್ನು ಶಾಪಗ್ರಸ್ತ ನಿರ್ಮಾಯಪ್ರಭುವೆಂದು ಹರಿಹರ ಕವಿ ಚಿತ್ರಿಸಿದ್ದರೆ ಇನ್ನು ಕೆಲವರು ಶಿವನ ಪ್ರತಿರೂಪವೆಂದು ಚಿತ್ರಿಸಿದ್ದಾರೆ. ವಚನಗಳಲ್ಲಿ ಶಿವಶರಣರ ಚಾರಿತ್ರಿಕ ಅಂಶಗಳನ್ನು ಹುಡುಕುವ ಪ್ರಯತ್ನಗಳು ಸಾಗಿದ್ದರೂ ಅವು ನಿಖರವಾಗಿ ಮೂಡಿ ಬರುವುದಿಲ್ಲ. ಹೀಗಾಗಿ ವೀರಶೈವ ಕಾವ್ಯಗಳಲ್ಲಿಯೇ ಸಾಧ್ಯವಾದಷ್ಟು ಮಟ್ಟಿಗೆ ಚಾರಿತ್ರಿಕ ಅಂಶಗಳನ್ನು ಕಲೆ ಹಾಕುವ ಪ್ರಯತ್ನ ಸಾಗಿದೆ.

ವೀರಶೈವ ಸಾಹಿತ್ಯದಲ್ಲಿ ಮಾತ್ರವಲ್ಲ ಕನ್ನಡ ಸಾಹಿತ್ಯದಲ್ಲಿಯೇ ಶ್ರೇಷ್ಠ ಕಾವ್ಯಗಳಲ್ಲೊಂದೆಂದು 'ಪ್ರಭುಲಿಂಗಲೀಲೆ'ಯನ್ನು ಅನೇಕರು ಮೆಚ್ಚಿದ್ದಾರೆ. ಭಕ್ತ ಕವಿ ಚಾಮರಸನಿಂದ ರಚಿಸಲ್ಪಟ್ಟ ಈ ಕಾವ್ಯದಲ್ಲಿ ಶಿವನ ಸಾನ್ನಿಧ್ಯದಲ್ಲಿ ಮೊದಲು ಇದ್ದುಕೊಂಡ ಗಣನೊಬ್ಬ ಶಾಪದಿಂದಾಗಲಿ, ಶಿವಾಜ್ಞೆಯನ್ನು ಪಡೆದಾಗಲಿ ಅಥವಾ ಸಂಕಲ್ಪದಿಂದಾಗಲಿ ಭೂಲೋಕಕ್ಕೆ ಬಂದು ಅಲ್ಲಮನಾಗಿಲ್ಲ. ಸಾಕ್ಷಾತ್ ಶಿವನೇ ತನ್ನ ಒಂದು ಅಂಶವನ್ನು ಭೂಲೋಕಕ್ಕೆ ಕಳಿಸಿಕೊಡುತ್ತಾನೆ. ಆ ಅಂಶವೇ ಅಲ್ಲಮನಾಗಿ ಬರುವುದು. ಅವನು ಭಕ್ತರನ್ನು ಉದ್ಧರಿಸಿ, ಲೋಕಕಲ್ಯಾಣವನ್ನು ಪೂರೈಸಿ ಕೈಲಾಸಕ್ಕೆ ಮರಳುತ್ತಾನೆ. ಹೀಗೆ 'ಪ್ರಭುಲಿಂಗಲೀಲೆ'ಯಲ್ಲಿ ಚಾಮರಸನು ಅನೇಕ ವೀರಶೈವ ಕವಿಗಳಿಗಿಂತ ಬೇರೆಯದೇ ಆದ ಎಳೆಯೊಂದನ್ನು ಹಿಡಿದುಕೊಂಡು ತನ್ನ ಕಾವ್ಯವನ್ನು ರಚಿಸಿದ್ದಾನೆ. ಈ ಪೌರಾಣಿಕ ಸ್ಪರ್ಶದಲ್ಲಿ ಉಳಿದ ವೀರಶೈವ ಕವಿಗಳ ರಚನೆಗಳಿಗಿಂತ ಭಿನ್ನವಾಗಿರುವ 'ಪ್ರಭುಲಿಂಗಲೀಲೆ'ಯ ಕಥಾನಾಯಕನನ್ನು ಹಾಗೂ ಕಾವ್ಯವನ್ನು ವಿಮರ್ಶಕರು ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಕಂಡಿದ್ದಾರೆ.

೨. ಷಟ್‌ಸ್ಥಲ ಮಾರ್ಗ

ಶಿವಶರಣರು ತಮ್ಮ ಅನುಭವದ ಭಿತ್ತಿಗೆ ಬಂದು ಅಪ್ಪಳಿಸಿದ ಅಂಶಗಳನ್ನು ದಾಖಲಿಸಿದ್ದು ಅವುಗಳನ್ನು ವಚನಗಳೆಂದು ಕರೆಯಲಾಗಿದೆ. ಈ ವಚನಗಳು ಅವರು ಕಾಯಕದ ನೆಲೆಯಲ್ಲಿ ನಿಂತು ಗ್ರಹಿಸಿದ ಬಹಿರಂಗದ ಅನುಭವಗಳು ಹಾಗೂ ಅಂತರಂಗದ ಅನುಭವಗಳು ಎಂದು ಎರಡು ವಿಧ. ಶರಣ ತತ್ತ್ವವನ್ನು ಗ್ರಹಿಸುವ ಹಾಗೂ ಆ ತತ್ತ್ವದಲ್ಲಿ ಮುಂದುವರೆಯುವ ವ್ಯಕ್ತಿ ಆಚಾರ-ವಿಚಾರ, ನಡೆ-ನುಡಿ ಮುಂತಾದವುಗಳೆಲ್ಲ ಹೇಗಿರಬೇಕೆಂಬುದನ್ನು ತಿಳಿಸುವ ವಚನಗಳು ಬಹಿರಂಗಾಚರಣೆಗೆ ಸಂಬಂಧಿಸಿದಂಥವುಗಳು. ಶರಣರು ಅಂತರಂಗದಲ್ಲಿ ಕಂಡುಂಡ ಅನುಭಾವದ ಅಂಶಗಳು ಅಂತರಂಗದ ವಚನಗಳು. ಈ ವಚನಗಳು ಅವರ ಭಕ್ತಿಯ ಮಟ್ಟದಲ್ಲಿ ಪ್ರಾರಂಭವಾಗಿ ಪರಿಪೂರ್ಣಾವಸ್ಥೆಯನ್ನು ತಲುಪುವ ವರೆಗಿನ ಪ್ರಗತಿಯನ್ನು ಸೂಚಿಸುವಂಥವುಗಳಾಗಿವೆ. ಈ ವಿಕಾಸದ ಮಾರ್ಗವನ್ನು ಅವರು ಆಚರಣೆಯಲ್ಲಿ ಮತ್ತು ಅನುಭಾವದಲ್ಲಿ ಕ್ರಮಿಸಿದ ಮೆಟ್ಟಲುಗಳ ರೂಪದಲ್ಲಿ ವಿಂಗಡಿಸಿದುದನ್ನು ಕಾಣುತ್ತೇವೆ. ಷಟ್‌ಸ್ಥಲಗಳೆಂದು ಕರೆಯಲ್ಪಡುವ ಅವುಗಳನ್ನು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಹಾಗೂ ಐಕ್ಯ ಎಂದು ವಿಂಗಡಿಸಲಾಗಿದೆ. ಈ ಆರೋಹಣ ಕ್ರಿಯೆಯನ್ನು ಮಾರ್ಗಕ್ರಿಯೆ ಹಾಗೂ

ಮೀರಿದ ಕ್ರಿಯೆ ಎಂದೂ ವಿಂಗಡಿಸಿದ್ದಾರೆ. ಬಹಿರಂಗದಲ್ಲಿ ಆಚರಿಸುವ ಕ್ರಿಯೆಗಳು ಮಾರ್ಗಕ್ರಿಯೆಗಳು. ಅವು ಭಕ್ತ, ಮಹೇಶ, ಪ್ರಸಾದಿ ಸ್ಥಲಗಳ ಆಚರಣೆಗಳು. ಅಂತರಂಗದಲ್ಲಿ ಕೈಗೊಳ್ಳುವ ಕ್ರಿಯೆಗಳು ಮೀರಿದ ಕ್ರಿಯೆಗಳು. ಅವು ಪ್ರಾಣಲಿಂಗಿ, ಶರಣ, ಐಕ್ಯ ಸ್ಥಲಗಳ ಆಚರಣೆಗಳು.[೧]

ಈ ಆರು ಸ್ಥಲಗಳ ಬಗ್ಗೆ ಮಗ್ಗೆಮಾಯಿದೇವ ಹಾಗೂ ಕೆರೆಯ ಪದ್ಮರಸ ಇವರ ಅಭಿಪ್ರಾಯಗಳನ್ನು ಕೆಳಗಿನಂತೆ ಸಂಗ್ರಹಿಸಲಾಗಿದೆ. ಅವರ ಅಭಿಪ್ರಾಯಗಳಲ್ಲಿ ವಿಷಯ ಸಾಮ್ಯತೆ ಇದ್ದರೂ ಶಬ್ದ ಪ್ರಯೋಗಗಳು ಮಾತ್ರ ಬೇರೆಬೇರೆಯಾಗಿವೆ.

ಭಕ್ತ

05071[illegible]

ಶರೀರ ಪ್ರಾಣಾದಿಗಳಲ್ಲಿ ಅಭಿಮಾನ ಬಿಟ್ಟು ಚಿತ್ತವನ್ನು ಸದ್ಭಕ್ತಿ, ಸತ್ಕಾರ್ಯಾಚರಣೆಯಲ್ಲಿ ಅಳವಡಿಸಿಕೊಂಡಿರುವುದು ಭಕ್ತನ ಲಕ್ಷಣ. (ಮಗ್ಗೆ ಮಾಯಿದೇವ)[೨]

ಸದಾಚಾರನಿರತನೂ ತನು-ಧನಗಳನ್ನು ಆದರಿಸದಿರುವವನೂ, ಗುರು-ಲಿಂಗ-ಜಂಗಮದಲ್ಲಿ ಸ್ಥಿರನಿಷ್ಠೆಯುಳ್ಳವನೂ, ಶರಣಲಾಂಛನದಲ್ಲಿ ಭಿನ್ನಭೇದವೆಣಿಸದವನೂ ಭಕ್ತನು. (ಕೆರೆಯ ಪದ್ಮರಸ)[೩]

ಮಹೇಶ

ಆಸ್ತಿಕ್ಯಬುದ್ಧಿ, ಲಿಂಗಪೂಜಾದಿಗಳಲ್ಲಿ ನಿಷ್ಠೆ, ಸತ್ಯ-ಶೌಚ-ಧರ್ಮಾಚರಣೆಗಳಿಂದ ಲಿಂಗದಲ್ಲಿ ವೀರವ್ರತಿಯಾಗಿರುವುದು ಮಹೇಶನ ಲಕ್ಷಣ. (ಮಗ್ಗೆ ಮಾಯಿದೇವ)[೪]

ಅನ್ಯಧನ, ಅನ್ಯವಧುವಿರಹಿತನೂ, ಲಿಂಗನಿಷ್ಠೈಕಪರನೂ, ಲಿಂಗಾಚಾರನಿರತನೂ ಆದವನು ಮಾಹೇಶ. (ಕೆರೆಯ ಪದ್ಮರಸ)[೫]

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

[illegible]

ಪ್ರಸಾದಿ

ಪ್ರತಿಯೊಂದು ಇಂದ್ರಿಯಮುಖದಿಂದಲೂ ಅನುಭವಿಸುವ ಪದಾರ್ಥಗಳನ್ನು ಲಿಂಗಾರ್ಪಣ ಮಾಡಿ ಅವಧಾನ ಭಕ್ತಿಯಿಂದ ಪ್ರಸಾದರೂಪವಾಗಿ ಪರಿಗ್ರಹಿಸುವುದು ಪ್ರಸಾದಿಯ ಲಕ್ಷಣ. (ಮಗ್ಗೆ ಮಾಯಿದೇವ)[೬]

ಅರ್ಪಿತ ಪದಾರ್ಥವನ್ನಲ್ಲದೆ ಅನರ್ಪಿತವನ್ನು ಆಶೆ ಮಾಡದವನೂ; ತನು ಸೋಂಕಿದ್ದನ್ನೆಲ್ಲ ಮನ ಮುಟ್ಟಿದ್ದನ್ನೆಲ್ಲ ಲಿಂಗಕ್ಕೆ ಎನ್ನಬಲ್ಲವನು ಪ್ರಾಸಾದಿ. (ಕೆರೆಯ ಪದ್ಮರಸ)[೭]

ಪ್ರಾಣ ಲಿಂಗಿ

ಪ್ರಾಣ–ಇಂದ್ರಿಯಾದಿಗಳಲ್ಲಿ ನಾನು, ನನ್ನದೆಂಬ ಮೋಹವನ್ನು ತ್ಯಜಿಸಿ, ಇದೆಲ್ಲವೂ ಲಿಂಗಮಯವೆಂದು ತಿಳಿದು ಲಿಂಗಮಾನಸನಾಗಿರುವುದು ಪ್ರಾಣಲಿಂಗಿಯ ಲಕ್ಷಣ. (ಮಗ್ಗೆ ಮಾಯಿದೇವ).[೮]

ತನುಗುಣವಿರಹಿತನಾಗಿ ಮನವನ್ನು ಘನದಲ್ಲಿ ಲೀನಗೊಳಿಸಿದವನೂ, ಪಾಪಪುಣ್ಯ ಭಾವನಾರಹಿತನೂ, ಲಿಂಗದಲ್ಲಿಯೆ ತನ್ನ ನಿಲವನ್ನು ಪಡೆದವನೂ ಪ್ರಾಣಲಿಂಗಿಯು. (ಕೆರೆಯೆ ಪದ್ಮರಸ)[೯]

ಶರಣ

ಜ್ಞಾನಪ್ರಕಾಶಬಲದಿಂದ ನಾನು–ನನ್ನದೇಹ–ಇಂದ್ರಿಯಗಳು ಲಿಂಗರೂಪವೆಂದು ಭಾವಿಸಿ, ವಿಷಯಗಳಿಂದ ಕೂಡಿದ್ದರೂ ವಿರುದ್ಧನಾಗಿ ಆನಂದಭಕ್ತಿಯಿಂದ ವಿಷಯಗಳಿಗೆ ಪ್ರಸಾದಸ್ವರೂಪವನ್ನು ಉಂಟು ಮಾಡಿಕೊಂಡಿರುವುದು ಶರಣನ ಲಕ್ಷಣ. (ಮಗ್ಗೆ ಮಾಯಿದೇವ)[೧೦]

ಲಿಂಗವೇ ಪತಿಯೆಂದು ಶಿವರತಿಯಲ್ಲಿರುವವನೂ ಜ್ಞಾನಭರಿತನೂ ಪಂಚೇಂದ್ರಿಯ ಪ್ರಪಂಚವನ್ನು ಹೊದ್ದದವನೂ ಶರಣನು. (ಕೆರೆಯ ಪದ್ಮರಸ)[೧೧]

ಐಕ್ಯ

ನಾನು, ನೀನು, ದೇಹ, ಮನ, ಪ್ರಾಣ, ಇಂದ್ರಿಯ, ಭೂತಗಳು–ಇವುಗಳ ಭೇದವು ಭ್ರಾಂತಿ. ಈ ಭೇದವು ನನ್ನಲ್ಲಿಲ್ಲ ಎಂಬ ಶಿವಾದ್ವೈತಭಾವದಿಂದ ಸಮರಸ ಭಕ್ತಿಯ ಸುಖಸ್ವರೂಪವನ್ನು ಪಡೆದಿರುವುದು ಐಕ್ಯನ ಲಕ್ಷಣ. (ಮಗ್ಗೆ ಮಾಯಿದೇವ)[೧೨]

ಷಡುವೂರ್ಮಿ, ಷಡ್ವರ್ಗಗಳಲ್ಲಿ ತೊಡರದವನೂ, ನಿರುತ ನಿರ್ವಾಣಪದದಲ್ಲಿ ನಿಂದವನೂ ತಾನು ಇದಿರು ಎಂಬ ಭೇದವನ್ನರಿಯದವನೂ ಆಗಿ, ಉರಿಯನಪ್ಪಿರ್ದ ಕರ್ಪುರದಂತೆ ಪರಲಿಂಗದಲ್ಲಿ ಎರವಳಿದಿರುವವನು ಐಕ್ಯ. (ಕೆರೆಯ ಪದ್ಮರಸ)[೧೩]

ಅಲ್ಲಮಪ್ರಭು ಒಂದು ವಚನದಲ್ಲಿ ಷಟ್‌ಸ್ಥಲಗಳ ವಿವರಣೆಯನ್ನು ಹೀಗೆ ಕೊಡುತ್ತಾನೆ. 'ಅಹಂಕಾರವಡಗಿದಾಗ ಭಕ್ತಸ್ಥಲ, ಚಿತ್ರಗುಣ ಕೆಟ್ಟಾಗ ಮಾಹೇಶ್ವರಸ್ಥಲ, ಬುದ್ಧಿಯ ಗುಣ ತೊರೆದಾಗ ಪ್ರಸಾದಿಸ್ಥಲ, ಮನೋಗುಣವಳಿದಾಗ ಪ್ರಾಣಲಿಂಗಿಸ್ಥಲ, ಜೀವನ ಗುಣ ಸಂದಾಗ ಶರಣಸ್ಥಲ, ಭಾವ ನಿರ್ಭಾವವಾದಾಗ ಐಕ್ಯಸ್ಥಲ'. [೧೪]

ಶಿವಾಗಮಗಳಲ್ಲಿ 'ವೀರಶೈವದ ಗುರಿ ಲಿಂಗಾಂಗಸಾಮರಸ್ಯ, ಶಿವಯೋಗ ಅದನ್ನು ಸಾಧಿಸುವ ಸಾಧನ ಹಾಗೂ ಶಿವಾನುಭವವು ಅದರ ಪರಿಣಾಮ' ಎಂದು ಹೇಳಲಾಗಿದೆ.[೧೫] ಆದರೆ ಮಂತ್ರ, ಲಯ, ಹಠ, ರಾಜಯೋಗಗಳು ಶಿವಯೋಗಕ್ಕೆ ಸಾಧನವೆನಿಸುವವು ಎಂದು ತಿಳಿಸಲಾಗಿದೆ.

ಶಿವಸಮಾನತೆಯಿಂದ ಕೂಡಿರುವ, ಶಿವಯೋಗಕ್ಕೆ, ಸಾಧನವಾಗುವ, ಯೋಗವೆಂಬ ಹೆಸರನ್ನು ತಾಳಿರುವ ಮಂತ್ರಾದಿ ಯೋಗಗಳು ನಾಲ್ಕು ವಿಧವೆಂದು ಹೇಳಲಾಗಿದೆ .

ಮಂತ್ರೋ, ಲಹೋ, ಹಠೋ ರಾಜಯೋಗಶ್ಚೇತಿ ಚತುರ್ವಿಧಂ
ತಮಾಹುಃ ಪೂರ್ವಮುನಯಸ್ಸಿದ್ಧಾಶ್ಯಾಂಭು ಪ್ರಚೋದಿತಾಃ ॥ [೧೬]

ಶಿವಶರಣರ ವಚನಗಳಲ್ಲಿ ಮೂಡಿ ಬಂದಿರುವ ಷಟ್‌ಸ್ಥಲಾಚರಣೆಯೆಂದರೆ ವೀರಶೈವಾಚರಣೆಯಾಗಿದೆ. ಈ ವೀರಶೈವಾಚರಣೆ ಎಂಬುದು ಒಂದು ಕಾಲ್ಪನಿಕ ವಿಚಾರವಲ್ಲ. ಅದು ಕೇವಲ ಬಾಹ್ಯಕ್ರಿಯಾಚರಣೆಗೆ ಸೀಮಿತವಾಗಿರದೆ ಅಂತರಂಗಾಚರಣೆಯೂ ಆಗಿದೆ. ಲಿಂಗಾನುಸಂಧಾನ

[illegible]

[illegible]

[illegible]

[illegible]

[illegible]

[illegible]

[illegible]

[illegible]

ಎಂದರೆ ಶಿವಯೋಗಾಚರಣೆ ಹಾಗೂ ವೀರಶೈವತ್ವ ಎಂದರೆ ಐಕ್ಯನ ಐಕ್ಯಸ್ಥಲ. ಬಸವಾದಿ ಪ್ರಮಥರ ಕಾಲದಲ್ಲಿ ಸ್ಪಷ್ಟವಾಗಿ ಇದು ನಿರೂಪಿತವಾಗಿದ್ದರಿಂದ ಇದನ್ನು ಬಸವಾದಿ ಪ್ರಮಥರ ಮಾರ್ಗ ಎಂದು ತಿಳಿಸಲಾಗಿದೆ. ಈ ಪ್ರಮಥರಿಗೆ ಅಲ್ಲಮಪ್ರಭು ಹಿರಿಯ ಮಾರ್ಗದರ್ಶಿಯಾಗಿದ್ದುದರಿಂದ ಅದು ಅಲ್ಲಮಪ್ರಭುಸಂಪ್ರದಾಯವೆಂದೂ ಪರಿಗಣಿಸಲ್ಪಟ್ಟಿದೆ. ಚಾಮರಸನು ಪ್ರಭುಲಿಂಗಲೀಲೆ ಕಾವ್ಯದಲ್ಲಿ ತಾನು ಅಲ್ಲಮಪ್ರಭು ಸಂಪ್ರದಾಯವನ್ನು ಪ್ರತಿಪಾದಿಸುತ್ತಿರುವುದಾಗಿ ತಿಳಿಸುತ್ತಾನೆ.[೧೭] ಇದನ್ನೇ ವೀರಶೈವ ದರ್ಶನ ಎಂದು ಕರೆಯಲಾಗಿದ್ದು ಷಟ್‌ಸ್ಥಲಗಳನ್ನು ಮುಂದೆ ನೂರೊಂದು ಉಪಸ್ಥಲಗಳಲ್ಲಿ ವಿಂಗಡಿಸಲಾಗಿದೆ. ಶಿವಯೋಗಿ ಶಿವಾಚಾರ್ಯ ಕೃತ 'ಸಿದ್ಧಾಂತ-ಶಿಖಾಮಣಿ' ಹಾಗೂ ಮಹಾಲಿಂಗದೇವರು ನಿರೂಪಿಸಿದ ಏಕೋತ್ತರ ಶತಸ್ಥಲ ಇವುಗಳಲ್ಲಿ ಉಕ್ತವಾದ ವೀರಶೈವ ಸಿದ್ಧಾಂತವನ್ನು ತೌಲನಿಕವಾಗಿ ಪರಾಮರ್ಶಿಸಿ ಇವೆರಡೂ ಗ್ರಂಥಗಳಲ್ಲಿ ನಿರೂಪಿತವಾದ ನೂರೊಂದು ಸ್ಥಲಗಳ ನಾಮನಿರ್ದೇಶ ಒಂದೇ ಬಗೆಯಾಗಿದೆಯೆಂದು ಡಾ. ಆರ್. ಸಿ. ಹಿರೇಮಠರು ಅಭಿಪ್ರಾಯ ಪಡುತ್ತಾರೆ.[೧೮]

ಚಾಮರಸನು 'ಪ್ರಭುಲಿಂಗಲೀಲೆ'ಯಲ್ಲಿ ಅಲ್ಲಮಪ್ರಭು ಸಂಪ್ರದಾಯವನ್ನು ನಿರೂಪಿಸ ಹೊರಟಿರುವುದರಿಂದ ಈ ಕಾವ್ಯವನ್ನು ಅಭ್ಯಸಿಸುವ ಮೊದಲು ಷಟ್‌ಸ್ಥಲಾಚರಣೆಗಳಿಂದ ಕೂಡಿರುವ 'ವೀರಶೈವ ದರ್ಶನ'ವನ್ನು ಅಭ್ಯಸಿಸಬೇಕು, ಅಂದರೆ ಶಿವಯೋಗವನ್ನು ಅಭ್ಯಸಿಸಬೇಕು. ಈ ಎಲ್ಲ ಅಂಶಗಳ ತಳಹದಿಯ ಮೇಲೆ ಚಾಮರಸನ ಕಾವ್ಯವನ್ನು ಲಕ್ಷಿಸಬೇಕು.

೩. ಯೋಗ ಎಂದರೇನು?

ಯೋಗ ಶಬ್ದವು ಸಂಯೋಗಾರ್ಥಕ 'ಯುಜಿರ್' ಹಾಗೂ ಏಕಾಗ್ರಾರ್ಥಕ 'ಯುಜ್' ಎಂಬ ಎರಡು ಧಾತುಗಳಿಂದ ಸಿದ್ಧವಾಗಿದೆ. ಇವುಗಳಲ್ಲಿ ಮೊದಲನೆಯ ಧಾತು ಯುಜಿರ್ ಸಾಧ್ಯವೆಂದು ಅರ್ಥವಾಗುತ್ತಿದ್ದರೆ ಎರಡನೆಯ ಧಾತು ಯುಜ್ ಸಾಧನವೆಂದು ಅರ್ಥ ಪಡೆಯುತ್ತದೆ. ಯಾಜ್ಞವಲ್ಕ್ಯ ಋಷಿಗಳು ಸಾಧ್ಯಯೋಗದ ಬಗೆಗೆ 'ಸಂಯೋಗೋಯೋಗ ಇತ್ಯಾಹುರ್ಜೀವಾತ್ಮ ಪರಮಾತ್ಮನೋ:"&ಅಂದರೆ 'ಜೀವಾತ್ಮ ಪರಮಾತ್ಮರ ಬೆರೆಯುವಿಕೆಯೇ ಯೋಗ' ಎಂದು ಹೇಳಿರುವರು.[೧೯]

[illegible]

[illegible]

[illegible]

[illegible]

ಇಂಥ ಯೋಗವನ್ನು ಮಾಡುವವರಾರು? ಸಂಕಲ್ಪ-ವಿಕಲ್ಪಗಳಲ್ಲಿ ಮುಳುಗಿರುವವರಿಗೆ ಯೋಗ ಸಿದ್ಧಿಸುವುದಿಲ್ಲ. ಆದುದರಿಂದ ಸಂಕಲ್ಪಗಳನ್ನು ತ್ಯಜಿಸದವನು ಯೋಗಿಯಾಗುವುದು ಸಾಧ್ಯವಿಲ್ಲ. ಸಮತ್ವಬುದ್ಧಿಯಿಂದ ಯೋಗದಲ್ಲಿ ಆರೂಢನಾಗಬಯಸುವ ಮನನಶೀಲ ಪುರುಷನು ನಿಷ್ಕಾಮಭಾವದಿಂದ ಮುಂದುವರಿಯಬೇಕಾಗುತ್ತದೆ. ಒಮ್ಮೆ ಯೋಗಾರೂಢನಾದವನಿಗೆ ಸರ್ವಸಂಕಲ್ಪಗಳಿಂದ ದೂರವಿರುವುದೇ ಕಲ್ಯಾಣ. ಹೀಗೆ ಸರ್ವಕಾಲಕ್ಕೂ ಇಂದ್ರಿಯಗಳಲ್ಲಾಗಲಿ, ಕರ್ಮಗಳಲ್ಲಾಗಲಿ ನಿರಾಸಕ್ತನಾಗುವವನನ್ನು ಯೋಗಿ ಎಂದು ಕರೆಯುತ್ತಾರೆ.[೨೦]

ಯೋಗವನ್ನು ಮೊದಲು ಚತುರ್ಮುಖ ಬ್ರಹ್ಮನೇ ವಿಸ್ತಾರವಾಗಿ ಹೇಳಿದನೆಂದೂ ಪತಂಜಲಿ ಮುನಿಯು ಅದನ್ನು ಭಾಗಶಃ ಮಾತ್ರ ಗ್ರಹಿಸಿದನೆಂದೂ ಕೆಳದಿ ಬಸವರಾಜನು ಅಭಿಪ್ರಾಯಪಡುತ್ತಾನೆ.[೨೧] 'ಯೋಗಶ್ಚಿತ್ತವೃತ್ತಿನಿರೋಧಃ' ಎಂಬ ಪತಂಜಲಿ ಮುನಿಯ ಉಕ್ತಿಯು ಸುಪ್ರಸಿದ್ಧವಾಗಿದೆ. ಚಿತ್ತವೃತ್ತಿಯನ್ನು ನಿರೋಧಿಸುವುದೇ ಯೋಗ ಎನ್ನುವುದು ಇದರರ್ಥ. ಯೋಗದ ಅಣುರೂಪದ ವಿಶ್ವಕೋಶವಾಗಿರುವ ಈ ಉಕ್ತಿಯ ಅರ್ಥವನ್ನು ಇಡಿಯಾಗಿ ಗ್ರಹಿಸಬೇಕಾದರೆ ಚಿತ್ತ, ಚಿತ್ತವೃತ್ತಿ ಮತ್ತು ಚಿತ್ತವೃತ್ತಿನಿರೋಧ ಈ ಶಬ್ದಗಳ ಸ್ಪಷ್ಟ ಅರ್ಥವನ್ನು ಗ್ರಹಿಸುವುದು ಅವಶ್ಯ.

ಚಿತ್ತ, ಮನಸ್ಸು, ಬುದ್ಧಿ ಮತ್ತು ಅಹಂಕಾರ ಇವುಗಳನ್ನು ಕರಣ ಚತುಷ್ಟಯವೆಂದು ಗುರುತಿಸುತ್ತಾರೆ.[೨೨] ಪಾಶ್ಚಾತ್ಯ ಮನಃಶಾಸ್ತ್ರಜ್ಞರು ಮನಸ್ಸು (mind) ಎಂದು ಯಾವುದನ್ನು ಗ್ರಹಿಸಿದ್ದಾರೋ ಅದನ್ನು ಭಾರತೀಯ ಯೋಗಶಾಸ್ತ್ರಜ್ಞರು ಚಿತ್ತ ಮತ್ತು ಮನಸ್ಸು ಎಂದು ಎರಡು ಭಾಗಗಳಲ್ಲಿ ವಿಭಜಿಸಿ ಅವುಗಳ ಕಾರ್ಯಕ್ಷೇತ್ರಗಳ ಸಾಧ್ಯಾಸಾಧ್ಯತೆಗಳನ್ನು ವಿವರಿಸಿದ್ದಾರೆ.

ಚೆನ್ನಬಸವಣ್ಣ 'ಕರಣಹಸಿಗೆ'ಯಲ್ಲಿ 'ಆತ್ಮನು ವಾಯುವೆಂಬ ಮಹಾಭೂತವ ಬೆರಸಿದಡೆ ಮನಸ್ಸು ಹುಟ್ಟಿತ್ತು' ಎಂದು ತಿಳಿಸುತ್ತ 'ಅದೇ ಆತ್ಮನು ಪೃಥ್ವಿಯೆಂಬ ಮಹಾಭೂತವ ಬೆರೆಸಿದಡೆ ಚಿತ್ತು ಹುಟ್ಟಿತ್ತು' ಎಂದು ತಿಳಿಸುತ್ತಾನೆ. ಮೂಲ ಪಂಚೀಕರಣದಲ್ಲಿಯೇ ಮನಸ್ಸು ಮತ್ತು ಚಿತ್ತು ಇವುಗಳಿಗೆ ವ್ಯತ್ಯಾಸವಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಮನಸ್ಸಿಗೆ ಚಂದ್ರನು ಅಧಿದೇವತೆಯಾಗಿದ್ದು ಅಲ್ಲಿ ಸಂಕಲ್ಪ-ವಿಕಲ್ಪಗಳನ್ನು ಮಾಡಿಸುತ್ತಿದ್ದರೆ ಚಿತ್ತಕ್ಕೆ ಬ್ರಹ್ಮನು ಅಧಿದೇವತೆಯಾಗಿದ್ದು ಆನಂದಿಸುತ್ತಿಹುದು ಎಂದು ಚೆನ್ನಬಸವಣ್ಣ ಮುಂದುವರೆಯುತ್ತಾನೆ.[೨೩] ಅಂದರೆ ಮನಸ್ಸಿನ ವೃತ್ತಿ ಸಂಕಲ್ಪ-ವಿಕಲ್ಪಗಳನ್ನು

[illegible]

[illegible]

[illegible]

[illegible]

ಮಾಡುವುದಾಗಿದ್ದರೆ ಚಿತ್ತದ ವೃತ್ತಿ ಆನಂದಿಸುವುದಾಗಿದೆ. ಇವೆರಡೂ ಪರಸ್ಪರ ವ್ಯತ್ಯಾಸ ತೋರುವ ಗುಣಗಳು. ಡಾ. ಆರ್. ಸಿ. ಹಿರೇಮಠರು ವಿಶ್ವದ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವಲ್ಲಿ ಅಂತಃಕರಣಗಳು ಐದು ಎಂದು ಹೇಳುತ್ತ ಅವು ಅಹಂಕಾರ, ಮನಸ್ಸು, ಬುದ್ಧಿ, ಪ್ರಕೃತಿ ಮತ್ತು ಪುರುಷ ಎಂದು ತಿಳಿಸುತ್ತಾರೆ.[೨೪] ಈ ವ್ಯಾಖ್ಯಾನವನ್ನು ಸೂಕ್ಷ್ಮವಾಗಿ ಗಮನಿಸಿದರೆ 'ಚಿತ್' ಎಂಬ ಕರಣವೇ ಇಲ್ಲಿ ಪ್ರಕೃತಿ ಮತ್ತು ಪುರುಷ ಎಂದು ಎರಡು ವಿಧವಾಗಿ ವಿಭಜಿಸಲ್ಪಟ್ಟಿರುವುದು ಸ್ಪಷ್ಟವಾಗುತ್ತದೆ.

ಪರಶಿವನು ಐದು ಮುಖಗಳನ್ನು ಹೊಂದಿದ್ದಾನೆಂದು ತಿಳಿಸಲಾಗಿದ್ದು ಈ ಮುಖಗಳಿಂದ ಸತ್, ಚಿತ್, ಆನಂದ, ನಿತ್ಯ ಹಾಗೂ ಪರಿಪೂರ್ಣ ಇವು ಹುಟ್ಟಿವೆಯೆಂದು ತಿಳಿಸಲಾಗಿದೆ. ವಚನಕಾರರೂ ಈ ಅಭಿಪ್ರಾಯವನ್ನು ವಚನಗಳಲ್ಲಿ ವ್ಯಕ್ತ ಪಡಿಸುತ್ತಾರೆ.[೨೫] ಇದನ್ನು ಒಪ್ಪಿಕೊಂಡಿರುವ ಕೇವಲಾದ್ವೈತಿಗಳು ಈ ಪರಮಾತ್ಮನು ನಿರ್ವಿಶೇಷನಾಗಿರುವನೆಂದೂ ಅವನು ಸಚ್ಚಿದಾನಂದ ನಿತ್ಯಪರಿಪೂರ್ಣನೆಂದೂ ಈ ಜಗತ್ತು ಮಿಥ್ಯಾರೂಪವಾಗಿ ಸತ್ಯಸ್ವರೂಪದ ಪರಬ್ರಹ್ಮದಲ್ಲಿ ಅಧ್ಯಾಸವಾಗಿರುವುದೆಂದೂ ಹೇಳುತ್ತಾರೆ.[೨೬]

ಪರಶಿವನ ಐದು ತತ್ತ್ವಗಳಲ್ಲಿ ಒಂದಾದ 'ಚಿತ್' ಇದು ಅಂತಃಕರಣಗಳಲ್ಲಿಯೂ ಗಣಿಸಲ್ಪಟ್ಟಿರುವುದರಿಂದ ಅದು ಎರಡು ಕಡೆಗಳಲ್ಲಿಯೂ ತನ್ನ ಆ ಗುಣಗಳನ್ನು ಹೊಂದಿ ಲಕ್ಷಣಗಳಲ್ಲಿಯೂ ಸಮಾನತೆಯನ್ನು ಹೊಂದಿರಬೇಕು. ಈ ಅಂಶಗಳನ್ನು ತಿಳಿಯುವುದಕ್ಕಿಂತ ಮೊದಲು ಚಿತ್ತದ ಸ್ವರೂಪ–ಲಕ್ಷಣಗಳನ್ನು ತಿಳಿಯೋಣ.

ಚಿದಾನಂದಾವಧೂತನು 'ಜ್ಞಾನಸಿಂಧು'ದಲ್ಲಿ ಚಿತ್ತನ್ನು ವಿಶ್ಲೇಷಿಸುವುದಕ್ಕಾಗಿ 'ಚಿದ್ವಿವೇಕ' ಎಂಬ ಪೂರ್ಣ ಅಧ್ಯಾಯವನ್ನೇ ಮೀಸಲಿರಿಸಿದ್ದಾನೆ. ಅವನ ಪ್ರಕಾರ ಚಿದ್ವಿವೇಕವೆಂಬುದು ಶುದ್ಧವಾಗಿಯೂ, ಆನಂದಸ್ವರೂಪವಾಗಿಯೂ ಇರುವುದು. ಅದು ಪರಮಾತ್ಮನನ್ನು ಹೊಂದಲು ಜ್ಞಾನಸಂಪಾದನೆ ಮಾಡಿ ಕೊಡುವ ಕೀಲಿನಂತೆ ಇರುವುದು.[೨೭] ಈ ಚಿದ್ವಿವೇಕವೆಂದರೆ ಸಾಧಕನಾದ ಭಕ್ತನು ತನ್ನ ಹೃದಯದಲ್ಲಿ ಹೊಳೆಯುತ್ತಿರುವ ಜ್ಞಾನದ ಕಾಂತಿಯನ್ನು ಹುಡುಕುವ ವಿವೇಕವು.[೨೮] ಆ ಜ್ಞಾನ ಸ್ವರೂಪನಾದ ಆತ್ಮಕ್ಕೇನೇ ಚಿತ್ತೆಂದು ಹೆಸರು, ಚಿತ್ತು ಹಾಗೂ ಆತ್ಮ ಎರಡೂ ಒಂದೇ. ಪರ್ಯಾಯವಾಗಿ ಚಿತ್ತೇ ಆತ್ಮನು ಅಥವಾ ಆತ್ಮನೇ ಚಿತ್ತು. ಸತ್ಯವಸ್ತುವಾದ ಪರಮಾತ್ಮನೇ ಚಿತ್ತೆನಿಸಿಕೊಳ್ಳುವನು.[೨೯] ಮನಸ್ಸೆಂಬುದು ಕಾಂತಿಮಯವಾದ ಕನ್ನಡಿ. ಆ ಕನ್ನಡಿಗೆ ಆವರಣದಂತೆ ನಿದ್ರೆ ಕವಿದಿರುವುದು. ಆ ಆವರಣವನ್ನು ಕಳಚಿ

[illegible]

[illegible]

[illegible]

[illegible]

[illegible]

ಎದುರಿಗಿಟ್ಟು ನೋಡಿದರೆ ಜಾಗ್ರತೆ, ಆವರಣವನ್ನು ತೊಡಿಸಿದ್ದರೆ ಸ್ವಪ್ನವು. ಮನಸ್ಸು ಅಭಿಲಾಷೆಗಳನ್ನು ಬಯಸುತ್ತಿರುವುದು. ಇದರ ವ್ಯವ್ಯಹಾರಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುತ್ತಿರುವ ಪ್ರಭುವೇ ಪರಮಾತ್ಮನು ಹಾಗೂ ಆ ಪರಾತ್ಪರ ವಸ್ತುವೇ ಚಿತ್ತು.[೬೦]

ಹೀಗೆ ಪರಮಾತ್ಮನ ಸ್ವರೂಪವು ಪ್ರಕಾಶವೇ ಆಗಿದೆ. ಚೆನ್ನಸದಾಶಿವಯೋಗಿಯು ಇದನ್ನು ಹೀಗೆ ವರ್ಣಿಸುತ್ತಾನೆ –

ನಿರಾಕಾರವಾಗಿರುವ, ಸಮಸ್ತ ಬ್ರಹ್ಮಾಂಡವನ್ನು ತುಂಬಿಕೊಂಡಿರುವ, ಪರಮಾತ್ಮ ಸ್ವರೂಪನಾಗಿರುವ ಹಾಗೂ ಪರಬ್ರಹ್ಮ ಎಂದೆನಿಸಿಕೊಳ್ಳುವ ಪರಮಪ್ರಕಾಶಿಕೆಯಾದ ಮಹಾಜ್ಞಾನಶಕ್ತಿಯೊಡನೆ ಕೂಡಿ ನಿರ್ಮಲ ಸ್ವರೂಪನಾಗಿರುವ ಒಬ್ಬ ದೇವನಿದ್ದಾನೆ.[೬೧] ನಿಜಗುಣ ಶಿವಯೋಗಿಯು ಇದು ಅತಿ ಶ್ರೇಷ್ಠವಾದ ಪ್ರಕಾಶವೆಂದು ತಿಳಿಸುತ್ತಾನೆ.[೬೨] ಸರ್ಪಭೂಷಣ ಶಿವಯೋಗಿಯು ಇದು ಥಳಥಳಿಸುವ ಶಶಿಸೂರ್ಯಕೋಟಿಯಂತೆ ಕಾಣುತ್ತದೆಯೆಂದು ತಿಳಿಸುತ್ತಾನೆ.[೬೩] ಈ ಪರಶಿವನನ್ನು ಶಿವಶರಣರು ತಮ್ಮ ವಚನಗಳಲ್ಲಿ 'ಕೋಟಿಸೂರ್ಯಪ್ರಭೆ' ಎಂದು ಸೂಚಿಸುತ್ತಾರೆ. ಬಸವಣ್ಣ ಐಕ್ಯಸ್ಥಲದ ವಚನವೊಂದರಲ್ಲಿ 'ಕೋಟಿಸೂರ್ಯಪ್ರಭೆಯ ಬೆಳಗಿನ ಸಹಸ್ರ ಕಿರಣದ ಅಗ್ರಪಟಲದ ಬೆಳಗು ಕೂಡಲಸಂಗಯ್ಯನು' ಎಂದು ಇದನ್ನು ಇಡಿಯಾಗಿ ಪುರಸ್ಕರಿಸುತ್ತಾನೆ.[೬೪]

ಕೋಟಿಸೂರ್ಯಪ್ರಭೆಯ ರೂಪದಲ್ಲಿ ಬ್ರಹ್ಮಾಂಡವನ್ನು ವ್ಯಾಪಿಸಿರುವ ಪರಮಾತ್ಮನು ಪಿಂಡಾಂಡದಲ್ಲಿ ಜೀವಾತ್ಮಸ್ವರೂಪದಲ್ಲಿರುತ್ತಾನೆಂಬುದನ್ನು ನೋಡಿದ್ದೇವೆ. ಪಿಂಡಾಂಡದಲ್ಲಿರುವ ಈ ಆತ್ಮನ ಸ್ವರೂಪ ಹೇಗಿದೆ? ಅಂಗುಷ್ಠ ಪರಿಮಾಣವುಳ್ಳವನೂ ಅಂತರಾತ್ಮನೂ ಆದ ಪುರುಷನು ಜನರ ಹೃದಯದಲ್ಲಿ ಯಾವಾಗಲೂ ಇರುತ್ತಾನೆಂದು ಕಠೋಪನಿಷತ್ ತಿಳಿಸುತ್ತದೆ. ೬೫ ಹಾಗಾದರೆ ಬೆಳಕಿನ ಒಂದು ಚಿಕ್ಕ ತುಣುಕಾಗಿರುವ ಈ ಪರಮಾತ್ಮನ ಅಂಶವಾದ ಚಿತ್ತು ಹೇಗೆ ಕಾರ್ಯ ನಿರ್ವಹಿಸುತ್ತದೆ?

ಛಾಯಾಚಿತ್ರಗ್ರಹಣ ವ್ಯವಸ್ಥೆಯನ್ನು ಈಗ ಲಕ್ಷಿಸುವುದು ಸರಿಯೆಂದು ತೋರುತ್ತದೆ. ಕ್ಯಾಮರಾ (camera) ಎಂದು ಕರೆಯಲ್ಪಡುತ್ತಿರುವ ಉಪಕರಣದಲ್ಲಿ ಒಂದು ಪೀನಮಸೂರವಿರುತ್ತದೆ. ಅದನ್ನು ವಸ್ತುಮಸೂರ ಎನ್ನುತ್ತಾರೆ. ಆ ಮಸೂರದ ಮುಖಾಂತರ ಬಾಹ್ಯ ವಸ್ತುವಿನಿಂದ ತೂರಿಬರುವ ಪ್ರಕಾಶ ಕಿರಣಗಳು ಒಂದು ಪಟಲದ ಮೇಲೆ ಸಂಗ್ರಹವಾಗಿ ವಸ್ತುವಿನ ಪ್ರತಿಬಿಂಬವನ್ನು ಉಂಟುಮಾಡುತ್ತವೆ. ಈ

ಪಟಲದ ಸ್ಥಾನದಲ್ಲಿ ಛಾಯಾಚಿತ್ರವನ್ನು ಗ್ರಹಿಸುವ ಹಾಗೂ ರಾಸಾಯನಿಕ ಕ್ರಿಯೆಗೆ ಒಳಪಡಿಸಿದಾಗ ಸುದೀರ್ಘಕಾಲ ಆ ಪ್ರತಿಬಿಂಬವನ್ನು ಉಳಿಸಿಕೊಳ್ಳುವ ಫಿಲ್ಮ(film)ನ್ನು ಉಪಯೋಗಿಸಿದರೆ ಛಾಯಾಚಿತ್ರವನ್ನು ನಾವು ಯಾವಾಗ ಬೇಕಾದರೂ ನೋಡಬಹುದು.

ಈ ಕ್ಯಾಮರಾ ವ್ಯವಸ್ಥೆಯಲ್ಲಿ ಒಂದು ತತ್ತ್ವವಿದೆ. ಯಾವ ವಸ್ತುವಿನ ಛಾಯಾಚಿತ್ರ ಪಡೆಯಬೇಕಾಗಿದೆಯೋ ಆ ವಸ್ತು ಬೆಳಕಿನ ಕಿರಣಗಳನ್ನು ತನ್ನಿಂದ ಕಳುಹಿಸಬೇಕು. ಆಗ ಮಾತ್ರ ಛಾಯಾಚಿತ್ರ ಲಭ್ಯವಾಗುತ್ತದೆ. ಈ ವ್ಯವಸ್ಥೆಯಲ್ಲಿ ಕೊರತೆ ಎನಿಸಿದಾಗಲೆಲ್ಲ ಪ್ರಖರ ಬೆಳಕನ್ನು ವಸ್ತುವಿನ ಮೇಲೆ ಕೇಂದ್ರೀಕರಿಸಿ ಛಾಯಾಚಿತ್ರ ಪಡೆಯುವುದನ್ನು ಕಾಣುತ್ತೇವೆ.

ಚಿತ್ತನ್ನು ಈ ಫೋಟೋ ಫಿಲ್ಮಿಗೆ ಹೋಲಿಸಬಹುದು. ಕಣ್ಣೆಂಬ ಮಸೂರವನ್ನು ಸಾಧನ ಮಾಡಿಕೊಂಡು ಹೊರಗಿನ ವಸ್ತುವಿನ ಬಿಂಬವನ್ನು ಅಕ್ಷಿಪಟಲದ ಮೇಲೆ ಪಡೆದುಕೊಂಡಾಗ ಆ ವಸ್ತುವಿನ ಜ್ಞಾನವಾಗುತ್ತದೆ. ನರಗಳ ಮೂಲಕ ಈ ಪ್ರಜ್ಞೆ ಮೆದುಳಿಗೆ ಸಾಗಿಸಲ್ಪಟ್ಟು ವಸ್ತುಜ್ಞಾನವಾಗುತ್ತದೆಂಬುದು ವೈಜ್ಞಾನಿಕ ವಿಶ್ಲೇಷಣೆ. ಹಾಗಾದರೆ 'ಪ್ರಜ್ಞೆಯು ಗ್ರಹಿಸಲ್ಪಡುವುದು ಅಂತಿಮವಾಗಿ ಯಾವುದರಿಂದ?' ಎಂಬ ಸಮಸ್ಯೆ ತಲೆದೋರುತ್ತದೆ. ಯೋಗಶಾಸ್ತ್ರವು ಇದು 'ಜೀವಾತ್ಮ' ಎಂದು ಸೂಚಿಸುತ್ತದೆ.[೩೬]

ಈಗಾಗಲೇ ನೋಡಿರುವಂತೆ ಜೀವಾತ್ಮನು ಚಿತ್ತದ ರೂಪದಲ್ಲಿರುತ್ತಾನೆಂಬುದು ಹಾಗೂ ಪ್ರಕಾಶಪಡಿಸುವುದು ಆತನ ಗುಣವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ಈ ಪ್ರಕಾಶ ಪಡಿಸುವಿಕೆಯು ಚಿತ್ತದಲ್ಲಿ ತನ್ನಷ್ಟಕ್ಕೆ ತಾನೇ ನಡೆಯುವ ಒಂದು ಪ್ರಕ್ರಿಯೆ. ವಸ್ತು ಬೆಳಕಿನಲ್ಲಿದ್ದರೂ ಸರಿ, ಇಲ್ಲದಿದ್ದರೂ ಸರಿ–ಚಿತ್ತದಲ್ಲಿ ವಸ್ತುಜ್ಞಾನವಾಗುವುದು ನಿಶ್ಚಿತ. ಈ ತತ್ತ್ವದ ಹಿನ್ನಲೆಯಲ್ಲಿಯೇ ಯೋಗಶಾಸ್ತ್ರಜ್ಞರು ಕನಸಿನ ದೃಶ್ಯಗಳನ್ನು ಹಾಗೂ ಸ್ಮರಣೆಗಳನ್ನು ವಿಶ್ಲೇಷಿಸುವುದು.

ನಾವು ಈ ಹಿಂದೆ ಕಂಡ ದೃಶ್ಯಗಳು ಚಿತ್ತದಲ್ಲಿ ಫೋಟೋ ಫಿಲ್ಮಗಳಂತೆ ಸಂಗ್ರಹವಾಗಿರುತ್ತವೆ. ಈ ಫಿಲ್ಮಗಳನ್ನು ಇಂದ್ರಿಯಗಳು ಗ್ರಹಿಸಬೇಕಾದರೆ ಮನಸ್ಸು ಸಾಧನವಾಗಬೇಕು. ಮನಸ್ಸು ಚಿತ್ತದ ಮೇಲೆ ಕಾರ್ಯವೆಸಗಿ ಅದರ ಭಂಡಾರದಲ್ಲಿರುವ ದೃಶ್ಯಗಳನ್ನು ಹೊರತೆಗೆದು ಒದಗಿಸಿದಾಗ ಇಂದ್ರಿಯಗಳಿಗೆ

ಅವುಗಳ ಪ್ರಜ್ಞೆ ಮೂಡುತ್ತದೆ. ಜೀವಾತ್ಮನು ದೇಹದಿಂದ ಹೊರಹೋದನೆಂದರೆ ಅದು ಪಾರ್ಥಿವ ಶರೀರ. ಅಂದರೆ ಚಿತ್ತೇ ಇಲ್ಲದ ಪಂಚಭೂತಗಳು ಅಲ್ಲಿ ಉಳಿಯುತ್ತವೆ. ಇದು ಮರಣ ಹೊಂದಿದ ಸ್ಥಿತಿ.

ಪ್ರಕೃತಿಯಲ್ಲಿ ಅದ್ಭುತವಾದ ಶಕ್ತಿ ವ್ಯಕ್ತವಾಗಿದ್ದರೂ ಅದಕ್ಕೆ ಸ್ವಯಂ ಪ್ರಭೆ ಇಲ್ಲ, ಮೂಲಚೈತನ್ಯವಿಲ್ಲ. ಪುರುಷನೊಬ್ಬನೇ ಸ್ವಯಂಪ್ರಭೆಯಿಂದ ಕೂಡಿರುವನು.[೩೭] ಪ್ರಾಣಿಗಳ ಒಳಗೂ ಹೊರಗೂ ಪ್ರಾಣವಾಯು ಸೇರಿಕೊಂಡು ಬೆಳಗುವಂತೆ ಪ್ರಕೃತಿಯ ಒಳಗೂ ಪುರುಷನು ಸೇರಿಕೊಂಡು ಸಾಕ್ಷಿಯಾಗಿ ಪ್ರಕಾಶಿಸುತ್ತಿರುವನು.[೩೮] ಆಯಸ್ಕಾಂತ ಶಿಲೆಯ ಸಾನ್ನಿಧ್ಯದಲ್ಲಿ ಕಬ್ಬಿಣದ ಸೂಜಿಯು ಚಲಿಸುತ್ತಿರುವಂತೆ ಪುರುಷನ ತೇಜಸ್ಸಿನಿಂದ ಪ್ರಕೃತಿಯು ಚಲಿಸುತ್ತಿರುವುದು.[೩೯] ಹೀಗೆ ಮನಸ್ಸನ್ನು ಸಾಧನ ಮಾಡಿಕೊಂಡು ಜಾಗ್ರ, ಸ್ವಪ್ನ, ಸುಪ್ತಿ ಇವುಗಳನ್ನೆಲ್ಲ ದಾಖಲಿಸಿಕೊಳ್ಳುವುದು ಪುರುಷಲಕ್ಷಣದ ಚಿತ್ತು.

೪. ಚಿತ್ತವೃತ್ತಿ ಎಂದರೇನು?

ಚಿತ್ತದ ಆಲೋಚನಾ ತರಂಗಗಳಿಗೆ 'ವೃತ್ತಿ' ಎಂದು ಹೆಸರು. ಆಕರ್ಷಣ ಮತ್ತು ವಿಕರ್ಷಣದಂತೆ ಆಲೋಚನೆಯೂ ಒಂದು ಶಕ್ತಿ. ಪ್ರಕೃತಿಯಲ್ಲಿರುವ ಅನಂತ ಶಕ್ತಿಯ ಗಣಿಯಿಂದ ಚಿತ್ತವೆಂಬ ಯಂತ್ರವು ಕೆಲವನ್ನು ತೆಗೆದುಕೊಂಡು ಅದನ್ನು ತನ್ನಲ್ಲಿ ಜೀರ್ಣಿಸಿ ಆಲೋಚನೆಯಂತೆ ಹೊರಗೆ ಕಳುಹಿಸುವುದು.[೪೦] ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ನಿಜವಾದ ಮನುಷ್ಯನು ಮನಸ್ಸಿನ ಹಿಂದೆ ಇರುವನು. ಮನಸ್ಸೆಂಬುದು ಆತನ ಕೈಯಲ್ಲಿ ಒಂದು ಯಂತ್ರ ಹಾಗೂ ಆತನ ಚೇತನವು ಆ ಮನಸ್ಸಿನ ಮೂಲಕ ಜಿನುಗುತ್ತದೆ. ನೀರು ಬಗ್ಗಡವಾಗಿದ್ದರೆ ಅಥವಾ ಸದಾ ಕಾಲದಲ್ಲಿಯೂ ಕಲಕಿದ್ದರೆ ತಳಭಾಗವನ್ನು ನೋಡಲಾಗುವುದಿಲ್ಲ. ಅದು ತಿಳಿಯಾಗಿ ಅಲೆ ಇಲ್ಲದಾಗ ತಳಭಾಗವನ್ನು ನೋಡಬಹುದು. ಜಲಾಶಯದ ತಳಭಾಗವೇ ನಿಜವಾದ ಆತ್ಮ, ಜಲಾಶಯವೇ ಚಿತ್ತ ಹಾಗೂ ಅಲೆಗಳೇ ವೃತ್ತಿ.[೪೧] ಮುಂದುವರೆಯುತ್ತ ಸ್ವಾಮಿಗಳು ತಿಳಿಸುವುದೇನೆಂದರೆ ಚಿತ್ತವು ಯಾವಾಗಲೂ ತನ್ನ ಸ್ವಾಭಾವಿಕ ಉತ್ತಮ ಸ್ಥಿತಿಗೆ ಹೋಗುವುದಕ್ಕೆ ಪ್ರಯತ್ನಿಸುತ್ತಿರುವುದು, ಆದರೆ ಇಂದ್ರಿಯಗಳು ಅದನ್ನು ಹೊರಗೆ ಸೆಳೆಯುತ್ತವೆ. ಇಂದ್ರಿಯಗಳನ್ನು ನಿಗ್ರಹಿಸಿ ಹೊರಗೆ ಹೋಗುವ ಮನಸ್ಸಿನ ಸ್ವಭಾವವನ್ನು ನಿಲ್ಲಿಸಿ ಅದನ್ನು ಚೇತನಾತ್ಮನ ಕಡೆಗೆ ತಿರುಗುವಂತೆ ಮಾಡುವುದೇ ಯೋಗದಲ್ಲಿ ಮೊದಲನೆಯ ಕೆಲಸ. ಏಕೆಂದರೆ ಹಾಗೆ ಮಾಡಿದರೆ ಮಾತ್ರ ಚಿತ್ತ ತನ್ನ ದಾರಿಗೆ ಬರಲು ಸಾಧ್ಯ.[೪೨]

[illegible]

[illegible]

[illegible]

[illegible]

ಡಾ. ಆರ್. ಸಿ. ಹಿರೇಮಠರು ವಿವಿಧ ವೃತ್ತಿಗಳು ಚಿತ್ತದಲ್ಲಿ ತಲೆದೋರುತ್ತವೆಯೆಂದು ತಿಳಿಸುತ್ತ ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕ್ಷಿಪ್ತ, ಮೂಢ, ವಿಕ್ಷಿಪ್ತ, ಏಕಗ್ರಹಣ ಹಾಗೂ ನಿರುದ್ಧ ಎಂದು ಹೆಸರಿಸಿರುತ್ತಾರೆ. ಇವುಗಳಲ್ಲಿ ಕ್ಷಿಪ್ತವು ಬಾಹ್ಯವಸ್ತುಗ್ರಹಣದಲ್ಲಿ ಪಾತ್ರವಹಿಸುವ ವೃತ್ತಿಯೆಂದೂ; ಮೂಢವು ತಮೋಗುಣಯುಕ್ತವಾಗಿದೆಯೆಂದೂ; ವಿಕ್ಷಿಪ್ತವು ಸತ್ವ–ರಜಗಳಿಂದ ಕೂಡಿದೆಯೆಂದೂ ಹಾಗೂ ಏಕಗ್ರಹಣ, ನಿರುದ್ಧಗಳು ಸತ್ವಗುಣಕ್ಕೆ ಸಂಬಂಧಿಸಿದವುಗಳೆಂದೂ ವಿವರಿಸುತ್ತಾರೆ. ಇವಲ್ಲದೆ ಇನ್ನೂ ಅನೇಕ ವೃತ್ತಿಗಳು ಚಿತ್ತಕ್ಕೆ ಉಂಟೆಂದು ಹೇಳುತ್ತ ನಿಗ್ರಹಿಸಬೇಕಾದ ವೃತ್ತಿಗಳೆಂದರೆ ಕ್ಷಿಪ್ತ–ವಿಕ್ಷಿಪ್ತ, ಮೂಢ–ವಿಪರ್ಯಾಸ, ಪ್ರಮಾಣ–ವಿಕಲ್ಪ, ನಿದ್ರಾ–ಸ್ಮೃತಿ ಮುಂತಾದವುಗಳೆಂದು ತಿಳಿಸುತ್ತಾರೆ.[೪೩]

ವಿವೇಕಾನಂದರು ಚಿತ್ತ ವೃತ್ತಿಗಳು ಐದು ವಿಧವಾಗಿರುವವು ಎಂದು ಹೇಳುತ್ತ ಕೆಲವು ಕಷ್ಟವಾದವುಗಳೆಂದೂ ಮತ್ತೆ ಕೆಲವು ಕಷ್ಟವಿಲ್ಲದವು ಎಂದೂ ತಿಳಿಸುತ್ತಾರೆ. ಪಾತಂಜಲಯೋಗ ಸೂತ್ರದಲ್ಲಿ ಸಂಸ್ಕೃತ ಉದ್ಧರಣೆಗಳೊಂದಿಗೆ ಅವರು ವಿವರಣೆ ಕೊಡುತ್ತಾರೆ.

ಐದು ವೃತ್ತಿಗಳೆಂದರೆ ಯಥಾರ್ಥಜ್ಞಾನ, ವಿವೇಚನೆ ಇಲ್ಲದಿರುವುದು, ಮೋಹ, ನಿದ್ರೆ ಮತ್ತು ನೆನಪು.

ಪ್ರಮಾಣ – ವಿಪರ್ಯಯ– ವಿಕಲ್ಪ – ನಿದ್ರಾ – ಸ್ಮೃತಯಃ ॥ [೪೪]

ಪ್ರತ್ಯಕ್ಷ್ಯ, ಅನುಮಾನ, ಆಪ್ತವಾಕ್ಯಗಳೇ ಪ್ರಮಾಣಗಳು.

ಪ್ರತ್ಯಕ್ಷ್ಯಾನುಮಾನಾಗಮಾ : ಪ್ರಮಾಣಾನಿ ॥ [೪೫]

ನಮ್ಮ ಇಂದ್ರಿಯಗಳನ್ನು ಮೋಹಗೊಳಿಸದೆ ಇರುವುದು ಪ್ರತ್ಯಕ್ಷ್ಯವೆಂದೂ, ಒಂದು ಸಂಕೇತದಿಂದ ಅದು ಸೂಚಿಸುವ ವಸ್ತುವನ್ನು ತಿಳಿಯುವುದು ಅನುಮಾನವೆಂದೂ ಹಾಗೂ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವ ಯೋಗಿಗಳ ಮಾತು ಆಪ್ತವಾಕ್ಯವೆಂದೂ ವಿವೇಕಾನಂದರು ವಿವರಣೆ ನೀಡುತ್ತಾರೆ. ಮುಂದುವರೆದು ನಿರ್ಮಲಚಿತ್ತರಾದ ಯೋಗಿಗಳು ವಿಚಾರದ ಮೂಲಕ ಗ್ರಹಿಸುವ ದಾರಿಯನ್ನು ಮೀರುತ್ತಾರೆಂದು ತಿಳಿಸುತ್ತ ಅವರೆದುರಿಗೆ ಭೂತ, ಭವಿಷ್ಯತ್ ವರ್ತಮಾನಗಳು ಅವರು ಓದುವ ಪುಸ್ತಕದ ಭಾಗಗಳಂತೆ ಇರುತ್ತವೆ ಎನ್ನುತ್ತಾರೆ.[೪೬]

ವಿಪರ್ಯಯವು ಅಜ್ಞಾನವಾಗಿದೆ ಹಾಗೂ ಅದು ಜ್ಞಾನದ ಮೇಲೆ ನಿಂತಿಲ್ಲ.

[illegible]

ಶಬ್ದಜ್ಞಾನಾನುಪಾತೀ ವಸ್ತು ಶೂನ್ಯೋ ವಿಕಲ್ಪ : || [೪೭]

ಶಬ್ದಜ್ಞಾನಕ್ಕೆ ಸಂಬಂಧಪಟ್ಟಂತೆ ಯಾವುದೇ ವಸ್ತು ಇಲ್ಲದೇ ಇರುವುದರ ಕಾರಣದಿಂದಾಗಿ ಅದು ವಿಕಲ್ಪ ಎನಿಸುವುದು.

ಅಭಾವವೆಂಬ ಪ್ರತ್ಯಯವನ್ನು ಆವರಿಸಿಕೊಳ್ಳುವುದು ನಿದ್ರೆಯೆಂಬ ವೃತ್ತಿ.

ಅಭಾವ ಪ್ರತ್ಯಯಾಲಂಬನಾ ವೃತ್ತಿರ್ನಿದ್ರಾ || [೪೮]

ಸ್ಮೃತಿ ಎಂದರೆ ನೋಡುವವನಲ್ಲಿ ಏಳುವ ವೃತ್ತಿಗಳು ಮಾಯವಾಗದೇ ಇರುವುದು, ಅಂದರೆ ಇವು ಅನುಭವದ ಮೂಲಕ ಚೇತನಕ್ಕೆ ಬರುತ್ತವೆ.

ಅನುಭೂತವಿಷಯಾಸಂಪ್ರಮೋಷಃ ಸ್ಮೃತಿಃ || [೪೯]

ಹೀಗೆ ಸ್ವಾಮಿ ವಿವೇಕಾನಂದರು ಬಹಳಷ್ಟು ಸ್ಪಷ್ಟವಾಗಿ ಚಿತ್ತವೃತ್ತಿಗಳನ್ನು ವಿವರಿಸಿದ್ದಾರೆ.

೫. ಚಿತ್ತವೃತ್ತಿನಿರೋಧ ಹೇಗೆ ಸಾಧ್ಯ ?

ಚಿತ್ತವೆನ್ನುವುದು ಕರ್ಮಸಂಬಂಧದ ಘಟನೆಗಳ ಸಂಗ್ರಹಾಗಾರವಾಗಿದ್ದು ಆಯಾ ಕರ್ಮಫಲಗಳ ರೂಪದಲ್ಲಿ ಪಾಪ-ಪುಣ್ಯಗಳ ಸಂಗ್ರಹವೂ ಅಲ್ಲಿರುತ್ತದೆ ಎಂಬುದನ್ನು ನೋಡಿದ್ದೇವೆ. ಈ ಪಾಪ ಪುಣ್ಯಗಳ ಆಧಾರದಿಂದ ಜನನಕ್ಕೆ ದಾರಿಯಾಗುತ್ತದೆ. ಆದುದರಿಂದ ಚಿತ್ತದಲ್ಲಿರುವ ಈ ರಾಶಿಯನ್ನು ತೆಗೆದು ಹಾಕುವುದೇ ಚಿತ್ತವೃತ್ತಿನಿರೋಧ ಎನಿಸುತ್ತದೆ. ಯಾವುದೇ ಲೌಕಿಕ ಆಚರಣೆಯಿಂದ ಚಿತ್ತವನ್ನು ಬರಿದಾಗಿಸುವುದು ಸಾಧ್ಯವಿಲ್ಲ. ಏಕೆಂದರೆ ಲೌಕಿಕಕ್ರಿಯೆ ಪಾಪಕ್ಕಾಗಲಿ, ಪುಣ್ಯಕ್ಕಾಗಲಿ ಕಾರಣವಾಗುತ್ತ ಹೋಗುತ್ತದೆ. ಯೋಗಸಾಧಕರು ಧ್ಯಾನದ ಸಹಾಯದಿಂದ ಚಿತ್ತವನ್ನು ಬರಿದಾಗಿಸುತ್ತಾರೆ. ಪುಣ್ಯದ ಬಲದಿಂದ ಪಾಪದ ಬಲವನ್ನು ಕಡಿಮೆ ಮಾಡುವುದು ಸಾಧ್ಯವಾದರೆ ಮಂತ್ರದ ಬಲದಿಂದ ಪುಣ್ಯವೂ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಅದೇ ಚಿತ್ತ ಬರಿದಾಗುವುದು ಅಥವಾ ಭಾವ ಬೆತ್ತಲೆಯಾಗುವುದು.

ಕೆಳದಿ ಬಸವರಾಜನು ಚಿತ್ತವೃತ್ತಿನಿರೋಧವು ಅಭ್ಯಾಸ ಮತ್ತು ಈಶ್ವರ ಪ್ರಣಿಧಾನಗಳಿಂದ ಸಾಧ್ಯವೆಂದು ತಿಳುಸುತ್ತಾನೆ. ಕ್ಲೇಶಾದಿಗಳಿಲ್ಲದವನೂ, ಪರಮೋತ್ತಮನೂ, ಸರ್ವಜ್ಞನೂ, ಸ್ವಪ್ರಕಾಶಚಿದಾತ್ಮನೂ ಆದವನೇ ಈಶ್ವರ. ಈತನು ವಿಶುದ್ಧನಾಗಿದ್ದಾನೆ ಮತ್ತು ಇವನ ಲೀಲೆಗಾಗಿಯೇ ಜಗತ್ತು ಇದೆ. ವೈರಾಗ್ಯ, ವಿಷಯದೋಷದರ್ಶನ, ಅಭ್ಯಾಸ, ಏಕಾಗ್ರತೆ ಮತ್ತು ಈಶ್ವರಾನುಗ್ರಹಗಳಿಂದ

ಚಿತ್ತದ ಪರಿಪಾಕ ಸಾಧ್ಯವೆಂದು ತಿಳಿಸುತ್ತ ದೋಷಾಸ್ಪದವಾದ ಚಿತ್ತಕ್ಕೆ ಸಮಾಧಿಯನ್ನು ತುಂಬಿ ಕೊಡುವುದೇ ಯೋಗವೆನ್ನುತ್ತಾನೆ.[೫೦]

ಸ್ವಾಮಿ ವಿವೇಕಾನಂದರು ಅಭ್ಯಾಸ ಮತ್ತು ವೈರಾಗ್ಯಗಳಿಂದ ಚಿತ್ತವೃತ್ತಿಗಳನ್ನು ನಿರೋಧಿಸಬಹುದೆಂದು ಹೇಳುತ್ತಾರೆ.

ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧಃ ॥ [೫೧]

ಚಿತ್ತವೃತ್ತಿಯನ್ನು ಸಂಪೂರ್ಣ ಸ್ವಾಧೀನದಲ್ಲಿಡುವುದಕ್ಕಾಗಿ ಪ್ರಯತ್ನಿಸುವುದು ಮತ್ತು ಮನಸ್ಸನ್ನು ಚಿತ್ತಾವಸ್ಥೆಯಲ್ಲಿ ನಿಗ್ರಹಿಸಿ ಅದನ್ನು ಅಲೆಗಳಾಗಿ ಹೋಗದಂತೆ ತಡೆಯುವುದು ಅಭ್ಯಾಸ. ನಿಗ್ರಹವು ಒಂದು ದಿನದಲ್ಲಿ ಸಿದ್ಧಿಸುವುದಿಲ್ಲವೆಂದೂ, ದೀರ್ಘಕಾಲ ನಿರಂತರವಾಗಿ ಮಾಡುವ ಪ್ರಯತ್ನದ ಬಲದಿಂದ ಹಾಗೂ ನಾವು ಸೇರಬೇಕೆಂದಿರುವ ಗುರಿಯ ಮೇಲಿನ ಪ್ರೇಮದಿಂದ ಅದು ದೃಢವಾಗುತ್ತದೆಂದೂ ತಿಳಿಸುತ್ತಾರೆ.

ಸ ತು ದೀರ್ಘಕಾಲನೈರಂತರ್ಯ ಸತ್ಕಾರಾಸೇವಿತೋ ದೃಢಭೂಮಿ: ॥ [೫೨]

ಪ್ರಮಾಣವೆಂಬುದು ವೃತ್ತಿಜ್ಞಾನವೆಂದೂ, ಎಲ್ಲ ವೃತ್ತಿಜ್ಞಾನಗಳಲ್ಲಿ ಪ್ರಮಾಣ ವೃತ್ತಿಜ್ಞಾನವು ಶ್ರೇಷ್ಠವೂ, ಸತ್ಯವೂ, ಶಾಸ್ತ್ರಶುದ್ಧವಾದುದೂ ಎನಿಸಿದೆಯೆಂದು ಡಾ. ಆರ್. ಸಿ. ಹಿರೇಮಠರು ಅಭಿಪ್ರಾಯ ಪಡುತ್ತಾರೆ. ಪ್ರತ್ಯಕ್ಷ ಜ್ಞಾನವು ಜ್ಞಾತೃ, ಜ್ಞಾನ, ಜ್ಞೇಯ ಅಥವಾ ಅನುಕ್ರಮವಾಗಿ ಪ್ರಮಾತೃ, ಪ್ರಮಾಣ, ಪ್ರಮೇಯ ಎಂಬ ಘಟಕಗಳಿಂದ ಕೂಡಿದೆ. ಚಿತ್ತವೃತ್ತಿಭೇದವಿಲ್ಲದ ಶಿವಚೈತನ್ಯವು ಅಂತಃಕರಣದಲ್ಲಿ ಮೂಡಿದಾಗ ಜ್ಞಾತೃವೆನಿಸುವುದು ಅದೇ ಶಿವಚೈತನ್ಯವು ವಿಷಯಾಕಾರವಾದ ಅಂತಃಕರಣವೃತ್ತಿಯಲ್ಲಿ ಮೂಡಿದಾಗ ಜ್ಞೇಯವಾಗಿ ತೋರುವುದು. ವೃತ್ತಿವಿಷಯಗಳ ಸಂಬಂಧಕವಾದ ಚಿತ್ತದ ಪ್ರವಾಹದಲ್ಲಿ ಬಿಂಬಿಸಿದಾಗ ಜ್ಞಾನವೆನಿಸುವುದು.[೫೩]

ಪ್ರತಿಯೊಂದು ಸಿದ್ಧಾಂತದಲ್ಲಿಯೂ ಯುಕ್ತಾಯುಕ್ತಿಯಿಂದ ತಮ್ಮ ಸಿದ್ಧಾಂತವ್ಯವಸ್ಥೆಯನ್ನು ಏರ್ಪಡಿಸಿರುವುದುಂಟು. ಷಟ್‌ಸ್ಥಲವು ಅನುಭವಪ್ರಮಾಣವಾದ ಸಿದ್ಧಾಂತವೆನಿಸಿದರೂ ಅಲ್ಲಿ ಒಂದು ಶಾಸ್ತ್ರೀಯ ತತ್ತ್ವವಿವೇಚನೆಯಿದೆ. ಅಲ್ಲಿ ಒಂದು ಪ್ರಮೆ ಇದೆ. ಪ್ರಮೆಯೆಂದರೆ ಯಥಾರ್ಥ ಜ್ಞಾನ. ನಿತ್ಯಾನಿತ್ಯ ವಸ್ತುಗಳ ಸ್ವರೂಪವನ್ನು ತಿಳಿದು ಕೊನೆಯಲ್ಲಿ ಸರ್ವಶೂನ್ಯನಿರಾಲಂಬವಾದ ಸಹಜಸ್ಥಿತಿಯೇ

ಮೂಲವೆಂಬ ಜ್ಞಾನವು ಈ ದರ್ಶನದಲ್ಲಿ ಅನುಭವವೇದ್ಯವಾಗುತ್ತದೆ, ಇದು ಪ್ರಮೆ. ಇದಕ್ಕೆ ಆಶ್ರಯವಾಗಿರುವಾತನು ಪ್ರಮಾತನು; ಅಂದರೆ ಜೀವಾತ್ಮನು. ವಿಷಯವಾಗಿರುವುದು ಪ್ರಮೇಯ. ಕೊನೆಗೆ ಅಲ್ಲಿ ಉಂಟಾಗುವ ಜ್ಞಾನ ಪ್ರಮಿತಿ. ಹೀಗೆ ಪ್ರಮಾಣ, ಪ್ರಮೇಯ, ಪ್ರಮಾತ, ಪ್ರಮಿತಿ ಎಂಬ ನಾಲ್ಕು ವಿಧದಲ್ಲಿ ವೀರಶೈವ ತತ್ತ್ವಜ್ಞಾನವು ಪ್ರಪಂಚವನ್ನು ವಿಭಜಿಸುವುದು. ಈ ಶಾಸ್ತ್ರದಲ್ಲಿಯೂ ಅನುಬಂಧ ಚತುಷ್ಟಯವಿದೆ. ಅಂಗಲಿಂಗದಲ್ಲಿ ಸಾಮರಸ್ಯ ಪಡೆಯುವುದೇ ವಿಷಯ. ಮಲತ್ರಯ ಪರಿಚ್ಛೇದನ ಮಾಡಿಕೊಂಡು ಕೈವಲ್ಯಸಂಪತ್ತನ್ನು ಪಡೆಯುವುದೇ ಪ್ರಯೋಜನ. ಅಷ್ಟಾವರಣ, ಪಂಚಾಚಾರನಿಷ್ಠನಾಗಿ ಷಟ್‌ಸ್ಥಲನಿರತನಾದವನೇ ಅಧಿಕಾರಿ. ಲಿಂಗಾಂಗಸಾಮರಸ್ಯರೂಪವಾದ ವಿಷಯಕ್ಕೂ, ಈ ಶಾಸ್ತ್ರಕ್ಕೂ ಇರುವ ಪ್ರತಿಪಾದ್ಯ ಭಾವವೇ ಸಂಬಂಧ. ಇದೇ ಅನುಬಂಧಚತುಷ್ಟಯ. ಹೀಗೆ ಶಾಸ್ತ್ರೋಕ್ತವಾಗಿ ತತ್ತ್ವವಿವೇಚನೆ ಮಾಡಿರುವ ವೀರಶೈವಕ್ಕೆ ವಿಶಿಷ್ಟವಾದ ಪ್ರಮಾಣಗಳಿರುವುದು ಸ್ವಾಭಾವಿಕವಾಗಿದೆ.[೫೪]

'ಯೋಗವೆಂದರೆ ಚಿತ್ತವೃತ್ತಿನಿರೋಧ' ಎನ್ನುವ ಎರಡು ಶಬ್ದಗಳ ಹೇಳಿಕೆಯು ಯೋಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ವಕೋಶವಾಗಿದೆಯೆಂಬುದನ್ನು ನೋಡಿದ್ದೇವೆ. ಈ ವರೆಗಿನ ವಿಶ್ಲೇಷಣೆಯು ಈ ಮಾತನ್ನು ಸಮರ್ಥಿಸುತ್ತದೆ. ಆದರೆ ಇದು ತಾತ್ತ್ವಿಕ ವಿವರಣೆ ಮಾತ್ರ. ಈ ತಾತ್ತ್ವಿಕ ವಿವರಣೆಯಿಂದ ಸ್ವಲ್ಪ ಆಚೆಗೆ ನಿಂತು ಸಾಧ್ಯಯೋಗದ ಬಗೆಗೆ ಯಾಜ್ಞವಲ್ಕ್ಯ ಋಷಿ ಹೇಳುವ 'ಸಂಯೋಗೋ ಯೋಗ ಇತ್ಯಾಹುರ್ಜೀವಾತ್ಮ ಪರಮಾತ್ಮನೋಃ' ಅಂದರೆ 'ಜೀವಾತ್ಮ ಪರಮಾತ್ಮರ ಬೆರೆಯುವಿಕೆಯೇ ಯೋಗ' ಎಂಬುದನ್ನು ಲಕ್ಷಿಸಬೇಕು. ಏಕೆಂದರೆ ಇದು ಪ್ರಾಯೋಗಿಕ ಅಂಶಗಳಿಂದ ಕೂಡಿರುವಂಥದ್ದಾಗಿದೆ.

ಈಗ ಒಂದು ಹೇಳಿಕೆ ನೋಡೋಣ. 'ಭೂತಪಂಚಕ, ವಾಯುಪಂಚಕ, ಇಂದ್ರಿಯದಶಕ, ಕರಣಚತುಷ್ಟಯಂಗಳೆನಿಪ ಚತುರ್ವಿಂಶತಿ ತತ್ತ್ವವಹಂತಹದೀಗ ದೇಹ; ಪಂಚವಿಂಶತಿ ತತ್ತ್ವವಹಂತಹ ಆತ್ಮನು ದೇಹಿ' ಎಂದು ಚೆನ್ನಬಸವಣ್ಣನು ತಿಳಿಸುತ್ತಾನೆ.[೫೫] ಆತ್ಮತ್ರಯಗಳೆಂದರೆ ಜೀವಾತ್ಮ, ಅಂತರಾತ್ಮ, ಪರಮಾತ್ಮ ಎಂದು ತಿಳಿಸುವ ಚೆನ್ನಬಸವಣ್ಣನು' ಆತ್ಮನು ಸಂಸಾರವ್ಯಾಪ್ತಿಯಹಂತಹ ಜೀವನ ಬೆರಸಲಾಗಿ ಜೀವಾತ್ಮನೆಂದೂ ಸಂಸಾರವ ಹೊದ್ದಿಯೂ ಹೊದ್ದನಾಗಿ ಅಂತರಾತ್ಮನೆಂದೂ ಸಂಸಾರವ ಬಿಟ್ಟು ನಿಷ್ಕಲನಾಗಿಪ್ಪನಾಗಿ ಪರಮಾತ್ಮನೆಂದೂ' ವಿವರಿಸುತ್ತಾನೆ.[೫೬]

[illegible]

[illegible]

[illegible]

[illegible]

ಒಂದೇ ಆತ್ಮ ಜೀವಾತ್ಮನ ರೂಪದಲ್ಲಿ, ಅಂತರಾತ್ಮನ ರೂಪದಲ್ಲಿ ಹಾಗೂ ಪರಮಾತ್ಮನ ರೂಪದಲ್ಲಿ ಇರುತ್ತದೆಯೆನ್ನುವುದಾದರೆ ಇವುಗಳಲ್ಲಿ ಎರಡು ಕ್ರಮಗಳು ಗೋಚರಿಸುತ್ತವೆ. ಒಂದು ಪರಮಾತ್ಮ–ಅಂತರಾತ್ಮ–ಜೀವಾತ್ಮ ಎಂದಾದರೆ ಇನ್ನೊಂದು ಜೀವಾತ್ಮ–ಅಂತರಾತ್ಮ–ಪರಮಾತ್ಮ ಎಂದು. ಅಂತರಾತ್ಮನನ್ನು ಕ್ರಮದ ಪ್ರಾರಂಭದಲ್ಲಿಯಾಗಲಿ ಅಥವಾ ಕೊನೆಯಲ್ಲಿಯಾಗಲಿ ಸ್ವೀಕರಿಸಲು ಚೆನ್ನಬಸವಣ್ಣನ ಹೇಳಿಕೆಯಲ್ಲಿ ಅವಕಾಶವಿಲ್ಲ. ಆದುದರಿಂದ ನಮಗೆ ಕಂಡು ಬರುವುದೇನೆಂದರೆ ಪರಮಾತ್ಮನಿಂದ ಜೀವಾತ್ಮನ ವರೆಗಿನ ಕ್ರಮವು ಅಧೋಮುಖವೆನಿಸಿದರೆ, ಜೀವಾತ್ಮನಿಂದ ಪರಮಾತ್ಮನ ವರೆಗಿನ ಕ್ರಮವು ಊರ್ಧ್ವಮುಖವೆನಿಸುತ್ತದೆ. ಮಾನವನು ಜೀವ ತಳೆದು ಬಂದುದು ಅಧೋಮುಖಕ್ರಮ. ಹುಟ್ಟು ಹರಿದು ಹೋಗುವುದು ಊರ್ಧ್ವಮುಖಕ್ರಮ. 'ಕರಣಹಸಿಗೆ' ಯಲ್ಲಿಯ ವಿಷಯಗಳ ಕ್ರಮವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದರ ನಿರೂಪಣೆ ಅಧೋಮುಖವೆಂದು ತೋರುತ್ತದೆ. ಕ್ರಮದ ವಿಷಯಗಳನ್ನು ವಿಲೋಮವಾಗಿಸಿದರೆ ಅದು ಊರ್ಧ್ವಮುಖವೆನಿಸುತ್ತದೆ. ಈಗ ಸಿದ್ಧರಾಮ ಶಿಯೋಗಿಯ ಒಂದು ವಚನವನ್ನು ನೋಡೋಣ.

ಬರುವ ಮುಂದೆ ಪುರುಷನಿದ್ದೆ;
ಬಂದ ಬಳಿಕ ಸ್ತ್ರೀಯಾದೆ;
ಇನ್ನು ಮೇಲೆ ನಪುಂಸಕನಾದೆ.
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಬೇಕೆಂದಲ್ಲಿ
ಪುರುಷನಾದೆ ನೋಡವ್ವಾ, ಎನ್ನ ಹೆತ್ತ ತಾಯೆ.[92]

ಮೇಲ್ನೋಟಕ್ಕೆ ವಚನದ ಅರ್ಥವು ಮೋಜೆನಿಸಿದರೂ ತಾತ್ತ್ವಿಕ ದೃಷ್ಟಿಯಿಂದ ನೋಡಿದರೆ ವೀರಶೈವತ್ವದ ಸಮಗ್ರ ಸ್ವರೂಪವು ಅದರಲ್ಲಿ ತೆರೆದುಕೊಳ್ಳುತ್ತದೆ. ಪರಶಿವಸ್ವರೂಪದ ಪುರುಷನಿಂದ ಪ್ರಕೃತಿಯ ರೂಪದಲ್ಲಿ ಜೀವಾತ್ಮ ಮೂಡಿ ಬಂದಿದ್ದಾನೆ. ಗುರುವಿನ ಹಸ್ತದಲ್ಲಿ ಪುನರ್ಜಾತನಾಗಿ ಜನನ ಮರಣಗಳ ಬಂಧವನ್ನು ಇಲ್ಲವಾಗಿಸಿಕೊಂಡು ತಟಸ್ಥನಾಗಿದ್ದಾನೆ. ಜೀವಾತ್ಮನು ಅಂತರಾತ್ಮನಾಗಿ, ಅಂತರಾತ್ಮನು ಪರಮಾತ್ಮನಲ್ಲಿ ಬೆರೆತು ಮತ್ತೆ ಆ ಪುರುಷರೂಪವನ್ನೇ ಪಡೆದಿದ್ದಾನೆ. ಐಕ್ಯಸ್ಥಲದಿಂದ ಆಯ್ದುಕೊಂಡಿರುವ ಈ ವಚನವು 'ಶರಣಸತಿ–ಲಿಂಗಪತಿ' ಭಾವವನ್ನು ಹೊರಸೂಸುತ್ತದೆ. ಹೀಗೆ ಮನುಷ್ಯಮಾತ್ರರಿಗೆ ಅಸಾಧ್ಯವಾಗಿರುವ, ಅತ್ಯಂತ ರಹಸ್ಯವಾಗಿರುವ ವೀರಶೈವಾಚಾರದ

[illegible]

[illegible]

[illegible]

ಊರ್ಧ್ವಗಮನವನ್ನು ಷಟ್‌ಸ್ಥಲಗಳ ರೂಪದಲ್ಲಿ ನಿರೂಪಸಿಲಾಗಿದೆ. ಈ ಷಟ್‌ಸ್ಥಲಾಚರಣೆಯಲ್ಲಿ ದೀಕ್ಷೆಯು ಒಂದು ಪ್ರಮುಖ ಸಂಸ್ಕಾರವಾಗಿದೆ.

(ಅ) ದೀಕ್ಷೆ

ಶಿವಯೋಗದ ದೀಕ್ಷೆಯನ್ನು ಎಲ್ಲರಿಗೂ ಕೊಡುವುದು ಸಾಧ್ಯವಿಲ್ಲ. ಈ ದೀಕ್ಷೆಗೆ ಪಾತ್ರನಾಗುವವನು ಶುದ್ಧ ಇರುವಿಕೆಯನ್ನು ಹೊಂದಿರಬೇಕಾಗುತ್ತದೆ. ಇಂಥ ಸ್ಥಿತಿಗಾಗಿ ಗುರು ಅವನನ್ನು ಸಿದ್ಧಪಡಿಸುತ್ತಾನೆ. ಈ ಸಿದ್ಧಪಡಿಸುವಿಕೆಯು ಗುರು ಶಿಷ್ಯನಿಗೆ ದೀಕ್ಷೆಯ ಪೂರ್ವದಲ್ಲಿ ಮಾಡುವ ಬೋಧೆ ಎನಿಸಿಕೊಳ್ಳುತ್ತದೆ.

ಕಳಬೇಡ, ಕೊಲಬೇಡ ; ಹುಸಿಯ ನುಡಿಯಲು ಬೇಡ ;
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ! [೫೮]

ಸಪ್ತಾಚಾರಗಳನ್ನು ಒಳಗೊಂಡಿರುವ ಬಸವಣ್ಣನ ಈ ವಚನವು ದೀಕ್ಷಾಸಂಸ್ಕಾರದ ಮಹತ್ವವನ್ನು ತಿಳಿಸುತ್ತದೆ. ತನಗೆ ಶರಣು ಬಂದವನನ್ನು ಗುರು ಮಾನಸಿಕವಾಗಿ ದೀಕ್ಷೆಗೆ ಸಿದ್ಧಪಡಿಸಲು ಬೇಕಾದುದೆಲ್ಲವನ್ನೂ ಬೋಧಿಸುತ್ತಾನೆ. ಸೃಷ್ಟಿಯ ಉತ್ಪತ್ತಿಯಿಂದ ಮೊದಲುಗೊಂಡು ಜೀವನು ಲೌಕಿಕದ ಮುಖವನ್ನು ಪಾರಲೌಕಿಕದ ಕಡೆಗೆ ತಿರುಗಿಸುವಂತೆ ಮಾಡಲು ಅವಶ್ಯವಿರುವ ಅಂಶಗಳನ್ನು ಅವನ ಮುಂದೆ ಬಿಚ್ಚಿಡುತ್ತಾನೆ. ಗುರುವಾದವನು ಸಾಕ್ಷಾತ್ ಶಿವನೇ ಆಗಿರುತ್ತಾನೆಂಬ ಭಾವವು ಶಿಷ್ಯನಲ್ಲಿ ಮೂಡುವಂತೆ ತನ್ನ ಸದಾಚಾರಗಳಂದ ಆ ಶಿಷ್ಯನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುತ್ತಾನೆ. ಇದಕ್ಕಾಗಿ ಅವನು ಎಷ್ಟು ಸಮಯ ತೆಗೆದುಕೊಳ್ಳುತ್ತಾನೆಂದು ಹೇಳಲಾಗದು. ಕೆಲವೊಮ್ಮೆ ಹತ್ತಾರು ವರ್ಷಗಳೇ ತಗಲಬಹುದು.[೫೯]

ದೀಕ್ಷೆಯನ್ನು ಜರುಗಿಸುವಾಗ ನೀಡುವ ಬೋಧೆಯು (೧) ಮಲತ್ರಯನಿವೃತ್ತಿ (೨) ವೇಧಾ (೩) ಮಂತ್ರ (೪) ಕ್ರಿಯಾ ಇವುಗಳನ್ನು ಒಳಗೊಂಡಿರುತ್ತದೆ.[೬೦]

[illegible]

(೧) ಮಲತ್ರಯನಿವೃತ್ತಿ

ತ್ರಿಮಲಗಳೆಂದರೆ ಆಣವಮಲ, ಮಾಯಾಮಲ ಮತ್ತು ಕಾರ್ಮಿಕಮಲ. ಇಡೀ ಬ್ರಹ್ಮಾಂಡವು ಭೂತಪಂಚೀಕರಣದಲ್ಲಿ ರೂಪುಗೊಂಡಿದೆ ಮತ್ತು ತ್ರಿಮಲಗಳು ಈ ಬ್ರಹ್ಮಾಂಡದ ಅಂಶಗಳು. ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಇವುಗಳಿಂದಾದುದು ಶಿವನ ಅಷ್ಟತನುವೆಂದೂ ಆ ಅಷ್ಟತನುವೇ ಜಗತ್ತಾಗಿಹುದೆಂದೂ ಹೇಳಲಾಗಿದೆ.[೬೧] ಅದರ ಮುಂದಿನ ಭಾಗವಾದ ಪಿಂಡಸಂಗ್ರಹದಲ್ಲಿ 'ಸ್ಥೂಲಬ್ರಹ್ಮಾಂಡದೊಳಗುಳ್ಳ ಗುಣಾಂಗಳಾಶ್ರಯವು ಪಿಂಡದಲ್ಲಿ ಸೂಕ್ಷ್ಮರೂಪಿಂದ ಸಂಗ್ರಹವಾಗಿ ತೋರ್ಪುದು' ಎಂದು ಹೇಳಲಾಗಿದೆ. ಅಂದರೆ ಪಿಂಡಾಂಡ ಮತ್ತು ಬ್ರಹ್ಮಾಂಡಗಳೆರಡೂ ಒಂದೇ ರೀತಿಯ ಪಂಚೀಕರಣವನ್ನು ಹೊಂದಿರುತ್ತವೆ. ಪಿಂಡರೂಪದಲ್ಲಿರುವ ಜೀವಾತ್ಮನಿಗೆ ಆವರಿಸಿರುವ ಅಷ್ಟತನುವನ್ನೂ, ತ್ರಿಮಲಗಳನ್ನೂ ದೂರೀಕರಿಸಿದಾಗ ಅಲ್ಲಿ ಉಳಿಯುವುದು ಶುದ್ಧ ಶಿವತತ್ವ ಮಾತ್ರ! ದೀಕ್ಷೆಯನ್ನು ಜರುಗಿಸುವುದರಿಂದ ಈ ಕಾರ್ಯಕ್ಕೆ ಅನುವು ದೊರೆಯುತ್ತದೆ. ಗುರು ತ್ರಿಮಲಗಳನ್ನು ನಿವಾರಿಸುವ ಕ್ರಿಯೆಯನ್ನು ನೋಡೋಣ.

> **ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು**
> **ಆಜ್ಞಾದೀಕ್ಷೆ ಉಪಮಾದೀಕ್ಷೆ ಸ್ವಸ್ತಿಕಾರೋಹಣ ಕಳಶಾಭಿಷೇಕ**
> **ವಿಭೂತಿಯ ಪಟ್ಟ ಲಿಂಗಾಯತ ಲಿಂಗಸ್ವಾಯತ**
> **ಈ ಏಳನು ಕಾಯಕ್ಕುಪದೇಶವ ಮಾಡುವುದು.**[೬೨]

ಚೆನ್ನಬಸವಣ್ಣನ ಈ ವಚನವು ಮಲತ್ರಯಗಳನ್ನು ಕಳೆದು ನೀಡುವ ದೀಕ್ಷೆಯೇ ಸಹಜದೀಕ್ಷೆ ಎಂದು ತಿಳಿಸುತ್ತದೆ. ಅರಿವಿನ ಮಾರಿತಂದೆ ದೀಕ್ಷೆಗಳಲ್ಲಿ ಪ್ರಥಮದೀಕ್ಷೆ, ಪರಬ್ರಹ್ಮದೀಕ್ಷೆ, ಅಂಗಲಿಂಗದೀಕ್ಷೆ, ಪುನರ್ದೀಕ್ಷೆ ಎಂದು ನಾಲ್ಕು ವಿಧಗಳನ್ನು ಹೇಳಿರುವನು. 'ಪ್ರಥಮದೀಕ್ಷೆಯ ಮಾಡುವಲ್ಲಿ ವಿಷ್ಣುವಿನ ಪಾಶವ ಹರಿಯಬೇಕು; ಅಂಗಲಿಂಗದೀಕ್ಷೆಯ ಮಾಡುವಲ್ಲಿ ರುದ್ರನ ಪಾಶವ ಹರಿಯಬೇಕು; ಪುನರ್ದೀಕ್ಷೆಯ ಮಾಡುವಲ್ಲಿ ಆ ಘಟದಲ್ಲಿದ್ದ ಆತ್ಮವ ಕಳೆದು ಪುನರಪಿಯ ಮಾಡಿ ಪುನರ್ದೀಕ್ಷೆಯ ಮಾಡಬೇಕು' ಎಂದೂ ಮಾರಿತಂದೆ ಹೇಳುತ್ತಾನೆ. ಬ್ರಹ್ಮ-ವಿಷ್ಣು-ರುದ್ರ ಇವರ ಹಂಗು ಹರಿದು ಸೃಷ್ಟಿ-ಸ್ಥಿತಿ-ಲಯಗಳಿಂದ ಮುಕ್ತರಾಗಬೇಕೆಂಬುದು ಇಲ್ಲಿಯ ತಾತ್ಪರ್ಯ.[೬೩]

[illegible]

[illegible]

[illegible]

[illegible]

ಆಣವಮಲವು ರೇತರಕ್ತದ ಜಠರಜಾತ ಅಥವಾ ಗರ್ಭಸಂಬಂಧಿಯಾದ ಅಣುರೂಪವಾದುದು, ಮಾಯಾಮಲವು ಜಾತಿಧರ್ಮಗಳ ಸುಪ್ರೀತಿರೂಪವಾದುದು ಮತ್ತು ಕಾರ್ಮಿಕಮಲವು ಧನದ ಮೇಲಿನ ಕಾಂಕ್ಷಾರೂಪವಾದುದು ಎಂದು ವರ್ಣಿಸಲಾಗಿದೆ. ಅಂದರೆ ಆಣವಮಲವು ಪುರುಷ ಅಥವಾ ಶಿವಸಂಬಂಧಿ, ಮಾಯಾಮಲವು ಪ್ರಕೃತಿ ಅಥವಾ ಶಕ್ತಿಸಂಬಂಧಿ ಹಾಗೂ ಕಾರ್ಮಿಕಮಲವು ಅವುಗಳನ್ನು ಬಿಗಿಯುವ ಕರ್ಮಸಂಬಂಧಿ. ಈ ಶಿವಶಕ್ತಿಯಲ್ಲಿ ಸಂಕೋಚ ಹಾಗೂ ವಿಕಾಸಸ್ವರೂಪವು ಸ್ವತಃಸಿದ್ಧವಾಗಿರುತ್ತದೆ. ಸೃಷ್ಟ್ಯುನ್ಮುಖವಾದಾಗ ಸಂಕೋಚ ಹೊಂದಿ ಮಲತ್ರಯಗಳ ಸ್ವರೂಪ ಹೊಂದುವುದು. ಎಂದರೆ ಶಿವಶಕ್ತಿಯ ಸಂಕೋಚನೆ ಮಲವಲ್ಲದೆ ಬೇರೆಡೆಯಿಂದದು ಬರುವಂತಹುದಲ್ಲ. ಹೀಗೆ ಮಲತ್ರಯಾವೃತವಾದ ಶಿವಸ್ವರೂಪವೇ ಜೀವವೆನ್ನಿಸಿಕೊಳ್ಳುವುದು. ಈ ಮಲಾವರಣದಿಂದಾಗಿ, ಜೀವನಲ್ಲಿ ತನ್ನ ಮೂಲಸ್ವಭಾವವಾಗಿದ್ದ ಸರ್ವಪರಿಪೂರ್ಣತ್ವ, ಸರ್ವಾತ್ಮಕತ್ವಗಳಿಗೆ ಪ್ರತಿಯಾಗಿ ಅಣುರೂಪವಾದ ದೇಹಾದಿಗಳೇ ತಾನೆಂಬ ಬುದ್ಧಿ ಹುಟ್ಟಿ ಆತನು ಅಣುರೂಪವನ್ನು ಪಡೆಯುವನು. ಇದು ಅಣವಮಲದ ಪ್ರಭಾವ. ಕಾರಣ ಶರೀರ ರೂಪದಿಂದ ಇದು ಜೀವಾತ್ಮನಿಗೆ ಮೊದಲನೆಯ ಆವರಣವಾಗುವುದು. ಮಾಯಾಮಲದಿಂದ ಶಿವಾಂಶನಾದ ಆತ್ಮನ ಜ್ಞಾನಶಕ್ತಿಯು ಸಂಕೋಚಹೊಂದಿ ಸರ್ವಜ್ಞತೆಗೆ ಪ್ರತಿಯಾಗಿ ಕಿಂಚಿಜ್ಞತೆಯು ಆತನಲ್ಲಿ ಉಂಟಾಗುವುದು. ಇದು ಜೀವನಿಗೆ ಸೂಕ್ಷ್ಮಶರೀರರೂಪದಿಂದ ಪ್ರಾಪ್ತವಾಗುವ ಎರಡನೆಯ ಆವರಣವಾಗುವುದು. ಕಾರ್ಮಿಕಮಲವು ಪರಶಿವಗತ ಕ್ರಿಯಾಶಕ್ತಿಯ ಸಂಕೋಚದಿಂದ ಉಂಟಾಗುವಂತಹದು. ಇದು ಜೀವಾತ್ಮನಲ್ಲಿ ಸರ್ವಕರ್ತೃತ್ವಕ್ಕೆ ಪ್ರತಿಯಾಗಿ ಕಿಂಚಿತ್ ಕರ್ತೃತ್ವವನ್ನುಂಟು ಮಾಡಿ ಶುಭಾಶುಭ ಕರ್ಮವ್ಯಾಪಾರದಲ್ಲಿ ಅವನನ್ನು ತೊಡಗಿಸುವುದು. ಸ್ಥೂಲಶರೀರರೂಪದಿಂದ ಇದು ಆತ್ಮನಿಗೆ ಮೂರನೆಯ ಆವರಣವಾಗುವುದು.[೬೪] ದೀಕ್ಷೆಯು ಈ ಮಲತ್ರಯಗಳನ್ನು ಕತ್ತರಿಸುವ ಕತ್ತರಿಯಾಗಿದೆ.[೬೫]

ದೀಕ್ಷೆಯನ್ನು ಜರುಗಿಸುವಾಗ ನೀಡುವ ಬೋಧೆಯಲ್ಲಿ ವೇಧಾ, ಮಂತ್ರ ಮತ್ತು ಕ್ರಿಯಾ ಇವು ಒಂದೇ ಕಾರ್ಯಸಂಪುಟದಲ್ಲಿ ಪೂರ್ಣಗೊಳ್ಳುವಂತಹವು. ಮಲತ್ರಯಗಳನ್ನು ಮತ್ತು ಅವುಗಳ ನಿವಾರಣೋಪಾಯಗಳನ್ನು ತಿಳಿದ ನಾವು ಈ ಮೂರೂ ಕ್ರಿಯೆಗಳನ್ನು ಜೊತೆಜೊತೆಯಾಗಿಯೇ ನೋಡೋಣ.

(೨) ವೇಧಾ

ಷಡ್ವಿಧ ಗುರುಲಿಂಗದಲ್ಲಿ ವೇಧಾದೀಕ್ಷೆಯೂ ಒಂದು. ಗುರುಲಿಂಗವು ಶಿವಲಿಂಗದಲ್ಲಿ ಬೆರೆಯಲು ಆತ್ಮನ ವರ್ತನೆಯು ನಷ್ಟವಾಗುವುದು. ಇದು ಗುರುವಿನ ಹಸ್ತಮಸ್ತಕ ಸಂಯೋಗದಿಂದ ಉಂಟಾಗುತ್ತದೆ. ಆಗ ಭಾವಲಿಂಗದ ಕಳೆಯು ಮನುಷ್ಯನಲ್ಲಿ ಪ್ರಾದುರ್ಭವಿಸುವುದು. ಇದೇ ವೇಧಾ ದೀಕ್ಷೆಯನ್ನುಂಟು ಮಾಡುವಂತಹುದು. ಇದೇ ಗುರುಲಿಂಗದೊಳಗಣ ಶಿವಲಿಂಗವು.[೬೬]

ಹಸ್ತಮಸ್ತಕ ಸಂಯೋಗವೆಂದರೆ ದೀಕ್ಷೆ, ಲಿಂಗ ಹಾಗೂ ಮಂತ್ರಗಳನ್ನು ವಿಧಿವತ್ತಾಗಿ ಕೊಡುವ ವೀರಶೈವ ಧಾರ್ಮಿಕ ಕ್ರಿಯೆ. ಇಷ್ಟಲಿಂಗಧಾರಣೆಯ ಸಂದರ್ಭದಲ್ಲಿ ಗುರುವು ಶಿಷ್ಯನ ಹೃದಯದಲ್ಲಿ ವ್ಯಾಪ್ತವಾಗಿರುವ ಪರಮ ಚಿದ್ಬೆಳಗನ್ನು ಅವನ ಶಿರದ ಮೇಲೆ ಹಸ್ತವನ್ನಿಡುವುದರ ಮೂಲಕ ಆ ಮಹಾಬೆಳಗನ್ನು ತಂದು ಮನಸ್ಸಿನೊಳಗೆ ಇಂಬಿಡುವನು. ಮನಸ್ಸಿನಲ್ಲಿ ಕೂಡಿದ ಆ ಮಹಾಬೆಳಗನ್ನು ತಂದು ಇಂಬಿಡುವನು. ಆ ಕಣ್ಣುಗಳೊಳಗೆ ಕೂಡಿದ ಆ ಮಹಾಬೆಳಗನ್ನು ತಂದು ಕರಸ್ಥಲದಲ್ಲಿ ಇಂಬಿಡುವನು. ಆ ಕರಸ್ಥಲದಲ್ಲಿ ಥಳಥಳಿಸಿ ಬೆಳಗಿ ಹೊಳೆಯುತ್ತಿರುವ ಅಖಂಡ ತೇಜವೇ 'ಇಷ್ಟಲಿಂಗ'ವೆಂದು ಹೇಳಿ ಕಿವಿಯಲ್ಲಿ ಪಂಚಾಕ್ಷರಿ ಮಂತ್ರೋಪದೇಶ ಮಾಡಿ ಅವನಲ್ಲಿಯೇ ಅಂತರ್ಗತನಾಗಿದ್ದ ಪರಮಾತ್ಮನನ್ನು ಕಾಣಿಸುವನು.[೬೭]

ದೀಯತೇ ಜ್ಞಾನಸಂಬಂಧ : ಕ್ಷೀಯತೇ ಚ ಮಲತ್ರಯಂ
ದೀಯತೇ ಕ್ಷೀಯತೇ ಯೇನ ಸಾ ದೀಕ್ಷೇ ತಿ ನಿಗದ್ಯತೇ. । [೬೮]

ತ್ರಿಮಲಗಳನ್ನು ಕತ್ತರಿಸಿದಾಗ ಹಸ್ತಮಸ್ತಕ ಸಂಯೋಗದಲ್ಲಿ ಥಳಥಳಿಸಿ ಬೆಳಗಿ ಹೊಳೆಯುವ ಅಖಂಡ ತೇಜೋರೂಪದ ಇಷ್ಟಲಿಂಗವನ್ನು ಕಂಡವರ ಅನುಭವವು ಹೇಗಿರುತ್ತದೆ ?

&"(ಮುರಗೋಡ) ಅಜ್ಜನವರು (ಮಹಾಲಿಂಗಪುರದ) ಚನ್ನವೀರಯ್ಯನವರ ಸ್ಥೂಲಶರೀರದ ಆವರಣವನ್ನು ಎಂಟು ಸಲ ತೆಗೆದರು; ಅವರಿಗೆ ಅವರ ಆತ್ಮಸ್ವರೂಪವನ್ನು ತೋರಿಸಿಕೊಟ್ಟರು. ಅದೊಂದು ಸಪ್ತವರ್ಣದಲ್ಲಿ ರಾರಾಜಿಸುವ ಜ್ಯೋತಿ! ತಾನು ದೇಹಿಯಲ್ಲ, ಜ್ಯೋತಿಸ್ವರೂಪಿ. ಇದನ್ನು ಕಂಡಾಗ ತಮ್ಮಲ್ಲೇ ತಾವು ಮೈಮರೆತರು ಚನ್ನವೀರಸ್ವಾಮಿಗಳು. ಮೈಯೆಲ್ಲ ಪುಳಕಾಂಕುರ, ಮನವೆಲ್ಲ ಶಿವಚೇತನ! ಸ್ವಾಮಿ ನಿಜವಾಗಿ ಸ್ವಾಮಿಯಾಗುವ, ಸ್ವಾಮಿ ಶಿವಯೋಗಿಯಾಗುವ ಕಾಲ ಸನ್ನಿಹಿತವಾದಾಗ ಯಾರಿಗೆ ತಾನೆ

[illegible]

[illegible]

[illegible]

[illegible]

[illegible]

ಹರ್ಷಾಂಕುರವಾಗಲಿಕ್ಕಿಲ್ಲ!"[೧೯] ಇಪ್ಪತ್ತನೆಯ ಶತಮಾನದಲ್ಲಿ ರಹಸ್ಯವಾಗಿ ಮುಂದುವರೆದಿರುವ, ಬಹುಶಃ ಇಪ್ಪತ್ತೊಂದನೆಯ ಶತಮಾನಕ್ಕೂ ಅಷ್ಟೇ ರಹಸ್ಯಪೂರ್ಣವಾಗಿ ಕಾಲಿಟ್ಟಿರುವ ಶಿವಯೋಗದ ಪ್ರಾಯೋಗಿಕ ಆಚರಣೆಯ ಒಂದಂಶವಿದು.

ಅಂಗುಷ್ಠ ಪರಿಮಾಣವುಳ್ಳವನೂ ಅಂತರಾತ್ಮನೂ ಆದ ಪುರುಷನು ಯಾವಾಗಲೂ ಜನರ ಹೃದಯದಲ್ಲಿರುತ್ತಾನೆಂಬುದನ್ನು ನೋಡಿದ್ದೇವೆ. ತತ್ತ್ವಶಾಸ್ತ್ರದಲ್ಲಿ ಈ ಹೃದಯವನ್ನು ಹೃದಯಾಕಾಶವೆಂತಲೂ ಕೆಲವೊಮ್ಮೆ ಬರೀ ಆಕಾಶವೆಂತಲೂ ಕರೆಯಲಾಗಿದೆ. ಇಷ್ಟಲಿಂಗಧಾರಣೆಯ ಸಂದರ್ಭದಲ್ಲಿ ಗುರು ಶಿಷ್ಯನ ಹೃದಯದಲ್ಲಿ ವ್ಯಾಪ್ತವಾಗಿರುವ ಪರಮ ಚಿದ್ಬೆಳಗನ್ನು ಅವನ ಶಿರದ ಮೇಲೆ ಹಸ್ತವನ್ನಿಡುವುದರ ಮೂಲಕ ಅವನ ಭಾವದೊಳಗೆ ಇಂಬಿಡುವನು. ಆದರೆ ಆತ್ಮನು ಜಾಗ್ರದವಸ್ಥೆಯಲ್ಲಿ ಭ್ರೂಮಧ್ಯದಲ್ಲಿರುತ್ತಾನೆಂದು ಚೆನ್ನಸದಾಶಿವಯೋಗಿ ವಿರಚಿತ 'ಶಿವಯೋಗ ಪ್ರದೀಪಿಕಾ' ಕೃತಿಗೆ ಟೀಕೆ ಬರೆಯುತ್ತ ಬಸವಾರಾಧ್ಯನು ತಿಳಿಸುತ್ತಾನೆ.[೨೦] ಈ ಹೇಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೃದಯಾಕಾಶವೆಂಬುದು ರಕ್ತಪರಿಚಲನೆಗೆ ಕೇಂದ್ರಸ್ಥಾನವಾಗಿರುವ ಹೃದಯವಲ್ಲವೆಂಬುದು ಗೊತ್ತಾಗುತ್ತದೆ. ಆ ಹೃದಯವು ಬ್ರೂಮಧ್ಯದಲ್ಲಿರುತ್ತದೆಂದು ಹೇಳಬೇಕಾದರೆ ಅದನ್ನು ಅರಿತವರೇ ಹೀಗೆ ಸೂಚಿಸುತ್ತಿರಬೇಕು. ಅದು ಯೋಗಿಗಳು ತಮ್ಮ ಅನುಭಾವದಿಂದ ಲಕ್ಷಿಸುವ ಹೃದಯಾಕಾಶವಾಗಿದೆಯೆಂಬುದಕ್ಕೆ ಮೆ ೀಲೆ ನಿರೂಪಿಸಿದ ಗುರು ಮುರಗೋಡ ಮಹಾಂತಜ್ಜ ಹಾಗೂ ಶಿಷ್ಯ ಮಹಾಲಿಂಗಪುರದ ಚನ್ನವೀರಸ್ವಾಮಿ ಇವರ ನಡುವಿನ ದೀಕ್ಷಾಪ್ರಸಂಗವು ಸಾಕ್ಷಿಯಾಗಿ ನಿಲ್ಲುತ್ತದೆ.

(೩) ಮಂತ್ರ

ಯೋಗಸಾಧನೆಯಲ್ಲಿ ತೊಡಗಿರುವವರಿಗೆ ಮಂತ್ರವು ಒಂದು ಅತ್ಯಾವಶ್ಯಕವಾದ ಅಂಶ. ಆ ಸಾಧಕರಿಗೆ ಉಸಿರೇ ಮಂತ್ರ, ಮಂತ್ರವೇ ಉಸಿರು.[೨೧] ಶಿವಯೋಗಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿ ಮಂತ್ರದ ವಿಚಾರವಾಗಿ ಅನೇಕ ಕಡೆಗಳಲ್ಲಿ ಉಲ್ಲೇಖ ಬರುತ್ತದೆಯಾದರೂ ಅದರ ಬಗ್ಗೆ ನಿಖರವಾದ ಮಾಹಿತಿ ಸಾಧ್ಯವಾಗುವುದಿಲ್ಲ. ಶರಣ-ಶರಣೆಯರು ವಚನಗಳಲ್ಲಿ, ಶಿವಯೋಗಿಗಳು ಸ್ವರವಚನಗಳಲ್ಲಿ ಮಂತ್ರದ ವಿಷಯವಾಗಿ ಬಹಳಷ್ಟು ಕಡೆಗೆ ನಮೂದಿಸಿದ್ದರೂ ಮಂತ್ರಪ್ರಯೋಗದ ವಿಧಾನವನ್ನು ರಹಸ್ಯವಾಗಿಟ್ಟಿದ್ದಾರೆ. ನಿರ್ದಿಷ್ಟವಾದ ಕ್ರಮವು ಎಲ್ಲಿಯೂ ಗೋಚರವಾಗುವುದಿಲ್ಲ. ಸೋಹಂ, ಓಂ ನಮಃ

ಶಿವಾಯ, ಓಂ ಹ್ರಾಂ ಹ್ರೀಂ ಹ್ರೂಂ ನಮಃ ಶಿವಾಯ ಇವುಗಳನ್ನು ದ್ವಿಅಕ್ಷರ ಮಂತ್ರ, ಷಡಕ್ಷರ ಮಂತ್ರ, ನವಾಕ್ಷರ ಮಂತ್ರ ಎಂದು ಹೆಸರಿಸಬಹುದಾದರೂ ಅವುಗಳನ್ನು ಉಚ್ಚರಿಸುವುದಾಗಲಿ, ಮೌನವಾಗಿ ಮನಸ್ಸಿನಲ್ಲಿ ಅನ್ನುವುದಾಗಲಿ ಜಪವೆನಿಸುತ್ತದೆ. ಶಿವಯೋಗದ ಮಂತ್ರವು ಅಜಪಮಂತ್ರವೆಂದು ಹೇಳಲಾಗಿದೆ. ಆದುದರಿಂದ ಜಪಮಂತ್ರ ಮತ್ತು ಅಜಪಮಂತ್ರ ಒಂದೇ ರಿತೀಯ ಅಕ್ಷರಗಳನ್ನು ಹೊಂದಿದ್ದರೂ ಪ್ರಯೋಗಿಸುವ ರೀತಿ ಬೇರೆಬೇರೆಯಾಗಿರುವುದು ತಿಳಿದು ಬರುತ್ತದೆ. ಅಲ್ಲಮಪ್ರಭುವಿನ ಈ ವಚನವನ್ನು ನೋಡೋಣ.

ಅರಿವಿನ ನಿರಿಗೆಗಾಣದ
ಗಿರಿಯ ಕೋಡುಗಲ್ಲ ಮೇಲೆ ತಲೆಯೂರಿ ತಪಸ್ಸು ಮಾಡಿದಡಿಲ್ಲ!
ಇಲ್ಲದ ಕಾಲಕ್ಕಿಲ್ಲ,
ಗಾತ್ರವ ದಂಡಿಸಿದಡಿಲ್ಲ,
ಪೃಥ್ವಿಯ ತಿರುಗಿದಡಿಲ್ಲ.
ತೀರ್ಥಂಗಳ ಮಿಂದು, ನಿತ್ಯ ನಿಯಮಂಗಳ ಮಾಡಿ
ಜಪಸಮಾಧಿಯಲ್ಲಿ ನಿಂದಡಿಲ್ಲ !

ಪೂಜಾಕೋಟಿ ಸಮಂ ಸ್ತೋತ್ರಂ
ಸ್ತೋತ್ರಕೋಟಿ ಸಮಂ ಜಪಂ
ಜಪಕೋಟಿ ಸಮಂ ಧ್ಯಾನಂ
ಧ್ಯಾನಕೋಟಿರ್ಮನೋಲಯಂ ॥

ಎಂದುದಾಗಿ – ಸುತ್ತಿ ಸುಳಿವ ಮನವ ಚಿತ್ತದಲ್ಲಿರಿಸಿ
ಚಿತ್ತ ಬಯಲಾದಡೆ ನಿತ್ಯ ಪ್ರಕಾಶ !
ಗುಹೇಶ್ವರ ಲಿಂಗವ ಮತ್ತರಸಲುಂಟೆ ! [೨]

ಈ ವಚನವು ನಮ್ಮ ಕುತೂಹಲವನ್ನು ತಕ್ಕ ಮಟ್ಟಗೆ ತಣಿಸಲು ಸಹಾಯ ಮಾಡುತ್ತದೆ. ಅರಿವನ್ನು ಪಡೆಯುವುದಕ್ಕಾಗಿ ಅಂದರೆ ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕಾಗಿ ಯಾವ ಬಾಹ್ಯಕ್ರಿಯೆಯೂ ಸಾಧನವಾಗುವುದಿಲ್ಲ. ಆದಕ್ಕಾಗಿ ಅಂತರಂಗದಲ್ಲಿ ಪ್ರವೇಶ ಪಡೆಯಬೇಕಾಗುತ್ತದೆಂದೂ, ಸುತ್ತಿ ಸುಳಿವ ಮನಸ್ಸನ್ನು ಚಿತ್ತದಲ್ಲಿರಿಸಿ ಆ ಚಿತ್ತವು ಬಯಲಾಗುವಂತೆ ನೋಡಿಕೊಳ್ಳಬೇಕಾಗುತ್ತದೆಂದೂ ಇಲ್ಲಿಯ

[illegible]

[illegible]

[illegible]

ಅಭಿಪ್ರಾಯವಾಗಿದೆ. ಹೀಗೆ ಮಾಡುವುದರಿಂದ ಗುಹೇಶ್ವರಲಿಂಗವನ್ನು ಅಂದರೆ ಪರಮಾತ್ಮನನ್ನು ಕಾಣುವುದು ಸಾಧ್ಯವೆಂಬ ವಿಚಾರ ಮೂಡಿ ಬರುತ್ತದೆ. ಇದರ ದೃಢೀಕರಣಕ್ಕೆ ಸಂಸ್ಕೃತ ಉಕ್ತಿಯೊಂದನ್ನು ಬಳಸಿಕೊಳ್ಳಲಾಗಿದೆ. ಉಕ್ತಿಯ ತಾತ್ಪರ್ಯವೆಂದರೆ ಪೂಜಾಕೋಟಿಯ ಫಲವು ಒಂದು ಸ್ತೋತ್ರದ ಫಲಕ್ಕೆ ಸಮ, ಸ್ತೋತ್ರಕೋಟಿಯ ಫಲವು ಒಂದು ಜಪದ ಫಲಕ್ಕೆ ಸಮ ಹಾಗೂ ಜಪಕೋಟಿಯ ಫಲವು ಒಂದು ಬಾರಿ ಮಾಡಿದ ಧ್ಯಾನದ ಫಲಕ್ಕೆ ಸಮವಾಗಿರುತ್ತದೆ. ಹೀಗೆ ಮಂತ್ರ ಒಂದೇ ಆಗಿದ್ದರೂ ಅದನ್ನು ಜಪ ಮತ್ತು ಧ್ಯಾನಕ್ಕೆ ಪ್ರಯೋಗಿಸುವ ಕ್ರಮ ಬೇರೆಬೇರೆ ಇರುವುದೆಂದು ಇಲ್ಲಿಯ ಸೂಚನೆಯಾಗಿದೆ. ಈ ಧ್ಯಾನಕೋಟಿಯ ಫಲವು ಮನೋಲಯದ ಫಲಕ್ಕೆ ಸಮವೆಂದು ತಿಳಿಸುತ್ತ ವಚನವು ಮುಂದುವರೆಯುತ್ತದೆ.

ಷಡಕ್ಷರಿ ಮಂತ್ರವನ್ನಾಗಲಿ, ಇನ್ನಾವುದೇ ಮಂತ್ರವನ್ನಾಗಲಿ ಧ್ಯಾನಿಸಿದಾಗ ಮಂತ್ರದ ಕೊನೆಯ ಅಕ್ಷರ ಆ ಶಬ್ದದಲ್ಲಿ ಸುಪ್ತವಾಗಿದ್ದ ಬ್ರಹ್ಮವನ್ನು ಎಚ್ಚರಿಸುತ್ತದೆ.[೭೩] 'ಕಾಯವಿಡಿದಾತ್ಮರಾಶಿಗೆ, ಪರತರ ಮುಕ್ತಿಗೆ ಉಪಾಯವಿದು ನಿಜಶಿವಮಂತ್ರವಣ್ಣ' ಎಂದು ನಿಜಗುಣಶಿವಯೋಗಿಯು ಹೇಳುವಲ್ಲಿ 'ನಿಜಶಿವ'ಕ್ಕೆ ಜಪ ಮತ್ತು ಅಜಪ ಇವುಗಳಲ್ಲಿ ಅಜಪದ ಅರ್ಥವೇ ಹೊಂದಿಕೊಳ್ಳುತ್ತದೆ. ಅಜಪವೆಂದರೆ ಜಪದ ಮಂತ್ರವನ್ನು ಉಸಿರಿನ ಆರೋಹಣ-ಅವರೋಹಣಕ್ಕೆ ಹೊಂದಿಸುವುದು. ಇದನ್ನೇ ಮಾತೃಕಾಮಂತ್ರವೆಂದು ಕರೆಯಲಾಗಿದೆ.[೭೪] ಸಿದ್ಧರಾಮನು ಇದಕ್ಕೂ ಮುಂದೆ ಹೋಗಿ 'ಯ' ಕಾರಾಂತ್ಯದಲ್ಲಿ ನಿಲಬಲ್ಲೊಡೆ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬೆ ಎಂದು ಹೇಳುತ್ತಾನೆ. ಈಗ ಇನ್ನೊಂದು ವಚನ.

ಯೋಗದ ಹೊಲಬನರಿಯಬಲ್ಲೊಡೆ

ಮಹಾಜ್ಞಾನಿಯಾಗಬೇಕು.

ಮಹಾಜ್ಞಾನಿ ಆಗಬೇಕಾದರೆ

ಯೋಗವ ಮಾಡಬೇಕು.

ಯೋಗಜ್ಞಾನಗಳ ಸಕೀಲ ಸಂಬಂಧವನರಿಯಬಲ್ಲೊಡೆ

'ಯ' ಕಾರದ ಕೀಲವನರಿಯಬೇಕು,

'ಯ' ಕಾರದ ಮರ್ಮವನರಿಯಬಲ್ಲೊಡೆ

ಶ್ರೀಶೈಲಪಿತ ಚನ್ನವೀರದೇವ ಮನದಿ ಮೂಡಬೇಕು ನೋಡಾ ! [೨೦]

ದೀಕ್ಷಿತರಿಗೆ ತಕ್ಷಣವೇ ಇದರ ಅರ್ಥ ಗೋಚರಿಸಿದರೆ ಭಕ್ತರಲ್ಲದವರಿಗೆ ಏನೂ ಅನಿಸುವುದಿಲ್ಲ.[೨೧] ಇನ್ನೊಂದು ಉದಾಹರಣೆ ತೆಗೆದುಕೊಳ್ಳೋಣ.

ಸಾಂತ ಷಾಂತಗಳನು ಮಗುಚಿ

ಷಾಂತ ಸಾಂತವೆನಿಸಿ ಮತ್ತಾ

ಷಾಂತ ಸಾಂತಗಳನು ದ್ವಾದಶಾಂತವಾಗಿಸಿ

ಇಂತಿದೇಕ ತ್ರಿಂಶತ್ ಪಂಚ–

ದಂತ್ಯವೆಂದು ತಿಳಿದು ಪಂಚ–

ಮಾಂತದಲ್ಲಿ ಸುಖಿಸಬಲ್ಲೊಡವನೆ ಯೋಗಿಯು. [೨೨]

ಈ ಪದ್ಯಭಾಗದಲ್ಲಿ ಸರ್ಪಭೂಷಣ ಶಿವಯೋಗಿಯು ಮಂತ್ರ ಮತ್ತು ಪ್ರಯೋಗಗಳನ್ನು ಲೀಲಾಜಾಲವಾಗಿ ಹೇಳಿದ್ದಾನೆ. 'ಷಡಕ್ಷರ ಮಂತ್ರ' ಎನ್ನುವುದನ್ನು 'ಷ' ಎಂದೂ ಮಂತ್ರ ಪ್ರಯೋಗದ ಕೊನೆಯಲ್ಲಿ ವಿಶೇಷತೆ ಇರುತ್ತದೆ ಎನ್ನುವುದರ ಬದಲಾಗಿ 'ಸಾಂತ' ಎಂದೂ ತಿಳಿಸುತ್ತ ಮಂತ್ರಪ್ರಯೋಗದ ವಿಧಾನವನ್ನು ಹೇಳಿಯೂ ಹೇಳದಂತೆ ಮುಂಡಿಗೆಯ ರೂಪದಲ್ಲಿ ಮಂಡಿಸಿದ್ದಾನೆ. ಷಡಕ್ಷರ ಮಂತ್ರವು ಪಂಚಾಕ್ಷರ ಮಂತ್ರವನ್ನು ಪೂರ್ಣಗೊಳಿಸಿದ ರೂಪ. 'ನಮಃ ಶಿವಾಯ'ಕ್ಕೆ ಆದಕ್ಕೂ ಮೊದಲು ಓಂ ಬರೆದಾಗ ಅದು 'ಓಂ ನಮಃ ಶಿವಾಯ' ಆಗಿ ಷಡಕ್ಷರಿ ಎನಿಸಿಕೊಳ್ಳುತ್ತದೆ.

ಯಾವುದೇ ಒಂದು ಮಂತ್ರವು ಓಂ ಅಕ್ಷರದಿಂದ ಪ್ರಾರಂಭವಾದರೆ ಆ ಮಂತ್ರದಿಂದ ಗರಿಷ್ಠ ಫಲ ದೊರೆಯುತ್ತದೆ. ಸ್ವತಃ ಓಂ ಒಂದು ಮಂತ್ರವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ವಚನವನ್ನು ನೋಡೋಣ.

ಪಂಚಾಕ್ಷರ – ಷಡಕ್ಷರದೊಳು

ಆವ ಭೇದವೂ ಇಲ್ಲ ನೋಡಾ!

ಪಂಚಾಕ್ಷರವೆಂಬುದು ಶಿವನ ಮಂತ್ರ

ಓಂಕಾರವೆಂಬುದು ಪ್ರಣವ ಮಂತ್ರ

ಓಂಕಾರದೊಳಡಗಿಹುದು ಸರ್ವವಿಶ್ವ.

ಪಂಚಾಕ್ಷರವೆಂಬುದು ರೈಲಿನ ಸಕಲ ಬೋಗಿಗಳು

ಓಂಕಾರವೆಂಬುದು ಅದರ ಎಂಜಿನು

ಅದರ ಚಲನೆಯಲ್ಲಿಹುದು ಸರ್ವಸಿದ್ಧಿ.

ಇಂತೀ ಓಂಕಾರದೊಡನೆ

ಆವ ಮಂತ್ರವ ಜಪಿಸಿದರೂ

ಅದು ಸಿದ್ಧಿಯಪ್ಪುದು ನೋಡಾ ಶ್ರೀಶೈಲಪಿತ ಚನ್ನವೀರದೇವಾ. [೨೮]

'ವೀರಶೈವರಿಗೆ ಷಡಕ್ಷರ ಮಂತ್ರವು ಪರಮ ಪಾವನ, ಕೈಲಾಸವೇ ಸರಿ. ಓಂ ರಹಿತ ಮಂತ್ರ ಮತ್ತು ಓಂ ಸಹಿತ ಮಂತ್ರ ಇವುಗಳ ನಡುವಿನ ವ್ಯತ್ಯಾಸ ಹೇಳುತ್ತಾ ಓಂ ಸಹಿತ ಮಂತ್ರದಲ್ಲಿ ಅಪಾರ ಅರ್ಥವಿದೆಯೆಂದು ಹೇಳುತ್ತದೆ ಈ ವಚನ.'[೨೯]

ಶಾಸ್ತ್ರಗ್ರಂಥಗಳಲ್ಲಿ ಪ್ರಣವ ಪಂಚಾಕ್ಷರಿಗೆ ಅತ್ಯುನ್ನತ ಸ್ಥಾನ ಕೊಡಲಾಗಿದೆ. ಸಪ್ತಕೋಟಿ ಮಂತ್ರಗಳಲ್ಲಿ ಇದನ್ನು ಮಹಾಮಂತ್ರವೆಂದು ಹೇಳಲಾಗಿದೆ. ಷಡಕ್ಷರಿಯನ್ನು ಮಂತ್ರಮಾತಾ ಎಂದೂ ಪಂಚಾಕ್ಷರಿಯನ್ನು ಪರಮೇಶ್ವರ ಎಂದೂ ಕರೆಯಲಾಗಿದೆ.[೩೦]

ಶಿವಯೋಗದ ಸಾಧನೆಗೆ ಸೋಪಾನವಾಗುವುದು ಶಿವಮಂತ್ರವೆಂಬುದನ್ನು ಈ ವರೆಗೆ ನೋಡಿದ್ದೇವೆ. ಗುರು ಹಸ್ತಮಸ್ತಕ ಸಂಯೋಗದಿಂದ ತ್ರಿಮಲಗಳನ್ನು ದೂರೀಕರಿಸಿ ಕರಸ್ಥಲದಲ್ಲಿ ಚಿದ್ರೂಪದ ಇಷ್ಟಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. ಮಂತ್ರ ಪ್ರಯೋಗದ ವಿಶಿಷ್ಟವೂ ರಹಸ್ಯಪೂರ್ಣವೂ ಆಗಿರುವ ಕ್ರಮವನ್ನು ತಿಳಿಸುತ್ತಾನೆ. ಹೀಗೆ ಜೀವಾತ್ಮನಿಗೆ ಅಂಟಿದ ಎಂಟು ಆವರಣಗಳನ್ನು ದೂರೀಕರಿಸುವುದು, ಮಂತ್ರವನ್ನು ದಯಪಾಲಿಸುವುದು ಇವುಗಳನ್ನು ಸಮರ್ಥ ಗುರು ಮಾತ್ರ ಮಾಡುವುದು ಸಾಧ್ಯ. ಅವನು ಮೋಕ್ಷಕ್ಕೆ ದಾರಿ ತೋರಿಸುವವನು ಮಾತ್ರವಲ್ಲ ಸಾಕ್ಷಾತ್ ಶಿವಸ್ವರೂಪಿಯಾಗಿರುತ್ತಾನೆ.

ಶಿವಮಂತ್ರವನ್ನು ಸಾಧನ ಮಾಡಿಕೊಂಡು ಧ್ಯಾನದಲ್ಲಿ ಊರ್ಧ್ವಮುಖಿಯಾದರೆ ಭವಬಂಧನವನ್ನು ಹರಿಯುವುದು ಸಾಧ್ಯವಾಗುತ್ತದೆ. ಜನನ–ಮರಣಗಳಿಂದ ದೂರಾಗುವುದೇ ಈ ಬಿಡುಗಡೆ. ಇದು ವೀರಶೈವತ್ವದ ಗುರಿ. ಪ್ರಕೃತಿಯಿಂದ ಇಡಿಯಾಗಿ ಬೇರೆಯಾಗುವುದು ಇಲ್ಲಿಯ ಕ್ರಿಯೆ.

ಹೀಗೆ ಮಾಡಿದಾಗ ಪುರುಷನಲ್ಲಿ ಒಂದಾದಂತೆಯೇ. ನಿರ್ಗುಣರೂಪದ ಈ ಪುರುಷನಲ್ಲಿ ಬೆರೆಯುವುದೇ ಅಂತಿಮಹಂತ. ಇದನ್ನು ಶೂನ್ಯಸಂಪಾದನೆ ಎಂದು ಕರೆದಿದ್ದಾರೆ. ಈ ಶೂನ್ಯವನ್ನು ಸಾಂಕೇತಿಕವಾಗಿ ವೃತ್ತಾಕಾರದಲ್ಲಿ '೦' ಎಂದು ನಮೂದಿಸುತ್ತಾರೆ. ಗಣಿತ ಶಾಸ್ತ್ರದಲ್ಲಿ ಈ ಶೂನ್ಯಕ್ಕೆ ಸ್ವತಂತ್ರವಾಗಿ ಯಾವ ಬೆಲೆಯೂ ಇಲ್ಲ. ಎಡಭಾಗದಲ್ಲಿ ಅಂಕಿಗಳನ್ನು ಪಡೆದಾಗ ಅದು ಮೌಲ್ಯ ಪಡೆದುಕೊಳ್ಳುತ್ತದೆ. ಅದೇ ರೀತಿ ಶುದ್ಧ ಪರಶಿವತತ್ತ್ವಕ್ಕೆ ತನ್ನದೇ ಆದ ಮೌಲ್ಯವಿದೆ. ಅದು ಮಾಯಾಪ್ರಪಂಚದ ಪ್ರಕೃತಿಯವರಿಗೆ ಗೋಚರಿಸುವುದಿಲ್ಲ. ಈ ಪ್ರಪಂಚದಿಂದ ಬೇರೆಯಾಗಿ ನಿಂತು ಪರಶಿವನಾಗಿ ನೋಡಿದಾಗ ಶೂನ್ಯದ ಮೌಲ್ಯ ಅರಿವಿಗೆ ಮೂಡುತ್ತದೆ.

'ವೃತ್ತರೂಪದ ಶೂನ್ಯದಲ್ಲಿ ತ್ರಿಜ್ಯಗಳನ್ನು ಬರೆಯುವುದರ ಮೂಲಕ ಎಂಟು ಭಾಗಗಳನ್ನು ಮಾಡಿ ಅವುಗಳಲ್ಲಿ ಆಚರಣೆಯ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವುಗಳನ್ನು ಕ್ರಮವಾಗಿ ಬರೆದಾಗ ಗುರು ಮತ್ತು ಮಂತ್ರ ಇವು ಪರಸ್ಪರ ಬದಿಯಲ್ಲಿ ತೋರುತ್ತವೆ. ಇದರಿಂದ ಸಾಧನೆಯ ಮಾರ್ಗಾವಲಂಬಿಗಳಿಗೆ ಸಹಜವಾಗಿ ಕಂಡು ಬರುವ ಅಂಶವೇನೆಂದರೆ ಇವೆರಡೂ ಪರಸ್ಪರ ಸಾನ್ನಿಧ್ಯ ಪಡೆದಿವೆ ಹಾಗೂ ಅವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ ಎಂಬುದು.'[೮೧]

ಹೀಗೆ ಗುರು ಅಜ್ಞಾನವನ್ನು ತೆಗೆದು ಜ್ಞಾನವನ್ನು, ಕತ್ತಲೆಯನ್ನು ತೆಗೆದು ಬೆಳಕನ್ನು, ಲೌಕಿಕರೂಪದ ಅಸತ್ಯವನ್ನು ತೆಗೆದು ಪಾರಲೌಕಿಕರೂಪದ ಸತ್ಯವನ್ನು ಪ್ರತಿಷ್ಠಾಪಿಸುತ್ತಾನೆ. ಅನುಭಾವದ ತುತ್ತ ತುದಿಯಲ್ಲಿ ನಿಂತು ಗುರು ಮಾತ್ರ ಹೀಗೆ ಮಾಡುವುದು ಸಾಧ್ಯ.

ಳ) ಕ್ರಿಯಾ

ತ್ರಿವಿಧ ದೀಕ್ಷೆಗಳಲ್ಲಿ ಕ್ರಿಯಾ ದೀಕ್ಷೆಯೂ ಒಂದು. ಕ್ರಿಯಾದೀಕ್ಷೆಯಿಂದ ಗುರು ಕಾಯಕ್ಕೆ ಉಪದೇಶ ಮಾಡುತ್ತಾನೆ. ಕ್ರಿಯೆಗಳಲ್ಲಿ ಮಾರ್ಗಕ್ರಿಯೆ, ಮೀರಿದ ಕ್ರಿಯೆ ಎಂದು ಎರಡು ವಿಧ. ಬಹಿರಂಗದಲ್ಲಿ ಆಚರಿಸುವ ಕ್ರಿಯೆಗಳು ಮಾರ್ಗಕ್ರಿಯೆಗಳು. ಭಕ್ತ, ಮಹೇಶ್ವರ, ಪ್ರಸಾದಿ ಸ್ಥಲಗಳ ಆಚರಣೆಗಳನ್ನು ಇದು ಒಳಗೊಳ್ಳುತ್ತದೆ. ಅಂತರಂಗದಲ್ಲಿ ಕೈಗೊಳ್ಳುವ ಕ್ರಿಯೆಗಳು ಮೀರಿದ ಕ್ರಿಯೆಗಳು. ಪ್ರಾಣಲಿಂಗಿ, ಶರಣ, ಐಕ್ಯಸ್ಥಲಗಳ ಆಚರಣೆಗಳನ್ನು ಇದು ಒಳಗೊಳ್ಳುತ್ತದೆ.[೮೨] ಗುರು ದೀಕ್ಷೆ ಕೊಡುವ

ವರೆಗಿನ ಕ್ರಿಯೆಗಳು ಬಹಿರಂಗ ಕ್ರಿಯೆಗಳಾದರೆ ಧ್ಯಾನಾವಸ್ಥೆಯ ಕ್ರಿಯೆಗಳು ಅಂತರಂಗ ಕ್ರಿಯೆಗಳೆನಿಸುತ್ತವೆ.

ಪರಶಿವಸ್ವರೂಪಿ ಗುರು ನಿತ್ಯವಾಗಿರುವ ಹಾಗೂ ಉತ್ತಮಾಂಗದಲ್ಲಿರುವ ಪರಬ್ರಹ್ಮಲಿಂಗವನ್ನು ಕರಸ್ಥಲಕ್ಕೆ ತಂದು ಮನಸ್ಸು-ಭಾವಗಳಲ್ಲಿ ಅಳವಡಿಸುತ್ತಾನೆ; ಕಣ್ಣುಗಳಿಂದ ತಿಳಿದ ಅದನ್ನು ಅಂತಸ್ಥಲದಲ್ಲಿ ಇರಿಸುತ್ತಾನೆ.[೮೩] ಹೀಗೆ ಆದಿ-ಮಧ್ಯ-ಅವಸಾನವಿಲ್ಲದ; ನಾದ ಮಯನೂ, ನಾದಾಂತನೂ, ನಾದಕ್ಕಭೇದ್ಯನೂ ಆದ ಲಿಂಗದೇವನನ್ನು ಕರಸ್ಥಲದಲ್ಲಿ ಪ್ರತಿಷ್ಠಾಪಿಸಿ ಧ್ಯಾನ-ಧಾರಣಗಳನ್ನೂ ಆ ಕರಸ್ಥಲದಲ್ಲಿ ಇರಿಸುತ್ತಾನೆ.[೮೪]

ವೇಧಾ, ಮಂತ್ರ, ಕ್ರಿಯಾ ಈ ಮೂರೂ ದೀಕ್ಷೆಗಳು ಜರುಗಿದಾಗಲೇ ದೀಕ್ಷಾ ಸಂಸ್ಕಾರವು ಪರಿಪೂರ್ಣವೆನಿಸುತ್ತದೆ.

(ಅ) ಪ್ರಾಣಾಯಾಮ

ಅಜಪ ಮಂತ್ರಪ್ರಯೋಗವೆಂದರೆ ಜಪದ ಮಂತ್ರವನ್ನು ಉಸಿರಿನ ಆರೋಹಣ ಅವರೋಹಣಗಳಿಗೆ ಹೊಂದಿಸುವುದಾಗಿದೆ ಎಂಬುದನ್ನು ನೋಡಿದ್ದೇವೆ. ಉಸಿರಿನ ಆರೋಹಣ ಮತ್ತು ಅವರೋಹಣ ಇವುಗಳಿಗೆ 'ತಟಸ್ಥೀಕರಣ' ಎಂಬ ಶಬ್ದವನ್ನು ಸೇರಿಸಿದರೆ ಈ ಗುಂಪು ಇಂಥದೇ ಅರ್ಥ ಬರುವ ರೇಚಕ, ಪೂರಕ, ಕುಂಭಕ ಈ ಶಬ್ದಗಳ ಇನ್ನೊಂದು ಗುಂಪಿಗೆ ಸಮಾನಾಂತರವೆನಿಸುತ್ತದೆ. ಈ ಎರಡೂ ಗುಂಪಗಳು ಉಸಿರನ್ನು ವಿಶಿಷ್ಟವಾದ ಕ್ರಮಕ್ಕೊಳಪಡಿಸುವುದನ್ನು ಸೂಚಿಸುತ್ತವೆ. ಇದನ್ನು 'ಪ್ರಾಣಾಯಾಮ' ಎಂದು ಕರೆಯುತ್ತಾರೆ. ಪ್ರಾಣಾಯಾಮ ಕ್ರಮವನ್ನು ತಿಳಿಯುವುದಕ್ಕಿಂತ ಮೊದಲು 'ಪ್ರಾಣ' ಎಂದರೇನೆಂಬುದನ್ನು ನೋಡಬೇಕು.

ಭಾರತೀಯ ತತ್ತ್ವಶಾಸ್ತ್ರದ ಪ್ರಕಾರ ವಿಶ್ವದಲ್ಲಿರುವ ಪ್ರತಿಯೊಂದು ಅಂಶವು ಕನಿಷ್ಠ ಎರಡು ಭೂತಗಳ ಸಂಯೋಗದಿಂದ ಆಗಿರುವುದು. ಅದರಲ್ಲಿ ಸರ್ವವ್ಯಾಪಿಯಾಗಿರುವ ಆಕಾಶವೂ ಒಂದು. ಆಕಾಶಕ್ಕೆ ಮೂಲವಾಗಿರುವ ಶಕ್ತಿಯಿಂದ ಪ್ರಾಣವು ಉದಯಿಸಿ ಸರ್ವವ್ಯಾಪಿಯಾಗಿದ್ದು ಮಾನವನ ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳಿಗೆ ಈ ಪ್ರಾಣವೇ ಮೂಲಾಧಾರವಾಗಿದೆ. ನಾವು ಶಕ್ತಿ ಅಥವಾ ಚಲನೆ

ಎಂದು ಕರೆಯುವ ಪ್ರತಿಯೊಂದು ವಸ್ತುವೂ ಪ್ರಾಣದಿಂದ ಜನಿಸುವುದು. ಚಲನೆಯಂತೆ ಆವಿರ್ಭವಿಸುವುದೇ ಪ್ರಾಣ, ಪ್ರಾಣವೇ ಆಕರ್ಷಣ ಶಕ್ತಿ. ಅದೇ ಆಯಸ್ಕಾಂತದ ಶಿಲೆಯಲ್ಲಿರುವ ಲೋಹಚುಂಬಕ ಶಕ್ತಿ. ಮಾನಸಿಕ ಹಾಗೂ ಭೌತಿಕ ಕ್ಷೇತ್ರದ ವಿಧವಿಧವಾದ ಶಕ್ತಿಸಮೂಹವನ್ನೆಲ್ಲ ಅವುಗಳ ಮೂಲಸ್ಥಾನದಲ್ಲಿ ಐಕ್ಯಗೊಳಿಸಿದಾಗ ಅದಕ್ಕೆ ಪ್ರಾಣವೆಂದು ಹೆಸರು. ವೈವಿಧ್ಯಗಳನ್ನು ಒಳಗೊಂಡ ಜಗತ್ತು ಆಕಾಶದಿಂದ ವಿಕಾಸವಾಗುವುದು. ಆಕಾಶ ಬದಲಾಯಿಸಿದಂತೆ ಪ್ರಾಣವು ಕೂಡ ಭಿನ್ನ ಭಿನ್ನ ಶಕ್ತಿಯ ರೂಪವನ್ನು ಧರಿಸುವುದು. ಈ ಪ್ರಾಣದ ಪರಿಚಯ ಮತ್ತು ಅದರ ನಿಗ್ರಹವನ್ನು ಪ್ರಾಣಾಯಾಮವೆನ್ನುವರು. 'ಒಬ್ಬನು ಪ್ರಾಣವೆಂದರೇನೆಂಬುದನ್ನು ಚೆನ್ನಾಗಿ ತಿಳಿದುಕೊಂಡು ಅದನ್ನು ನಿಗ್ರಹಿಸುವುದನ್ನು ಕಲಿತರೆ ಪ್ರಪಂಚದಲ್ಲಿರುವ ಪ್ರತಿಯೊಂದು ಶಕ್ತಿ ಅವನ ಕರಗತವಾಗುವುದು. ಇದರಿಂದ ಬ್ರಹ್ಮಾಂಡದ ಯಾವುದೇ ಕ್ರಿಯೆಯನ್ನು ಅವನು ನಿರ್ದೇಶಿಸಬಲ್ಲ. ಏಕೆಂದರೆ ಅವನು ಪ್ರಾಣವನ್ನು ವಶಪಡಿಸಿಕೊಂಡಿರುತ್ತಾನೆ. ಇದೇ ಪ್ರಾಣಾಯಾಮದ ಕೊನೆ ಮತ್ತು ಗುರಿ'.[೮೫]

'ಮಾನಸಿಕ ನಿಗ್ರಹಶಕ್ತಿಗೂ ಪ್ರಾಣಾಯಾಮ ಅಥವಾ ಶ್ವಾಸೋಚ್ಛ್ವಾಸಗಳ ನಿಗ್ರಹಶಕ್ತಿಗೂ ಸಂಬಂಧವಿದೆ. ದೇಹವೆಂಬ ಯಂತ್ರಕ್ಕೆ ಉಸಿರು ಚಲನಾಶಕ್ತಿಯನ್ನು ಕೊಡುವ ಚಕ್ರವಿದ್ದಂತೆ. ದೊಡ್ಡ ರೇಲ್ವೆಯಂತ್ರದಲ್ಲಿ ಮೊದಲು ಫ್ಲೈವ್ಹೀಲ್ (fly wheel) ಚಲಿಸುವುದು ಕಾಣುತ್ತದೆ. ಈ ಚಲನೆಯು ಅನಂತರ ಸೂಕ್ಷ್ಮ ಸೂಕ್ಷ್ಮ ಭಾಗಗಳಿಗೂ ಪ್ರವೇಶಿಸಿ, ಟ್ರೈನಿನ ಪ್ರತಿಯೊಂದು ಭಾಗವೂ ಚಲಿಸುವಂತೆ ಮಾಡುವುದು. ಹೀಗೆ ದೇಹದಲ್ಲಿರುವ ಪ್ರತಿಯೊಂದು ಭಾಗಕ್ಕೂ ಕ್ರಿಯೋತ್ತೇಜಕ ಶಕ್ತಿಯನ್ನು ಕೊಟ್ಟು ಅದನ್ನು ಸರಿಪಡಿಸುವ ಚಕ್ರ ಉಸಿರು'.[೮೬]

'ಪ್ರತಿಯೊಬ್ಬನಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ಓಜಸ್ಸು ಸಂಗ್ರಹವಾಗಿದೆ. ದೇಹದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಶಕ್ತಿಗಳೂ ಕೊನೆಗೆ ಓಜಸ್ಸಾಗಿ ಪರಿಣಮಿಸುವುವು. ವಿಷಯ ಸುಖದಲ್ಲಿ, ಸಂಭೋಗ ಸಮಯದಲ್ಲಿ ಹೊರಕ್ಕೆ ಹೋಗುವ ಮಾನವ ಶಕ್ತಿಯನ್ನು ತಡೆದು ನಮ್ಮ ಸ್ವಾಧೀನಕ್ಕೆ ತಂದಾಗ ಅದು ಓಜಸ್ಸಾಗಿ ಪರಿಣಮಿಸುವುದು. ಇವುಗಳು ಮೂಲಾಧಾರದ ವಶದಲ್ಲಿರುವುದರಿಂದ ಯೋಗಿಯು ಪ್ರತ್ಯಕ್ಷವಾಗಿ ಅದಕ್ಕೆ ಗಮನ ಕೊಡುತ್ತಾನೆ. ಸಂಭೋಗ ಶಕ್ತಿಯನ್ನೆಲ್ಲ ಓಜಸ್ಸನ್ನಾಗಿ ಮಾಡಲು ಅವನು ಯತ್ನಿಸುತ್ತಾನೆ. ಬ್ರಹ್ಮಚರ್ಯವೃತವನ್ನು ಪರಿಪಾಲಿಸುವ ಸ್ತ್ರೀ ಮತ್ತು ಪುರುಷರು ಓಜಸ್ಸನ್ನು

[illegible]

[illegible]

[illegible]

ಮೇಲೇಳುವಂತೆ ಮಾಡಿ ಆ ಶಕ್ತಿಯನ್ನು ಮೆದುಳಿನಲ್ಲಿ ಸಂಗ್ರಹಿಸಿಡಬಹುದು. ಆದ ಕಾರಣವೇ ಬ್ರಹ್ಮಚರ್ಯವನ್ನು ಅತ್ಯಂತ ಪವಿತ್ರವಾದ ಶೀಲವೆಂದು ಪರಿಗಣಿಸಿರುವುದು'.[೮೭]

'ಆಧ್ಯಾತ್ಮಿಕ ಜೀವನದಲ್ಲಿ ಸತ್ಯವಾಗಿರುವ ಅಂಶಗಳೆಲ್ಲವೂ ಪ್ರಾಣಾಯಾಮದಲ್ಲಿ ಅಡಗಿವೆ. ಮಾನಸಿಕ ಶಕ್ತಿಯಂತೆ ತೋರುವ ಪ್ರಾಣವನ್ನು ಮಾನಸಿಕ ಶಕ್ತಿಯ ಮೂಲಕವಾಗಿ ಮಾತ್ರ ನಿಗ್ರಹಿಸಬಹುದು. ಅಂತರಂಗದಲ್ಲಿ ಮಾನಸಿಕ ಶಕ್ತಿಯಾಗಿರುವ ಪ್ರಾಣವನ್ನು ಮಾನಸಿಕ ಶಕ್ತಿಯ ಮೂಲಕ ನಿಗ್ರಹಿಸುವುದೇ ರಾಜಯೋಗ'.[೮೮]

(೯) ಕುಂಡಲಿನಿ

'ಕುಂಡಲಿನಿ' ಎಂದರೆ ಆಧಾರ ಚಕ್ರದಲ್ಲಿ ಮುಖವನ್ನಿರಿಸಿ ಬ್ರಹ್ಮ ರಂಧ್ರದಲ್ಲಿ ಬಾಲವನ್ನು ಚಾಚಿರುವ 'ಸರ್ಪ'ಸಂಜ್ಞಿತವಾದ ಒಂದು ನಾಡಿವಿಶೇಷ.[೮೯]

'ಯೋಗಿಗಳ ಅಭಿಪ್ರಾಯದಂತೆ ನಮ್ಮ ಬೆನ್ನುಮೂಳೆಯಲ್ಲಿ ಇಡಾ ಮತ್ತು ಪಿಂಗಳಾ ಎಂಬ ಎರಡು ನರಗಳ ಪ್ರವಾಹವಿದೆ. ಬೆನ್ನಿನ ಮೂಳೆಯ ಮಧ್ಯದಲ್ಲಿ ಸುಷುಮ್ನಾ ಎಂಬ ನಾಲೆ ಇದೆ. ಈ ನಾಲೆಯ ಕೆಳಭಾಗದಲ್ಲಿ ಯೋಗಿಗಳು ತಿಳಿಸುವ ಕುಂಡಲಿನಿಯ ಪದ್ಮವಿರುವುದು. ಅದು ತ್ರಿಕೋನಾಕಾರವಾಗಿದೆಯೆಂದು ವಿವರಿಸುತ್ತಾರೆ. ಯೋಗಿಗಳ ಸಾಂಕೇತಿಕ ಭಾಷೆಯಲ್ಲಿ ಕುಂಡಲಿನಿ ಎಂಬ ಶಕ್ತಿ ಅಲ್ಲಿ ಸುಪ್ತವಾಗಿರುವುದು. ಕುಂಡಲಿನಿ ಜಾಗ್ರತವಾದ ಮೇಲೆ ಈ ಬೆನ್ನು ಮೂಳೆಯ ಮಧ್ಯದಲ್ಲಿರುವ ನಾಲೆಯ ಮೂಲಕ ಮೇಲೆ ಹೋಗಲು ಯತ್ನಿಸುತ್ತದೆ. ಅದು ಮೆಟ್ಟಲುಗಳನ್ನು ಕ್ರಮೇಣ ಏರಿದ ಮೇಲೆ ಮನಸ್ಸಿನ ಅನೇಕ ಪದರಗಳು ಕ್ರಮೇಣ ಪ್ರಕಾಶಕ್ಕೆ ಬರುವುವು. ಆಗ ಯೋಗಿಗೆ ನಾನಾ ವಿಧವಾದ ದರ್ಶನಗಳೂ, ಹಲವು ವಿಧದ ಶಕ್ತಿಗಳೂ ಪ್ರಾಪ್ತವಾಗುತ್ತವೆ. ಅದು ಮೆದುಳನ್ನು ಸೇರಿದ ಮೇಲೆ ಯೋಗಿಯು ದೇಹದಿಂದ ಮತ್ತು ಮನಸ್ಸಿನಿಂದ ಸಂಪೂರ್ಣ ಬೇರೆಯಾಗಿ ಆತ್ಮಬಂಧನದಿಂದ ಮುಕ್ತನಾಗುವನು.'[೯೦]

ಪ್ರತಿಯೊಂದು ವ್ಯಕ್ತಿಯಲ್ಲಿ ಓಜಸ್ಸು ಕೆಳಮುಖವಾಗಿಯೂ ಹರಿಯಬಹುದು, ಮೇಲ್ಮುಖವಾಗಿಯೂ ಹರಿಯಬಹುದು. ಕುಂಡಲಿನಿಯು ಬ್ರಹ್ಮರಂಧ್ರದಲ್ಲಿ ಬಾಲವನ್ನಿಟ್ಟು

ಆಧಾರಚಕ್ರದಲ್ಲಿ ಮುಖವನ್ನಿರಿಸಿದಾಗ ಓಜಸ್ಸು ಕೆಳಮುಖವಾಗಿ ಹರಿಯತೊಡಗುವುದು ಸಹಜ. ಇದು ಸೃಷ್ಟಿಕ್ರಿಯೆಗೆ ಸಹಾಯಕವಾಗುವ ಅಂಶ. ಸೃಷ್ಟಿಕ್ರಿಯೆಯನ್ನು ಸತತವಾಗಿ ನಡೆಸಿಕೊಂಡು ಹೋಗುವ ಪ್ರಯತ್ನ ಮಾಡಿದರೆ ಓಜಸ್ಸೆಲ್ಲ ಹರಿದು ಹೋಗಿ ಆ ವ್ಯಕ್ತಿ ಒಣಗಿದ ಸೋರೆಕಾಯಿಯಂತಾಗಬೇಕಾಗುತ್ತದೆ. ಇದಕ್ಕೆ ಬದಲಾಗಿ ಓಜಸ್ಸು ಕೆಳಮುಖವಾಗಿ ಹರಿದು ಹೋಗುವುದನ್ನು ತಡೆಯುವುದರಿಂದ ದೈಹಿಕವಾಗಿ ಸಶಕ್ತನಾಗುಳಿಯಬಹುದಾದರೂ ಮಾನಸಿಕ ಸ್ವಾಸ್ಥ್ಯ ಕೆಡುವ ಸಾಧ್ಯತೆ ಇರುತ್ತದೆ.

ಇಂದ್ರಿಯನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು :
ಮುಂದೆ ಬಂದು ಕಾಡುವುವು ಪಂಚೇಂದ್ರಿಯಗಳು!
ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ–ಚಂಗಳೆಯರು ?
ಸತಿಪತಿರತಿಸುಖಭೋಗೋಪಭೋಗವಿಳಾಸವ
ಬಿಟ್ಟನೆ ಸಿಂಧು ಬಲ್ಲಾಳನು ?
ನಿಮ್ಮ ಮುಟ್ಟಿ ಪರಧನ – ಪರಸತಿಯರಿಗೆಳಸಿದರೆ
ನಿಮ್ಮ ಚರಣಕ್ಕೆ ದೂರ, ಕೂಡಲಸಂಗಮದೇವಾ! ॥ [7]

ಈ ವಚನದಲ್ಲಿ ಬಸವಣ್ಣ ಸೃಷ್ಟಿಕ್ರಿಯೆಯನ್ನು ನಿಷೇಧಿಸಿದರೆ ಪಂಚೇಂದ್ರಿಯಗಳು ಕಾಡುತ್ತವೆಂದು ತಿಳಿಸುತ್ತಾನೆ. ಅದಕ್ಕಾಗಿಯೇ ಬಹಳಷ್ಟು ಶಿವಶರಣರು ವೈವಾಹಿಕ ಬದುಕು ನಡೆಸುತ್ತ ಆಧ್ಯಾತ್ಮಿಕ ದಾರಿಯನ್ನು ಸುಗಮಗೊಳಿಸಿಕೊಂಡರೆಂಬುದು ಇದರಿಂದ ತಿಳಿದು ಬರುತ್ತದೆ. ಆದರೆ ಕೇವಲ ಸಾಂಸಾರಿಕ ಬದುಕಿನಲ್ಲಿ ಸಾಗುವುದೂ ಮೋಕ್ಷಕ್ಕೆ ಸೋಪಾನವೆನಿಸಲಾರದು. ನಾವೀಗಾಗಲೇ ನೋಡಿರುವಂತೆ ಕೆಳಮುಖವಾಗಿ ಹೋಗುವ ಓಜಸ್ಸನ್ನು ಮೇಲ್ಮುಖಗೊಳಿಸುವ ಕ್ರಮವನ್ನು ಅರಿಯಬೇಕು. ಹಾಗೆ ಮಾಡಿದರೆ ಕುಂಡಲಿನಿಯನ್ನು ಜಾಗ್ರತಗೊಳಿಸಿದಂತಾಗುತ್ತದೆ. ಈ ಜಾಗ್ರತ ಕುಂಡಲಿನಿಯು ಬಾಲವನ್ನು ಬ್ರಹ್ಮರಂಧ್ರದಲ್ಲಿಟ್ಟು ಮುಖವನ್ನು ಆಧಾರಚಕ್ರದಲ್ಲಿಡುವ ಬದಲಾಗಿ ಬಾಲವನ್ನೇ ಆಧಾರ ಚಕ್ರದಲ್ಲಿಟ್ಟು ಮೇಲ್ಮುಖವಾಗಿ ಸುಳಿಯಲು ಪ್ರಾರಂಭಿಸುತ್ತದೆ. ಈ ರೀತಿಯಾಗಿ ಮುಂದುವರಿಯಬೇಕಾದರೆ ಏನು ಮಾಡಬೇಕು? ಮನುಷ್ಯ ಮಾತ್ರರಿಗೆ ಅದು ಸಾಧ್ಯವೆ? ಸಾಧವಿದ್ದರೆ ಅದು ಸಾರ್ವತ್ರಿಕ ಅನುಭವವೇಕಾಗಿಲ್ಲ? ಇವೇ ಮುಂತಾದ ಪ್ರಶ್ನೆಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ.

ನಿಯಮಬದ್ಧವಾಗಿ ಉಸಿರಾಡಿಸುವುದರಿಂದ ದೇಹದಲ್ಲಿರುವ ಕಣಗಳಿಗೆಲ್ಲಾ ಒಂದೇ ಕಡೆಗೆ ಹರಿಯುವ ಸ್ವಭಾವ ಬರುವುದು. ಮನಸ್ಸು ಇಚ್ಛಾಶಕ್ತಿಗೆ ಬದಲಾವಣೆ ಹೊಂದಿದ ಮೇಲೆ, ವಿದ್ಯುತ್ ಶಕ್ತಿಗೆ ಸರಿಸಮನಾದ ಒಂದು ಶಕ್ತಿಗೆ ರೂಪಾಂತರ ಹೊಂದುವುದೆಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ. ಮುಂದುವರಿದು, ವಿದ್ಯುತ್‌ಶಕ್ತಿಯ ಪ್ರಭಾವಕ್ಕೆ ಒಳಪಟ್ಟ ನರಗಳು ಧ್ರುವದ ಕಡೆಗೆ ತಿರುಗುವುದು ಕಂಡು ಬಂದಿದೆಯೆಂದೂ ಇಚ್ಛಾಶಕ್ತಿಯು ನರಗಳ ಶಕ್ತಿಗೆ ರೂಪಾಂತರ ಹೊಂದಿದ ಮೇಲೆ ಒಂದು ವಿಧದ ವಿದ್ಯುತ್‌ಶಕ್ತಿಯ ಯಂತ್ರದಂತೆ ಆಗುವುದೆಂದೂ ತಿಳಿಸುತ್ತಾರೆ. ‘ಯೋಗಿಗೆ ಬೇಕಾಗುವುದೇ ಈ ಪ್ರಚಂಡ ಇಚ್ಛಾಶಕ್ತಿ. ಇದು ನಮ್ಮ ದೇಹಕ್ಕೆ ಪ್ರಾಸಬದ್ಧವಾದ ಚಲನೆಯನ್ನು ತರುವುದು. ಶ್ವಾಸೋಚ್ಛ್ವಾಸಗಳ ಕೇಂದ್ರದ ಮೂಲಕ ಉಳಿದ ಕೇಂದ್ರಗಳನ್ನು ಸ್ವಾಧೀನಕ್ಕೆ ತರಲು ಇದು ನಮಗೆ ಸಹಾಯ ಮಾಡುತ್ತದೆ. ಪ್ರಾಣಾಯಾಮದ ಗುರಿಯು ಮೂಲಾಧಾರದಲ್ಲಿ ಸುಪ್ತವಾಗಿರುವ ಕುಂಡಲಿನೀ–ಶಕ್ತಿಯನ್ನು ಜಾಗ್ರತಗೊಳಿಸುವುದು.’[೯೨] ಮಲತ್ರಯಗಳನ್ನು ನಿವಾರಿಸಿಕೊಂಡು ವೇಧಾ–ಮಂತ್ರ–ಕ್ರಿಯಾದೀಕ್ಷೆಯನ್ನು ಪಡೆದು ಪ್ರಾಣಾಯಾಮದೊಂದಿಗೆ ಮಾತೃಕಾಮಂತ್ರವನ್ನು ಸಮನ್ವಯಗೊಳಿಸಿದರೆ ಇದು ಸಾಧ್ಯವೆಂಬುದನ್ನು ಶಿವಶರಣರು ತೋರಿಸಿದ್ದಾರೆ.

ಅಂಗುಷ್ಠ ಪರಿಮಾಣದಲ್ಲಿರುವ ಜೀವಾತ್ಮನು ಭ್ರೂಮಧ್ಯವನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಲೂ ಇರುವ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚ ಇವುಗಳನ್ನು ಸವಾರಿ ಮಾಡುತ್ತ ಮನಸ್ಸಿನ ಮುಖಾಂತರ ಬಾಹ್ಯಪ್ರಪಂಚವನ್ನು ಅರಿಯುತ್ತಿರುತ್ತಾನೆ. ನಮ್ಮೆಲ್ಲ ಚಲನೆಗಳಿಗೂ ಪ್ರಾಣವೇ ಮೂಲ. ಜೀವಾತ್ಮನು ಪ್ರಾಣವನ್ನು ಸವಾರಿ ಮಾಡಿದ್ದರೆ ಪ್ರಾಣವು ಉಸಿರನ್ನು ಸವಾರಿ ಮಾಡಿರುತ್ತದೆ. ಉಸಿರು ಮತ್ತು ಪ್ರಾಣಗಳ ಸಂಯೋಜಿತ ಪ್ರಯತ್ನದಿಂದಾಗಿ ಜೀವಿಗಳಿಗೆ ಚಲನೆ ಸಾಧ್ಯವಾಗಿದೆ. ಶಿವಯೋಗಿಗಳಿಗೆ ಧ್ಯಾನದ ಬಲದಿಂದ ಕುಂಡಲಿನೀ ಸರ್ಪವನ್ನು ಜಾಗೃತಿಗೊಳಿಸಿ ಆಜ್ಞಾ ಚಕ್ರದ ಬಾಗಿಲನ್ನು ತೆರೆದು ಸುಷುಮ್ನಾನಾಡಿಯನ್ನು ಪ್ರವೇಶಿಸುವುದು ಸಾಧ್ಯವಾಗುತ್ತದೆ. ಇಡಾ–ಪಿಂಗಳಾ–ಸುಷುಮ್ನಾನಾಡಿಗಳು ಕೂಡುವ ಸ್ಥಾನವನ್ನು ತ್ರಿಕೂಟವೆಂದೂ, ತ್ರಿವೇಣಿಸಂಗಮವೆಂದೂ, ಶೃಂಗಾಟಕವೆಂದೂ ಕರೆಯಲಾಗಿದೆ.[೯೩] ಸರ್ಪಭೂಷಣ ಶಿವಯೋಗಿ ಇದನ್ನು ಹೀಗೆ ಪುರಸ್ಕರಿಸುತ್ತಾನೆ.

ಈಡೆಯೆ ಯಮುನೆ ಪಿಂಗಳೆಯೆ ಗಂಗೆಯು ಬ್ರಹ್ಮ

ನಾಡಿಯೆಂಬುದೆ ಸರಸ್ವತಿಯು ಮೂರೊಂದು –

[illegible]

ಗೂಡಿ ಬೆರೆದ ತ್ರಿಕೂಟವೆ ಸಂಗಮವು ॥ [೯೪]

ಈ ಬಾಗಿಲನ್ನು ತೆರೆಯುವುದು ಸಾಧ್ಯವಿರುವವರಿಗೆ ಆಂತರಿಕವಾಗಿ ಒಂದು ಅದ್ಭುತವಾದ ವಿಶ್ವವು ಗೋಚರಿಸುತ್ತದೆ. ಈಗಾಗಲೇ ನಾವು ಯೋಗಿಯು ಇಂಥ ಸಾಮರ್ಥ್ಯವನ್ನು ಪಡೆಯುತ್ತಾನೆಂಬುದನ್ನು ನೋಡಿದ್ದೇವೆ. ಮಲತ್ರಯನಿವಾರಣೆಯಿಂದೊಡಗೂಡಿದ ವೇಧಾ–ಮಂತ್ರ–ಕ್ರಿಯಾದೀಕ್ಷೆಯಿಂದ ಇದು ಸಾಧ್ಯವಾಗುತ್ತಿದ್ದರೆ ಯಾರಿಗೆ ಈ ದೀಕ್ಷೆ ದೊರೆಯುವುದಿಲ್ಲವೊ ಅವರಿಗೆ ಆಜ್ಞಾಚಕ್ರದ ಬಾಗಿಲನ್ನು ತೆರೆಯುವುದು ಸಾಧ್ಯವಾಗುವುದಿಲ್ಲ. ಈ ಬಾಗಿಲನ್ನು ತೆರೆದು ನೋಡಿದ ಶಿವಯೋಗಿಗಳ ಅನಿಸಿಕೆಗಳನ್ನು ನೋಡೋಣ.

ಸರ್ಪ ಮುಟ್ಟಲು ದೇಹಭಾವ ದರ್ಪವಳಿದು ಕರಣದುಪಟಳ

ಒಪ್ಪವಳಿದು ನಿಂದ ನಿಜವು ಇಪ್ಪದು ––––[೯೫]

ಕುಂಡಲಿನೀ ಸರ್ಪವು ಜಾಗೃತವಾಗಿ ಮೇಲ್ಮುಖವಾದಾಗ ದೇಹಭಾವವು ನಷ್ಟವಾಗಿ ವ್ಯಕ್ತಿಯ ದರ್ಪವೆಲ್ಲ ಕಳೆದು ಹೋಗುವುದು, ಕರಣಚತುಷ್ಟಯದ ಉಪಟಳದಿಂದ ಬಿಡುಗಡೆಯಾಗುವುದು ಹಾಗೂ ಬಾಹ್ಯ ಆಕರ್ಷಣೆಯು ಇಲ್ಲವಾಗಿ ಸಾಧಕನು ಸತ್ಯದ ಸಾನ್ನಿಧ್ಯದಲ್ಲಿ ನಿಲ್ಲುತ್ತಾನೆಂದು ತಿಳಿಸುತ್ತಾನೆ ಸಿದ್ಧರಾಮೇಶ್ವರ.

ಪಿಂಡಾಂಡದೊಳು ಹೊಕ್ಕು ನೋಡಿ ಅಲ್ಲಿ
ಪುಂಡರೀಕಂಗಳೊಂಬತ್ತರೊಳಾಡಿ
ಕುಂಡಲಿಯನು ಮೇಲು ಮಾಡಿ ಮೇಲೆ
ಮಂಡಲತ್ರಯದ ಚಿಜ್ಜ್ಯೋತಿಯೊಳ್ ಕೂಡಿ ॥ [೯೬]

ಮನೋಲಯವಾಗುವುದರಿಂದ ಸಾಧಕನು ಅಂತರಂಗದಲ್ಲಿ ಕಲೆಗಳನ್ನು ಕಾಣುತ್ತ, ಒಂಬತ್ತು ಸರೋವರಗಳಲ್ಲಿ ಆಡುತ್ತ ಕುಂಡಲಿನೀ ಸರ್ಪವನ್ನು ಊರ್ಧ್ವಮುಖಿಯಾಗಿಸಿ ಸ್ಥೂಲ–ಸೂಕ್ಷ್ಮ––ಕಾರಣಗಳಾಚೆಗೆ ಸಂಬಂಧಿಸಿದ ಮಂಡಲಗಳಲ್ಲಿ ಜ್ಯೋತಿಯೊಳಗೆ ಕೂಡಿ ಜ್ಯೋತಿಯಾಗುತ್ತಾನೆಂದು ಸರ್ಪಭೂಷಣ ಶಿವಯೋಗಿ ತಿಳಿಸುತ್ತಾನೆ.

ಕುಂಡಲಿನಿಯ ದಂಡನಾಳದೊಳಗಣ
ಹೃದಯಕಮಲದಬ್ಜಸ್ವರ ಮುಟ್ಟದೆ

ಭ್ರೂಮಧ್ಯ ಮೇರುಮಂದಿರಪುರದ

ಬೆಳಗಿನಲಿ ಸಹಸ್ರದಳವ ಮೆಟ್ಟಿಯಾಡಿದನು.[೯೭]

ಇಲ್ಲಿ 'ಕುಂಡಲಿಯ ದಂಡನಾಳ' ಎಂಬ ಶಬ್ದವನ್ನು ಪ್ರಯೋಗಿಸಲಾಗಿದೆ. ಧ್ಯಾನಸ್ಥನಾದವನ ಬೆನ್ನು ನೀಟಾಗಿರುತ್ತದೆ ಹಾಗೂ ಕುಂಡಲಿಯು ನಾಳರೂಪದ ದಂಡದಂತೆ ಇರುತ್ತದೆಂದು ತಿಳಿಸುತ್ತ ನಾದ-ಬಿಂದು-ಕಲಾತೀತ ಅವಸ್ಥೆಯನ್ನು ಸಾಧಕನು ತಲುಪುತ್ತಾನೆಂಬುದು ಇಲ್ಲಿಯ ತಾತ್ಪರ್ಯ. ಈ ಅತೀತಾವಸ್ಥೆಯಲ್ಲಿ ಅವನು ಸಹಸ್ರದಳ ಚಕ್ರದಲ್ಲಿ ಓಲಾಡುತ್ತಾನೆಂಬುದು ಚೆನ್ನಬಸವಣ್ಣನ ಅಭಿಪ್ರಾಯ.

ಕುಂಡಲಿ ಭ್ರೂಮಧ್ಯವ ನೋಡಿ ನಿಂದು, ಪೂರ್ವ ಹೃದಯವ ಪೂರೈಸಿ

ಮಧ್ಯಹೃದಯವನವಗ್ರಹಿಸಿ, ಊರ್ಧ್ವಹೃದಯವನೊಡಗೂಡಿ

ಪಶ್ಚಿಮಚಕ್ರದಲ್ಲಿ ಪ್ರಾಣವಾಸಿಯಾಗಿಪ್ಪನಾ ಶರಣ. [೯೮]

ಪ್ರಾಣಲಿಂಗಿಸ್ಥಲದ ಈ ವಚನದಲ್ಲಿ ಸಿದ್ಧರಾಮೇಶ್ವರನು ಕುಂಡಲಿನೀ ಸರ್ಪ ಜಾಗೃತವಾದಾಗಿನಿಂದ ಪ್ರಾರಂಭಿಸಿ ಮಂಡಲತ್ರಯವನ್ನು ಅಂದರೆ ಪೂರ್ವಹೃದಯ, ಮಧ್ಯಹೃದಯ ಹಾಗೂ ಊರ್ಧ್ವಹೃದಯಗಳಲ್ಲಿ ಸುಳಿದು ಒಂಬತ್ತು ಚಕ್ರಗಳಲ್ಲಿ ಕೊನೆಯದಾದ ಪಶ್ಚಿಮಚಕ್ರದಲ್ಲಿ ಶರಣನು ಇರುತ್ತಾನೆಂದು ತಿಳಿಸುತ್ತಾನೆ.

ಕುಂಡಲಿನೀ ಸರ್ಪವು ಜಾಗೃತವಾಗಿ ಊರ್ಧ್ವಗಮನವನ್ನು ಪ್ರಾರಂಭಿಸಿದರೆ ಸಾಧಕನು ಸ್ಥೂಲ, ಸೂಕ್ಷ್ಮ ಹಾಗೂ ಕಾರಣ ಶರೀರಗಳ ಸಂಬಂಧಗಳನ್ನು ಹರಿದೊಗೆದು ನಾದ-ಬಿಂದು-ಕಲಾರೂಪದ ಕ್ಷೇತ್ರಗಳನ್ನು ದಾಟಿ ಬ್ರಹ್ಮರಂಧ್ರದಲ್ಲಿಯೂ, ತದ ನಂತರ ಪಶ್ಚಿಮಚಕ್ರದಲ್ಲಿಯೂ ಆವಾಸಿಯಾಗುತ್ತಾನೆಂಬುದು ಮೇಲಿನ ಉದ್ಧರಣಗಳ ಸಾರಾಂಶ. ಈ ಊರ್ಧ್ವಗಮನದಲ್ಲಿ ಮನುಷ್ಯ ಸಹಜವಾದ ಅರಿಷಡ್ವರ್ಗ, ಸಪ್ತವ್ಯಸನಗಳು, ಅಷ್ಟಮದಗಳು ನಷ್ಟವಾಗುತ್ತವೆಂಬುದೂ ಅವುಗಳ ಒಟ್ಟು ಅಭಿಪ್ರಾಯ. ಆದರೆ ಯಾರು ದೀಕ್ಷಿತರಲ್ಲವೋ ಹಾಗೂ ಕುಂಡಲಿನೀ ಸರ್ಪದ ಯಾವುದೇ ಸ್ಪರ್ಶವನ್ನು ಪಡೆದಿಲ್ಲವೋ ಅಂಥವರ ಲಕ್ಷಣಗಳನ್ನು ಕೆಳಗಿನ ಉದ್ಧರಣಗಳು ಸ್ಪಷ್ಟಪಡಿಸುತ್ತವೆ.

ಕುಂಡಲಿಯ ಸವಿದಾತ ಹೆಂಡತಿಯನೊಲಿಯುವನೆ

ಖಂಡಿತವ ಮೀರ್ದ ಶಿವಯೋಗಿ ಮಾಂಸದ

ಪಿಂಡಕೊಲಿಯುವನೆ ಸರ್ವಜ್ಞ. [೯೯]

ಇಲ್ಲಿ 'ಹೆಂಡತಿ' ಪದವನ್ನು ವಾಚ್ಯಾರ್ಥದಲ್ಲಿ ತೆಗೆದುಕೊಂಡರೆ ಶಿವಯೋಗಿಯು ರತಿಯಲ್ಲಿ ತೊಡುಗುವುದಿಲ್ಲವೆಂದು ಅರ್ಥ ಮೂಡುತ್ತದೆ. ಅದನ್ನೇ ಲಕ್ಷ್ಯಾರ್ಥದಲ್ಲಿ ತೆಗೆದುಕೊಂಡರೆ ಶರಣಸತಿ–ಲಿಂಗಪತಿ ಭಾವದಂತೆ ಶಿವಯೋಗಿಯು ಸೇವಿಸುವುದಕ್ಕಾಗಿ ಬದುಕದೆ ಬದುಕುವುದಕ್ಕಾಗಿ ಮಾತ್ರ ಮಿತವಾಗಿ ಆಹಾರ ಸೇವಿಸುತ್ತಾನೆಂದು ಅರ್ಥವಾಗುತ್ತದೆ.

ಕುಂಡಲಿಯ ಸ್ಥಾನದಲಿ ದಂಡನಾಳದ ನಡುವೆ
ಉಂಡುಂಡು ಹೋಹರಿಗೆ ಇಂಬು ಇಲ್ಲಾ
ಉಣ್ಣದೇ ಹುಟ್ಟದೇ ಹೊಂದದೇ ಹೋಹರಿಗೆ
ಮನ್ನಣೆಯಲಾಶ್ರಯವು ಯೋಗಿನಾಥಾ || [೧೦೦]

ಅಷ್ಟಾಂಗಯೋಗಗಳಲ್ಲಿ ಒಂದಾದ ಪ್ರತ್ಯಾಹಾರವನ್ನು ಇದು ಒತ್ತಿ ಹೇಳುತ್ತದೆ. ಆಹಾರ ಸೇವನೆಯೇ ಲಾಭವೆಂದು ತಿಳಿಯುವವರಿಗೆ ಯೋಗದ ಸ್ಪರ್ಶ ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸುತ್ತದೆ ಈ ಉದ್ಧರಣ.

(ಈ) ನವಚಕ್ರಗಳು

ಮನುಷ್ಯನ ದೇಹದಲ್ಲಿ ಗುದದ್ವಾರದಿಂದ ಮೊದಲಗೊಂಡು ತಲೆಗೂದಲಿನಲ್ಲಿ ಮೂಡುವ ಸುಳಿಯ ವರೆಗೆ ಶಿವಶರಣರು ನವಚಕ್ರಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ಗುದಸ್ಥಾನದಲ್ಲಿ ಆಧಾರಚಕ್ರ, ಜನನಾಂಗದ ಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ, ನಾಭಿಸ್ಥಾನದಲ್ಲಿ ಮಣಿಪೂರಕಚಕ್ರ, ಹೃದಯಸ್ಥಾನದಲ್ಲಿ ಅನಾಹತ ಚಕ್ರ, ಕಂಠಸ್ಥಾನದಲ್ಲಿ ವಿಶುದ್ಧಿಚಕ್ರ, ಭ್ರೂಮಧ್ಯದಲ್ಲಿ ಆಜ್ಞಾಚಕ್ರ, ಮಸ್ತಕಾಗ್ರದಲ್ಲಿ ಶಿಖಾಚಕ್ರ, ಬ್ರಹ್ಮರಂಧ್ರದಲ್ಲಿ ಬ್ರಹ್ಮಚಕ್ರ, ಶಿರಸ್ಸಿನ ಹಿಂಭಾಗದಲ್ಲಿ ಕೂದಲಿನ ನಡುವೆ ಸುಳಿ ಮೂಡುವಲ್ಲಿ ಪಶ್ಚಿಮಚಕ್ರ.[೧೦೧] ನಿಜಗುಣ ಶಿವಯೋಗಿ ಹಾಗೂ ಇನ್ನಿತರ ಕೈವಲ್ಯಮಾರ್ಗದ ಕರ್ತೃಗಳು ಈ ಚಕ್ರಗಳನ್ನು ಹೆಸರಿಸುತ್ತ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ ಮತ್ತು ವಿಶುದ್ಧಿ ಚಕ್ರಗಳು ಶಕ್ತಿಚಕ್ರಗಳೆಂದೂ ಆಜ್ಞಾ, ಶಿಖಾ, ಬ್ರಹ್ಮ ಮತ್ತು ಪಶ್ಚಿಮ ಚಕ್ರಗಳು ಶಿವಚಕ್ರಗಳೆಂದೂ ಹೆಸರಿಸಿದ್ದಾರೆ. ಈ ನವಚಕ್ರಗಳ ದಾರಿಯಲ್ಲಿ ಪ್ರತಿಯೊಬ್ಬ ಮನುಷ್ಯನು ಜನ್ಮದಾರಭ್ಯ ಜೀವಾತ್ಮನ ರೂಪದಲ್ಲಿ ಆಧಾರಚಕ್ರದಿಂದ ಆಜ್ಞಾಚಕ್ರದ ವರೆಗೆ ಚಲಿಸುತ್ತಿರುತ್ತಾನೆ.

[illegible]

[illegible]

[illegible]

[illegible]

(ಉ) ಆಸನ

ಯೋಗಾಭ್ಯಾಸಿಗಳಿಗೆ ಪ್ರಾಣಾಯಾಮವು ಪ್ರಮುಖ ಕ್ರಿಯೆಯೆಂಬುದನ್ನು ನೋಡಿದ್ದೇವೆ. ಪ್ರಾಣಯಾಮಕ್ಕೆ ದೈಹಿಕ ಸಾಮರ್ಥ್ಯವೂ ಅಷ್ಟೇ ಮಹತ್ವದ್ದು. ಈ ಸಾಮರ್ಥ್ಯವನ್ನು ಪಡೆದುಕೊಳ್ಳಲು ಯೋಗ್ಯ ಆಸನಗಳನ್ನು ರೂಪಿಸಲಾಗಿದೆ. ಸಾಮಾನ್ಯ ಆರೋಗ್ಯ ಕಾಪಾಡಿಕೊಂಡು ಹೋಗುವುದಕ್ಕೂ ಆಸನಗಳನ್ನು ಬಳಸುವುದುಂಟು. ಆದರಿಂದ ದೈಹಿಕ ಸ್ವಾಸ್ಥ್ಯದ ಜೊತೆಗೆ ಮಾನಸಿಕ ಸ್ವಾಸ್ಥ್ಯವೂ ಕರಗತವಾಗುತ್ತದೆ. ವೈಶಿಷ್ಟ್ಯವೆಂದರೆ ಯೋಗಸಾಧಕರಿಗೆ ಪ್ರಾಣಾಯಾಮ ಮತ್ತು ಆಸನ ಜೊತೆಜೊತೆಯಾಗಿಯೇ ಹೋಗುವಂಥವುಗಳು. ಯೋಗ್ಯ ಆಸನಗಳನ್ನು ಅನುಸರಿಸುವವರಿಗೆ ಯೋಗಾಭ್ಯಾಸವು ಬೇಗ ಸಿದ್ಧಿಸುತ್ತದೆ.

ಯೋಗಾಭ್ಯಾಸಿಗಳನ್ನು ಪ್ರಮುಖವಾಗಿ ಎರಡು ಗುಂಪುಗಳಲ್ಲಿ ವಿಂಗಡಿಸಿದ್ದಾರೆ. ಒಂದು ವಿವಾಹಿತರ ಗುಂಪು ಇನ್ನೊಂದು ಬ್ರಹ್ಮಚಾರಿಗಳ ಗುಂಪು. ಈ ಎರಡೂ ಗುಂಪಿನವರಿಗೆ ಯೋಗಾಭ್ಯಾಸಕ್ಕಾಗಿ ಬೇರೆಬೇರೆ ರೀತಿಯ ಆಸನಗಳನ್ನು ಸೂಚಿಸಲಾಗಿದೆ.

ನಿಜಗುಣಶಿವಯೋಗಿಯು ಪದ್ಯವೊಂದರಲ್ಲಿ ಆಸನಭೇದಗಳನ್ನು ತಿಳಿಸುತ್ತಾನೆ. ಅವುಗಳೆಂದರೆ ಸಿದ್ಧಾಸನ, ಸ್ವಸ್ತಿಕಾಸನ, ಪದ್ಮಾಸನ, ವೀರಾಸನ ಮತ್ತು ಸುಖಾಸನ.[೧೦೨]

ಸಿದ್ಧಾಸನ

ಎಡಗಾಲಿನ ಹಿಮ್ಮಡಿಯಿಂದ ಗುದ ಹಾಗೂ ಗುಹ್ಯದ ಮಧ್ಯಸ್ಥಾನವನ್ನು ಒತ್ತಿ ಬಲಗಾಲಿನ ಹಿಮ್ಮಡಿಯನ್ನು ಜನನಾಂಗದ ಮೇಲ್ಭಾಗದಲ್ಲಿ ಒತ್ತಿಟ್ಟು ಅನುಕೂಲಕರವಾಗಿ ದೇಹವನ್ನು ಸ್ಥಾಪಿಸುವುದು ಸಿದ್ಧಾಸನವೆನಿಸುವುದು.

ಸ್ವಸ್ತಿಕಾಸನ

ಕಾಲುಗಳನ್ನು ಮಡಚಿ ತೊಡೆ ಮತ್ತು ಮೀನಗಂಡಗಳ ನಡುವೆ ಪಾದಗಳನ್ನು ಹುದುಗಿಸಿ ಬೆನ್ನನ್ನು ಭೂಮಿಗೆ ಲಂಬವಾಗಿರಿಸಿ ಅಧಿಕ ಸಮಯದ ವರೆಗೆ ಕುಳಿತುಕೊಳ್ಳುವುದು ಸ್ವಸ್ತಿಕಾಸನ.

ಪದ್ಮಾಸನ

ತೊಡೆಗಳ ಮೇಲೆ ಎಡದ ಹಿಮ್ಮಡಿಯು ಬಲಕ್ಕೂ ಬಲದ ಹಿಮ್ಮಡಿಯು ಎಡಕ್ಕೂ ಬರುವಂತೆ ಇಟ್ಟು ದೇಹವನ್ನು ಭೂಮಿಗೆ ಲಂಬವಾಗಿರಿಸಿ ಕುಳಿತುಕೊಳ್ಳುವುದು ಪದ್ಮಾಸನ.

ವೀರಾಸನ

ಎಡಗಾಲಿನ ಹಿಮ್ಮಡಿಯನ್ನು ಬಲತೊಡೆಯ ಕೆಳಗೆ ತಂದು ಬಲಗಾಲಿನ ಹಿಮ್ಮಡಿಯನ್ನು ಎಡತೊಡೆಯ ಮೇಲಿಟ್ಟು ಭೂಮಿಗೆ ಲಂಬವಾಗಿ ಕುಳಿತುಕೊಳ್ಳುವುದು ವೀರಾಸನ.

ಸುಖಾಸನ

ಧ್ಯಾನ ತಗಲುವುದು ಉಸಿರಾಟದಂತೆ ಸಹಜ ಸ್ಥಿತಿಗೆ ಬಂದಾಗ ಸಾಧಕನು ಮನಸ್ಸಿಗೆ ತೋಚಿದಂತೆ ಭಂಗಿಯನ್ನು ಆಯ್ದುಕೊಂಡು ನಿಶ್ಚಲನಾಗಿ ಕುಳಿತುಕೊಳ್ಳುವುದು ಸುಖಾಸನ.

ಆದರೆ ಚೆನ್ನಸದಾಶಿವಯೋಗಿಯು ಹತ್ತು ಆಸನಗಳನ್ನು ತಿಳಿಸುತ್ತಾನೆ. ಅವುಗಳೆಂದರೆ ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ಮುಕ್ತಾಸನ, ವೀರಾಸನ, ಭದ್ರಾಸನ, ಮಯೂರಾಸನ, ಸಿಂಹಾಸನ, ಗೋಮುಖಾಸನ ಮತ್ತು ಸುಖಾಸನ. [೧೦೩]

ಆಸನಗಳನ್ನು ಹಾಕುವ ಉದ್ದೇಶವನ್ನು ಗಮನಿಸಿದರೆ ನಮಗೆ ಕಂಡು ಬರುವ ಅಂಶಗಳು ಎರಡು. ಒಂದು ಭೂಮಿಗೆ ಭದ್ರವಾಗಿ ಅಂಟಿಕೊಳ್ಳುವುದಾದರೆ ಇನ್ನೊಂದು ಬೆನ್ನನ್ನು ಭೂಮಿಗೆ ಲಂಬವಾಗಿಸುವುದು. ಪ್ರಾಣಾಯಾಮದಲ್ಲಿ ಕುಂಭಕವು ಪ್ರಮುಖ ಪಾತ್ರ ವಹಿಸುತ್ತದೆಂಬುದನ್ನು ನೋಡಿದ್ದೇವೆ. ಇದರಿಂದ ಅಧೋಮುಖ ಒತ್ತಡವು ಉಂಟಾಗುವ ಸಾಧ್ಯತೆ ಇರುತ್ತದೆ. ನವರಂಧ್ರಗಳಲ್ಲಿ ಎರಡು ರಂಧ್ರಗಳಾದ ಗುದ ಮತ್ತು ಗುಹ್ಯ ಇವುಗಳ ಮುಖಾಂತರ ಆ ಒತ್ತಡವು ಜಾರಿ ಹೋಗುವುದು ತಡೆಯಲ್ಪಡಬೇಕು. ಇಲ್ಲವಾದರೆ ಚೈತನ್ಯವು ಅಧೋಮುಖವಾಗಿಯೇ ಉಳಿದು ಅಭ್ಯಾಸಿಗಳ ಶ್ರಮವು ನಿಷ್ಫಲವಾಗುತ್ತದೆ. ಈ ಎರಡು ರಂಧ್ರಗಳು ಭದ್ರವಾಗಿ ಮುಚ್ಚಲ್ಪಟ್ಟರೆ ಕುಂಭಕದ ಪರಿಣಾಮದಿಂದಾಗಿ ಕೆಳಮುಖವಾಗಬಹುದಾದ ವಾಯುವಿನ ಒತ್ತಡವು ಮೇಲ್ಮುಖವಾಗುತ್ತದೆ. ಆಗ ಪ್ರಾಣಾಯಾಮಕ್ಕೆ ಪೂರಕ ಸ್ಥಿತಿಯು ನಿರ್ಮಾಣವಾಗಿ ಕುಂಡಲಿನೀ ಸರ್ಪವು ಜಾಗೃತವಾಗಲು ಸಹಾಯಕವಾಗುತ್ತದೆ. ಸರ್ವಜ್ಞನು

[illegible]

'ನವದ್ವಾರಗಳ ಮುಚ್ಚಿ ಶಿವಧ್ಯಾನದೊಳಗಿರಬೇಕು' ಎಂದು ಹೇಳಿರುವುದು ಈ ಅಂಶವನ್ನು ಉದ್ದೇಶಿಸಿಯೇ ಇರಬೇಕು.

ನಿಜಗುಣಶಿವಯೋಗಿಯು ಐದು ಆಸನಗಳನ್ನು ಸೂಚಿಸಿದುದನ್ನು ನೋಡಿದ್ದೇವೆ. ಮೊದಲ ನಾಲ್ಕರಲ್ಲಿ ಬೆನ್ನನ್ನು ಭೂಮಿಗೆ ಲಂಬವಾಗಿಸುವುದು ಕಡ್ಡಾಯವಾಗಿದ್ದರೆ ಕೊನೆಯದಾದ ಸುಖಾಸನದಲ್ಲಿ ಈ ನಿರ್ಬಂಧವಿಲ್ಲ. ಕಾರಣವನ್ನು ಹುಡುಕುತ್ತ ಹೋದಂತೆ ಗೋಚರಿಸುವುದೇನೆಂದರೆ ಮೊದಲಿನ ನಾಲ್ಕು ಆಸನಗಳು ಯೋಗಾಭ್ಯಾಸದ ಪ್ರಾರಂಭಿಕ ಚಟುವಟಿಕೆಗಳಿಗೆ ಪೂರಕವಾಗಿವೆ. ಹಾಗಾಗಿ ಅವುಗಳ ಪ್ರಮುಖ ಉದ್ದೇಶ ವಾಯುವಿನ ಒತ್ತಡದ ಪರಿಣಾಮದಿಂದಾಗಿ ಚೈತನ್ಯವನ್ನು ಊರ್ಧ್ವಮುಖಿಯಾಗಿಸುವುದು. ಸುಖಾಸನವು ಹೆಸರೇ ಸೂಚಿಸುವಂತೆ ಅದು ಯೋಗಾಭ್ಯಾಸಕ್ಕೆ ತೊಡಗುವ ಸಾಧನವಲ್ಲ. ಅದು ಯೋಗವನ್ನು ಕರಗತ ಮಾಡಿಕೊಂಡಿರುವವನು ದೈಹಿಕವಾಗಿ ಅವಶ್ಯವಿದ್ದಷ್ಟು ಸ್ವಾತಂತ್ರ್ಯವನ್ನು ಅನುಭವಿಸುವುದಕ್ಕಾಗಿರುವ ಸಾಧನ. ಈಜು ಕಲಿಯುವದಕ್ಕೆ ಮೊದಲು ಕೈ ಕಾಲುಗಳನ್ನು ಅಲುಗಾಡಿಸುವುದು, ಬಾಯಿ ಮುಚ್ಚುವುದು, ಚಲನೆಯಲ್ಲಿರುವುದು ಇವೇ ಮುಂತಾದವು ಅಭ್ಯಾಸಿಗೆ ಕಡ್ಡಾಯವಾಗಿದ್ದರೆ ಪರಿಪೂರ್ಣ ಈಜುಗಾರನು ಇವುಗಳಲ್ಲಿ ಯಾವುದೊಂದನ್ನೂ ಮಾಡದೆ ನೀರಿನ ಮೇಲೆ ತೇಲುವುದು ಸಾಧ್ಯವಿದೆ. ಅದೇ ರೀತಿ ಈ ಸುಖಾಸನ.

ಪದ್ಯವೊಂದರಲ್ಲಿ ಐದು ಆಸನಗಳನ್ನು ಸೂಚಿಸುವ ನಿಜಗುಣ ಶಿವಯೋಗಿಯು ಅದರ ಹಿಂದಿನ ಪದ್ಯದಲ್ಲಿ 'ಆಸನ' ಶಬ್ದಕ್ಕೆ ಇನ್ನೊಂದು ವೈಶಿಷ್ಟ್ಯಪೂರ್ಣವಾದ ಅರ್ಥವನ್ನು ಕೊಡುತ್ತಾನೆ. ಸಗುಣಾಷ್ಟಾಂಗವನ್ನು ನಿರೂಪಿಸುವ ಆ ಪದ್ಯಭಾಗವು ಹೀಗಿದೆ.

ತನು ಕರಣ ವಿಷಯೇಂದ್ರಿಯ ವಿಸರವೆಲ್ಲರೊಳು ವಿರತಿ
ಜನಿಸಿಹುದೆ ಯಮವಾತ್ಮ ನಿಜದೊಲುಮೆ ನಿಯಮ
ವನಿತಾದಿ ವಿಷಯದೊಳುದಾಸೀನವಾಸನವು
ಕನಸೆಂದು ಬಾಹ್ಯವನು ಬಿಡುವುದಸುನಿಯಮ ॥ [೧೦೪]

ಈ ನುಡಿಯಲ್ಲಿ 'ವನಿತಾದಿ ವಿಷಯದೊಳುದಾಸೀನವಾಸನವು' ಎಂದು ಹೇಳಿರುವುದರಲ್ಲಿ ಸ್ತ್ರೀ ಮೊದಲಾದ ರತಿಭಾವದಲ್ಲಿ ಉದಾಸೀನ ತೋರುವುದು ಆಸನವೆಂದು ತಿಳಿಸಲಾಗಿದೆ. ಅಂದರೆ

[illegible]

[illegible]

[illegible]

[illegible]

[illegible]

[illegible]

[illegible]

ಯೋಗಾಭ್ಯಾಸಿಯು ಶರೀರ ಸುಖಕ್ಕೆ ಎಳಸುವುದು ಋಣಾತ್ಮಕ ಕ್ರಿಯೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೬. ಅನುಭಾವ

ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಬಹಳಷ್ಟು ಇನ್ನೊಬ್ಬರಿಂದ ನಕಲು ಮಾಡಿದವುಗಳೇ ಆಗಿರುತ್ತವೆ. ನಮ್ಮ ಬದುಕಿನುದ್ದಕ್ಕೂ ಈ ಅನುಕರಣ ಪ್ರವೃತ್ತಿ ಮುಂದುವರಿಯುತ್ತಲೇ ಹೋಗುತ್ತದೆ. ಭೂಮಿಗೆ ಬಂದ ಮಗು ತಾಯಿಯನ್ನು, ತಂದೆಯನ್ನು, ತನ್ನ ಪರಿಸರದಲ್ಲಿ ಸಂಪರ್ಕಿಸುವ ವ್ಯಕ್ತಿಗಳನ್ನು ಅನುಕರಿಸಲು ಪ್ರಯತ್ನಿಸುತ್ತದೆ. ಇದರ ಫಲವಾಗಿಯೇ ಆ ಮಗು ಮಾತನಾಡಲು ಕಲಿಯುತ್ತದೆ. ಮಾತೃಭಾಷೆ ಎಂಬ ಶಬ್ದವು ಈ ಕಾರಣದಿಂದಾಗಿಯೇ ರೂಪುಗೊಂಡಿರುವುದು. ತಾಯಿ, ತಂದೆ, ಇನ್ನುಳಿದವರು ಆ ಮಗುವಿಗೆ ಮಾರ್ಗದರ್ಶಕರಾಗಿರುತ್ತಾರೆ. ಈ ಪ್ರವೃತ್ತಿ ಒಂದೇ ಭಾಷೆಯನ್ನು ಮಾತನಾಡುವವರಲ್ಲಿ ಆಯಾ ಪ್ರಾದೇಶಿಕ ವ್ಯತ್ಯಾಸವನ್ನು ತೋರಿಸುವುದೂ ಈ ಅನುಕರಣಶೀಲತೆಯಿಂದಾಗಿಯೇ.

ಮಾನವ ಬದುಕಿನುದ್ದಕ್ಕೂ ವಿಚಾರಶೀಲತೆಯನ್ನು ಬೆಳೆಸಿಕೊಳ್ಳುತ್ತಾನೆ. ಈ ವಿಚಾರಶೀಲತೆಯು ಆತನ ಹಿಂದಿನ ಘಟನೆಗಳ ಒಟ್ಟು ಪರಿಣಾಮವಾಗಿರುತ್ತದೆ. ವಿಚಾರ ಮಾಡುವುದು, ತರ್ಕಿಸುವುದು, ನಿರ್ಣಯಿಸುವುದು ಮುಂತಾದವುಗಳು ಆತನ ಮೊದಲಿನ ಕಲಿಕೆಗಳ ಮಾರ್ಪಾಟಾಗಿರುತ್ತವೆ. ಈ ಎಲ್ಲ ಕ್ರಿಯೆಗಳ ಒಟ್ಟು ಪರಿಣಾಮದಿಂದಾಗಿಯೇ ನಾಗರಿಕತೆ, ಸಂಸ್ಕೃತಿ, ಸಾಹಿತ್ಯ, ಸಂಗೀತ, ಶಿಲ್ಪಕಲೆ ಮುಂತಾದವುಗಳು ಬೆಳೆದು ಬಂದಿರುವುದು. ಈ ಎಲ್ಲ ಬೆಳವಣಿಗೆಗಳ ಹಿಂದೆ ಮನುಷ್ಯನ ಬುದ್ಧಿ ಮತ್ತು ಮನಸ್ಸು ಇವುಗಳ ಕೊಡುಗೆ ಅಪಾರವಾಗಿರುತ್ತದೆ. ಬುದ್ಧಿಗೆ ಸಂಬಂಧಿಸಿದಂತೆ ಇಲ್ಲಿ ಚರ್ಚಿಸುವ ಪ್ರಸಂಗವಿಲ್ಲವಾದ್ದರಿಂದ ಮನಸ್ಸಿನ ಕೊಡುಗೆಯನ್ನು ಮಾತ್ರ ನೋಡೋಣ.

ನಮ್ಮ ತಿಳುವಳಿಕೆಗೆ ಬಂದು ಅಪ್ಪಳಿಸುವ ಪ್ರತಿಯೊಂದು ಅಂಶವನ್ನೂ ನಾವು ಗ್ರಹಿಸುವುದು ಮನಸ್ಸನ್ನು ಸಾಧನವನ್ನಾಗಿ ಮಾಡಿಕೊಂಡು. ಸಾಮಾನ್ಯರಲ್ಲಿ ಮೂಡಿ ಬರುವ ವಿಚಾರಸರಣಿಯನ್ನು ಮೀರಿ ನಿಲ್ಲುವ ವಿಷಯಗಳೂ ಕೆಲವರಲ್ಲಿ ಇರುತ್ತವೆ. ಇಂದ್ರಜಾಲ ಅವುಗಳಲ್ಲೊಂದು. ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ಗ್ರಹಿಸುವ ಮನಸ್ಸನ್ನು ಮೀರಿದ ಅಂಶಗಳಾಗಿ ಬಹಳಷ್ಟು ಜನರಿಗೆ ಅವು

[illegible]

[illegible]

[illegible]

[illegible]

[illegible]

[illegible]

ಅದ್ಭುತವೆನಿಸುತ್ತವೆ, ಮನುಷ್ಯಮಾತ್ರರಿಗೆ ಅಸಾಧ್ಯವೆಂಬಂತೆ ತೋರುತ್ತವೆ. ಹಿಪ್ನಾಟಿಸಂ (hypnotism) ಎಂದು ಕರೆಯಲ್ಪಡುವ ಕ್ರಿಯೆಯೂ ಇಂಥದೇ ಆಗಿದೆ. ಇವುಗಳಲ್ಲಿ ನಮ್ಮ ಮಾನಸಿಕ ಪ್ರಜ್ಞೆಯನ್ನು ಮೀರುವ ಅಂಶಗಳು ಗೋಚರಿಸುವುದರಿಂದ ಅವುಗಳನ್ನು ಪ್ರಯೋಗಿಸುವವರು ಸಾಮಾನ್ಯರಿಗಿಂತ ಭಿನ್ನರಾಗಿ, ಉನ್ನತ ಮಟ್ಟದವರಾಗಿ ಕಾಣುತ್ತಾರೆ. ವೈಜ್ಞಾನಿಕ ಪ್ರಕ್ರಿಯೆಗಳೂ ಅನೇಕರಲ್ಲಿ ಆಶ್ಚರ್ಯವನ್ನು ಹುಟ್ಟು ಹಾಕುತ್ತವೆ. ಇವೆಲ್ಲವುಗಳಲ್ಲಿ ಮನಸ್ಸಿನ ಸಾಮಾನ್ಯ ಸ್ಥಿತಿಗಿಂತ ಮೇಲ್ಮಟ್ಟದ ಸ್ಥಿತಿಯೊಂದು ಇರಬೇಕೆಂದು ತಿಳುವಳಿಕೆ ಸಂಶಯ ತಾಳುತ್ತದೆ. ಇಂಥದೇ ಒಂದು ಅಂಶವನ್ನು ಮಿಸ್ಟಿಸಿಸಮ್(mysticism) ಎಂದು ಆಂಗ್ಲ ಭಾಷೆಯಲ್ಲಿ ಗುರುತಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಇದನ್ನು ಗೂಢವಾದುದು, ರಹಸ್ಯವಾದುದು; ತಿಳಿಯಲು ಮತ್ತು ಯೋಗ್ಯ ಕಾರಣಗಳಿಂದ ಸಮರ್ಥಿಸಲು ಅಸಾಧ್ಯವಾದುದು; ಅನಿರ್ದಿಷ್ಟವಾದುದು; ಕೇವಲ ಭಾವನಾತ್ಮಕವಾದುದು – ಈ ಮುಂತಾದ ಅರ್ಥಗಳಲ್ಲಿ ಉಪಯೋಗಿಸಿರುವುದು ಕಂಡು ಬರುತ್ತದೆ. [೧೦೫]

Encyclopaedia of Britanica ದಲ್ಲಿ 'ಮಿಸ್ಟಿಸಿಸಮ್' ಎಂಬುದನ್ನು ಹೀಗೆ ವಿವರಿಸಲಾಗಿದೆ.

Mysticism appears in connection with the endeavour of human mind to grasp the divine essence or the ultimate reality of things, and to enjoy the blessedness of actual communion with the Highest. The first is the philosophic side of mysticism, the second its religious side. The first is theoratical or speculative, the second practical. ಮುಂದುವರೆಯುತ್ತ ಅಲ್ಲಿ ಹೀಗೆ ತಿಳಿಸಲಾಗಿದೆ Mysticism is not a name applicable to any particular system. It may be the outgrowth of many differing modes of thought and feeling.

'ಮಿಸ್ಟಿಸಿಸಮ್' ಯಾವುದೇ ಒಂದು ವಿಶಿಷ್ಟವಾದ ಮಾರ್ಗಕ್ಕೆ ಅನ್ವಯಿಸುವ ಹೆಸರಲ್ಲ. ಭಿನ್ನತೆಯನ್ನು ತೋರುವ ಎಷ್ಟೋ ವಿಚಾರಸರಣಿಗಳ ಹಾಗೂ ಅನಿಸಿಕೆಗಳ ಬೆಳವಣಿಗೆಯೂ ಇದಾಗಿರಬಹುದು ಎಂದರ್ಥ.[೧೦೬]

ಪ್ರಪಂಚದ ಸತ್ಯವನ್ನೆಲ್ಲಾ ಆಳೆಯಲು ಬುದ್ಧಿಯನ್ನು ಉಪಯೋಗಿಸಿದರಾಯಿತು ಎಂಬ ವಾದವು ಸರಿಯಲ್ಲ. ಏಕೆಂದರೆ ಬುದ್ಧಿಯೊಂದರಿಂದಲೇ ಸತ್ಯದ ಸಮಗ್ರ ಸ್ವರೂಪವನ್ನು ಅರಿಯುವುದು ಸಾಧ್ಯವಿಲ್ಲವೆಂಬುದು ಹಾಗೂ ಪ್ರಯೋಗ ಪರೀಕ್ಷೆಗಳಿಂದ ಉಂಟಾಗುವ ಅನುಭವದಿಂದ ಅದು ಸಾಧ್ಯವೆಂಬುದು ಈ ವಿಧಾನವನ್ನು ಅನುಸರಿಸುವವರ ಅಭಿಪ್ರಾಯ. ಆದರೆ ಇವೆರಡೂ ಒಂದು ಮಟ್ಟದ ವರೆಗೆ ಮಾತ್ರ ಜ್ಞಾನವನ್ನು ತಂದು ಕೊಡುತ್ತವೆಯೆಂದೂ ಪರಿಪೂರ್ಣಜ್ಞಾನವನ್ನು ಇವುಗಳಿಂದ ಪಡೆದುಕೊಳ್ಳುವುದು ಸಾಧ್ಯವಿಲ್ಲವೆಂದೂ ಇನ್ನೊಂದು ಗುಂಪಿನ ವಾದ. "ಎಲ್ಲಿಯೋ ಒಂದು ಕಡೆ ಬುದ್ಧಿ ಮುಂಗಾಣದೆ ದಿಗ್ಭ್ರಮೆಗೊಂಡು ನಿಂತಾಗ ಬಾಹ್ಯ ಪ್ರಯೋಗ ಪರೀಕ್ಷೆಗಳಿಂದ ಉಂಟಾದ ಅನುಭವ ತತ್ತರಿಸುತ್ತದೆ. ವಿಶ್ವಾತೀತವಾದ ಸತ್ಯವು ಬುದ್ಧಿಗೆ, ತರ್ಕಕ್ಕೆ, ಪ್ರಯೋಗ-ಪರೀಕ್ಷೆಗಳಿಗೆ ಅತೀತವಾಗುತ್ತದೆ. ಅದನ್ನು ಕಂಡುಕೊಳ್ಳಲು ಅತೀತವಾದ ದೃಷ್ಟಿಯೇ ಬೇಕಾಗುತ್ತದೆ. ಇದಕ್ಕಾಗಿ ಸಾಧಕರ ದೃಷ್ಟಿ ಅಂತರ್ಮುಖವಾಗಬೇಕಾಗುತ್ತದೆ. ಆಗ ಅದುವರೆಗೆ ಅಗೋಚರವಾದ ಒಂದು ಹೊಸ ಪ್ರಪಂಚ ಗೋಚರಿಸುತ್ತದೆ. ಕೇವಲ ಬುದ್ಧಿ, ಪ್ರಯೋಗ, ಪರೀಕ್ಷೆಗಳಿಗೆ ನಿಲುಕದ 'ಭಾವ'ವೊಂದು ಹೃದಯವನ್ನು ಜಾಗೃತಗೊಳಿಸುತ್ತದೆ. ಇದನ್ನೇ ಮಿಸ್ಟಿಸಿಸಮ್ ಎಂದು ಕರೆಯುವುದು."[೧೦೭]

ಹೃದಯದಲ್ಲಿ ಎಚ್ಚರಗೊಳ್ಳುವ ಈ ಭಾವದ ಅನುಸಂಧಾನವನ್ನೇ ಒಂದು ಅರ್ಥದಲ್ಲಿ 'ಅನುಭಾವ' ಎಂದು ಕರೆಯಬಹುದೆಂದೂ ಈ ಅನುಭಾವ ಎಂಬ ಶಬ್ದ ಶರಣರು ಅಧ್ಯಾತ್ಮ ಪ್ರಪಂಚಕ್ಕೆ ಕೊಟ್ಟ ಕಾಣಿಕೆಯೆಂದೂ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅಭಿಪ್ರಾಯ ಪಡುತ್ತಾರೆ. ಶರಣರು ಇದನ್ನು ವಿಶಿಷ್ಟವಾದ ಅರ್ಥದಲ್ಲಿ ಬಳಸಿದರೆಂದು ತಿಳಿಸುವ ತಿಪ್ಪೇರುದ್ರಸ್ವಾಮಿಗಳು ಶರಣರು ತಮ್ಮ ಅರಿವಿನಿಂದ ಮತ್ತು ಆಚರಣೆಯಿಂದ ಪಡೆದ ಅನುಭವವನ್ನು ನಿರ್ದೇಶಿಸಿಲು ಈ ಮಾತನ್ನು ಬಳಸಿದರೆಂದೂ ಅಭಿಪ್ರಾಯ ಪಡುತ್ತಾರೆ.[೧೦೮] ವೈಶಿಷ್ಟ್ಯವೆಂದರೆ ಶರಣರ ಅನುಭಾವಕ್ಕೆ ಸಂವಾದಿಯಾದುದನ್ನು ವೇದಗಳು, ಉಪನಿಷತ್ತುಗಳು, ಆಗಮಗಳು, ಭಗವದ್ಗೀತೆ ಮುಂತಾದವುಗಳಲ್ಲಿಯೂ ಎತ್ತಿ ತೋರಿಸುತ್ತಾರೆ. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ಒಂದು ಮಾತು ತಿಳಿದು ಬರುತ್ತದೆ. ಅದೆಂದರೆ ಅನುಭಾವವು ಕಾಲಾತೀತವಾಗಿದೆ ಹಾಗೂ ಅದು ನಿರಂತರವಾಗಿ ಸಾಧಕರ ಭಾವದಲ್ಲಿ ಮೂಡಿ ಬಂದಿದೆ ಮತ್ತು ಅವರಲ್ಲಿ ಕೆಲವರ ಬರಹಗಳ ಮುಖಾಂತರ ಆಗಾಗ ವ್ಯಕ್ತರೂಪದಲ್ಲಿ ನಮ್ಮ ಮುಂದಿದೆ.

[illegible]

'ಸಾಮಾನ್ಯತೆ ಪ್ರಕೃತಿಯ ಕಠೋರ ನಿಯಮ, ಯಾವುದು ಒಮ್ಮೆ ನಡೆಯಿತೋ ಅದು ಯಾವಾಗಲೂ ನಡೆಯಬಲ್ಲದು'.[೧೦೯]

ಯಾವುದೇ ವಸ್ತು ಕನಿಷ್ಟ ಎರಡು ಭೂತಗಳನ್ನು ಒಳಗೊಂಡಿದ್ದು ಅದರಲ್ಲಿ ಆಕಾಶವೂ ಒಂದೆಂದು ನೋಡಿದ್ದೇವೆ. ಈ ಆಕಾಶವೇ ಅನಿಲ–ದ್ರವ–ಘನವಸ್ತುವಾಗುವುದು. ಸೂರ್ಯ, ಚಂದ್ರ, ನಕ್ಷತ್ರಗಳಾಗುವುದೂ ಆಕಾಶವೇ. ಜೀವಿಗಳೂ, ಸಸ್ಯಗಳೂ, ಆಕಾಶದಿಂದಾಗಿವೆ. ನಾವು ನೋಡುವ ಪ್ರತಿಯೊಂದು ಆಕಾರವೂ, ನಾವು ಅನುಭವಿಸುವ ಪ್ರತಿಯೊಂದು ವಿಷಯವೂ ಆಕಾಶವೇ. ಅದನ್ನು ನಾವು ನೋಡಲಾಗುವುದಿಲ್ಲ. ಅದು ಬಹಳ ಸೂಕ್ಷ್ಮವಾಗಿದ್ದು ಸಾಧಾರಣ ಇಂದ್ರಿಯಗೋಚರಕ್ಕೆ ಮೀರಿರುವುದು. ಅದು ಸ್ಥೂಲವಾಗಿ ಒಂದು ಆಕಾರವನ್ನು ಪಡೆದಾಗ ಮಾತ್ರ ನಾವು ಅದನ್ನು ನೋಡಬಲ್ಲೆವು. ಸೃಷ್ಟಿಯ ಆದಿಯಲ್ಲಿ ಈ ಆಕಾಶವೊಂದೇ ಇದ್ದಿರುವುದು. ಕಲ್ಪದ ಕೊನೆಯಲ್ಲಿ ಘನ, ದ್ರವ, ಅನಿಲ ರೂಪದಲ್ಲಿರುವುದೆಲ್ಲ ಪುನಃ ಆಕಾಶದಲ್ಲಿ ಐಕ್ಯವಾಗುವುದು.[೧೧೦] ಕೆಳಗಿನ ವಚನವು ಈ ಮಾತನ್ನು ಪುಷ್ಟೀಕರಿಸುತ್ತದೆ.

ಆಕಾಶ ಪಾಷಾಣ ಮಾಡಬಲ್ಲಾದಡೆ ಯೋಗಿ,
ಪಾಷಾಣವ ಆಕಾಶ ಮಾಡಬಲ್ಲಾದಡೆ ಯೋಗಿ,
ಆಕಾಶದಲ್ಲಿಯ ಬಯಲು ಪಾಷಾಣದಲ್ಲಿಪ್ಪುದು
ಏಕೀಯವಾಗಬಲ್ಲಾದಡೆ ಶಿವಯೋಗಿ;
ಕಪಿಲಸಿದ್ಧ ಮಲ್ಲಿಕಾರ್ಜುನ ಆತನೆ ನೋಡಾ. [೧೧೧]

ಆಕಾಶವೇ ಶರೀರದ ಚಲನೆಯಂತೆ ಆವಿರ್ಭವಿಸುತ್ತದೆ. ನರಗಳ ಶಕ್ತಿ ತರಂಗದಂತೆ ತೋರುವುದೂ ಅದೇ, ಆಲೋಚನಾಶಕ್ತಿಯಂತೆ ತೋರುವುದೂ ಅದೇ. ಆಲೋಚನೆಯ ಮಟ್ಟದಿಂದ ಹಿಡಿದು, ಕೆಳಗಿರುವ ಸ್ಥೂಲವಾದ ಜಡಶಕ್ತಿಯ ವರೆಗೆ ಇರುವ ಎಲ್ಲವೂ ಪ್ರಾಣದ ಆವಿರ್ಭಾವ. ಈ ಪ್ರಾಣವನ್ನು ನಿಗ್ರಹಿಸಿದರೆ ಅದು ನಮ್ಮನ್ನು ಅನಂತಶಕ್ತಿಯ ಆಗರಕ್ಕೆ ಒಯ್ಯುತ್ತದೆ.[೧೧೨] ಈಗ ಕೆಲವು ವಚನಗಳನ್ನು ಪರಿಶೀಲಿಸೋಣ:

ಆಚಾರವಿಡಿದು ಲಿಂಗ, ಅನುಭಾವವಿಡಿದು ಜಂಗಮ
ತನುವಿನ ಪ್ರಾಣ ಆಚಾರ, ಮನದ ಪ್ರಾಣ ಅನುಭಾವ.
ಇದು ಕಾರಣ ಕೂಡಲಚೆನ್ನಸಂಗಮದೇವಾ,

ಲಿಂಗವನು ಜಂಗಮವನು ಬೇರರಸಲಿಲ್ಲ. [೧೧೩]

ಚೆನ್ನಬಸವಣ್ಣ ಈ ವಚನದಲ್ಲಿ ಲಿಂಗ ಮತ್ತು ಜಂಗಮ ಒಂದೇ ಎಂದು ಹೇಳುವುದಕ್ಕೆ 'ಅನುಭಾವ' ಪದವನ್ನು ಬಳಸಲಾಗಿದೆ. ವಿಶ್ವದ ಪ್ರತಿಯೊಂದೂ ಪ್ರಾಣದ ಆವಿರ್ಭಾವವೆಂಬುದನ್ನು ಸ್ವಾಮಿ ವಿವೇಕಾನಂದರ ಹೇಳಿಕೆಯಲ್ಲಿ ನೋಡಲಾಗಿದೆ. ಈ ಪ್ರಾಣವು ತನು-ಮನಗಳಿಗೂ ಮೂಲವೆಂದೂ, ಲಿಂಗ ಮತ್ತು ಜಂಗಮಗಳಿಗೆ ಆಚಾರ ಮತ್ತು ಅನುಭಾವಗಳು ಮೂಲವೆಂದೂ ತಿಳಿಸುತ್ತದೆ ಈ ವಚನ,

ವಚನದ ರಚನೆಯ ಅನುಭಾವ ಬಲ್ಲೆವೆಂದೆಂಬರು
ವಚನವಾವುದು, ರಚನೆಯಾವುದು,
ಅನುಭಾವವಾವುದು ಹೇಳಿರಣ್ಣಾ!

ವಚನ : ಆತ್ಮತೃಪ್ತಿಯನರಿಯಬಲ್ಲಡೆ.
ರಚನೆ : ಸ್ಥಾವರ ಜಂಗಮದಲ್ಲಿ ದಯವಾಗಿರಬಲ್ಲಡೆ.
ಅನುಭಾವ : ಅರಿಷಡ್ವರ್ಗಂಗಳ ಇಚ್ಛೆಗೆ ಹರಿಯದಿರಬಲ್ಲಡೆ.

ಇಂತಲ್ಲದೆ, ವೇದಶಾಸ್ತ್ರಾಗಮಂಗಳ ಬಲ್ಲೆನೆಂದು
ನುಡಿವಾತನನುಭಾವಿಯೆ?
ಅಲ್ಲ ಅವು ಬ್ರಹ್ಮನೆಂಜಲು!
ಸತ್ವರಜತಮವನೊತ್ತಿ ನಿಂದಲ್ಲಿ ಸಹಜ ನೆಲೆಗೊಂಬುದು.

ಇದನರಿಯದೆ ವಿದ್ಯಾಭ್ಯಾಸವ
ಬಲ್ಲೆನೆಂದು ನುಡಿವಾತನನುಭಾವಿಯೆ?
ಅಲ್ಲ; ಆತನು ಇದಿರ ನಂಬಿಸಿ
ಉಂಬ ಉದರ ಪೋಷಕನಯ್ಯ, ಕೂಡಲಚೆನ್ನಸಂಗಮದೇವಾ ! [೧೧೪]

ಈ ವಚನದಲ್ಲಿ ವಚನ, ರಚನೆ ಮತ್ತು ಅನುಭಾವ ಈ ಮೂರನ್ನೂ ಸಮಾನಾಂತರವಾಗಿಟ್ಟು ನೋಡಲಾಗಿದೆ. ಆತ್ಮತೃಪ್ತಿಯನರಿಯುವುದು ವಚನವೆಂದೂ, ಸ್ಥಾವರ-ಜಂಗಮದಲ್ಲಿ ದಯವಾಗಿರುವುದು ರಚನೆಯೆಂದೂ ತಿಳಿಸುತ್ತ ಅನುಭಾವವೆಂದರೆ ಅರಿಷಡ್ವರ್ಗಗಳ ಇಚ್ಛೆಗೆ ಹರಿಯದಿರುವುದು ಎಂದು ಸ್ಪಷ್ಟವಾಗಿ ಹೇಳಲಾಗಿದೆ, ಮುಂದುವರೆದು ವೇದಶಾಸ್ತ್ರಗಳು ಬ್ರಹ್ಮನ ಎಂಜಲೆಂದು ತಿಳಿಸುತ್ತ ಅವುಗಳನ್ನು

ಓದಿದವರು ಅನುಭಾವಿಗಳಲ್ಲವೆಂದೂ, ಸತ್ವ–ರಜ–ತಮಗಳನ್ನು ಒತ್ತಿ ನಿಲ್ಲುವುದು ಅನುಭಾವವೆಂದೂ ಹೇಳಲಾಗಿದೆ.

ಕೋಡುಗಲ್ಲಿನ ಮೇಲೆ ಮಾಡುವ ತಪವು
ಒಂದು ದಿನದ ಗುರುಸೇವೆಗೆ ಸರಿಯಲ್ಲ.
ಅನಂತಕಾಲ ಮಾಡುವ ಗುರುಸೇವೆಯು
ಒಂದು ದಿನದ ಲಿಂಗಪೂಜೆಗೆ ಸರಿಯಲ್ಲ.
ಅನಂತಕಾಲ ಮಾಡುವ ಲಿಂಗಪೂಜೆಯು
ಒಂದು ದಿನ ಬಡಿಸಿದ ಜಂಗಮತೃಪ್ತಿಗೆ ಸರಿಯಲ್ಲ.
ಅನಂತಕಾಲ ಬಡಿಸಿದ ಜಂಗಮತೃಪ್ತಿಯು
ಒಂದು ಕ್ಷಣದ ನಿಮ್ಮ ಶರಣರ ಅನುಭಾವಕ್ಕೆ ಸರಿಯಲ್ಲ ಕಾಣಾ,
ಕೂಡಲಚನ್ನಸಂಗಮದೇವಾ. [೧೧೫]

ಅನುಭಾವಕ್ಕೆ ಎಷ್ಟು ಫಲವಿದೆಯೆಂಬುದನ್ನು ಈ ವಚನದಲ್ಲಿ ತಿಳಿಸಲಾಗಿದೆ. ತಪಸ್ಸಿಗಿಂತ ಗುರುಸೇವೆಯು ಅಧಿಕವೆಂದೂ, ಗುರುಸೇವೆಗಿಂತ ಲಿಂಗಪೂಜೆಯು ಅಧಿಕವೆಂದೂ, ಲಿಂಗಪೂಜೆಗಿಂತ ಒಂದು ದಿನ ಬಡಿಸಿದ ಜಂಗಮತೃಪ್ತಿಯು ಅಧಿಕವೆಂದೂ ತಿಳಿಸುತ್ತ ಅನಂತಕಾಲ ಬಡಿಸಿದ ಜಂಗಮತೃಪ್ತಿಗಿಂತ ಶರಣರ ಒಂದು ಕ್ಷಣದ ಅನುಭಾವವು ಅಧಿಕವೆಂದು ತಿಳಿಸಲಾಗಿದೆ. ಅನುಭಾವಕ್ಕೆ ಎಂಥ ಉನ್ನತಮಟ್ಟದ ಮೌಲ್ಯವಿದೆ ಎಂಬುದು ಇದರಿಂದ ವಿದಿತವಾಗುತ್ತದೆ.

ಅತ್ತೆ ಮಾಯೆ, ಮಾವ ಸಂಸಾರಿ!
ಮುವ್ವರು ಮೈದುನರು ಹುಲಿಯಂಥಾ ಆವದಿರು!
ನಾಲುವರು ನಗೆವೆಣ್ಣು ಕೇಳು ಕೆಳದಿ!
ಐವರು ಭಾವದಿರನೊಯ್ವ ದೈವವಿಲ್ಲ!
ಆರು ಪ್ರಜೆಯತ್ತಿಗೆಯರ ಮೀರಲಾರೆನು ತಾಯೆ!
ಹೇಳುವಡೆ ಏಳು ಪ್ರಜೆ ತೊತ್ತಿರ ಕಾವಲು!
ಕರ್ಮವೆಂಬ ಗಂಡನ ಬಾಯಿ ಟೊಣೆದು
ಹಾದರವನಾಡುವೆನು ಹರನ ಕೊಡೆ!

ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಾಲಿತೆನು ಶಿವನೊಡನೆ
ಕರಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನ
ಸಜ್ಜನದ ಗಂಡನ ಮಾಡಿಕೊಂಬೆನು.[೧೧೬]

ಅಕ್ಕಮಹಾದೇವಿಯ ಈ ವಚನ ಬೆಡಗಿನಲ್ಲಿ ಮೂಡಿ ಬಂದಿದೆ. ಪ್ರಕೃತಿ, ಪುರುಷ, ತ್ರಿಮಲಗಳು, ಕರಣಚತುಷ್ಟಯ, ಪಂಚಭೂತಗಳು, ಅರಿಷಡ್ವರ್ಗಗಳು ಹಾಗೂ ಸಪ್ತವ್ಯಸನಗಳು ಈ ಎಲ್ಲವುಗಳ ಬೃಹತ್ ಕುಟುಂಬದಲ್ಲಿ ಕರ್ಮವೆಂಬ ಗಂಡನೊಂದಿಗೆ ಅನಿವಾರ್ಯವಾಗಿ ಸಂಸಾರ ಮಾಡಬೇಕಾಗಿ ಬಂದಿರುವ ಅಕ್ಕಮಹಾದೇವಿಗೆ ಹರನನ್ನು ಕೂಡಿ ಹಾದರ ಮಾಡಬೇಕಾಗಿದೆಯಂತೆ! ಹಾದರಕ್ಕೆ ದಾರಿ ಮಾಡಿ ಕೊಡುವ ಒಬ್ಬ ಸಖಿ ಮನಸ್ಸು. ಈ ಸಖಿಯ ಪ್ರಸಾದದಿಂದ ಶಿವನೊಡನೆ 'ಅನುಭಾವ' ಕಲಿತಳಂತೆ ಅಕ್ಕ! ಕರ್ಮವೆಂಬ ಗಂಡನ ಬಾಯ ತಿವಿದು, ಘಾತಿಸಿ ಪರಮಾತ್ಮನೆಂಬ ಸಜ್ಜನದ ಗಂಡನನ್ನು ಮಾಡಿಕೊಂಡು ಶಿವನೊಡನೆ ಅನುಭಾವ ಕಲಿಯುತ್ತಾಳೆ ನಮ್ಮಕ್ಕ!!

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ ;
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯಾ ;
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ ;
ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ !
ಕೂಡಲ ಸಂಗನ ಶರಣರ ಅನುಭಾವದಿಂದ
ಎನ್ನ ಮನದ ಕೇಡ ನೋಡಯ್ಯಾ ! [೧೧೭]

ಅಜ್ಞಾನ, ತಮಂಧ, ಅಸತ್ಯ ಇವುಗಳ ಕೇಡ ನೋಡುವುದು ಶರಣನ ಆದ್ಯಕರ್ತವ್ಯ, ಆಗಲೇ ಆತನ ಪರಿಪೂರ್ಣತೆ. ಅಜ್ಞಾನಕ್ಕೆ ಜ್ಞಾನದಿಂದ ಕೇಡು, ತಮಂಧಕ್ಕೆ ಜ್ಯೋತಿಯಿಂದ ಕೇಡು ಹಾಗೂ ಅಸತ್ಯಕ್ಕೆ ಸತ್ಯದಿಂದ ಕೇಡು. ಈ ಎಲ್ಲವುಗಳ ಕೇಡ ಬಗೆಯುವುದು ಅತ್ಯಾವಶ್ಯಕ. ಅದು ಕೂಡಲಸಂಗನ ಶರಣರ ಅನುಭಾವದಿಂದ ಮಾತ್ರ ಎಂಬುದು ಇಲ್ಲಿಯ ತಾತ್ಪರ್ಯ.

ಆದ್ಯರ ವಚನ ಆದ್ಯರಿಗಾಯಿತ್ತು :
ವೇದ್ಯರಿಗಲ್ಲದೆ ಸಾಧ್ಯವಾಗದು,

[illegible]

[illegible]

[illegible]

[illegible]

ಕೂಡಸಂಗಮದೇವಾ, ನಿಮ್ಮ ಅನುಭಾವದಿಂದ
ಎನ್ನ 'ಭವಂ ನಾಸ್ತಿ'ಯಾಯಿತ್ತು[೧೧೮]

ಈ ವಚನದಲ್ಲಿ ಅನುಭಾವದ ಗುರಿಯೇನು? ಎಂಬ ಪ್ರಶ್ನೆಗೆ 'ಜನನ–ಮರಣಗಳಿಂದ ದೂರಾಗುವುದು' ಎಂಬ ಸ್ಪಷ್ಟ ಉತ್ತರ ದೊರೆಯುತ್ತದೆ.

ಅನುಭಾವ ಅನುಭಾವವೆಂಬಣ್ಣಗಳು ನೀವು ಕೇಳಿರೆ!
ಅನುಭಾವವೆಂಬುದೊಂದೆತ್ತು ಕೆಟ್ಟಿತ್ತು.
ಎತ್ತು ಗೇಣುದ್ದ, ಕೊಂಬು ಮೊಳದುದ್ದ!
ಕೆಟ್ಟೆಂಟು ದಿನ, ಕಂಡು ಹದಿನಾರು ದಿನ
ನಿನ್ನೆ ಮೆಟ್ಟಿದ ನಾಟಿಯ ಮೊನ್ನೆ ಮೇವುದ ಕಂಡೆ
ಗುಹೇಶ್ವರಾ ಆರಸುವ ಬಾರ್ಲೈ ಕಡೆಯ ಹೊಲಕೆ. [೧೧೯]

ಈ ವಚನದಲ್ಲಿ ಬೆಡಗು ಮಡುಗಟ್ಟಿದೆ. ಅನುಭಾವದಿಂದ ಮನಕ್ಕೆ ಕೇಡಾಗಬೇಕೆಂದು ಬಸವಣ್ಣ ಹೇಳಿದರೆ ಆ ಅನುಭಾವವು ಅಂತಿಮ ನೆಲೆಯನ್ನು–ಪರಶಿವನನ್ನು–ಅರಸಬೇಕೆಂಬುದು ಅಲ್ಲಮನ ಇಂಗಿತ.

ಒಟ್ಟಿನಲ್ಲಿ 'ಅನುಭಾವ' ಪದವನ್ನು ಅರ್ಥೈಸುವುದು ಕಷ್ಟದ ಕೆಲಸ. ಬದುಕಿನ ಜಂಜಾಟದಲ್ಲಿ ಮನಕ್ಕೆ ಬಂದು ಅಪ್ಪಳಿಸುವ ಅಂಶಗಳು 'ಅನುಭವ'ಗಳೆನಿಸಿಕೊಂಡರೆ, ಮನಸ್ಸನು ಸಂಪೂರ್ಣ ಹತೋಟಿಯಲ್ಲಿಟ್ಟು ಅಥವಾ ಮನೋಲಯ ಮಾಡಿ ಅರಿತುಕೊಂಡವುಗಳು 'ಅನುಭಾವ'ದ ಅಂಶಗಳು. ಮೂಕ ಕಂಡ ಕನಸುಗಳವು.[೧೨೦] ಆದುದರಿಂದ ಅನುಭಾವವೆಂದರೆ –

೧. ಅರಿಷಡ್ವರ್ಗಗಳ ಇಚ್ಛೆಗೆ ಹರಿಯದಿರುವುದು,
೨ ಸತ್ವರಜತಮಗಳನ್ನು ಒತ್ತಿ ನಿಲ್ಲುವುದು,
೩ ಭವನಾಸ್ತಿ ಮಾಡಿಕೊಳ್ಳುವುದು,
೪. ಅಂತರಂಗದಲ್ಲಿ ಊರ್ಧ್ವಗಾಮಿಯಾಗುವುದು,
೫. ಪರಶಿವನೊಡನೆ ಒಂದಾಗುವುದು.

ಬೇರೆ ಬೇರೆ ವಿಷಯಗಳನ್ನು ಅಭ್ಯಾಸ ಮಾಡಲು ಬಳಸುವ ಮಾಪನಗಳು ಬೇರೆಬೇರೆಯಾಗಿರುತ್ತವೆ. ಗಣಿತಶಾಸ್ತ್ರದಲ್ಲಿ ಮೂಲಭೂತ ಸಂಕೇತಗಳನ್ನು ಮತ್ತು ಕ್ರಿಯೆಗಳನ್ನು ಆಧಾರವಾಗಿಟ್ಟುಕೊಂಡು ತರ್ಕದ ಸಹಾಯದಿಂದ ಅದರ ಬೆಳವಣಿಗೆಯನ್ನು ಅಭ್ಯಾಸ ಮಾಡುತ್ತಾರೆ. ಚರಿತ್ರೆಯ ಅಭ್ಯಾಸಕ್ಕೆ ಕಾಲ ಮತ್ತು ಘಟನೆಗಳ ದಾಖಲಾತಿಗಳು ಪೂರಕವಾಗುತ್ತವೆ. ಭೌತಶಾಸ್ತ್ರಗಳನ್ನು ಅಭ್ಯಾಸ ಮಾಡುವುದಕ್ಕೆ ತಾತ್ವಿಕ ಮತ್ತು ಪ್ರಾಯೋಗಿಕ ಅಂಶಗಳು ಸಹಾಯಕಾರಿಯಾಗುತ್ತವೆ. ಹೀಗೆ ವಿವಿಧ ವಿಷಯಗಳನ್ನು ಅಭ್ಯಾಸ ಮಾಡುವಾಗ ಕಾರ್ಯತತ್ಪರರಾಗಿ ಮನಸ್ಸನ್ನು ಕೇಂದ್ರೀಕರಿಸುತ್ತೇವೆ. ಆದರೆ ಶಿವಯೋಗವನ್ನು ಯಾವುದೇ ಮಾಪನದಿಂದ ಅಭ್ಯಸಿಸಿದರೂ ಅದು ನಿರ್ದಿಷ್ಟವೆನಿಸುವುದಿಲ್ಲ. ಶುದ್ಧ ತಾತ್ವಿಕ ನೆಲೆಯಲ್ಲಿ ನಿಂತು ಕೈಗೊಂಡ ಅಭ್ಯಾಸವೂ ಪ್ರಾಯೋಗಿಕ ಅಂಶಗಳಿಂದ ವಂಚಿತವಾಗುತ್ತದೆ. ಕಾರಣವೆಂದರೆ ನಾವೀಗಾಗಲೇ ನೋಡಿರುವಂತೆ ಉಳಿದ ವಿಷಯಗಳು ಮನಸ್ಸಿಗೆ ಸೀಮಿತವಾದರೆ ಶಿವಯೋಗವು ಮನಸ್ಸಿನ ಆಚೆಗಿರುವ ಕ್ಷೇತ್ರಕ್ಕೆ ಸಂಬಂಧಪಡುತ್ತದೆ. ಇದರಿಂದಾಗಿ ಶರಣರ ಅನುಭಾವದ ಅಂಶಗಳು ಮನಸ್ಸಿಗೆ ಮಾತ್ರ ಸೀಮಿತರಾಗುವವರಿಗೆ ಅವೈಜ್ಞಾನಿಕವೆಂದೂ, ಅಸತ್ಯವೆಂದೂ ತೋರಬಹುದು. ಆದುದರಿಂದ 'ಪ್ರಭುಲಿಂಗಲೀಲೆ'ಯಲ್ಲಿ ನಿರೂಪಿತವಾಗಿರುವ ಶಿವಯೋಗದ ಅಂಶಗಳನ್ನು ತರ್ಕಕ್ಕೆ ಮಾತ್ರ ಸೀಮಿತಗೊಳಿಸದೆ ಬಸವಾದಿ ಪ್ರಮಥರು, ಕೈವಲ್ಯ ಪದ್ಧತಿಯ ಕರ್ತೃಗಳು ಮೊದಲಾದ ಅನುಭಾವಿಗಳು ರಚಿಸಿದ ಸಾಹಿತ್ಯದ ಅಂಶಗಳಿಗೆ ಸಮಾನಾಂತರವಾಗಿ ನೋಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗುತ್ತದೆ.

ಬಸವಾದಿ ಪ್ರಮಥರ ವಚನಗಳಲ್ಲಿ; ನಿಜಗುಣಶಿವಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಪದಗಳಲ್ಲಿ ಶಿವಯೋಗಕ್ಕೆ ಸಂಬಂಧಿಸಿದಂತೆ ಅನೇಕ ಅಂಶಗಳು ಸೂಚಿಸಲ್ಪಟ್ಟವೆಯಾದರೂ ಅವು ಇಡಿಯಾಗಿ ವಿಷಯಗ್ರಹಣ ಮಾಡಿಕೊಳ್ಳುವುದಕ್ಕೆ ಸಾಧನವಾಗುವುದಿಲ್ಲ. ಶಿವಶರಣರ ವಚನಗಳು ಶಿವಯೋಗದ ಪ್ರತಿಪಾದನೆಗೆ ಸಂಬಂಧಿಸಿದಂತೆ ಕ್ರಮವಾದ ಅಂಶಗಳನ್ನೊಳಗೊಂಡ ಸಂರಚನೆಯ ರೂಪದಲ್ಲಿರದೆ ಚರ್ಚೆಯ ರೂಪದಲ್ಲಿ ಮೂಡಿ ಬಂದಿರುವ ತುಂಡು (stray) ವಿಷಯಗಳಾಗಿವೆ. ಹೀಗಾಗಿ ವಿಷಯದ ಪ್ರತಿಪಾದನೆಯು ವಚನಗಳಲ್ಲಿ ಓತಪ್ರೋತವಾಗಿ ಹರಿದು ಬಂದಿಲ್ಲ. ಸಮಗ್ರ ವಿಷಯವನ್ನು ಕಲೆಹಾಕಬೇಕಾದರೆ ಸಂಬಂಧಿಸಿದ ವಚನಗಳನ್ನು ವಿವಿಧ ಶರಣ-ಶರಣೆಯರಿಂದ ಆಯ್ದುಕೊಂಡು ಸಂಕಲಿಸಬೇಕಾಗುತ್ತದೆ. ಆಗಲೂ ವಿಷಯಗ್ರಹಣ ಇಡಿಯಾಗಿ

[illegible]

[illegible]

ಸಾಧ್ಯವಾಗದಿರಬಹುದು. ಶಿವಯೋಗಿಗಳ ಪದಗಳಲ್ಲಿ ಕ್ರಮವೇನೋ ಇದೆ ಆದರೆ ಅಲ್ಲಿಯೂ ಸಮಗ್ರತೆಯ ಕೊರತೆ ಎದ್ದು ಕಾಣುತ್ತದೆ. ಚೆನ್ನಸದಾಶಿವಯೋಗಿಯ 'ಶಿವಯೋಗ ಪ್ರದೀಪಿಕಾ' ಮಾತ್ರ ಹೆಸರೇ ಸೂಚಿಸುವಂತೆ ಶಿವಯೋಗದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ.

ಇಲ್ಲಿಯ ವರೆಗೆ ಅನುಭಾವದ ವಿಷಯಗ್ರಹಣದಲ್ಲಿ ತಾತ್ವಿಕ ಅಂಶಗಳನ್ನೇ ಪ್ರಮುಖವಾಗಿ ಚರ್ಚಿಸಿರುವುದರಿಂದ ಈಗ ಶಿವಾನುಭಾವಿಗಳು ಒದಗಿಸಿರುವ ಅನುಭಾವದ ಕ್ಷೇತ್ರಗಳನ್ನು ಪರೀಶೀಲಿಸೋಣ.

(೭) ಆಧಾರ ಗ್ರಂಥಗಳು

ಪ್ರಭುಲಿಂಗಲೀಲೆಯಲ್ಲಿ ಕಂಡು ಬರುವ ಶಿವಯೋಗಕ್ಕೆ ಸಂಬಂಧಿಸಿದ ಅಂಶಗಳನ್ನು ಪರ್ಯಾಲೋಚಿಸುವಲ್ಲಿ ಈ ಕೆಳಗಿನ ಕೃತಿಗಳು ಮಹತ್ವದ ಪ್ರಮಾಣಗಳನ್ನು ಒದಗಿಸುತ್ತವೆ.

(ಅ) ದೀಕ್ಷಾಬೋಧೆ

ಹೆಸರೇ ಸೂಚಿಸುವಂತೆ ಇದು ದೀಕ್ಷೆಗೆ ಸಂಬಂಧಿಸಿದ ವಿಷಯವನ್ನು ಸವಿಸ್ತಾರವಾಗಿ ಚರ್ಚಿಸುತ್ತದೆ. ಈಗಾಗಲೇ ನೋಡಿರುವಂತೆ ಇದು ಪ್ರಮುಖವಾಗಿ ಮೂರು ವಿಧದ ಬೋಧೆಯನ್ನು ಒಳಗೊಂಡಿದೆ. ಇದರ ಕರ್ತೃ ಕೆರೆಯ ಪದ್ಮರಸ.

ಮೊದಲನೆಯದು ಗುರು ಶಿಷ್ಯನಿಗೆ ದೀಕ್ಷೆಯ ಪೂರ್ವದಲ್ಲಿ ಮಾಡುವ ಬೋಧೆ. ಇದು ಶಿಷ್ಯನ ಮನಸ್ಸನ್ನು ಇಡಿಯಾಗಿ ಶಿವಪೂಜೆಯ ಕಡೆಗೆ ತಿರುಗಿಸಿ ಅದನ್ನು ದೃಢಗೊಳಿಸುತ್ತದೆ. ಇದಕ್ಕಾಗಿ ದೀಕ್ಷಾಸಂಸ್ಕಾರದ ಮಹತ್ವವನ್ನು ತಿಳಿಸುತ್ತ ಶಿಷ್ಯನು ಅಳವಡಿಸಿಕೊಳ್ಳಬೇಕಾದ ಸದಾಚಾರವನ್ನು ಸ್ಪಷ್ಟಗೊಳಿಸಲಾಗಿದೆ.

ಎರಡನೆಯದಾಗಿ ದೀಕ್ಷೆಯನ್ನು ಜರುಗಿಸುವಾಗ ನೀಡುವ ಬೋಧೆ. ಇದು ಆಣವ–ಮಾಯಾ–ಕಾರ್ಮಿಕ ಮಲಗಳನ್ನು ಇಲ್ಲವಾಗಿಸಿ ವೇಧಾ, ಮಂತ್ರ ಮತ್ತು ಕ್ರಿಯಾದೀಕ್ಷೆಗಳನ್ನು ಒದಗಿಸುವುದಾಗಿದೆ. ಲಿಂಗಾರ್ಚನೆಯ ವಿಧಾನಕ್ಕೆ ಸಂಬಂಧಿಸಿದಂತೆ ಪ್ರಾಣಾಯಾಮ, ಆಸನ, ಧ್ಯಾನಗಳನ್ನು ಇಲ್ಲಿ ತಿಳಿಸಲಾಗಿದೆ.

[illegible]

ಕೊನೆಯದಾಗಿ ಅರ್ಪಿತ ಪ್ರಸಾದಾದಿಗಳನ್ನು ಕುರಿತು ನೀಡುವ ಉಪದೇಶವಿದೆ. ಯೋಗದೀಕ್ಷೆಯಿಂದ ಹಾಗೂ ತಪಸ್ಸಿನಿಂದ ಅವಿದ್ಯೆಯ ಆವರಣವನ್ನು ಇಲ್ಲವಾಗಿಸಿಕೊಂಡರೂ ಯೋಗಾಚರಣೆ ತಪ್ಪದೆ ನಡೆಯಬೇಕಾದ ಕ್ರಿಯೆಯಾಗಿರುವುದರಿಂದ ಅಂತರಂಗ-ಬಹಿರಂಗ ಆಚರಣೆಗಳನ್ನು ಇದು ಒಳಗೊಂಡಿದೆ. ಷಡ್ವಿಧ ಅಂಗ-ಲಿಂಗಗಳು, ಅರ್ಪಿತ ಪ್ರಸಾದಗಳ ಸ್ವರೂಪ ನಿರೂಪಣೆ ಇಲ್ಲಿಯ ವಿಷಯಗಳು.

(ಆ) **ಶಿವಯೋಗ ಪ್ರದೀಪಿಕಾ**

ಈ ಕೃತಿಯ ಕರ್ತೃ ಚೆನ್ನಸದಾಶಿವಯೋಗಿ. ಯೋಗದ ಮಹತ್ವವನ್ನು ತಿಳಿಸುತ್ತ ಮಂತ್ರಯೋಗ, ಲಯಯೋಗ ಹಾಗೂ ಹಠಯೋಗ ಇವುಗಳ ವಿಷಯವಾಗಿ ಕೃತಿಕಾರ ಮೊದಲು ಚರ್ಚಿಸುತ್ತಾನೆ. ಈ ಮೂರು ಪ್ರಕಾರಗಳು ರಾಜಯೋಗಕ್ಕೆ ಪೂರಕವೆಂದು ತಿಳಿಸುತ್ತ ರಾಜಯೋಗಕ್ಕೂ, ಶಿವಯೋಗಕ್ಕೂ ತಾತ್ವಿಕವಾಗಿ ವ್ಯತ್ಯಾಸವಿಲ್ಲವೆಂದು ಹೇಳುತ್ತಾನೆ. ರಾಜಯೋಗವು ಶಿವಯೋಗದ ಪ್ರಥಮಹಂತವೆಂಬ ವಿಚಾರವನ್ನು ತಿಳಿಸುತ್ತ ಅದು ಸಾಂಖ್ಯ, ತಾರಕ, ಅಮನಸ್ಕವೆಂದು ಮೂರು ವಿಧವಾಗಿ ಮೂಡಿ ಬರುತ್ತದೆಂದು ಹೇಳುತ್ತಾನೆ. ಶಿವಾರ್ಥಿಗಳ ಬುದ್ಧಿಪ್ರವೃದ್ಧಿಗಾಗಿ ಮತ್ತು ಶಿವತತ್ವವನ್ನು ವ್ಯಕ್ತಗೊಳಿಸುವುದರಲ್ಲಿ ಪ್ರೀತರಾದವರಿಗಾಗಿ ಅವೆರಡರ ಭೇದವನ್ನು ಸ್ಪಷ್ಟಪಡಿಸುವುದಾಗಿ ತಿಳಿಸುತ್ತಾನೆ. ಶಿವಯೋಗವು ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನೆ ಇವುಗಳಿಂದ ಕೂಡಿದೆಯೆಂದು ತಿಳಿಸುತ್ತಾನೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಇವು ಯೋಗದ ಅಷ್ಟಾಂಗಗಳೆಂದು ವಿವರ ನೀಡುತ್ತಾನೆ.

'ಶಿವಯೋಗ ಪ್ರದೀಪಿಕಾ'ದ ವೈಶಿಷ್ಟ್ಯವೆಂದರೆ ಅದರ ಕರ್ತೃ ಶಿವಯೋಗಾನುಸಂಧಾನವನ್ನು ಕಂಡುಂಡವನಾಗಿಯೂ ಅದಕ್ಕೆ ವಿವರಣಕಾರನಾಗಿಯೂ ಕೃತಿರಚನೆಯಲ್ಲಿ ತೊಡಗಿರುವುದು. ಇದರ ಜೊತೆಗೆ ಮೊದಲಿನಿಂದ ಕೊನೆಯ ವರೆಗೆ ಬಸವಾರಾಧ್ಯನ ಟೀಕೆ ಇದೆ. ಶಿವಯೋಗವನ್ನು ಆಚರಣೆಯಲ್ಲಿ ತಂದಿರುವ ಒಬ್ಬನು ಇನ್ನೊಬ್ಬನ ಅನುಭಾವಕ್ಕೆ ಅಧಿಕಾರಯುತವಾದ ಟೀಕೆಯನ್ನು ಬರೆದಿರುವುದು ಇಲ್ಲಿಯ ವೈಶಿಷ್ಟ್ಯ. ಅಂತೆಯೇ ಈ ಕೃತಿಗೆ ತನ್ನದೆ ಆದ ಮಹತ್ವವಿದೆ.

[illegible]

[illegible]

[illegible]

[illegible]

(ಇ) ಕೈವಲ್ಯ ಪದ್ಧತಿ ಮತ್ತು ಕೈವಲ್ಯಕಲ್ಪವಲ್ಲರಿ

ನಿಜಗುಣಶಿವಯೋಗಿ ವಿರಚಿತ 'ಕೈವಲ್ಯ ಪದ್ಧತಿ' ಮತ್ತು ಸರ್ಪಭೂಷಣಶಿವಯೋಗಿ ವಿರಚಿತ 'ಕೈವಲ್ಯ ಕಲ್ಪವಲ್ಲರಿ' ಇವು ಸಮಾನಾಂತರ ವಿಷಯವನ್ನು ಒಳಗೊಂಡಿದ್ದು ಪ್ರಾರಂಭದಲ್ಲಿ ಮುಮುಕ್ಷುವನ್ನು ಮಾನಸಿಕವಾಗಿ ದೀಕ್ಷೆಗೆ ಸಿದ್ಧಗೊಳಿಸುವ ವಿಚಾರವನ್ನು ತಿಳಿಸುತ್ತವೆ. ಆ ಮೇಲೆ ಶಿವಯೋಗಕ್ಕೆ ಸಂಬಂಧಿಸಿದಂತೆ ಪಂಚಯೋಗಗಳು, ದೀಕ್ಷೆ, ಮಂತ್ರ, ಧ್ಯಾನ-ಧಾರಣ-ಸಮಾಧಿ ಹಾಗೂ ಐಕ್ಯ ಇವುಗಳನ್ನು ವರ್ಣಿಸುತ್ತ ಇಷ್ಟ-ಪ್ರಾಣ-ಭಾವಲಿಂಗಾರ್ಚನೆ ಇವುಗಳನ್ನು ತಿಳಿಸುತ್ತವೆ. ನಾದ-ಬಿಂದು-ಕಲೆಗಳಿಗೆ ಸಂಬಂಧಿಸಿದಂತೆ ಧೀರ್ಘ ವಿವರಣೆಯನ್ನು ಕೊಡುತ್ತ ಕಲಾತೀತ ಅವಸ್ಥೆಯನ್ನು ಅಂದರೆ ಐಕ್ಯವನ್ನು ಹಾಗೂ ಅದರ ಸ್ಥಿತಿಯನ್ನು ತಿಳಿಸುತ್ತವೆ. ಇವುಗಳಿಗೆ ಅನುಗುಣವಾಗಿ ಶಿವಯೋಗಿಯು ಅನುಸರಿಸಬೇಕಾದ ಕ್ರಿಯಾಚರಣೆಗಳನ್ನು ತಿಳಿಸುತ್ತವೆ. ಯೋಗಿಯ ಪಂಚಾವಸ್ಥೆಗಳನ್ನು ವಿವರಿಸುತ್ತ ಶರಣಸತಿ-ಲಿಂಗಪತಿ ತತ್ತ್ವವನ್ನು ಹಾಗೂ ಆಚರಣೆಯ ವಿಧಾನವನ್ನು ವರ್ಣಿಸುತ್ತವೆ. ಕೊನೆಯ ಹಂತದಲ್ಲಿ ಐಕ್ಯಸ್ಥಲವನ್ನು ಅನುಭವಿಸಿದ ಶಿವಯೋಗಿಯು ಬಹಿರಂಗಾಚರಣೆಯಲ್ಲಿ ಅನುಸರಿಸಬೇಕಾದ ನಿಯಮಾವಳಿಗಳನ್ನು ಸೂಚಿಸುತ್ತವೆ.

(ಈ) ಉರಿಯುಂಡ ಕರ್ಪುರ

ಈ ಕೃತಿಗೆ ಪರ್ಯಾಯವಾಗಿ ನಾಮಕರಣ ಮಾಡಿದ್ದು 'ಚನ್ನವೀರ ಶಿವಯೋಗಿಗಳು ಮತ್ತು ಯೋಗದರ್ಶನ' ಎಂದು. ಪ್ರಸ್ತಾವನೆಯಲ್ಲಿ ಲೇಖಕರಾದ ಬ. ಗಿ. ಯಲ್ಲಟ್ಟಿ, "ತಮ್ಮ ಜೀವನದ ಸಾದ್ಯಂತವನ್ನು ಅವರೇ ಹೇಳಿದ್ದು, ನಾನು ಕೇಳಿದ್ದು, ಅವರ ಅನುಭವದಲ್ಲಿ ನನ್ನ ಅನುಭವವನ್ನು ಏಕೀಭವಿಸಿಕೊಂಡು ಬರೆದದ್ದು", ಎಂದು ತಿಳಿಸುತ್ತಾರೆ. ಮುರಗೋಡ ಮಹಾಂತಸ್ವಾಮಿಗಳಿಂದ ಶಿವಯೋಗದೀಕ್ಷೆಯನ್ನು ಪಡೆದು ಅನುಸಂಧಾನದಲ್ಲಿ ಪರಿಪೂರ್ಣತೆಯನ್ನು ಸಾಧಿಸಿದ ಮಹಾಲಿಂಗಪುರದ ಚನ್ನವೀರ ಶಿವಯೋಗಿಗಳ ಜೀವನಚರಿತ್ರೆಯಲ್ಲಿ ಹಲವಾರು ರಹಸ್ಯಗಳನ್ನು ಹೊರಗೆಡವಲಾಗಿದೆ. ಶಿವಯೋಗಸಾಧನೆಗೆಂದು ಸ್ಥೂಲಕ್ಕೊಮ್ಮೆ, ಸೂಕ್ಷ್ಮಕ್ಕೊಮ್ಮೆ ಹಾಗೂ ಕಾರಣಕ್ಕೊಮ್ಮೆ ಹೀಗೆ ಮೂರು ಬಾರಿ ದೀಕ್ಷೆಯನ್ನು ಪಡೆದುಕೊಳ್ಳಬೇಕಾಗುತ್ತದೆಂಬುದು ಅವುಗಳಲ್ಲೊಂದು. ನಾದ ಕೇಳುವಲ್ಲಿ ಮೊದಲನೆಯ ಹಂತ ಕೊನೆಗೊಳ್ಳುತ್ತದೆ, ಅರ್ಧನಾರೀಶ್ವರ ದರ್ಶನದೊಂದಿಗೆ ಎರಡನೆಯ ಹಂತ

ಕೊನೆಗೊಳ್ಳುತ್ತದೆ ಹಾಗೂ ಜೀವಾತ್ಮ-ಪರಮಾತ್ಮ ಬೆರೆಯುವಲ್ಲಿ ಮೂರನೆಯ ಹಂತ ಕೊನೆಗೊಳ್ಳುತ್ತದೆ ಎನ್ನುವುದು ವಿಚಾರಾರ್ಹ ಅಂಶ. ಕಲಾಪ್ರಪಂಚದಲ್ಲಿ ದೇವಾಧಿದೇವತೆಗಳು, ಬಸವಾದಿ ಪ್ರಮಥರು, ಋಷಿಮುನಿಗಳು ಕಾಣುತ್ತಾರೆಂಬುದನ್ನು ಓದಿದರೆ ವೇದಾಗಮಗಳಲ್ಲಿ, ಉಪನಿಷತ್ತುಗಳಲ್ಲಿ, ಶರಣ-ಶರಣೆಯರ ವಚನಗಳಲ್ಲಿ ಈ ವಿಷಯವನ್ನು ತಿಳಿಸಿರುವುದು ಕಲ್ಪನೆ ಅಥವಾ ಉತ್ಪ್ರೇಕ್ಷೆ ಅಲ್ಲವೆಂದು ತಿಳಿದು ಬರುತ್ತದೆ.

(ಉ) ಮಹಾಯಾತ್ರೆ

ಡಾ. ಆರ್. ಸಿ. ಹಿರೇಮಠರು 'ಮಹಾಯಾತ್ರೆ'ಯಲ್ಲಿ ವೀರಶೈವದರ್ಶನದ ಉಗಮ ಹಾಗೂ ವಿಕಾಸಗಳನ್ನು ಚರ್ಚಿಸುವುದಕ್ಕೆ ಅನೇಕ ಆಕರ ಗ್ರಂಥಗಳನ್ನು ಬಳಸಿಕೊಂಡಿದ್ದಾರೆ. ಅನುಭಾವದ ದೃಷ್ಟಿಯಿಂದ ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಶರಣ-ಶರಣೆಯರ ವಚನಗಳು, ಏಕೋತ್ತರ ಶತಸ್ಥಲ, ಕರಣಹಸಿಗೆ, ಶೂನ್ಯಸಂಪಾದನೆಗಳು, ಲಿಂಗಲೀಲಾವಿಲಾಸ ಚಾರಿತ್ರ, ವೀರಶೈವ ಚಿಂತಾಮಣಿ, ಶಿವದಾಸಗೀತಾಂಜಲಿ, ವೀರಶೈವ ಕಾವ್ಯಗಳು, ವಿವೇಕ ಚಿಂತಾಮಣಿ, ವೇದಗಳು, ಆಗಮಗಳು ಮತ್ತು ಇನ್ನಿತರ ಸಮಾನಾಂತರ ಕೃತಿಗಳು.

ಇಲ್ಲಿ ವಿಷಯವನ್ನು ಆರು ಅಲೆಗಳಲ್ಲಿ ವಿಭಾಗಿಸಲಾಗಿದೆ. ಅವುಗಳೆಂದರೆ-೧) ಭಾರತೀಯ ದರ್ಶನಗಳು ೨) ಶಿವಾಗಮಗಳು-ಶೈವಧರ್ಮ ೩) ಸಿದ್ಧಾಂತ ಶಿಖಾಮಣಿ ೪) ವಚನವಾಙ್ಮಯ ೫) ಮಹಾಯಾತ್ರೆ ಪ್ರವೃತ್ತಿ ಮತ್ತು ೬) ಮಹಾಯಾತ್ರೆ ನಿವೃತ್ತಿ.

ಮೊದಲು ಷಡ್‌ದರ್ಶನಗಳನ್ನು ಮತ್ತು ಶ್ರಮಣದರ್ಶನಗಳನ್ನು ಚರ್ಚಿಸಲಾಗಿದೆ. ನಂತರ ಶಿವಾಗಮಗಳು ಮತ್ತು ಭಗವದ್ಗೀತೆ ಇವುಗಳನ್ನು ಜೊತೆಜೊತೆಯಾಗಿಟ್ಟುಕೊಂಡು ಅವುಗಳಲ್ಲಿ ಮೂಡಿ ಬಂದಿರುವ ಶೈವಧರ್ಮ, ಶೈವ ಪ್ರಭೇದಗಳು ಮತ್ತು ವೀರಶೈವದರ್ಶನ ಇವುಗಳನ್ನು ಪರಶೀಲಿಸಲಾಗಿದೆ. ಮುಂದೆ ಕಲ್ಯಾಣಕ್ರಾಂತಿ, ವಚನವಾಙ್ಮಯದ ವ್ಯಾಪ್ತಿ, ವಿಶ್ಲೇಷಣೆ, ವಿವೇಚನೆಗಳನ್ನು ಎತ್ತಿಕೊಳ್ಳಲಾಗಿದೆ. ಸಿದ್ಧಾಂತ ಶಿಖಾಮಣಿ ಮತ್ತು ಏಕೋತ್ತರ ಶತಸ್ಥಲ ಇವುಗಳಲ್ಲಿಯ ಸ್ಥಲಗಳನ್ನು ಸಮಾನಾಂತರವಾಗಿಟ್ಟು ನೋಡಲಾಗಿದೆ.

ಈ ಕೃತಿಗಳನ್ನು ಆಧರಿಸಿ ಶಿವಯೋಗವನ್ನು ಸಮೀಕರಿಸಲಾಗುತ್ತದೆ. ವಿಶಿಷ್ಟ ಹಾಗೂ ರಹಸ್ಯಪೂರ್ಣವಾಗಿರುವ ಶಿವಯೋಗಿಗಳ ಬದುಕಿನ ರೂಪದಲ್ಲಿ ಇವುಗಳ ಸಾರಾಂಶವು ಕೆಳಗಿನಂತೆ ಮೂಡಿ ಬಂದಿದೆ.

ಶಿವಯೋಗ

ಶುದ್ಧ ಪರಶಿವತತ್ತ್ವವು ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣ ಈ ಲಕ್ಷಣಗಳನ್ನು ಹೊಂದಿದೆ. ಪುರುಷ ಎಂದು ಕರೆಯಲ್ಪಡುವ ಇದರ ಸತ್‌ಸಂಕಲ್ಪದ ಲೀಲೆಗಾಗಿ ಪ್ರಕೃತಿ ರೂಪುಗೊಂಡಿದೆ. ಬ್ರಹ್ಮಾಂಡರೂಪದ ಪ್ರಕೃತಿಯು ಪಿಂಡಾಂಡಗತವಾಗಿ ಮಾನವರೂಪದಲ್ಲಿ ತೋರುತ್ತದೆ. ಶಿವನ ಚಿಚ್ಛಕ್ತಿಯೇ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಎಂದು ಬೇರೆಬೇರೆಯಾಗಿದೆ. ಜೀವಾತ್ಮನ ಈ ಮೂರು ಶಕ್ತಿಗಳು ಸಂಕುಚಿತವಾಗಿ ಆಣವಮಲದಿಂದ ಕಿಂಚಿದ್‌ವ್ಯಾಪಕತೆ, ಮಾಯಾಮಲದಿಂದ ಕಿಂಚಿಜ್ಞತ್ವ, ಕಾರ್ಮಿಕಮಲದಿಂದ ಕಿಂಚದ್‌ಕರ್ತೃತ್ವ ಪ್ರಾಪ್ತವಾಗಿವೆ. ಬಿಂದುರೂಪದ ಪರಶಿವಸ್ವರೂಪಕ್ಕೆ ಅಜ್ಞಾನರೂಪದ ಅಷ್ಟ ಆವರಣಗಳು ಸುತ್ತಿಕೊಂಡು ನಾಮರೂಪಗಳು ತಲೆದೋರಿವೆ ಕಿಂಚಿಜ್ಞತ್ವದಿಂದಾಗಿ ದೇಹವೇ ನಾನೆಂಬ ಭ್ರಮೆಯಲ್ಲಿ ಮಾನವನು ಮುಳಗಿ ಜನನ-ಮರಣಗಳ ರಾಟಾಳದಲ್ಲಿ ಸುತ್ತುತ್ತಿದ್ದಾನೆ.

ಸಂಚಿತಕರ್ಮದ ರೂಪದಲ್ಲಿರುವ ಪುಣ್ಯವಿಶೇಷದಿಂದ ಶಿವನೆಡೆಗೆ ಮಾನವನ ಲಕ್ಷ್ಯವು ತಿರುಗಿದರೆ ಶಿವಸ್ವರೂಪಿ ಗುರುವಿನಿಂದ ಮಲತ್ರಯಗಳನ್ನು ನಿವಾರಿಸಿಕೊಳ್ಳಲು ದಾರಿ ಸುಗಮವಾಗುತ್ತದೆ. ಇಂಥ ಮುಮುಕ್ಷುವಿನಲ್ಲಿ ಶಿವಭಕ್ತಿಯನ್ನು ದೃಡಪಡಿಸುವುದು ಶಿವಸ್ವರೂಪಿ ಗುರುವಿನ ಕಾರ್ಯ. ಈ ಲೋಕದ ಸುಖವು ಅನಿತ್ಯವಿದ್ದು ನಿತ್ಯಸುಖಕ್ಕೆ ಶಿಷ್ಯನ ಮನಸ್ಸು ತಿರುಗುವಂತೆ ಮಾಡುವವನು ಗುರು. ಬಂಧನಕಾರಿಯಾಗಿರುವ ನಾಮ-ರೂಪಗಳಿಂದ ಬಿಡುಗಡೆ ಹೊಂದಲು ಅವನು ಯೋಗಾಚರಣೆಯನ್ನು ಸೂಚಿಸುತ್ತಾನೆ. ಈ ಯೋಗಾಚರಣೆಗೆ ಬೌತಿಕ ಶರೀರವು ಸಾಧನವೆಂದು ತಿಳಿಸಿ ಸದಾಚಾರಿಯಾಗಿರುವಂತೆ ಪ್ರೇರೇಪಿಸುತ್ತಾನೆ. ಜೀವವಧೆ ಸರ್ವಥಾ ನಿಷಿದ್ಧವೆಂದೂ, ಲೌಕಿಕ ಕ್ರಿಯೆಗಳಿಂದ ಸಾವು ತಪ್ಪುವುದಿಲ್ಲವೆಂದೂ ತಿಳಿಸುತ್ತಾನೆ. ಭವವನ್ನು ಕಳೆದುಕೊಳ್ಳುವುದು ಮುಕ್ತಿಯೆಂದು ಬೋಧಿಸಿ ಶಿಷ್ಯನನ್ನು ದೀಕ್ಷೆಗೆ ಅಣಿಗೊಳಿಸುತ್ತಾನೆ.

ದೀಕ್ಷಿತನಾದ ಮೇಲೆ ಶಿಷ್ಯನು ಇಂದ್ರಿಯಗಳ ಕಡೆಗೆ ಮನಸ್ಸನ್ನು ಹರಿಬಿಡಬಾರದೆಂದು ತಿಳಿಸುವ ಗುರು ಜನ್ಮಾಂತರದಿಂದ ಬಂದ ಪುಣ್ಯದ ಫಲವು ಶಿಷ್ಯನಿಗೆ ಅನುಗ್ರಹವನ್ನು ಒದಗಿಸಿ ಕೊಡುವುದರಿಂದ ಗಳಿಸಿದ ಪುಣ್ಯವನ್ನೆಲ್ಲ ಬಳಸಲಾಗದೆಂದೂ ಪಾಪಕಾರ್ಯಗಳು ನಿಷಿದ್ಧವೆಂದೂ ಸೂಚಿಸುತ್ತಾನೆ. ವಾಗದ್ವೈತದಿಂದ ಫಲವಿಲ್ಲವೆಂದು ತಿಳಿಸುವ ಅವನು ಜಾಗ್ರ–ಸ್ವಪ್ನ–ಸುಪ್ತಿಯಲ್ಲಿ ಜೀವನ ವ್ಯಾಪಾರ ಮುಗಿಸುವವರು ಲೌಕಿಕ ವಿಷಯಗಳಲ್ಲಿ ತೊಡಗುತ್ತಾರೆಂದು ತಿಳಿಸಿ ಯೋಗಿಗೆ ಇನ್ನೂ ಎರಡು ಅವಸ್ಥೆಗಳಾದ ತೂರ್ಯ ಹಾಗೂ ತೂರ್ಯಾತೀತ ಇವು ಪ್ರಾಪ್ತವಾಗುತ್ತವೆಂದು ತಿಳಿಸುತ್ತಾನೆ. ಸತ್ವ–ರಜ–ತಮ ಗುಣಗಳು ಮಾಯೆಯ ಲಕ್ಷಣಗಳೆಂದು ತಿಳಿಸುತ್ತ ಸಾತ್ವಿಕತೆಯಿಂದಲೇ ನಿಜವನ್ನು ಅರಿಯಬೇಕಾಗುತ್ತದೆಂದು ಹೇಳುತ್ತಾನೆ. ಗುರುಭಕ್ತಿಯೇ ಶಿವಭಕ್ತಿ ಎಂದು ತಿಳಿಸಿ 'ದೀಕ್ಷೆಗೆ ಯಾರು ಅರ್ಹರು?' ಎಂಬುದನ್ನು ಸ್ಪಷ್ಟಪಡಿಸುತ್ತಾನೆ.

ಶರೀರದಲ್ಲಿ ಶಕ್ತಿ ಇದ್ದಾಗಲೇ ಶಿವಧ್ಯಾನ ಪ್ರಾರಂಭಿಸುವುದು ಸಾಧ್ಯವಾಗುತ್ತದೆ. ಹಾಲಿದ್ದಾಗಲೇ ಹಬ್ಬ ಆಚರಿಸಬೇಕು. ನವಚಕ್ರಗಳ ಮಾರ್ಗವಾಗಿರುವ ಯೋಗಾಚರಣೆಯು ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಿಂದ ಮೊದಲಾಗಿ ಊರ್ಧ್ವಮುಖದಲ್ಲಿ ಮುಂದುವರಿಯುವುದಾಗಿದೆ. ಮನಸ್ಸು ಲಯ ಹೊಂದಿದಾಗ ಅಂತರಂಗದ ಅನುಭವ ಸಾಧ್ಯ. ಆದುದರಿಂದಲೇ ಇದು ಮನೋಲಯ ಮಾರ್ಗ. ಗುರು ಶಕ್ತಿಪಾತವುಂಟು ಮಾಡಿ ಒಕ್ಕು ಮಿಕ್ಕ ಪ್ರಸಾದ ನೀಡಿ ಆತ್ಮಸಾಕ್ಷಾತ್ಕಾರ ಮಾಡಿಸುತ್ತಾನೆ. ಅಂಗುಷ್ಠ ಪರಿಮಾಣದ ಬಿಂದು ರೂಪವು ಕಂಗಳ ಮುಂದೆ ಹೊಳೆಯತೊಡಗುತ್ತದೆ. ಇದು ಗುರುಕಾರುಣ್ಯ. ಚಿದ್ರೂಪನೇ ಜೀವಾತ್ಮನೆಂದು ತಿಳಿಸಿ ಗುರು 'ತತ್ವಮಸಿ' ಮಹಾವಾಕ್ಯವನ್ನು ವಿವರಿಸುತ್ತಾನೆ. ಹೀಗೆ ವೇಧಾ–ಮಂತ್ರ–ಕ್ರಿಯೆಗಳಿಂದೊಡಗೂಡಿದ ಲಿಂಗದೀಕ್ಷೆಯನ್ನಿತ್ತು ಮಂತ್ರದ ರಹಸ್ಯವನ್ನು ತಿಳಿಸಿ ಯೋಗ್ಯ ಆಸನಗಳನ್ನು ಹೇಳಿಕೊಡುತ್ತಾನೆ. ದೀಕ್ಷಿತನಾಗಿ ಗುರು–ಲಿಂಗ–ಜಂಗಮಕ್ಕೆ ತನು–ಮನ–ಧನಗಳನ್ನು ಅರ್ಪಿಸಿದ ಶಿಷ್ಯನು ಅವುಗಳನ್ನು ತನ್ನಿಚ್ಛೆಯಂತೆ ಬಳಸಿದರೆ ಅದು ಗುರುದ್ರೋಹವೆಂದು ತಿಳಿಸಿ ಮಂತ್ರದ ರಹಸ್ಯವನ್ನು ಕಾಪಾಡಿಕೊಂಡು ಹೋಗಲು ಆಜ್ಞೆ ಮಾಡುತ್ತಾನೆ.

ಒಂದು ನಿರ್ದಿಷ್ಟ ಅವಧಿಯವರೆಗೆ ಬ್ರಹ್ಮಚರ್ಯ ವ್ರತದಲ್ಲಿರುವವನಿಗೆ ಕುಂಡಲಿನೀ ಸರ್ಪ ಜಾಗೃತವಾಗಿ ಊರ್ಧ್ವಮುಖಿಯಾಗುತ್ತದೆ. ಆಗ ಮೊದಮೊದಲು ಲೌಕಿಕ ಕಲೆಗಳು ಗೋಚರಿಸಿ ಸಾಧನೆಯು ಮುಂದುವರೆದಂತೆ ಪಾರಲೌಕಿಕ ಕಲೆಗಳು ಗೋಚರಿಸುತ್ತವೆ. ಗಂಗಾ–ಯಮುನಾ–ಸರಸ್ವತಿ

[illegible]

[illegible]

[illegible]

ಎಂದು ಕರೆಯಲ್ಪಡುವ ಇಡಾ-ಪಿಂಗಳಾ-ಸುಷುಮ್ನಾ ನಾಡಿಗಳು ಕೂಡುವ ಸ್ಥಳವು ಶೃಂಗಾಟಕ. ಯೋಗಸಾಧನೆಯು ತೀವ್ರವಾಗುತ್ತ ಹೋದಂತೆ ಕಲಾ ಜಗತ್ತು ವಿಸ್ತರಿಸುತ್ತ ಹೋಗುತ್ತದೆ. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಕಲಾರೂಪದಲ್ಲಿ ತೋರುತ್ತವೆ. ಗುಂಗೀಹುಳದ ನಾದದಂತೆ ಕಿವಿಯಲ್ಲಿ ಗುಣುಗುಟ್ಟುವುದು ಕೇಳಿಸುತ್ತದೆ. ಹೀಗೆ ಹತ್ತು ವಿಧದ ನಾದಗಳು ಕೇಳಿಸುತ್ತವೆ, ಗುರುದರ್ಶನವಾಗುತ್ತದೆ, ಕದಳೀವನ, ಜೀವಾತ್ಮನು ಪರಮಾತ್ಮನಲ್ಲಿ ಬೆರೆಯುವುದು ಇವು ಅಂತರ್‌ದೃಷ್ಟಿಗೆ ಗೋಚರಿಸುತ್ತವೆ. ಇದು ಭಾವಬೆತ್ತಲೆಯಾಗುವಿಕೆ ಅಥವಾ ಸಂಪೂರ್ಣ ಚಿತ್ತವೃತ್ತಿನಿರೋಧ. ಈ ಸಮಯದಲ್ಲಿ ಸಾಧಕನಿಗೆ ಅಮೃತಪಾನವಾಗುತ್ತದೆ. ಅದುವೇ ಪರಮಾನಂದ, ಮುಕ್ತಸ್ಥಿತಿ. ಈ ಸ್ಥಿತಿಯಿಂದ ಜೀವಾತ್ಮನು ಮರಳಿ ಭ್ರೂಮಧ್ಯಕ್ಕೆ ಬಂದಾಗ ಬಾಹ್ಯ ಪ್ರಜ್ಞೆ ಉಂಟಾಗುತ್ತದೆ.

ಐಕ್ಯಸ್ಥಿತಿಯನ್ನು ಕಂಡುಂಡ ಸಾಧಕನು ಲೌಕಿಕ ವ್ಯವಹಾರಗಳಿಗೆ ಎಳಸುವುದು ನಿಷಿದ್ಧ. ಅವನು ಅಂತರಂಗ ಶುದ್ಧಿಯೊಡನೆ ಬಹಿರಂಗ ಶುದ್ಧಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಇದು ಯೋಗದ ಶೌಚತೆ.

ಐಕ್ಯಸ್ಥಲ ತಲುಪಿದವನಿಗೆ ಅಂತರಂಗದ ಅಷ್ಟಾವರಣಗಳಿಗೆ ಅನುಗುಣವಾಗಿ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವುಗಳನ್ನು ಬಹಿರಂಗ ಅಷ್ಟಾವರಣಗಳನ್ನಾಗಿ ಸೂಚಿಸಲಾಗಿದೆ. ಅದೇ ರೀತಿ ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರ ಇವುಗಳನ್ನು ಕೂಡ ಬಾಹ್ಯ ಆಚರಣೆಗಳ ರೂಪದಲ್ಲಿ ಸೂಚಿಸಲಾಗಿದೆ. ಯಾವ ಸ್ಥಿತಿಯಲ್ಲಿದ್ದರೂ ಚಿತ್ತದಲ್ಲಿ ಶಿವಮಂತ್ರ ಮಾತ್ರ ಉಳಿಯುವಂತಾದಾಗ ಪುಣ್ಯವೂ ಇಲ್ಲದ, ಪಾಪವೂ ಇಲ್ಲದ ಸ್ಥಿತಿಯಲ್ಲಿ ಶಿವಯೋಗಿಯು ಬಂಧ-ಮೋಕ್ಷಗಳಿಂದ ಅತೀತನಾಗುತ್ತಾನೆ. ಜನನ-ಮರಣಗಳಿಗೆ ಕಾರಣವೆನಿಸುವ ಪಾರ್ಥಿವ ಶರೀರವನ್ನು ಬಿಟ್ಟು ಪಶ್ಚಿಮಚಕ್ರದಲ್ಲಿ, ಪರಶಿವನಲ್ಲಿ ಸಮರಸ ಹೊಂದುತ್ತಾನೆ.

ಈ ಪುಟ್ಟ ಸಂಕಲನವನ್ನು ನಮ್ಮ ಅಭ್ಯಾಸಕ್ಕೆ ಸಂಬಂಧಿಸಿದಂತೆ ಶಿವಯೋಗದ ಮೂಲಪಾಠವೆಂದು ಗ್ರಹಿಸುತ್ತ ಪ್ರಭುಲಿಂಗಲೀಲೆಯಲ್ಲಿ ಮೂಡಿ ಬಂದಿರುವ ಈ ಮಾರ್ಗಾಚರಣೆಯ ಅಂಶಗಳನ್ನು ಪರಾಮರ್ಶಿಸಲಾಗುವುದು. ಹೀಗೆ ಮಾಡುವಲ್ಲಿ ಮೇಲೆ ಲಕ್ಷಿಸಿದ ಎಲ್ಲ ಕೃತಿಗಳ ಪ್ರಮುಖ ಆಧಾರಗಳನ್ನು ಅದಕ್ಕಾಗಿ ಬಳಸಿಕೊಳ್ಳಲಾಗುವುದು. ಸಾಂದರ್ಭಿಕವಾಗಿ ಇನ್ನುಳಿದ ಸಮಾನಾಂತರ ಕೃತಿಗಳ ಆಧಾರಗಳನ್ನೂ ಬಳಸಿಕೊಳ್ಳಲಾಗುವುದು.

೮. ಕಾವ್ಯದಲ್ಲಿ ಯೌಗಿಕ ಅಂಶಗಳು

ಪ್ರಭುಲಿಂಗಲೀಲೆಯಲ್ಲಿ ಶಿವಯೋಗವನ್ನು ಪ್ರತಿಪಾದಿಸಲು ಹೊರಟಿರುವ ಕವಿ ಅದಕ್ಕೆ ಸಂಬಂಧಿಸಿದ ಅಂಶಗಳನ್ನು ಸಾಂದರ್ಭಿಕವಾಗಿ ಎತ್ತಿಕೊಳ್ಳುತ್ತಾನೆ. ಶಿವಶಿರಣರ ವಚನಗಳಲ್ಲಿ, ಕೈವಲ್ಯಮಾರ್ಗ ಪ್ರತಿಪಾದಿಸುವವರ ಪದಗಳಲ್ಲಿ, ಶಿವಯೋಗವನ್ನೇ ನೇರವಾಗಿ ಚರ್ಚಿಸಿದವರಲ್ಲಿ ಹಲವಾರು ಕಡೆಗಳಲ್ಲಿ ಆ ಅಂಶಗಳು ಮೂಡಿ ಬಂದಿವೆ. ಅವುಗಳಲ್ಲಿ ಎಲ್ಲವುಗಳನ್ನೂ ಎತ್ತಿಕೊಂಡು ಚರ್ಚಿಸುವ ಬದಲಾಗಿ ಹೆಚ್ಚು ಸಮೀಪವಿರುವ ಹಾಗೂ ಸುಲಭವಾಗಿ ತಿಳಿಯುವ ಕೆಲವೇ ಅಂಶಗಳನ್ನು ಎತ್ತಿಕೊಂಡು ಕಾವ್ಯದಲ್ಲಿ ತೋರುವ ಶಿವಯೋಗದ ಅಂಶಗಳೊಂದಿಗೆ ಸಮೀಕರಿಸಲಾಗುತ್ತದೆ.

೧) ಶುದ್ಧ ಪರಶಿವತತ್ತ್ವ

ಶಿವಯೋಗವನ್ನು ಚರ್ಚಿಸಿದವರಲ್ಲಿ ಶೂನ್ಯವೆಂದು ಕರೆಯಲ್ಪಡುವ ಶುದ್ಧಪರಶಿವತತ್ತ್ವವು ವಿಶ್ವೋತ್ಪತ್ತಿಯ ಸಂದರ್ಭದಲ್ಲಿ ಲಕ್ಷಿಸಲ್ಪಟ್ಟಿದೆ.

ಬ್ರಹ್ಮಾಂಡವು ಹೇಗೆ ಪುಟ್ಟಿತ್ತು ಪೇಳ್ವೆ ಕೇಳಿರಯ್ಯಾ.
ಆದಿ, ಅನಾದಿಯಿಂದತ್ತತ್ತಲಾದ ನಿರಾಕಾರ ಪರವಸ್ತು
ತನ್ನ ಸ್ವರೂಪವ ತಾನರಿಯದೆ ಅನಂತ ಕಲ್ಪಕಲ್ಪಾಂತರ ಇರ್ದು
ತನ್ನ ಸ್ವಲೀಲೆಯಿಂದ ತಾನೇ ಜಗತ್ಸೃಷ್ಟಿ ನಿಮಿತ್ತವಾಗಿ,
ನೆನವು ದೋರಲು ಆ ನೆನವು ನಿರ್ಧಾರವಾಗೆ ಚಿತ್ತೈನಿಸಿತ್ತು.[೧೨೧]

ನಿರಾಕಾರದಿಂದ ಸಾಕಾರರೂಪ ಮೂಡಿ ಬಂದಿದೆಯೆಂದೂ ಅದು ಪಿಂಡಾಂಡಕ್ಕೆ ಬಂದು ಚಿತ್ತೈನಿಸಿದೆಯೆಂದೂ ಇಲ್ಲಿ ತಿಳಿಸಲಾಗಿದೆ.

‘ಅವಿನಾಭಾವ ಶಕ್ತಿಯಿಂದೊಡಗೂಡಿದ ಎರಡಲ್ಲದ ಒಂದು ಹಾಗೂ ಒಂದಲ್ಲದ ಎರಡು ವಿಶಿಷ್ಟ ರೀತಿಯಲ್ಲಿ ಒಡಗೂಡಿದ್ದ ಅಖಂಡ, ಅದ್ವಯ, ಸರ್ವವ್ಯಾಪಿ ವಸ್ತು ತನ್ನ ತಾನರಿಯದೆ ಒಂದನಂತಕಾಲ ನೆಲೆಸಿದ್ದಿತು. ಅದು ಮಹಾಶೂನ್ಯವೆನಿಸಿದ್ದಿತು, ನಿರಾಲಂಬವಾಗಿದ್ದಿತು. ಈ ಬಯಲು ಅಥವಾ ಸರ್ವಶೂನ್ಯದಲ್ಲಿ ತಾನು ಲೀಲೆಯಾಡಬೇಕೆಂದು ನೆನಹು ತಲೆದೋರಿತು’. [೧೨೨]

[illegible]

ಕಾಡಸಿದ್ಧೇಶ್ವರನ ವಚನವೇ ಇಲ್ಲಿ ಗದ್ಯರೂಪ ತಾಳಿದೆ. ಪ್ರಭುಲಿಂಗಲೀಲೆಯ ಆಯಾ ಪ್ರಸಂಗಗಳಲ್ಲಿ ಇದು ಕೆಳಗಿನಂತೆ ಮೂಡಿ ಬಂದಿದೆ.

ಬಳಸಬಾರದ ಬರಿಯ ಬೊಮ್ಮದ
ಹೊಳಹು ಸಾಕ್ಷಾತ್ಕರಿಸಿ ನೆರೆ ನಿ
ರ್ಮಲತೆವೆತ್ತಾ ರುದ್ರನಿರುತಿರ್ಪನು ವಿನೋದದಲಿ ॥ [೧೨೩]

ಆದಿ ಮಧ್ಯಾಂತಂಗಳಿಲ್ಲದ
ವೇದ ಶಾಸ್ತ್ರಂಗಳಿಗೆ ನಿಲುಕದ
ನಾದಬಿಂದುಗಳೆಂಬ ಸಂಪುಟದೊಳಗೆ ಸಮನಿಸದ ।

ಆದರಿಸುವಾತ್ಮತ್ರಯಂಗಳ
ಹಾದಿಯಲಿ ಹಂಗಿಲ್ಲದನುಪಮ
ವಾದ ಘನಗುರು ಮೂರ್ತಿಗೊಂಡನು ಶೂನ್ಯಪೀಠದಲಿ ॥ [೧೨೪]

ತೊಳಗಿ ಬೆಳಗುವ ಶೂನ್ಯ ಪೀಠದ
ನೆಲೆಯನೆಲ್ಲವ ಮೀರಿ ಬಯಲಲಿ
ನೆಲಸಿ ನಿಂದನಿದೇನು ಮಹಿಮೆಯೊ ಗುರು ಗುಹೇಶ್ವರನ । [೧೨೫]

ಈ ಪದ್ಯಗಳಲ್ಲಿ ಪರಶಿವತತ್ತ್ವವು ಮೊದಲು ನಿರಾಕಾರವಾಗಿದ್ದುದನ್ನು ತಿಳಿಸಲಾಗಿದೆ. ನಂತರದಲ್ಲಿ ಅದು ನಾದ–ಬಿಂದು–ಕಲಾಸಂಪುಟವನ್ನು ಆಶ್ರಯಿಸಿ, ಆ ಆಶ್ರಯವನ್ನು ಮೀರಿ ಶೂನ್ಯಪೀಠಕ್ಕೇ ಮರಳಿದುದನ್ನು ತಿಳಿಸಲಾಗಿದೆ.

೨) ಪುರುಷರೂಪ – ಪ್ರಕೃತಿರೂಪ

ಶೂನ್ಯರೂಪದ ಪುರುಷನಿಂದ ಹೊಸ ಸ್ವಭಾವ ಪಡೆದ ವಸ್ತು ಶಕ್ತಿಯಾಗಿರುವುದನ್ನು ನೋಡಿದ್ದೇವೆ. ಹೀಗೆ ತತ್ತ್ವ ಹಿಡಿದು ಬ್ರಹ್ಮಾಂಡವನ್ನು ಹಾಗೂ ಪಿಂಡಾಂಡವನ್ನು ತುಂಬಿರುವ ಶಕ್ತಿಯೆಂದರೆ ಅಧೋಮುಖ ಹೊಂದಿರುವ ಪುರುಷ.

ಯಾವ ವಸ್ತುವಿನಲ್ಲಿ ಸಕಲ ಜೀವರೂಪ ತೇಜೋವಲಯಗಳು ಅಗ್ನಿಯಿಂದ ಕಿಡಿಗಳು ಹೊರಹೊಮ್ಮುವಂತೆ ಹೊರಹೊಮ್ಮಿ ಅಲ್ಲಿಯೇ ಲಯವಾಗುತ್ತವೆಯೋ ಆತನೇ ಪರಮಾತ್ಮನು.

ಯಸ್ಮಿನ್ ಜ್ಯೋತಿರ್ಗಣಾಸ್ಸರ್ವೇ ಸ್ಫುಲಿಂಗಾ ಇವ ಪಾವಕಾತ್
ಉತ್ಪತ್ಯ ವಿಲಯಂ ಯಾಂತಿ ತದ್ರೂಪಂ ಪರಮಾತ್ಮನ: ॥ [೧೨೬]

ಎತ್ತೆತ್ತ ನೋಡಿದಡತ್ತ ನೀನೆ ದೇವಾ,
ಸಕಲ ವಿಸ್ತಾರದ ರೂಹು ನೀನೇ, ದೇವಾ,
ವಿಶ್ವತಸ್ ಚಕ್ಷು ನೀನೇ, ದೇವಾ,
ವಿಶ್ವತೋ ಮುಖ ನೀನೇ ದೇವಾ,
ವಿಶ್ವತೋ ಬಾಹು ನೀನೇ, ದೇವಾ,
ವಿಶ್ವತಃ ಪಾದ ನೀನೇ ದೇವಾ,
ಕೂಡಲಸಂಗಮದೇವಾ. [೧೨೭]

ತಿರೋಧಾನ ಶಕ್ತಿಯೆನಿಸುವ ಪುರುಷರೂಪವು ಎಲ್ಲೆಲ್ಲೂ ತುಂಬಿಕೊಂಡಿರುವುದನ್ನು ಈ ವಚನವು ತೆರೆದಿಡುತ್ತದೆ.

ದೇವನು ಅವರ್ಣನಾಗಿದ್ದಾನೆ, ಮಂತ್ರ ಬೀಜವರ್ಣಗಳಿಂದ ಕೂಡಿದ್ದಾನೆ, ನಿರಾಕಾರನಾಗಿದ್ದಾನೆ, ಸಮಸ್ತ ಬ್ರಹ್ಮಾಂಡವನ್ನು ತುಂಬಿದ್ದಾನೆ ಹಾಗೂ ಪರಮಾತ್ಮಸ್ವರೂಪಿಯಾಗಿರುವ ಅವನು ಪರಮ ಪ್ರಕಾಶಿಕೆಯಾಗಿದ್ದಾನೆ.

ಅವರ್ಣೋ ವರ್ಣಸಂಯುಕ್ತೋ ವಿರೂಪೀ ವಿಶ್ವರೂಪಭೃತ್
ಪರಮಾತ್ಮಾ ಪರಬ್ರಹ್ಮ ಕಶ್ಚಿದ್ದೇವೋಽಸ್ತಿ ಚಿಚ್ಛಿವಃ ॥ [೧೨೮]

ಶಿವತತ್ತ್ವದಿಂದ ಪರಸ್ವರೂಪಿಣಿಯಾಗಿರುವ ಶಕ್ತಿಯು ಹುಟ್ಟುತ್ತಿರುವುದು. ಆ ಶಾಂತ್ಯತೀತೆಯು ಸೃಷ್ಟಿಕೃತ್ಯಕಾರಿಣಿಯಾದ ಶಿವಶಕ್ತಿಯಿಂದ ಕಾರ್ಯೋನ್ಮುಖವಾಗುತ್ತಿಹುದು.

ಶಿವಾದುತ್ಪದ್ಯತೇ ಶಕ್ತಿಶ್ಶಾಂತ್ಯತೀತಾ ಪರಾತ್ಮಿಕಾ
ಅಪ್ರಮೇಯ ಗುಣೋಪೇತಾಜ್ರುಂಭತೇ ಸಾ ಶಿವಾಜ್ಞಯಾ ॥ [೧೨೯]

ಶಿವಸಮೇತನಾದ ದೃಕ್ಕ್ರಿಯಾಶಕ್ತಿಯು ಮಲತ್ರಯಗಳ ಮೂಲಕ ತಿರೋಧಾನಶಕ್ತಿಯೆನಿಸುತ್ತದೆ. ಅದೇ ಪರಾಬಿಂದು. ಪರಾಶಕ್ತಿಯು ವಿಶ್ವದ ಸೃಷ್ಟಿ–ಸ್ಥಿತಿ–ಲಯಕ್ಕೆ ಕಾರಣವಾಗಿದೆ. ಇದರಿಂದಲೇ ವಿಶ್ವವೃಕ್ಷದ ಅಂಕುರ ತಲೆದೋರಿತು, ರೆಂಬೆ ಕೊಂಬೆಗಳಾದುವು, ಎಲೆ,

ಹೂವು, ಕಾಯಿ, ಹಣ್ಣುಗಳಿಂದ ತುಂಬಿ ತುಳುಕುವಂತೆ ಮಾಡುವುದು. ಪರಶಿವಪರಮಾತ್ಮನಲ್ಲಿ ಅವಿನಾಭಾವದಿಂದಿದ್ದ ಚಚ್ಛಕ್ತಿಯು ಪರಾಶಕ್ತಿ, ಆದಿಶಕ್ತಿ, ಇಚ್ಚಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಯಾಗಿ ಪರಣಮಿಸುವುದು.[೧೩೦]

ಪುರುಷನಿಂದ ಪ್ರಕೃತಿಯಾದುದನ್ನು ಹಾಗೂ ಆ ಶಕ್ತಿಯ ವಿವಿಧ ರೂಪಗಳನ್ನು ಚಾಮರಸ ಕೆಳಗಿನಂತೆ ಸೂಚಿಸುತ್ತಾನೆ.

ಮೂಲತತ್ತ್ವವೆ ಮೋರೆ ವಾಯುವೆ
ತೋಳುವಾದಿಯನಾದಿಯೆಂಬುವೆ
ಕಾಲು ಪಾವಕ ದಿವಸಪತಿ ಹಿಮಕರರೆ ಕಣ್ಣುಗಳು ।
ಕೀಲಿಸಿದ ಹೃದ್ಬೀಜ ಬಿಂದು ಚ
ಥಾಳಿಸಿದ ಶೀತಾಂಶುವಾಗಲು
ಮೇಳವಿಸಿ ತನುವೊಪ್ಪುತಿರ್ದುದು ಪಾರ್ವತೀಪತಿಯ ॥ [೧೩೧]

ಕಾಲು ಕಲ್ಪವಿಕಲ್ಪಗಳು ನಳಿ
ತೋಳು ಮೋಹಸ್ನೇಹಗಳು ನಡು
ವೇಲಸನ್ಮದ ವೃತ್ತ ಕುಚವೇ ಕಾಮಲೋಭಗಳು ।
ಲಾಲಿತಾಸ್ಯವೆ ಮಮತೆ ತೊಳಗುವ
ಲೋಲ ಲೋಚನ ವರಹು ಕುರುಹು ಸ
ಮೇಳವಾಗಿಹ ಗಿರಿಜೆ ಮೆರೆದಳು ಶಂಕರಾಂಕದಲಿ ॥ [೧೩೨]

ಇಲ್ಲಿ ಪ್ರಯೋಗಿಸಲ್ಪಟ್ಟ 'ಪಾರ್ವತೀಪತಿಯ' ಹಾಗೂ 'ಶಂಕರಾಂಕದಲಿ' ಶಬ್ದಗಳು ಅತ್ಯಂತ ಅರ್ಥಪೂರ್ಣವಾಗಿವೆ.

೩) ಶಿವ ಮತ್ತು ಶಕ್ತಿ ಅಭೇದ

ಪುರುಷರೂಪದ ಶಿವನಿಂದ ಪ್ರಕೃತಿರೂಪದ ಶಕ್ತಿ ಉದಯಿಸಿ ಅದು ಮಲತ್ರಯಗಳ ಮೂಲಕ ತಿರೋಧಾನ ಶಕ್ತಿಯೆನಿಸಿದೆ ಹಾಗೂ ಆ ಶಕ್ತಿಯಲ್ಲಿ ಶಿವನು ಅಭೇದವಾಗಿ ಮುಂದುವರೆದಿದ್ದಾನೆ. ಇದನ್ನು ಚಿದಾನಂದಾವಧೂತ ತಿಳಿಸುವುದು ಹೀಗೆ–

ಸೂಜಿಕಲ್ಲಿನ ಸನ್ನಿಧಿಯಲೇ
ಸೂಜಿ ಚಲಿಸೀದಂತೆ ಪುರುಷನ
ತೇಜದಿಂದಲಿ ಪ್ರಕೃತಿ ಚರಿಸುತ್ತಿಹುದು ಚರಿಸುತ್ತ ।
ಸೂಜಿಗಾಗಿಯೆ ಸಕಲ ಜಗವನು
ಮಾಜದಲೆ ಪರಿಪೂರ್ಣ ತುಂಬಿಯೆ
ರಾಜಿಪುದು ಅಣುವಾಗಿ ಮಾಹತ್ತಾಗಿ ಕೇಳೆಂದ ॥ [೧೩೩]

ಈ ಪ್ರಕೃತಿ ಪುರುಷರ ಅವಿನಾಭಾವ ಸಂಬಂಧವನ್ನು ಚಾಮರಸ ಹೀಗೆ ಒಡಮೂಡಿಸಿದ್ದಾನೆ.

ಸಸಿಯ ಶೀತಳದಂತೆ ಕಪ್ಪುರ
ದೆಸೆವ ಕಪ್ಪುಗಳಂತೆ ಕನಕದ
ಮಿಸುಪ ಲೋಹ ಸುವರ್ಣದಂತೆ ಸುಧಾಂಶು ರುಚಿಯಂತೆ ।
ಲಲಿತ ಮಿಥುನಾಳಾಪ ಹೊರಗಾ
ಣಿಸದೆ ಶಕ್ತಿ ಸಮೇತ ಶಂಕರ
ನೊಸೆದು ಕುಳ್ಳಿತು ಮೆರೆವುತಿರ್ದನು ದಿವ್ಯ ತೇಜದಲಿ ॥ [೧೩೪]

ಈ ಉಪಮೆಯಲ್ಲಿ ಉಪಮಾನಕ್ಕಾಗಿ ಬಳಸಿದ ಎಲ್ಲ ಅಂಶಗಳಲ್ಲಿ ಒಂದನ್ನು ಇನ್ನೊಂದರಿಂದ ಬೇರ್ಪಡಿಸುವುದು ಸಾಧ್ಯವಿಲ್ಲ. ಅದೇ ರೀತಿ ಶಕ್ತಿಯನ್ನು ಶಂಕರನಿಂದ ಬೇರ್ಪಡಿಸುವುದು ಸಾಧ್ಯವಿಲ್ಲವೆಂಬುದು ಕವಿಯ ವಿಚಾರ. 'ಲಲಿತ ಮಿಥುನಾಳಾಪ' ಪದಪ್ರಯೋಗವು ವಿಷಯವನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ.

೪) ನಾಮರೂಪಗಳು, ಅಲ್ಪಸುಖ– ನಿತ್ಯಸುಖ

ಪುರುಷರೂಪವು ತಿರೋಧಾನಶಕ್ತಿಯಾಗಿ ಬಂದು ಲೋಕವ್ಯವಹಾರಕ್ಕೆ ಅಂಟಿಕೊಳ್ಳುತ್ತದೆ. ಮಾನವ ಜನ್ಮವನ್ನು ಮೋಕ್ಷದ ಸಾಧನೆಗಾಗಿ ಬಳಸಬೇಕು ಹಾಗೂ ಬಂಧನಕಾರಿಯಾಗುವ ನಾಮ–ರೂಪು–ಕ್ರಿಯೆಗಳಿಂದ ದೂರಾಗಿ ಊರ್ಧ್ವಮುಖಿಯಾಗಬೇಕು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಕಾಯವಿಡಿದಿಹನ್ನಕ್ಕರ ಕಾಮವೆ ಮೂಲ,
ಜೀವವಿಡಿದಿಹನ್ನಕ್ಕರ ಕ್ರೋಧವೆ ಮೂಲ,
ಸಂಸಾರ ವ್ಯಾಪ್ತಿಯ ಮೋಹವುಳ್ಳನ್ನಕ್ಕರ ಆಸೆಯೆ ಮೂಲ.
ಎನ್ನ ಆಸೆ ಗಾಸಿ ಮಾಡುತ್ತಿದೆ,
ಶಿವಯೋಗದ ಲೇಸಿನ ಠಾವ ತೋರು, ಕಪಿಲಸಿದ್ಧಮಲ್ಲಿಕಾರ್ಜುನಾ. [೧೩೫]

ನಾಮ-ರೂಪು-ಕ್ರಿಯೆಗಳಿಂದ ದೂರಾಗುವುದಕ್ಕೆ ಶಿವಯೋಗ ಮದ್ದೆಂದು ಸಿದ್ಧರಾಮನ ವಚನ ತಿಳಿಸುತ್ತದೆ. ಈಗ ಇನ್ನೊಂದು ವಚನ.

ಉಂಡುದು ಬಂದಿತ್ತೆಂಬ ಸಂದೇಹಿ ಮಾನವಾ, ನೀ ಕೇಳಾ,
ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ,
ಉಂಡುದು ಆಗಳೆ ಅಪ್ಪುಯವಾಗಿತ್ತು.
ಆವುಂಡುದನುಣಬಂದ ಹಂದಿಯ ಬಾಳುವೆಯವರ ಕಂಡು
ಆನು ಮರುಗುವೆನಯ್ಯಾ, ಕೂಡಲಸಂಗಮದೇವಾ.[೧೩೬]

ಆಣವ, ಮಾಯಾ, ಕಾರ್ಮಿಕ ಮಲಗಳು ಶಿವನಿಂದಾದವುಗಳು. ಈ ಕಾರ್ಮಿಕಮಲದ ರೂಪದಲ್ಲಿರುವ ಅನ್ನವನ್ನು ಉಂಡರೆ ಭವಕ್ಕೇ ಮೂಲವಾಗಬೇಕಾಗುತ್ತದೆ. ಜ್ಞಾನಿಯು ಹೀಗೆ ಮಾಡದೆ ಗುರುಮುಖದಿಂದ ಬಂದ ಪ್ರಸಾದವನ್ನು ಸೇವಿಸಿ ಮುಕ್ತನಾಗುತ್ತಾನೆ. ಇದಕ್ಕಾಗಿ ಪರಿಣಾಮಕಾರಿಯಾದ ದೃಷ್ಟಾಂತವೊಂದನ್ನು ಈ ವಚನವು ಒಳಗೊಂಡಿದೆ.

ಶಿವನೆ ನಿನ್ನೊಡ್ಡೋಲಗದೊಳೊ
ಧ್ರುವ ಮಹಾಘನ ಮಹಿಮರೆಲ್ಲರು
ಭವಕೆ ಬಾರದೆ ನಿತ್ಯಸುಖದಿಂದಿಪ್ಪರೋ ಮೇಣು ।
ಇವರಿಗೆಯು ನೆಲೆಯಿಲ್ಲವೋ ಪೇ
ಳಿವರವಸ್ಥೆಯನೆನುತ ಕೇಳಲು
ಶಿವಗೆ ತಿಳಿವಂದದಲಿ ಬಳಿಕಾ ಶಂಭುವಿಂತೆಂದ ॥ [೧೩೭]

ಗಿರಿಜೆಯಹುದೌ ನಿನ್ನ ಬುದ್ಧಿಯ
ಪರಿಯದೊಳ್ಳಿಹ ಪ್ರಶ್ನೆಯಾಯಿತು
ಹರಿವಿರಂಚಿಗಳಾದಿಯಾದವರಾದಡೆಯು ತುದಿಗೆ ।
ವಿರಚಿಸುತ್ತಿಹ ನಾಮ ರೂಪಗ
ಳೊರೆದ ಸತ್ಕ್ರಿಯೆಯಿದ್ದುವಾದೊಡೆ
ದೊರಕಲರಿಯದು ನಿತ್ಯಸುಖವಗಜಾತೆ ಕೇಳೆಂದ ॥ [೧೩೮]

ಲೌಕಿಕಸುಖ ಹಂದಿಯ ಸುಖದಂತೆ ಅಲ್ಪಸುಖ. ನಿತ್ಯಸುಖಕ್ಕಾಗಿ ನಾಮ–ರೂಪಗಳನ್ನು ತೊರೆದು ಸತ್‌ಕ್ರಿಯೆಗಳಲ್ಲಿ ತೊಡಗಬೇಕೆಂದು ಚಾಮರಸ ಇಲ್ಲಿ ಅಭಿಪ್ರಾಯ ಪಡುತ್ತಾನೆ.

ಋ) ಯೋಗಕ್ಕೆ ಶರೀರ ಸಾಧನ

ಯೋಗಾತ್ ಸಂಜಾಯತೇ ಜ್ಞಾನಂ ಜ್ಞಾನಾದ್ಯೋಗ: ಪ್ರವರ್ತತೇ
ದ್ವಯೋಸ್ಸಂಸಿದ್ಧಯೇ ಭೂಮೌ ಶರೀರಂ ರಕ್ಷಯೇದ್ಬುಧಃ ॥ [೧೩೯]

ಯೋಗದಿಂದ ಅರಿವು ಚೆನ್ನಾಗಿ ವ್ಯಕ್ತವಾಗುತ್ತದೆ, ಆ ಅರಿವಿನಿಂದ ಯೋಗವು ಹೆಚ್ಚುತ್ತದೆ. ಅವುಗಳ ಸಿದ್ಧಿಗೋಸ್ಕರ ಭೂಲೋಕದಲ್ಲಿ ವಿವೇಕಿಯಾದ ಪುರುಷನು ದೇಹವನ್ನು ರಕ್ಷಿಸಬೇಕು. ಇದನ್ನು ಚಾಮರಸ ಹೀಗೆ ತಿಳಿಸುತ್ತಾನೆ.

ಭೋಗಭೂಮಿಯ ಭೋಗತನುವಿನ
ಲಾಗದನುಪಮ ಸಿದ್ಧಿ ಕರ್ಮೋ
ದ್ಯೋಗಭೂಮಿಯ ಕರ್ಮತನುವಿನಲಲ್ಲದದರಿಂದೆ ।
ಯೊಗಯೋಗ್ಯರು ಯೋಚಿಸುತ ಭೂ
ಭಾಗದಲಿ ಮಾನವ ಶರೀರಿಗ
ಳಾಗಿ ಸಾಧಿಸಿ ನಿಜವನರಿವರು ಗಿರಿಜೆ ಕೇಳೆಂದ ॥ [೧೪೦]

ಯೋಗಕ್ಕೆ ಅರ್ಹರಾಗುವವರು ಪೂರ್ವಪುಣ್ಯದ ಬಲದಿಂದ ಗುರುವಿನ ಸಂಪರ್ಕದಲ್ಲಿ ಬರುವಂತೆ ಈ ಕರ್ಮಭೂಮಿಯಲ್ಲಿ ಜನಿಸಬೇಕಾಗುತ್ತದೆ. ಅವರು ಮಾನವ ಶರೀರಿಗಳಾಗಿ ಶಿವಯೋಗಸಾಧನೆಯಲ್ಲಿ ತೊಡಗಿ ನಿಜವನ್ನು ಅರಿಯುತ್ತಾರೆ.

೬) ಇಂದ್ರಿಯಗಳ ಪರಿ : ಮನಸ್ಸಿನ ಸ್ಥಿತಿ

ಪಾರಮಾರ್ಥಿಕಕ್ಕೂ ಲೌಕಿಕಕ್ಕೂ ಉತ್ತರ-ದಕ್ಷಿಣವಿದ್ದಂತೆ. ಏಕೆಂದರೆ ಪರಮಾರ್ಥ ಸಾಧಿಸಲ್ಪಡುವುದು ಮನಸ್ಸು ಆತ್ಮನ ಅಧೀನವಾದಾಗ ಹಾಗೂ ಲೌಕಿಕತೆಯಲ್ಲಿ ಸಿಲುಕುವುದು ಮನಸ್ಸಿಗೇ ಆತ್ಮ ಅಧಿನವಾದಾಗ. ಮನಸ್ಸಿನ ಕೈಯಲ್ಲಿ ಆತ್ಮ ಸಿಲುಕಿದಾಗ ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡ ಮನಸ್ಸು ಶರೀರವನ್ನೂ, ಆಯುಷ್ಯವನ್ನೂ ಕೊಳ್ಳೆ ಹೊಡೆಯುತ್ತದೆ. ಇದಕ್ಕೆ ಬದಲಾಗಿ ಆತ್ಮನು ಮನಸ್ಸನ್ನು ತಿಂದು ತೇಗುವಂತಾದರೆ ಮನಸ್ಸು ಬಾಲ ಅಲ್ಲಾಡಿಸುವ ನಾಯಿಯಂತೆ ಬಿದ್ದುಕೊಂಡಿರುತ್ತದೆ.

ಅನಿಮಿತ್ತವರಿಗಳೆನಿಪ ಕಾಮಾದಿಗಳಿಗೆ
ತನುವನೇಕವನಿತ್ತೆ ಭವಭವಂಗಳಲಿ
ನಿನಗೊಂದು ದೇಹವಿದನು ತೊಟ್ಟು ತಪವಾಂತು
ಘನಶಂಭುಲಿಂಗವಾಗಿರಲೊಲ್ಲೆ ಮನುಜ ॥ [೧೪೧]

ಮನುಷ್ಯ ಜನ್ಮ ಪ್ರಾಪ್ತವಾಗಿರುವುದು ನಿಜವನ್ನು ಅರಿಯುವ ಪ್ರಯತ್ನ ಮಾಡಲು. ಆದರೆ ಕಾಮ ವೊದಲಾದ ಅರಿಷಡ್ವರ್ಗವು ಅವನು ಭವದಿಂದ ಭವಕ್ಕೆ ಸುತ್ತುವಂತೆ ಮಾಡುತ್ತದೆಂದು ಇಲ್ಲಿ ತಿಳಿಸಲಾಗಿದೆ.

ಜನರು ಕಪಿಯೆನು ಕುಣಿವುದಿದು ಸಹಜ ಧರೆಯೊಳಗೆ
ಮನವೆಂಬ ಕಪಿಯೆನ್ನ ಕುಣಿಸಿ ಕೊಸರುವುದು
ತನುವಿದಳಿದಳಿದುದಿಸಿ ರಾಜಾಜ್ಞೆಯಂತೆನ್ನ
ನನುದಿನದೊಳಿಹಪರಕೆ ಸುತ್ತಿ ಸುಳಿಸುವುದು ॥ [೧೪೨]

ಪಂಚೇಂದ್ರಿಯಗಳನ್ನು ಸವಾರಿ ಮಾಡುವ ಮನಸ್ಸು ರಾಜಾಜ್ಞೆ ಮಾಡುತ್ತ ಭವದಿಂದ ಭವಕ್ಕೆ ತಿರುಗಿಸುತ್ತದೆಂದು ತಿಳಿಸುತ್ತದೆ ಈ ಪದ್ಯಭಾಗ.

ಸಂಕೋಚಮಾಚರತಿ ತತ್ಕಮಠೋ S ಂಗಕಾನಾಮಂಗೇ ಯಥಾ
ಭುವಿ ತಥಾ ನಿಖಿಲೇಂದ್ರಿಯಾಣ

ಪ್ರತ್ಯಾಹರತ್ಯನಿಶಮಾತ್ಮನಿ ಸಂಯತಾತ್ಮಾ ಮನ್ಯಾಮಹೇ
ಪರಮತತ್ತ್ವವಿದಂ ತಮೇವ ॥ [೧೪೩]

ಆಮೆಯು ತನ್ನ ಅವಯವಗಳನ್ನು ತನ್ನೊಳಗೆ ಅಡಗಿಸುವಂತೆ ಯೋಗಿಯು ಯಾವಾಗಲೂ ಇಂದ್ರಿಯಗಳನ್ನು ಸಂಕೋಚಿಸುತ್ತಾನೆಂದು ಇಲ್ಲಿ ತಿಳಿಸಲಾಗಿದೆ.

ಈ ಎಲ್ಲವುಗಳ ಒಟ್ಟಾಭಿಪ್ರಾಯವನ್ನು ಚಾಮರಸನ ಈ ಪದ್ಯಗಳಲ್ಲಿ ಕಾಣುತ್ತೇವೆ.

ಇಂದ್ರಿಯಂಗಳನಾವ ಪರಿಯಲಿ
ಬಂಧಿಸುವ ಪರಿ ಮೊಲನ ಕಂಡೊಡೆ
ನಿಂದುದುಂಟೇ ನಾಯಿಗಳು ದಿಟವಾ ಪ್ರಕಾರದಲಿ ।
ಮುಂದುವರಿವವು ವಿಷಯದಿಚ್ಛೆಗೆ
ಕೊಂದುಕೂಗುವವತಿ ಮಹಾಬಳ
ದಿಂದ್ರಿಯಕೆ ನಾನೇಗುವೆನು ಗುರುರಾಯ ಹೇಳೆಂದ ॥ [೧೪೪]

ಊಹಿಸುವೊಡಿಂದ್ರಿಯಕೆ ಮನವೇ
ಬೇಹ ನಾಯಕನದರ ಗಮಕದ
ಗಾಹು ಶಬ್ದ ಸ್ಪರ್ಶ ರೂಪು ರಸ ಪ್ರಗಂಧದಲಿ ।
ಮೋಹದಂತಿರೆ ಸೆಳೆದು ಸಮತೆಯ
ಸಾಹಸದಲಿರಲಿಂದ್ರಿಯಂಗಳ
ಕಾಹುರಂಗಳು ಕೆಡುವವೈ ರಾಮಯ್ಯ ಕೇಳೆಂದ ॥ [೧೪೫]

ಮನವ ಬಹಿರಂಗದಲಿ ಚರಿಸುವ
ಮನುಜನವನಜ್ಞಾನಿ ಮತ್ತಾ
ಮನವಂತರ್ಮುಖದಲಾಚರಿಸಿದೊಡೆ ಸರ್ವಜ್ಞ ।
ಮನವು ಮನದಲಿ ನಿಂದು ನಿರ್ವಾ
ಸನೆಯಲಿರೆ ಸುಜ್ಞಾನಿಯಂತಾ
ಮನವನಳಿದರೆ ನಿತ್ಯನೈ ಬಸವಣ್ಣ ಕೇಳೆಂದ ॥ [೧೪೬]

೭) ಪುಣ್ಯ-ಪಾಪ

ಚಿತ್ತದಲ್ಲಿರುವ ಪುಣ್ಯಪಾಪಗಳೆರಡನ್ನೂ ತೆಗೆದು ಹಾಕಿ ಅಲ್ಲಿ ಶಿವ ಮಂತ್ರವನ್ನು ಮಾತ್ರ ತುಂಬುವ ಶಿವಯೋಗಿಗಳು ಲಿಂಗಾಂಗಸಾಮರಸ್ಯ ಸಾಧಿಸುತ್ತಾರೆ.

ಪುಣ್ಯಪಾಪವೆಂಬುಭಯಕರ್ಮವನಾರು ಬಲ್ಲರಯ್ಯಾ?
ಇವನಾರುಂಬರು ? ಕಾಯ ತಾನುಂಬರೆ ಕಾಯ ಮಣ್ಣು,
ಜೀವ ತಾನುಂಬರೆ ಜೀವ ಬಯಲು!
ಈ ಉಭಯನಿರ್ಣಯವ ಕೂಡಲಸಂಗಮದೇವಾ
ನಿಮ್ಮ ಶರಣ ಬಲ್ಲ.[೧೪೭]

ಭವದ ಜೀವಾತ್ಮನನ್ನು ಸ್ವರ್ಗ-ನರಕಗಳಿಗೆ ಬಾಧ್ಯಸ್ತಗೊಳಿಸುವ ಪುಣ್ಯಪಾಪಗಳು ಜನನ ಮರಣಗಳ ರಾಟಾಳದಲ್ಲಿ ತಿರುಗಿಸುತ್ತಿರುತ್ತವೆ. ಸ್ವರ್ಗಭೋಗಗಳನ್ನನುಭವಿಸಿ ಪುಣ್ಯವು ಕ್ಷೀಣವಾದವರು ಭೂಲೋಕಕ್ಕೆ ಇಳಿಯುತ್ತಾರೆ. [೧೪೮]

ಈ ಮಾತನ್ನು ಚಾಮರಸ ಕೆಳಗಿನಂತೆ ತಿಳಿಸುತ್ತಾನೆ.

ತಿಳಿವೊಡೀ ಮಾಯಕದ ಜನ್ಮಂ
ಗಳ ಶರೀರಗಳ ಪ್ರಯೋಜನ
ಕುಲಗಳಾಗಿಹವಲ್ಲಿ ಮಾನವ ದೇಹವವರೊಳಗೆ ।
ಸಲುವ ಕರ್ಮಂಗಳಿಗೆ ಕರ್ತನು
ಗಳಿಸಿಕೊಡುವುದು ಪುಣ್ಯಪಾಪಂ
ಗಳನು ಮುಂದಕೆ ಬಸವ ದಂಡಾಧೀಶ ಕೇಳೆಂದ ॥ [೧೪೯]

೮) ಲೋಕಜೀವಿಯ ಮೂರು ಅವಸ್ಥೆಗಳು : ಯೋಗಿಯ ಐದು ಅವಸ್ಥೆಗಳು

ಯೋಗಿಗೆ ಜಾಗ್ರ, ಸ್ವಪ್ನ, ಸುಷುಪ್ತಿ, ತೂರ್ಯ ಹಾಗೂ ತೂರ್ಯಾತೀತ ಎಂದು ಐದು ಅವಸ್ಥೆಗಳು ಇವೆ. [೧೫೦]

ಜೀವನಿಗೆ ಮೂರು ಅವಸ್ಥೆಗಳಿವೆ ೧) ವಿಶ್ವ ೨) ತೈಜಸ ೩) ಪ್ರಾಜ್ಞ. ಪರಶಿವನು ಜೀವಿಗಳ ರೂಪದಿಂದ ಮನಸ್ಸನ್ನು ಪ್ರವೇಶಿಸುತ್ತಾನೆ, ನಾಮರೂಪ ಸ್ಥಿತಿಯನ್ನು ಪ್ರಕಟಪಡಿಸುತ್ತಾನೆ. ಇಂದ್ರಿಯಗಳ ಮೂಲಕ ಜಾಗ್ರ ವಿಷಯಗಳನ್ನು ಪ್ರವೇಶಿಸುತ್ತಾನೆ. ಈತನೇ ವಿಶ್ವಜೀವನು. ಸ್ವಪ್ನಾವಸ್ಥೆಯಲ್ಲಿ ಪ್ರಕಟವಾಗುವ ಜೀವ ತೈಜಸ. ಸುಷುಪ್ತಿಯಲ್ಲಿ ತೋರುವಾತ ಪ್ರಾಜ್ಞ. [೧೫೧]

ಈ ವಿಷಯವನ್ನು ಪ್ರಭುಲಿಂಗಲೀಲೆಯ ಕೆಳಗಿನ ಪದ್ಯಗಳಲ್ಲಿ ನೋಡಬಹುದು.

ಸುರನರೋರಗರೆಂಬ ಮರುಳರ
ಹುರುಳುಗೆಡಿಸಿದ ಮೂರವಸ್ಥೆಗೆ
ಪಿರಿದೆನಿಸುವಾ ತೂರ್ಯ ತೂರ್ಯಾತೀತವೆಂಬೆರಡು ।
ಸರಸತರವಹ ಬಲೆಯ ಬೀಸಿಯೆ
ಹರಹಿಕೊಂಡಿಹುದೀ ಮನಸ್ಸದ
ನುರುಹಬಲ್ಲವನವನೆ ನಿತ್ಯನು ಬಸವ ಕೇಳೆಂದ ॥ [೧೫೨]

ಅಷ್ಟಮದಗಳ ಸೊಗಡ ಸೊಂಕಿನ
ದಷ್ಟವಿಲ್ಲದ ಮೂರವಸ್ಥೆಯ
ದೃಷ್ಟಿ ತಾಗದ ವ್ಯಸನವೇಳನು ಕೆಡಿಸಿ ಖಂಡಿಸಿದ ।
ದೃಷ್ಟವೆನಿಸಿದ ನಿಮ್ಮ ಕಾಯ
ಶ್ರೇಷ್ಠ ನೈವೇದ್ಯವನು ಕಾಣುತ
ತುಷ್ಟಿ ತನುವಿಗೆ ತುಂಬಿತೀಗಳು ಬಸವ ಕೇಳೆಂದ ॥ [೧೫೩]

೯) ಸತ್ವ–ರಜ–ತಮಗಳು

ಸತ್ವ, ರಜ, ತಮೋಗುಣಾತ್ಮಕವಾದ ಪ್ರಕೃತಿಯೇ ಸುಖ ದುಃಖಗಳಿಗೆ ಕಾರಣವಾಗುತ್ತದೆ.[೧೫೪] ಇದನ್ನು ಚಾಮರಸ ತಿಳಿಸುವುದು ಹೀಗೆ –

ಬಿಟ್ಟು ಸತ್ವ ರಜಸ್ತಮೋ ಗುಣ
ದೊಟ್ಟಿಲನು ಬಳಿಕಲ್ಲಿ ಲಿಂಗಕೆ
ಮುಟ್ಟಿಸುಗೆ ತಾಂಬೂಲವನು ವಿತ್ತಾನುಸಾರದಲಿ ॥ [೧೫೫]

೧೦) ದೀಕ್ಷೆ ಮತ್ತು ದೀಕ್ಷಾರ್ಹತೆ

ತ್ರಿಮಲಗಳನ್ನು ದೂರೀಕರಿಸಿ ವೇಧಾ, ಮಂತ್ರ, ಕ್ರಿಯಾ ದೀಕ್ಷೆಗಳನ್ನು ಗುರು ಕರುಣಿಸುತ್ತಾನೆಂಬುದನ್ನು ನೋಡಿದ್ದೇವೆ. ಆತ್ಮಜಾಗೃತರಾದ ಪರಿಪಕ್ವ ಹೃದಯಿಗಳಿಗೆ ಮಾತ್ರ ಯೋಗದೀಕ್ಷೆ ಫಲಿಸುತ್ತದೆ.

ಬಲಿದ ಶುಕ್ತಿಯೊಳು ಸ್ವಾತಿಯ ಬಿಂದು ಮುತ್ತಾಗು-
ವೊಲು ಕೆರೆಜಲದ ಚಿಪ್ಪಿನೊಳಾಗುತಿಹುದೇ
ಸಲುವಾತ್ಮ ಜಾಗರೂಕರಿಗಲ್ಲದಜ್ಞಾನ-
ಮಲಜೀವರ್ಗರುಹೆ ಶ್ರೀ ಗುರುಸಿದ್ಧನಹುದುಂಟೇ ।
ಪರಿಪಕ್ವ ಹೃದಯರಲ್ಲದ ಮಂದಮನುಜರ
ಬರಿದೆ ಬೋಧಿಪೆನೆಂಬ ಭ್ರಮೆಯೇಕೇ ಮನುಜಾ ॥[೧೫೭]

ಈ ಅಭಿಪ್ರಾಯವನ್ನು ಕವಿ ಕೆಳಗಿನ ಪದ್ಯಗಳಲ್ಲಿ ಪುರಸ್ಕರಿಸುತ್ತಾನೆ.

ಚಿತ್ತದಲಿ ಪರಿಪಾಕವಾದ ಮ
ಹೋತ್ತಮಂಗಲ್ಲದೆ ನಿರರ್ಥಕೆ
ಬಿತ್ತಲಾಗದು ತತ್ತ್ವಬೀಜವ ಬದ್ಧಭವಿಗಳಲಿ ।
ಹೊತ್ತು ಹೋಗದೆ ಗೋಷ್ಠಿ ಮಾಡುವ
ಕೃತ್ಯವಲ್ಲಿದು ಸಕಲ ಸಂಗತಿ
ವೃತ್ತನಾದಂಗಲ್ಲದಾಗದು ರಾಮ ಕೇಳೆಂದ ॥[೧೫೮]

ಬಿಸಿಯ ಹದನನು ತಿಳಿದು ಲೋಹವ
ಬೆಸುವವೊಲು ಪರಿಪಾಕಭಾವದ
ಹಸನನರಿದಿನ್ನೀತಗುಪದೇಶಿಸುವೆನೆಂದೆನುತ ।
ಒಸೆದು ಹಣೆವಿಡಿದೆತ್ತಿ ಕರುಣವ
ಪಸರಿಸುತ ಗೋರಕ್ಷನನು ಮ
ನ್ನಿಸಿದನೆಮ್ಮಯ ಗುರು ಗುಹೇಶ್ವರ ಲಿಂಗಲೀಲೆಯಲಿ ॥ [೧೫೮]

೧೧) ತ್ರಿಮಲಗಳು ಮತ್ತು ಅವುಗಳನ್ನು ನಿವಾರಿಸುವುದು

ವೇಧಾ, ಮಂತ್ರ ಮತ್ತು ಕ್ರಿಯೆ ಇವುಗಳನ್ನೊಳಗೊಂಡ ದೀಕ್ಷಾಸಂಪುಟಕ್ಕೆ ಮೊದಲು ಗುರು ಮಲತ್ರಯಗಳನ್ನು ನಿವಾರಿಸುತ್ತಾನೆಂಬುದನ್ನು ನೋಡಿದ್ದೇವೆ.

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು
ಆಜ್ಞಾದೀಕ್ಷೆ ಉಪಮಾದೀಕ್ಷೆ ಸ್ವಸ್ತಿಕಾರೋಹಣ ಕಳಶಾಭಿಷೇಕ
ವಿಭೂತಿಯ ಪಟ್ಟ ಲಿಂಗಾಯತ ಲಿಂಗಸ್ವಾಯತ–
ಈ ಏಳನು ಕಾಯಕ್ಕುಪದೇಶವ ಮಾಡುವುದು. [೧೫೯]

ಪ್ರಭುಲಿಂಗಲೀಲೆಯಲ್ಲಿ ದೀಕ್ಷೆ ಜರುಗಿದ ನಂತರದ ಪರಿಣಾಮವನ್ನು ಕವಿ ಅಲ್ಲಲ್ಲಿ ಹೇಳುತ್ತಾನಾದರೂ ದೀಕ್ಷೆ ಜರುಗಿಸುವ ಕ್ರಮವನ್ನು ಮಾತ್ರ ನೇರವಾಗಿ ಎಲ್ಲಿಯೂ ಕೊಟ್ಟಿಲ್ಲ. ಆದುದರಿಂದ ತ್ರಿಮಲಗಳನ್ನು ಹೆಸರಿಸಿ ನಿವಾರಿಸುವ ಪ್ರಸಂಗ ಯಾವ ಗತಿಯಲ್ಲಿಯೂ ಬಂದಿಲ್ಲ. 'ದೀಕ್ಷಾಕ್ರಮ'ಕ್ಕೆ ಸಂಕೇತದ ರೂಪದಲ್ಲಿರುವ 'ಗೊಗ್ಗಯ್ಯನ ಗತಿ'ಗೆ ಬಳಸಿಕೊಂಡಿರುವ ಎರಡನೆಯ ವಚನವೇ ಈ ವಿಷಯವನ್ನು ತಿಳಿಸುತ್ತದೆ. ಅದು ಹೀಗಿದೆ–

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳಂ ಕಳೆದುಳಿದು ನಿರ್ಮಲವಾದ ಶಿಷ್ಯನು
ಕಾಯಜೀವದ ಭ್ರಾಂತಿಸೂಚಕವ ವಿವರಿಸಿ ಕಳೆದು ನಿಶ್ಶಂಕನಾದ ಗುರುವು
ಉಭಯ ಭಾವದೊಳಗೆ ಆವುದು ಮುಂದು ಆವುದು ಹಿಂದೆಂದರಿಯಲಹುದೇ?
ಕರಸ್ಥಲಕೆ ಕಾರುಣ್ಯವ ಮಾಡಿದರೆ ಮನಸ್ಥಲಕೆ ಹಂಗಿಲ್ಲ.
ಮನಸ್ಥಲದಲ್ಲಿ ಸೆರಗೊಡ್ಡಿ ಬೇಡಿದರೆ ಕರಸ್ಥಲದ ಲಿಂಗ ಕೈ ಸಾರಿತ್ತು
ಗುರುಸ್ಥಲದ ನಿಲವು ಪರಸ್ಥಲದಲಡಗಿದರೆ ಭಾವ ಬೆರಗಾಯಿತ್ತು ಗುಹೇಶ್ವರಾ. [೧೬೦]

ಈ ವಚನದಲ್ಲಿ ಕಾಯಜೀವದ ಭ್ರಾಂತಿಯನ್ನು ಕಳೆಯುವುದನ್ನು ಹಾಗೂ ಕರಸ್ಥಲಕ್ಕೆ ಲಿಂಗವು ಕೈ ಸಾರುವುದನ್ನು ಕಾಣುತ್ತೇವೆ. ಆದರೆ ದೀಕ್ಷಾವಿಧಾನದ ರಹಸ್ಯ ರಹಸ್ಯವಾಗೇ ಉಳಿಯುತ್ತದೆ. ಚಾಮರಸನಂತೂ ಈ ರಹಸ್ಯವನ್ನು ಕೊನೆಯ ವರೆಗೂ ಕಾಪಾಡಿಕೊಂಡು ಬಂದಿದ್ದಾನೆ.

[illegible]

೧೨) ದೀಕ್ಷೆಯ ಪರಿಣಾಮ

ಶ್ರೀಗುರುವಿನ ಪ್ರಸಾದವನ್ನು ಸಾಧನ ಮಾಡಿಕೊಂಡು ಆಣವ, ಮಾಯಾ, ಕಾರ್ಮಿಕ ಮಲಗಳನ್ನು ನಾಶಮಾಡಿಕೊಂಡವನಾಗಿ ನಿತ್ಯ ನಿರ್ಮಲವಾದ, ಕೇವಲ ಚಿತ್‌ಸ್ವರೂಪಿಯಾಗಿರುವ, ಸೂರ್ಯ–ಚಂದ್ರ–ಅಗ್ನಿಯೆಂಬ ಮಂಡಲತ್ರಯರೂಪದಲ್ಲಿ ವರ್ತಿಸುತ್ತಿರುವ ಪರಶಿವನನ್ನು ಧ್ಯಾನರೂಪದಲ್ಲಿ ಪೂಜಿಸುವವನು ಮೋಕ್ಷಸುಖವನ್ನು ಹೊಂದುವನು.

ಯಸ್ತಂ ಶಿವಂ ಕೇವಲ ಚಿತ್ಸ್ವರೂಪಂ
ಸೂರ್ಯೇಂದುವೈಶ್ವಾನರ ಮಂಡಲಸ್ಥಂ
ಗುರುಪ್ರಸಾದಾತ್ತ್ರಿಮಲಕ್ಷಯತ್ವಾತ್
ಧ್ಯಾತ್ವಾ ಯಜೇನ್ಮೋಕ್ಷ ಸುಖಂ ಸ ಯಾತಿ ॥ [೧೮]

ಇದು ಸರ್ಪಭೂಷಣ ಶಿವಯೋಗಿಯ ಶಬ್ದಗಳಲ್ಲಿ ಹೀಗೆ ಮೂಡಿ ನಿಂತಿದೆ –

ಬೋಧಿಸೆನ್ನನು ಗುರುವೆ ನಿನ್ನಯ ದಿವ್ಯ
ಪಾದವ ನಂಬಿರುವೆ
ವೇದಾಂತದೊಳು ಗೋಪ್ಯವಾದ ತತ್ತ್ವವನೆ ಸಂ–
ಪಾದಿಸಿ ಮನದಿ ವಿನೋದಿಸಿ ಸುಖಿಸೆಂದು ॥ ಪಲ್ಲ ॥
ತಲೆವಾಗಿ ಬೆಳೆದಿರುವ ಪಂಕೇಜದ
ದಳದೆ ತಿರುಗುತಿರುವ ಕಳಹಂಸ ಶಿಶುವಿನ ಸುಳುಹನು ತಡೆದು ತ –
ನ್ನಳಿನದ ಕರ್ಣಿಕೆಯೊಳು ನಿಂತು ನಲಿಯೆಂದು ॥ [೧೯]

ಇದಕ್ಕಾಗಿ ಚಾಮರಸನಲ್ಲಿ ಎರಡು ಪ್ರಸಂಗಗಳನ್ನು ಎತ್ತಿಕೊಳ್ಳಲಾಗಿದ್ದು ದೀಕ್ಷೆಯ ತತ್‌ಕ್ಷಣದ ಪರಿಣಾಮವು ಗೋರಕ್ಷನ ಗತಿಯಲ್ಲಿದ್ದರೆ ಸಾಧನೆಯ ಪರಿಣಾಮವು ಮುಕ್ತಾಯಿಯಕ್ಕನ ಗತಿಯಲ್ಲಿದೆ.

ತೊಳಪ ತೇಜದ ಮುಗಿಲು ಮಿಂಚನು
ಝಳುಪಿಸುವವೊಲು ಕೈಯ ಕುರುಹಿನ
ಬೆಳಗ ಬೀರುತಲಂತರಂಗದಲೈಕ್ಯವಾಗಿರಲು ।
ಸೆಳೆದು ತುಡುಕಲು ಕೈಗೆ ಬೆಳಗಿನ

ಹೊಳಹದಾಗಿರೆ ಕಂಡು ಗುರುವಿನ
ನಿಲುಕಡೆಗೆ ಬೆರಗಾಗುತಿರ್ದನು ಬಳಿಕ ಗೋರಕ್ಷ ॥ [೧೬೩]

ನೂಲ ಹಿಡಿದೋಜೆಯಲಿ ಬೆಟ್ಟದ
ಮೇಲನಡರುವರಂತೆ ಭಕ್ತಿಯ
ಕೀಲನುಪದೇಶಿಸಿದ ಗುರುವಚನಾಜ್ಞೆಯನು ಹಿಡಿದು ।
ಲೀಲೆಯಿಂದಾ ಬ್ರಹ್ಮರಂಧ್ರವ
ನಾಲಿಸುತ ಲೊಡಹಾಯ್ದು ನಿಜದ ನಿ
ರಾಳದಲಿ ನಿಂದಿರ್ದಳಾ ಮುಕ್ತಾಯಿ ಭಕ್ತಿಯಲಿ ॥ [೧೬೪]

೧೩) ಒಕ್ಕು ಮಿಕ್ಕ ಪ್ರಸಾದ–ಅಚ್ಚ ಪ್ರಸಾದಿ

ಒಕ್ಕು ಮಿಕ್ಕ ಪ್ರಸಾದಗಳು ದೀಕ್ಷೆಯ ಪ್ರಸಂಗಗಳಲ್ಲಿ ಹಾಗೂ ನಂತರದ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇವುಗಳನ್ನು ಪಡೆದುಕೊಂಡು ಲಿಂಗಾನುಸಂಧಾನದಲ್ಲಿ ತೊಡಗುವವನು ಅಚ್ಚಪ್ರಸಾದಿ ಎನಿಸುತ್ತಾನೆ.

....ಬಾಯಸೂತಕ ಹೋಯಿತ್ತು ನಿಮ್ಮೊಕ್ಕುದ ಕೊಂಡೆನಾಗಿ
ನಾನಾ ಸೂತಕ ಹೋಯಿತ್ತು ನಿಮ್ಮ ಶರಣರನುಭಾವಿಯಾಗಿ
ಕೂಡಲಸಂಗಮದೇವ, ಕೇಳಯ್ಯಾ,
ಎನ್ನ ಮನದ ಸೂತಕ ಹೋಯಿತ್ತು
ನೀವಿಲ್ಲ ದಿಲ್ಲೆಂದರಿದೆನಾಗಿ [೧೬೫]

....ತನುವನಂಡಲೆದು ಮನವ ಶುದ್ಧೈಸಿ,
ಈಡಾ ಪಿಂಗಳ ನಾಳವ ಕಟ್ಟಿ,
ಸುಷುಮ್ನನಾಳದಲ್ಲಿ ಪವನವೆಂಬ ಪರಿಚಾರಕನಿಂದ
ಅಗ್ನಿಯೆಂಬ ಸುವ್ವಾರನನೆಬ್ಬಿಸಲು,
ಅದು ಮಸ್ತಕದಲ್ಲಿರ್ದ ಉತ್ತಮ ಪ್ರಸಾದ ತಾಗಲೊಡನೆ
ಆ ಪ್ರಸಾದ ಉದರಕ್ಕಿಳಿದು ಬಪ್ಪಲ್ಲಿ,
ಮನವೆಂಬ ಪ್ರಸಾದಿ ಮುಯ್ಯಾಂತು ಕೊಂಡು ಭೋಗಿಸಬಲ್ಲಡೆ,

ಆತನೆ ಅಚ್ಚಪ್ರಸಾದಿಯೆಂಬೆ ಕಾಣಾ,

ಕೂಡಲಚೆನ್ನಸಂಗಮದೇವಾ.[೧೬೬]

ಚಾಮರಸನಲ್ಲಿ ಆಯ್ದುಕೊಂಡಿರುವ ಮೊದಲ ಪದ್ಯವು ದೀಕ್ಷೆಯಲ್ಲಿ ಒಕ್ಕು ಮಿಕ್ಕ ಪ್ರಸಾದ ಅವಶ್ಯವೆಂದು ತಿಳಿಸುತ್ತದೆ. ಈ ಪ್ರಸಾದವು ಪರಮಾನಂದಕ್ಕೆ ದಾರಿಯಾಗುತ್ತದೆಂದು ಎರಡನೆಯ ಪದ್ಯದಿಂದ ತಿಳಿದು ಬರುತ್ತದೆ.

ಶಿವಯುತರ ಸಂಗವನು ಮಾಡದ
ಶಿವಯುತರ ಸಂಗತಿಯಕೇಳದ
ಶಿವಯುತರ ಸವಿದೊಕ್ಕು ಮಿಕ್ಕುದ ಹಾರಿಕೊಂಡಿರದ ।
ಶಿವಯುತರ ನೆರೆನಂಬಿ ನಚ್ಚದ
ಶಿವಯುತರ ದಾಸೋಹಿಯಾಗದ
ಭವವಿಕಾರಿಗೆ ಭಕ್ತಿಯಹುದೇ ಬಸವ ಕೇಳೆಂದ ॥ [೧೬೭]

ಬಂದು ವಸ್ತುವ ಗುರುಮುಖಾಗ್ನಿಗೆ
ತಂದು ಪಚನಿಸಿ ಜಂಗಮದ ಮುಖ
ದಿಂದೆ ಲಿಂಗಕೆ ನೀಡಿ ತನ್ನುಖದಿಂದಲೊಕ್ಕುಳಿದ ।
ಸಂದ ಸುಧೆಯನಿಪಾ ಪ್ರಸಾದವ
ನೊಂದು ಮನಸಿನಲುಂಡು ಪರಮಾ
ನಂದವನು ಪಡೆದವನೆ ಭಕ್ತನು ಬಸವ ಕೇಳೆಂದ ॥ [೧೬೮]

೧೪) ಮಂತ್ರ ಮತ್ತು ಉಪದೇಶ

ಮಂತ್ರದ ವಿಶಿಷ್ಟತೆಯನ್ನು ನಾವೀಗಾಗಲೇ ಚರ್ಚಿಸಿದ್ದೇವೆ. ಕೊನೆಯ ಅಕ್ಷರದಲ್ಲಿ ಪ್ರಯೋಗದ ವಿಶಿಷ್ಟ ಗುಣವನ್ನು ಹೊಂದಿರುವ ಅಜಪಮಂತ್ರ ಅಥವಾ ಮಾತೃಕಾಮಂತ್ರ ಎಂದು ಕರೆಯಲ್ಪಡುವ ಶಿವಮಂತ್ರವನ್ನು ನಿಜಗುಣ ಶಿವಯೋಗಿಯು 'ನಿಜಶಿವಮಂತ್ರ' ಎಂದು ಕರೆದಿದ್ದಾನೆ.

ಕಾಯವಿಡಿದಾತ್ಮರಾಶಿಗೆ ಪರತರಮುಕ್ತಿಗು
ಪಾಯವಿದು ನಿಜಶಿವಮಂತ್ರವಣ್ಣ ॥ [೧೬೯]

ಮಂತ್ರದ ಕೊನೆಯಲ್ಲಿರುವ ರಹಸ್ಯದ ಕಡೆಗೆ ಬೆರಳು ಮಾಡುತ್ತ ಆ ಮಂತ್ರವನ್ನು ವಿಧಿಪೂರ್ವಕವಾಗಿ ಪ್ರಯೋಗಿಸದವನನ್ನು ಸರ್ವಜ್ಞ ವಿಡಂಬನೆಗೊಳಪಡಿಸುವುದು ಹೀಗೆ,

ಅಸಮ ಪಂಚಾಕ್ಷರಿಯ ಉಸಿರ ಕೊನೆಯೊಳಗಿರಿಸಿ
ಸಸಿನೆ ಕುಳ್ಳಿರ್ದು ಜಪಿಸದ ಯೋಗಿ ತಾ
ಕಿಸುವಾಯನಕ್ಕು ಸರ್ವಜ್ಞ.[೧೬೦]

ಶಿವಯೋಗದ ಮಂತ್ರವು ರಹಸ್ಯಪೂರ್ಣವಾಗಿ ಕೊಡಲ್ಪಡುತ್ತದೆಂಬುದಕ್ಕೆ ಕೆಳಗಿನ ಪದ್ಯವು ಸಾಕ್ಷಿಯಾಗುತ್ತದೆ.

ಎಂದು ಬಳಿಕೇಕಾಂತದಲಿ ಮುದ
ದಿಂದಲೊಪ್ಪುವ ಕಾಯಕರಣದ
ಸಂದು ಸಂಬಂಧವನು ಸೂಚಿಸಿ ಜೀವಪರಮರನು ।
ಒಂದು ಮಾಡುವ ಶಕ್ತಿ ಭಕ್ತಿಯ
ಹೊಂದಿಕೆಯನುಪದೇಶ ಮಾಡಿದ
ನಂದು ಕರುಣದೊಳಲ್ಲಮಪ್ರಭು ಸಿದ್ಧರಾಮಂಗೆ ॥ [೧೬೧]

ಮಂತ್ರೋಪದೇಶದ ಬಗ್ಗೆ ಈ ಕೆಳಗಿನ ಪದ್ಯ ಬಹಳಷ್ಟು ಮಾಹಿತಿ ಒದಗಿಸುತ್ತದೆ.

ಶುದ್ಧವೆನಿಪಾ ಪೂರ್ವಪಶ್ಚಿಮ
ಸಿದ್ಧಮುದ್ರಾ ಬಂಧ ಮೊದಲಾ
ಗಿದ್ದ ನಾನಾ ಪರಿಯ ಮಂತ್ರಕ್ರಿಯೋಪದೇಶವನು ।
ಉದ್ಧರಿಸಲಾ ಬಸವರಾಜನ
ಬುದ್ಧಿ ಪ್ರಜ್ವಲವಾಗಿ ಪಸರಿಸು
ತಿದ್ದುದೇನೆಂದೆಂಬೆನಾ ಪ್ರಭುಲಿಂಗನೊಲುಮೆಯನು. ॥ [೧೬೨]

ಶಿವಯೋಗದ ಮಂತ್ರವನ್ನಲ್ಲದೆ ಚಾಮರಸ ಇನ್ನೂ ಒಂದು ಮಂತ್ರವನ್ನು ತಿಳಿಸುತ್ತಾನೆ. ಅದೆಂದರೆ ಜನನದೊಂದಿಗೆ ಬರುವ ಅಧಿದೈವಿಕ ದೋಷವನ್ನು ತೆಗೆಯಲು ಕಿವಿಯಲ್ಲಿ ಉಸುರುವ ಪಂಚಾಕ್ಷರಿ ಮಂತ್ರ. ಬಸವಣ್ಣ ಜನಿಸಿದಾಗ ಶಿವನು ಈ ಕೆಲಸ ಮಾಡಿದರೆ ಮಹಾದೇವಿಯಕ್ಕ ಜನಿಸಿದಾಗ ಅದನ್ನು

ಅವಳ ತಂದೆ ನಿರ್ಮಳ ಮಾಡುತ್ತಾನೆ. ಇದು ತ್ರಿಮಲಗಳನ್ನು ದೂರೀಕರಿಸಿ ಕೊಡುವ ಶಿವಯೋಗದ ಮಂತ್ರವಲ್ಲ.[೧೭೩]

೧೫) ನವಚಕ್ರಗಳು

ಶಿವಯೋಗವನ್ನು ತಮ್ಮ ಉಸಿರಾಗಿಸಿದ್ದ ಶಿವಶರಣರು ಆಧಾರಾದಿ ಒಂಬತ್ತು ಚಕ್ರಗಳನ್ನು ಸೂಚಿಸುತ್ತಾರೆ.

ಎನ್ನಾಧಾರಚಕ್ರಕ್ಕೆ ನಕಾರವಾದಾತ ಬಸವಣ್ಣ,
ಎನ್ನ ಸ್ವಾಧಿಷ್ಠಾನಚಕ್ರಕ್ಕೆ ಮಕಾರವಾದಾತ ಬಸವಣ್ಣ,
ಎನ್ನ ಮಣಿಪೂರಕಚಕ್ರಕ್ಕೆ ಶಿಕಾರವಾದಾತ ಬಸವಣ್ಣ,
ಎನ್ನ ಅನಾಹತಚಕ್ರಕ್ಕೆ ವಾಕಾರವಾದಾತ ಬಸವಣ್ಣ,
ಎನ್ನ ವಿಶುದ್ಧಿಚಕ್ರಕ್ಕೆ ಯಕಾರವಾದಾತ ಬಸವಣ್ಣ,
ಎನ್ನ ಆಜ್ಞಾ ಚಕ್ರಕ್ಕೆ ಓಂಕಾರವಾದಾತ ಬಸವಣ್ಣ,
ಎನ್ನ ಬ್ರಹ್ಮರಂಧ್ರಕ್ಕೆ ಸಾವಿರದ್ನೈವತ್ತೆರಡಕ್ಷರವಾದಾತ ಬಸವಣ್ಣ,
ಎನ್ನ ಶಿಖಾಚಕ್ರಕ್ಕೆ ಕ್ಷಕಾರವಾದಾತ ಬಸವಣ್ಣ,
ಎನ್ನ ಪಶ್ಚಿಮಚಕ್ರಕ್ಕೆ ಹಕಾರವಾದಾತ ಬಸವಣ್ಣ,
ಇಂತೀ ಎನ್ನ ನವಚಕ್ರಂಗಳಲ್ಲಿಯೂ ನವನಾಳಂಗಳಲ್ಲಿಯೂ
ನವವಿಧ ಲಿಂಗಸ್ವರೂಪವಾದಾತ ಬಸವಣ್ಣ.
ಇದು ಕಾರಣ. ಕೂಡಲಚನ್ನಸಂಗಯ್ಯನಲ್ಲಿ ನಿಮ್ಮ ತೋಱು
ಎನ್ನ ಸಲಹಿದ ವರಗುರು ಸಂಗನ ಬಸವಣ್ಣನ ಶ್ರೀಪಾದಕ್ಕೆ
ಶರಣೆಂದು ಬದುಕಿದೆನು, ಕಾಣಾ ಪ್ರಭುವೆ![೧೭೪]

ಈ ವಿಚಾರವನ್ನು ಚಾಮರಸನಿಂದ ರಚಿತವಾದ ಕೆಳಗಿನ ಪದ್ಯಗಳಲ್ಲಿ ಕಾಣುತ್ತೇವೆ.

ತಿಳಿದುದಾಗಳೆ ಬಳಿಕ ಹೃದಯ
ಸ್ಥಳದ ಮಲೆ ಮಾನಸಸರೋವರ
ಹೊಳೆದುದಾಗಳೆ ಪರಮಹಂಸನ ನೆಳಲು ನೆಲೆಗೊಂಡು ।

ತಳಿತ ನವಚಕ್ರಾಂಬುಜಂಗಳ
ಕುಳವನರಿದನು ಮನದ ಸಂಶಯ
ವಳಿಯಿತಲ್ಲಮಲಿಂಗನೊಲಿದೊಡೆ ಸಿದ್ಧರಾಮಂಗೆ ॥ [೧೭೫]

ಸ್ವಾನುಭಾವಾಧಾರ ಸ್ವಾಧಿ
ಷ್ಠಾನ ಮಣಿಪೂರಕವನಾಹತ
ವಾ ನವೀನದ ಕೆಲಸಗತಿಯ ವಿಶುದ್ಧಿಯಾಜ್ಞೇಯ ।
ಸ್ಥಾನಗಳ ನೆಲೆಗೊಳಿಸಿ ಬ್ರಹ್ಮ
ಸ್ಥಾನವನು ಮೇಲೆನಿಸಿ ರಚಿಸಿದ
ಮಾನನಿಧಿ ಬಸವಣ್ಣನೀಪರಿ ಶೂನ್ಯಪೀಠವನು ॥ [೧೭೬]

೧೬) ಪ್ರಾಣಾಯಾಮ

ಪ್ರಾಣಾಯಾಮವು ಪ್ರಾಕೃತಪ್ರಾಣಾಯಾಮ, ವೈಕೃತ ಪ್ರಾಣಾಯಾಮ ಹಾಗೂ ಕೇವಲಕುಂಭಕ ಎಂದು ಮೂರು ತೆರನಾಗಿದೆ.

ಪ್ರಾಣಾಯಾಮಸ್ತ್ರಿಧಾ ಪ್ರೋಕ್ತ: ಪ್ರಾಕೃತೋ ವೈಕೃತಸ್ತಥಾ
ತಾಭ್ಯಾಂ ವಿನಾಜೃಂಭತೇಽಸೌ ಕೇವಲ: ಕುಂಭಕಸ್ಸ್ವಯಂ ॥ [೧೭೭]

ಉಸಿರಿನ ಕೊನೆಯಲ್ಲಿ ಬಿಂದುಸಮೇತವಾಗಿ ಪ್ರಾಣವಾಯುವಿನ ರೇಚಕದೊಡನೆ ಕೂಡಿ ಮಂತ್ರವು ಹೊರಗೆ ಬರುತ್ತದೆ ಮತ್ತು ವಿಸರ್ಗದೊಡನೆ ಕೂಡಿದ ಮಂತ್ರ ಬೀಜವು ಪ್ರಾಣವಾಯುವಿನ ಪೂರಕದೊಡನೆ ಕೂಡಿ ಪ್ರವೇಶಿಸುತ್ತದೆ.

ಸಕಾರಾಂತಮಿದಂ ಬೀಜಂ ಬಹಿರ್ಯಾತಿ ಸಬಿಂದುಕಂ
ಸವಿಸರ್ಗಂ ಷಕಾರಾಂತಂ ತದ್ಬೀಜಂ ಪ್ರವಿಶತ್ಯಧಃ ॥ [೧೭೮]

ಈ ಪ್ರಾಣಾಯಾಮದ ಕ್ರಿಯೆ ವೀರಶೈವದ ಬಟ್ಟೆಯೆಂದು ಚಾಮರಸನ ಅಭಿಪ್ರಾಯ.

ವಾಯುವನನೇರುವಡೆ ವಾಘೆಯ
ದಾರವನು ಹಿಡಿದಲ್ಲದಾಗದು

ಧೀರತನದಲಿ ಸಂಚಲಿಸುತಿಹ ಮನವ ನಿಲಿಸುವೊಡೆ ।

ಮಾರುತನ ಗತಿಗೆಡಿಸಿ ಕಾಯದ

ಕಾರಣವನರಿದಲ್ಲದಾಗದು

ವೀರಶೈವದ ಬಟ್ಟೆಯಿದು ಬಸವಣ್ಣ ಕೇಳೆಂದ ॥ [೧೭೯]

ಹೇಳುವೊಡೆ ಮನವೆಂಬ ಹಕ್ಕಿಗೆ

ಕಾಲುಗಳೆಲ್ಲೈ ತೊಳಲುತಿಹ ಕ

ಣ್ಣಾಲಿಗಳು ದಿಟವದಕೆ ಪಕ್ಕಗಳೀಡೆ ಪಿಂಗಳದ ।

ಗಾಳಿಯಾಗಿಹುದಂತು ಕಾರಣ

ವಾಲಿಯೇ ಸಾಧನಕೆ ಸಾಧನ

ಮೂಲವನು ನಿಲಿಸುವವನೆ ಭಕ್ತನು ಬಸವ ಕೇಳೆಂದ. ॥ [೧೮೦]

೧೭) ತ್ರಿಕೂಟ – ತ್ರಿವೇಣಿಸಂಗಮ – ಶೃಂಗಾಟಕ – ಭ್ರೂಮಧ್ಯ

ತ್ರಿಕೂಟ, ತ್ರಿವೇಣಿಸಂಗಮ, ಮತ್ತು ಶೃಂಗಾಟಕಚತುಃಪೀಠ ಎಂಬ ಹೆಸರುಗಳು ಇಡಾ, ಪಿಂಗಳಾ, ಸುಷುಮ್ನಾ ನಾಡಿಗಳು ಬೆರೆಯುವ ಭ್ರೂಮಧ್ಯಕ್ಕೆ ಅನ್ವಯವಾಗುವಂಥವು.[೧೮೧] ಇದನ್ನು ಚೆನ್ನಸದಾಶಿವಯೋಗಿ ಹೀಗೆ ತಿಳಿಸುತ್ತಾನೆ–

ತಸ್ಮಾತ್ರಿಕೂಟನಾಮಾಪಿ ತ್ರಿವೇಣೀಸಂಗಮಸ್ಥಲಂ

ಶೃಂಗಾಟಕಚತುಃಪೀಠನಾಮಾನ್ಯೇಕಸ್ಥಲಸ್ಯ ಹಿ ॥ [೧೮೨]

ಪ್ರಭುಲಿಂಗಲೀಲೆಯಲ್ಲಿ ಇದು ಕೆಳಗಿನಂತೆ ನಿರೂಪಿತವಾಗಿದೆ.

ಈಡೆ ಪಿಂಗಳ ವರ ಸುಷುಮ್ನಾ

ನಾಡಿಗಳು ಬಲಿದೆಂಟು ದಿಕ್ಕಿನ

ಕೋಡ ಕೈಯಲಿ ಮದಗಜಂಗಳು ಮೇಲು ನೆಲೆಯೊಳಗೆ ।

ಕೂಡೆ ಬೆಳಗುವ ಸೋಮಸೂರಿಯ

ರಾಡುತಿಹ ವೀದಿಗಳು ಭುವನದ

ಬೀಡಿದೆನಲಾ ಬಸವನೊಡ್ಡಿದನಂಬರಾಸನವ ॥ [೧೮೩]

೧೮) ಮನೋಲಯದ ಮಾರ್ಗ

ಮನವನ್ನು ಲಯಿಸುವುದೇ ಶಿವಯೋಗದ ಪ್ರಥಮ ಆದ್ಯತೆ. ಈ ಮನಸ್ಸನ್ನು ವಶದಲ್ಲಿಟ್ಟುಕೊಳ್ಳದವರಿಗೆ ಯೋಗವು ಲಬಿಸುವುದು ಸಾಧ್ಯವಿಲ್ಲ, ಪ್ರಯತ್ನಪೂರ್ವಕವಾಗಿ ವಶದಲ್ಲಿಟ್ಟುಕೊಳ್ಳುವವರಿಂದ ಅದು ಸಹಜವಾಗಿ ಸಾಧಿಸಲ್ಪಡುತ್ತದೆ.

ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿ:

ವಶ್ಯಾತ್ಮನಾ ತು ಯತತಾ ಶಕ್ಯೋ S ವಾಪ್ತುಮುಪಾಯತ: ॥ [೧೮೪]

ಕೆಳಗಿನ ವಚನವು ಮನೋಲಯದ ಗುರಿಯನ್ನು ಸ್ಪಷ್ಟಪಡಿಸುತ್ತದೆ.

ಘಟವೆಂಬ ಗೋರಿಯಲ್ಲಿ ಮನವೆಂಬ ಮರ್ಕಟವ ಹೂಳಿ

ಜೀವನೆಂಬರಸನು ಪರಮಾತ್ಮನ ಕೂಡಿ ಬಯಲಾಗುವುದೇ

ನಿಜಸಮಾಧಿ ಕಾಣಾ ಶ್ರೀಶೈಲಪಿತಚನ್ನವೀರದೇವಾ. [೧೮೫]

ಮನೋಲಯದ ಮಾರ್ಗದ ನಿರೂಪಣೆಗಾಗಿ ಚಾಮರಸನು 'ಮನೋಲಯದ ಗತಿ' ಎಂಬ ಒಂದು ಅಧ್ಯಾಯವನ್ನೇ ಮೀಸಲಿರಿಸಿದ್ದಾನೆ. ಒಂದು ಪದ್ಯ ಹೀಗಿದೆ –

ಮನವ ಬಹಿರಂಗದಲಿ ಚರಿಸುವ

ಮನುಜನವನಜ್ಞಾನಿ ಮತ್ತಾ

ಮನವನಂತರ್ಮುಖದಲಾಚರಿಸಿದೊಡೆ ಸರ್ವಜ್ಞ ।

ಮನವು ಮನದಲಿ ನಿಂದು ನಿರ್ವಾ

ಸನೆಯಲಿರೆ ಸುಜ್ಞಾನಿಯಂತಾ

ಮನವನಳಿದರೆ ನಿತ್ಯನೈ ಬಸವಣ್ಣ ಕೇಳೆಂದ ॥ [೧೮೬]

೧೯) ಗುರುಕಾರುಣ್ಯ

ಗುರುವಿನ ಕರುಣೆಯಾದ ಮೇಲೆ ಶಿಷ್ಯನ ಕರದಲ್ಲಿ ಲಿಂಗವಿರಬೇಕು. ಅದು ಇಲ್ಲದಿದ್ದರೆ ಗುರುಕಾರುಣ್ಯ ವ್ಯರ್ಥ.[೧೮೭]

ಶ್ರೀ ಗುರುಕರುಣವೆ ಲಿಂಗ,

ಶ್ರೀ ಲಿಂಗದ ನಿಜವೆ ಜಂಗಮ,

ಇಂತಿದು ಬಹಿರಂಗದ ವರ್ತನೆ.
ಇನ್ನು ಅಂತರಂಗದ ಸುಜ್ಞಾನವೆ ಜಂಗಮ,
ಆ ಜಂಗಮದ ನಡೆವ ಸತ್ಕ್ರಿಯೆ ಲಿಂಗ,
ಆ ಉಭಯದ ಏಕತ್ವದ ಸಿದ್ಧಿಯೆ ಗುರು. [೧೮೮]

ಗುರುಕಾರುಣ್ಯವನ್ನು ಪಡೆದವನು ಅರಿಷಡ್ವರ್ಗವನ್ನು ಇಲ್ಲವಾಗಿಸಿ ಜಾಣನೆನಿಸುತ್ತಾನೆ. ಇಂಥ ಗುರುಕೃಪೆಯಾದ ಶರಣರು ಸಾಧನೆಯಿಂದ ಪರಬ್ರಹ್ಮವನ್ನು ಮೀರಿ ನಿರುಪಮಸ್ಥಾನವನ್ನು ಪಡೆದುಕೊಳ್ಳುತ್ತಾರೆಂದು ಚಾಮರಸ ತಿಳಿಸುತ್ತಾನೆ.

ಅದು ನಿಯತ್ತದಲಾಗಮಂಗಳ
ಹೃದಯದಲಿ ಹುರುಳರಿದು ತನ್ಮಾ
ರ್ಗದಲಿ ಬುದ್ಧಿಯನಿಕ್ಕಿ ಗುರುಕಾರುಣ್ಯವನು ಪಡೆದು ।
ಮೊದಲು ತನು ಮನ ಧನದ ಮೇಲಣ
ಮದ ವಿಮೋಹಾದಿಗಳನೆಲ್ಲವ
ಕೆದರಿ ಕೆಡಿಸುವನವನೆ ಜಾಣನು ಬಸವ ಕೇಳೆಂದ ॥ [೧೮೯]

ಭವಭವದಲಜ್ಞಾನ ವಿಧಿಯಲಿ
ಭುವನ ಭವನವ ತೊಳಲಿ ಬಳಲುವ
ವ್ಯವಹರಣೆಯಂತಲ್ಲ ಗುರುಕೃಪೆಯಾದ ಶರಣರಿಗೆ ।
ಹವಣಿಸಲು ಬಾರದ ಪರಬ್ರ
ಹ್ಮವನು ಮೀರಿದ ನಿರುಪಮಸ್ಥಾ
ನವನು ಸೂರೆಯ ಕೊಟ್ಟನಲ್ಲಮ ಗಿರಿಜೆ ಕೇಳೆಂದ ॥ [೧೯೦]

೨೦) ಇಂದ್ರಿಯನಿಗ್ರಹ

ಶಿವಯೋಗಾಚರಣೆ ಮತ್ತು ಇಂದ್ರಿಯನಿಗ್ರಹ ಎರಡೂ ಜೊತೆಜೊತೆಯಾಗಿಯೇ ಹೋಗಬೇಕು. ಈ ಮಾತನ್ನು ಚೆನ್ನಬಸವಣ್ಣ ಹೇಳುವುದು ಹೀಗೆ,

.....ಕಾಮಿ ಬಲ್ಲನೆ ಶಿವಯೋಗದ ಸುಖವ?
ರೋಗಿ ಬಲ್ಲನೆ ರಂಭಾರಸವ?
ಗೂಗಿ ಬಲ್ಲುದೆ ಚಿತ್ಸೂರ್ಯನ ಬೆಳಗ? [೧೯೧]

ಇದನ್ನು ಸರ್ವಜ್ಞ ನೇರ ಮಾತುಗಳಲ್ಲಿ ಹೀಗೆ ತಿಳಿಸುತ್ತಾನೆ.

ಓದಿ ಬೂದಿಯ ಪೂಸಿ ತೋದ ಕಾವಿಯ ಹೊದ್ದು
ಹೋದಾತ ಯೋಗಿಯೆನಬೇಡ ಇಂದ್ರಿಯನು
ಕಾದಾತ ಯೋಗಿ ಸರ್ವಜ್ಞ. [೧೯೨]

ಆವನು ಸಾಧನೆಯ ರಹಸ್ಯವನ್ನು ತಿಳಿಸುವುದು ಹೀಗೆ,

ಇಂದ್ರಿಯವು ಮೂತ್ರವೂ ಒಂದೆ ನಾಳದಿ ಬಕ್ಕು
ಒಂದು ಬಿಟ್ಟೊಂದು ತಡೆದರೆ ಪರಬೊಮ್ಮ
ವಂದೆ ತಾನಕ್ಕು ಸರ್ವಜ್ಞ [೧೯೩]

ಈ ಎಲ್ಲವನ್ನೂ ಒಂದೇ ಪದ್ಯದಲ್ಲಿ ಚಾಮರಸ ಹೀಗೆ ಹಿಡಿದಿಟ್ಟಿದ್ದಾನೆ.

ಹಸಿವನಳಿವರು ಜೀವ ಕಾಯದ
ಬೆಸುಗೆಯನು ಕಾಂಬುವರು ಬಿಂದುವ
ನೊಸರಲೀಯದೆಯೂರ್ಧ್ವಮುಖದಲಿ ಬಿತ್ತಿ ಬೆಳೆವವರು
ಉಸುರು ಪ್ರಾಣಾವಾಯುವಂ ಕೀ
ಲಿಸುವವರು ಸುಜ್ಞಾನಯೋಗ್ಯರು
ಸಸಿನೆ ಕೇಳುವುದೀ ಮಹಾ ಪ್ರಭುಲಿಂಗಲೀಲೆಯಲಿ ॥ [೧೯೪]

೨೧) ಕುಂಡಲಿನೀ ಶಕ್ತಿ

ಗುರುಕಾರುಣ್ಯವನ್ನು ಪಡೆದ ಶಿಷ್ಯನು ಸಾಧನೆಯ ಮಾರ್ಗದಲ್ಲಿ ಮೊದಲು ಕುಂಡಲಿನೀ ಶಕ್ತಿಯನ್ನು ಸ್ಮರಿಸುತ್ತಾನೆ. ನಾಭಿಸ್ಥಾನದ ಮಣಿಪೂರಕ ಚಕ್ರವು ಐದು ವಲಯಗಳನ್ನು ಹೊಂದಿದ್ದು ಆ ಚಕ್ರದಲ್ಲಿ ಸುಪ್ತ

ಸರ್ಪದ ಆಕಾರವನ್ನು ಹೊಂದಿರುವ ಮಿಂಚಿಗೆ ಸಮಾನವಾದ ಕಾಂತಿಯನ್ನು ಹೊಂದಿರುವ ಹಾಗೂ ಸಕಲ ಸಿದ್ಧಿಗಳನ್ನು ಕೊಡುವಂಥ ಕುಂಡಲಿನಿಯೆಂಬ ಶಕ್ತಿಯನ್ನು ಸ್ಮರಿಸಬೇಕು.

ಪಂಚಾವರ್ತಂ ನಾಭಿಚಕ್ರಂ ಸರ್ಪಾಕಾರಂ ತಟನ್ನಿಭಾಂ
ತತ್ರ ಕುಂಡಲಿನೀಶಕ್ತಿಂ ಸರ್ವಸಿದ್ಧಿಪ್ರದಾಂ ಸ್ಮರೇತ್ ॥ [೧೯೫]

ಇದನ್ನು ಚಾಮರಸ ಹೀಗೆ ತಿಳಿಸುತ್ತಾನೆ.

ಹೋಗಹೊಗಲಿಕೆ ಕುಂಡಲಿಯ ಹೆ
ಬ್ಬಾಗಿಲಲಿ ಕೆಡಹಿದನು ಕಾಮನ
ಮೇಗೆ ಹೃದಯಕವಾಟದಲಿ ಕಡಿದಿಕ್ಕಿದನು ಜವನ ।
ಲಾಗಿಸಿದನಖಿಳಾಧಿಪತ್ಯವ
ಭೋಗಿಸುವ ಭ್ರೂಮಧ್ಯ ಭುವನಕೆ
ರಾಗದಿಂದನುಭಾವಮುಖದಲಿ ಬಸವದಂಡೇಶ ॥ [೧೯೬]

ಕುಂಡಲಿನಿಯನಂಡಲೆದು ರವಿಶಶಿ
ಮಂಡಲಂಗಳ ಮೀರಿ ಕಾಮದ
ಕಂಡಿಗಳ ಕೀಲಿಸಿ ಸುಷುಮ್ನಾನಾಳದೊಳಗಡರಿ ।
ಮಂಡಿಸಿದನಾ ಶೂನ್ಯಪೀಠದ
ಮಂಡೆಯೊಳು ತೊಳತೊಳಗಿ ಬೆಳಗಿಯ
ಖಂಡ ತೇಜೋಮೂರ್ತಿಯಲ್ಲಮಲಿಂಗ ಲೀಲೆಯಲ್ಲಿ ॥ [೧೯೭]

೨೨) ಅಂತಃಪೂಜೆ –ಬಾಹ್ಯಪೂಜೆ

ಶಿವಪೂಜೆಯು ಅಂತಃಪೂಜೆ ಹಾಗೂ ಬಾಹ್ಯಪೂಜೆ ಎಂದು ಎರಡು ವಿಧ. ಬಾಹ್ಯಪೂಜೆಯಲ್ಲಿ ಪ್ರಾರಂಭವಾಗುವ ಇದು ಅಂತಃಪೂಜೆಯಲ್ಲಿ ಪರಿಪೂರ್ಣತೆ ಹೊಂದುತ್ತದೆ. ಚೆನ್ನಸದಾಶಿವಯೋಗಿ ಇದನ್ನು ಹೀಗೆ ತಿಳಿಸುತ್ತಾನೆ.

ಅಂತರ್ಯಾಗೋ ಬಹಿರ್ಯಾಗೋ ದ್ವಿವಿಧಂ ತಚ್ಛಿವಾರ್ಚನಂ
ಮುಖ್ಯಾಚಾಭ್ಯಂತರೀ ಪೂಜಾ ಸಾ ಚ ಬಾಹ್ಯಾರ್ಚನೋದಿತಾ ॥ [೧೯೮]

ಸತ್ಪುರುಷರು ಈಶ್ವರನನ್ನು ಅಂತರಂಗದಲ್ಲಿ ಪೂಜಿಸುತ್ತಿದ್ದರೆ ಮಂದಬುದ್ಧಿಯವರು ಬಾಹ್ಯಕ್ರಿಯಾಮಾತ್ರಗಳಿಂದ ಪೂಜಿಸುತ್ತಿರುತ್ತಾರೆ.

ಆತ್ಮಸ್ಥಮತ್ಯಂತರುಚಿಂ ಪ್ರಶಾಂತ
ಮಶ್ರಾಂತ ಮೀಶಂ ಹಿ ಯಜಂತಿ ಸಂತಃ
ತಂ ಬಾಹ್ಯನಾನಾಪ್ರತಿಮಾಸು ಬಾಹ್ಯ
ಕ್ರಿಯಾಭಿರೇವಾಲ್ಪಧಿಯೋ ಯಜಂತಿ ॥ [೧೯೯]

ಚಾಮರಸನು ಇದನ್ನು ಕೆಳಗಿನ ಪದ್ಯಗಳಲ್ಲಿ ಹೀಗೆ ತಿಳಿಸುತ್ತಾನೆ.

ಹಱುಗೊಲನ ಜೋಗೈಸಿಕೊಳುತಲಿ
ತೋಱಿಯ ದಾಂಟುವರಂತೆ ಲಿಂಗವ
ನಱುವವರು ಕರ್ಮೇಂದ್ರಿಯಂಗಳನೊಯ್ಯನೋಸರಿಸಿ ।
ಹೊಱಗೆ ಮಾಡುವ ಮಾಟವೆಲ್ಲವ
ತೋಱುವುದಂತ ಮಾರ್ಗವೊಂದನೆ
ಹೊಱುವುದಿದು ಶಿವಭಕ್ತಿಯೌ ಮುಕ್ತಾಯಿ ಕೇಳೆಂದ ॥ [೨೦೦]

ದೇಹಿಗೊಳಹೊರಗೆಂಬ ನೆಲೆಯಲಿ
ಬಾಹಿರಂಗವೆ ಸಕಲ ಮಾಯಾ
ಮೋಹದಿಂದಿಹುದಂತರಂಗವೆ ನಿಃಪ್ರಪಂಚಿನಲಿ ।
ಬೇಹುದಾಗಿಹುದಂತು ಕಾರಣ
ಸಾಹಸಿಗತನದಿಂದಲಾ ನಿ
ರ್ಮೋಹದಲಿ ನಿಲುವವನೆ ನಿತ್ಯನು ರಾಮ ಕೇಳೆಂದ ॥ [೨೦೧]

೨೩) ಮುಕ್ತಿ

ಶಿವಯೋಗಕ್ಕೂ ಮೋಕ್ಷಕ್ಕೂ ನೇರ ಸಂಬಂಧವಿದೆ. ಶಿವಯೋಗಾಚರಣೆಯ ಗುರಿಯೇ ಪೂರ್ಣಮುಕ್ತಿ.

ಮೂರು ಪೊಳೆಗಳ ಸಂಗಮದ ತಾಣದೊಳು ಮಿಂದು

[illegible]

ಮೂರು ತಾಪದಾದಿ ಮಲವನು ತೊಳೆದು
ಮೂರು ಗುಣವನೆ ಮೀರಿ ತೋರುವ ಸುತೇಜದೊಳು
ಮೂರು ಮನೋವಾಯು ದೃಷ್ಟಿಗಳು ಕೂಡಿ ಕರಿಗೊಂಡು ।
ನಿಮಿಷವಾಗಲಿ ನಿಮ್ಮ ನೆನಹು ನಿಂದೊಡೆ ಮುಕ್ತಿ
ಸಮನಿಸದಿಹುದೆ ಶಂಕರ ಯೋಗಿಜನವಂದ್ಯ ॥ [೨೦೨]

ಈ ಮಾತನ್ನು ಸ್ಪಷ್ಟವಾಗಿ ತಿಳಿಸುವ ಚಾಮರಸವಿರಚಿತ ಪದ್ಯ ಹೀಗಿದೆ.

ಅನವರತವೇನಾದೊಡೊಂದನು
ನೆನೆವುತಿಹುದೀ ಮನಸು ಮನಸಿನ
ನೆನಹಿನಿಂದವೆ ತೋಱುವೆವು ಸರ್ವ ಪ್ರಪಂಚಗಳು ।
ಇನಿತನಱಿದು ಸಮಾಧಿಯಲಿ ತ
ನ್ಮನವನೆಲ್ಲವ ತಿಂದು ತೇಗುವ
ಘನ ಪರಾಕ್ರಮವುಳ್ಳೊಡಾತನೆ ಮುಕ್ತನಹನೆಂದ ॥ [೨೦೩]

೨೪) ಧ್ಯಾನ–ಧಾರಣ–ಸಮಾಧಿ

ದೀಕ್ಷೆ, ಇಂದ್ರಿಯನಿಗ್ರಹ, ಕುಂಡಲಿನೀಶಕ್ತಿ ಜಾಗೃತವಾಗುವುದು ಮುಂತಾದವುಗಳು ಶಿವಯೋಗದ ಪ್ರಾರಂಭದ ಹಂತಗಳಾದರೆ ಧ್ಯಾನ, ಧಾರಣ, ಸಮಾಧಿ ಇವು ಮುಂದಿನ ಹಂತಗಳೆನಿಸುತ್ತವೆ. ವಿಶ್ವವನ್ನು ತುಂಬಿರುವ ಪರಶಿವನೊಬ್ಬನೇ ಸತ್ಯ. ಸರ್ವಚೈತನ್ಯವನ್ನು ಒಳಗೊಂಡಿರುವ ಆತನ ಪ್ರಣವಬೀಜದಲ್ಲಿ ನೋಟವನ್ನು ಪಡೆದವನು ಆತ್ಮಾರಾಮನಾಗಿದ್ದುಕೊಂಡು ಧ್ಯಾನಮಾರ್ಗವೊಂದರಲ್ಲಿಯೇ ನಿಷ್ಠನಾಗಿರುವನು.

ಸೋಹಂಭಾವಾತ್ಪ್ರಕಟ ಪರಮಾದ್ವೈತ ಮುಖ್ಯಸ್ವಭಾವಂ
ಯಲ್ಲೋಕೇ ವಿಸ್ಫುರತಿ ಖಲು ತತ್ತತ್ಸ್ವರೂಪಂ ಸ್ವಭಾವಂ
ಸಮ್ಯಗ್ದೃಷ್ಟಿರ್ಗುರುಕರುಣಯಾ ಸರ್ವಭೂತಾನುಯಾತೇ
ಸ್ವಾತ್ಮಾರಾಮಸ್ಸಭವತಿ ಸಖೇ ಧ್ಯಾನಮಾರ್ಗೈಕನಿಷ್ಠಃ ॥ [೨೦೪]

ಅನವರತವೂ ಬೆಳಗುತ್ತಿರುವ ಶುದ್ಧಬುದ್ಧಿಯಿಂದೊಡಗೂಡಿ ಚಲಿಸದೇ ಇರುವ ಪ್ರಣವತತ್ತ್ವವನ್ನು ಧರಿಸುವುದೇ ಧಾರಣಯೋಗವು.

ಸ್ಫುರತಿಪರಮತತ್ತ್ವಂ ಸ್ವಸ್ಯ ಬಾಹ್ಯಾಂತರೇ ಯತ್
ಸತತಮತುಳಮತ್ಯಾಧಾರಣಂ ನಿಶ್ಚಲೇನ
ಪುನರಪಿ ಚ ವದಾಮಸ್ತೇ ಪ್ರಕಾರೋ S ಯಮಾಸ್ತೇ
ಚಲನರಹಿತ ಚಿತ್ತಂ ಕೇವಲ ಧಾರಣಾ ಸಾ ॥ [೨೦೫]

ಸಮಾಧಿಯೋಗಕ್ಕೆ ನಿಜವಸ್ತುವಿನ ಸಾಕ್ಷಾತ್ಕಾರವೇ ಸ್ವಭಾವವಾಗಿರುತ್ತದೆ, ಸಕಲ ತತ್ತ್ವಗಳು ಸಮಾನವೆಂಬ ಭಾವವಿರುತ್ತದೆ, ಆದರ ನಿಜವಸ್ತುವಿನ ನಿಲುಗಡೆಯು ಪರವಸ್ತುವಿನ ಸಾಮರಸ್ಯವನ್ನು ಎದುರಿಟ್ಟು ಧ್ಯಾನ ಮಾಡುವ ನಿರುಪಾಧಿಕತ್ವವಾಗಿರುತ್ತದೆ ಹಾಗೂ ಆ ಸಮಾಧಿಯೋಗವು ನಿರ್ವಿಕಲ್ಪರೂಪವಾಗಿರುತ್ತದೆ.

ನಿಜಾನುಭವಶೀಲತಾ ನಿಖಿಲತತ್ತ್ವಸಾಮ್ಯಸ್ಮೃತಿಃ
ಸ್ಮೃತೇರವಿಚಲಾಸ್ಥಿತಿಸ್ಸ್ಥಿರತಯಾ ನಿಧಿಧ್ಯಾಸತಾ
ಸದೇಕಪರಿಭಾವನಾ ಸಹಜ ತಾ ಹ್ಯನಾಯಾಸತಾ
ಸಮಾಧಿರಿತಿ ಕೀರ್ತಿತಸ್ಸತತನಿರ್ವಿಕಲ್ಪಾತ್ಮಕಃ ॥ [೨೦೬]

ಪ್ರಭುಲಿಂಗಲೀಲೆಯ ಕೆಳಗಿನ ಪದ್ಯಗಳಲ್ಲಿ ಈ ವಿಷಯವನ್ನು ನೋಡುತ್ತೇವೆ.

ಧ್ಯಾನ ಧಾರಣ ಯಮ ನಿಯಮ ಸುಯಿ
ದಾನ ಸೂಕ್ಷ್ಮವಿಚಾರ ಶೀಲ ವಿ
ಧಾನ ಹೂವಗ್ಗವಣೆಯಾರತಿ ಧೂಪ ಬೋನಗಳ ।
ಮೌನ ಮೊದಲಾಗಿರ್ದ ಹಲವವ
ಧಾನ ನಿಷ್ಠೆಯ ನಿತ್ಯ ನೇಮದ
ಮಾನಿಗಳು ನೆರೆದಿರ್ದರಾ ಮಂಟಪದ ಬಳಸಿನಲಿ ॥ [೨೦೭]
ಪಾವನತೆಯಾಯ್ತಿಷ್ಟಲಿಂಗದ
ಸೇವೆಯಲಿ ಬಹಿರಂಗವಂತ
ರ್ಭಾವಮಾದೊಡೆ ಶಿವಸಮಾಧಿಯಲಾಯ್ತು ನಿರ್ಮಲತೆ ।
ನೀವು ನೋಡಲು ನೀವು ನೆನೆಯಲ

ದಾವುದರಿದಿನ್ನೆನುತ ಭಕ್ತರ

ನೋವಿ ಹೊಗಳಿದನಲ್ಲಮಪ್ರಭುಲಿಂಗ ಲೀಲೆಯಲಿ ॥ [208]

ಇಷ್ಟಲಿಂಗದ ಸೇವೆಯಲ್ಲಿ ಬಹಿರಂಗವು ಅಂತರ್ಭಾವವಾದರೆ ಮಾತ್ರ ಶಿವಸಮಾದಿ ಸಾಧ್ಯ ಹಾಗೂ ಆ ಶಿವಸಮಾಧಿಯಲ್ಲಿ ತ್ರಿಮಲಗಳೆಲ್ಲ ನಷ್ಟವಾಗುತ್ತವೆಂದು ತಿಳಿಸುತ್ತದೆ ಈ ಪದ್ಯ.

೨೫) ಬಿಂದುದರ್ಶನ

ಮನೋಲಯವು ಕರಗತವಾದ ಸಾಧಕನು ಸಾಧನೆಯಲ್ಲಿ ಮುಂದುವರೆದಂತೆ ಅಂತರ್ಯದಲ್ಲಿ ಬೆಳಕು ಗೋಚರವಾಗಿ ಅದು ಬಿಂದುವಿನ ರೂಪ ಪಡೆಯುವುದು. ಅಂಥವನಿಗೆ ಕಡೆಗಣ್ಣಿನಲ್ಲಿ. ಶೀಘ್ರದಲ್ಲಿಯೇ ಬಿಂದುಕಾಂತಿಸಮೂಹವು ಕಾಣುವುದು.

ನೇತ್ರಾಧಾರಂ ಷೋಡಶಂ ತು ತದೂರ್ಧ್ವಂ ಚಾಲಯೇದ್ಬುಧಃ

ಜ್ಯೋತಿಃ ಪುಂಜಮಪಾಂಗೇ ತತ್ಪಿಶ್ಯತಿ ಕ್ಷಿಪ್ರಮೇವ ಹಿ ॥[209]

ನಿಜಗುಣ ಶಿವಯೋಗಿಯ ಶಬ್ದಗಳಲ್ಲಿ ಇದು ಹೀಗೆ ಮೂಡಿ ಬಂದಿದೆ.

ಕರಿಯ ಬಿಳಿಯ ಕೆಂಪಿನರುಣೇಂದು ಶಿಖಿಯ ಸು

ಸ್ಥಿರವಾದ ಮಂಡಲತ್ರಯದ ಮಧ್ಯದೊಳು

ನೆರೆದು ತೋರುವ ನಾನಾಪರಿಯ ಬಿಂದುವಿನ ಬಂ ।

ಧುರದ ಕಾಂತಿ ಕೋಟ್ಯಾನುಕೋಟಿಯ ನಡುವೆ

ಕಣ್ಣ ಮುಂದೆ ಕಾಣಿಸುತಿದೆ ಪರವಸ್ತುವಿದ

ನಣ್ಣಗಳರಸಿ ಬೇರೆ ಬಳಲುವರದೇಕೆ ॥ [210]

ಸರ್ಪಭೂಷಣ ಶಿವಯೋಗಿ ಇದನ್ನು ಹೆಚ್ಚು ಸ್ಪಷ್ಟಗೊಳಿಸುವುದು ಹೀಗೆ,

ಒಳಗಿರ್ಪ ಪ್ರಾಣಲಿಂಗವದು ತಾನೆ

ಪಳುಕುಗೊಡದೊಳು ದೀಪದ ತೆರದಿ

ಹೊಳೆವ ನೇತ್ರದ್ವಾರದಿಂ ಹೊರಹೊಮ್ಮಿ ।

ಬೆಳಗಿ ಗುರುಸಿದ್ಧ ತಾನೆಯಾಗಿ

[illegible]

ಕಾಣುತಿದೆ ಪರಬಿಂದು ಶಾಂಭವಿಯ
ಕೋಣೆಯೊಳು ಲಕ್ಷವಿಟ್ಟಾಕ್ಷಣದಿ ॥ [೨೧೧]

ಚಾಮರಸನ ಶಬ್ದಗಳಲ್ಲಿ ಇದು ಹೀಗೆ ರೂಪು ಪಡೆದಿದೆ.

ಸಾಧಿಸುವುದಿನ್ನಿನ್ನು ನಿಮ್ಮೊಳು
ನಾದ ಬಿಂದು ಕಳಾಪ್ರಪಂಚದ
ಹಾದಿಯನು ಹರು ಮಾಡುತಿಹುದೇಕಾಗ್ರಚಿತ್ತದಲಿ ॥ [೨೧೨]

ಆಲಿ ನಿಂದೊಡೆ ಸುಳಿದು ಸೂಸುವ
ಗಾಳಿ ನಿಲುವುದು ಗಾಳಿ ನಿಲೆ ಮನ
ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು ।
ಲೀಲೆಯಿಂದಾ ಬಿಂದು ನಿಂದೊಡೆ
ಕಾಲಕರ್ಮವ ಗೆದ್ದು ಮಾಯೆಯ
ಹೇಳಹೆಸರಿಲ್ಲೆನಿಸಬಹುದೈ ಬಸವ ಕೇಳೆಂದ ॥ [೨೧೩]

೨೬) ನಾದಗಳು

ಶಿವಯೋಗಿಗಳು ಶಬ್ದವನ್ನು ನಾದ ಎಂದು ಕರೆದಿದ್ದಾರೆ. ನಾದಗಳಲ್ಲಿ ಆಹತನಾದ, ಅನಾಹತನಾದ ಎಂದು ಎರಡು ವಿಧ. ಭೌತಪ್ರಪಂಚದಲ್ಲಿ ಕೇಳಬರುವುದು ಆಹತ ಅಥವಾ ಕೇಳಿದ ನಂತರ ಅಡಗುವ ನಾದವಾಗಿದ್ದರೆ ಶಿವಯೋಗಿಗಳು ಕೇಳುವುದು ಅನಾಹತ ಅಥವಾ ಅಡಗದಿರುವ ನಾದ. ನಿಜಗುಣ ಶಿವಯೋಗಿಯ ಅಭಿಪ್ರಾಯದಲ್ಲಿ ದಶನಾದಗಳು ಹೀಗಿವೆ,

ಶರಧಿ ನಿರ್ಜರ ಭೇರಿ ಮೇಘಾದಿ ಬಹುರವ
ಮುರಜೆ ಕಹಳೆ ಶಂಖ ಘಂಟಾದಿ ನಿನಾದ
ವರವಾಸ ವೀಣೆ ಕಿಂಕಿಣಿ ಭ್ರಮರಾದಿ ಸು ।
ಸ್ವರ ಪರಿವಿಡಿದನಾಹತದ ನಾದವನು
ಪಡೆದು ಜಪಿಸಿ ನೋಡಿ ಕೇಳಿ ನೆನೆದು ನಿಜ
ದೊಡಗೂಡಿ ಸುಖಿಸಬಲ್ಲೊಡೆ ಮುಕ್ತನಹನು ॥ [೨೧೪]

ಸರ್ಪಭೂಷಣ ಶಿವಯೋಗಿ ಇದನ್ನು ಸಾಂಕೇತಿಕವಾಗಿ ಹೇಳುವುದು ಹೀಗೆ,

ಮೂರು ನದಿಗಳ ಸಂಗಮಸ್ಥಳದೊಳಾಡುತಿಹು
ದಾರು ವರ್ಣಗಳದರ ಮೆಯ್ಯೊಳುಂಟು
ಹಾರಿ ಮೇಲಕ್ಕೆ ಹಂಸಗಳೆರಡನು ನುಂಗು-।
ತೀರೈದು ತೆರನಾದ ಧ್ವನಿಗಳನೆ ತೋರಿ
ಕೋಳಿ ಕೂಗಿತು ಮಗಳೆ ಬೆಳಗಾಯಿತೇಳಮ್ಮ
ಹೇಳಲಿದರೊಳು ಮರ್ಮ ಬಹಳವಿದೆಯಮ್ಮ ॥ [೨೧೫]

ಪ್ರಭುಲಿಂಗಲೀಲೆಯಲ್ಲಿ ನಾದಗಳನ್ನು ತಿಳಿಸಿದ ಸಂದರ್ಭಗಳು ಹೀಗಿವೆ.

ಸಾಧಿಸುವುದಿನ್ನಿನ್ನು ನಿಮ್ಮೊಳು
ನಾದ ಬಿಂದು ಕಳಾಪ್ರಪಂಚದ
ಹಾದಿಯನು ಹರು ಮಾಡುತಿಹುದೇಕಾಗ್ರ ಚಿತ್ತದಲಿ ॥ [೨೧೬]

ಲೆಪ್ಪವಿಲ್ಲದೆಯೂರ್ಧ್ವಬಿಂದುವೆ ನಿಪ್ಪ
ಪಶ್ಚಿಮ ವಾಹಿನಿಯಲಿಂ
ತೊಪ್ಪದಿಂದಲಿ ಮಿಂದು ಮೀರಿದ ಮೂಲನಾದವನು ॥ [೨೧೭]

೨೭) ಕಲೆಗಳು

ಬೆಳಕು ಮತ್ತು ಆದರಿಂದುಂಟಾಗುವ ದೃಶ್ಯಾವಳಿಗಳನ್ನು ಶಿವಯೋಗಿಗಳು ಕಲೆಗಳು ಎಂದು ಕರೆದಿದ್ದಾರೆ. ಧವಳವರ್ಣ, ಕೃಷ್ಣಧೂಮ್ರವರ್ಣ, ಅರ್ಧಚಂದ್ರ, ಮಿಂಚಿನಬಳ್ಳಿ, ಅಗ್ನಿಜ್ವಾಲೆ, ಸೂರ್ಯಬಿಂಬ, ಜ್ವಲಿಸುತ್ತಿರುವ ಬಯಲು ಇವುಗಳನ್ನು ಶಿವಯೋಗಿಯು ನೊಡುತ್ತಾನೆ.

ಶ್ವೇತಾದಿವರ್ಣಾನಥಖಂಡಚಂದ್ರ ಸೌದಾಮಿನೀ ವಹ್ನಿಶಿಖೇನ ಬಿಂಬಾನ್
ಜ್ವಲನ್ನಭೋ ವಾ ಸ್ಥಲಹೀನಮೇಕಂ ವಿಲಕ್ಷಯೇತ್ತತ್ಫಲುಧ್ಯ ಲಕ್ಷ್ಯಂ ॥[೨೧೮]

ಯೋಗಿಯು ಕ್ರಮವಾಗಿ ಭೂತಾಕಾಶವನ್ನು, ಮಹದಾಕಾಶವನ್ನು ಹಾಗೂ ತತ್ತ್ವಾಕಾಶವನ್ನು ನೋಡುತ್ತನೆ. ನಂತರದಲ್ಲಿ ಕೋಟಿಸೂರ್ಯರಿಗೆ ಸಮಾನವಾದ ಬಿಂದ್ವಾಕಾಶವನ್ನು ನೋಡುತ್ತಾನೆ.

ನಿರಾಕಾರಂ ಪಶ್ಯೇದ್ಗುಣರಹಿತಮಾಕಾರಮಥವಾ
ತಮೋರೂಪಂ ಗಾಢಸ್ಫುರದುರುತರಾಕಾಶಮಥವಾ
ಮಹಾಕಾಶಂ ಕಾಲಾನಲನಿಭಮಥಾತ್ಯಂತರುಚಿರಂ
ಪರಂ ತತ್ವಾಕಾಶಂ ರವಿಶತನಿಭಂ ಸೂರ್ಯಖಮಿತಿ ॥ [೨೧೯]

ತಾರಕಬ್ರಹ್ಮವೆನಿಸಿಕೊಳ್ಳುವ, ನಿತ್ಯ ನಿರ್ಮಲವಾಗಿರುವ ದಿವ್ಯಲಿಂಗವನ್ನು ಜ್ಞಾನಿಗಳಾದ ಯೋಗೀಶ್ವರರು ಯಾವಾಗಲೂ ಕಾಣುತ್ತಿರುವರು. ಆ ಲಿಂಗವು ಅತ್ಯಂತ ಮೇಲಿನ ಸ್ಥಾನ.

ಯದಾಪೋ ಜ್ಯೋತಿರೋಂಕಾರ ಬ್ರಹ್ಮಾಮೃತ ಶಿವಾತ್ಮಕಂ
ಪಶ್ಯಂತಿ ಸೂರಯೋಽಶ್ರಾಂತಂ ತದ್ವಿಷ್ಣೋಃ ಪರಮಂ ಪದಂ ॥ [೨೨೦]

ಪ್ರಭುಲಿಂಗಲೀಲೆಯಲ್ಲಿ ಬಹಳಷ್ಟು ಪ್ರಸಂಗಗಳಲ್ಲಿ ಕಲಾಜಗತ್ತನ್ನು ಕುರಿತ ಉಲ್ಲೇಖ ಬರುತ್ತದೆ. ಪ್ರಸ್ತುತದಲ್ಲಿ ಅತ್ಯಂತ ಸಮೀಪದ ಮೂರು ಪದ್ಯಗಳನ್ನು ಉದಾಹರಿಸಲಾಗಿದೆ.

ಆರು ಭೂತಗಳಾರು ಚಕ್ರಗ
ಳೇರಿಹವು ಪರಿವಿಡಿಯಲವರೊಳು
ಮೀರಿದಜಹರಿ ರುದ್ರನೀಶ ಶಿವಾತ್ಮ ತತ್ವಗಳು ।
ತೋರುವುವು ನೆಲೆವಿಡಿದು ಸಲೆ ಬಲು
ಹೇರಿ ಸಾಧಿಸಿಯಂತವೆಲ್ಲವ
ಸಾರಿ ದಾಂಟುವನವನೆ ಭಕ್ತನು ಬಸವ ಕೇಳೆಂದ ॥ [೨೨೧]

ನೆಟ್ಟನಾ ಗುದಲಿಂಗನಾಭಿಯ
ಮುಟ್ಟ ಗುರುನೆಲೆ ನಾಭಿ ಹೃದ್ಗಳ
ಮುಟ್ಟ ಜಂಗಮದಿಕ್ಕೆಗಳ ಭ್ರೂ ಬ್ರಹ್ಮರಂಧ್ರದೊಳು
ನಿಟ್ಟಿಸಲು ಶಿವಲಿಂಗದೋವರಿ ಯೊಟ್ಟಿಲಾಗಿಹವಿವನು ಬೆರಸುವ
ಕಟ್ಟಳೆಯ ಕಂಡವನೆ ಭಕ್ತನು ಬಸವ ಕೇಳೆಂದ ॥ [೨೨೨]

ಅಲ್ಲಿಗಲ್ಲಿಗೆ ಬೇಹ ಶಕ್ತಿಗ
ಳಲ್ಲಿಗಲ್ಲಿಗೆ ಬೇಹ ನಾಡಿಗ

ಎಲ್ಲಿಗಲ್ಲಿಗೆ ಕರ್ಮ ಭಕ್ತಿಜ್ಞಾನ ತತ್ವಗಳು ।
ಅಲ್ಲಿಗಲ್ಲಿಗೆ ಸಗುಣ ನಿರ್ಗುಣ
ವೆಲ್ಲವನು ತಾ ಕಂಡ ತೆರನಲಿ
ಪಲ್ಲವಿಸಿ ಬಸವಣ್ಣ ರಚಿಸಿದನಂಬರಾಸನವ ॥ [೨೨೩]

ಸಗುಣ ನಿರ್ಗುಣವನ್ನು ತಾನು ಕಂಡಂತೆ ಬಸವಣ್ಣ ಅಂಬರಾಸನವನ್ನು ರಚಿಸಿದನೆಂದು ಚಾಮರಸ ತಿಳಿಸುವುದನ್ನು ಲಕ್ಷಿಸಬೇಕು.

೨೮) ಕಾಯ-ಜೀವದ ಹೊಲಿಗೆ

ದೇಹ, ಉಸಿರು, ಪ್ರಾಣ, ಆತ್ಮ ಇವುಗಳ ಒಟ್ಟು ಸಂಬಂಧದಿಂದ ಬದುಕು ರೂಪುಗೊಳ್ಳುತ್ತದೆ. ಇವುಗಳಲ್ಲಿ ಉಸಿರು ಮತ್ತು ಪ್ರಾಣ ದೇಹಕ್ಕೆ ಪೂರಕವಾದರೆ ಜೀವಿ ಭವಕ್ಕೆ ಒಳಗಾಗುತ್ತಾನೆ. ಅವು ಆತ್ಮಕ್ಕೆ ಸಂಬಂಧ ಕಲ್ಪಿಸಿದರೆ ಆಧ್ಯಾತ್ಮಿಕ ಬದುಕು ರೂಪುಗೊಳ್ಳುತ್ತದೆ. ಕೆಳಗಿನ ವಚನಗಳು ಈ ಮಾತನ್ನು ಸ್ಪಷ್ಟಪಡಿಸುತ್ತವೆ.

ನೆಳಲ ಹೂಳಿಹೆನೆಂದು ಬಳಲುತ್ತಿದೆ ಜಗವೆಲ್ಲಾ.
ನೆಳಲು ಸಾಯಬಲ್ಲುದೆ ಅಂಗಪ್ರಾಣಿಗಳಿಗೆ?
ಸಮುದ್ರದಾಚೆಯ ತಡಿಯಲ್ಲಿ ಕಳ್ಳನ ಕಂಡು,
ಇಲ್ಲಿಂದ ಮುನಿದು ಬೈದಡೆ, ಅವ ಸಾಯಬಲ್ಲನೆ?
ಭಾವದಲ್ಲಿ ಹೊಲಿದ ಹೊಲಿಗೆಯ ಭೇದವನರಿಯರು,
ಕಾಮಿಸಿದಡುಂಟೆ ನಮ್ಮ ಗುಹೇಶ್ವರಲಿಂಗವು. [೨೨೪]

ದೇಹಭಾವವಳಿದಲ್ಲದೆ ಜೀವಭಾವವಳಿಯದು
ಜೀವಭಾವವಳಿದಲ್ಲದೆ ಭಕ್ತಿ ಭಾವವಳವಡದು
ಭಕ್ತಿಭಾವವಳವಟ್ಟಲ್ಲದೆ ಅರಿವು ತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು
ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು.

[illegible]

[illegible]

[illegible]

[illegible]

[illegible]

[illegible]

ಅದು ಕಾರಣ–

ಕಾಯ–ಜೀವದ ಹೊಲಿಗೆಯ ಅಳಿದ ಭೇದವ ತಿಳಿಯಬಲ್ಲಡೆ

ನಮ್ಮ ಗುಹೇಶ್ವರ ಲಿಂಗದ ಅರಿವು ಸಾಧ್ಯವಪ್ಪುದು

ಕಾಣಾ ಸಿದ್ಧರಾಮಯ್ಯ. [೨೨೫]

ಈ ವಿಚಾರವನ್ನು ಚಾಮರಸ ತಿಳಿಸುವುದು ಹೀಗೆ,

ಕಾಯ ಬಲಿದರೆ ಮಾಯೆ ಬಲಿವುದು

ಮಾಯೆ ಬಲಿದರೆ ಛಾಯೆ ಬಲಿವುದು

ಕಾಯ ಮಾಯಾ ಛಾಯೆ ಬಲಿದರೆ ಸಿದ್ಧತನವಲ್ಲ।

ಕಾಯ ಮಾಯಾ ಛಾಯದಾಗಿನ

ದಾಯವನು ಕಳೆದುಳಿದನಾದೊಡೆ

ರಾಯನಾತನು ಸಿದ್ಧರಲಿ ಗೋರಕ್ಷ ಕೇಳೆಂದ ॥ [೨೨೬]

ಬಿದ್ದು ಹೋಯಿತು ಮನದ ಮಾಯಾ

ಬದ್ಧ ಭವಿತನ ನಿಮಿಷ ಮಾತ್ರಕೆ

ಹೊದ್ದಿ ಹೊರೆಯೇರಿದುದು ಸಮ್ಯಗ್‌ಜ್ಞಾನ ಸಾರಾಯ ।

ಶುದ್ಧ ಸೂಕ್ಷ್ಮ ಸ್ಥೂಲ ಕಾಯವ

ಮೆದ್ದು ಕಾರಣ ಕಾಯದಲಿ ತಾ

ನಿದ್ದ ನಿಜದ ವಿಳಾಸದಲಿ ಗೋರಕ್ಷ ಜಗವರಿಯೆ ॥ [೨೨೭]

ಕಾಯ, ಮಾಯೆ, ಛಾಯೆ ಇವುಗಳ ದಾಯ ಅಂದರೆ ಕೊಡುಗೆಯನ್ನು ಕಳೆದು ಉಳಿಯುವವನು ಸಿದ್ಧರಲ್ಲಿಯೇ ಶ್ರೇಷ್ಠನಾಗುತ್ತಾನೆಂದು ಮೊದಲ ಪದ್ಯ ತಿಳಿಸುತ್ತದೆ. ಸಮ್ಯಕ್‌ಜ್ಞಾನಸಾರಾಯದಿಂದ ಸ್ಥೂಲ ಹಾಗೂ ಸೂಕ್ಷ್ಮ ಕಾಯಗಳನ್ನು ಮೆದ್ದು ಕಾರಣ ಕಾಯದಲ್ಲಿ ಇರುವುದು ಸಾಧ್ಯವಾಗುತ್ತದೆಂದು ಎರಡನೆಯ ಪದ್ಯ ತಿಳಿಸುತ್ತದೆ.

೨೯) ಕಾಯದ ಕದಳಿ

ಲೋಕಜೀವಿಗಳು ಬಾಹ್ಯ ಚಕ್ಷುಗಳಿಂದ ಸ್ಥೂಲಕದಳಿಯ ಬನವನ್ನು ನೋಡುತ್ತಾರೆ. ಯೋಗಸಾಧಕರು ಅಂತಃಚಕ್ಷುವಿನಿಂದ ಸೂಕ್ಷ್ಮಕದಳಿಯ ಬನವನ್ನು ಕಾಯದಲ್ಲಿಯೇ ನೋಡಲು ಸಮರ್ಥರಾಗಿರುತ್ತಾರೆ.

ಸಪ್ತನದಿಯ ಸಂಗಮ ದಾಂಟಿ
ಗುಪ್ತಕದಳಿಯ ಬನದೊಳು ಸುಳಿದ–
ಲ್ಲಿಪ್ಪ ಗುಹೆಯೊಳಗೊಬ್ಬನೆ ಹೊಕ್ಕೆನೊ ಓ ಶ್ರೀ ಗುರುಸಿದ್ಧ
ಸಪ್ತವರ್ಣದ ಲಿಂಗವ ಕಂಡೆನೊ ॥ [೨೨೮]

'ಆ ಸಾಗರದ ಆಚೆ ಕದಳಿವನ ಹತ್ತುತ್ತದೆ. ಗುರುವು ಜೀವಾತ್ಮನನ್ನು ಕದಳಿವನದಲ್ಲಿ ಬಿಟ್ಟು ಮಾಯವಾಗುತ್ತಾನೆ. ಕದಳಿ ವನದಲ್ಲಿ ಹೋಗುತ್ತಿರಲಾಗಿ ಗುಹೆಯೊಂದು ಹತ್ತುತ್ತದೆ.' [೨೨೯]

ಅಕ್ಕಮಹಾದೇವಿಯ ಪ್ರಸಂಗದಲ್ಲಿ ಇದನ್ನು ಚಾಮರಸ ಹೀಗೆ ತಿಳಿಸುತ್ತಾನೆ.

ನಡೆದು ಬಳಿಕೇಕಾಂತವಾಸದೊ
ಳಡಿದ ಕಾಯದ ಕದಳಿಯನು ಹೊ
ಕ್ಕಡರಿ ನಿಜ ಸಿರಿಗಿರಿಯ ಶಿಖರದ ಸಿದ್ಧಪೀಠದಲಿ ।
ಬಿಡದೆ ನೆಲಸಿದಳಚಲ ಪದವಿಯ
ಪಡೆದಳಾ ಮಹದೇವಿ ಸುಖದಲಿ
ಪೊಡವಿಯರಿಯಲು ಗುರು ಗುಹೇಶ್ವರಲಿಂಗ ಲೀಲೆಯಲಿ ॥ [೨೩೦]

೩೦) ಐಕ್ಯ

ಐಕ್ಯವು ವೀರಶೈವತ್ವದ ಕೊನೆಯ ಹಂತ. ಐಕ್ಯಸ್ಥಲದಲ್ಲಿ ನಿಂತ ಶರಣನು ವಿಷಯಾನಂದವನ್ನು ಕಣಸಮಾನವೆಂದೂ, ತೃಣಿಕವೆಂದೂ ಭಾವಿಸುವನು. ಈ ಸ್ಥಲದಲ್ಲಿ ನಿಂತ ಶರಣನು ಆಣವಾದಿ ಮಲತ್ರಯಗಳ ಸಂಬಂಧವನ್ನು ಕತ್ತರಿಸಿ ಹಾಕಿರುವನು.

ಪ್ರಾಣಚೇತನವಿಡಿದು ಗಮನರೂಪನು ಅಲ್ಲ ನಿಜ
ಪ್ರಾಣಿಯಾಗಿ ಜಡದೇಹಿಯಲ್ಲ
ಕಾಣಲಿಕೆ ಬಯಲೆಂಬ ಮೂರುತಿಯು ತಾನಲ್ಲ
ಹೂಣಿ ಹೊಕ್ಕೆರಡಳಿದ ಲಿಂಗೈಕ್ಯನು ॥ [೨೩೧]

ಪ್ರಭುಲಿಂಗಲೀಲೆಯಲ್ಲಿ ಇದು ನಿರೂಪಿತವಾಗಿರುವುದು ಹೀಗೆ,

ಧರೆ ಜಲಾಗ್ನಿಯನೆಯ್ದಿದರೆ ಸ
ದ್ಗುರು ಕುಮಾರಕನಗ್ನಿ ವಿಡಿದಾ
ಮರುತ ಗಗನವನೆಯ್ದಿದರೆ ಜಂಗಮದಲವಧಾನಿ ।
ವರಗಗನವಾತ್ಮಸ್ಥಲವನೆ
ಯ್ದಿರಲು ಶಿವಲಿಂಗೈಕ್ಯನಿಂತೀ
ಪರಿಯನರಿದವನೆನ್ನ ಭಕ್ತನು ಬಸವ ಕೇಳೆಂದ ॥ [೨೩೨]
ನಾನು ನೀನೆಂದೆಂಬ ಭೇದ ವಿ
ಧಾನವಲ್ಲದನದ್ವಿತೀಯವ
ಧಾನವಲ್ಲದ ಜ್ಞಾತೃ ಜ್ಞಾನ ಜ್ಞೇಯ ವಿರಚಿಸಿದ ।
ಏನುವೆನಿಸದ ಏನುವಿಲ್ಲದ
ಏನುವಲ್ಲದ ನಿರುಪಮದ ಸುಯಿ
ದಾನ ಸುಖವನೆ ಕೊಟ್ಟನಾ ಗುರು ಬಸವರಾಜಂಗೆ ॥ [೨೩೩]

೩೧) ಪಶ್ಚಿಮಚಕ್ರ

ಇದು ಶಿರಸ್ಸಿನ ಹಿಂಭಾಗದಲ್ಲಿರುವ ಚಕ್ರ. 'ಪಶ್ಚಿಮಚಕ್ರವಿಡಿದು ಪರಮನಾದಳು ಕೂಡಲಸಂಗನ ಮರುಳು ಮಗಳು ನೀಲಲೋಚನೆ' ಎಂದು ಬಸವಣ್ಣ ಹೇಳುವನು. [೨೩೪]

ಪ್ರಭುಲಿಂಗಲೀಲೆಯಲ್ಲಿ ಇದು ಹೀಗೆ ಮೂಡಿ ಬಂದಿದೆ.

ಲೆಪ್ಪವಿಲ್ಲದೆಯೂರ್ಧ್ವ ಬಿಂದುವೆ
ನಿಪ್ಪ ಪಶ್ಚಿಮವಾಹಿನಿಯಲಿಂ

ತೊಪ್ಪದಿಂದಲಿ ಮಿಂದು ಮೀರಿದ ಮೂಲನಾದವನು ॥ [೨೩೫]

೩.೨) ಸಗುಣ–ನಿರ್ಗುಣ

ಶಿವಧ್ಯಾನವು ಸಗುಣ ಹಾಗೂ ನಿರ್ಗುಣ ಎಂದು ಎರಡು ವಿಧವಾಗಿದೆ. ಮೊದಲು ಸಗುಣವನ್ನು ಅವಲಂಬಿಸುತ್ತ ಅನಂತರದಲ್ಲಿ ನಿರ್ಗುಣವನ್ನು ಅವಲಂಬಿಸಿ ಧ್ಯಾನ ಮಾಡಬೇಕು.

ಶಿವಧ್ಯಾನಂ ದ್ವಿಧಾ ಜ್ಞೇಯಂ ಸಗುಣಂ ನಿರ್ಗುಣಂ ತಥಾ
ಆದೌ ಸಗುಣಮಾಶ್ರಿತ್ಯ ಪಶ್ಚಾನ್ನಿರ್ಗುಣಮಾಶ್ರಯೇತ್ ॥ [೨೩೬]

ಚಿದಾನಂದಾವಧೂತನು ಸಗುಣ–ನಿರ್ಗುಣಗಳ ವ್ಯತ್ಯಾಸವನ್ನು ತಿಳಿಸುತ್ತ ಸಗುಣೋಪಾಸನೆಗಿಂತ ನಿರ್ಗುಣೊಪಾಸನೆಯು ಶ್ರೇಷ್ಠವೆಂದು ಹೀಗೆ ತಿಳಿಸುತ್ತಾನೆ.

ತನ್ನ ಎದುರಿನಲಿಟ್ಟ ಮೂರ್ತಿಯ
ನಿನ್ನು ಅರಿವುದು ಕೇವ್ಲ ಸಗುಣವು
ತನ್ನ ಎದುರಿನಲಿರ್ದುದನು ತಾನೆಂದು ಭಜಿಸಲಿಕೆ ।
ಇನ್ನು ಕೇವಲ ಐಕ್ಯ ನಿರ್ಗುಣ
ಚೆನ್ನಾಗಿಯಾರುಕ್ಷ ನಿಂಗಿದ
ಭಿನ್ನ ಮಾರ್ಗವು ಕೇಳು ನಂದಿಯಿದೊಂದು ಪಥವೆಂದಾ ॥ ೨೩೭

ಸಗುಣೊಪಾಸನದಲ್ಲಿ ಎರಡಿಹು
ಮಗನೆ ನಿರ್ಗುಣದಲ್ಲಿವೊಂದಿಹು
ದಗಣಿತದ ಕಷ್ಟಿಹುದು ಸಗುಣವುಪಾಸನದಿ ನಿಂತು ।
ನಿಗಮಶಿರ ಹೇಳೂದು ನಿರ್ಗುಣ
ಬಗೆಯುಪಾಧಿಯುರಹಿತ ನಿಜವೆಂ
ದೊಗೆದು ಶ್ರುತಿ ಸಾರುವದು ನಿರ್ಗುಣೋಪಾಸನಧಿಕೆಂದ ॥ [೨೩೮]

ಪ್ರಭುಲಿಂಗಲೀಲೆಯಲ್ಲಿ ಇದು ಹೀಗೆ ಮೂಡಿ ಬಂದಿದೆ.

ಅಲ್ಲಿಗಲ್ಲಿಗೆ ಬೇಹ ಶಕ್ತಿಗ

ಳಲ್ಲಿಗಲ್ಲಿಗೆ ಬೇಹ ನಾಡಿಗ
ಳಲ್ಲಿಗಲ್ಲಿಗೆ ಕರ್ಮಭಕ್ತಿಜ್ಞಾನ ತತ್ತ್ವಗಳು ।
ಅಲ್ಲಿಗಲ್ಲಿಗೆ ಸಗುಣ ನಿರ್ಗುಣ
ವೆಲ್ಲವನು ತಾ ಕಂಡ ತೆರನಲಿ
ಪಲ್ಲವಿಸಿ ಬಸವಣ್ಣ ರಚಿಸಿದನಂಬರಾಸನವ ॥ ೨೩೯

ಪ್ರಣವ ತರುವನೆ ನೆಮ್ಮಿ ಮಂತ್ರಾ
ಗ್ರಣಿಯ ಪಂಚಬ್ರಹ್ಮಸರ್ಪನ
ಫಣಿಯ ಮಣಿಯಿಂದತ್ತಲದ್ವೈತಸ್ಥಲಾದಿಗಳ ।
ಕಣಿಯನೆಲ್ಲವ ಕಳೆದು ನೆರೆ ನಿ
ರ್ಗುಣ ನಿರಾಳದ ನಿರುಪಮದ ಮೇ
ಲಣ ಮಹಾಸನದಲ್ಲಿಯಾ ಪ್ರಭುಲಿಂಗ ಮಂಡಿಸಿದ ॥ ೨೪೦

೩೩) ತೂರ್ಯ–ತೂರ್ಯಾತೀತ

ಜಾಗ್ರ, ಸ್ವಪ್ನ, ಸುಪ್ತಿ ಇವು ಲೋಕಜೀವಿಯ ಅವಸ್ಥೆಗಳಾಗಿದ್ದರೆ ಯೋಗಿಗೆ ಇವುಗಳೊಂದಿಗೆ ತೂರ್ಯ ಹಾಗೂ ತೂರ್ಯಾತೀತ ಅವಸ್ಥೆಗಳೂ ಇರುತ್ತವೆ. ಹೀಗೆ ಇವು ಯೋಗಿಯ ನಾಲ್ಕನೆಯ ಮತ್ತು ಐದನೆಯ ಅವಸ್ಥೆಗಳು.

ಯೋಗಿಗೆ ಪಂಚಾವಸ್ಥೆಗಳುಂಟು ಬೇರಂತವನರಿದಾಗಳೆ
ಕೈಗೂಡುವಳೊಲಿದಾ ಮುಕುತಿ ವನಿತೆ ॥ ಪ ॥
ಬಯಲ ಬರಿಗೊಡದಂತೊಳ ಹೊರಗಣ ಭಾವನೆಯ ಸಂ
ಶಯವಿಲ್ಲದಂಬುಧಿಯೊಳು ಮುಳುಗಿದ ಘಟದಂತೆ
ಸ್ವಯಮೆನಿಸುವ ಪರಿಪೂರ್ಣತೆ ಕರಿಗೊಂಡಚ್ಚಳಿಯದೆ ನಿ
ಶ್ಚಯವಾಗಲದೀಗಳೆ ನಿರ್ಮಲ ತುರಿಯಾವಸ್ಥೆ
ಶರಿರವಿಡಿದಾವುದರೊಡನಭಿಮಾನತೆಯಣುವಿಲ್ಲದೆ
ನಿರುಪಮ ಸಾಕ್ಷಿಕ ಶಂಭುಲಿಂಗವಾಗುಳಿದು
ದರುಶನ ಮತವಾದಿಗಳೆಲ್ಲರು ತಮತಮಗೊಂದೊಂದು

ಪರಿಯೊಳು ಪೊಗಳ್ದಿರವದು ತುರಿಯಾತೀತಾವಸ್ಥೆ ॥ ೨೪೧

ಇದನ್ನು ಚಾಮರಸ ಒಂದೇ ಒಂದು ಪದ್ಯದಲ್ಲಿ ಪ್ರಸ್ತುತಪಡಿಸುವುದು ಹೀಗೆ,

ಸುರನರೋರಗರೆಂಬ ಮರುಳರ
ಹುರುಳುಗೆಡಿಸಿದ ಮೂರವಸ್ಥೆಗೆ
ಪಿರಿದೆನಿಸುವಾ ತೂರ್ಯತೂರ್ಯಾತೀತವೆಂಬರೆಡು ।
ಸರಸತರವಹ ಬಲೆಯ ಬೀಸಿಯೆ
ಹರಹಿಕೊಂಡಿಹುದೀ ಮನಸ್ಸದ
ನುರುಹಬಲ್ಲವನವನೆ ನಿತ್ಯನು ಬಸವ ಕೇಳೆಂದ ॥ [೨೪೨]

೩೪) ಅಮೃತಪಾನ

ಲೋಕಜೀವಿಗಳ ಬದುಕಿನಲ್ಲಿ ಅಮೃತಪಾನವು ಕಾಲ್ಪನಿಕ ಅಂಶವಾಗಿದ್ದರೆ ಶಿವಯೋಗಿಗಳಲ್ಲಿ ಅದು ಸಹಜ ಕ್ರಿಯೆ.

ಮೊರೆವ ನಾದವ ಕೇಳಿ ಉರಿವ ಜೋತಿಯ ನೋಡಿ
ಸುರಿವಮೃತವನು ಸವಿದುಂಡ ಕಾರಣ
ತೊರೆದೆನೋ ಜನನ ಮರಣಗಳ. [೨೪೩]
ನೆಲೆಗೆಟ್ಟು ಶೂನ್ಯದ ಸುಖವ ಬಯಸಿ ಬಂದೆ
ಹಲವು ಬಣ್ಣದ ನೂಲ ಹುರಿ ಮಾಡಿ
ತಲೆ ಕಾವಿಲೊಳಮೃತದ ಸೇದೆಯ ಬಾವಿ
ತೊಲಗಲೀಯದು ಜಾಲಗಾರನ ॥ [೨೪೪]

ಈ ವಿಚಾರವನ್ನು ಚಾಮರಸ ಹೀಗೆ ಸಮೀಕರಿಸುತ್ತಾನೆ.

ಶುದ್ಧ ಸಾಕ್ಷಾದಮೃತದೇಹದ
ಬಿದ್ದಿನಂಗುಣಲಿಕ್ಕುದುಂಟೇ
ನಿದ್ದ ಸಾಧನೆ ಕೆಟ್ಟುದಕಟಕಟೆಂದು ನೀನೆನಲು ।
ತಿದ್ದಬೇಕೆನುತಾನೆ ಹವಣಿಸಿ

ಮೆದ್ದೆನಲ್ಲದೆ ದಿಟ ವಿಚಾರಿಸೆ
ಹೊದ್ದುವುವೆ ಹಸು ತೃಷೆಗಳೆನ್ನಲಿ ಬಸವ ಕೇಳೆಂದ ॥ [೨೪೫]

೩೫) ಮಾತಿನ ಅದ್ವೈತದಿಂದ ಮುಕ್ತಿಯಲ್ಲ

ಪಂಚೇಂದ್ರಿಯಗಳಿಗೆ ಸೀಮಿತವಾದ ಯಾವುದೇ ಮಾತಿನಿಂದ ಮುಕ್ತಿಯಿಲ್ಲ, ಮಾತು ಬಾಯಿಯಿಂದ ಹೊರಟಿರಬಹುದು ಇಲ್ಲವೆ ಅಕ್ಷರಗಳ ರೂಪದಲ್ಲಿ ಮೂಡಿರಬಹುದು. ಪಂಚೇಂದ್ರಿಯಗಳಿಗೆ ಸೀಮೆಯಾಗಿರುವ ಮನಸ್ಸನ್ನು ಲಯಿಸಿದಾಗ ಮೂಡುವ ಅನುಭಾವವು ಮಾತ್ರ ಮೋಕ್ಷವನ್ನು ತರಬಲ್ಲದು.

....ವೇದಶಾಸ್ತ್ರಾಗಮಂಗಳ ಬಲ್ಲೆನೆಂದು
ನುಡಿವಾತನನುಭಾವಿಯೆ?
ಅಲ್ಲ , ಅವು ಬ್ರಹ್ಮನೆಂಜಲು!
ಸತ್ವ ರಜ ತಮವನೊತ್ತಿ ನಿಂದಲ್ಲಿ ಸಹಜ ನೆಲೆಗೊಂಬುದು.
ಇದನಱಿಯದೆ ವಿದ್ಯಾಭ್ಯಾಸವ
ಬಲ್ಲೆನೆಂದು ನುಡಿವಾತನನುಭಾವಿಯೆ?
ಅಲ್ಲ, ಆತನು ಇದಿರ ನಂಬಿಸಿ
ಉಂಬ ಉದರಪೋಷಕನಯ್ಯಾ,
ಕೂಡಲಚನ್ನಸಂಗಮದೇವಾ! [೨೪೬]

ಇದು ಸರ್ವಜ್ಞನ ನೇರ ಶಬ್ದಗಳಲ್ಲಿ ಹೀಗೆ ರೂಪುಗೊಂಡಿದೆ.

ಮಾತಿನಾ ಬ್ರಹ್ಮವೂ ತೂತಿನಾ ಗಡಿಗೆಯೂ
ಪಾತಕರ ಸಂಗ ಇವು ಮೂರು ಲೋಕದೊಳು
ಯಾತಕ್ಕೂ ಬಾರವು ಸರ್ವಜ್ಞ. [೨೪೭]

ಈ ಎಲ್ಲವನ್ನೂ ಹೀಗೆ ಕವಿ ಸಮೀಕರಿಸುತ್ತಾನೆ.

ತನ್ನನಱಿಯದ ಮಂದಮತಿಗಳಿ
ಗಿನ್ನು ಪೆಱರಂತಸ್ಥವೆಂಬುದು

ಕಣ್ಣು ಕಾಣದ ಕುರುಡ ಕನ್ನಡಿವಿಡಿದ ತೆಱನಂತೆ ।
ನನ್ನ ನಿಜದ ನಿಧಾನವನು ಬಳಿ
ಕಿನ್ನು ಕಾಬವರಾರು ಮಾತಿನ
ಬಿನ್ನಣಿಗರಿಗೆ ಸಾಧ್ಯವೇ ಗೋರಕ್ಷ ಕೇಳೆಂದ ॥ [೨೪೮]

ಮಾತಿನದ್ವೈತದಲಿ ಮಾರಿಯ
ಘಾತಿ ಮಾಣದು ಮನದ ಸಂಕ
ಲ್ಪಾತಿಶಯದಲಿ ನಾಮ ರೂಪು ಕ್ರಿಯೆ ನಿವಾರಿಸಲು ।
ಪ್ರೀತಿ ನೀತಿಯ ನುಂಗಿದುಪಮಾ
ತೀತನಾದಂಗಲ್ಲದಾಗದು
ಕೌತುಕವ ನಾನೇನ ಹೇಳುವೆ ಬಸವ ಕೇಳೆಂದ ॥ [೨೪೯]

೩೭) ಶರಣನ ನಿಲವು

ಮನೋಲಯವಾದ ಅವಸ್ಥೆಯನ್ನು ವರಜಾಗ್ರ ಎಂದು ಕರೆಯಲಾಗಿದೆ. ಪಂಚೇಂದ್ರಿಯಗಳಿಗೆ ಸೀಮಿತವಾಗುವ ಲೋಕಜೀವಿಯ ಜಾಗ್ರದ ಚಟುವಟಿಕೆಗಳು ಮನಸ್ಸಿನ ಅಧೀನದಲ್ಲಿರುತ್ತವೆ. ಇದಕ್ಕೆ ಪ್ರತಿಯಾಗಿ ಶಿವಯೋಗಿಯ ಚಟುವಟಿಕೆಗಳು ಆತ್ಮಕ್ಕೆ ಅಧೀನವಾಗಿರುತ್ತವೆ. ಆದುದರಿಂದ ಶರಣನು ಲೋಕರೂಢಿಯನ್ನು ಮೆಚ್ಚುವುದಿಲ್ಲ ಹಾಗೂ ಬಹಿರಂಗವನ್ನು ಮರೆತು ಅಂತರಂಗದ ನಿರಾಳದಲ್ಲಿ ನಿಲ್ಲುವ ಅವನ ಚಟುವಟಿಕೆಗಳು ಸಾಮಾನ್ಯರಿಗೆ ಲೋಕವಿರೋಧಿಯಾಗಿ ತೋರುತ್ತವೆ. ಒಂದು ವಚನ ಹೀಗಿದೆ.

ಬಯಲು ರೂಪಮಾಡಬಲ್ಲಾತನೆ ಶರಣನು,
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ.
ಬಯಲ ರೂಪ ಮಾಡಲರಿಯದಿದ್ದರೆ ಎಂತು ಶರಣನೆಂಬೆ?
ಆ ರೂಪ ಬಯಲ ಮಾಡಲರಿಯದಿದ್ದರೆ ಎಂತು ಲಿಂಗಾನುಭವಿಯೆಂಬೆ?
ಈ ಉಭಯವೊಂದಾದರೆ ನಿಮ್ಮಲ್ಲಿ ತೆರಹುಂಟೆ,
ಕೂಡಲಸಂಗಮದೇವಾ? [೨೫೦]

ಪ್ರಭುಲಿಂಗಲೀಲೆಯಲ್ಲಿ ಇದು ಕೆಳಗಿನಂತೆ ವ್ಯಕ್ತವಾಗಿದೆ.

ಕೇಳಿದೌ ಶಿಶುಗಳಿಗೆ ತಾಯ್ಮೊಲೆ
ಹಾಲ ಜೀವನವಾದೊಡೆಯು ನೆರೆ
ಪಾಲನೆರೆವುತ ಮೆಲ್ಲಮೆಲ್ಲನೆಯಶನವನು ಸವಿಸಿ ।
ಬಾಲಕರ ಪಟು ಮಾಡಬಲ್ಲ ಸ
ಕೀಲಕರವೊಲು ಹೊರಗೆ ಮರೆದು ನಿ
ರಾಳದಲಿ ನಿಲಲರಿವುದೌ ಮುಕ್ತಾಯಿ ಕೇಳೆಂದ ॥ [೨೫೧]
ಆನುಶ್ರವಣ ಮನನದ ನಿಧಿಧ್ಯಾ
ಸನದಲೊಚ್ಚತನಾಗಿ ತನ್ನಯ
ತನುಮನೋವಾಕ್ಕಾಯ ಕರ್ಮಗಳೊಂದು ಹುರಿಯಾಗಿ ।
ನೆನಹು ನೆಲೆಗೊಂಡಾ ಮಹಾತ್ಮಗೆ
ಘನವದಾವುದು ಗಮಿಸಿದರೆಯಾ
ತನೆ ಕಣಾ ಸ್ವಾತಂತ್ರಭಕ್ತನು ಬಸವ ಕೇಳೆಂದ ॥ [೨೫೨]

ಲೋಕಜೀವಿಯಲ್ಲಿ ಕರ್ಮದ ಬಗೆಗಿನ ಅರಿವೇ ಇಲ್ಲದಿರುತ್ತದೆ. ಆದರೆ ಅಂತರಂಗ-ಬಹಿರಂಗಗಳನ್ನು ಒಂದು ಮಾಡುವ ಶರಣನಲ್ಲಿ ತನು, ಮನ, ವಾಕ್, ಕಾಯ ಮತ್ತು ಕರ್ಮ ಇವೆಲ್ಲವೂ ಒಂದು ಹುರಿಯಾಗಿ ನೆನಹು ಘನದಲ್ಲಿ ನೆಲೆಗೊಂಡಿರುತ್ತದೆಂದು ತಿಳಿಸುತ್ತವೆ ಈ ಪದ್ಯಗಳು.

೩.೭) ಮರಣವನ್ನು ಗೆಲ್ಲುವುದು

ಭವಕ್ಕೆ ಒಳಗಾಗುವುದೆಂದರೆ ಮರಣಾಧೀನನಾಗಿರುವುದು ಹಾಗೂ ಭವವನ್ನು ಗೆಲ್ಲುವುದೆಂದರೆ ಮರಣವನ್ನು ಗೆಲ್ಲುವುದು. ನುಡಿದಂತೆ ನಡೆದು ಪ್ರಸ್ತುತ ಜನ್ಮವನ್ನೇ ಕಡೆಯ ಜನ್ಮವನ್ನಾಗಿ ಮಾಡಿಕೊಳ್ಳುವುದು ಶಿವಯೋಗಾಚರಣೆಯ ಗುರಿ. ಶರಣರು ಇದನ್ನು ಸಾಧಿಸುವುದರಿಂದ ಅವರು ಮೃತ್ಯುಂಜಯನಲ್ಲಿ ಒಂದಾಗುತ್ತಾರೆ.

ಗೀತವ ಬಲ್ಲಾತ ಜಾಣನಲ್ಲ,
ಮಾತ ಬಲ್ಲಾತ ಜಾಣನಲ್ಲ :

ಜಾಣನು, ಜಾಣನು, ಆತ ಜಾಣನು :

ಲಿಂಗವ ನೆರೆ ನಂಬಿದಾತ,

ಜಾಣನು ಜಂಗಮಕ್ಕೆ ಸವೆಸುವಾತ.

ಆತ ಜಾಣನು: ಜವನ ಬಾಯಲು ಬಾಲವ ಕೊಯ್ದು ಹೋದಾತ,

ಆತ ಜಾಣನು: ನಮ್ಮ ಕೂಡಲಸಂಗನ ಶರಣನು! [೨೫೩]

ಗಿಳಿಯೋದಿ ಫಲವೇನು?

ಬೆಕ್ಕು ಬಹುದ ಹೇಳಲರಿಯದು!

ಜಗವೆಲ್ಲ ಕಾಂಬ ಕಣ್ಣು :

ತನ್ನ ಕೊಂಬ ಕೊಯಿಲೆಯ ಕಾಣಲರಿಯದು!

ಇದಿರ ಗುಣವ ಬಲ್ಲೆವೆಂಬರು:

ತಮ್ಮ ಗುಣವನರಿಯರು, ಕೂಡಲಸಂಗಮದೇವಾ. [೨೫೪]

ಈಗ ಪ್ರಭುಲಿಂಗಲೀಲೆಯ ಪದ್ಯಗಳನ್ನು ಪರಿಶೀಲಿಸೋಣ.

ಕರಣಗಳು ಕೈಗೂಡಿದಾಗಳೆ

ಮರಣವನು ಗೆಲಕಲಿತು ಸಂತತ

ಶರಣಪದದಲಿ ನಿಂದು ಪರಮಾನಂದ ಸುಖದಿಂದೆ ।

ಪರಿಣಮಿಸಿ ನಿರ್ಲೇಪನಾಗಿರು

ತಿರಲು ಬಲ್ಲೊಡೆ ಬಳಿಕ ನೀನೇ

ಪರಮನಪ್ಪುದು ತಪ್ಪದೈ ರಾಮಯ್ಯ ಕೇಳೆಂದ ॥ [೨೫೫]

ಹಾಲು ಹಯನುಳ್ಳಲ್ಲಿ ಹಬ್ಬವ

ಹೇಳದೆಯು ಕೇಳದೆಯು ಮಾಳ್ಪುದು

ಗಾಳಿ ಬೀಸುವ ದಿನದಲೇ ತೂರುವುದು ಹೊಟ್ಟುಗಳ ।

ಕಾಲು ಕೈ ಕಣ್ಣುಗಳು ತನುವಿಹ

ಕಾಲದಲಿ ಕಾಲನ ನಿವಾರಿಸಿ

ಮೇಲುಗತಿಯರಸುವನೆ ಜಾಣನು ಬಸವ ಕೇಳೆಂದ ॥ [೨೫೬]

ಶರೀರದಲ್ಲಿ ಕಸುವಿದ್ದಾಗಲೇ ಪ್ರಾಣಾಯಮದಲ್ಲಿ ತೊಡಗಿ ಕರಣಗಳನ್ನು ವಶಪಡಿಸಿಕೊಳ್ಳುವ ಶರಣರು ಮರಣವನ್ನು ಗೆಲ್ಲುತ್ತಾರೆ. ಸದಾಕಾಲವೂ ಶರಣಪದದಲ್ಲಿ ನಿಂತು ಪರಮಾನಂದ ಸುಖಿಗಳಾಗಿ ಪರಶಿವನಲ್ಲಿ ಒಂದಾಗುತ್ತಾರೆಂದು ತಿಳಿಸುತ್ತವೆ ಈ ಪದ್ಯಗಳು. ಪಂಚಭೂತಗಳಿಂದ ರೂಪುಗೊಂಡ, ಪಂಚಭೂತಗಳಿಗೇ ವಾಪಸಾಗುವ ಶರೀರಕ್ಕೆ ಮಾತ್ರ ಪ್ರಾಮುಖ್ಯತೆ ಕೊಟ್ಟು ಲಿಂಗಾನುಸಂಧಾನದಲ್ಲಿ ತೊಡಗದ ಗೋರಕ್ಷನಂಥವರ ಗತಿಯನ್ನು ಕೆಳಗಿನ ಪದ್ಯ ತಿಳಿಸುತ್ತದೆ.

ಎಲೆ ಮರುಳೆ ಮೃದುವಾದ ಮಾಯೆಯ
ಬಲೆಯ ಬಲ್ಲಿತ ಮಾಡಿ ಸಾವನು
ಗೆಲಿದೆನೆಂದು ನಿರರ್ಥದಲಿ ಹಾರೈಸದಿರು ಬರಿದೆ ।
ತಿಳಿವೊಡೀತನು ತಾನೆ ಕಾಲನ
ನಿಳಿಯ ನೀನಿದ ನಂಬಿ ನುಡಿದರೆ
ಪ್ರಳಯ ನಿನ್ನನು ಬಿಡುವುದೇ ಗೋರಕ್ಷ ಕೇಳೆಂದ ॥ [೨೫೭]

೩೭) ಸ್ನಾನ, ಗಂಧ, ಅಕ್ಷತೆ, ಕುಸುಮ, ಧೂಪ, ದೀಪ, ನೈವೇದ್ಯ, ತಾಂಬೂಲ, ನಮಸ್ಕಾರ ಇತ್ಯಾದಿ.

ಧರ್ಮವು ಅಂತರಂಗಾಚರಣೆ, ಬಹಿರಂಗಾಚರಣೆ ಎಂದು ಎರಡು ಮುಖಗಳನ್ನು ಹೊದಿರುತ್ತದೆ. ಪರಿಪೂರ್ಣತೆಯೆಡೆಗೆ ಕ್ರಮಿಸುವ ಈ ಕ್ರಿಯೆಯು ಅಂತರಂಗದಲ್ಲಿ ಮಾತ್ರ ನಡೆದು ಬಹಿರಂಗದಲ್ಲಿಯ ಆಚರಣೆಗಳು ಅಂತರಂಗಾಚರಣೆಯ ಸಾಂಕೇತಿಕ ಕ್ರಿಯೆಗಳಾಗುತ್ತವೆ. ಇಲ್ಲಿ ಸೂಚಿಸಲ್ಪಟ್ಟ ಆಚರಣೆಗಳೆಲ್ಲವೂ ಅಂತರಂಗಾಚರಣೆಯ ವಿವಿಧ ಕ್ರಿಯೆಗಳ ಸಂಕೇತಗಳು ಎಂಬುದನ್ನು ಕಾಣಬಹುದು.

ಶಾಂತಿಯೇ ಸ್ನಾನ, ನಿರ್ಮಲವಾದ ವಿಶ್ವವ್ಯಾಪಕವೇ ದುಕೂಲ, ಸಮ್ಯಕ್‌ಜ್ಞಾನವೇ ಗಂಧ, ಭೂತದಯೆಯೇ ಅಕ್ಷತೆ ಹಾಗೂ ವ್ಯಕ್ತವಾದ ಭಕ್ತಿಯೇ ಕುಸುಮ.

ಶಮಾಂಬುಪರಿಷೇಚನಂ ಸಕಲಪೂರ್ಣಭಾವಾಂಬರಂ
ತ್ರಿಶಕ್ತಿಗುಣಸಂಯುತಂ ವಿಹಿತಯಜ್ಞ ಸೂತ್ರಂ ತಥಾ
ಸ್ವಸಂವಿದನುಲೇಪನಂ ಸಮಧಿಕಾನುಕಂಪಾಕ್ಷತಾನ್
ಶಿವಾಯ ವಿನಿಯೇದಯೇತ್ಪ್ರಕಟಭಕ್ತಿ ಪುಷ್ಪಾಣಿ ಚ ॥ [೨೫೮]

[illegible]

[illegible]

[illegible]

[illegible]

ಕರಣೇಂದ್ರಿಯಗಳ ಅರ್ಪಣೆಯೇ ಧೂಪ, ಸತ್ವ–ರಜ–ತಮಗಳ ಅರ್ಪಣೆಯೇ ದೀಪ, ಆತ್ಮಸ್ವರೂಪವನ್ನು ಅರ್ಪಿಸುವುದೇ ನೈವೇದ್ಯ.

ಧೂಪಮಾಂತರಚತುಷ್ಟಯೇನ
ತದ್ದೀಪಮಿಂದ್ರಿಯಗುಣೋತ್ಕರೇಣ ತು
ಕಲ್ಪಯೇಚ್ಚ ಸುಖದುಃಖವರ್ಜಿತಂ
ಜೀವರೂಪಮುಪಹಾರಮಾಂತರೇ ॥ [೨೫೯]

ಗುಣತ್ರಯವೇ ತಾಂಬೂಲ, ಪ್ರಾಣವನ್ನು ಸೋಹಂಭಾವದಿಂದ ಲಯಿಸುವುದೇ ನಮಸ್ಕಾರ, ಅಂತರಂಗಗಳೇ ಪೂಜಾದ್ರವ್ಯಗಳು.

ರಜಸ್ತಮಸ್ಸತ್ವಗುಣತ್ರಯಾಖ್ಯ ತಾಂಬೂಲಕಂ ಪ್ರಾಣನಮಸ್ಕೃತಿಂ ಚ
ಇತ್ಯೇವಮಾಭ್ಯಂತರಮುಖ್ಯಪೂಜಾದ್ರವ್ಯಾಣಿ ಸಂಪಾದಯ ಶಂಕರಾಯ ॥ [೨೬೦]

ಪ್ರಭುಲಿಂಗಲೀಲೆಯಲ್ಲಿ ಚಾಮರಸ ತಿಳಿಸಿದ ಬಹಳಷ್ಟು ಅಂಶಗಳಲ್ಲಿ ಮೇಲಿನ ಸಂಕೇತಗಳ ಸಮಾನತೆ ಇದೆ. ಒಂದೆರಡು ಕಡೆಗಳಲ್ಲಿ ಸಂಕೇತ ಬೇರೆಯಾಗಿದ್ದರೂ ಆಶಯ ಮಾತ್ರ ಅದೇ ಆಗಿದೆ.

ಕೆಯ್ಯೊಳಗೆ ಶಿವಲಿಂಗವಿರ್ಪೊಡೆ
ಮೆಯ್ಯಸೋಂಕಿರಬೇಕು ವಸ್ತ್ರದ
ಹುಯ್ಯಲಿಗೆ ಹೂ ಪತ್ರಿಗಳ ಜಂಜಡಕೆ ಜೊಂಪಿಸದೆ ।
ಒಯ್ಯನೀಕ್ಷಿಸಿ ತನ್ನಲಿಹ ಮೂ
ಮೆಯ್ಯ ವಸ್ತ್ರವ ಮಾಡುವನೆ ಜಗ
ದಯ್ಯನೆನಿಸುವ ಭಕ್ತನಹನ್ಯೆ ಬಸವ ಕೇಳೆಂದ ॥ [೨೬೧]

'ಸ್ಥೂಲ, ಸೂಕ್ಷ್ಮ, ಕಾರಣತನುಗಳನ್ನು ಲಿಂಗಕ್ಕೆ ವಸ್ತ್ರ ಮಾಡುವವನು ಗುರು ಎನಿಸುತ್ತಾನೆ' ಎಂದು ತಿಳಿಸುತ್ತದೆ ಈ ಪದ್ಯ.

ಕರಣದಲಿ ಸಲೆ ಸಕಲ ಸಚರಾ
ಚರಚಯಂಗಳ ಮೇಲೆ ಕರಗುವ
ಕರುಣೆಯಾಗಿಯೆ ಬಳಿಕ ಲಿಂಗಕೆ ಮಜ್ಜನಕ್ಕೆರೆದು ।

ಪರಮ ಶಾಂತಿಯ ಚಿತ್ತ ತನಗಾ
ವರಿಸಿದೊಡೆ ಲಿಂಗಕ್ಕೆ ಗಂಧವ
ನೊರೆಯಬಲ್ಲೊಡೆ ಭಕ್ತನಹನ್ಯೆ ಬಸವ ಕೇಳೆಂದ ॥ ೨೬೨

ಪರಮ ಶಾಂತಿಯ ಚಿತ್ತವೇ ಲಿಂಗದ ಮಜ್ಜನವೆಂಬುದು ಇಲ್ಲಿಯ ಅಭಿಪ್ರಾಯ.

ಕರ್ಮಗಳ ಕಡೆಗಣಿಸಿ ಯುಕ್ತಿಯ
ವರ್ಮವನು ತಾನರಿದು ಸಲೆ ಶಿವ
ಧರ್ಮದಲಿ ನೆರೆ ನಿಲುವೊಡಕ್ಷತೆಯಿಂದಲರ್ಚಿಪುದು ।
ಕೂರ್ಮೆಯಿಂದಲಿ ತನ್ನ ಬಗೆಯನು
ನಿರ್ಮಲತೆಯೆನಿಸುವೊಡೆ ಪುಷ್ಪದ
ವರ್ಮಪೂಜೆಯ ಮಾಡಕಲಿವುದು ಬಸವ ಕೇಳೆಂದ ॥ ೨೬೩

ಮನೋಲಯ ಸಾಧಿಸುವುದರೊಂದಿಗೆ ಲಿಂಗಾನುಸಂಧಾನದಲ್ಲಿ ಮನಸ್ಸೆಂಬ ಪುಷ್ಪವನ್ನು ಅರ್ಪಿಸಬೇಕು ಎಂಬುದು ಇಲ್ಲಿಯ ತಾತ್ಪರ್ಯ.

ಒಡಲ ದುರ್ಗುಣಗಣವನೆಲ್ಲವ
ಸುಡುವೊಡೀವುದು ಧೂಪಧೂಮವ
ನಿಡಿದ ತನುವಿನ ತಮವನಳಿಯಲು ಬಲ್ಲೊಡರ್ತಿಯಲಿ ।
ಬಿಡದೆ ಬಗೆ ಬಂದನಿತು ದೀಪದ
ಗಡಣಗಳನೆತ್ತುವುದು ಭಕ್ತಿಯ
ಬೆಡಗನರಿವಂಗಿನಿತು ಬೇಹುದು ಬಸವ ಕೇಳೆಂದ ॥ ೨೬೪

ದೇಹಭಾವದ ಗುಣಗಳನ್ನು ಸುಡುವುದೇ ಧೂಪದ ಅರ್ಪಣೆ, ಅದೇ ಭಕ್ತಿ ಎಂಬ ಇಂಗಿತವನ್ನು ಈ ಪದ್ಯ ಒದಗಿಸುತ್ತದೆ.

ರುಚಿಪದಾರ್ಥವ ಲಿಂಗನೆನಹಿನ
ರಚನೆಯಲಿ ರಂಜಿಸಿದ ಬೋನವ
ಶುಚಿತನದಲಾಗೆನಿಸಿ ನೈವೇದ್ಯವನು ಮುಟ್ಟಿಸುತ ।

ಪ್ರಚುರವೆನಿಪಾನಂದಸಹವಾ
ದುಚಿತದಗ್ಗವಣಿಗಳ ನೀಂಟಿಸ
ಲಚಲ ಭಕ್ತಿಯನರಿವನಾತನು ಬಸವ ಕೇಳೆಂದ ॥ ೨೭೬

ಲಿಂಗದ ನೆನಹಿನಲ್ಲಿ ಕರಣಾದಿಗಳನ್ನು ತೊಡಗಿಸುವುದೇ ನೈವೇದ್ಯ, ಬ್ರಹ್ಮಾನಂದವೇ ತೀರ್ಥ ಎನ್ನುವುದು ಇಲ್ಲಿಯ ಒಳಾರ್ಥ.

ಬಿಟ್ಟು ಸತ್ವರಜಸ್ತಮೋಗುಣ
ದೊಟ್ಟಿಲನು ಬಳಿಕಲ್ಲಿ ಲಿಂಗಕೆ
ಮುಟ್ಟಿಸುಗೆ ತಾಂಬೂಲವನು ವಿತ್ತಾನುಸಾರದಲಿ ।
ನೆಟ್ಟನೀಪರಿಲಿಂಗ ನೆನಹೇ
ಗಟ್ಟಿಯಾದರೆ ಪ್ರಾಣಲಿಂಗದ
ಬಟ್ಟೆಯನು ಭೇದಿಸುವನಾತನು ಬಸವ ಕೇಳೆಂದ ॥ ೨೭೭

ತ್ರಿಗುಣಗಳನ್ನು ದೂರೀಕರಿಸಿ ಪ್ರಾಣಾಯಾಮದಲ್ಲಿ ಮನಸ್ಸನ್ನು ಲಯಗೊಳಿಸುವುದೆಂದರೆ ದಕ್ಷಿಣೆ ಹಾಗೂ ತಾಂಬೂಲಗಳನ್ನು ಅರ್ಪಿಸಿದಂತೆ ಎಂಬ ಅಂಶ ಇಲ್ಲಿ ಅಡಕವಾಗಿದೆ.

೯. ಶಿವಯೋಗ ನಿರೂಪಣೆಯ ಉದ್ದೇಶ

ಇಲ್ಲಿಯ ವರೆಗೆ ಯೋಗವೆಂದರೇನೆಂಬುದನ್ನು ಪರಿಶೀಲಿಸುತ್ತ ಶಿವಯೋಗ ಮತ್ತು ಅದರ ಮೆಟ್ಟಲುಗಳನ್ನು ನೋಡಿದೆವು. ಶಿವಯೋಗವನ್ನು ಪ್ರಮಾಣೀಕರಿಸುವ ಕೃತಿಗಳಲ್ಲಿರುವ ಅಂಶಗಳೊಂದಿಗೆ ಪ್ರಭುಲಿಂಗಲೀಲೆಯಲ್ಲಿ ಕಾಣಬರುವ ಅಂಶಗಳನ್ನು ಸಮಾನಾಂತರವಾಗಿಟ್ಟು ಪರಿಶೀಲಿಸಲಾಯಿತು. ಈಗ ಕಾವ್ಯವು ಶಿವಯೋಗನಿರೂಪಣೆಯ ಸಾಕ್ಷಿಗ್ರಂಥವಾಗಿರುವ ವಿಷಯವನ್ನು ಪರಿಶೀಲಿಸಬೇಕು. ಅದಕ್ಕಾಗಿ ವೀರಶೈವಾಚರಣೆಯು ಚಾಮರಸನ ಕಾವ್ಯದಲ್ಲಿ ಯಾವ ಯಾವ ಪ್ರಸಂಗದಲ್ಲಿ ಯಾವ ಯಾವ ರೂಪದಲ್ಲಿ ಮೂಡಿ ಬಂದಿದೆಯೆಂಬುದನ್ನು ನೋಡಬೇಕು. ಅದಕ್ಕಿಂತ ಮೊದಲು ಮಂಗಲಾಚರಣದ ಗತಿಯ ಪದ್ಯಗಳನ್ನು ಗಮನಿಸಬೇಕು.

ವೀರಶೈವದ ಪ್ರತಿಮೂರ್ತಿಗಳಾಗಿರುವ ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ, ಮರುಳುಶಂಕರದೇವ, ಕಿನ್ನರಿಯ ಬೊಮ್ಮಯ್ಯ, ಏಲೇಶ್ವರದ ಕೇತಯ್ಯ, ಗಾಣದ ಕನ್ನಪಯ್ಯ ಹಾಗೂ ಇನ್ನಿತರ ಶರಣ–ಶರಣೆಯರಿಗೆ ಶರಣಾರ್ಥಿಗಳನ್ನು ಸಲ್ಲಿಸುವ ಚಾಮರಸನು ಅವರೆಲ್ಲ ಮರಣವನ್ನು ಗೆದ್ದವರೆಂದೂ, ಹರನಲ್ಲಿ ಒಂದಾಗಿರುವವರೆಂದೂ ತಿಳಿಸುತ್ತಾನೆ. ಆ ನಂತರದ ಪದ್ಯದಲ್ಲಿ, 'ಅಲ್ಲಮಪ್ರಭು ಸಂಪ್ರದಾಯದ ಸಲ್ಲಲಿತ ಸನ್ಮಾರ್ಗವನು ನಾನೆಲ್ಲರರಿವಂದದಲಿ ಪೇಳುವೆನು' ಎಂದು ಸ್ಪಷ್ಟಪಡಿಸುತ್ತಾನೆ. ಇದರೊಂದಿಗೆ ಚಾಮರಸನು ಇಟ್ಟುಕೊಂಡಿರುವ ಉದ್ದೇಶ ಹೀಗೆ ಸ್ಪಷ್ಟವಾಗಿದೆ.

ಕಾಳಗದ ಕಥೆಯಲ್ಲ ವಿಷಯಗ
ಳೇಳಿಗೆಯ ವಿಧಿಯಲ್ಲ ಹೊಟ್ಟೆಯ
ಹೂಳಲಿಕೆ ಹಿಂಸೆಯನು ಮಾಡುವ ಹೊಲಬು ತಾನಲ್ಲ ।
ಕಾಳಗವು ಕರಣದಲಿ ಸುರತದ
ಕೀಲು ಕುಂಡಲಿಯಲ್ಲಿ ತೃಪ್ತಿಯ
ದಾಳಿ ಗಗನದೊಳೆಂದು ಪೇಳುವುದೀ ಸುಬೋಧೆಯಲಿ ॥ [೨೭]

ಲೌಕಿಕ ಅಂಶಗಳ ನಿರೂಪಣೆಯನ್ನು ಮಾಡುವುದು 'ಪ್ರಭುಲಿಂಗಲೀಲೆ'ಯ ಕ್ಷೇತ್ರವೇ ಅಲ್ಲ. ಎರಡು ಯುದ್ಧಗಳ ನಡುವಿನ ಬಿಡುವು ಹಾಗೂ ಎರಡು ಬಿಡುವುಗಳ ನಡುವಿನ ಯುದ್ಧ ಇವೇ ಪ್ರಮುಖವಾಗಿ ಇತಿಹಾಸದ ಪುಟಗಳನ್ನು ಆವರಿಸಿಕೊಂಡಿರುತ್ತವೆ. ಇಂಥ ಚರಿತ್ರೆಯನ್ನು ವಸ್ತುವಾಗುಳ್ಳ ಸಾಹಿತ್ಯ ಕೃತಿಗಳು ಹೇರಳವಾಗಿವೆ. ಅಷ್ಟೇ ಏಕೆ, ನಮ್ಮ ದೇಶದ ಸಾಂಸ್ಕೃತಿಕ ಸ್ವರೂಪವನ್ನು ಪ್ರತಿಬಿಂಬಿಸುವ ಎರಡು ಮಹಾಕಾವ್ಯಗಳಾದ ರಾಮಾಯಣ ಹಾಗೂ ಮಹಾಭಾರತ ಇವು ಬದುಕಿನ ಆದರ್ಶಗಳನ್ನು ಸಂಕೇತಿಸುತ್ತವಾದರೂ ಅವುಗಳಲ್ಲಿ ಬಲಿಯಾದ ಜೀವಗಳಿಗೆ ಲೆಕ್ಕವಿಲ್ಲ. ಮಹಾಭಾರತ ಯುದ್ಧದಲ್ಲಿ ಲಕ್ಷಾಂತರ ಜನ ಸಾಯುತ್ತಾರೆ. ವೈಶಿಷ್ಟ್ಯವೆಂದರೆ ಕಾಳಗಕ್ಕೆ ಸಂಬಂಧಿಸಿದ ಮಹಾಭಾರತವೇ ಭಾಗಶಃ ವಸ್ತುವಾಗಿರುವ ಕಾವ್ಯಗಳು ಶ್ರೇಷ್ಠ ಕೃತಿಗಳೆಂದು ಪರಿಗಣಿಸಲ್ಪಡುತ್ತ ಬಂದಿವೆ. ಆದರೆ ಚಾಮರಸನು ಇಟ್ಟುಕೊಂಡಿರುವ ಉದ್ದೇಶಗಳ ಹಿನ್ನೆಲೆಯಲ್ಲಿ ಇಂಥ ಜೀವಹಾನಿಯು ಪ್ರಭುಲಿಂಗಲೀಲೆಯ ವಸ್ತುವಾಗುವುದು ಸಾಧ್ಯವಿಲ್ಲ. ಇನ್ನು ಪಂಚೇಂದ್ರಿಯಗಳನ್ನು ತೃಪ್ತಿಪಡಿಸುವ ಪ್ರಯತ್ನದಲ್ಲಿ ಮೂಡಿ

ಬಂದಿರುವ ಸಾಹಿತ್ಯ ಕೃತಿಗಳೂ ಶ್ರೇಷ್ಠ ಕೃತಿಗಳೆಂದು ಪರಿಗಣಿಸಲ್ಪಟ್ಟಿವೆ. ಅಧೋಮುಖ ಬದುಕಿಗೆ ಶರಣಾಗಿ ಜನನ-ಮರಣಗಳಿಗೆ ಒಳಗಾಗುವವರನ್ನು ಕುರಿತಾಗಿರುವ ಸಾಹಿತ್ಯ ಕೃತಿಗಳು ತಾತ್ಕಾಲಿಕ ಸಂತೋಷವನ್ನುಂಟು ಮಾಡುವಂಥವುಗಳೆಂದೂ ಅಮೃತತತ್ವವನ್ನು ನಿರೂಪಿಸುವುದು ಮಾತ್ರ ತನ್ನ ಉದ್ದೇಶವೆಂದೂ ಈ ಪದ್ಯದಲ್ಲಿ ತಿಳಿಸುವ ಚಾಮರಸನು ತನ್ನ ಕೃತಿಯಲ್ಲಿ ನಡೆಯುವ ಕಾಳಗವು ಊರ್ಧ್ವಗಾಮಿಯಾಗಿರುವ ಕೀಲು ಕುಂಡಲಿಯಲ್ಲಿರುವುದೆಂದು ಸ್ಪಷ್ಟಪಡಿಸುತ್ತಾನೆ. ಲೌಕಿಕ ಪ್ರತಿಪಾದನೆ ಎಂದು ತೋರುವಂಥದೂ ಪಾರಮಾರ್ಥಕ್ಕೆ ಸಾಧನವಾಗಿರಬೇಕು. ಇಲ್ಲಿ ನಡೆಯುವ ಕಾಳಗ ಹಾಗೂ ವಿಷಯಗಳ ಏಳಿಗೆ ಅಸತ್ಯದ ಮೇಲಿನ ಸತ್ಯದ, ಕತ್ತಲೆಯ ಮೇಲಿನ ಬೆಳಕಿನ ಹಾಗೂ ಮೃತ್ಯುವಿನ ಮೇಲಿನ ಅಮೃತತತ್ವದ ವಿಜಯವಾಗಿದೆಯೆಂದು ಸೂಚ್ಯವಾಗಿ ತಿಳಿಸುತ್ತ ವಿಶ್ವವ್ಯಾಪಿಯಾಗಿರುವ ಆಕಾಶ ತತ್ವವು ಕಾವ್ಯತೃಪ್ತಿಗೆ ಸಾಧನವೆಂದು ತಿಳಿಸುತ್ತಾನೆ. ವೀರಶೈವತ್ವವನ್ನು ಹಿನ್ನೆಲೆಯಾಗಿಟ್ಟುಕೊಂಡು ಪ್ರಭುಲಿಂಗಲೀಲೆಯನ್ನು ಪರಿಶೀಲಿಸುವಾಗ ಈ ಮಾತನ್ನು ಅವಶ್ಯವಾಗಿ ಲಕ್ಷಿಸಬೇಕು.

'ಪ್ರಭುಲಿಂಗಲೀಲೆ'ಯಲ್ಲಿ ಮೊದಲಿನಿಂದ ಕೊನೆಯವರೆಗೆ ಎಲ್ಲಿಯೂ ಹತ್ಯೆಯ ಪ್ರಸಂಗ ಗೋಚರಿಸುವುದಿಲ್ಲ. ಕೇವಲ ಎರಡು ಪ್ರಸಂಗಗಳಲ್ಲಿ ನಾವು ಮರಣದ ಘಟನೆಯ ಅಂಚಿಗೆ ಸಮೀಪಿಸುತ್ತೇವೆ. ಮೊದಲನೆಯ ಪ್ರಸಂಗ 'ಮುಕ್ತಾಯಕ್ಕನ ಗತಿ'ಯಲ್ಲಿದೆ. ತನ್ನಣ್ಣ ಅಜಗಣ್ಣ ಯಾವ ಸೂಚನೆಯನ್ನೂ ಕೊಡಲಾರದೆ ದೇಹತ್ಯಾಗ ಮಾಡಿರುವನೆಂದು ತಿಳಿಸುವ ಮುಕ್ತಾಯಿ ತನಗೆ ಗತಿಯಾಗಿದ್ದವನೇ ಇಲ್ಲವಾದನೆಂದು ಸಿಟ್ಟಿನಲ್ಲಿರುವಾಗ ಅಲ್ಲಮಪ್ರಭು ಅವಳನ್ನು ಸಂತೈಸುವ ಪರಿ ವಿಶಿಷ್ಟವಾಗಿದೆ. ಅಜಗಣ್ಣನು ಗುಹೇಶ್ವರಲಿಂಗಸಂಗಿಯಾಗಿರುವಾಗ ಅವನಿಗೆ ಮರಣವಿಲ್ಲವೆಂದು ತಿಳಿಸುವ ಅಲ್ಲಮ ಅಜಗಣ್ಣ 'ನಿತ್ಯನು' ಎಂದು ಅರುಹುತ್ತಾನೆ. ಮುಕ್ತಾಯಿಯ ಮನದ ಮಾಯೆಯನ್ನು ದೂರೀಕರಿಸಿ ಅವಳಿಗೂ 'ಭಕ್ತಿಯ ಕೀಲವನ್ನು ಉಪದೇಶಿಸಿ ನಿಜದ ನಿರಾಳದಲ್ಲಿ ನಿಲ್ಲುವಂತೆ' ಮಾಡುತ್ತಾನೆ. ಹೀಗೆ ಅಜಗಣ್ಣನು ಜನನ-ಮರಣಗಳನ್ನು ಗೆದ್ದವನೆನ್ನುವುದನ್ನು ಈ ಗತಿಯ ಸೂಚನಾ ಪದ್ಯದಲ್ಲಿಯೇ ಚಾಮರಸ ಸ್ಪಷ್ಟಪಡಿಸುತ್ತಾನೆ.

ಭಕ್ತಿಯನು ಮುಕ್ತಾಯಿಗರುಹಿಸಿ
ಮುಕ್ತನಾದಜಗಣ್ಣನಿರವನು
ವ್ಯಕ್ತದಲಿ ವಿರಚಿಸಿದನೆಮ್ಮಯ ಗುರುಗುಹೇಶ್ವರನು ॥

[illegible]

[illegible]

[illegible]
[illegible]
[illegible]

ಎರಡನೆಯ ಪ್ರಸಂಗ 'ಗೋರಕ್ಷನ ಗತಿ'ಗೆ ಸಂಬಂಧಿಸಿದ್ದು. ಅಲ್ಲಮಪ್ರಭು ಸಂಚರಿಸುತ್ತ ಶ್ರೀಗಿರಿಗೆ ಬರುತ್ತಾನೆ. ಅಲ್ಲಿ ಗೋರಕ್ಷನೆಂಬೊಬ್ಬ ಸಾಧಕ ವಜ್ರಶರೀರಿಯಾಗಿ ನಿಂತಿದ್ದಾನೆ. ಇವನನ್ನು ಸಂದರ್ಶಿಸುವ ಅಲ್ಲಮ ಒಡಲಿನಾಸೆಯನ್ನು ಕಳೆಯುವುದಕ್ಕಾಗಿ ತಾನು ಅಲ್ಲಿ ಬಂದಿರುವುದಾಗಿ ತಿಳಿಸುತ್ತಾನೆ. ಆದರೆ ವಜ್ರಕಾಯದವನಾಗಿ ಬಾಳುವುದೇ ಪರಮ ಗುರಿಯೆಂದು ತಿಳಿಸುವ ಗೋರಕ್ಷ ಖಡ್ಗದಿಂದ ಹೊಡೆದು ತನ್ನನ್ನು ಪರೀಕ್ಷಿಸಬೇಕೆಂದು ಅಲ್ಲಮನಿಗೆ ತಿಳಿಸುತ್ತಾನೆ. ಸರ್ವಶಕ್ತನ ಕೈಯಲ್ಲಿ ಅಸಾಧ್ಯವಾದುದು ಇರುವುದಾದರೂ ಹೇಗೆ? ಕೊಂದು ಪರೀಕ್ಷಿಸುವುದು ತನಗೆ ತರವಲ್ಲವೆಂದು ಅಲ್ಲಮ ತಿಳಿಸಿದರೆ ಸಾಯಲು ಸಿದ್ಧನಾಗಿರುವುದಾಗಿ ಗೋರಕ್ಷ ನುಡಿಯುತ್ತಾನೆ. ಇಲ್ಲಿ ಸ್ವಗತರೂಪದಲ್ಲಿರುವ ಅಲ್ಲಮಪ್ರಭುವಿನ ವಿಚಾರವನ್ನು ಲಕ್ಷಿಸಬೇಕು.

ಒಲ್ಲೆವೆಂದೆನಲೇಕೆ ಹುಟ್ಟಿಸ
ಬಲ್ಲವನು ಹೊಂದಿಸಿದೊಡಾತಗೆ
ಹೊಲ್ಲವಾವುದು ನಾವು ಸಲಿಸುವೆವೀತನರ್ತಿಯನು ।
ನಿಲ್ಲದೆರಗಲು ಸತ್ತನಾದೊಡೆ
ಬಲ್ಲಿತಹ ಗೋರಕ್ಷನನು ನಾ
ವಿಲ್ಲಿ ಸೃಜಿಸುವೆವೆನುತಲಾ ಪ್ರಭುರಾಯನನುವಾದ ॥ ೨೬೮

ಸೃಷ್ಟಿ-ಸ್ಥಿತಿ-ಲಯಗಳಿಗೆಲ್ಲ ಅಧಿಕಾರಿಯಾಗಿರುವಾಗ ತಾನು ಗೋರಕ್ಷನನ್ನು ಸಾಯಿಸಿದರೆ ಅವನಿಗೆ ಯಾವ ಕೆಡುಕೂ ಇಲ್ಲ. ಆಕಸ್ಮಾತ್ ತನ್ನ ಹೊಡೆತಕ್ಕೆ ಸತ್ತರೆ 'ಅವನನ್ನು ಪುನಃ ಸೃಷ್ಟಿಸುತ್ತೇನೆ' ಎನ್ನುತ್ತಾನೆ ಅಲ್ಲಮಪ್ರಭು.

ಈ ಎರಡು ಪ್ರಸಂಗಗಳನ್ನು ಹೊರತುಪಡಿಸಿದರೆ ಸಾವಿನ ವಿಚಾರವನ್ನೂ ಕೂಡ ಕವಿ ಯಾವುದೇ ಪ್ರಸಂಗದಲ್ಲಿ ಎತ್ತಿಲ್ಲ. ಮಾಯಾದೇವಿ ಅಲ್ಲಮನ ಜೊತೆಗಿನ ತನ್ನ ಹೋರಾಟದಲ್ಲಿ ಸೋತು ಸ್ವಸ್ಥಾನಕ್ಕೆ ಹಿಂದಿರುಗುತ್ತಾಳೆಯೇ ಹೊರತು ಅವಳಿಗೆ ಮರಣದ ಪ್ರಮೇಯವೇ ಉದ್ಭವಿಸುವುದಿಲ್ಲ.

ಪ್ರಭುಲಿಂಗಲೀಲೆಯ ನಿರೂಪಣೆಯುದ್ದಕ್ಕೂ ನಾವು ಕಾಣುವುದು ಅಲ್ಲಮಪ್ರಭು ಸಂಪ್ರದಾಯದ ಪ್ರತಿಪಾದನೆಯನ್ನು. ಇದು ವ್ಯಕ್ತವಾಗುವುದು ಪುರುಷರೂಪ ಹಾಗೂ ಪ್ರಕೃತಿರೂಪ ಎಂಬ ಎರಡು ಅಂಶಗಳ ಹಿನ್ನೆಲೆಯಲ್ಲಿ. ಇದನ್ನೇ ಶಿವರೂಪ ಹಾಗೂ ಶಕ್ತಿರೂಪ ಎನ್ನುವುದು. ಶಿವ ರೂಪದಲ್ಲಿ

[illegible]

[illegible]

[illegible]

[illegible]

[illegible]

ವ್ಯಕ್ತವಾಗುವುದು ಊರ್ಧ್ವಮುಖಿಯಾದರೆ ಶಕ್ತಿರೂಪದಲ್ಲಿ ಅದು ಅಧೋಮುಖಿಯಾಗಿರುತ್ತದೆ. ಶಕ್ತಿರೂಪದಲ್ಲಿ ಇದು ಸತ್ವ, ರಜ, ತಮ ಎಂದು ಮೂರು ಗುಣಗಳಲ್ಲಿ ವ್ಯಕ್ತವಾಗಬಹುದು. ಅಜ್ಞಾನ, ಮೋಹ, ನಿದ್ರೆ, ಚಾಪಲ್ಯ, ಹೀನವೃತ್ತಿ, ಪಾಪಿಷ್ಠತ್ವ, ಪರನಿಂದೆ, ಪರಹಿಂಸೆ ಇವು ತಾಮಸಗುಣ ವ್ಯಕ್ತವಾಗುವುದಕ್ಕೆ ಸಾಧನಗಳು.[೨೬] ಇವುಗಳಲ್ಲಿ ಅಜ್ಞಾನ, ಮೋಹ, ಚಾಪಲ್ಯಗಳ ರೂಪದಲ್ಲಿ ವ್ಯಕ್ತವಾಗುವುದು ಮಾಯಾದೇವಿ ಮತ್ತು ಕೌಶಿಕರ ಪ್ರಸಂಗಗಳಲ್ಲಿ. ಈ ಎರಡು ಪಾತ್ರಗಳಿಗೆ ಪೂರಕವಾಗಿ ಆಯಾ ಪರಿಸರದ ಪಾತ್ರಗಳು ರೂಪುಗೊಂಡಿವೆಯೇ ಹೊರತು ಆ ಪಾತ್ರಗಳಿಗೆ ಪ್ರತ್ಯೇಕವಾದ ಯಾವ ವಿಶೇಷತೆಯೂ ಇಲ್ಲ.

ಊರ್ಧ್ವಮುಖಿಗಳಾದ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಇವರಿಗೆ ಅಧೋಮುಖಿಗಳಾದ ಮಾಯಾದೇವಿ ಮತ್ತು ಕೌಶಿಕ ಎದುರಾಗುತ್ತಾರೆ. ಎರಡೂ ಪ್ರಸಂಗಗಳಲ್ಲಿ ಅರಸು ಮನೆತನದ ಪ್ರಬಲರೇ ಎದುರಾಳಿಗಳಾಗಿದ್ದಾರೆ. ಅವರಿಂದ ಬಿಡಿಸಿಕೊಂಡು ಹೋಗುವುದು ಅಷ್ಟೊಂದು ಸುಲಭದ ಮಾತಲ್ಲ. ಕಾರಣವೆಂದರೆ ಅಲ್ಲಮಪ್ರಭು ಮತ್ತು ಮಹಾದೇವಿಯಕ್ಕ ಸಾಮಾನ್ಯವರ್ಗದಿಂದ ಬಂದವರು. ಅಲ್ಲಮಪ್ರಭು ಮಾಯೆಯನ್ನು ಎದುರಿಸುವ ಸಾಮರ್ಥ್ಯ ತೋರಿದರೆ ಅಕ್ಕಮಹಾದೇವಿಗೆ ಅದು ಸಾಧ್ಯವಿಲ್ಲ. ಕಾರಣ ಅವಳು ಹೆಣ್ಣು. ಆದರೂ ಉಪಾಯದಿಂದ ಪ್ರಸಂಗವನ್ನು ಎದುರಿಸಿ ತನ್ನ ದಾರಿಯನ್ನು ಸುಗಮಗೊಳಿಸಿಕೊಳ್ಳುತ್ತಾಳೆ. ಗಂಡುರೂಪದ ಅಲ್ಲಮನಿಗೆ ಹೆಣ್ಣು ರೂಪದಲ್ಲಿ ಮಾಯಾದೇವಿ ತೊಡಕಾದರೆ ಹೆಣ್ಣು ರೂಪದ ಮಹಾದೇವಿಯಕ್ಕನಿಗೆ ಗಂಡುರೂಪದಲ್ಲಿ ಕೌಶಿಕ ತೊಡಕಾಗುತ್ತಾನೆ. ಗಂಡಿರಲಿ, ಹೆಣ್ಣಿರಲಿ ಮಾಯೆಯ ಕಾಟ ತಪ್ಪಿದ್ದಲ್ಲ. ಆದರೆ ಅದನ್ನು ಗೆಲ್ಲುವವರೆಷ್ಟು ಜನ? ಅಕ್ಕಮಹಾದೇವಿಯ ಒಂದು ವಚನ ಹೀಗಿದೆ–

ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು ನೋಡಾ!
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ!
ಲೋಕವೆಂಬ ಮಾಯೆಗೆ
ಶರಣಚಾರಿತ್ರ ಮರುಳಾಗಿ ತೋರುವುದು ನೋಡಾ!

[illegible]

[illegible]

[illegible]

ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ

ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ! [೨೦]

ಶರಣತತ್ವದಲ್ಲಿ ಬದುಕುವವರಿಗೆ ಯಾವ ರೂಪದಲ್ಲಿ ಮಾಯೆ ಬಂದೆರಗಿದರೂ ಅದನ್ನವರು ಸಮರ್ಥರೀತಿಯಿಂದ ಎದುರಿಸಿ ಪಾರಾಗುತ್ತಾರೆ. ಕಾಯ ಕರ್ರನೆ ಕಂದಿದರೂ ಒಂದೇ, ಅದು ಮಿರ್ರನೆ ಮಿಂಚಿದರೂ ಒಂದೇ. ಎಲ್ಲದಕ್ಕೂ ಪರಶಿವನನ್ನು ಸಾಕ್ಷಿಯಾಗಿಟ್ಟುಕೊಂಡು ಬದುಕುತ್ತ ಅವನಲ್ಲಿ ಐಕ್ಯವಾಗುವುದು ಮಾತ್ರ ಅವರ ಬದುಕಿನ ಅಂತಿಮ ಸತ್ಯ. ಈ ಮಾತಿಗೆ ಮೇಲಿನ ಎರಡೂ ಪ್ರಸಂಗಗಳು ಸಾಕ್ಷಿಗಳಾಗಿ ನಿಲ್ಲುತ್ತವೆ.

ಶಿವಯೋಗಾಚರಣೆಯನ್ನು ಪ್ರತಿಪಾದಿಸುವುದಕ್ಕಾಗಿ ಕಾವ್ಯದುದ್ದಕ್ಕೂ ಚಾಮರಸ ವಿವಿಧ ಹಂತಗಳಿಗೆ ದೃಷ್ಟಾಂತರೂಪದ ಪ್ರಸಂಗಗಳನ್ನು ನಿರ್ಮಿಸಿಕೊಳ್ಳುತ್ತ ಕಥಾನಕವನ್ನು ಆಕರ್ಷಕವಾಗಿಸಿದ್ದಾನೆ ಆದರೆ ಇಷ್ಟಲಿಂಗದ ಗತಿ, ಸಾಧಕಾಂಗದ ಗತಿ ಹಾಗೂ ಮನೋಲಯದ ಗತಿ ಇವುಗಳಲ್ಲಿ ದೃಷ್ಟಾಂತರೂಪದ ಯಾವ ಪ್ರಸಂಗವನ್ನೂ ನಿರ್ಮಿಸಿಕೊಳ್ಳದೆ ನೇರವಾಗಿ ವಿಷಯ ಪ್ರತಿಪಾದನೆಗೆ ತೊಡಗುವುದು ಪ್ರಭುಲಿಂಗಲೀಲೆಯ ವಿಶೇಷತೆಗಳಲ್ಲೊಂದು. ಲೌಕಿಕ ಬದುಕನ್ನು ತಿರಸ್ಕರಿಸಿ, ಆಧ್ಯಾತ್ಮಿಕ ಬದುಕಿನಲ್ಲಿ ಮುಂದುರೆಯುವ ಕ್ರಮವನ್ನು ಪುರಸ್ಕರಿಸಿ, ನಿತ್ಯಪದವಿಯನ್ನು ಪಡೆದುಕೊಳ್ಳುವ ವಿಷಯದ ಮೇಲಿನ ಚರ್ಚೆ ಮನೋಲಯದ ಗತಿಯಲ್ಲಿ ಪರಿಪೂರ್ಣತೆಯನ್ನು ಪಡೆದುಕೊಳ್ಳುತ್ತದೆ.

ಪ್ರಭುಲಿಂಗಲೀಲೆಯಲ್ಲಿ ಶಿವಯೋಗವು ಪಾವನಗಂಗೆಯಾದರೆ ಮನೋಲಯವು ಅದರ ಹರಿವು ಹಾಗೂ ಪ್ರಭು ತೀರ್ಥರೂಪದ ಜಲ.

ಟಿಪ್ಪಣಿಗಳು

೧. ಸಂ: ಡಾ. ಎಸ್. ವಿದ್ಯಾಶಂಕರ, ವಚನ ಪರಿಭಾಷಾ ಕೋಶ (ಸಮಗ್ರ ವಚನ ಸಂಪುಟ, ಭಾಗ ೧೫), ಪುಟ ೪೮

೨. ಡಾ. ಎಂ. ಜಿ. ನಂಜುಡಾರಾಧ್ಯ, ಮಗ್ಗೆ ಮಾಯಿದೇವ ವಿಭು ಕಂಡ ವೀರಶೈವ ದರ್ಶನ, ಪುಟ ೫೭

೩. ಸಂ: ಡಾ. ಬಿ. ಬಿ. ಹೆಂಡಿ, ಕೆರೆಯ ಪದ್ಮರಸ ವಿರಚಿತ ದೀಕ್ಷಾಬೋಧೆ , ಪ್ರಸ್ತಾವನೆ, ಪುಟ ೩೬

[illegible]

[illegible]

[illegible]

[illegible]

[illegible]

[illegible]

[illegible]

೪. ಮ. ಮಾ. ವಿ. ಕಂಡ ವೀರಶೈವ ದರ್ಶನ , ಪುಟ ೫೭

೫. ದೀಕ್ಷಾಬೋಧೆ , ಪ್ರಸ್ತಾವನೆ , ಪುಟ ೩೬

೬. ಮ. ಮಾ. ವಿ. ಕಂಡ ವೀರಶೈವ ದರ್ಶನ , ಪುಟ ೫೭

೭. ದೀಕ್ಷಾಬೋಧೆ , ಪ್ರಸ್ತಾವನೆ , ಪುಟ ೩೬

೮. ಮ. ಮಾ. ವಿ. ಕಂಡ ವೀರಶೈವ ದರ್ಶನ , ಪುಟ ೫೭

೯. ದೀಕ್ಷಾಬೋಧೆ , ಪ್ರಸ್ತಾವನೆ , ಪುಟ ೩೬

೧೦. ಮ. ಮಾ. ವಿ. ಕಂಡ ವೀರಶೈವ ದರ್ಶನ , ಪುಟ ೫೬

೧೧. ದೀಕ್ಷಾಬೋಧೆ , ಪ್ರಸ್ತಾವನೆ , ಪುಟ ೩೬

೧೨. ಮ. ಮಾ. ವಿ. ಕಂಡ ವೀರಶೈವ ದರ್ಶನ , ಪುಟ ೫೬

೧೩. ದೀಕ್ಷಾಬೋಧೆ , ಪ್ರಸ್ತಾವನೆ , ಪುಟ ೩೬

೧೪. ಸಂ ಇಮ್ಮಡಿ ಶಿವಬಸವ ಸ್ವಾಮಿಗಳು , ಅಲ್ಲಮ ಪ್ರಭುವಿನ ಟೀಕಿನ ವಚನಗಳು,
ವ. ಸಂ. ೭೭೮, ಪುಟ ೩೬೧ ಮತ್ತು ೩೬೨

೧೫. ಡಾ. ಆರ್.ಸಿ ಹಿರೇಮಠ ಮಹಾಯಾತ್ರೆ , ಪುಟ ೮೯

೧೬. ಸಂ: ಡಾ. ಎಂ.ಎಂ.ಕಲಭುರ್ಗಿ ಮತ್ತು ಸಂ ನಾಗಭೂಷಣ ಶಾಸ್ತ್ರಿಗಳು : ಚನ್ನಸದಾಶಿವ
ಯೋಗಿವಿರಚಿತಾ, ಶಿವಯೋಗ ಪ್ರದೀಪಿಕಾ, ಪುಟ ೫

೧೭. ಪ್ರ. ಲೀ , ಗತಿ ೧, ಪದ್ಯ ೮

೧೮. ಮಹಾಯಾತ್ರೆ , ಪುಟ ೨೧೩ ರಿಂದ ೨೧೭

೧೯. ಶಿವಯೋಗ ಪ್ರದೀಪಿಕಾ , ಪ್ರಸ್ತಾವನೆ ಪುಟ ೧

೨೦. ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥
ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ
ಸರ್ವಸಂಕಲ್ಪಸನ್ಯಾಸೀ ಯೋಗಾರೂಢಸ್ತದೋಚ್ಯತೇ ॥
ಸಂ. ಘನಶ್ಯಾಮದಾಸ ಜಾಲಾನ, ಶ್ರೀ ಮದ್ಭಗವದ್ಗೀತಾ , ಅಧ್ಯಾಯ ೬ ,
ಪದ್ಯಗಳು ೩ ಮತ್ತು ೪

೨೧. ಆದೌ ಹಿರಣ್ಯಗರ್ಭೇನ ಯೋಗಂ ತಂ ವಿಸ್ತರೋದಿತಮ್
ಅಧ್ಯಾಯೇನೈವ ಭಗವಾನನ್ವಗೃಹ್ಣಾತ್ಪತಂಜಲಿ:
ಚಿತ್ತವೃತ್ತಿ ವಿರೋಧೋऽತ್ರ ಯೋಗಶಬ್ದೇನ ಕೀರ್ತಿತ : ॥
ಸಂ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ , ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ ,
ಕಲ್ಲೋಲ ೯, ತರಂಗ ೫, ಪದ್ಯಗಳು ೨೬ ಮತ್ತು ೨೭

೨೨. ಮಹಾಯಾತ್ರೆ , ಪುಟ ೨೩೯

೨೩. ಸಂ. ಅರ್. ಸಿ. ಹಿರೇಮಠ, ಚನ್ನಬಸವಣ್ಣನವರ ವಚನಗಳು , ಕರಣಹಸಿಗೆ,
ಪುಟ ೬೬೩ ಮತ್ತು ೬೬೪

೨೪. ಮಹಾಯತ್ರೆ , ಪುಟ ೨೪೫

೨೫. ವಚನ ಪರಿಭಾಷಾ ಕೋಶ , ಪುಟ ೧೧೫

೨೬. ಮಹಾಯತ್ರೆ, ಪುಟ ೨೨೮

೨೭. ಸಂ. ಡಾ. ಜಿ. ಎಸ್. ಕಾಪಸೆ , ಶ್ರೀ ಚಿದಾನಂದಾವಧೂತ ವಿರಚಿತ ಜ್ಞಾನಸಿಂಧು , ಅಧ್ಯಾಯ ೧೮ , ಪದ್ಯ ೬

೨೮. ಸಂ: ಡಾ. ಜಿ. ಎಸ್. ಕಾಪಸೆ , ಶ್ರೀ ಚಿದಾನಂದಾವಧೂತ ವಿರಚಿತ ಜ್ಞಾನಸಿಂಧು , ಅಧ್ಯಾಯ ೧೮ , ಪದ್ಯ ೮

೨೯. ಸಂ: ಡಾ. ಜಿ. ಎಸ್. ಕಾಪಸೆ , ಶ್ರೀ ಚಿದಾನಂದಾವಧೂತ ವಿರಚಿತ ಜ್ಞಾನಸಿಂಧು , ಅಧ್ಯಾಯ ೧೮ , ಪದ್ಯ ೧೦

೩೦. ಸಂ. ಡಾ. ಜಿ. ಎಸ್. ಕಾಪಸೆ , ಶ್ರೀ ಚಿದಾನಂದಾವಧೂತ ವಿರಚಿತ ಜ್ಞಾನಸಿಂಧು , ಅಧ್ಯಾಯ ೧೮ , ಪದ್ಯಗಳು ೧೧ ರಿಂದ ೧೫

೩೧. ಅವರ್ಣೋ ವರ್ಣಸಂಯುಕ್ತೋ ವಿರೂಪೀ ವಿಶ್ವರೂಪಭೃತ್
ಪರಮಾತ್ಮಾ ಪರಬ್ರಹ್ಮ ಕಶ್ಚಿದ್ದೇವೋಽಸ್ತಿ ಚಿಚ್ಛಿವಃ ॥
ಶಿವಯೋಗ ಪ್ರದೀಪಿಕಾ , ಪ್ರಥಮ ಪಟಲ, ಪದ್ಯ ೨೦

೩೨. ನಸವಿರಿದ ಪರಾಗದರನರಿದು ಮೋಹಿಸಿ ಬಿಡದೆ
ಪಸಿದು ತುಂಬೆ ರ್ಝೇಂಕೃತಿಯೊಳು ಜಿನಗುವಂದದಿ ॥
ಅಸುವಿನೊಳಗೆ ಮೂಲಮಂತ್ರನಾದವೆಸೆಯಲು ಜೀವ
ದೊಸಗೆಯಾಗಲೊಡನೆ ದಿವ್ಯಕಾಂತಿ ತೀವಿತು ॥
ಏನೆನೆಂಬೆನತಿ ವಿಚಿತ್ರದೋರಲೆನ್ನೊಳು ಕಂಡು
ಮೌನದಿಂದೆ ಬೆರಗುಗೊಂಡೆನೆಲೆಲೆ ಮಾನಿನಿ ॥
ಸಂ. ಬ. ಕ. ಪಾಟೀಲ, ವೇದಾಂತ ರತ್ನಾಕರ, ಕೈವಲ್ಯ ಪದ್ಧತಿ, ಯೋಗಪ್ರತಿಪಾದನ ಸ್ಥಲ, ಪದ್ಯ ೯

೩೩. ಎಳಮುತ್ತಿನಂತೆ ದೀಪದುರಿಯಂತೆ । ಸೆಳೆಮಿಂಚಿನಂತೆ ರತ್ನದಂತೆ ।
ತೊಳಪ ವಿದ್ರುಮದ ಬಳ್ಳಿಯಂತೆ ಥಳ । ಥಳಪ ಶಶಿಸೂರ್ಯ ಕೋಟಿಯಂತೆ ॥
ಕಾಣುತಿದೆ ಪರಬಿಂದು ಶಾಂಭವಿಯ । ಕೋಣೆಯೊಳು ಲಕ್ಷವಿಟ್ಟಾಕ್ಷಣದಿ ॥
ಸಂ. ಶಿ. ಶಿ. ಬಸವನಾಳ, ಶ್ರೀ ಸರ್ಪಭೂಷಣ ಶಿವಯೋಗಿ ಕೃತ ಕೈವಲ್ಯಕಲ್ಪವಲ್ಲರಿ, ಯೋಗಪ್ರತಿಪಾದನ ಸ್ಥಲ, ಪದ್ಯ ೧೭

೩೪. ಸಂ. ಬಸವನಾಳ ಶಿವಲಿಂಗಪ್ಪನವರು, ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ. ಸಂ ೯೫೭

೩೫. ಅಂಗುಷ್ಠ ಮಾತ್ರ : ಪುರುಷೋಽಂತರಾತ್ಮಾ
ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ॥
ಸಂ ಸ್ವಾಮಿ ಆದಿದೇವಾನಂದ , ಕಠೋಪನಿಷತ್, ಆರನೆಯವಲ್ಲೀ, ಪದ್ಯ ೧೭

೩೬. ರಾಜ ಯೋಗ , ಪುಟ ೯೧

೩೭. ರಾಜ ಯೋಗ , ಪುಟ ೧೯೫

೩೮. ಜ್ಞಾನಸಿಂಧು , ಪ್ರಕೃತಿ ಪುರುಷ ಲಕ್ಷಣ, ಪದ್ಯ ೨೬

೩೯. ಜ್ಞಾನಸಿಂಧು , ಪ್ರಕೃತಿ ಪುರುಷ ಲಕ್ಷಣ, ಪದ್ಯ ೨೩

೪೦. ರಾಜಯೋಗ , ಪುಟ ೯೨

೪೧. ರಾಜಯೋಗ , ಪುಟ ೯೩

೪೨. ರಾಜಯೋಗ , ಪುಟ ೯೪

೪೩. ಮಹಾಯಾತ್ರೆ , ಪುಟ ೨೪೭

೪೪. ರಾಜಯೋಗ , ಪುಟ ೯೫

೪೫. ರಾಜಯೋಗ , ಪುಟ ೯೫

೪೬. ರಾಜಯೋಗ , ಪುಟ ೯೬

೪೭. ರಾಜಯೋಗ , ಪುಟ ೯೮

೪೮. ರಾಜಯೋಗ , ಪುಟ ೯೮

೪೯. ರಾಜಯೋಗ , ಪುಟ ೯೯

೫೦. ಶಿವತತ್ತ್ವ ರತ್ನಾಕರ , ಕಲ್ಲೋಲ ೯, ತರಂಗ ೫

೫೧. ರಾಜಯೋಗ , ಪುಟ ೯೯

೫೨. ರಾಜಯೋಗ , ಪುಟ ೧೦೦

೫೩. ಮಹಾಯಾತ್ರೆ , ಪುಟ ೨೨೩

೫೪. ಮಹಾಯಾತ್ರೆ , ಪುಟ ೨೨೩

೫೫. ಕರಣಹಸಿಗೆ , ಪುಟ ೬೬೪

೫೬. ಕರಣಹಸಿಗೆ , ಪುಟ ೬೭೪

೫೭. ಸಂ. ಡಾ. ಆರ್.ಸಿ ಹಿರೇಮಠ , ಶ್ರೀ ಸಿದ್ಧರಾಮೇಶ್ವರ ವಚನಗಳು , ವ. ಸಂ ೧೨೬೫, ಪುಟ ೩೯೧

೫೮. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ. ಸಂ. ೨೩೮, ಪುಟ ೬೦

೫೯. ವಚನ ಪರಿಭಾಷಾ ಕೋಶ , ಪುಟ ೧೦೧

೬೦. ದೀಕ್ಷಾಬೋಧೆ

೬೧. ಕರಣಹಸಿಗೆ , ಜಗದುತ್ಪತ್ಯ , ಪುಟ ೬೫೯

೬೨. ಚನ್ನಬಸವಣ್ಣನವರ ವಚನಗಳು , ವ. ಸಂ. ೮೮೫, ಪುಟ ೪೨೦

೬೩. ವಚನ ಪರಿಭಾಷಾಕೋಶ , ಪುಟ ೧೦೧

೬೪. ದೀಕ್ಷಾಬೋಧೆ , ಪ್ರಥಮಸ್ಥಲ

೬೫. ಸಂ. ವೈ. ನಾಗೇಶಶಾಸ್ತ್ರಿ , ಶಿವಾನುಭವ ಸೂತ್ರಂ , ೫-೪೨

೬೬. ವಚನ ಪರಿಭಾಷಾ ಕೋಶ , ಪುಟ ೨೧೪

೬೭. ವಚನ ಪರಿಭಾಷಾ ಕೊಶ , ಪುಟ ೨೮೨

೬೮. ದೀಕ್ಷಾಬೋದೆ , ೧-೮೯, ಪುಟ ೩೪

೬೯. ಬ. ಗಿ ಯಲ್ಲಟ್ಟಿ , ಉರಿಯುಂಡ ಕರ್ಪೂರ , ಪುಟ ೬೭

೭೦. ಶಿವಯೋಗ ಪ್ರದೀಪಿಕಾ , ಚತುರ್ಥ ಪಟಲ, ಪುಟ ೧೧೭

೭೧. ಶ್ರೀ ಚೆನ್ನವೀರ ಶಿವಯೋಗಿಗಳು ಯೋಗಾಶ್ರಮ, ಮಹಾಲಿಂಗಪುರ , ಯೋಗ ಸಿದ್ಧಾಂತ, ಮಂತ್ರ, ಪುಟ ೧೦೪

೭೨. ಸಂ. ಡಾ. ಎಲ್. ಬಸವರಾಜು, ಅಲ್ಲಮನ ವಚನಗಳು , ವ.ಸಂ. ೪೬೪, ಪುಟ ೨೦೫

೭೩. ಮಹಾಯಾತ್ರೆ , ಪುಟ ೨೯೩

೭೪. ಕೈವಲ್ಯ ಕಲ್ಪವಲ್ಲರಿ, ಯೋಗಪ್ರತಿಪಾದನ ಸ್ಥಲ

೭೫. ಶ್ರೀ ಶೈಲ ಜತ್ತಿ , ಓಂಕಾರವಾಣಿ , ವ.ಸಂ. ೧೦೧, ಪುಟ ೪೨

೨೬. ಯೋಗ ಸಿದ್ಧಾಂತ , ಪುಟ ೧೦೬

೨೭. ಕೈವಲ್ಯ ಕಲ್ಪವಲ್ಲರಿ, ೪-೨೮, ಪುಟಗಳು ೧೦೪ ಮಟ್ಟು ೧೦೫

೨೮. ಓಂಕಾರವಾಣಿ , ವ.ಸಂ ೧೧೧, ಪುಟ ೪೫

೨೯. ಓಂಕಾರವಾಣಿ , ಪ್ರಸ್ತಾವನೆ

೩೦. ವಿಪುಳ ವೇದಾಂತಸಾರ, ಸಕಲ ಲೋಕ, ಜನಹಿತಾಧಾರ, ಸಪ್ತಕೋಟಿ ಮಹಾಮಂತ್ರಂಗಳ ತವರ್ಮನೆ, ಭಕ್ತಿಗೆ ಜನನಭೂಮಿ, ಜೀವಾನಂದ. ಅಖಿಳಾಗಮ ಸಂತಾನದ ಹರಣ, ಮುಕ್ತಿಗೆ ಅಪಾರದ ಸೋಪಾನ, ಪ್ರಣವಾಂಕುರ ಪಲ್ಲವ ಫಲರೂಪು ತ್ರಿಣಯನನೊಲಿಸುವ ಕರ್ಣಾಭರಣ. ಹರನಾಮದ ಸಾಕಾರದ ನಿಲವು ಪರಮ ಪಂಚ ಬ್ರಹ್ಮಾನಂದ. ಪರತತ್ತ್ವದ ನಿತ್ಯದ ನೆಲೆ ಹಂಪೆಯ ವಿರುಪನ ತೋರುವ ಗುರುಪಂಚಾಕ್ಷರಿ.
ಸಂ. ಡಾ. ಉಮಾದೇವಿ, ಹುಬ್ಬಳ್ಳಿ , ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿಗಳ
ಶಿವಯೋಗ ಚಿಂತಾಮಣಿ , ವ. ಸಂ. ೧೭೫, ಪುಟ ೮೦

೩೧. ಯೋಗ ಸಿದ್ದಾಂತ , ಪುಟ ೧೦೫

೩೨. ವಚನ ಪರಿಭಾಷಾ ಕೋಶ , ಪುಟ ೪೮

೩೩. ನಿತ್ಯವಹ ಕಳೆಯುತ್ತಮಾಂಗದೊಳಿರಲ್ಕದಂ
ಮಸ್ತಕದಿ ಶ್ರೀ ಗುರು ಸುಹಸ್ತ ಸಂಗದೊಳದಂ
ಸೆಳೆದು ಭಾವದಿ ಮನದೊಳಳವಡಿಸಿ ನಯನದೊಳು
ತಿಳಿದುಂದತಸ್ಥಲದಿಯಿರಿಸಿದಂ ಲಿಂಗದೊಳು
ದೀಕ್ಷಾಬೋಧೆ , ಪ್ರಥಮಸ್ಥಲ, ಪುಟ ೫೯

೩೪. ಎಂದು ಈ ಕ್ರಮದೊಳುಪದೇಶಮಂ ಮಾಡಿದಂ
ತಂದು ಕರದೊಳಗಿಷ್ಟಲಿಂಗಮಂ ಇರಿಸಿದಂ
ನಾನಾವಿಧಜ್ಞಾನಮಂ ಕರದೊಳಿರಿಸಿದಂ
ಧ್ಯಾನಧಾರಣವೆಂಬಿವಂ ಕರದೊಳಿರಿಸಿದಂ
ಇಹಿಗೆ ಕರುಣಿಸಿದ ಶ್ರೀ ಗುರು ಪದಾಬ್ಜಂಗಳಂ
ಇಹವನುಶ್ರುತವೆನ್ನ ಮನದ ಮಸ್ತಕದೊಳಂ
ದೀಕ್ಷಾ ಬೋದೆ , ಪ್ರಥಮಸ್ಥಲ, ಪುಟ ೬೦ ಮತ್ತು ೬೧

೩೫. ರಾಜಯೋಗ , ಪುಟಗಳು ೨೭ ಮತ್ತು ೨೮

೩೬. ರಾಜಯೋಗ , ಪುಟ ೨೨

೩೭. ರಾಜಯೋಗ , ಪುಟ ೫೩

೩೮. ರಾಜಯೋಗ , ಪುಟ ೪೧

೩೯. ವಚನ ಪರಿಭಾಷಾ ಕೋಶ , ಪುಟ ೪೪

೪೦. ರಾಜಯೋಗ , ಪುಟ ೪೨

೪೧. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ. ಸಂ. ೬೪೧, ಪುಟ ೧೯೯

೪೨. ರಾಜಯೋಗ , ಪುಟ ೪೪

೪೩. ಇಡಾಸ್ಮೃತೇಂದುರಿತಿ ಸೂರ್ಯಸುತೇತಿ ಯೋಗಾತ್
ಸಾ ಪಿಂಗಲೇನ ಇತಿ ವಿಷ್ಣುಪದೀತಿ ತಾಸಾಂ

ಸಾಮದ್ಯಮಾಗ್ನಿರಿತಿ, ಯೋನಿರಿತಿ ತ್ರಿವೇಣೀ
ಯೋಗಸ್ಥಲಂ ತದಿದಮೇವ ಭವೇತ್ತ್ರಿಕೂಟಂ ।।
ಶಿವಯೋಗ ಪ್ರದೀಪಿಕಾ , ದ್ವಿತೀಯ ಪಟಲ, ಪದ್ಯ ೩೫, ಪುಟ ೫೬

೯೪. ಕೈವಲ್ಯ ಕಲ್ಪಲ್ಲರಿ , ಯೋಗಪ್ರತಿಪಾದನ ಸ್ಥಲ, ಪದ್ಯ ೪, ಪುಟ ೮೪
೯೫. ಶ್ರೀ ಸಿದ್ಧರಾಮೇಶ್ವರ ವಚನಗಳು , ಶರಣನ ನಿಲವು, ಪುಟ ೫೪೦
೯೬. ಕೈವಲ್ಯ ಕಲ್ಪವರಿ , ಯೋಗಪ್ರತಿಪಾದನ ಸ್ಥಲ , ಪದ್ಯ ೧೪, ಪುಟ ೯೪
೯೭. ಚನ್ನಬಸವಣ್ಣನವರ ವಚನಗಳು , ಶಿವಯೋಗ ಸಮಾಧಿ, ಪುಟ ೭೦೧
೯೮. ಶ್ರೀ ಸಿದ್ಧರಾಮೇಶ್ವರ ವಚನಗಳು , ವ,ಸಂ. ೧೦೪೮, ಪುಟ ೩೨೪
೯೯. ಸಂ. ಚನ್ನಪ್ಪ ಉತ್ತಂಗಿ , ಸರ್ವಜ್ಞನ ವಚನಗಳು
೧೦೦. ಶ್ರೀ ಸಿದ್ಧರಾಮೇಶ್ವರ ವಚನಗಳು , ಸಂಕೀರ್ಣ ತ್ರಿವಿಧಿ, ಪುಟ ೪೫೪
೧೦೧. ವಚನಪರಿಭಾಷಾಕೋಶ , ಬೇರೆ ಬೇರೆ ಸ್ಥಾನಗಳಲ್ಲಿ
೧೦೨. ಕೈವಲ್ಯ ಪದ್ಧತಿ , ಯೋಗಪ್ರತಿಪಾದನಸ್ಥಲ ಪದ್ಯ ೧೪
೧೦೩. ಸಿದ್ಧಾಂಬುಜಸ್ವಸ್ತಿಕಮುಕ್ತವೀರ
ಭದ್ರಾಹಿಭುಕ್ಸಿಂಹಗವಾಂ ಮುಖಾನಿ
ಸುಖಾಸನಂ ಚೈವ ಸಮಂಕಿತಾನಿ
ತತೋ ದಶೇಮಾನಿ ವರಾಸನಾನಿ ।।
ಶಿವಯೋಗ ಪ್ರದೀಪಿಕಾ , ದ್ವಿತೀಯ ಪಟಲ, ಪದ್ಯ ೧೩, ಪುಟ ೪೩
೧೦೪. ಕೈವಲ್ಯ ಪದ್ಧತಿ , ಯೋಗಪ್ರತಿಪಾದನ ಸ್ಥಲ, ಪದ್ಯ ೧೩
೧೦೫. ಶರಣರ ಅನುಭಾವ ಸಾಹಿತ್ಯ , ಪುಟ ೧೬೧
೧೦೬. ಶರಣರ ಅನುಭಾವ ಸಾಹಿತ್ಯ , ಪುಟ ೧೬೧ ಮತ್ತು ೧೬೨
೧೦೭. ಶರಣರ ಅನುಭಾವ ಸಾಹಿತ್ಯ , ಪುಟ ೧೬೨ ಮತ್ತು ೧೬೩
೧೦೮. ಶರಣರ ಅನುಭಾವ ಸಾಹಿತ್ಯ , ಪುಟ ೧೬೩
೧೦೯. ರಾಜಯೋಗ , ಪುಟ ೩
೧೧೦. ರಾಜಯೋಗ , ಪುಟ ೨೭ ಮತ್ತು ೨೮
೧೧೧. ಶ್ರೀ ಸಿದ್ಧರಾಮೇಶ್ವರ ವಚನಗಳು , ವ.ಸಂ. ೧೦೪೦, ಪುಟ ೩೨೧
೧೧೨. ರಾಜಯೋಗ , ಪುಟ ೨೮
೧೧೩. ಚನ್ನಬಸವಣ್ಣನವರ ವಚನಗಳು , ವ.ಸಂ. ೨೮೦, ಪುಟ ೧೨೫
೧೧೪. ಚನ್ನಬಸವಣ್ಣನವರ ವಚನಗಳು , ವ.ಸಂ. ೧೦೭೪, ಪುಟ ೫೦೩ ಮತ್ತು ೫೦೪
೧೧೫. ಚನ್ನಬಸವಣ್ಣನವರ ವಚನಗಳು , ವ.ಸಂ. ೧೧೧೧, ಪುಟ ೫೧೮
೧೧೬. ಸಂ. ಡಾ. ಎಲ್. ಬಸವರಾಜು , ಅಕ್ಕನ ವಚನಗಳು , ವ. ಸಂ. ೩೨೮,
ಪುಟ ೧೮೯ ಮತ್ತು ೧೯೦
೧೧೭. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ.ಸಂ. ೮೪೪, ಪುಟ ೨೩೦
೧೧೮. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ.ಸಂ. ೮೪೫, ಪುಟ ೨೩೦
೧೧೯. ಅಲ್ಲಮಪ್ರಭುವಿನ ಟೀಕಿನ ವಚನಗಳು , ವ.ಸಂ. ೭೩೫, ಪುಟ ೩೪೦
೧೨೦. ಓಂಕಾರವಾಣಿ , ಪ್ರಸ್ತಾವನೆ

೧೨೧. ಸಮಗ್ರವಚನ ಸಂಪುಟ ೧೦ , ಕಾಡಸಿದ್ಧೇಶ್ವರನ ವೀರಶೈವ ಷಟ್‌ಸ್ಥಲ ವಚನಗಳು, ವ. ಸಂ. ೧೨ ಪುಟ ೮ ಮತ್ತು ೯
೧೨೨. ಮಹಾಯಾತ್ರೆ , ಪುಟ ೪೯೦
೧೨೩. ಪ್ರ. ಲೀ , ಗತಿ ೨ , ಪದ್ಯ ೯
೧೨೪. ಪ್ರ. ಲೀ , ಗತಿ ೨೨ , ಪದ್ಯ ೫೨
೧೨೫. ಪ್ರ. ಲೀ , ಗತಿ ೨೨ , ಪದ್ಯ ೫೭
೧೨೬. ಸಂ. ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಸಿದ್ಧಾಂತ ಶಿಖಾಮಣಿ, ಪ್ರಾಣಲಿಂಗಸ್ಥಲ/ಪರಮಾತ್ಮಸ್ಥಲ, ೪, ಪುಟ ೬೪೪
೧೨೭. ಬಸವಣ್ಣನವರ ಷಟ್‌ಸ್ಥಳದ ವಚನಗಳು, ವ.ಸಂ. ೫೩೫, ಪುಟ ೧೩೬
೧೨೮. ಶಿವಯೋಗ ಪ್ರದೀಪಿಕಾ, ಪ್ರಥಮ ಪಟಲ, ಪದ್ಯ ಸಂ. ೨೦, ಪುಟ ೨೦
೧೨೯. ಶಿವಯೋಗ ಪ್ರದೀಪಿಕಾ, ಪ್ರಥಮ ಪಟಲ, ಪದ್ಯ ಸಂ. ೨೧, ಪುಟ ೨೧
೧೩೦. ಮಹಾಯಾತ್ರೆ, ಪುಟ ೨೫೯
೧೩೧. ಪ್ರ. ಲೀ , ಗತಿ ೨ , ಪದ್ಯ ೧೦
೧೩೨. ಪ್ರ. ಲೀ , ಗತಿ ೨ , ಪದ್ಯ ೯
೧೩೩. ಜ್ಞಾನಸಿಂಧು, ಪ್ರಕೃತಿಪುರುಷ ಲಕ್ಷಣ, ಪದ್ಯ ೨೩, ಪುಟ ೪೭೦
೧೩೪. ಪ್ರ. ಲೀ , ಗತಿ ೨ , ಪದ್ಯ ೧೩
೧೩೫. ಶ್ರೀ ಸಿದ್ಧರಾಮ ವಚನಗಳು , ವ,ಸಂ ೫೦, ಪುಟ ೧೭
೧೩೬. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ.ಸಂ. ೨೦೩, ಪುಟ ೫೧
೧೩೭. ಪ್ರ. ಲೀ , ಗತಿ ೨ , ಪದ್ಯ ೩೧
೧೩೮. ಪ್ರ. ಲೀ , ಗತಿ ೨ , ಪದ್ಯ ೩೨
೧೩೯. ಶಿವಯೋಗಾ ಪ್ರದೀಪಿಕಾ , ದ್ವಿತಿಯ ಪಟಲ, ಪದ್ಯ ೨, ಪುಟ ೩೮
೧೪೦. ಪ್ರ. ಲೀ , ಗತಿ ೨ , ಪದ್ಯ ೩೪
೧೪೧. ಕೈವಲ್ಯ ಪದ್ಧತಿ , ಜೀವ ಸಂಬೊಧನ ಸ್ಥಲ, ಪದ್ಯ ೫
೧೪೨. ಕೈವಲ್ಯ ಕಲ್ಪವಲ್ಲರಿ , ಶಿವಕಾರುಣ್ಯ ಸ್ಥಲ, ಪದ್ಯ ೧೭
೧೪೩. ಶಿವಯೋಗಾ ಪ್ರದೀಪಿಕಾ , ತೃತೀಯ ಪಟಲ, ಪದ್ಯ ೩, ಪುಟ ೭೦
೧೪೪. ಪ್ರ. ಲೀ , ಗತಿ ೧೩ , ಪದ್ಯ ೫೧
೧೪೫. ಪ್ರ. ಲೀ , ಗತಿ ೧೩ , ಪದ್ಯ ೫೨
೧೪೬. ಪ್ರ. ಲೀ , ಗತಿ ೨೪ , ಪದ್ಯ ೧೦
೧೪೭. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ.ಸಂ. ೮೬೫, ಪುಟ ೨೩೬
೧೪೮. ಹರಿಯ ಲೋಕಕೆ ಸತ್ಯ ಲೋಕಕೆ । ಹರನ ಲೋಕಕೆ ದೇವಿ ಗಣಪತಿ ।
ತರಣಿ ಲೋಕಕೆ ದೇವಿ ಜಿಹ್ವೇಶ್ವರನ ಲೋಕಕ್ಕೆ ॥
ತೆರಳುವರು ತಾವ್ ಮರಳಲರಿಯರು । ಸುರರ ಸ್ವರ್ಗಂಗಳಿಗೆ ಹೋಹರು ।
ತಿರುಗುವರು ಪುಣ್ಯವದು ಕ್ಷೀಣಿಸೆ ಮರ್ತ್ಯಕೆಯುಯೆಂದ ॥
ಜ್ಞಾನಸಿಂಧು , ಜೀವಗೆ ಜನ್ಮಗಳ ನಿರ್ಣಯ, ಪದ್ಯ ೧೫ , ಪುಟ ೫೦೬
೧೪೯. ಪ್ರ.ಲೀ, ಗತಿ ೧೬ , ಪದ್ಯ ೧೦

೧೫೦. ಯೋಗಿಗೆ ಪಂಚಾವಸ್ಥೆಗಳುಂಟು ಬೇರಂತವನರಿದಾಗಳೆ
ಕೈಗೂಡುವಳೊಲಿದಾ ಮುಕುತಿ ವನಿತೆ ॥
ಎಂಬ ಪಲ್ಲದೊಂದಿಗೆ ಪ್ರಾರಂಭವಾಗುವ ಪದ್ಯದಲ್ಲಿ ನಿಜಗುಣ ಶಿವಯೋಗಿಯು ಯೋಗಿಗೆ ಇರುವ ಪಂಚಾವಸ್ಥೆಗಳ ವಿವರ ನೀಡುತ್ತಾನೆ.
ಕೈವಲ್ಯ ಪದ್ಧತಿ , ಯೋಗ ಪ್ರತಿಪಾದನ ಸ್ಥಲ, ಪದ್ಯ ೩೯
೧೫೧. ಮಹಾಯಾತ್ರೆ , ಪುಟ ೨೬೬
೧೫೨. ಪ್ರ. ಲೀ , ಗತಿ ೨೪, ಪದ್ಯ ೯
೧೫೩. ಪ್ರ. ಲೀ , ಗತಿ ೨೩, ಪದ್ಯ ೫೨
೧೫೪. ಮಹಾಯಾತ್ರೆ , ಪುಟ ೨೬೩
೧೫೫. ಪ್ರ. ಲೀ , ಗತಿ ೧೬, ಪದ್ಯ ೨೧
೧೫೬. ಕೈವಲ್ಯ ಕಲ್ಪವಲ್ಲರಿ , ಜ್ಞಾನಪ್ರತಿಪಾದನ ಸ್ಥಲ, ಪದ್ಯ ೧
೧೫೭. ಪ್ರ. ಲೀ , ಗತಿ ೧೩, ಪದ್ಯ ೪೭
೧೫೮. ಪ್ರ. ಲೀ , ಗತಿ ೧೯, ಪದ್ಯ ೪೦
೧೫೯. ಚನ್ನಬಸವಣ್ಣನವರ ವಚನಗಳು , ವ.ಸಂ. ೮೮೫, ಪುಟ ೪೨೦
೧೬೦. ಪ್ರ. ಲೀ , ಗತಿ ೧೧, ವಚನ ಸಂ. ೨
೧೬೧. ಶಿವಯೋಗ ಪ್ರದೀಪಿಕಾ , ಪ್ರಥಮ ಪಟಲ, ಪದ್ಯ ೩೦, ಪುಟ ೨೪
೧೬೨. ಕೈವಲ್ಯ ಕಲ್ಪವಲ್ಲರಿ , ಯೊಗಪ್ರತಿಪಾದನ ಸ್ಥಲ, ಪದ್ಯ ೧೩
೧೬೩. ಪ್ರ. ಲೀ , ಗತಿ ೧೯, ಪದ್ಯ ೫೩
೧೬೪. ಪ್ರ. ಲೀ , ಗತಿ ೧೨, ಪದ್ಯ ೨೬
೧೬೫. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ.ಸಂ. ೭೮೩, ಪುಟ ೨೧೧
೧೬೬. ಚನ್ನಬಸವಣ್ಣನವರ ವಚನಗಳು , ವ.ಸಂ. ೯೯೬, ಪುಟ ೪೬೯
೧೬೭. ಪ್ರ. ಲೀ , ಗತಿ ೧೬, ಪದ್ಯ ೩೫
೧೬೮. ಪ್ರ. ಲೀ , ಗತಿ ೧೮, ಪದ್ಯ ೨೭
೧೬೯. ಕೈವಲ್ಯ ಪದ್ಧತಿ , ಶಿವಕಾರುಣ್ಯ ಸ್ಥಲ, ಪದ್ಯ ೪
೧೭೦. ಸರ್ವಜ್ಞನ ವಚನಗಳು
೧೭೧. ಪ್ರ.ಲೀ , ಗತಿ ೧೩, ಪದ್ಯ ೭೧
೧೭೨. ಪ್ರ.ಲೀ , ಗತಿ ೧೮, ಪದ್ಯ ೩೨
೧೭೩. ಸಾಧಕದೀಕ್ಷೆಯ ಕನಿಷ್ಠ ವಯೋಮಿತಿ ಎಂಟು ವರ್ಷ
ದೀಕ್ಷಾಬೋಧೆ , ಪ್ರಸ್ತಾವನೆ, ಪುಟ ೨೮
೧೭೪. ಚನ್ನಬಸವಣ್ಣನವರ ವಚನಗಳು , ವ.ಸಂ. ೯೨೭, ಪುಟ ೪೪೦ ಮತ್ತು ೪೪೧
೧೭೫. ಪ್ರ. ಲೀ , ಗತಿ ೧೩, ಪದ್ಯ ೭೨
೧೭೬. ಪ್ರ. ಲೀ , ಗತಿ ೨೧, ಪದ್ಯ ೧೩
೧೭೭. ಶಿವಯೋಗ ಪ್ರದೀಪಿಕಾ , ದ್ವಿತೀಯ ಪಟಲ, ಪದ್ಯ ೨೨, ಪುಟ ೪೯
೧೭೮. ಶಿವಯೋಗ ಪ್ರದೀಪಿಕಾ , ದ್ವಿತೀಯ ಪಟಲ, ಪದ್ಯ ೨೯, ಪುಟ ೫೩
೧೭೯. ಪ್ರ. ಲೀ , ಗತಿ ೧೮, ಪದ್ಯ ೧೯

೧೮೦. ಪ್ರ. ಲೀ , ಗತಿ ೧೮, ಪದ್ಯ ೨೧
೧೮೧. ವಚನ ಪರಿಭಾಷಾ ಕೋಶ , ಪುಟ ೮೨
೧೮೨. ಶಿವಯೋಗ ಪ್ರದೀಪಿಕಾ , ದ್ವಿತಿಯ ಪಟಲ, ಪದ್ಯ ೩೭, ಪುಟ ೫೭
೧೮೩. ಪ್ರ.ಲೀ. , ಗತಿ ೨೧, ಪದ್ಯ ೧೨
೧೮೪. ಶ್ರೀ ಮದ್ಭಗವದ್ಗೀತಾ , ಅಧ್ಯಾಯ ೬, ಪದ್ಯ ೩೬
೧೮೫. ಓಂಕಾರವಾಣಿ , ವ.ಸಂ. ೧೦೫, ಪುಟ ೪೩
೧೮೬. ಪ್ರ.ಲೀ., ಗತಿ ೨೪, ಪದ್ಯ ೧೦
೧೮೭. ವಚನ ಪರಿಭಾಷಾ ಕೋಶ , ಪುಟ ೫೫
೧೮೮. ಚನ್ನಬಸವಣ್ಣನವರ ವಚನಗಳು , ವ.ಸಂ. ೬೬೮ ಪುಟ ೩೨೦
೧೮೯. ಪ್ರ.ಲೀ. , ಗತಿ ೧೬; ಪದ್ಯ ೧೩
೧೯೦. ಪ್ರ.ಲೀ. , ಗತಿ ೨೫, ಪದ್ಯ ೧೬
೧೯೧. ಚನ್ನಬಸವಣ್ಣನವರ ವಚನಗಳು, ವ.ಸಂ. ೩೦, ಪುಟ ೧೫
೧೯೨. ಸರ್ವಜ್ಞನ ವಚನಗಳು
೧೯೩. ಸರ್ವಜ್ಞನ ವಚನಗಳು
೧೯೪. ಪ್ರ.ಲೀ. ಗತಿ ೧೧, ಪದ್ಯ ೮
೧೯೫. ಶಿವಯೋಗ ಪ್ರದೀಪಿಕಾ , ತೃತೀಯ ಪಟಲ , ಪದ್ಯ ೧೦, ಪುಟ ೭೫
೧೯೬. ಪ್ರ.ಲೀ., ಗತಿ ೨೧, ಪದ್ಯ ೫
೧೯೭. ಪ್ರ.ಲೀ., ಗತಿ ೨೨, ಪದ್ಯ ೫೦
೧೯೮. ಶಿವಯೋಗ ಪ್ರದೀಪಿಕಾ , ಪ್ರಥಮ ಪಟಲ , ಪದ್ಯ ೩೮, ಪುಟ ೨೯
೧೯೯. ಶಿವಯೋಗ ಪ್ರದೀಪಿಕಾ , ತೃತೀಯ ಪಟಲ , ಪದ್ಯ ೩೯, ಪುಟ ೨೯
೨೦೦. ಪ್ರ. ಲೀ. , ಗತಿ ೧೨ , ಪದ್ಯ ೧೪
೨೦೧. ಪ್ರ. ಲೀ. , ಗತಿ ೧೩ , ಪದ್ಯ ೬೨
೨೦೨. ಕೈವಲ್ಯ ಪದ್ಧತಿ , ಯೋಗ ಪ್ರತಿಪಾದನಸ್ಥಲ, ಪದ್ಯ ೭
೨೦೩. ಪ್ರ. ಲೀ. ಗತಿ ೨೪, ಪದ್ಯ ೧೪
೨೦೪. ಶಿವಯೋಗ ಪ್ರದೀಪಿಕಾ , ಚತುರ್ಥ ಪಟಲ, ಪದ್ಯ ೯, ಪುಟ ೧೧೯
೨೦೫. ಶಿವಯೋಗ ಪ್ರದೀಪಿಕಾ , ಚುತುರ್ಥ ಪಟಲ , ಪದ್ಯ ೧೦, ಪುಟ ೧೧೦
೨೦೬. ಶಿವಯೋಗ ಪ್ರದೀಪಿಕಾ , ಚತುರ್ಥ ಪಟಲ, ಪದ್ಯ ೧೧, ಪುಟ ೧೧೧
೨೦೭. ಪ್ರ.ಲೀ. , ಗತಿ ೨೩, ಪದ್ಯ ೭
೨೦೮. ಪ್ರ.ಲೀ. , ಗತಿ ೨೪, ಪದ್ಯ ೩
೨೦೯. ಶಿವಯೋಗ ಪ್ರದೀಪಿಕಾ , ತೃತೀಯ ಪಟಲ , ಪದ್ಯ ೩೨, ಪುಟ ೮೩
೨೧೦. ಕೈವಲ್ಯ ಪದ್ಧತಿ , ಯೋಗಪ್ರತಿಪಾದನ ಸ್ಥಲ, ಪದ್ಯ ೨೧
೨೧೧. ಕೈವಲ್ಯ ಕಲ್ಪವಲ್ಲರಿ , ಯೋಗಪ್ರತಿಪಾದನ ಸ್ಥಲ, ಪದ್ಯ ೧೭
೨೧೨. ಪ್ರ. ಲೀ , ಗತಿ ೧೯, ಪದ್ಯ ೨
೨೧೩. ಪ್ರ.ಲೀ , ಗತಿ ೧೮, ಪದ್ಯ ೨೨
೨೧೪. ಕೈವಲ್ಯ ಪದ್ಧತಿ , ಯೋಗಪ್ರತಿಪಾದನ ಸ್ಥಲ, ಪದ್ಯ ೬

೨೧೫. ಕೈವಲ್ಯ ಕಲ್ಪವಲ್ಲರಿ , ಯೋಗಪ್ರತಿಪಾದನ ಸ್ಥಲ, ಪದ್ಯ ೮
೨೧೬. ಪ್ರ. ಲೀ , ಗತಿ ೧೯ ಪದ್ಯ ೨
೨೧೭. ಪ್ರ. ಲೀ , ಗತಿ ೨೦ ಪದ್ಯ ೬
೨೧೮. ಶಿವಯೋಗ ಪ್ರದೀಪಿಕಾ , ಚತುರ್ಥ ಪಟಲ, ಪದ್ಯ ೪೭, ಪುಟ ೧೩೬
೨೧೯. ಶಿವಯೋಗ ಪ್ರದೀಪಿಕಾ , ಚತುರ್ಥ ಪಟಲ, ಪದ್ಯ ೪೮, ಪುಟ ೧೩೬ ಮತ್ತು ೧೩೭
೨೨೦. ಶಿವಯೋಗ ಪ್ರದೀಪಿಕಾ , ಪಂಚಮ ಪಟಲ, ಪದ್ಯ ೯, ಪುಟ ೧೪೮
೨೨೧. ಪ್ರ. ಲೀ , ಗತಿ ೧೮ , ಪದ್ಯ ೨೫
೨೨೨. ಪ್ರ. ಲೀ , ಗತಿ ೧೮ , ಪದ್ಯ ೨೬
೨೨೩. ಪ್ರ. ಲೀ , ಗತಿ ೨೧ , ಪದ್ಯ ೨೦
೨೨೪. ಸಮಗ್ರ ವಚನ ಸಂಪುಟ , ಸಂಪುಟ ೨, ವ.ಸಂ. ೪೫೯, ಪುಟ ೧೨೭
೨೨೫. ಅಲ್ಲಮನ ವಚನಗಳು , ವ.ಸಂ. ೪೯೩, ಪುಟ ೨೧೩
೨೨೬. ಪ್ರ. ಲೀ , ಗತಿ ೧೯, ಪದ್ಯ ೩೭
೨೨೭. ಪ್ರ.ಲೀ , ಗತಿ ೧೯, ಪದ್ಯ ೫೮
೨೨೮. ಕೈವಲ್ಯ ಕಲ್ಪವಲ್ಲರಿ , ಯೋಗಪ್ರತಿಪಾದನ ಸ್ಥಲ, ಪದ್ಯ ೧೧
೨೨೯. ಉರಿಯುಂಡ ಕರ್ಪೂರ , ಯೋಗಸ್ಥಲ, ಪುಟ ೬೭
೨೩೦. ಪ್ರ.ಲೀ , ಗತಿ ೧೭ , ಪದ್ಯ ೨೬
೨೩೧. ಚನ್ನಬಸವಣ್ಣನವರ ವಚನಗಳು , ಐಕ್ಯ, ಪುಟ ೭೦೩
೨೩೨. ಪ್ರ.ಲೀ , ಗತಿ ೧೮ , ಪದ್ಯ ೨೮
೨೩೩. ಪ್ರ.ಲೀ , ಗತಿ ೧೮ , ಪದ್ಯ ೩೫
೨೩೪. ವಚನಪರಿಭಾಷಾ ಕೋಶ , ಪುಟ ೧೨೭
೨೩೫. ಪ್ರ. ಲೀ , ಗತಿ ೨೦ , ಪದ್ಯ ೬
೨೩೬. ಶಿವಯೋಗ ಪ್ರದೀಪಿಕಾ ಪಟಲ , ಪ್ರಥಮ ಪಟಲ, ಪದ್ಯ ೩೧, ಪುಟ ೨೫
೨೩೭. ಚಿದಾನಂದಾವಧೂತ , ಶ್ರೀ ದೇವಿಮಹಾತ್ಮೆ , ಅಧ್ಯಾಯ ೧೮, ಪದ್ಯ ೨೬
೨೩೮. ಚಿದಾನಂದಾವಧೂತ , ಜ್ಞಾನಸಿಂಧು , ಸಗುಣ ನಿರ್ಗುಣ ಬ್ರಹ್ಮೋಪಾಸನೆ , ಪದ್ಯ ೪೪, ಪುಟ ೩೭೮
೨೩೯. ಪ್ರ.ಲೀ , ಗತಿ ೨೧ , ಪದ್ಯ ೨೨
೨೪೦. ಪ್ರ.ಲೀ , ಗತಿ ೨೨ , ಪದ್ಯ ೫೧
೨೪೧. ಕೈವಲ್ಯ ಪದ್ಧತಿ , ಯೋಗಪ್ರತಿಪಾದನ ಸ್ಥಲ, ಪದ್ಯ ೩೯
೨೪೨. ಪ್ರ.ಲೀ , ಗತಿ ೨೪ , ಪದ್ಯ ೯
೨೪೩. ಅಕ್ಕನ ವಚನಗಳು , ಯೋಗಾಂಗ ತ್ರಿವಿಧಿ, ಪುಟ ೨೬೫
೨೪೪. ಚನ್ನಬಸವಣ್ಣನವರ ವಚನಗಳು , ಲಿಂಗಾನುಭಾವ ಮನೋಜ್ಞಾನ ಸಲ್ಲಾಪ, ಪುಟ ೭೪೦
೨೪೫. ಪ್ರ.ಲೀ , ಗತಿ ೨೨ ಪದ್ಯ ೫೦
೨೪೬. ಚನ್ನಬಸವಣ್ಣನವರ ವಚನಗಳು , ವ.ಸಂ ೧೦೭೪, ಪುಟ ೫೦೩ ಮತ್ತು ೫೦೪
೨೪೭. ಸರ್ವಜ್ಞನ ವಚನಗಳು
೨೪೮. ಪ್ರ.ಲೀ , ಗತಿ ೧೯ , ಪದ್ಯ ೨೦

೨೪೯. ಪ್ರ.ಲೀ , ಗತಿ ೨೪ , ಪದ್ಯ ೨೫
೨೫೦. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ. ಸಂ ೯೨೫, ಪುಟ ೨೫೪ ಮತ್ತು ೨೫೫
೨೫೧. ಪ್ರ.ಲೀ , ಗತಿ ೧೨ , ಪದ್ಯ ೧೬
೨೫೨. ಪ್ರ.ಲೀ , ಗತಿ ೧೮ , ಪದ್ಯ ೧೪
೨೫೩. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ. ಸಂ ೧೫೬, ಪುಟ ೪೦
೨೫೪. ಬಸವಣ್ಣನವರ ಷಟ್‌ಸ್ಥಳದ ವಚನಗಳು , ವ. ಸಂ ೧೨೬, ಪುಟ ೩೩
೨೫೫. ಪ್ರ.ಲೀ , ಗತಿ ೧೩ , ಪದ್ಯ ೬೮
೨೫೬. ಪ್ರ.ಲೀ , ಗತಿ ೧೬ , ಪದ್ಯ ೧೨
೨೫೭. ಪ್ರ.ಲೀ , ಗತಿ ೧೯ , ಪದ್ಯ ೨೪
೨೫೮. ಶಿವಯೋಗ ಪ್ರದೀಪಿಕಾ , ಪ್ರಥಮ ಪಟಲ , ಪದ್ಯ ೪೮, ಪುಟ ೩೪
೨೫೯. ಶಿವಯೋಗ ಪ್ರದೀಪಿಕಾ , ಪ್ರಥಮ ಪಟಲ , ಪದ್ಯ ೪೯, ಪುಟ ೩೪
೨೬೦. ಶಿವಯೋಗ ಪ್ರದೀಪಿಕಾ , ಪ್ರಥಮ ಪಟಲ , ಪದ್ಯ ೫೦, ಪುಟ ೩೫
೨೬೧. ಪ್ರ.ಲೀ , ಗತಿ ೧೬ , ಪದ್ಯ ೧೫
೨೬೨. ಪ್ರ.ಲೀ , ಗತಿ ೧೬ , ಪದ್ಯ ೧೭
೨೬೩. ಪ್ರ.ಲೀ , ಗತಿ ೧೬ , ಪದ್ಯ ೧೮
೨೬೪. ಪ್ರ.ಲೀ , ಗತಿ ೧೬ , ಪದ್ಯ ೧೯
೨೬೫. ಪ್ರ.ಲೀ , ಗತಿ ೧೬ , ಪದ್ಯ ೨೦
೨೬೬. ಪ್ರ.ಲೀ , ಗತಿ ೧೬ , ಪದ್ಯ ೨೧
೨೬೭. ಪ್ರ.ಲೀ , ಗತಿ ೧ , ಪದ್ಯ ೧೨
೨೬೮. ಪ್ರ.ಲೀ , ಗತಿ ೧೯ , ಪದ್ಯ ೨೮
೨೬೯. ಚನ್ನಬಸಣ್ಣನವರ ವಚನಗಳು , ಕರಣ ಹಸಿಗೆ, ಪುಟ ೬೭೨
೨೭೦. ಅಕ್ಕನ ವಚನಗಳು , ವ.ಸಂ. ೧೪೭, ಪುಟ ೧೦೫

ಅಧ್ಯಾಯ - ನಾಲ್ಕು

ಲೋಕದರ್ಶನ

ಅಧ್ಯಾಯ – ೪

ಲೋಕದರ್ಶನ

೧. ಲೋಕವ್ಯವಹಾರ

ಪ್ರಭುಲಿಂಗಲೀಲೆ ಕಾವ್ಯದಲ್ಲಿ ಚಾಮರಸನು ಅಲ್ಲಮಪ್ರಭುಸಂಪ್ರದಾಯವನ್ನು ಪ್ರತಿಪಾದಿಸುವುದಾಗಿ ತಿಳಿಸಿ ಅದರ ನಿರೂಪಣೆಯಲ್ಲಿ ತೊಡಗುತ್ತಾನೆ. ಈ ಸಂಪ್ರಾದಾಯವೆಂದರೆ ವೀರಶೈವಾಚಾರ ಹಾಗೂ ಅದರ ಕ್ರಿಯಾರೂಪವೆಂದರೆ ಶಿವಯೋಗ ಎಂಬುದನ್ನು ನಾವು ಯೋಗದರ್ಶನದಲ್ಲಿ ನೋಡಿದ್ದೇವೆ. ಜನ್ಮವೆತ್ತಿ ಬಂದ ಪ್ರತಿಯೊಬ್ಬ ಮನುಷ್ಯ ಲಿಂಗಾಂಗಸಾಮರಸ್ಯವನ್ನು ಸಾಧಿಸುವ ಪ್ರಯತ್ನದಲ್ಲಿ ಶರೀರವನ್ನು ಸಾಧನ ಮಾಡಿಕೊಂಡು ಅಂತಿಮ ಗುರಿ ತಲುಪುವುದು ಮಹತ್ವದ್ದಾಗಿದೆ. ಮನೋಲಯದ ಮಾರ್ಗವನ್ನವಲಂಬಿಸುವ ಸಾಧಕನು ಪ್ರಾಣಾಯಾಮದ ಕ್ರಮವನ್ನು ಅನುಸರಿಸಬೇಕು. ಇದಕ್ಕಾಗಿ ಯೋಗಾಸನಗಳು ವ್ಯವಸ್ಥಿತವಾಗಿ ಮೂಡಿ ಬರುವುದಕ್ಕೆ ದೈಹಿಕ ಸಮತೋಲನದ ಪಾತ್ರ ಮಹತ್ವದ್ದು. ಆದರೆ ದಿನನಿತ್ಯ ನೋಡುವ ಜನರಲ್ಲಿ ನಾವು ಈ ಉಪಕ್ರಮವನ್ನು ಕಾಣುವುದಿಲ್ಲ. ಏಕೆಂದರೆ ಅವರಾರಿಗೂ ಪ್ರಾಣಾಯಾಮ, ಮನೋಲಯ ಹಾಗೂ ಲಿಂಗಾಂಗಸಾಮರಸ್ಯ ಇವುಗಳ ವಿಚಾರವೇ ಮೂಡಿರುವುದಿಲ್ಲ.

ನಾವು ಸುತ್ತಮುತ್ತ ನೋಡುವ ಜನರಲ್ಲಿ ವೈವಿಧ್ಯತೆಗೆ ಲೆಕ್ಕವಿರುವುದಿಲ್ಲ. ದೈಹಿಕವಾಗಿಯೇ ಸಾಕಷ್ಟು ವೈವಿಧ್ಯತೆಗಳನ್ನು ಪಟ್ಟಿ ಮಾಡಬಹುದು. ಒಂದೇ ಕುಟುಂಬದ ಅಣ್ಣತಮ್ಮಂದಿರಲ್ಲಿ, ಅಕ್ಕತಂಗಿಯರಲ್ಲಿ ಮಾನಸಿಕ ವ್ಯತ್ಯಾಸವನ್ನು ಕಾಣುತ್ತೇವೆ. ಇನ್ನು ಬೇರೆಬೇರೆ ಕುಟುಂಬಗಳ ವಿಷಯವಾಗಿ ಹೇಳುವುದಾದರೆ ಅದಕ್ಕೆ ಕೊನೆಯೇ ಇರುವುದಿಲ್ಲ. ಇಂಥ ಗುಣಸ್ವಭಾವಗಳನ್ನು ಪ್ರತಿಪಾದಿಸುವುದಕ್ಕಾಗಿ ರಚಿತವಾದ ರಾಮಾಯಣ–ಮಹಾಭಾರತಗಳ ಕತೆಗಳನ್ನು ಹೇಳುವುದೂ ಮುಗಿದಿಲ್ಲ, ಕೇಳೂವುದೂ ಮುಗಿದಿಲ್ಲ, ಅದು ಮುಗಿಯುವುದೂ ಇಲ್ಲ. ಕಾರಣವೆಂದರೆ ಈ ಭೂಮಿಯ ಮೇಲೆ ಬದುಕಿಗಾಗಿ

[illegible]

[illegible]

[illegible]

[illegible]

[illegible]

ಹೋರಾಡುವ ಪ್ರತಿಯೊಬ್ಬನೂ ಅವುಗಳ ಘಟನೆಗಳಲ್ಲಿ ತನ್ನ ಬದುಕಿನ ಘಟನೆಗಳ ಪ್ರತಿಬಿಂಬಗಳನ್ನು ಕಾಣುತ್ತಿರುತ್ತಾನೆ. ಜಗತ್ತಿನ ವಿವಿಧ ಜನಾಂಗಗಳ ಆಚಾರ-ವಿಚಾರಗಳನ್ನು ಲಕ್ಷದಲ್ಲಿಟ್ಟುಕೊಂಡು ರಚಿತವಾದ ಸಾಹಿತ್ಯ ವಿಪುಲವಾಗಿದೆ, ವೈವಿಧ್ಯತೆಯಿಂದ ತುಂಬಿದೆ. 'ಕಾವ್ಯಗಳು, ನಾಟಕಗಳು, ಕತೆ-ಕಾದಂಬರಿಗಳು, ಮತ್ತಿತರ ಸಾಹಿತ್ಯ ಪ್ರಕಾರಗಳು ನಿರೂಪಿಸುವುದು ಏನನ್ನು' ಎಂದು ಕೇಳಿದರೆ ಉತ್ತರ ಹೊರಡುವುದು 'ಮಾನವನ ಅಂತರಂಗ ಮತ್ತು ಬಹಿರಂಗಗಳನ್ನು' ಎಂದು. ಇಂಥ ಕ್ರಿಯೆಗಳಲ್ಲಿ ನಾವು ಕಾಣುವುದು ಮನಸ್ಸು ಬಾಹ್ಯ ಪ್ರಪಂಚದ ಆಗುಹೋಗುಗಳ ಜೊತೆಗೆ ನಡೆಸುವ ತಾಕಲಾಟವನ್ನು. ಈ ಮನಸ್ಸು ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ಬಾಹ್ಯದಲ್ಲಿ ತೋರುವ ಆಕರ್ಷಣೆಯಿಂದ ಕೂಡಿದ ವಿಷಯಗಳೊಂದಿಗೆ ನಡೆಸುವ ಜಗ್ಗಾಟವನ್ನು ಆತ್ಮಜ್ಞಾನಿಗಳು ಲೌಕಿಕ ಬದುಕೆನ್ನುತ್ತಾರೆ. ಲೋಕವೆಂದರೆ ಚರಾಚರಗಳೆಲ್ಲವನ್ನೂ ಒಳಗೊಂಡ ವಿಶ್ವದ ನಡವಳಿಕೆ.[1]

ವಿಶ್ವ ಸಾಹಿತ್ಯದ ಭಾಗವಾಗಿರುವ ಪ್ರಭುಲಿಂಗಲೀಲೆಯಲ್ಲಿ ಚಾಮರಸನು ವೀರಶೈವಾಚರಣೆಯನ್ನು ಪ್ರತಿಪಾದಿಸಿದ್ದರೂ ಅದಕ್ಕೆ ಪೂರಕವಾಗುವಂತೆ ಲೌಕಿಕಾಚರಣೆಯನ್ನು ಬಳಸಿಕೊಂಡಿದ್ದಾನೆ. ಕವಿಪ್ರತಿಭೆಯ ಲೀಲಾವ್ಯಾಪಾರಕ್ಕೆ ಲೋಕವ್ಯವಹಾರವೇ ಆಧಾರ.[2] ಆದುದರಿಂದ ಕಾವ್ಯದಲ್ಲಿ ಮೂಡಿ ಬಂದಿರುವ ಲೌಕಿಕ ಬದುಕು ಯಾವ ಯಾವ ಪ್ರಸಂಗಗಳಲ್ಲಿ ಯಾವ ಯಾವ ಮಟ್ಟದಲ್ಲಿ ರೂಪುಗೊಂಡಿದೆಯೆಂಬುದನ್ನು ನೋಡುವುದು ಇಲ್ಲಿಯ ಉದ್ದೇಶವಾಗಿದೆ.

ಶಿವಯೋಗಾಚರಣೆಯ ಒಂದು ಭಾಗವಾಗಿ ಕುಂಡಲಿನೀ ಸರ್ಪವು ಜಾಗೃತವಾಗುವುದು ಅವಶ್ಯವೆಂಬುದನ್ನು ಲಕ್ಷಿಸುತ್ತ ಅದು ಅಧೋಕುಂಡಲಿನಿ, ಮಧ್ಯಕುಂಡಲಿನಿ ಹಾಗೂ ಊರ್ಧ್ವಕುಂಡಲಿನಿ ಎಂದು ಮೂರು ತೆರನಾಗಿ ಕಾರ್ಯ ನಿರ್ವಹಿಸುತ್ತದೆಂಬುದನ್ನು ನೋಡಿದ್ದೇವೆ. ಇದಕ್ಕನುಗುಣವಾಗಿ ಪ್ರಭುಲಿಂಗಲೀಲೆಯಲ್ಲಿ ಚಾಮರಸನು ತನ್ನ ಕಾವ್ಯಕ್ಕೆ ಪೂರಕವಾಗಿ ವಿವಿಧ ಮನೋವೃತ್ತಿಯ ಪಾತ್ರಗಳನ್ನು ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ನೋಡಬೇಕು. ಆದಕ್ಕಾಗಿ ಕಾವ್ಯದಲ್ಲಿ ಮೂಡಿ ಬಂದಿರುವ ಪಾತ್ರಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಲಾಗುತ್ತದೆ. ಇವರಲ್ಲಿ ಊರ್ಧ್ವಕುಂಡಲಿನಿಯವರು ಶಿವಾಯೋಗಾಚರಣೆಯಲ್ಲಿ ಮುನ್ನಡೆಯುವವರಾಗಿದ್ದರೆ ಅಧೋಕುಂಡಲಿನಿಯವರು ಇಂಥವರ ಪ್ರಯತ್ನಗಳ ವಿರುದ್ಧ ಮಾರ್ಗದಲ್ಲಿ ಸಾಗುವವರೆನಿಸಿಕೊಳ್ಳುತ್ತಾರೆ. ಇವರನ್ನೇ ಇಡಿಯಾಗಿ ಲೌಕಿಕ ಜೀವಿಗಳೆಂದು ಕರೆಯುವುದು. ಇವರಿಗೆ ಯೋಗಾಚರಣೆಯ ಯಾವ ಸ್ಪರ್ಶವೂ ಇರದೆ ಕೇವಲ

[illegible]

ಇಂದ್ರಿಯಸುಖವನ್ನು ಸಾಕ್ಷಾತ್ಕರಿಸಿಕೊಂಡವರಂತೆ ತೋರುತ್ತಾರೆ. ಈ ಎರಡು ವರ್ಗಗಳ ನಡುವೆ ಸ್ಥಾನ ಪಡೆಯುವವರು ಔಚಿತ್ಯಪೂರ್ಣವಾಗಿ ಬದುಕುವ ಸಂಯಮ ಸ್ವಭಾವದವರು.

ಇಂದ್ರಿಯ ಸುಖವೆನ್ನುವುದು ತಾತ್ಕಾಲಿಕ ಸುಖ. ಆದರಲ್ಲಿಯೇ ದೀರ್ಘ ಸಮಯದ ವರೆಗೆ ಮುಂದುವರೆಯುವುದು ಯಾರಿಂದಲೂ ಸಾಧ್ಯವಿಲ್ಲ. ಹಸಿವಾದಾಗ ಆಹಾರ ಸೇವಿಸಿ ತೃಪ್ತಿ ಪಡುವುದು ಇಂದ್ರಿಯ ಸುಖದ ಒಂದು ಅಂಶ. ಹಾಗೆಯೇ ಸಂಗೀತ ಕೇಳುವುದು, ಸುಂದರ ದೃಶ್ಯಗಳನ್ನು ಆಸ್ವಾದಿಸುವುದು ಮುಂತಾದವುಗಳು. ಹೀಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳ ಕ್ರಿಯೆಗಳಲ್ಲಿ ಇಂದ್ರಿಯಗಳನ್ನು ಸತತವಾಗಿ ತೊಡಗಿಸುವುದು ಸಾಧ್ಯವಾಗುವುದಿಲ್ಲ. ಅದಕ್ಕೆ ಶಾರೀರಿಕ ವ್ಯವಸ್ಥೆಯೂ ಸಮ್ಮತಿಸುವುದಿಲ್ಲ. ಮನಸ್ಸು ತನಗೆ ದಣಿವಾದಾಗ ತನ್ನ ಕುದುರುಗಳಂತೆ ಬಳಸುವ ಇಂದ್ರಿಯಗಳನ್ನು ಬಿಟ್ಟು ವಿಶ್ರಾಂತಿಯನ್ನು ಅರಸುತ್ತದೆ. ಇಂದ್ರಿಯಗಳೂ ಒಂದು ಹಂತದಲ್ಲಿ ಸೋತು ತಟಸ್ಥವಾಗಿ ಬಿಡುತ್ತವೆ. ಅವುಗಳಿಗೆ ವಿಶ್ರಾಂತಿ ಅವಶ್ಯವಾಗುತ್ತದೆ. ಹೀಗೆ ಮನಸ್ಸಿನ ಪ್ರಚೋದನೆಯಿಂದ ಕಾರ್ಯವೆಸಗುವ ಇಂದ್ರಿಯಗಳು ಅಥವಾ ಇಂದ್ರಿಯಗಳನ್ನು ಸವಾರಿ ಮಾಡಿ ಕಾರ್ಯ ಪ್ರವೃತ್ತವಾಗುವ ಮನಸ್ಸು ಇವುಗಳಲ್ಲಿ ಯಾವುದಾದರೊಂದು ವಿಭಾಗ ತಟಸ್ಥವಾದಾಗ ಇನ್ನೊಂದು ಕೂಡ ತಟಸ್ಥವಾಗಬೇಕಾಗುತ್ತದೆ. ಸುರತವು ಇಂಥದೇ ಒಂದು ಕ್ರಿಯೆ.

ಮುಖ್ಯ ಪಾತ್ರಗಳನ್ನು ಮೂರು ತೆರನಾಗಿ ವಿಂಗಡಿಸಿದರೆ ಇಡಿಯಾಗಿ ಲೌಕಿಕಾಚರಣೆಯಲ್ಲಿ ಬದುಕುವವರೆಂದರೆ ಮಾಯಾದೇವಿ ಮತ್ತು ಕೌಶಿಕ. ಈರ್ವರಿಗೂ ಲೌಕಿಕವೇ ಹಾಸು ಮತ್ತು ಹೊಕ್ಕು. ಉಳಿದವರಲ್ಲಿ ಇಡಿಯಾಗಿ ಯೌಗಿಕ ಬದುಕಿಗೆ ಶರಣಾದವರದು ಒಂದು ಗುಂಪು ಹಾಗೂ ಮನಃ ಪರಿವರ್ತನೆಯಿಂದಾಗಿ ತಾಟಸ್ಥ್ಯದಿಂದ ಮೇಲೆದ್ದು ಯೋಗಾಚರಣೆಗೆ ಆಕರ್ಷಿತರಾದವರದು ಎರಡನೆಯ ಗುಂಪು. ಈ ಎರಡನೆಯ ಗುಂಪಿನಲ್ಲಿ ನಾವು ಕಾಣುವ ಪಾತ್ರಗಳೆಂದರೆ ಗೋರಕ್ಷ, ಗೊಗ್ಗಯ್ಯ ಹಾಗೂ ತಕ್ಕ ಮಟ್ಟಿಗೆ ಸೊನ್ನಲಿಗೆಯ ಸಿದ್ಧರಾಮ. ಇವರಲ್ಲಿ ಗೋರಕ್ಷ ಕಾರ್ಯಸಿದ್ಧಿಯೇ ಸಾಧನೆಯೆಂದು ತಿಳಿದು ಅದನ್ನು ಸಾಧಿಸಿ ವಜ್ರಕಾಯದವನಾಗಿ ಬದುಕುತ್ತಿದ್ದವನು. ಅಲ್ಲಮನೊಂದಿಗೆ ಜರುಗಿದ ತಾಕಲಾಟದಲ್ಲಿ ಕಾಯಸಿದ್ಧಿಗಿಂತ ಕರಣಸಿದ್ಧಿ ಶ್ರೇಷ್ಠವೆಂದರಿದು 'ಕಾಯ ಮಾಯಾ ಛಾಯದಾಗಿನ ದಾಯವನು ಕಳೆದುಳಿದು' ಅಲ್ಲಮನ ಮಾರ್ಗದಲ್ಲಿ ಮುನ್ನಡೆಯುತ್ತಾನೆ. ಸೊನ್ನಲಿಗೆಯ ಸಿದ್ಧರಾಮ ಗೋರಕ್ಷನಿಗಿಂತ ಒಂದು ಹೆಜ್ಜೆ ಮುಂದೆ ಹೋದವನು. ಗೋರಕ್ಷನು ಪಿಂಡದ ಸಾಧನೆಯೇ ಪರಮ ಸಾಧನೆಯೆಂದು ತಿಳಿದರೆ

'ಪಿಂಡದೊಳು ಪಿರಿದೆನಿಪ ನಾಡೀ ಮಂಡಲಂಗಳ' ಸಾಧನೆಯೇ ಪರಮಸಾಧನೆಯೆಂದು ತಿಳಿದವನು ಸಿದ್ಧರಾಮ. ಅವನೂ ಅಲ್ಲಮನ ಸಂಪರ್ಕದಲ್ಲಿ ಬಂದು ಶಿವಯೋಗಿಯಾದವನು. ಗೊಗ್ಗಯ್ಯನು ಯಾವ ಸಾಧನೆಯನ್ನೂ ತಿಳಿಯದ ಸಾಮಾನ್ಯ ಜೀವಿ. ಮಧ್ಯಕುಂಡಲಿನಿಯ ತಾಟಸ್ಥ್ಯದ ಬದುಕನ್ನು ಸಾಗಿಸುತ್ತಿದ್ದ ಈ ಮೂವರು ಊರ್ಧ್ವಮುಖಿಗಳಾದರೆ ಉಳಿದ ಪ್ರಮುಖ ಪಾತ್ರಗಳವರು ಊರ್ಧ್ವಕುಂಡಲಿನಿಯ ಬದುಕನ್ನು ಆಯ್ದುಕೊಂಡವರು. ಮೂರೂ ವರ್ಗದ ಜನರನ್ನು ಹಾಗೂ ಅವರ ಸನ್ನಿವೇಶಗಳನ್ನು ರೂಪಿಸಿರುವ ಚಾಮರಸನು ತನ್ನ ಕಾವ್ಯದಲ್ಲಿ ಅವರವರ ಸ್ಥಾನಗಳನ್ನು ನಿರ್ದೇಶಿಸುತ್ತ ಕಾವ್ಯದ ಉದ್ದೇಶವನ್ನು ಸಫಲಗೊಳಿಸಲು ಅವರ ಲೌಕಿಕ ಆಚರಣೆಗಳನ್ನು ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ಲಕ್ಷಿಸೋಣ.

೨ ಲೌಕಿಕರು

(ಅ) ಮಾಯಾದೇವಿ

ಕಾವ್ಯದಲ್ಲಿ 'ಮಾಯಾ' ಶಬ್ದವನ್ನು ನಾವು ಪ್ರಥಮವಾಗಿ ಕಾಣುವುದು 'ಮಂಗಲಾಚರಣದ ಗತಿ'ಯ ಆರನೆಯ ಪದ್ಯದಲ್ಲಿ

ಶರಣುವೊಕ್ಕ ಸಮಸ್ತರಂತಃ
ಕರಣದಲ್ಲಿಯನಾದಿ ಮಾಯಾಂ
ಬರದ ಮೈಲಿಗೆದೊಳೆದು ....

ಎಂದು ಮಡಿವಾಳ ಮಾಚಿದೇವನ ಲಕ್ಷಣವನ್ನು ಎತ್ತಿ ತೋರಿಸುತ್ತ ಕವಿ ಅವನಿಗೆ ಶರಣಾರ್ಥಿಗಳನ್ನು ಸಲ್ಲಿಸುತ್ತಾನೆ. ಇದಾದ ನಂತರ ಎರಡನೆಯದಾದ 'ಪಾರ್ವತೀ ಪರಮೇಶ್ವರ ಸಂವಾದದ ಗತಿ'ಯಲ್ಲಿ ನೇರವಾಗಿ ಮಾಯೆಯ ದರ್ಶನವನ್ನು ಮಾಡಿಕೊಳ್ಳುತ್ತೇವೆ. ಪಾರ್ವತಿಯ ಬದಿಯಲ್ಲಿ ಸತ್ವ-ರಜ-ತಮೋಗುಣಗಳನ್ನು ಹೊಂದಿದವರ ನಡುವೆ ಮಾಯೆ ನಮಗೆ ಪ್ರಥಮವಾಗಿ ಗೋಚರಿಸುತ್ತಾಳೆ. ಭೂಲೋಕದಲ್ಲಿ ಅಲ್ಲಮನನ್ನು ಸುಲಭವಾಗಿ ಒಲಿಸಿಕೊಂಡು ನಿಜವನ್ನು ತಿಳಿಯುವುದಕ್ಕಾಗಿ ಪೈಜೆ ಮಾಡಿ ಗಿರಿಜೆಯು ತನ್ನ ತಾಮಸ ಕಳೆಯ ಮೂರುತಿಯಾದ ಮಾಯೆಯನ್ನು ಆ ಕಾರ್ಯಕ್ಕೆ ತಿರುಗಿಸುತ್ತಾಳೆ.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಬಳಕಲಂಬಿಕೆ ತನ್ನ ತಾಮಸ
ಕಳೆಯ ಮೂರುತಿಯಾದ ಮಾಯೆಯ
ನಿಳೆಯೊಳುದಯಿಸಿಯಲ್ಲಮನ ನೀನಱಿದು ಬಾಯೆನಲು ।
ತಿಳಿವೆನಾತನ ನಿಜವನಥವಾ
ಸೆಳೆದನಾದೊಡೆ ಮುಟ್ಟಿ ಹಿಡಿಕೊಂ
ಡೆಳೆದು ತಹೆನಾನೆನುತ ಪ್ರೈಜೆಯ ನುಡಿದಳಾ ಮಾಯೆ ॥ [1]

ಹೀಗೆ ಉನ್ಮತ್ತವೃತ್ತಿಯ ಭ್ರಾಂತಿಯಲ್ಲಿ ತನ್ನ ಮಿತಿಯನ್ನು ಅರಿಯದೆ ಉತ್ಕಂಠಿತಳಾಗಿ ಮಾಯೆ ಭೂಲೋಕ ತಲುಪುವುದನ್ನು ಕಾಣುತ್ತೇವೆ. ಮೂರನೆಯದಾಗಿ 'ಮಾಯೆ ಹುಟ್ಟಿದ ಗತಿ'ಯಲ್ಲಿ ಭೂಲೋಕದಲ್ಲಿ ಮಮಕಾರ-ಮೋಹಿನಿಯರ ಮಗಳಾಗಿ ಹುಟ್ಟಿದ ಮಾಯೆಯ ವಿವರಣೆ ನಮ್ಮ ಮುಂದೆ ಅರಳತೊಡಗುತ್ತದೆ.

ಪ್ರಾರಂಭದಲ್ಲಿ ಸಾಂದರ್ಭಿಕವಾಗಿ ಬನವಾಸಿ ಪಟ್ಟಣ, ಅಲ್ಲಿಯ ಸಸ್ಯಸಂಪತ್ತು; ಪಕ್ಷಿ ಸಂಕುಲ, ರಾಜಧಾನಿಯ ಬೀದಿಗಳು, ಮುಂತಾದ ಅಂಶಗಳನ್ನು ತಿಳಿಸುತ್ತ ಅಲ್ಲಿ ಮಮಕಾರನೆಂಬವನು ಅರಸನಾಗಿದ್ದನೆಂದು ತಿಳಿಸುತ್ತಾನೆ ಕವಿ. ಬನವಾಸಿಯ ಅರಸ ಮಮಕಾರ ಮತ್ತು ರಾಣಿ ಮೋಹಿನಿದೇವಿ. ಇವರಿಗೆ ಜನಿಸಿದವಳು ಮಾಯಾದೇವಿ. ಈ ರಾಜದಂಪತಿಗಳು ಎಂಥ ಅಸದೃಶ ಜೋಡಿಯಾಗಿದ್ದರೆಂದರೆ ಅವರಿಗೆ ಯಾರನ್ನು ಹೋಲಿಸಬೇಕೆಂಬುದು ಕವಿಗೇ ಸಮಸ್ಯೆಯಾಗಿ ಪರಿಣಮಿಸುತ್ತದೆ. ಇಂಥವರ ವಂಶದಲ್ಲಿ ಮೂಡಿ ಬಂದವಳು ಮಾಯೆ. ಆದುದರಿಂದ ಅವಳ ಜನನದೊಂದಿಗೇ ತಪಸ್ಸಮಾಧಿಗಳಲ್ಲಿದ್ದ ತಪಸ್ವಿಗಳ ಚಿತ್ತವು ಕಾಮವಿಹ್ವಲವಾಗುತ್ತದೆ, ಮಾಯಾಮೋಹವು ಸುತ್ತಲೂ ಆವರಿಸುತ್ತದೆ.

ಈ ಗತಿಯನ್ನು ಪ್ರಾರಂಭಿಸುವುದಕ್ಕೆ ಮೊದಲು ಚಾಮರಸ ಬಳಸಿಕೊಂಡಿರುವ ಅಲ್ಲಮಪ್ರಭುವಿನ ಎರಡು ವಚನಗಳಲ್ಲಿ ದೇವರುಗಳು, ದೇವತೆಗಳು, ಪ್ರಮಥಗಣಗಳು ಮುಂತಾದವರೆಲ್ಲ ಮಾಯೆಯ ಕಾಲುಗಾಹಿನ ಸರಮಾಲೆ ಎಂದು ತಿಳಿಸುತ್ತ ಬ್ರಹ್ಮ-ವಿಷ್ಣು-ರುದ್ರರನ್ನೂ ಅಂದರೆ ಸೃಷ್ಟಿ-ಸ್ಥಿತಿ-ಲಯಗಳ ಅಧಿಕಾರಿಗಳನ್ನೂ ಮಾಯೆ ನುಂಗಿತ್ತೆಂದು ಸೂಚಿಸಲಾಗಿದೆ. ಇಂಥ ಮಾಯೆಯು ದೇವ, ದಾನವ, ಮಾನವರುಗಳನ್ನು ಡಾವಣಿಯ ದನವಾಗಿ ಕಟ್ಟುವವಳೆಂದು ಚಾಮರಸನ ಅಭಿಪ್ರಾಯ. ಹೀಗೆ ಮಾಯೆಯ ಜನನದಿಂದಾಗಿ ಋಷಿ-ಮುನಿಗಳ, ಸಮಾಧಿವಂತರ ಚಿತ್ತವು

ಸಂಚಲವಾಗಲಾಗಿ ದೂರ್ವಾಸ ಮುನಿಯು ಅವರಲ್ಲಿಗೆ ಬಂದು ಗಿರಿಜೆಯ ತಾಮಸ ಗುಣವು ಮಾಯೆಯಾಗಿ ಬಂದಿರುವುದನ್ನು ತಿಳಿಸುತ್ತ ಅದಕ್ಕೆ ಕಾರಣವನ್ನು ತಿಳಿಸಿ ಅವರೆಲ್ಲ ಗುರುಗುಹೇಶ್ವರನಲ್ಲಿ ಚಿತ್ತವಿಡುವಂತೆ ಹೇಳಿ ಹೊರಟು ಹೋಗುತ್ತಾನೆ.

ಜಗತ್ತು ಭಯದಿಂದ ಗಡಗಡ ನಡುಗುವಂತೆ ಯೌವನವತಿಯಾದ ಮಾಯೆಯಲ್ಲಿ ಸರ್ವಕಲೆಗಳು ಪರಿಪೂರ್ಣಾವಸ್ಥೆಯನ್ನು ತಲುಪುತ್ತದೆ. ಆಗ ತಂದೆ ಮಮಕಾರ ಅವಳು ಕನ್ಯಾಮಾಡದೊಳಗಿದ್ದುಕೊಂಡು ಕುಶಲ ಶಾಸ್ತ್ರಗಳಲ್ಲಿ ಹಾಗೂ ವಿದ್ಯೆಗಳಲ್ಲಿ ಪರಿಣತಿ ಪಡೆಯುವಂತೆ ಮಾಡುತ್ತಾನೆ. ತನ್ನ ತನುಜೆಯ ಕೈ ಹಿಡಿಯುವವನ ಬಗ್ಗೆ ವಿಚಾರಿಸತೊಡಗುತ್ತಾನೆ. ಅವನಲ್ಲಿ ಬಂದ ಗುರು ಅಹಂಕಾರಾಚಾರ್ಯನು ಮಾಯಾದೇವಿಯು ಕಾರಣಕನ್ಯೆಯೆಂದು ನಿಶ್ಚಯಿಸಿ ಅವಳು ಸದಾಶಿವನಿಗೆ ಸಲ್ಲುವವಳೆಂದು ಹೇಳುತ್ತಾನೆ. ಮಾನವ ಶರೀರಿಗಳಲ್ಲಿ ಉಚಿತ ಭಕ್ತಿಯನ್ನು ಮಾಡುವವರ ಇಚ್ಛೆಯನ್ನು ಶಿವನು ಪೂರೈಸುವನೆಂದು ತಿಳಿಸಿ, ಮಾಯೆಗೆ ಉಪದೇಶವನ್ನಿತ್ತು ತೆರಳುತ್ತಾನೆ. ಇದಕ್ಕನುಗುಣವಾಗಿ ಅವಳು ನಿತ್ಯ ನೇಮವನ್ನು ಹಿಡಿದು ಮನೋವಲ್ಲಭನ ಬಯಕೆಯಲ್ಲಿ ಮಧುಕೇಶ್ವರನನ್ನು ಪೂಜಿಸತೋಡಗುತ್ತಾಳೆ.

'ಮಾಯೆ ಮಧುಕನಾಥನ ಪೂಜಿಸಿದ ಗತಿ'ಯಲ್ಲಿ ಕವಿ ಚಾಮರಸ ನಮಗೆ ಮಾಯೆಯ ಸ್ವರೂಪದರ್ಶನ ಮಾಡಿಸುತ್ತಾನೆ. ಮದುಕೇಶ್ವರನಿಗೆ ಪೂಜೆಯನ್ನು ಸಲ್ಲಿಸುವುದಕ್ಕೆ ಮೊದಲು ಮಾಯೆಯನ್ನು ಅವಳ ದಾದಿಯರು ಶೃಂಗರಿಸುವಾಗಿನ ಮತ್ತು ಅವರೆಲ್ಲ ತಮ್ಮ ಒಡತಿಯೊಂದಿಗೆ ಪೂಜೆಗಾಗಿ ಹೋಗುವಾಗಿನ ದೃಶ್ಯಗಳನ್ನು ಚಿತ್ರಿಸುವಲ್ಲಿ ತನ್ನೆಲ್ಲ ಕಲಾತ್ಮಕತೆಯನ್ನು ಬಳಸಿಕೊಂಡಿದ್ದಾನೆ. ಶೃಂಗಾರ ರಸದಲ್ಲಿ ಅದ್ದಿ ತೆಗೆದ ಮಾಯೆ ಮತ್ತು ಅವಳ ಸಖಿಯರು ನಮ್ಮ ಮುಂದೆ ಪ್ರತ್ಯಕ್ಷವಾಗುತ್ತಾರೆ. ಪಾರ್ವತಿಗೆ ಜಗನ್ಮೋಹಿನಿ ಎಂಬ ಹೆಸರೂ ಇದೆ. ಈ ಹಿನ್ನೆಲೆಯಲ್ಲಿ ಅವಳ ತಾಮಸಗುಣವೇ ರೂಪಾಗಿ ಬಂದಿರುವ ಮಾಯೆಯ ಮೋಹಕ ಗುಣವನ್ನು ವರ್ಣಿಸುವಲ್ಲಿ ಕವಿಯ ದೃಷ್ಟಿಕೋನವನ್ನು ಲಕ್ಷಿಸಬೇಕು. ಎಂಟು ತಾಮಸ ಗುಣಗಳಲ್ಲಿ ಅಜ್ಞಾನ, ಮೋಹ, ಚಾಪಲ್ಯ ಇವುಗಳನ್ನು ವರ್ಣಿಸುವುದಕ್ಕೆ ಮಾಯೆಯ ಷೋಡಶ ಕಲೆಗಳನ್ನು ಹಾಗೂ ಅವಳ ಮನಸ್ಥಿತಿಯನ್ನು ಕವಿ ಕಾಮಶಾಸ್ತ್ರಜ್ಞನಾಗಿ ಹಾಗೂ ನಾಟ್ಯಶಾಸ್ತ್ರಜ್ಞನಾಗಿ ಹೇಗೆ ನೋಡಿದ್ದಾನೆಂಬುದನ್ನು ಈಗ ನೋಡೋಣ.

[illegible]

ನಾಲ್ಕನೆಯ ಗತಿಯ ಎರಡನೆಯ ಪದ್ಯದಲ್ಲಿ ಮಾಯಾದೇವಿ ಮಂಚ ಇಳಿಯುವಾಗಿನಿಂದ ಮೊದಲುಗೊಂಡು ಮುವ್ವತ್ತೈದನೆಯ ಪದ್ಯದಲ್ಲಿ ಮಧುಕನಾಥೇಶ್ವರನ ಗುಡಿಗೆ ತಲುಪುವ ವರೆಗೆ ಕವಿ ಮಾಯೆಯನ್ನು ಮತ್ತು ಅವಳ ಸಖಿಯರನ್ನು ಪ್ರಾಕೃತಿಕ ಸೌಂದರ್ಯದ ದೃಷ್ಟಿಯಿಂದ ವರ್ಣಿಸಲಿಕ್ಕೆ ಮೀಸಲಿಟ್ಟಿದ್ದಾನೆ. ಸಖಿಯರು ತಮ್ಮ ಒಡತಿಗೆ ವೇಷಭೂಷಣಗಳನ್ನು ತೊಡಿಸುವುದರಲ್ಲಿ ಹಾಗೂ ಅವಳೊಂದಿಗೆ ಗುಡಿಗೆ ಹೋಗಿ ತಲುಪುವುದರಲ್ಲಿ ನಾಟ್ಯಶಾಸ್ತ್ರದ ಹಾಗೂ ಕಾಮಶಾಸ್ತ್ರದ ದೃಷ್ಟಿಗಳು ಪ್ರಮುಖವಾಗಿವೆ. ಇದರ ನಂತರದ ಭಾಗದಲ್ಲಿ ಮಾಯೆ ಮಧುಕನಾಥನ ಪೂಜೆಯಲ್ಲಿ ತೊಡುಗುವುದನ್ನು ಹಾಗೂ ಸಖಿಯರು ಅದನ್ನು ನೆರವೇರಿಸುವಲ್ಲಿ ಸಹಾಯಕರಾಗುವುದನ್ನು ಕಾಣುತ್ತೇವೆ. ನಾಲ್ವತ್ತೊಂಬತ್ತನೆಯ ಪದ್ಯದಲ್ಲಿ ಪೂಜೆ ಮುಗಿಸಿಕೊಂಡು ಅವಳು ರಂಗಮಂಟಪಕ್ಕೆ ಬರುತ್ತಾಳೆ. ಮುಂದೆ ಸಖಿಯರೆಲ್ಲ ಅವಳನ್ನು ಲಾಸ್ಯಕ್ಕೆ ಸಿದ್ಧಗೊಳಿಸುವುದನ್ನು ಹಾಗೂ ಅವಳು ಅದರಲ್ಲಿ ಲೀನವಾಗುವುದನ್ನು ಕಾಣುತ್ತೇವೆ. ಅವಳ ಭಕ್ತಿಯ ಇಂಗಿತವನ್ನು ಗುಹೇಶ್ವರನು ಅರಿದನೆಂದು ತಿಳಿಸುವಲ್ಲಿ ಕವಿ ಗತಿಯನ್ನು ಮುಕ್ತಾಯಗೊಳಿಸುತ್ತಾನೆ.

ನರ್ತಕಿಯರು ಹನ್ನೆರಡು ವರ್ಷ ಪ್ರಾಯದಿಂದ ತೊಡಗಿ ಇಪ್ಪತ್ತರ ಹರೆಯದ ವರೆಗೆ ಉತ್ತಮರೆಂದು ನಾಟ್ಯಶಾಸ್ತ್ರವು ಸೂಚಿಸುತ್ತದೆ.[9] ಆಂಗ್ಲ ಭಾಷೆಯಲ್ಲಿ (teenagers) ಅಥವಾ ಹದಿಹರೆಯದವರು ಎಂದು ಸೂಚಿಸುವ ವಯೋಮಿತಿಯನ್ನು ಇದು ಧ್ವನಿಸುತ್ತದೆ. teeanage ಕ್ಕೆ ಕೆಳಗೊಂದು ವರ್ಷ, ಮೇಲೊಂದು ವರ್ಷ ಹಚ್ಚಿಸಲಾಗಿದೆಯಷ್ಟೇ. ಅವರದು ಅತಿ ಎತ್ತರವೂ ಅಲ್ಲದ, ಅತಿ ಗಿಡ್ಡವೂ ಅಲ್ಲದ ನಿಲುವಾಗಿರಬೇಕು. ಅವರು ಹೆಚ್ಚು ಸ್ಥೂಲವಲ್ಲದವರು ಅಥವಾ ಕೃಶವಲ್ಲದವರು ಆಗಿರಬೇಕು. ಚೆಲುವಾದ ಮೊಗ, ನಿಡಿದಾದ ಬೊಗಸೆಗಣ್ಣುಗಳು, ಶಿಲ್ಪದಲ್ಲಿ ಕೆತ್ತಿ ಇಟ್ಟ ಹಾಗೆ ಸ್ಫುಟವಾಗಿರುವ ಅಂಗಾಂಗಗಳು, ತುಂಬಿದ ವಕ್ಷಸ್ಥಲ ಮತ್ತು ನಿತಂಬಗಳು ಅವರಿಗಿರಬೇಕಾದುದು ಅವಶ್ಯ. ಇದರ ಜೊತೆಗೆ ಅವರು ನೃತ್ಯದ ಗತಿಯಲ್ಲಿ ಚೆನ್ನಾಗಿ ನುರಿತವರು, ಆಕರ್ಷಕವಾದ ಗುಣದಿಂದ ಕೂಡಿದವರು, ಸಂಭಾಷಣ ಚತುರೆಯರು, ನಿತ್ಯ ಅಲಂಕಾರಪ್ರಿಯೆಯರು ಹಾಗೂ ಗುರುಹಿರಿಯರಲ್ಲಿ–ದೇವದೇವತೆಗಳಲ್ಲಿ ಭಕ್ತಿಯುಳ್ಳವರು ಆಗಿರಬೇಕು.[10] ಚಾಮರಸನು ಲಾಸ್ಯಕ್ಕೆ ಮಾಯೆಯನ್ನು ತರುವುದಕ್ಕೆ ಮೊದಲು ಈ ಗುಣಗಳ ಸ್ಪರ್ಶವನ್ನು ಅವಳು ಅವನಿಂದ ಪಡೆದುಕೊಂಡಿರುವುದನ್ನು ಕಾಣುತ್ತೇವೆ.

ಮಾಯೆ ಬಾಲ್ಯಾವಸ್ಥೆಯನ್ನು ದಾಟಿ ಯೌವನಕ್ಕೆ ಕಾಲಿಡುವ ಪ್ರಸಂಗವನ್ನು ಕವಿ ಚಿತ್ರಿಸಿದುದು ಹೀಗೆ–

ಮನದ ಮಾತಿನ ರೀತಿಗಳು ಕ
ಣ್ಣಿನಲಿ ಕೈಗಳ ಸಂಜ್ಞೆಗಳು ಹು
ಬ್ಬಿನಲಿ ಸೊಬಗಿನ ಸೌಮ್ಯತೆಯ ಸಂಗ್ರಹವು ಮೊಲೆಗಳಲಿ ।
ಅನುಕರಿಸಿ ಮೊನೆದೋರುತಿರ್ದವು
ದಿನದಿನಕೆ ಹೆಚ್ಚುತಲಿ ಮಾಯಾ
ವನಿತೆಗಂಕುರಿಸಿತ್ತು ಜವ್ವನ ಜಗವ ರೆಖೋಂಪಿಸುತ ॥ [೬]

ಏರುಜವ್ವನದಲ್ಲಿ ಅವಳು ಸಕಲಕಲಾಪೂರ್ಣೆಯಾಗುವುದರ ವರ್ಣನೆಯನ್ನು ನಾವು ಕಾಣುವುದು ಈ ಕೆಳಗಿನ ಪದ್ಯದಲ್ಲಿ –

ಆ ನಟನೆಯಾ ರೀತಿಯಾ ನಿಲ
ವಾ ನಡೆವ ಗತಿ ಗಮಕವಾ ತೊಡೆ
ಯಾ ನಿತಂಬಗಳಾ ನಡುವಿನಸಿದಾ ಮೊಲೆಯ ಚೆಲುವು ।
ಆ ನಯದ ತೋಳಾ ಮುಖಾಂಬುಜ
ವಾ ನಯನವಾ ನೋಟವಾ ತುರು
ಬಾ ನವೀನತೆಯುಡಿಗೆಯೇಂ ನೆಲೆಸಿದವೊ ಮಾಯೆಯಲಿ ॥ [೭]

ಮಮಕಾರ ಭೂಪಾಲನ ಗುರು ಅಹಂಕಾರಾಚಾರ್ಯನು ಮಾಯೆಯನ್ನು ಕಮಲದಂಥ ಕಣ್ಣುಗಳುಳ್ಳವಳೆಂದೂ, ಚಕ್ರವಾಕ ಪಕ್ಷಿಯಂಥ ಮೊಲೆಗಳುಳ್ಳವಳೆಂದೂ ಕಮಲದ ದಂಟಿನಂತೆ ಕೋಮಲವಾದ ಬಳ್ಳಿಯಂಥ ದೇಹವುಳ್ಳವಳೆಂದೂ ಅಲುಗಾಡುವ ತೆರೆಗಳಂಥ ನಿರಿಗೆಗಳುಳ್ಳ ವಸ್ತ್ರಭೂಷಿತೆಯಂದೂ ಹೇಳುತ್ತ ಅವಳು ಒಂದು ಲಾವಣ್ಯದ ಕೊಳವೆಂದು ತಿಳಿಸುತ್ತಾನೆ.[೮] ಇಲ್ಲಿ ನಾಟ್ಯಶಾಸ್ತ್ರದ ಹಾಗೂ ಕಾಮಶಾಸ್ತ್ರದ ದೃಷ್ಟಿಗಳೆರಡೂ ಪರಿಣಾಮಕಾರಿಯಾಗಿ ಮೇಳೈಸಿವೆ.

ಬದುಕಿನ ಶಿಖರಪ್ರಾಯವಾದ ಅವಧಿ ಎನಿಸುವ ಯೌವನದಲ್ಲಿ ಮಾಯೆ ಕನ್ಯಾಮಾಡದೊಳಗಿದ್ದುಕೊಂಡು ನಾನಾ ಬಗೆಯ ಕುಶಲ ಶಾಸ್ತ್ರಗಳನ್ನೂ ಎಲ್ಲ ವಿದ್ಯೆಗಳನ್ನೂ ಅಭ್ಯಾಸ

ಮಾಡಿ ಅವುಗಳಲ್ಲಿ ಪರಿಣತಿ ಪಡೆಯುತ್ತಾಳೆ.[೯] ಇವುಗಳಲ್ಲಿ ಪ್ರಮುಖವಾದುದೆಂದರೆ ನೃತ್ಯ ಹಾಗೂ ಅದಕ್ಕೆ ಪೂರಕವಾದವುಗಳೆಂದರೆ ಗಾಯನ ಹಾಗೂ ವಾದ್ಯ ನುಡಿಸುವಿಕೆ. ಕಾವ್ಯಾಲಂಕಾರವನ್ನು ಬದಗಿಟ್ಟು ಈ ಕೆಳಗಿನ ಸಾಲುಗಳನ್ನು ಪರಿಶೀಲಿಸಿದರೆ ಮಾಯೆ ಈ ವಿದ್ಯೆಗಳಲ್ಲಿ ಪರಿಣಿತಳಾಗಿರುವುದಕ್ಕೆ ಆಧಾರ ದೊರಕುತ್ತದೆ.

ನಡೆಯ ಕಲಿಸಿದಳಂಚೆವಿಂಡಿಗೆ
ನುಡಿಯ ಕಲಿಸಿದಳರಗಿಳಿಗೆ ಸರ
ವಿಡಲು ಕಲಿಸಿದಳಾಕೆ ತನ್ನರಮನೆಯ ಕೋಗಿಲೆಗೆ ॥ [೧೦]

ನೃತ್ಯದಲ್ಲಿ ತಾಂಡವ ಮತ್ತು ಲಾಸ್ಯ ಎಂದು ಎರಡು ವಿಧ. ಶಿವನು ತಂಡುಮುನಿಗೆ ಉಪದೇಶಿಸಿದ ನೃತ್ಯವು ಗಂಡಸರಿಗಾಗಿರುತ್ತದೆ, ಪಾರ್ವತಿಗೆ ಕಲಿಸಿದ ಲಾಸ್ಯವು ಹೆಂಗಸರಿಗಾಗಿರುತ್ತದೆ.[೧೧] ತಕಾರವೆಂದರೆ ಶಿವ ಮತ್ತು ತಾಂಡವ, ಲಕಾರವೆಂದರೆ ಪಾರ್ವತಿ ಮತ್ತು ಲಾಸ್ಯ. ಶಿವಶಕ್ತಿ ಸಮಾಗಮದಿಂದ ತಾಳ ಉಂಟಾಯಿತು ಈ ತಾಳವಿಲ್ಲದೆ ನೃತ್ಯವು ರಂಜಿಸುವುದಿಲ್ಲ.[೧೨]

ಪ್ರಭುಲಿಂಗಲೀಲೆಯಲ್ಲಿ ಮಾಯೆ ಸದಾಶಿವನ ಒಲುಮೆಗಾಗಿ ಲಾಸ್ಯರೂಪದ ಸೇವೆಯನ್ನು ಸಲ್ಲಿಸಬಯಸುವುದರಿಂದ ಆ ಪ್ರಕಾರವನ್ನು ಮಾತ್ರ ನಾವು ಕಾವ್ಯದಲ್ಲಿ ಕಾಣುತ್ತೇವೆ. ಲಾಸ್ಯಕ್ಕೆ ಹೊರಡುವುದಕ್ಕೆ ಮೊದಲು ಸಖಿಯರೆಲ್ಲ ಕೂಡಿಕೊಂಡು ಒಡತಿಯನ್ನು ಸರ್ವಾಭರಣಗಳಿಂದ ಅಲಂಕರಿಸಿ ಅದಕ್ಕಾಗಿ ಸಿದ್ಧಪಡಿಸುತ್ತಾರೆ. ಜಡೆಯಲ್ಲಿ ಕದಂಬಪರಿಮಳ ಕುಸುಮಗಳನ್ನು, ಕೈಕಾಲುಗಳ ಬೆರಳುಗಳಿಗೆ ಮಣಿಮುದ್ರಿಕಾವಳಿಗಳನ್ನು, ಪಾದಗಳಿಗೆ ನೇವುರಗಳನ್ನು, ಕಾಲುಗಳಿಗೆ ಬಿರುದಿನ ಬಳೆಗಳನ್ನು, ಕಟಿಯಲ್ಲಿ ಮಣಿಮಯದ ಕಾಂಚೀಧಾಮವನ್ನು, ಕೊರಳಲ್ಲಿ ಹೊಳೆವ ತೊಳಪಮುತ್ತಿನ ಹಾರವನ್ನು; ತೋಳತೊಡಿಗೆಗಳನ್ನು, ಮೂಗಿಗೆ ತೊಳಪಮುತ್ತಿನ ತೋರಮೂಗುತಿಯನ್ನು; ಕಿವಿಗಳಿಗೆ ನವರತ್ನ ತೆತ್ತಿಸಿದ ಓಲೆಗಳನ್ನು ಹಾಗೂ ಹೊಸ ಮುತ್ತಿನ ಆಭರಣಗಳನ್ನು; ಹೊಸ ಮುತ್ತುಗಳ ಹಣೆಗಟ್ಟನ್ನು ಮತ್ತು ಕಣ್ಣಿಗೆ ಕಾಡಿಗೆಯನ್ನು ಮಾಯಾದೇವಿಗೆ ಇಡುತ್ತಾರೆ.[೧೩]

ಮಾಯೆ ಮಧುಕನಾಥನನ್ನು ಪೂಜಿಸಿಯಾದ ಮೇಲೆ ರಂಗಮಂಟಪಕ್ಕೆ ಬಂದು ನೃತ್ಯಕ್ಕೆ ಸಿದ್ಧಳಾವಾಗುತ್ತಾಳೆ. ಆಗ ಕೊಳಲುಗಳ, ಕಹಳೆಯ, ಮದ್ದಳೆಯ, ತಾಳದ ಗಾಯಕಿಯರ ಸಮೂಹದಲ್ಲಿ

ವಿವಿಧ ವೀಣೆಗಳ ನುಡಿಸುವಿಕೆಯಿಂದ ಹೊರಹೊಮ್ಮುವ ನಾದದಿಂದ, ಉಪಾಂಗದಿಂದ, ಕೊಳಲುಗಳ ನುಡಿಸುವಿಕೆಯಿಂದ ಅವಳು ದೇಸಿರಾಗವನ್ನು ಆಲಾಪಿಸುತ್ತಾಳೆ.

ವಾಸಗಳ ವಾವುಜೆಯ ಕಹಳೆಯ
ಲೇಸೆನಿಪ ಮದ್ದಳೆಯ ತಾಳದ
ಭಾಸುರದ ಗಾಯಕಿಯರೊಗ್ಗಿನ ವಿವಿಧ ವೀಣೆಗಳ ।
ಹೂಸಿ ಹೊಮ್ಮುವ ಸರದುಪಾಂಗಾ
ವಾಸ ಮೇಳಾಪಗಳಲೊಯ್ಯನೆ
ದೇಸಿರಾಗುವ ಮಾಯೆಯಾಲಾಪಿಸಿದಳೊಲವಿನಲಿ ॥ [೧೪]

ನಾಟ್ಯಶಾಸ್ತ್ರದ ಕೋವಿದರು ನಾಟ್ಯಾದಿಗಳಿಗೆ ಆರು ಅಂಗಗಳೆಂದು ಭಾವಿಸಿತ್ತಾರೆ. ಅವುಗಳೆಂದರೆ ಶಿರಸ್ಸು, ಎದೆ, ಕೈಗಳು, ಪಾರ್ಶ್ವ, ಸೊಂಟ ಮತ್ತು ಕಾಲುಗಳು.[೧೫] ಕಾಂತ, ಭಯ, ಹಾಸ್ಯ, ಕರುಣಾ, ಅದ್ಭುತ, ರೌದ್ರ, ವೀರ, ಭೀಭತ್ಸ ಇವು ಎಂಟು ರಸದೃಷ್ಟಿಗಳು. ಸಹರ್ಷ, ಸಾಭಿಲಾಷಾ, ಮಧುರಾ, ಅಂತರ್ವಿಕಾಸಿನೀ, ಸ್ಮೇರತಾರಾ, ಸ್ನಿಗ್ಧಾ ಇವು ರತಿ ಎಂಬ ಭಾವಜನ್ಯವಾದುವು.[೧೬] ಹೆಗಲಿನ ಮೇಲೆ ಹಿಡಿದು ಅದನ್ನೇ ಕಟಿಯ ಪಶ್ಚಾದ್ಭಾಗದಲ್ಲಿ ಎರಡೂ ಕೈಗಳನ್ನೂ ಹಿಡಿದರೆ ನಿತಂಬ ಎಂಬ ಹಸ್ತವೆನಿಸುವುದು. ನಿತಂಬಮುದ್ರೆಯನ್ನೇ ಎಡಬಲ ಬದಿಯಲ್ಲಿ ಕೂದಲನ್ನು ಕಟ್ಟುವ ಭಂಗಿಯಲ್ಲಿ ಹಿಡಿದರೆ ಕೇಶಹಸ್ತವಾಗುತ್ತದೆ.[೧೭] ಮಾಯಾದೇವಿಯ ಸನ್ನಿವೇಶದಲ್ಲಿ ಕಾಂತ ರಸದೃಷ್ಟಿಯನ್ನು ಸಹರ್ಷ, ಸಾಭಿಲಾಷಾ, ಮಧುರಾ ಹಾಗೂ ಸ್ನಿಗ್ಧಾ ಈ ರತಿಭಾವಜನ್ಯದೊಂದಿಗೆ ನೋಡೋಣ.

ಮಾಯಾದೇವಿ ಮದುಕನಾಥನಿಗೆ ಸಲ್ಲಿಸುವ ಸೇವೆಯು ಪೂಜೆ ಮತ್ತು ಲಾಸ್ಯ ಎಂದು ಎರಡು ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಪ್ರಥಮ ಹಂತದಲ್ಲಿ ಸಕಲ ಪೂಜಾ ಸಾಮಗ್ರಿಗಳೊಂದಿಗೆ ಅರ್ಘ್ಯ, ಪಾದ್ಯ, ಅಭಿಷೇಕ, ಆರತಿ, ಧೂಪ, ದೀಪ, ನೈವೇದ್ಯ, ಎಲ್ಲವನ್ನೂ ಅರ್ಪಿಸಿ ಭಕ್ತಿಯಿಂದ ಮೈಯಿಕ್ಕುತ್ತಾಳೆ. ದ್ವೀತಿಯ ಹಂತದಲ್ಲಿ ಲಾಸ್ಯರೂಪದ ಸೇವೆಯನ್ನು ಸಲ್ಲಿಸುತ್ತಾಳೆ. ಸ್ತ್ರೀಯರಿಂದಲೇ ಅರ್ಪಿತವಾಗುವ ಈ ಸೇವೆಯಲ್ಲಿ ಮಾಯೆಗೆ ಸಹಾಯಕರಾಗಲು ಅವಳ ಸಖಿಯರು ನೃತ್ಯದ ಪೋಷಾಕು ಹಾಗೂ ಆಭರಣಗಳನ್ನು ಧರಿಸುತ್ತಾರೆ.

ಉಲಿವ ನೇವುರ ಪಾಯವಟ್ಟದ
ಲಲಿತ ಕಂಕಣ ತೋಳಬಂದಿಯ
ಉಳಿಯ ಪದಕದ ತೋರಮುತ್ತಿನ ಸರದ ಮೂಗುತಿಯ ।
ತಳಿತ ಹೂವಿನ ಮುಡಿಯ ಪಟ್ಟಾ
ವಳಿಯ ಸೀರೆಯ ಚೆಲ್ಲಣದ ಕೋ
ಮಳೆಯರೆಯ್ದಿದರಂದು ಮಾಯಾಂಗನೆಯ ಬಳಸಿನಲಿ ॥ ೧೮

ಮಾಯಾದೇವಿಗೆ ಚೆಲ್ಲಣವನ್ನು ಉಡಿಸಿ ಪರಿಮಳಯುಕ್ತವಾದ ತುರುಬನ್ನು ಗಂಟುಹಾಕಿ ಅವಳನ್ನು ನೃತ್ಯಕ್ಕೆ ಅಣಿಗೊಳಿಸುತ್ತಾರೆ.

ನಿಲಿಸಿದರು ಗಡಬಡೆಯ ವಾದ್ಯದ
ಗಲಭೆಯನು ತರುಣಿಯರ ತಂಡಗ
ಳುಲುಹುಗಳನಲ್ಲಲ್ಲಿಗಾಗಳೆ ಕಂಬಿಕಾರ್ತಿಯರು ।
ಬಳಿಕ ಚಲ್ಲಣವುಡಿಸಿ ನೆರೆ ಪರಿ
ಮಳದ ತುರುಬನು ಬಲಿತು ಬಣ್ಣಿಸಿ
ಲಲನೆಯರು ನಾಟ್ಯಕ್ಕೆ ಮಾಯಾಂಗನೆಯ ರಚಿಸಿದರು. ॥ ೧೯

ಅನಂತರ ಮಾಯಾದೇವಿ ರಂಗ ಪ್ರವೇಶ ಮಾಡಿ ನಿಧಾನವಾಗಿ ಪಾದಗಳನ್ನು ಚಲಿಸುತ್ತ ತನ್ನ ಹಸ್ತಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಅಲುಗಾಡಿಸುತ್ತ ಬೆರಳುಗಳನ್ನು ಪ್ರಮಾಣಕ್ಕನುಸಾರವಾಗಿ ಚುರುಕಾಗಿ ಚಲಿಸುತ್ತ ಘಲಿರು-ಘಲಿರೆನ್ನುವ ನೂಪುರ ಮತ್ತು ಕಂಕಣಗಳ ಝಣತ್ಕಾರ ಮಾಡುತ್ತ ಬಂದು ನಿಲ್ಲುತ್ತಾಳೆ.

ಬಳಕಲೊಯ್ಯನೆ ಚರಣ ಚಾರಣ
ಚಳತೆಯಲಿ ನಿಜಹಸ್ತವಿಸ್ತರ
ದಳತೆಯಲಿ ಝುಳಪಿಸುವ ಬೆರಳಿನಲುಳಿಯ ಹವಣಿಯಲಿ ।
ಘಲಘಲಿಸುವ ವಂದುಗೆಯ ಕಂಕಣ
ಗಳ ಝಣತ್ಕಾರದಲಿ ಮಾಯಾ
ಲಲನೆ ರಂಗಂಬೊಕ್ಕು ನಿಂದಳು ನಿಜದ ನಿರಿಗೆಯಲಿ ॥ ೨೦

ಮಾಯೆ ನಾಟ್ಯಕ್ಕೆ ಅವಶ್ಯವಿರುವ ಸರ್ವಾಂಗಗಳನ್ನೂ ಪ್ರಮಾಣಬದ್ಧವಾಗಿ ಹೊಂದಿದ್ದಾಳೆ.

ಪಸರಿಸಿದ ನಿರಿಪಾದಗಳು ಸಂ
ದಿಸಿದ ಮಡ ಸಮಲಾಗಿನಲಿ ಮೋ
ಹಿಸಿಯಗಲ್ದಿಹ ಜಾನು ತೋರುವ ಜಘನ ಕುಚಕಳಶ ।
ಕುಸಿದು ಕೆಲವಿಂಬಾದ ಕಾಲಿನ
ಲೆಸೆವ ನಳಿತೋಳುಗಳ ಭಾವದ
ಸಸಿನದಲಿ ಸಮನಿಸಿದ ಕಣ್ಣೊಪ್ಪಿದುವು ಮಾಯೆಯಲಿ ॥[೨೦]

ಅವಳು ನಾಟ್ಯಕ್ಕೆ ಆವಶ್ಯವಿರುವ ಷಡಂಗಗಳ ರೀತಿಯನ್ನನುಸರಿಸಿ ನರ್ತನ ಮಾಡುತ್ತಾಳೆ.

ತಾಳದಲಿ ತರಹರಿಸಿ ಮೆಲ್ಲನೆ
ಮೇಳದಲಿ ಮೈ ನಿಗುರಿ ಕರ ಸಂ
ಚಾಳಿಯಲಿ ಚಳಬಳಿಸಿ ತಿರುಪಿನ ಮಡುಪಿನಲಿ ಮಣಿದು ।
ತೋಳ ಮೈಯಲಿ ತೊನೆದು ನೋಟದ
ಥಾಳದಲಿ ಧವಳಿಸಿಯೆ ವಿನುತಮು
ರಾಳಗತಿಯಲಿ ಗಮಕಿಸುತಮೊಪ್ಪಿರ್ದಳಾ ಮಾಯೆ ॥ [೨೧]

ಸುಳಿವ ಹಸ್ತದ ಜಾತಿಭಾವದ
ಬಳಿಯಲಾಡುವ ನೋಟ ನೋಟದ
ಲುಳಿಯವೊಲು ತೆಗೆದತ್ತ ತಿರುಗುವ ಕೊರಳು ಕೊರಳಂತೆ ।
ಬಳುಕುತಿಹ ನಡು ನಡುವಿನಂದಕೆ
ಹೊಳೆವ ಪಾದದ ಪಾಡು ಪಾಡಿನ
ನಿಲುಕಡೆಯ ನಿಱುಗೆಯಲಿ ಮೆರೆದಳು ಮಾಯೆ ಲಾಸ್ಯದಲಿ ॥ [೨೨]

ಮಾಯಾದೇವಿ ಅತ್ಯಂತ ಚತುರೆ ಎನ್ನುವುದಕ್ಕೆ ಸಂಶಯವಿಲ್ಲದಂತೆ ರತಿಯ ನೀತಿಯನ್ನು, ಇಂದ್ರನ ಹೆಂಡತಿ ಶಚಿದೇವಿಯ ಪಥವನ್ನು, ಭಾರತಿಯ ಭಾವವನ್ನು, ಲಕ್ಷ್ಮಿಯ ನಟನೆಯನ್ನು ಹಾಗೂ ಪಾರ್ವತಿಯ ಪಾವನ ಸ್ಥಿತಿಯನ್ನು ಒಟ್ಟಾಗಿ ಪ್ರದರ್ಶಿಸುತ್ತಾಳೆ.

ರತಿಯ ರೀತಿಯ ದಿವಿಜ ರಾಜನ
ಸತಿಯ ಸರಣಿಯ ಕಮಲಜನ ಭಾ

ರತಿಯ ಭಾವವನಾದಿನಾರಾಯಣಿಯ ನಟನೆಯನು ।
ಅತಿಶಯದ ಪಾರ್ವತಿಯ ಪಾವನ
ಗತಿಯನೆಲ್ಲವ ತೋಱುತಿರ್ದಳು
ಚತುರೆ ಮಾಯಾದೇವಿ ತನ್ನಯ ಲಾಸ್ಯಲೀಲೆಯಲಿ ॥ [39]

ಚಾಮರಸನ ಕಲ್ಪನೆಯ ಕುಲುಮೆಯಲ್ಲಿ ರೂಪುಗೊಂಡ ಮಾಯೆಯ ಲಾಸ್ಯದಲ್ಲಿ ಯಾವ ಕೊರತೆಯನ್ನೂ ಕಾಣುವುದು ಸಾಧ್ಯವಿಲ್ಲ. ವೈಶಿಷ್ಟ್ಯವೆಂದರೆ ಅವಳು ಪಾದವಿನ್ಯಾಸ, ಬದಲಾವಣೆಯ ಸೊಗಸು, ಬೆಡಗು, ಬಿನ್ನಾಣ, ಮನೋಹರತ್ವ, ನಿರ್ದಿಷ್ಟ ಅಂತರ ಇವುಗಳಿಂದ ಕೂಡಿದ ನರ್ತನ ಭಂಗಿಯಲ್ಲಿ ನಾಟ್ಯಶಾಸ್ತ್ರದ ಕರ್ತನಾದ ಭರತಾಚಾರ್ಯನಿಗೆ ಜನ್ಮವಿತ್ತಿರುವಳೋ ಎನ್ನುವಂತೆ ಮೋಹಕವಾದ ನರ್ತನ ಮಾಡುತ್ತಾಳೆ.

ನೇಮ ನೆಲೆ ಪಯಪಾಡು ಪಲ್ಲಟ
ಸೀಮೆ ಸೊಗಸತಿ ಬೆಡಗು ಬಿನ್ನಣ
ರಾಮಣೀಯತೆ ರೇಖೆಯಂತರಗರಣ ತಿರುಪಿನಲಿ ।
ಕಾಮಿನಿಯೊ ತಾ ಭರತಸಂಭವ
ಭೂಮಿಯೋ ಪೇಳೆನಲು ಮೆರೆದಾ
ಶ್ಯಾಮೆ ಮಾಯಾದೇವಿ ಮೋಹಿಸಿ ಪಾತ್ರವಾಡಿದಳು ॥ [40]

ನಾಟ್ಯಕ್ಕೆ ಸಂಗೀತದ ಮೇಳ ಅತ್ಯಂತ ಅವಶ್ಯ. ಈ ಎರಡಕ್ಕೂ ತಾಳ ಅತ್ಯಂತ ಪೂರಕ. ತಾಳವಿದ್ದರೆ ಮಾತ್ರ ಎಲ್ಲ ರೀತಿಯಿಂದಲೂ ಸಂಯೋಜನೆಯನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗುತ್ತದೆ. ತಾಳದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಎಡರುತೊಡರಾಗಿ ಎಲ್ಲವೂ ದಾರಿ ತಪ್ಪುತ್ತದೆ. ನಾಟ್ಯಶಾಸ್ತ್ರದ ಸಮಗ್ರ ಜ್ಞಾನವನ್ನು ಹೊಂದಿದ್ದ ಚಾಮರಸನು ಇದನ್ನು ಎತ್ತಿ ತೋರಿಸುವುದು ಹೀಗೆ. ಅಲ್ಲಮನು ಮದ್ದಳೆ ಬಾರಿಸುತ್ತಿದ್ದಾನೆ ಹಾಗೂ ಮಾಯೆ ಕುಣಿಯುತ್ತಿದ್ದಾಳೆ. ಆದರೆ ಅಲ್ಲಮನ ಮೇಲಿನ ಮೋಹದಿಂದಾಗಿ ಅವಳ ಇಬ್ಬಗೆಯ ಭಾವವು ಮಧುಕೇಶ್ವರಲಿಂಗದಲ್ಲಿ ಹಾಗೂ ಅಲ್ಲಮನಲ್ಲಿ ಸೇರಿ ಕವಲುಗೊಳ್ಳುತ್ತದೆ. ಶಿವನಲ್ಲಿ ತಾನು ಮಾಡಿದ ಪ್ರತಿಜ್ಞೆಯನ್ನು ನೆನಪಿಗೆ ತಂದುಕೊಂಡು, ಕಾಮನ ದಾಳಿಗೆ ತಾನು ಸಿಕ್ಕಿದುದನ್ನು ನೆನೆಯುತ್ತ ಆದರಿಂದಾದ ಸಂಕಟದಲ್ಲಿ ತಾಳ–ಮೇಳ, ಗತಿ–ಗಮಕಗಳ ತಂತ್ರದ ಜೋಡಣೆ ಬೇರೆಯಾಗಿ ನಾಟ್ಯಾಚಾರ್ಯನಿಗೆ ಜನ್ಮವಿತ್ತಿರುವವಳಂತೆ ತೋರುತ್ತಿದ್ದ ಮಾಯೆ ಕುಣಿತದಲ್ಲಿ ಭೀತಿಗೊಳ್ಳುತ್ತಾಳೆ.

[illegible]

[illegible]

[illegible]

[illegible]

ಶೂಲಿಯೊಳು ತಾ ಹೂಣಿಸಿದ ಹೀ

ಹಾಳಿಯನು ಮಱುಕಳಿಸಿ ಕಾಮನ

ದಾಳಿಯಲಿ ತಾ ಸಿಕ್ಕಿದುದ ನೆರೆ ನೆನೆವ ವೇದೆಯಲಿ ।

ತಾಳ ಮೇಳದ ಗತಿಯ ಗಮಕದ

ಕೀಲಣೆಯ ಕಾಲಾಟ ವಿಘಟಿಸಿ

ಚಾಳಿಯಲಿ ತಬ್ಬಿಬ್ಬುವೋಗುತಲಿರ್ದಳಾ ಮಾಯೆ ॥ [೨೧]

ಹೀಗೆ ನಾಟ್ಯಶಾಸ್ತ್ರದ ಸಮಗ್ರ ದೃಷ್ಟಿಯನ್ನಿಟ್ಟುಕೊಂಡು ಮಾಯೆಯ ಪಾತ್ರವನ್ನು ಸೃಷ್ಟಿಸಿರುವ ಚಾಮರಸ ಅದನ್ನು ಅತ್ಯಂತ ಜಾಗರೂಕತೆಯಿಂದ ಮುನ್ನಡೆಸಿದ್ದಾನೆ. ನರ್ತನದ ಬಗೆಗೆ ಇಂಥ ಸೂಕ್ಷ್ಮವೂ, ಪರಿಪೂರ್ಣವೂ ಆದ ವಿವರಣೆಯನ್ನು ಕೊಡುವ ಕವಿ ಕಾವ್ಯಗುರುವಾಗಿರುವುದರ ಜೊತೆಗೆ ನಾಟ್ಯಗುರುವೂ ಆಗಿದ್ದಾನೆ.

ವೈಶಿಷ್ಟ್ಯವೆಂದರೆ ಕಾವ್ಯದಲ್ಲಿ ಪುರುಷವರ್ಗಕ್ಕೆ ಸಂಬಂಧಿಸಿದಂತೆ ನಾಟ್ಯದೃಷ್ಟಿಯಿಂದಾಗಲಿ, ರತಿದೃಷ್ಟಿಯಿಂದಾಗಲಿ ಯಾವುದೆ ಪಾತ್ರವನ್ನು ಚಿತ್ರಿಸಿಲ್ಲ. ನಾಟ್ಯಕ್ಕೆ ಸಂಬಂಧಿಸಿದಂತೆ ಕಾಂತ ರಸದೃಷ್ಟಿಯಲ್ಲಿ ಸಹರ್ಷ, ಸಾಭಿಲಾಷಾ, ಮಧುರಾ, ಸ್ನಿಗ್ಧಾಗಳು ರತಿ ಎಂಬ ಭಾವಜನ್ಯವೆಂಬುದನ್ನು ನೋಡಿದ್ದೇವೆ ಹಾಗೂ ಚಾಮರಸನು ಮಾಯಾದೇವಿ ಮತ್ತು ಅವಳ ಸಖಿಯರನ್ನು ಈ ಭಾವಕ್ಕನುಗುಣವಾಗಿ ಯಾವ ಮಟ್ಟದಲ್ಲಿ ಪ್ರತಿಬಿಂಬಿಸಿದ್ದಾನೆಂಬುದನ್ನು ನೋಡಿದ್ದೇವೆ. ಇನ್ನು ಮೇಲೆ ಅವನು ಕಾವ್ಯದ ನಿರೂಪಣೆಯಲ್ಲಿ ರತಿಶಾಸ್ತ್ರದ ವಿಚಾರವನ್ನು ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ನೋಡೋಣ.

ಕೆಳದಿ ಬಸವರಾಜ ಸಂಕಲಿಸಿದ 'ಶಿವತತ್ತ್ವರತ್ನಾಕರ'ದಲ್ಲಿ ಸ್ತ್ರೀಯರನ್ನು ಕುರಿತಾಗಿ ಹೀಗೆ ಅಭಿಪ್ರಾಯ ಪಡಲಾಗಿದೆ. 'ಸ್ತ್ರೀಯರಿಗೆ ಚಂದ್ರನು ಶುಚಿತ್ವವನ್ನೂ, ಗಂಧರ್ವರು ಒಳ್ಳೆಯ ಮಾತನ್ನೂ ನೀಡಿದ್ದಾರೆ; ಅಗ್ನಿಯು ಸರ್ವಾಂಗ ಶೋಭೆಯನ್ನು ನೀಡಿದ್ದಾನೆ. ಹೀಗಿರಲು ಹೆಂಗಸರು ತುಂಬಾ ಇಷ್ಟವಾಗದಿರಲು ಹೇಗೆ ಸಾದ್ಯ! ಅವರ ಕಡೆಗಣ್ಣ ನೋಟದಿಂದಲೇ ಮೂರು ಲೋಕಗಳನ್ನು ಗೆಲ್ಲಬಹುದು.'[೨೨]

ಮಮಕಾರ-ಮೋಹಿನಿ ದಂಪತಿಗಳು ಮನೋಹರವಾದ ಶರೀರವುಳ್ಳ, ವ್ಯಾಮೋಹಕ್ಕೆ ಒಳಗಾದ ಮಗಳನ್ನು ಪಡೆದರೆಂದು ಕವಿ ಹೇಳುವಲ್ಲಿಯೇ ಮುಂದೆ ಮಾಯೆಯಲ್ಲಿ ಮೂಡಿ ತೋರುವ ರತಿಭಾವವು ಪೀಠಿಕೆಯನ್ನು ಪಡೆದುಕೊಳ್ಳುತ್ತದೆ. ಅವಳ ಜನನದಿಂದಾಗಿ ನರೆಬಂದ ಜೀವಸಮೂಹಕ್ಕೆ ಕಾಮವಿಕಾರವು ಆವರಿಸುತ್ತದೆ. ಅಡವಿಯಲ್ಲಿ, ಗಂಗಾತೀರದಲ್ಲಿ, ಪರ್ವತಪ್ರದೇಶಗಳಲ್ಲಿ, ಗುಹೆಗಳಲ್ಲಿ, ಜಲಪಂಚಾಗ್ನಿಗಳ ಮಧ್ಯದಲ್ಲಿ ತಪಸ್ಸನ್ನಾಚರಿಸುತ್ತಿದ್ದ ಮುನಿಗಳು, ಸಿದ್ಧರು, ಯೋಗೀಶ್ವರರು ಶಕ್ತಿಗುಂದುತ್ತಾರೆ.[೨೮] ಮನ್ಮಥನ ಎದುರಿನಲ್ಲಿರುವ ಕುರಿಗಳು ಎನ್ನುವಂಥ ಪ್ರೇಕ್ಷಕರನ್ನು ತಮ್ಮ ಚಾಂಚಲ್ಯದ ಕಡೆಗಣ್ಣ ನೋಟದಲ್ಲಿ ಸೆರೆಹಿಡಿಯುತ್ತ ವಿಳಾಸಿನಿಯರು ಮಾಯಾದೇವಿಯ ಜೊತೆಯಲ್ಲಿ ನಡೆಯುತ್ತಾರೆ.

ನಿರಿಯನಳವಡಿಸುತ್ತ ಮೇಲುದ
ಸೆರಗ ಸಂವರಿಸುತ್ತ ಬಳಲುವ
ತುರುಬ ತಿದ್ದುತ ಚಪಳತೆಯ ಕಡೆಗಣ್ಣ ನೋಟದಲಿ ।
ಸೆರೆವಿಡಿದು ಕುಸುಮಾಸ್ತ್ರನಿದಿರಿನ
ಕುರಿಗಳೆನಿಸುವ ನೋಟಕರ ನೀ
ತೆರದಲೈದಿದರೊಡತಿಯೊಡನೆ ವಿಳಾಸಿನೀನಿಕರ ॥ [೨೯]

ಮನ್ಮಥಬ್ರಹ್ಮನು ತಾನೇ ಮಾಡಿದ ಹೊಸ ಬಗೆಯ ಸೃಷ್ಟಿಯೊ ಅಥವಾ ರತಿಯ ವಲ್ಲಭನಾದ ಕಾಮನ ಚಲಿಸುವ ಲತೆಗಳೊ ಎನ್ನುವಂತೆ ಸ್ತ್ರೀಯರು ಮಾಯಾಂಗನೆಯ ಜೊತೆಯಲ್ಲಿ ನಡೆದು ಬರುತ್ತಾರೆ.

ಇದು ಮನೋಜಬ್ರಹ್ಮ ತಾ ಮಾ
ಡಿದ ನವೀನದ ಸೃಷ್ಟಿಯೋ ಮೇ
ಣಿದು ರತೀವಲ್ಲಭನ ಜಂಗಮಲತೆಗಳೋ ಬಗೆಗೆ ।
ಇದು ವಿಚಿತ್ರವೆನಲ್ಕೆ ರೂಪಿನ
ಚದುರತನದ ವಿಳಾಸವೃತ್ತಿಯ
ಸುದತಿಯರು ನಡೆತಂದರಾ ಮಾಯಾಂಗನೆಯ ಕೂಡೆ ॥ [೩೦]

ಮಣ್ಣಿನ ಮಾಟವಾದ ರೂಪುಳ್ಳ ಗೊಂಬೆಗಳನ್ನು ದೇವಾಲಯಕ್ಕೆ ಜೋಡಿಸಿದರೆನ್ನುವಂತೆ, ಮನ್ಮಥನೆನ್ನುವ ಗ್ರಹ ಬಡಿದವರಂತೆ ನೋಟಕರು ಮಾಯೆಯಲ್ಲಿ ದೃಷ್ಟಿಯನ್ನು ನೆಡುತ್ತಾರೆ.

ಮೃತ್ತಿಕೆಯ ಮಾಟಕದ ರೂಹಿನ
ಪುತ್ತಳಿಗಳನು ದೇಗುಲಕೆ ನೆರೆ
ತೆತ್ತಿಸಿದರೆಂಬಂತೆ ಮಾಯೆಯ ನೋಡುವರ್ತಿಯಲಿ ।
ಸುತ್ತಿಮುತ್ತಿ ಗವಾಕ್ಷರಂಧ್ರದ
ಭಿತ್ತಿಯಲಿ ನೆರೆ ಕೀಲಿಸಿರ್ದರು
ಚಿತ್ತಜಗ್ರಹ ಸೋಂಕಿದಂತಿರೆ ಕೂಡೆ ನೋಟಕರು ॥ [೩೧]

ಹೀಗೆ ಕಾಮಾತುರಳಾದ ಮಾಯಾದೇವಿಯ ಬಗ್ಗೆ ಆಗಾಗ ಕವಿಯಿಂದ ವ್ಯಕ್ತವಾದ ಅಭಿಪ್ರಾಯಗಳನ್ನು ಮಾಯಾಕೋಲಾಹಲದ ಪ್ರಸಂಗದುದ್ದಕ್ಕೂ ಕಾಣುತ್ತೇವೆ. ಅಂಥ ಕೆಲವು ಪ್ರಸಂಗಗಳು ಕೆಳಗಿನಂತಿವೆ.

ಮಾಯೆ ಮದ್ದಳೆ ಬಾರಿಸುತ್ತಿದ್ದ ಅಲ್ಲಮನನ್ನು ಕರೆಯಿಸಿ ನೋಡಿದ ಕ್ಷಣದಲ್ಲೇ ಕಾಮನ ಬಾಣದ ತುದಿ ಆಳವಾಗಿ ನಾಟಿ ಅವನ ಪ್ರಭಾವಕ್ಕೆ ಒಳಗಾಗುತ್ತಾಳೆ.[೩೨] ಕಾಮನು ತನ್ನ ವಿಶೇಷವಾದ ಕೂರಂಬಿನಿಂದ ದೇಹ ಇಬ್ಬಾಗವಾಗುವಂತೆ ಪಕ್ಕೆಗೆ ನಾಟಿಸುವುದರಿಂದ ಕುಳ್ಳಿರಲಾಗದೆ ಕಾಮನ ಕಿಚ್ಚು ದೇಹವನ್ನೆಲ್ಲಾ ಆವರಿಸಿ ಅವಳು ಅಲ್ಲಮನಿಗೆ ಮನಸೋತು ಏಕಾಂತಗ್ರಹಕ್ಕೆ ನಡೆಯುತ್ತಾಳೆ.[೩೩] ಅವಳು ಮದನನ ಬಲೆಯ ಬಾಯಲ್ಲಿ ಸಿಕ್ಕಿ ಬಿದ್ದುದನ್ನು ಸಖಿಯರು ಅರಿಯುತ್ತಾರೆ.[೩೪] ಲೋಕದಲ್ಲಿ ಮನುಷ್ಯರು, ದೇವತೆಗಳು ದಾನವರನ್ನು ಎಣಿಕೆಗೆ ತಾರದ ಮಾಯೆ ಕಾಮೋದ್ರೇಕದಿಂದ ಅಲ್ಲಮನಿಗೆ ಸೋತಿರುವಳೆಂದು ಮದಮಾನಿ ಅವನಿಗೆ ಹೇಳುತ್ತಾಳೆ.[೩೫] ಮಾಯೆ ಅಲ್ಲಮನನ್ನು ಕಂಡು ಕಾಮತಾಪದಿಂದ ಆತನಿಗೆ ಮರುಳುಗೊಂಡು ಮೋಹಿಸಿ ಪ್ರಾಣವನ್ನು ಮಾತ್ರ ಉಳಿಸಿಕೊಂಡಿರುವಳೆಂದು ಸಖಿಯರು ಮಹಾರಾಣಿಗೆ ನುಡಿಯುತ್ತಾರೆ.[೩೬] ವಿರಹಾಂಧಳಾಗಿ ಕಾಮನು ಬಿಟ್ಟ ಬಾಣದಿಂದಾದ ಗಾಯದಲ್ಲಿ ಆಕೆ ಹೊರಳಾಡುವ ಸ್ಥಿತಿಯ ಸುದ್ದಿ ಪುರದಲ್ಲೆಲ್ಲ ಹಬ್ಬಿತೆಂದು ಸರಳೆ ಅಲ್ಲಮನಿಗೆ ತಿಳಿಸುತ್ತಾಳೆ.[೩೭] ಭೂತಳದಲ್ಲಿ ಮಾಯೆ ಕಾಮಾತುರದಿಂದ ಅಲ್ಲಮನಿಗೆ ಒಲಿದಿದ್ದು ಬಹಳ ದಿನಗಳಾದವೆಂದು ಅವಳನ್ನು ಕರೆದುಕೊಂಡು ಬರಲು ಗಿರಿಜೆ ವಿಮಳೆಗೆ ಅಪ್ಪಣೆ ಮಾಡುತ್ತಾಳೆ.[೩೮] ರಾಜಕುಮಾರಿಯು ಕಾಮಾತುರದಲ್ಲಿ ಅಲ್ಲಮನೆಂಬ ಮದ್ದಳೆಗನಿಗೆ ಮನಸೋತು ಹುಚ್ಚಿಯಾಗಿ ಅವನ ಬೆನ್ನ ಹಿಂದೆ ಗೆಳತಿಯರೊಂದಿಗೆ ಓಡಿ ಹೋಗುತ್ತಿರುವುದನ್ನು ಪುರಜನರು ನೋಡುತ್ತಾರೆ.[೩೯]

[illegible]
[illegible]
[illegible]
[illegible]
[illegible]
[illegible]

[illegible]

[illegible]

ಸ್ತ್ರೀಯರನ್ನು ಪದ್ಮಿನಿ, ಚಿತ್ರಿನಿ, ಶಂಖಿನಿ, ಹಸ್ತಿನಿ ಎಂದು ವರ್ಗೀಕರಿಸಲಾಗಿದೆ. ಪದ್ಮಿನಿ ವರ್ಗದವಳ ಲಕ್ಷಣ, ಸ್ವಭಾವಕ್ಕನುಗುಣವಾಗಿ ಅವಳನ್ನು ಹರಿಣಿ ಎಂದು ಗುರುತಿಸಲಾಗಿದೆ. ಕಾಮಶಾಸ್ತ್ರದ ದೃಷ್ಟಿಯಿಂದ ಪದ್ಮಿನಿ ವರ್ಗದವಳಲ್ಲಿ ರತಿಭಾವವನ್ನು ಪರಿಪೂರ್ಣವಾಗಿ ಕಾಣಲಾಗಿದೆ. ಅವಳು ಕಮಲದ ಮೊಗ್ಗಿನ ಮೃದುತ್ವವುಳ್ಳವಳಾಗಿರುತ್ತಾಳೆ; ಬಳುಕುವ ಮೈಯುಳ್ಳ ಅವಳು ರಾಜಹಂಸಿಯಂತೆ ಬಳುಕುತ್ತ ಮೃದುವಾಗಿ ನಡೆಯುತ್ತಾಳೆ; ತ್ರಿವಳಿಯಿಂದ ಚೆಂದವಾದ ನಡುವುಳ್ಳವಳಾಗಿ ಹಂಸದಂತೆ ಉಲಿಯುತ್ತಾಳೆ; ಒಳ್ಳೆಯ ಉಡುಗೆ ಉಡುತ್ತಾಳೆ; ಮೃದುವಾಗಿ, ಶುಚಿಯಾಗಿ, ಮಿತವಾಗಿ ಉಣ್ಣುತ್ತಾಳೆ.[೮೦] ಸಮಪ್ರಮಾಣದ ತಲೆ, ಗುಂಗುರ ಪೊದೆಗೂದಲು, ತೆಳುಹೊಟ್ಟೆ, ತುಂಬಿದ ನಿತಂಬ, ಸಣ್ಣ ಹೊರಳೆಗಳ ಮೂಗಿನಿಂದ ಕೂಡಿದ ಸ್ನಿಗ್ಧವಾದ ತುಟಿಗಳ ಸೌಂದರ್ಯವುಳ್ಳವಳಾಗಿರುತ್ತಾಳೆ.[೮೧]

ಚಾಮರಸನು ಮಾಯೆ ಮತ್ತು ಅವಳ ಸಖಿಯರ ಅಂಗಾಂಗಗಳನ್ನು ಮನಃಪೂರ್ವಕವಾಗಿ ವರ್ಣಿಸಿದ್ದಾನೆ, ಕಾಮದ ಮುದ್ರೆಗಳನ್ನು ಮತ್ತು ಇನ್ನಿತರ ಸೌಂದರ್ಯಸ್ಥಾನಗಳನ್ನು ವರ್ಣಿಸುವಲ್ಲಿ ಯಾವ ತಾರತಮ್ಯವನ್ನೂ ಮಾಡಿಲ್ಲ. ಮನೋಹರವಾದ ಶರೀರವನ್ನು ಲಕ್ಷಿಸುತ್ತ ಕುಚಗಳು ನಿತಂಬಗಳು, ತೊಡೆಗಳು, ಕೆನ್ನೆಗಳು, ತುಟಿಗಳು, ತೋಳುಗಳು, ಕಿವಿಗಳು, ಕಣ್ಣುಗಳು, ಹುಬ್ಬುಗಳು, ಹಲ್ಲುಗಳು, ಹಸ್ತಗಳು, ಕಾಲುಗಳು, ಪಾದಗಳು, ಕೈಬೆರಳುಗಳು, ಕಾಲ್ಬೆರಳುಗಳು, ಉಗುರುಗಳು, ತೆಳುವಾದ ಹೊಟ್ಟೆ, ಹೊಕ್ಕುಳ, ನಡು, ಕುತ್ತಿಗೆ, ಮುಖ, ಮೂಗು, ಮುಂಗುರುಳು, ಜಡೆ, ತುರುಬ, ಮುಂದಲೆ, ಹಣೆ, ಮೊಣಕಾಲು, ಹಿಮ್ಮಡಿ ಹೀಗೆ ಎಲ್ಲ ಅಂಗಾಂಗಳನ್ನೂ ಸಾಂದರ್ಭಿಕವಾಗಿ ರತಿಭಾವದ ಹಿನ್ನೆಲೆಯಲ್ಲಿ ವರ್ಣಿಸಲಾಗಿದೆ.

ಕಾಮದ ಮುದ್ರೆಗಳಲ್ಲಿ ಕುಚಗಳು, ನಿತಂಬಗಳು ಹಾಗೂ ತುಟಿಗಳು ಪ್ರಮುಖವಾದವುಗಳಾದ್ದರಿಂದ ಇವುಗಳ ವರ್ಣನೆಯಲ್ಲಿ ಕವಿ ಹೆಚ್ಚು ಮುತುವರ್ಜಿ ವಹಿಸುತ್ತಾನೆ. ಆದರಲ್ಲೂ ನಿತಂಬಗಳು ಹಾಗೂ ಕುಚಗಳ ವರ್ಣನೆಯಲ್ಲಿ ಪಾರ್ವತಿ, ಅಕ್ಕಮಹಾದೇವಿ ಹಾಗೂ ವಿಮಳೆ ಇವರು ಕೂಡ ಚಾಮರಸನ ರತಿಭಾವದ ಸೂಕ್ಷ್ಮ ಕಣ್ಣಿನಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಆದರೆ ಈ ಅಂಗಾಂಗಗಳ ವರ್ಣನೆಯಲ್ಲಿ ಅವರವರ ಮಟ್ಟಕ್ಕೆ ಚ್ಯುತಿ ಬಾರದಂತೆ ವರ್ಣಿಸುವ ಕವಿಯ ದೃಷ್ಟಿಕೋನವನ್ನು ಕಾಣುತ್ತೇವೆ.

[illegible]

[illegible]

[illegible]

ಪುರುಷರೂಪದ ಶಿವನಿಂದ ಪ್ರಕೃತಿಯಾಗಿ ಮೂಡಿ ಬಂದವಳು ಪಾರ್ವತಿ. ವಿಶ್ವದ ಬದುಕಿನ ಜವಾಬ್ದಾರಿಯನ್ನೆಲ್ಲ ವಹಿಸಿಕೊಂಡಿರುವ ಅವಳು, ತಾಯಿಯಾಗುವವಳು ಅಮೃತಕಲಶಗಳನ್ನು ತುಂಬಿಕೊಳ್ಳುವಂತೆ ಮಾಡಿದ್ದಾಳೆ. ಆದುದರಿಂದ ಗರ್ಭದಲ್ಲಿರುವಾಗ ತಾಯಿ ಸೇವಿಸಿದ ಆಹಾರವು ಶಿಶುವಿನ ಪೋಷಣೆಗೆ ಆಧಾರವಾಗುತ್ತಿದ್ದರೆ ಜನನದ ನಂತರ ಮೊಲೆಹಾಲು ಆಧಾರವಾಗುತ್ತದೆ. ಇಂಥ ಮಗುವಿಗೆ ತಾಯಿಯೇ ಅತ್ಯಂತ ಮೋಹಕಳು, ಪ್ರೀತಿ ಪಾತ್ರಳು. ಈ ಅಂಶವನ್ನು ಪಾರ್ವತಿಯ ಮೊಲೆಗಳ ವರ್ಣನೆಯಲ್ಲಿ ಕಾಣುತ್ತೇವೆ. ಚಾಮರಸನ ದೃಷ್ಟಿಯಲ್ಲಿ 'ಪಾರ್ವತಿಯ ವೃತ್ತಕುಚಗಳು ಕಾಮಲೋಭಗಳು.'[೪೨] ಮಹಾದೇವಿಯಕ್ಕನಲ್ಲಿ 'ಲಿಂಗದ ನಿಷ್ಠೆ ಬೆಳೆದಂತೆ ಮೊಲೆಗಳು ಶಿವನ ಭಕ್ತಿಯ ರೂಪಾಗಿ ಬೆಳೆಯುತ್ತವೆ.'[೪೩] ವಿಮಳೆಯಲ್ಲಿ 'ದಿವ್ಯಾಂಗತೇಜದ ಭಾಗವಾಗಿ ಉನ್ನತ ಕುಚಗಳು ಇವೆ,'[೪೪] ಮಾಯೆಯ ಸಖಿಯರು 'ತುಂಬಿದ ಸ್ತನಗಳ ಉಬ್ಬಿನಲ್ಲಿ ಗರುಡವಾಹನನಾದ ವಿಷ್ಣುವನ್ನು ಮರುಳು ಮಾಡುವವರು.'[೪೫] ಇನ್ನುಳಿದ ಎಂಟು ಕಡೆಗಳಲ್ಲಿ ಕೇವಲ ಮಾಯೆಯ ಸ್ತನಗಳ ಉಲ್ಲೇಖವಿದ್ದು ಅಲ್ಲೆಲ್ಲ ರತಿಭಾವವೇ ರಾರಾಜಿಸುತ್ತದೆ. ಅವಳಿಗೆ ಸೌಂದರ್ಯದ ಪ್ರಶಾಂತತೆಯ ಕೂಡಿಕೆಯು ಮೊಲೆಗಳಲ್ಲಿ ತೋರುತ್ತಿದ್ದಿತೆಂದು ಚಾಮರಸ ತಿಳಿಸುತ್ತಾನೆ.[೪೬] ಮಮಕಾರ ಭೂಪಾಲನ ಗುರು ಅಹಂಕಾರಾಚಾರ್ಯನು 'ಅವಳ ಮೊಲೆಗಳು ಚಕ್ರವಾಕ ಪಕ್ಷಿಗಳಂಥವು' ಎಂದು ಹೇಳುತ್ತಾನೆ.[೪೭] ಮುಗುಳ್ನಗೆಯಿಂದ ಕೂಡಿದ ಮುಖದ ಕಾಂತಿರಸವು ಹರಿದು ಬರಲು ಅದನ್ನು ಮೊಲೆಗಳೆಂಬ ಪರ್ವತ ತಡೆಯಲು ಅದು ತಿರುಗಿ ಬರುತ್ತ ಎರಡೂ ಪಕ್ಕಗಳನ್ನು ಸುತ್ತುವರಿದುದು ಎನ್ನುವಂತೆ ದಪ್ಪ ಮುತ್ತಿನ ಸರಗಳನ್ನು ಮಾಯಾದೇವಿಯ ಕೊರಳಲ್ಲಿ ಒಬ್ಬ ಸಖಿ ತೊಡಿಸಿದಳೆಂದು ಕವಿ ವರ್ಣಿಸುತ್ತಾನೆ.[೪೮] ದೃಷ್ಟಿದೋಷವಾಗದಿರಲೆಂದು ಮಾಯೆಯ ಕುಚಗಳ ತುದಿಯಲ್ಲಿ ಚಿತ್ರಾವಳಿಗಳನ್ನು ಬಿಡಿಸುತ್ತಾರೆ.[೪೯] ಅವಳ ಮನದ ಬಯಕೆಯ ಫಲವನ್ನು ಸೂಚಿಸುವಂತೆ ಬಟ್ಟಕುಚಗಳು ಅದುರುತ್ತಿದ್ದುವೆಂದು ಕವಿಯ ಅಭಿಪ್ರಾಯ. [೫೦]

ಜಘನ ಹಾಗೂ ನಿತಂಬಗಳನ್ನು ಕುರಿತು ಬರುವ ಎಂಟು ಉಲ್ಲೇಖಗಳಲ್ಲಿ ಒಂದು ಮಹಾದೇವಿಯಕ್ಕನನ್ನು ಕುರಿತಾಗಿದೆ. ಅಕ್ಕನ ನಿತಂಬಗಳು ಶಿವನ ಸತ್ಕರ್ಮದಂತೆ ವೃದ್ಧಿಸಿದವೆಂದು ಚಾಮರಸ ಅಭಿಪ್ರಾಯ ಪಡುತ್ತಾನೆ.[೫೧] ಉಳಿದೆರಡರಲ್ಲಿ ನಡುವನ್ನು ಜಘನ ಎಂದು ಸೂಚಿಸಲಾಗಿದೆ.[೫೨] ಮೂರು ಬಾರಿ ಮಾಯೆಯ ಸಖಿಯರನ್ನು ನಿತಂಬಿನಿಯರು ಎಂದು ಕವಿ ಕರೆಯುತ್ತಾನೆ.[೫೩] ಅವುಗಳಲ್ಲಿ ರತಿಭಾವ ಮಾತ್ರ ಕಂಗೊಳಿಸಿದೆ. ನಾವೀಗಾಗಲೇ ನೋಡಿರುವಂತೆ ನಾಟ್ಯದಲ್ಲಿ ನಿತಂಬಮುದ್ರೆ ಹಾಗೂ

[illegible]

ನಿತಂಬಹಸ್ತ ಇವುಗಳನ್ನು ಪ್ರಯೋಗಿಸಬೇಕಾಗುತ್ತದೆ. ವೈಶಿಷ್ಟ್ಯವೆಂದರೆ ಮಾಯೆಯ ಅಂಗಗಳನ್ನು ಲಕ್ಷದಲ್ಲಿಟ್ಟುಕೊಂಡು ಹೇಳಿರುವ ಅವುಗಳಲ್ಲಿ ನಾಟ್ಯದೃಷ್ಟಿ ಹಾಗೂ ರತಿದೃಷ್ಟಿ ಎರಡೂ ಅಸದೃಶವಾಗಿ ಮೇಳೈಸಿವೆ.

ಆ ನಟನೆಯಾ ರೀತಿಯಾ ನಿಲ
ವಾ ನಡೆವ ಗತಿ ಗಮಕವಾ ತೊಡೆ
ಯಾ ನಿತಂಬಗಳಾ ನಡುವಿನಸಿದಾ ಮೊಲೆಯ ಚೆಲುವು ॥ [೫೪]

ಇಲ್ಲಿ ಆ, ಆ ಎಂದು ನಿರ್ದೇಶಿಸಿರುವ 'ಆ' ಶಬ್ದದ ಮೇಲೆ ಕೊಟ್ಟಿರುವ ಒತ್ತು ಗಮನೀಯವಾಗಿದೆ.

ಸಸಿನೆ ಮುಡಿಯನು ಬಿಚ್ಚಿ ಬಿಟ್ಟಾ
ರಿಸಿಯನೇಕ ಕದಂಬ ಪರಿಮಳ
ಕುಸುಮಗಳನಳವಡಿಸಿ ಹೆಣಲಿರಿಯಲು ನಿತಂಬಿನಿಗೆ ॥ [೫೫]

ಉಳಿದವುಗಳಲ್ಲಿ ಹೆಚ್ಚು ಬಾರಿ ವರ್ಣನೆಗೆ ಸಿಲುಕಿದ ಅಂಗಗಳೆಂದರೆ ಕಣ್ಣುಗಳು, ನಡು ಮತ್ತು ಪಾದಗಳು. ಹತ್ತು ಬಾರಿ ಕಣ್ಣುಗಳನ್ನೂ, ಎಂಟು ಬಾರಿ ನಡುವನ್ನೂ ಹಾಗೂ ಏಳು ಬಾರಿ ಪಾದಗಳನ್ನೂ ವರ್ಣಿಸಲಾಗಿದೆ.

ಮಮಕಾರ–ಮೋಹಿನಿಯರಿಗೆ ಕಮಲದಂಥ ಕಣ್ಣುಳ್ಳ ಮಗಳಾಗಿ ಜನಿಸಿದ ಮಾಯೆಗೆ ನಾಟ್ಯದ ಭಾವಕ್ಕೆ ತಕ್ಕ ಕಣ್ಣುಗಳಿವೆ.[೫೬] ಮನಸ್ಸಿನ ಆಲೋಚನೆಯ ರೀತಿಗಳು ಕಣ್ಣುಗಳಲ್ಲಿ ಅನುಸರಿಸಿ ತೋರುವ ಅವಳ ಕಣ್ಣುಗಳಿಗೆ, ಒಬ್ಬ ಸಖಿ ಕಾಮನ ಬಾಣದಲ್ಲಿ ಪ್ರೀತಿಯಿಂದ ಲೇಪಿಸುವ ಸಮ್ಮೋಹನವೆನ್ನುವಂಥ ಕಾಡಿಗೆಯನ್ನು ಚಿತ್ರಿಸುತ್ತಾಳೆ.[೫೭] ಒಬ್ಬ ಸಖಿ ಕಡೆಗಣ್ಣೋಟದ ಕಾಂತಿಯ ಮಡುಗಳಂತೆ ಹೊಳೆಯುವ ಆಭರಣಗಳನ್ನು ತೊಡಿಸುತ್ತಾಳೆ.[೫೮] ಮಧುಕನಾಥನ ಪೂಜೆಯನ್ನು ಮುಗಿಸಿ ಗರ್ಭಗುಡಿಯಿಂದ ಹೊರ ಬಂದಾಗ ಅವಳು ಸಂಭೋಗಕ್ರಿಯೆಯ ನಂತರದ ಕೆಂಪು ಕಣ್ಣುಗಳನ್ನು ಹೊಂದಿದವಳಂತೆ ತೋರುತ್ತಾಳೆ.

ಮಿಸುಪ ಧೂಪದ ಧೂಮದಲಿ ಕೆಂ
ಪೆಸೆವ ಲೋಚನವಾನತೆಯ ಭರ
ವಸಕೆ ಸೂಸಿದ ಸುಳಿಗುರುಳು ದೀಪಂಗಳುಬ್ಬೆಯಲಿ ।

[illegible]

[illegible]

[illegible]

[illegible]

[illegible]

[illegible]

ಕುಸರಿ ಬೆಮರಿಡುವಂಗ ಮಿಗೆ ರಂ

ಜಿಸಲು ಮಧುಕೇಶ್ವರನ ಸಂಭೋ

ಗಿಸಿಯೆ ಬಂದಳೊ ಪೇಳೆನಲ್ಮೆರ್ಳಿದಿರ್ದಳಾ ಮಾಯೆ ॥ [೫೯]

ಮಾಯೆಗೆ ಸೊಂಟದಲ್ಲಿ ಕಟ್ಟುವ ಡಾಬು ಕರ್ಮ ಹಾಗೂ ಭೋಗಗಳ ಗಡಿಯನ್ನು ಗುರುತಿಸುವ ಕಲ್ಲುಗಳ ಸಾಲಿನಂತೆ ತೋರುತ್ತದೆ.[೬೦] ಅಂಗಸೌಷ್ಠವವು ಕಾಣುವಂತೆ ಹೊಕ್ಕುಳ ಸಮೀಪದಲ್ಲಿ ಕಾಮನ ಬಿರುದಿನ ಬಾವುಟದಂಥ ಉಡುಗೆಯನ್ನು ಅವಳಿಗೆ ಒಬ್ಬ ಸಖಿ ತೊಡಿಸುತ್ತಾಳೆ.[೬೧] ನಾಟ್ಯದಲ್ಲಿ ತಿರುಗಿಸುವ ಕತ್ತಿಗೆ ಅನುಗುಣವಾಗಿ ಅವಳು ನಡುವನ್ನು ಅಲುಗಾಡಿಸುತ್ತಾಳೆ.[೬೨] ಕಾಂತಿಯುಕ್ತವಾದ ಹಲ್ಲುಗಳನ್ನು ಹೊಂದಿರುವ ಮಾಯೆಯ ಸಖಿಯರು ಚಾಮರಸನ ದೃಷ್ಟಿಯಲ್ಲಿ ಮನ್ಮಥಬ್ರಹ್ಮನ ಹೊಸ ಬಗೆಯ ಸೃಷ್ಟಿ.[೬೩] ಲತೆಯಂತೆ ಬಳುಕುವ ಮನೋಹರವಾದ ದೇಹ, ತೆಳುವಾದ ಹೊಟ್ಟೆ ಇವುಗಳನ್ನು ಹೊಂದಿರುವ ಮಾಯಾದೇವಿಯ ಹಣೆಯ ಕಸ್ತೂರಿಯ ಶ್ರೇಷ್ಠ ತಿಲಕದ ಮಧ್ಯದಲ್ಲಿ ಒತ್ತಿ ನಿಲ್ಲಿಸಿದ ಬೊಟ್ಟು ಮನ್ಮಥನ ವೀರಲಕ್ಷ್ಮಿಯ ಹಣೆಗಣ್ಣಿನಂತೆ ಶೋಭಿಸುತ್ತದೆ.[೬೪] ಅವಳ ಉದ್ದವಾದ ಜಡೆ ಮನ್ಮಥನ ಭಂಡಾರವನ್ನು ರಕ್ಷಿಸುವ ಕಾಳಿಂಗನಂತೆ ಹೊಳೆಯುತ್ತದೆ.[೬೫] ಅವಳ ತೋಳಿನ ಆಭರಣಗಳು ಸಿದ್ಧಸಾಧಕರನ್ನು, ದೇವಾಧಿದೇವತೆಗಳನ್ನು ಕೆಳಗೆ ಬೀಳುವಂತೆ ಬಡಿದು ಕಟ್ಟುವ ಕಾಮಪಾಶದ ಬಂಧನದಂತೆ ತೋರುತ್ತವೆ.[೬೬] ಅವಳ ಬೆರಳುಗಳಿಗೆ ತೊಡಿಸಿದ ಮಣಿಮುದ್ರಿಕೆಗಳು ಮನ್ಮಥನು ಬಾಣದಲ್ಲಿ ವಿಸ್ತರಿಸಿ ಸೇರಿಸಿದ ಅಣಸುಗಳಂತೆ ತೋರುತ್ತವೆ.[೬೭]

ಆದರೆ ಕವಿ ರತಿಭಾವವನ್ನು ವ್ಯಕ್ತಮಾಡುವಲ್ಲಿ ಪರಾಕಾಷ್ಠತೆಯನ್ನು ತಲುಪುವುದು ಕೆಳಗಿನ ಪದ್ಯಗಳಲ್ಲಿ. ಕಾಮನು ತಿಳಿದ ರಹಸ್ಯಶಾಸ್ತ್ರಗಳ ಮೊತ್ತದ ನಡಿಗೆಯನ್ನು ಧ್ವನಿಸಿ ನೂಪುರವನ್ನು ಸಖಿಯರು ಮಾಯೆಯ ಪಾದಗಳಿಗೆ ತೊಡಿಸುತ್ತಾರೆ. ಕಾಲಿಗೆ ಬಿರುದಿನ ಬಳೆಯನ್ನು ತೊಡಿಸುತ್ತಾರೆ. ಹೀಗೆ ಮಾಡುತ್ತ ಕಾಲು ಮದನತತ್ತ್ವಪ್ರೇಮಿಗಳಿಗೆ ಸೀಮೆಯೆಂದು ಸಖಿಯರು ಸೂಚಿಸುತ್ತಾರಂತೆ!

ಕಾಮನರಿವ ರಹಸ್ಯಶಾಸ್ತ್ರ

ಸ್ತೋಮಗತಿಯನು ನುಡಿದು ತೋರುವ

ರಾಮಣೀಯದ ನೇವುರವನಿಕ್ಕಿದರು ಚರಣದಲಿ ।

ಸೀಮೆಯಿದಲಾ ಮದನತತ್ತ್ವ

ಪ್ರೇಮಿಗಳಿಗೆನುತಳವಡಿಸಿದರು
ಕಾಮಿನಿಯ ಕಾಲಿಂಗೆ ಕೆಲಬರು ಪಾಯವಟ್ಟವನು ॥ [೬೮]

ಇನ್ನೊಂದು ಪದ್ಯದಲ್ಲಿ ಕವಿ ಮಾಯೆಯನ್ನು ಕಾಮನ ಹೆಂಡತಿ ರತಿದೇವಿಯೊಂದಿಗೆ ಸಮನಾಗಿಟ್ಟು ನೋಡುತ್ತಾನೆ. ಮಾಯೆಯನ್ನು ಇಡಿಯಾಗಿ ಕಾಮನ ವಶಕ್ಕೆ ಒಪ್ಪಿಸುತ್ತ ಆ ಪದ್ಯವನ್ನು ಕಾಮನ ವಿವಿಧ ನಾಮಗಳಿಂದ ತುಂಬಿ ಬಿಡುತ್ತಾನೆ. ಹೀಗೆ ಮನಸಿಜ, ಕುಸುಮಾಸ್ತ್ರ, ಕಾಮ, ಅನಂಗ, ಚಿತ್ತಜ ಹಾಗೂ ಕಂದರ್ಪ ಎಂಬ ಆರು ಹೆಸರುಗಳಿಂದ ಅವನನ್ನು ಸೂಚಿಸುತ್ತಾನೆ. ಮಾಯೆ ಅವನಿಗೆ ಮನೆಯೊಡತಿ, ಕುಲೋತ್ತಮೆ, ಭುಜದ ತುದಿಯ ವಿಜಯಲಕ್ಷ್ಮಿ, ಮುಖ್ಯ ದೇವತೆ, ವಿಲಾಸದ ಚೈತನ್ಯಮೂರ್ತಿ ಹಾಗೂ ಕೈಗತ್ತಿಯ ವೀರಶ್ರೀ.

ಮನಸಿಜನ ಮನೆದೇವಿ ಕುಸುಮಾ
ಸ್ತ್ರನ ಕುಲೋತ್ತಮೆ ರಾಜಗುರು ಕಾ
ಮನ ಭುಜಾಗ್ರದ ವಿಜಯಲಕ್ಷ್ಮಿಯನಂಗನಧಿದೈವ ।
ವಿನಯಚಿತ್ತಜಯಂತ್ರ ಚೇಷ್ಟಾ
ವಿನುತ ಚೇತನಮೂರ್ತಿ ಕಂದ
ರ್ಪನ ಕರಾಸಿಯ ವೀರಸಿರಿಯನೆ ಮೆರೆದಳಾ ದೇವಿ ॥ [೬೯]

ಸಕಲಕಲಾಪೂರ್ಣ ಸ್ತ್ರೀಯನ್ನು ಕುರಿತಾದ ಒಂದು ಮಾತು ಹೀಗೆ ಬರುತ್ತದೆ. "ಸ್ತ್ರೀಯರಲ್ಲಿ ರೂಪವತಿಯು, ರೂಪವತಿಯರಲ್ಲಿ ಯೌವನವುಳ್ಳವಳು, ರತಿಕೌಶಲದ ಸಾರವನ್ನು ತಿಳಿದವಳು, ಸಂಗೀತವನ್ನು ಬಲ್ಲವಳು ಮತ್ತು ನರ್ತಕಿಯು ಶ್ರೇಷ್ಠಳು. ಹಿಂದಿನ ಗುಣಗಳೊಂದಿಗೆ ಮುಂದು ಮುಂದಿನ ಗುಣಗಳನ್ನು ಪಡೆದಷ್ಟೂ ಅವಳಲ್ಲಿ ಶ್ರೇಷ್ಠತೆ ಹೆಚ್ಚುತ್ತದೆ. ಈ ಎಲ್ಲ ಗುಣಗಳನ್ನೂ ಹೊಂದಿರುವ ಸುಂದರಿಯು ಈ ಪ್ರಪಂಚದಲ್ಲಿ ವಿರಳ."[೭೦] ಪ್ರಪಂಚದಲ್ಲಿ ವಿರಳವಾಗಿ ಲಭ್ಯವಾಗುವ ಇಂಥ ಸ್ತ್ರೀಯು ಕತೆ, ಕಾದಂಬರಿ, ಕಾವ್ಯಗಳಲ್ಲಿ ಸಿಗುವುದೂ ವಿರಳ. ಆದರೆ ಚಾಮರಸನ ಪಡಿಯಚ್ಚಿನಲ್ಲಿ ಮೂಡಿ ಬಂದಿರುವ ಮಾಯಾದೇವಿಯಲ್ಲಿ ಈ ಎಲ್ಲ ಗುಣಗಳು ಪರಿಪೂರ್ಣಾವಸ್ಥೆ ಪಡೆದಿರುವುದನ್ನು ಕಾಣುತ್ತೇವೆ. ಹೀಗೆ ಮೂರನೆಯ ಗತಿಯಲ್ಲಿ ಮಾಯೆ ಪ್ರವೇಶ ಮಾಡಿದಾಗಿನಿಂದ ಎಂಟನೆಯ ಗತಿಯಲ್ಲಿ ಸ್ವಸ್ಥಾನಕ್ಕೆ

ತಿರುಗಿ ಹೋಗುವ ವರೆಗೆ ಚಾಮರಸನ ರತಿಭಾವದ ದೃಷ್ಟಿ ಅವಳ ಮೇಲೆ ಓತಪ್ರೋತವಾಗಿ ಹರಿದಿದೆ. ಈ ರೀತಿಯ ಕಾವ್ಯಾನುಸರಣೆಯಿಂದಾಗಿ ಕೆಲವೊಮ್ಮೆ ಓದುಗರು ಸಂಕೋಚಕ್ಕೊಳಗಾಗುತ್ತಾರೆ. ಪ್ರವಚನಕಾರರಿಗಂತೂ ತುಂಬಿದ ಸಭೆಗಳಲ್ಲಿ ಈ ಭಾಗವನ್ನು ಬಿಟ್ಟು ಹೋಗಲಾಗದಂತೆ, ಎಂಥ ವಿರಕ್ತರೂ ಮತ್ತೆ ಮತ್ತೆ ಓದುವಂತೆ ಮಾಯೆ-ಅಲ್ಲಮ-ವಿಮಳೆ ಈ ಮೂವರ ನಡುವೆ ರೂಪುಗೊಂಡ ವೀರಶೈವತ್ವದ ವಿಷಯವನ್ನು ಕವಿ ಇದರೊಂದಿಗೆ ತಳಕು ಹಾಕಿದ್ದಾನೆ. ಹೀಗೆ ಕಾಮಶಾಸ್ತ್ರಜ್ಞನಾಗಿ ಹಾಗೂ ನಾಟ್ಯಶಾಸ್ತ್ರಜ್ಞನಾಗಿ ಮಾಯಾಕೋಲಾಹಲದ ಪ್ರಸಂಗವನ್ನು ಶೃಂಗಾರರಸದಲ್ಲಿ ನೇಯ್ದಿರುವ ಚಾಮರಸ ತಾನು ವಿರಕ್ತಕವಿಯಲ್ಲವೆಂದೂ ಕೇವಲ ಭಕ್ತಕವಿಯೆಂದೂ ಸಾರಿ ಸಾರಿ ಹೇಳುತ್ತಾನೆ.

ಅಲ್ಲಮನನ್ನು ವಶಪಡಿಸಿಕೊಂಡು ನಿಜತತ್ತ್ವವನ್ನು ತಿಳಿಯುವುದಾಗಿ ಮಾಯೆ ಮಮಕಾರ-ಮೋಹಿನಿಯರ ಮಗಳಾಗಿ ಭೂಲೋಕದಲ್ಲಿ ಅವತರಿಸುತ್ತಾಳೆ. ಮಧುಕನಾಥನ ದೇವಾಲಯದಲ್ಲಿ ಅವನ ಮುಂದೆ ಲಾಸ್ಯರೂಪದ ಸೇವೆಯನ್ನು ಸಲ್ಲಿಸುತ್ತಿದ್ದಾಗ ಚೆಲುವಿಕೆಗೆ ಬಿರುದು ಕಟ್ಟಿದಂತೆ ಹದಿನಾರು-ಹದಿನೆಂಟು ವರುಷದವನ ವೇಷತಾಳಿ ಮದ್ದಳೆಕಾರನಾಗಿ ಬಂದ ಅಲ್ಲಮನಿಗೆ ಮನಸೋತು ಕಾಮಾತುರಳಾಗಿ ಶರೀರಸುಖಕ್ಕೆ ಹಾತೊರೆಯುತ್ತಾಳೆ. ಅಲ್ಲಮನು ಅದನ್ನು ತಿರಸ್ಕರಿಸಿ ಭಕ್ತಿಭಾವದಿಂದ ತನ್ನನ್ನು ಆರಾಧಿಸಬೇಕೆಂದು ತಿಳಿಸುತ್ತಾನೆ. ಆದರೆ ಮಾಯೆಯ ಸಖಿಯರು ಅಲ್ಲಮನ ಮನವೊಲಿಸಿ ಅವನನ್ನು ತಮ್ಮ ಒಡತಿಯೊಂದಿಗೆ ಮಲಗುವ ಮನೆಯಲ್ಲಿ ಇರಿಸುತ್ತಾರೆ. ವೈಶಿಷ್ಟ್ಯವೆಂದರೆ ಅವನು ಅವಳ ಅಪ್ಪುಗೆಗಾಗಲಿ, ಚುಂಬನಕ್ಕಾಗಲಿ, ಸಂಭೋಗಕ್ಕಾಗಲಿ ಸಿಕ್ಕದೆ ಮಿಂಚಿನ ಹೊಳಪಿನಂತೆ ಗೋಚರಿಸುತ್ತಾನೆ. ಮುಂದೆ ಸಖಿಯರು ಆ ಸ್ಥಳವನ್ನು ತೆರವು ಮಾಡಲು ತಿಳಿಸಿದಾಗ ಅಲ್ಲಮನು ಮಾಯೆಯಗಲಿದ ಬಳಿಕ ದೇಹವಿಲ್ಲವೆಂದು ತಿಳಿಸುತ್ತಾನೆ. ವಿಮಳೆಯನ್ನು ಕಂಡು ಮಾಯೆ ಪೂರ್ವವೃತ್ತಾಂತವನ್ನು ನೆನಪಿಸಿಕೊಂಡಾಗ ವಿಮಳೆ ಅವಳಿಗೆ 'ಶಿವನಲ್ಲಿ ಭಕ್ತಿಯನ್ನು ಮಾಡಿದರೆ ಅಲ್ಲಮನು ಕರುಣಿಸುತ್ತಾನೆ, ವಿಷಯವಿಕಳತೆಯನ್ನು ಬಿಟ್ಟು ಸಾತ್ವಿಕ ಬುದ್ಧಿಯಿಂದ ನೋಡಿದರೆ ಗೊತ್ತಾಗುತ್ತದೆ' ಎಂದು ತಿಳಿಸುತ್ತಾಳೆ. ಆದರೆ ಭಕ್ತಿಯ ಭಾವ ತಪ್ಪಿ ಕಾಮಾತುರದಿಂದ ಮಾಯೆ ಮುಂದುವರೆದಾಗ ಅಲ್ಲಮನು ಮದ್ದಳೆಯನ್ನು ಒಡೆದು ಹಾಕಿ ಹೊರಟು ಹೋಗುತ್ತಾನೆ.

ಮಾಯಾದೇವಿಯ ಸಖಿಯರು ಅಲ್ಲಮನನ್ನು ಕುರಿತು 'ಅವಳು ಅವನಲ್ಲಿ ಅನುರಕ್ತಳಾಗುವಂತೆ ಮಾಡಿ ಅವಳನ್ನು ವಂಚಿಸುವುದು ಸರಿಯೇ' ಎಂದು ಕೇಳುತ್ತಾರೆ. ತಾನು ಅವಳ ದುಗುಡಕ್ಕೆ

ಕಾರಣನಲ್ಲವೆಂದೂ ಅದು ಅವಳೇ ಸೃಷ್ಟಿಸಿಕೊಂಡದ್ದೆಂದೂ ಅಲ್ಲಮ ಅವರಿಗೆ ತಿಳಿಸುತ್ತಾನೆ. ಇದಕ್ಕೆ ಮಾಯೆ ದೇವಾಧಿದೇವತೆಗಳನ್ನು ತಾನು ಭಂಗಗೊಳಿಸಿರುವುದಾಗಿ ಹಾಗೂ ಬ್ರಹ್ಮ-ವಿಷ್ಣು-ಮಹೇಶ ಎಲ್ಲರೂ ತನಗೆ ಶರಣಾಗುವಂತೆ ಮಾಡಿರುವುದಾಗಿ ಅಲ್ಲಮನಿಗೆ ಹೇಳುತ್ತಾಳೆ. 'ಆ ಎಲ್ಲರನ್ನು ತಿಳಿದಿದ್ದರೂ ಆವಳಿಗೆ ತನ್ನ ಆದಿ-ಅಂತ್ಯಗಳು ತಿಳಿದಿಲ್ಲ'ವೆಂದು ಅವನು ಮರುನುಡಿಯುತ್ತಾನೆ. ಪರಿಶುದ್ಧ ಮನಸ್ಸಿನಿಂದ ತನ್ನೊಂದಿಗೆ ಮಾತನಾಡಲು ತಿಳಿಸಿ, ಹರಿ-ಹರ-ಬ್ರಹ್ಮಾದಿಗಳನ್ನು ಮಾಯೆ ಆಡಿಸುತ್ತಿದ್ದರೆ ಆ ಮಾಯೆಯನ್ನು ಆಡಿಸುವ ಶಕ್ತಿಯೊಂದಿದೆಯೆಂದು ಅಲ್ಲಮ ಹೇಳುತ್ತಾನೆ.

> **ಹರಿಹರ ಬ್ರಹ್ಮಾದಿಗಳನೆ**
> **ಲ್ಲರನು ನಿನ್ನಾಧೀನ ವೃತ್ತಿಯ**
> **ಲಿರಿಸಿ ಮಿಗೆಚೋಡಾಡಿ ಕಾಡುವೆನೆಂದು ನೀ ನುಡಿದೆ ।**
> **ಮರುಳೆ ನಿನ್ನನದಾರು ನಾನಾ**
> **ಪರಿಯಲಾಡಿಸುವವರು ನೀನಿದ**
> **ಪರಿಕಿಸದೆ ಗರ್ವದಲಿ ನುಡಿವರೆ ಮಾಯೆ ಕೇಳೆಂದ ॥** ೬೧

ಆದರೂ ಮಾಯೆ ತನ್ನ ಮೇಲೆ ಕೃಪೆ ಮಾಡಬೇಕೆಂದು ಕೇಳಿದಾಗ ಅವಳು ಮಾಡಿದಷ್ಟರ ಫಲ ಅವಳಿಗೆ ಸಿಕ್ಕಿರುತ್ತದೆಂದು ಅಲ್ಲಮ ತಿಳಿಸುತ್ತಾನೆ. ಅವಳು ಸ್ವಸ್ಥಾನಕ್ಕೆ ಮರಳಬೇಕೆಂದು ಸೂಚಿಸುತ್ತಾನೆ. ಮಾಯೆ ತನ್ನ ಪಾಡನ್ನು ನೋಡಿ ಕೈಲಾಸದವರು ನಗುತ್ತಾರೆಂದೂ ತಾನು ನಿರಾಶೆಗೆ ಒಳಗಾಗಿರುವುದಾಗಿಯೂ ತಿಳಿಸುತ್ತಾಳೆ. ವಿಷಯಗಳಲ್ಲಿ ಸಿಕ್ಕಿ, ಕಾಮದಿಂದ ಉಕ್ಕಿ ಬಳಿಕ ಕೃಪೆಯನ್ನು ಬಯಸಿದರೆ ಅದು ದೊರಕುವುದಿಲ್ಲವೆಂದು ಪ್ರಭು ಉತ್ತರಿಸುತ್ತಾನೆ. ಅಲ್ಲಮನಿಂದ ಸುಖವನ್ನು ಲೂಟಿಮಾಡಿ ಶಿವತತ್ತ್ವಾನುಭಾವವನ್ನು ತಿಳಿದು ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದೆಂದು ನಂಬಿದ್ದಾಗಿ ಮಾಯೆ ತಿಳಿಸಿದರೆ ಇಬ್ಬಗೆಯ ಮನಸ್ಸಿನ ಪೂಜೆಗೆ ಫಲವಿಲ್ಲವೆಂದು ಪ್ರಭು ತಿಳಿಸುತ್ತಾನೆ. ವಿಮಳೆ ವಿವೇಕ ಹೇಳಿ ನೋಡುತ್ತಾಳೆ, ಆದೂ ವ್ಯರ್ಥವಾಗುತ್ತದೆ. ಯಾವ ರೀತಿ ಕಾಮಕ್ಕೂ ಪರಮತತ್ತ್ವಕ್ಕೂ ಸಂಭಂಧವಿಲ್ಲವೋ ಹಾಗೆಯೇ ಮಾಯೆಗೂ ಮಹಾಘನಕ್ಕೂ ಸಂಭಂಧವಿಲ್ಲವೆಂದು ಪ್ರಭು ಹೇಳುತ್ತಾನೆ. ತಾನು ಪ್ರತಿಜ್ಞೆಮಾಡಿ ಬಂದಿರುವುದಾಗಿಯೂ, ನಿರಾಶೆಯಿಂದ ಹಿಂದಿರುಗುವುದು ಸಾಧ್ಯವಿಲ್ಲವೆಂದೂ ತಿಳಿಸಿ ಅಲ್ಲಮನನ್ನು

[illegible]

[illegible]

[illegible]

[illegible]

[illegible]

[illegible]

[illegible]

ನಿಶ್ಚಿತವಾಗಿ ತಾನು ಹಿಡಿದುಕೊಳ್ಳುತ್ತೇನೆಂದು ಮಾಯೆ ತಿಳಿಸುತ್ತಾಳೆ. ಆಗ ಪ್ರಭು ಮಾಯೆಗೆ ನಿರ್ವಯಲ ಬಲೆಯನ್ನು ಬೀಸಿ ಜಾರಿ ಹೋಗುತ್ತಾನೆ.

ಬಯಲ ಬಂಧಿಸಲೆಂದು ಕೃತನಿ
ಶ್ಚಯವ ಮಾಡಲು ಸಿಕ್ಕಬಲ್ಲುದೆ
ನಿಯತವೆನ್ನನು ಹಿಡಿದುಕೊಂಬೊಡೆ ನೋಡು ನೀನೆನುತ ।
ಪ್ರಿಯದಲಾಗಳೆ ತನ್ನ ನಿಜ ನಿ
ರ್ಣಯವ ನಿರ್ಮಿಸಿ ನಿಮಿಷದಲಿ ನಿ
ರ್ವಯಲಜಾಲವ ಬೀಸಿ ಹೋದನು ಮಾಯೆಗಲ್ಲಮನು ॥ ೨

ದುಃಖಿತಳಾದ ಮಾಯೆಗೆ ಅವಳ ಸಖಿಯರು ಸಮಾಧಾನ ಹೇಳುತ್ತಾರೆ. ಗಿರಿಜೆಯ ಆಜ್ಞೆಗನುಗುಣವಾಗಿ ಮಾಯೆ ಬಂದಳೆಂದೂ ಮಮಕಾರ–ಮೋಹಿನಿಯರು ಮಗಳಿಗಾಗಿ ಚಿಂತಿಸಬಾರದೆಂದೂ ವಿಮಳೆ ಅವರಿಗೆ ಸಮಾಧಾನ ಹೇಳುತ್ತಾಳೆ. ಆ ಮಾತನ್ನು ದೃಢೀಕರಿಸುತ್ತ ತಂದೆತಾಯಿಗಳು ತನ್ನಿಂದ ಇನ್ನು ಹೆಚ್ಚಿನದೇನನ್ನೂ ನಿರೀಕ್ಷಿಸಬಾರದೆಂದು ಹೇಳಿ ಮಾಯೆ ವಿಮಳೆಯೊಂದಿಗೆ ಕೈಲಾಸ ಪರ್ವತಕ್ಕೆ ಹೋಗುತ್ತಾಳೆ.

ಹೀಗೆ ಮಾಯೆಯ ಠೇಂಕಾರಕ್ಕೆ ಅಲ್ಲಮನ ಪ್ರತಿಕ್ರಿಯೆ ದೃಢವಾಗಿದೆ, ಕಠಿಣವಾಗಿದೆ ಹಾಗೂ ಆಶ್ಚರ್ಯಕರವಾಗಿದೆ.

* ವಿವಿಧ ಕೃತಿಗಳಲ್ಲಿ ಮಾಯೆ ಮತ್ತು ಅಲ್ಲಮ

ಮಾಯೆಯ ಪ್ರಸಂಗವು ವಿವಿಧ ಕೃತಿಗಳಿಲ್ಲಿ ವಿಧವಿಧವಾಗಿ ಮೂಡಿ ಬಂದಿದೆ. ಅವುಗಳಲ್ಲಿ ಚಾಮರಸನದೂ ಒಂದು ವಿಧ. ಅಲ್ಲಮ ಮತ್ತು ಮಾಯೆಯರ ಪ್ರಸಂಗವು ನಮಗೆ ಮೊದಲು ಗೋಚರವಾಗುವುದು ಹರಿಹರನ 'ಪ್ರಭುದೇವರ ರಗಳೆ'ಯಲ್ಲಿ. ಕೈಲಾಸದ ನಿರ್ಮಾಯ ಶರಣ ಹಾಗೂ ಸುರಸತಿಯರು ಪರಸ್ಪರ ನೋಡುತ್ತಿರುವುದನ್ನು ನಿರೀಕ್ಷಿಸಿದ ಶಿವನು ಅವರಿಬ್ಬರೂ ಭೂಲೋಕಕ್ಕೆ ಹೋಗಿ

* ಡಾ. ಎಂ. ಚಿದಾನಂದಮೂರ್ತಿ ಅವರ 'ಶೂನ್ಯ ಸಂಪಾದನೆಯನ್ನು ಕುರಿತು' ಕೃತಿ ಆಧರಿಸಿ ಇದನ್ನು ಸಿದ್ಧಪಡಿಸಲಾಗಿದೆ.

ಸುರತಸುಖವನ್ನನ್ನುಭವಿಸಿ ಬರುವಂತೆ ಬೆಸಸುತ್ತಾನೆ. ಅದನ್ನು ಕೇಳಿ ಇಬ್ಬರೂ ಜನ್ಮವೆತ್ತಿ ಮರ್ತ್ಯಕ್ಕೆ ಬರುತ್ತಾರೆ. ಕಾಮವಶನಾದ ಅಲ್ಲಮ ಹಾಗೂ ಮೋಹವಶಳಾದ ಕಾಮಲತೆ ಸುರತದ ಸುಖವನ್ನನುಭವಿಸುತ್ತಾರೆ. ಕಾಮಲತೆ ಜ್ವರ ಪೀಡಿತಳಾಗಿ ಸತ್ತ ನಂತರ ಸತ್ತಂತಿದ್ದ ಅಲ್ಲಮ ಅನಿಮಿಷಯ್ಯನ ಕೈಯಿಂದ ಲಿಂಗವನ್ನು ಗ್ರಹಿಸಿ ಜ್ಞಾನಿಯಾಗಿ ಮಹಾವೈರಾಗ್ಯ ತಾಳಿ ಹೊರಟು ಹೋಗುತ್ತಾನೆ.

ಮೊದಲಿನ ಎರಡು ಶೂನ್ಯ ಸಂಪಾದನೆಗಳು ಇದೇ ಕಥಾಸರಣಿಯನ್ನು ಹೊಂದಿದ್ದರೂ ಅಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಿದೆ. ಎರಡನೆಯ ಶೂನ್ಯಸಂಪಾದನೆಯಲ್ಲಿ ನಿರ್ಮಾಯ ಎನ್ನುವ ಗಣನನ್ನು ಪರೀಕ್ಷಿಸಲು ಪಾರ್ವತಿ ರುದ್ರಕನ್ನಿಕೆಯೊಬ್ಬಳನ್ನು ಕಳಿಸುತ್ತಾಳೆ. ನಿರ್ಮಾಯನು ತಾನು ಬರುತ್ತಿದ್ದ ದಾರಿಯಲ್ಲಿ ಅತ್ಯಂತ ಸೌಂದರ್ಯದ ರುದ್ರಕನ್ನಿಕೆಯನ್ನು ಕಂಡು ಚಿತ್ತಚಂಚಲವುಳ್ಳವನಾಗುತ್ತಾನೆ. ಶಿವನ ಓಲಗಕ್ಕೆ ಬಂದ

ಅವರಿಗೆ ಶಿವನು ಭೂಮಿಯಲ್ಲಿ ಹುಟ್ಟಲು ಆಜ್ಞೆ ಮಾಡುತ್ತಾನೆ. ಮುಂದೆ ಹರಿಹರನ ರಗಳೆಯಲ್ಲಿ ತಿಳಿಸಿರುವಂತೆ ಕಥೆ ಮೂಡಿ ಬರುತ್ತದೆ.

ಮೂರನೆಯ 'ಶೂನ್ಯ ಸಂಪಾದನೆ'ಯ ರಚನಾಕಾರ ಗುಮ್ಮಳಾಪುರದ ಸಿದ್ಧಲಿಂಗಯತಿ ಹಾಗೂ ನಾಲ್ಕನೆಯವನಾದ ಗೂಳೂರ ಸಿದ್ಧವೀರಣ್ಣೊಡೆಯ ಇವರೀರ್ವರೂ 'ಪರಶಿವಲಿಂಗವೇ ಗುರು-ಲಿಂಗ-ಜಂಗಮವಾಗಿ ಬಂದು ಲೋಕೋದ್ಧಾರ ಮಾಡುತ್ತಿದೆ' ಎಂದು ತಿಳಿಸುತ್ತಾರೆ.

ಲಕ್ಕಣ್ಣ ದಂಡೇಶನ 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಅಲ್ಲಮನು ಭೂಮಿಯಲ್ಲಿ ಹುಟ್ಟಿ ಬರುವ ಪ್ರಸಂಗಕ್ಕೆ ಮೂಲದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಭೂಲೋಕಕ್ಕೆ ಹೋಗಲು ಹಿಂಜರಿದ ನಂದೀಶನ ಘನತೆಯನ್ನು ಶಿವನು ಹೊಗಳುತ್ತಿರುವಾಗ ಗಣ ನಿರ್ಮಾಯ ಆಕ್ಷೇಪಿಸುತ್ತಾನೆ. ಶಿವ-ನಿರ್ಮಾಯರಲ್ಲಿ ಸಂವಾದ ಬೆಳೆದು ಪರೀಕ್ಷೆಯ ಪ್ರಸಂಗ ಉಂಟಾಗುತ್ತದೆ. ಪಾರ್ವತಿಯ ಆಹ್ವಾನಕ್ಕನುಗುಣವಾಗಿ ಅಲ್ಲಿಗೆ ಬಂದ ಆದಿ ಮಾಯಾಶಕ್ತಿಯ ಪ್ರಭಾವದಿಂದ ಎಲ್ಲರೂ ಮೈಮರೆಯುತ್ತಾರೆ. ನಿರ್ಮಾಯನು ತದೇಕ ದೃಷ್ಟಿಯಿಂದ ಅವಳನ್ನು ನೋಡುತ್ತಿರಲಾಗಿ ಪರಮೇಶ್ವರನು ಅವನಿಗೆ ಧರೆಯಲ್ಲಿ ಅವತರಿಸಲು ಹಾಗೂ

[illegible]

[illegible]

[illegible]

[illegible]

[illegible]

ಮಾಯೆಯನ್ನು ಗೆಲಿದು ವೀರಶೈವ ವ್ರತಾಚಾರದಿಂದ ಬ್ರಹ್ಮಯೋಗ ಸಮಾಧಿ ಪಡೆದು ಬರಲು ಆಶೀರ್ವಾದ ಮಾಡುತ್ತಾನೆ.

ಪ್ರಭುಲಿಂಗಲೀಲೆಯಲ್ಲಿ ಭೂಲೋಕದಲ್ಲಿ ಸುಜ್ಞಾನಿ-ನಿರಹಂಕಾರರೆಂಬವರಿಗೆ ಮಗನಾದ ಅಲ್ಲಮನು ಶಿವನ ನಿಜಸ್ವರೂಪನೇ ಆಗಿರುತ್ತಾನೆ. ಪಾರ್ವತಿಯು ತನ್ನ ತಾಮಸಕಳೆಯ ಮೂರುತಿಯನ್ನು ಮಾಯೆಯ ರೂಪದಲ್ಲಿ ಕಳಿಸುತ್ತಾಳೆ.

ಪಾರ್ವತಿ ತನ್ನ ತಾಮಸಕಳೆಯನ್ನು ಮಾಯೆಯ ರೂಪದಲ್ಲಿ ಕಳಿಸುವ ವಿಚಾರವನ್ನು ಚಾಮರಸನಲ್ಲಿ ಮಾತ್ರ ಕಾಣುತ್ತೇವೆ.

ಆ) ಕೌಶಿಕ

ಪ್ರಭುಲಿಂಗಲೀಲೆಯಲ್ಲಿ ಕೌಶಿಕನೊಡನೆ ಬರುವ ಅಕ್ಕಮಹಾದೇವಿಯ ಪ್ರಸಂಗವನ್ನು ನೋಡುವಾಗ ಅಲ್ಲಿಯ ಪಾತ್ರಗಳ ಲೌಕಿಕತೆಯು ಸಾಮಾನ್ಯ ಪ್ರವೃತ್ತಿಯ ವ್ಯಕ್ತಿಗಳ ನಡವಳಿಕೆಯಂತಿಯೇ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಆದರೆ ಅಕ್ಕಮಹಾದೇವಿಯ ಪಾತ್ರವು ಈ ಅಭಿಪ್ರಾಯದಿಂದ ದೂರ ಸರಿಯುತ್ತದೆ. ಕುದುರೆ ಸವಾರಿಯಲ್ಲಿ ಬರುತ್ತಿರುವ ಅರಸನ ಸಂಭ್ರಮವನ್ನು ನೋಡಲು ಬಾಗಿಲ ಬಳಿ ಅಕ್ಕಮಹಾದೇವಿ ನಿಂತಿರುವಾಗ ಅವಳನ್ನು ಕಂಡ ಕೂಡಲೆ ಅವನು ಮನಸೋತು ಕಂಗೆಡುತ್ತಾನೆ. ಅವಳನ್ನು ಮದುವೆಯಾಗುವ ಉದ್ದೇಶದಿಂದ ವಿಚಾರಿಸಿಕೊಂಡು ಬರಲು ಹೆಗ್ಗಡಿತಿಯರನ್ನು ನಿರ್ಮಳನ ಮನೆಗೆ ಕಳಿಸುತ್ತಾನೆ. ತಮ್ಮ ಕುಲಕ್ಕೆ ಅರಸನ ಕುಲವು ವಿಷಮವೆಂದು ಭಾವಿಸುವ ನಿರ್ಮಳ-ಸುಮತಿಯರು ಜವಾಬ್ದಾರಿಯನ್ನು ಮಗಳ ಮೇಲೆಯೇ ಹಾಕುತ್ತಾರೆ. ಅದಕ್ಕೆ ಅಕ್ಕಮಹಾದೇವಿ ಉಪಾಯವೊಂದನ್ನು ಕಲ್ಪಿಸುತ್ತಾಳೆ.

ಅರಸನಿಗೆ ತಾನು ಬೇಕಿದ್ದರೆ ತನ್ನ ಕರಾರುಗಳನ್ನೆಲ್ಲಾ ಒಪ್ಪಿಕೊಳ್ಳಲಿ ಎಂದು ಹೇಳುತ್ತ ಅಕ್ಕಮಹಾದೇವಿ ಅವುಗಳನ್ನು ಪೂರೈಸುವುದಕ್ಕಾಗಿ ಅವನು ಪ್ರತಿಜ್ಞೆ ಮಾಡಬೇಕೆಂದು ತಿಳಿಸುತ್ತಾಳೆ. ಅದಕ್ಕನುಗುಣವಾಗಿ ಕೌಶಿಕನು ನಿರ್ಮಳನಲ್ಲಿಗೆ ಬಂದು ಪ್ರತಿಜ್ಞೆ ಮಾಡುತ್ತಾನೆ. ಅರಸನಾದ ಅವನು ತನ್ನ ಘನತೆಗೆ ತಕ್ಕಂತೆಯೇ ನುಡಿಯುತ್ತಾನೆ. ಅಕ್ಕಮಹಾದೇವಿಯ ಕರಾರುಗಳನ್ನೆಲ್ಲ ಒಪ್ಪಿಕೊಂಡು ನ್ಯಾಯಪಕ್ಷಪಾತಿ ಅರಸನಿಗೆ ಯೋಗ್ಯವಾಗುವಂಥ ಮಾತುಗಳನ್ನಾಡುತ್ತಾನೆ.

ಕೌಶಿಕನ ದೃಷ್ಟಿಯಲ್ಲಿ ಸುಳ್ಳು ನುಡಿಯುವುದು, ಜೀವಹಿಂಸೆಯಿಂದ ಸಂತೋಷ ಪಡುವುದು, ತಾಯಿ ಮಕ್ಕಳ ಬಾಂಧವ್ಯವನ್ನು ಕೆಡಿಸುವುದು, ಮಿತ್ರನಿಗೆ ಎರಡು ಬಗೆಯುವುದು, ಚಾಡಿ ಹೇಳುವುದು ಇವು ದುರ್ಮಾರ್ಗಗಳು.[೨೩] ತನ್ನ ಪ್ರತಿಜ್ಞೆಯಲ್ಲಿ ತಪ್ಪಿದರೆ ಈ ದುರ್ಗತಿಗಳು ತನಗೆ ಬರಲೆಂದು ತಿಳಿಸುತ್ತಾನೆ. ತಾನು ಮಾಡಿದುದು ಸತ್ಯಪ್ರತಿಜ್ಞೆಯೆಂದೂ ಅದು ತಪ್ಪಿದರೆ ತನ್ನ ಕಾರ್ಯಸಾಧನೆಗಾಗಿ ಅನ್ಯರನ್ನು ಹಾಳು ಮಾಡುವ, ಹೆಂಡತಿಯನ್ನು ಬಾಧಿಸುವ, ಪರಸತಿಯನ್ನು ಬಯಸುವ ನಾಯಿಗಳ ಗತಿ ತನಗೆ ಬರಲೆಂದು ನುಡಿಯುತ್ತಾನೆ.[೨೪] ಪಾಪಪ್ರಜ್ಞೆಯಲ್ಲಿ ಹಾಗೂ ನರಕದ ಭಯದಲ್ಲಿ ನರಳುವ ಅವನು ಮುಂದುವರೆದು ಭಾಷೆ ಪೂರೈಸದೆ ಅವಳನ್ನು ಬಯಸಿದರೆ ನಿಂದಕನ, ನಿಷ್ಠುರನ, ಬಲು ಸೂರೆಮಾಡುವ ಕಳ್ಳನ, ಬಹಿಷ್ಕೃತನಾದವನ, ಯುದ್ಧದಲ್ಲಿ ಹೆದರಿ ಹಿಂದೆಗೆವವನ, ಒಡೆಯನಿಗೆ ವಂಚನೆ ಮಾಡುವವನ, ವಿಶ್ವಾಸಘಾತಕನ, ಬಂಧುಗಳಲ್ಲಿ ವ್ಯತ್ಯಾಸ ಮಾಡುವವನ, ಸ್ತುತಿ ಮಾಡಿ ಉಣ್ಣುವವನ, ನಿಂದಿಸಿದವರಲ್ಲಿಯೇ ಆಹಾರ ಸ್ವೀಕರಿಸುವವನ ಗತಿಯು ತನಗೆ ಉಂಟಾಗುತ್ತದೆಂದು ನುಡಿಯುತ್ತಾನೆ.[೨೫]

ಕೌಶಿಕ ಪಂಚೇಂದ್ರಿಯಗಳಲ್ಲಿ ಬದುಕುತ್ತಿದ್ದ ಲಿಂಗಸಂಗಿಯಲ್ಲದವನಾಗಿದ್ದನು. ಅಕ್ಕಮಹಾದೇವಿ ಏಕಾಂತದಲ್ಲಿದ್ದಾಗ ಅರಸನು ಬಂದು ಅಪ್ಪಿದಾಗ ಏಕಾಂತಕ್ಕೆ ಭಂಗ ಬರುತ್ತದೆ. ಅಕ್ಕಮಹಾದೇವಿಯ ಆ ಏಕಾಂತವೆಂದರೆ ಲಿಂಗಾನುಸಂಧಾನವೇ ಆಗಿರಬೇಕು! ವೀರಶೈವತತ್ತ್ವದ ಇಂಥ ಅನುಸಂಧಾನಕ್ಕೆ ಅಡ್ಡ ಬಂದ ಅರಸನಿಗೆ ಸೈರಿಸಿಕೊಳ್ಳಲು ಹೇಳಿ ತನಗೆ ಒಪ್ಪಿಗೆಯಾಗುವುದನ್ನು ಹೇಳಬೇಕೆಂದೂ ಆ ನಂತರವೇ ಸ್ವೀಕರಿಸಬೇಕೆಂದೂ ತಿಳಿಸುತ್ತಾಳೆ. ಅವನು ಹಿರಿಯ ಶಿವಭಕ್ತನಾಗಿ ಭವಿತನದಿಂದ ಮುಕ್ತನಾಗಬೇಕೆಂದು ತಿಳಿಸುತ್ತಾಳೆ. ಇಲ್ಲಿ ಚಾಮರಸ ಭವಿಗಳ ಗುಣವೊಂದನ್ನು ತಿಳಿಸುತ್ತಾನೆ. ಭಕ್ತನಾಗಿ ಲಿಂಗಾನುಸಂಧಾನಕ್ಕೆ ಎಳಸದವನ ಸ್ಥಿತಿ ಅರುಚಿಕರವಾದ ಔಷಧವು ಅಪಥ್ಯವಾಗುವ ರೋಗಿಯ ಸ್ಥಿತಿಯೆಂದು ಕವಿಯ ಅಭಿಪ್ರಾಯ. ಇಲ್ಲಿ ಚಾಮರಸ ಕೊಡುವ ದೃಷ್ಟಾಂತಗಳು ಬಹಳ ಅರ್ಥಪೂರ್ಣವಾಗಿವೆ. ಗೂಗಿಗೆ ಸೂರ್ಯನ ಕಿರಣಗಳು, ಮೂಕರಿಗೆ ಮಾತುಗಳು, ಸುಳ್ಳುಯೋಗಿಗೆ ಅನುಭವ, ಕೋಪಿಗೆ ಶಾಂತಿ, ನಾಯಿಗೆ ಕಿತ್ತಳೆ ಹಾಗೂ ಮೂಗಿಲ್ಲದವನಿಗೆ ಕನ್ನಡಿ ಇವು ಸಹನೆಯಾಗದಿರುವಂತೆ ಕೌಶಿಕನಿಗೆ ಶಿವಭಕ್ತನಾಗುವುದು ಸಹಿಸದ ಮಾತು.[೨೬] ಏಕೆಂದರೆ ಅದರಿಂದಾಗಿ ಅಕ್ಕಮಹಾದೇವಿ ಏಕಾಂತದಲ್ಲಿ ಲೀನವಾಗುವಂತೆ ತಾನೂ ಅದರಲ್ಲಿ ಲೀನವಾಗುವ ಭಯ! ಆದರಿಂದ ಅವನು ಬಯಸಿದ್ದ ಇಂದ್ರಿಯಸುಖಕ್ಕೆ ಅಡ್ಡಿ ಉಂಟಾದರೇನು ಪ್ರಯೋಜನ?

ಅರಸನು ತನಗೆ ಶಿವಭಕ್ತಿಯನ್ನು ಮಾಡುವ ಸಮಯವು ಹೊಂದುವುದಿಲ್ಲವೆಂದು ತಿಳಿಸುತ್ತಾನೆ. ಹೀಗಿರುವಾಗ ಇಬ್ಬರ ಇರುವಿಕೆಯಲ್ಲಿ ಪರಸ್ಪರ ವಿರುದ್ಧ ಗುಣ ಉಂಟಾದಂತಾಯಿತೆಂದೂ ಆದರಿಂದ ತನಗೆ ಅರಸನ ಬಂಧನವು ದೂರಾಯಿತೆಂದೂ ತಿಳಿಸುತ್ತ ಆ ಸ್ಥಿತಿಯಲ್ಲಿಯೇ ಅರಸನು ಕೊಟ್ಟಿದ್ದ ಉಟ್ಟ ಉಡಿಗೆಗಳನ್ನೂ ಆಭರಣಗಳನ್ನೂ ಕೊಡುತ್ತಾಳೆ ಅಕ್ಕಮಹಾದೇವಿ. ಇದನ್ನು ನೊಡುತ್ತ ಕೌಶಿಕ 'ಇವಳಿಗೆ ಭೂತ ಹೊಡೆಯಿತೊ ಅಥವಾ ಪಿತ್ತಪ್ರಕೋಪವಾಯಿತೊ' ಎಂದು ವಿಚಾರಿಸುತ್ತಾನೆ. 'ವಿರಕ್ತೆಯಂತೆ ವಿಪರೀತವಾಗಿ ತಲೆಗೆದರಿ ವಸ್ತ್ರ ತೊರೆದು ಆಶ್ಚರ್ಯವುಂಟು ಮಾಡಿದಳು, ಶಿವನೇ' ಎಂದು ಬೆರಗಾಗುತ್ತಾನೆ.[೭೭] ಅರಸನ ಮನೆಯ ಹೆಂಗಸು ಹೀಗೆ ಮಾಡುತ್ತಿದ್ದಾಳೆಂದು ಜನ ಅನ್ನುವ ಮೊದಲೇ ತಾನು ಕೊಟ್ಟ ಭಾಷೆಯಂತೆ ಅವಳನ್ನು ಹೋಗಬಿಡುತ್ತಾನೆ.

ಈಗ ಅಕ್ಕಮಹಾದೇವಿ ಮೂರು ವಿಧದ ಹೊದಿಕೆಗಳನ್ನು ಪಡೆದು ಕೊಳ್ಳುತ್ತಾಳೆ. ಮೊದಲನೆಯದು ಹಸ್ತದಲ್ಲಿ ಲಿಂಗ, ಎರಡನೆಯದು ಹಣೆಯಲ್ಲಿ ವಿಭೂತಿ ಹಾಗೂ ಮೂರನೆಯದು ತನ್ನಲ್ಲೇ ಉಂಟಾದ ಕೇಶರಾಶಿಯ ಹೊದಿಕೆ. ಇವುಗಳಿಂದ ದೇಹವು ಮುಚ್ಚಿತ್ತೆಂದು ತಿಳಿಸಲು ಚಾಮರಸನು ಪರಿಣಾಮಕಾರಿಯಾದ ದೃಷ್ಟಾಂತವೊಂದನ್ನು ಕೊಡುತ್ತಾನೆ. ಪೂರ್ಣ ಚಂದ್ರಗ್ರಹಣವಾದಾಗ ರಾಹು ಚಂದ್ರನನ್ನು ಇಡಿಯಾಗಿ ಆವರಿಸುತ್ತಾನೆ. ಆದರೂ ಚಂದ್ರನ ಅಸ್ತಿತ್ವವನ್ನು ಲಕ್ಷಿಸಬಹುದಾಗಿದೆ. ಅದೇ ರೀತಿ ಅಕ್ಕಮಹಾದೇವಿಯ ಕೇಶರಾಶಿಯು ಹೇಗೆ ಹರಡಿತ್ತೆಂದರೆ ಮುಖ ನೋಡಿ ಅವಳ ಅಸ್ತಿತ್ವವನ್ನು ಲಕ್ಷಿಸಬಹುದಾಗಿತ್ತು.

ಹಿಡಿದ ಲಿಂಗದವರ ವಿಭೂತಿಯ
ತೊಡಹದಂಗದ ಮೆಯ್ಗೆ ಮುಸುಕಿದ
ಬಿಡುಮುಡಿಯ ಹೊದಕೆಯ ವಿಳಾಸತೆ ರಾಹು ಚಂದ್ರಮನ ।
ಹಿಡಿದು ನೆಟ್ಟನೆ ನಿಂದು ನಿಗುರುತ
ಪೊಡವಿಯಲಿ ಬಂದಿರ್ದುದೋ ಎನೆ
ಕಡು ವಿರಕ್ತಿಯ ವೇಷ ಕಾಣಿಸಿತಿಂದುವದನೆಯಲಿ ॥ [೭೮]

[illegible]

[illegible]

[illegible]

ಇಂಥ ಕಡುವಿರಕ್ತಿಯ ವೇಷದಲ್ಲಿ ತಂದೆ–ತಾಯಿಗಳು, ಬಂಧು–ಬಳಗದವರು ಬಂದು ನಿಂತು 'ಅಯ್ಯೋ, ಅಕ್ಕ ನೀನೇಕೆ ಮರುಳಾದೆ?' ಎಂದು ಕೇಳಿದರೆ ತನ್ನ ದೇಹವು ಶಿವನಿಗರ್ಪಿತವೆಂದೂ, ಅವರು ತನ್ನ ಮೇಲಿನ ಹಂಬಲವನ್ನು ಬಿಡಬೇಕೆಂದೂ ಹೇಳುತ್ತ ಅಕ್ಕಮಹಾದೇವಿ ಹೊರಟು ಹೋಗುತ್ತಾಳೆ.

'ಮಡದಿ ಮಾಯೆಗೆ ಪರಮತತ್ತ್ವಜ್ಞಾನವಿಲ್ಲ' ಎಂದು ಅಲ್ಲಮನು ಮಾಯೆಯನ್ನು ತಿರಸ್ಕರಿಸುತ್ತಾನೆ. ಕೌಶಿಕನು ತನಗೆ 'ಶಿವಭಕ್ತಿಯನು ಮಾಡುವ ಸಮಯವಳವಡದು' ಎಂದು ತಿಳಿಸಿದಾಗ 'ನಿಮಗೆ ನಾವಿನ್ನುತ್ತರಾಯಿಗಳೆಮಗೆ ಬಂಧನ ಬಿಟ್ಟುದು' ಎಂದು ಮಹಾದೇವಿಯಕ್ಕ ಅವನಿಗೆ ತಿಳಿಸಿ ಹೊರಟು ಹೋಗುತ್ತಾಳೆ. ಹೀಗೆ ಎರಡೂ ಪ್ರಸಂಗಗಳಲ್ಲಿ ವೀರಶೈವಾಚಾರ ಮಾರ್ಗದ ಸುಳಿವು ಇಲ್ಲದವರು ತಿರಸ್ಕೃತರಾಗುತ್ತಾರೆ.

* ವಿವಿಧ ಕೃತಿಗಳಲ್ಲಿ ಅಕ್ಕಮಹಾದೇವಿ ಮತ್ತು ಕೌಶಿಕ

ಅಕ್ಕಮಹಾದೇವಿ ಮತ್ತು ಕೌಶಿಕರ ಪ್ರಸಂಗ ಮೊದಲು ಕಾಣಿಸಿಕೊಳ್ಳುವುದು ಹರಿಹರನ 'ಮಹಾದೇವಿಯಕ್ಕನ ರಗಳೆ'ಯಲ್ಲಿ. ಕೈಲಾಸದಲ್ಲಿ ಗುಪ್ತಗಣನಾಥ ಎನ್ನುವವನು ಪಾರ್ವತಿಗೆ ನಮಸ್ಕರಿಸುತ್ತಿರುವಾಗ ಹಿಂದೆ ಇದ್ದ ಮಹಾದೇವಿ ಎಂಬ ರುದ್ರಕನ್ನಿಕೆಗೆ ಕಾಲು ತಗಲುತ್ತದೆ. ಆಗ ಅವಳು 'ಭವಿ, ನೋಡಿ ನಮಸ್ಕರಿಸು' ಎಂದು ನಿಂದಿಸುತ್ತಾಳೆ. ಆಗ ಪಾರ್ವತಿ 'ಹೊರವೇಷವಿದ್ದರೆ ಭಕ್ತಿ ದೊರಕೊಳ್ಳುತ್ತದೆಯೇ? ಗುಪ್ತರೂ ಸತ್ಯವುಳ್ಳವರೂ ಇದ್ದಾರೆ. ಅವನನ್ನು ಭವಿ ಎಂದು ಕರೆದದ್ದರಿಂದ ನೀನು ಮರ್ತ್ಯಕ್ಕೆ ಹೋಗಿ, ಭಕ್ತೆಯಾಗಿ ಹುಟ್ಟಿ, ಭವಿಗೆ ಹೆಂಡತಿಯಾಗಿ, ಶ್ರೀಶೈಲಕ್ಕೆ ತೆರಳಿ ನಂತರ ಇಲ್ಲಿಗೆ ಬಾ' ಎಂದು ಶಪಿಸುತ್ತಾಳೆ. ಅದರಂತೆ ಮಹಾದೇವಿ ಉಡುತಡಿಯಲ್ಲಿ ಶಿವಭಕ್ತರಿಗೆ ಮಗಳಾಗಿ ಜನಿಸುತ್ತಾಳೆ. ಬೆಳೆದು ದೊಡ್ಡವಳಾದಾಗ ಅವಳ ಸೌಂದರ್ಯಕ್ಕೆ ಮನಸೋತ ದೊರೆ ಅವಳ ತಂದೆ–ತಾಯಿಗಳಿಗೆ ಬೆದರಿಕೆ ಹಾಕಿ ಅವಳನ್ನು ಮದುವೆಯಾಗುತ್ತಾನೆ. 'ನಿನ್ನ ಮೂರು ತಪ್ಪುಗಳನ್ನು ಕ್ಷಮಿಸುತ್ತೇನೆ, ಅಲ್ಲಿಯವರೆಗೆ ಮಾತ್ರ ನಿನ್ನ ಸತಿಯಾಗಿರುತ್ತೇನೆ' ಎಂದು ಅಕ್ಕಮಹಾದೇವಿ ನುಡಿಯುತ್ತಾಳೆ. ಕೌಶಿಕನು

---

* ಶ್ರೀ ಡಾ. ಎಂ. ಚಿದಾನಂದಮೂರ್ತಿ ಅವರ 'ಶೂನ್ಯ ಸಂಪಾದನೆಯನ್ನು ಕುರಿತು' ಕೃತಿ ಆಧರಿಸಿ ಇದನ್ನು ಸಿದ್ಧಪಡಿಸಲಾಗಿದೆ.

ಮೂರು ತಪ್ಪುಗಳನ್ನು ಎಸಗುತ್ತಾನೆ. ಅಕ್ಕಮಹಾದೇವಿ ಅವನನ್ನು ತ್ಯಜಿಸಿ ಗಿರಿಯ ಕಡೆಗೆ ಹೊರಡುತ್ತಾಳೆ.

ಹರಿಹರನ ಕಥಾನಿರೂಪಣೆಯನ್ನೇ ಮೊದಲಿನ ಎರಡು ಶೂನ್ಯಸಂಪಾದನೆಗಳು ಅನುಸರಿಸುತ್ತವೆ. ಮೊದಲನೆಯದಾದ ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ ತಿಳಿಸಿರುವಂತೆ ಅಕ್ಕಮಹಾದೇವಿ ಕೌಶಿಕನನ್ನು ಲಗ್ನವಾಗಿ ಅವನೊಂದಿಗೆ ಸಂಸಾರ ಮಾಡುತ್ತಾಳೆ. ಅವನು ಮೂರು ತಪ್ಪುಗಳನ್ನೆಸಗಿದಾಗ ಅವನನ್ನು ತೊರೆದು ಸರ್ವಸಂಗಪರಿತ್ಯಾಗ ಮಾಡಿ ದಿಗಂಬರೆಯಾಗಿ ಕೇಶವೆಂಬ ವಸ್ತ್ರವನ್ನು ಮುಸುಕಾಗಿಟ್ಟುಕೊಂಡು ಹೊರಟು ಹೋಗುತ್ತಾಳೆ. ಎರಡನೆಯ ಶೂನ್ಯಸಂಪಾದನೆಯಲ್ಲಿ ತಿಳಿಸಿರುವಂತೆ ಅಕ್ಕಮಹಾದೇವಿ ಕೌಶಿಕನಿಗೆ ವಧುವಾಗಿ ಹೋಗುತ್ತಾಳೆ. ಕೌಶಿಕನು ತಾನು ಮಾಡಿದ ಪ್ರತಿಜ್ಞೆಯನ್ನು ಮುರಿದಾಗ ಅವನನ್ನು ತ್ಯಜಿಸಿ ಹೊರಡುತ್ತಾಳೆ; ಅವನು ಸೀರೆಯನ್ನು ಹಿಡಿದೆಳೆದಾಗ ಅದನ್ನು ಅಲ್ಲಿಯೇ ಬಿಟ್ಟು ದಿಗಂಬರೆಯಾಗಿ ಹೊರಟು ಬರುತ್ತಾಳೆ.

ಮೂರನೆಯ ಮತ್ತು ನಾಲ್ಕನೆಯ ಶೂನ್ಯ ಸಂಪಾದನೆಗಳಲ್ಲಿ ತಿಳಿಸಿರುವಂತೆ ಅಕ್ಕಮಹಾದೇವಿ ಕೌಶಿಕನಲ್ಲಿಗೆ ಹೋಗುತ್ತಾಳೆ. ಆದರೆ ಅವನೊದಿಗೆ ಅವಳ ಲಗ್ನವಾಗಿತ್ತು ಎಂಬ ವಿಚಾರವನ್ನು ಇವುಗಳಲ್ಲಿ ತೇಲಿಸಿ ಬಿಡಲಾಗಿದೆ. ಭವಿ ಕೌಶಿಕ ಲಿಂಗಧಾರಣವನ್ನು ತಿರಸ್ಕರಿಸುತ್ತಾನೆ. ಆದಕ್ಕಾಗಿ ಭವಿಯಾದ ಅವನನ್ನು 'ಲಿಂಗಸಂಗಮಂ ತೊರೆದು ಲಿಂಗಸಂಗದೊಳು ಅವಿರಳಸಂಗಿಯಾಗಿ' ಕರಣಗಳೆಲ್ಲವನ್ನೂ ಅವನಿಗೆ ಆಹುತಿ ಕೊಟ್ಟು, ದಿಗಂಬರದುಡುಗೆಯನ್ನು ಉಟ್ಟು, ತನ್ನ ಕೇಶವೆಂಬ ವಸ್ತ್ರವನ್ನು ಮುಸುಕಿಟ್ಟು ಹೊರಟು ಬರುತ್ತಾಳೆ.

ಚಾಮರಸನು ಪ್ರಭುಲಿಂಗಲೀಲೆಯಲ್ಲಿ ತಿಳಿಸಿರುವಂತೆಯೇ ಕೊನೆಯ ಎರಡು ಶೂನ್ಯಸಂಪಾದನೆಗಳಲ್ಲಿ ಈ ಪ್ರಸಂಗ ಮೂಡಿ ಬಂದಿದೆ.

೩. ತಾಟಸ್ಥ್ಯದಿಂದ ಶರಣಮಾರ್ಗಕ್ಕೆ ಬಂದವರು

ಅ) ಸಿದ್ಧರಾಮ

ಪ್ರಭುಲಿಂಗಲೀಲೆಯಲ್ಲಿ ಸೊನ್ನಲಾಪುರದ ಸಿದ್ಧರಾಮನು ಮಾಯಾದೇವಿ, ಕೌಶಿಕರಂತೆ ಬದುಕಿನ ಲೌಕಿಕ ಆಚರಣೆಗಳಲ್ಲಿಯೇ ಮುಳುಗಿದ್ದವನಲ್ಲ. ಶಿವಶರಣರಂತೆ ವೀರಶೈವಾಚಾರ ಮಾರ್ಗದಲ್ಲಿ

[illegible]

[illegible]

[illegible]

[illegible]

[illegible]

ಸಾಗಿದ್ದವನೂ ಅಲ್ಲ. ಲೌಕಿಕಕ್ಕೆ ಅಂಟಿರದಿದ್ದರೂ ಅಂಟಿದಂತಿದ್ದ ಅವನು ಗುಡಿಗೋಪುರಗಳನ್ನು, ಕೆರೆಗಳನ್ನು ನಿರ್ಮಿಸುತ್ತ ಸಾವಿರಾರು ಜನರ ಬದುಕಿಗೆ ದಾರಿದೀಪವಾಗಿದ್ದವನು. ಶೈವಾಚಾರದಲ್ಲಿ ತಪಸ್ಸಿನಲ್ಲಿದ್ದು ಉರಿಗಣ್ಣು ಕೂಡ ಪಡೆದುಕೊಂಡಿದ್ದವನು. ಈ ಕಾರಣದಿಂದ ಅಹಂಕಾರಕ್ಕೆ ಗುರಿಯಾಗಿದ್ದ ಸಿದ್ಧರಾಮನು ಆದಕ್ಕೆ ಬಲಿಯಾಗಬಾರದೆಂಬ ಸದುದ್ದೇಶದಿಂದ ಅಲ್ಲಮಪ್ರಭು ಅವನ ಬಳಿಗೆ ತಾನಾಗಿಯೇ ಬರುತ್ತಾನೆ.

ಚಾಮರಸನು ತನ್ನ ಕಾವ್ಯದಲ್ಲಿ 'ಪ್ರಭುಮಾಯೆಗೆ ಸಿಕ್ಕದೆ ಹೋದ ಗತಿ'ಗಾಗಿ ಗರಿಷ್ಠ ಸಂಖ್ಯೆಯ ೮೭ ಪದ್ಯಗಳನ್ನು ಮೀಸಲಿರಿಸಿದ್ದರೆ 'ಸಿದ್ಧರಾಮನ ಗತಿ'ಗೆ ಎರಡನೆಯ ಸ್ಥಾನ ಕೊಟ್ಟು ಅದಕ್ಕಾಗಿ ೭೫ ಪದ್ಯಗಳನ್ನು ಇರಿಸಿದ್ದಾನೆ. ಮಾಯೆಯಲ್ಲಿ ಲೀನನಾಗಿರದಿದ್ದರೂ ಮಾಯಾಡಂಬರಕ್ಕೆ ಮರುಳಾಗಿದ್ದ ಸಿದ್ಧರಾಮನನ್ನು ಕರ್ಮದ ಕಳವಳದಿಂದ ಮೇಲೆತ್ತಲು ಅಲ್ಲಮನು ಕೈಕೊಂಡ ಕಾರ್ಯವನ್ನು ನಾವಿಲ್ಲಿ ಕಾಣುತ್ತೇವೆ.

ಪ್ರಭು ಸೊನ್ನಲಾಪುರಕ್ಕೆ ಬರುತ್ತಾನೆ. ಭೂಮಿಯೇ ಹೆತ್ತಂತಿದ್ದ ಅತಿ ಹೆಚ್ಚಿನ ಸಂಖ್ಯೆಯ ಮಣ್ಣುಗೆಲಸದವರು, ಬಂಡಿಕಾರರು, ಕಲ್ಲುಕುಟಿಗರು ಅಲ್ಲಿರುತ್ತಾರೆ. ಗುಡಿ ಕೆರೆಗಳನ್ನು ಕಟ್ಟಿಸಿ ಪ್ರಖ್ಯಾತನಾಗಿದ್ದ ಸಿದ್ಧರಾಮನು ಅವರ ಗುರುವಾಗಿರುತ್ತಾನೆ. ಸತಿಸುತರ ಸಂಗವು ಭಯವೆಂದು ಸಾಂಸಾರಿಕ ಬದುಕನ್ನು ನಿರಾಕರಿಸಿಯೂ ಇನ್ನೊಂದು ರೂಪದಲ್ಲಿ ಲೌಕಿಕನಾಗಿದ್ದುಕೊಂಡು ಕೀರ್ತಿಯ ಬೆನ್ನ ಹತ್ತಿ ಗುಡಿ ಕೆರೆಗಳನ್ನು ಕಟ್ಟಿಸುತ್ತಿದ್ದುದನ್ನು ನೋಡಿ ಅಲ್ಲಮ ಬೆರಗಾಗುತ್ತಾನೆ. ಸಿದ್ಧರಾಮನ ಈ ಕಾರ್ಯವು ನೂಲಿನ ಸಂಕೋಲೆಯನ್ನು ಕಡಿದು ಹಾಕಿ ಆಕರ್ಷಕವಾದ ಚಿನ್ನದ ಕೋಳವನ್ನು ಹಾಕಿಕೊಂಡಂತಾಗಿತ್ತೆಂದು ಚಾಮರಸ ಅಭಿಪ್ರಾಯ ಪಡುತ್ತಾನೆ. ಅಲ್ಲಮಪ್ರಭುವಿನ ದೃಷ್ಟಿಯಲ್ಲಿ ಇದು ಚಿಕ್ಕ ಸಂಸಾರವನ್ನು ಬಿಟ್ಟು ಹಿರಿಯ ಸಂಸಾರವನ್ನು ಪ್ರವೇಶಿಸಿದಂತೆ. ಅವನು ಕೆಲಸಗಾರರನ್ನು ಮಾತನಾಡಿಸಿ ಸಿದ್ಧರಾಮನನ್ನು ನಿಂದಿಸುತ್ತಾನೆ. ಸಿಟ್ಟಿಗೆದ್ದ ಅವರು ಕಲ್ಲುಗುಂಡುಗಳ ಮಳೆ ಸುರಿಸಿದಾಗ ಅವು ಅಲ್ಲಮನಿಗೆ ತಾಗುವುದಿಲ್ಲ. ಹೀಗಾಗಿ ಉಪಾಯಗಾಣದೆ ಅವರು ತಮ್ಮ ಗುರುವಿನ ಬಳಿಗೆ ದೂರು ಒಯ್ಯುತ್ತಾರೆ. ತನ್ನನ್ನು ನಿಂದಿಸಿದವನ ತಲೆ ಹೊಡೆದು ನಾಲಿಗೆ ಕೀಳುತ್ತೆನೆಂದು ಸಿದ್ಧರಾಮ ಗುಡುಗಿದರೆ ಸರ್ವತ್ಯಾಗಿ ಎನ್ನುವವನಿಗೆ ರೋಷಾವೇಶವೇಕೆಂದು ಅಲ್ಲಮ ಪ್ರಶ್ನಿಸುತ್ತಾನೆ. ಇರುವ ಶಕ್ತಿಯೆಲ್ಲ ಅಹಂಕಾರದ ಕಾರ್ಯಾಚರಣೆಯ ರೂಪ ಪಡೆಯತೊಡಗಿದಾಗ ಸಿದ್ಧರಾಮ ತನ್ನ ಹಣೆಗಣ್ಣನ್ನು ತೆರೆಯುತ್ತೇನೆಂದು ಹೇಳುತ್ತಾನೆ. ಅಲ್ಲಮ ಅವನಿಗೆ ವ್ಯಾಮೋಹದಿಂದ ಉರಿದೇಳುತ್ತಿರುವ ಭವರೋಗಿಯೆಂದು ನಿಂದಿಸುತ್ತಾನೆ. ಸಿದ್ಧರಾಮ

ಹಣೆಗಣ್ಣನ್ನು ತೆರೆದಾಗ ಹಾಗೂ ಅಲ್ಲಿಂದ ಹೊರಟ ಸಿಡಿಲಿನ ಕಿಡಿಗಳು ತಿರುಗಿ ಅವನ ಪುರವನ್ನೇ ಸುಟ್ಟು ಹಾಕತೊಡಗಿದಾಗ ಜಗದ್ರಕ್ಷಕನಾದ ಶಿವನಂತೆ ಅಲ್ಲಮನು ಆ ಕಿಡಿಗಳನ್ನು ತೊಡೆದು ಸ್ವಸ್ಥಾನಕ್ಕೆ ಮರುಳುವಂತೆ ಮಾಡುತ್ತಾನೆ. ಸಿದ್ಧರಾಮನಿಗೆ ಪಶ್ಚಾತ್ತಾಪವಾಗಿ ಗರ್ವವಿಮೋಚನೆಯಾಗುತ್ತದೆ. ಯೋಗದಲ್ಲಿ ಶುಚಿತ್ವ ಬೇರು ಬಿಡುತ್ತದೆ.

ತನ್ನ ಸ್ಥಿತಿಯು ಕುರಿಗಳಿಗಿಂತ ಕರಕಷ್ಟವೆಂದೂ ತಾನು ಮಾಯಾಡಂಬರಕ್ಕೆ ಮರುಳಾಗಿದ್ದುದಾಗಿಯೂ ತಿಳಿಸುತ್ತ ಸಿದ್ಧರಾಮ ಅಲ್ಲಮನ ಪಾದಗಳಿಗೆ ನಮಸ್ಕರಿಸುತ್ತಾನೆ. ಪ್ರಭು ಅವನಿಗೆ ಭ್ರಮೆಗಳಿಂದ ಹೊರಬರಬೇಕೆಂದು ತಿಳಿಸುತ್ತಾನೆ. ಇಂದ್ರಿಯಗಳು ಮತ್ತು ವಿಷಯಗಳ ನಡುವಿನ ಜಗ್ಗಾಟಕ್ಕೆ ಮನವೇ ನಾಯಕನಾಗಿ ವರ್ತಿಸುವುದರಿಂದ ಅದನ್ನು ನಿಗ್ರಹಿಸಬೇಕೆಂದು ಅವನು ತಿಳಿಸುತ್ತಾನೆ. ವಿಷಯಸುಖವನ್ನು ತ್ಯಜಿಸಿ ಸಾವು ತಪ್ಪುವ ಹಾದಿಯನ್ನು ಕಂಡುಕೊಂಡು ಅಂತರಂಗ-ಬಹಿರಂಗಗಳ ಕವಲುದಾರಿಯನ್ನು ಹಿಡಿಯಬೇಕೆಂದು ಸೂಚಿಸುತ್ತಾನೆ. ಸಿದ್ಧರಾಮನು ಆಗಲೇ ಸುಸಂಸ್ಕಾರಿಯಾಗಿದ್ದರಿಂದಾಗಿ ಗ್ರಂಥಸ್ಥವಾದ ಆಗಮಗಳ ಉಪದೇಶದ ಅಗತ್ಯ ಅವನಿಗಿಲ್ಲವೆಂದು ತಿಳಿಸಿ ಪ್ರಭು ಏಕಾಂತದಲ್ಲಿ ಅವನಿಗೆ ಲಿಂಗೋಪದೇಶ ಮಾಡುತ್ತಾನೆ.

ಎಂದು ಬಳಿಕೇಕಾಂತದಲಿ ಮುದ
ದಿಂದಲೊಪ್ಪುವ ಕಾಯಕರಣದ
ಸಂದು ಸಂಬಂಧವನು ಸೂಚಿಸಿ ಜೀವಪರಮರನು ।
ಒಂದು ಮಾಡುವ ಶಕ್ತಿ ಭಕ್ತಿಯ
ಹೊಂದಿಕೆಯನುಪದೇಶ ಮಾಡಿದ
ನಂದು ಕರುಣದೊಳಲ್ಲಮಪ್ರಭು ಸಿದ್ಧರಾಮಂಗೆ ॥ [18]

ಸಿದ್ಧರಾಮನು ನವಚಕ್ರಗಳ ಕುಳವನ್ನರಿತು ಪರಮಪಾವನನಾದನೆಂದು ಚಾಮರಸ ತಿಳಿಸುತ್ತಾನೆ.

[illegible]

[illegible]

[illegible]

[illegible]

* ವಿವಿಧ ಕೃತಿಗಳಲ್ಲಿ ಸಿದ್ಧರಾಮ

ಸಿದ್ಧರಾಮನನ್ನು ಕುರಿತು ಹರಿಹರನಿಂದ ರಚಿತವಾದ ಯಾವ ಕೃತಿಯೂ ಈಗ ಲಭ್ಯವಿಲ್ಲ. ಆದರೆ ವಿದ್ವಾಂಸರ ಅಭಿಪ್ರಾಯದಲ್ಲಿ ಇಂಥ ಒಂದು ಕೃತಿ ಇರಬಹುದೆಂದು ನಂಬಿಕೆ ಇದೆ, ಅದಿನ್ನೂ ಬೆಳಕು ಕಾಣಬೇಕಾಗಿದೆ. ಆದುದರಿಂದ ಈ ವಿಷಯದಲ್ಲಿ ನಮಗೆ ರಾಘವಾಂಕನ 'ಸಿದ್ಧರಾಮ ಚಾರಿತ್ರ' ವೇ ಮೊದಲ ಕೃತಿ.

'ಸಿದ್ಧರಾಮ ಚಾರಿತ್ರ'ದಲ್ಲಿ ಭೃಂಗಿಯ ಶಾಪದಿಂದ ಮುದ್ದಗೌಡ ಮತ್ತು ಸುಗ್ಗಲೆಯರು ಭೂಮಿಯಲ್ಲಿ ಹುಟ್ಟಿ ಬರುತ್ತಾರೆ. ಸಾಕ್ಷಾತ್ ಶಿವನೇ ಅವರಿಗೆ ಮಗನಾಗಿ ಹುಟ್ಟುತ್ತಾನೆ. ಹೀಗೆ ರಾಘವಾಂಕನ ದೃಷ್ಟಿಯಲ್ಲಿ ಸಿದ್ಧರಾಮನು ಶಿವನ ಅವತಾರ. ಈ ಸಿದ್ಧರಾಮನಲ್ಲಿ ನೊಸಲ ಬಿಸಿಗಣ್ಣು ಹಾಗೂ ಮುಖದಲ್ಲಿ ಮಿರುಗುವ ಲಿಂಗ ಇದ್ದವು. ಉಳಿದಂತೆ ಅಲ್ಲಮಪ್ರಭು ಸಿದ್ಧರಾಮನನ್ನು ಭೆಟ್ಟಿಯಾಗುವುದು, ಸಿದ್ಧರಾಮ ಅಲ್ಲಮನಿಂದ ಮಾರ್ಗದರ್ಶನ ಪಡೆಯುವುದು ಇವೆಲ್ಲ ಇವೆ. ಸಿದ್ಧರಾಮನ 'ಸಾಕಾರನಿಷ್ಠೆ' ಮತ್ತು 'ಭೂತಂಗಳೊಳನುಕಂಪೆ'ಗಳನ್ನು ಅಲ್ಲಮ ಮೆಚ್ಚಿಕೊಂಡು 'ಮಾನವರ ನಡುವಿರಲುಬೇಡ ಸಿದ್ಧೇಂದ್ರ' ಎಂದು ಹೇಳಿ ಹೊರಟು ಹೋಗುತ್ತಾನೆ.

ಶೂನ್ಯಸಂಪಾದನೆಗಳಲ್ಲಿ ಮೊದಲನೆಯದಾದ ಶಿವಗಣಪ್ರಸಾದಿ ಮಹಾದೇವಯ್ಯನ ಸಂಪಾದನೆಯಲ್ಲಿ ಅಲ್ಲಮ ಸಿದ್ಧರಾಮನನ್ನು ಸಂದರ್ಶಿಸುತ್ತಾನೆ. ಅವನ ಕರ್ಮಮಾರ್ಗವನ್ನು ಹಳಿದು ಅದು ಸಲ್ಲದೆಂದು ತಿಳಿಸಿ ಅವನಿಗೆ ಕರಸ್ಥಲದ ಲಿಂಗದ ವಿಷಯವನ್ನು ಅರುಹುತ್ತಾನೆ. ಅದಕ್ಕೆ ಸಿದ್ಧರಾಮನು ಇಷ್ಟಲಿಂಗವನ್ನು ಸಾಧನ ಮಾಡಿಕೊಂಡು ನಿಜಲಿಂಗವನ್ನು ಕಾಣುವ ಕ್ರಮವಾವುದೆಂದು ಕೇಳುತ್ತಾನೆ. ಅದಕ್ಕಾಗಿ ಕಲ್ಯಾಣಕ್ಕೆ ಹೋಗಬೇಕಾಗುವುದೆಂದೂ ಅಲ್ಲಿ ಸಂಗನಬಸವಣ್ಣ ಅದನ್ನು ತಿಳಿಸುತ್ತಾನೆಂದೂ ಪ್ರಭು ಅವನಿಗೆ ಹೇಳುತ್ತಾನೆ. ಅನುಭವಮಂಟಪದಲ್ಲಿ ಸಿದ್ಧರಾಮನ ದೇಹದ ಮೇಲೆ ಲಿಂಗವಿಲ್ಲದುದನ್ನು ಕಂಡು ಚೆನ್ನಬಸವಣ್ಣ ಆದಕ್ಕಾಗಿ ಆಕ್ಷೇಪಿಸುತ್ತಾನೆ. ನಿಜದ ನಿಲವು ಮುಟ್ಟಿದವನಿಗೆ ಸಾಧನೆಯ ಮಾರ್ಗದಲ್ಲಿ

---

* ಡಾ. ಎಂ. ಚಿದಾನಂದಮೂರ್ತಿ ಅವರ 'ಶೂನ್ಯ ಸಂಪಾದನೆಯನ್ನು ಕುರಿತು' ಕೃತಿ ಆಧರಿಸಿ ಇದನ್ನು ಸಿದ್ಧಪಡಿಸಲಾಗಿದೆ.

ತೊಡಗಿಸುವ ಇಷ್ಟಲಿಂಗದ ಅವಶ್ಯಕತೆಯಿಲ್ಲವೆಂದು ಅಲ್ಲಮ ಹೇಳುತ್ತಾನೆ. ಇದನ್ನು ಚೆನ್ನಬಸವಣ್ಣ ಒಪ್ಪಿಕೊಳ್ಳುತ್ತಾನೆ.

ಎರಡನೆಯವನಾದ ಹಲಗೆಯಾರ್ಯನ ಶೂನ್ಯಸಂಪಾದನೆಯಲ್ಲಿ ರಾಘವಾಂಕನ ಕಥೆಯನ್ನು ಆಧರಿಸಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗಿದೆ. ಈಶ್ವರನು ಪಾರ್ವತಿಯ ಮೂಗುತಿಯನ್ನು ಎಡಗಡೆಗೆ ಧರಿಸುತ್ತಾನೆ, ಅದು ಹೇಮವರ್ಣವಾಗುತ್ತದೆ. ಆಗ ಪಾರ್ವತಿಯು ಪ್ರಣಯಪೂರ್ವಕವಾಗಿ ಶಿವನನ್ನು ನಿಂದೆ–ಸ್ತುತಿಗಳೊಂದಿಗೆ ಬಯ್ಯುತ್ತಾಳೆ. ಎಡಗಡೆಯಿದ್ದ ವಿಷ್ಣು ಶಿವನಿಂದೆಯನ್ನು ತಾಳಲಾರದೆ ತನ್ನ ಉಗುರುಗಳಿಂದ ಶಿರಚ್ಛೇದನ ಮಾಡಿಕೊಳ್ಳುತ್ತಾನೆ. ಈಶ್ವರನು ತಲೆಯನ್ನು ಹಿಂದಕ್ಕೆ ಕೊಟ್ಟು ಮಾಹೇಶ್ವರನಾಗೆಂದು ಅವನನ್ನು ಹರಸುತ್ತಾನೆ. ವಿಷ್ಣುವಿನ ಹಲವಾರು ಜನ್ಮಗಳಿಂದ ಶಿವನು ಪ್ರಸನ್ನನಾಗಿ 'ನೀನು ಮರ್ತ್ಯಕ್ಕೆ ಹೋಗಿ ಶಿವಗಣಂಗಳ ಕೃಪೆಯನ್ನು ಪಡೆದುಕೊಂಡು ಅವರ ಅನುಜ್ಞೆಯನ್ನು ಮೀರದೆ ನಡೆದು ನಮ್ಮ ನಿಜಮೋಕ್ಷಕ್ಕೆ ಬಾ' ಎಂದು ಹರಸುತ್ತಾನೆ. ಹೀಗೆ ಹಲಗೆಯಾರ್ಯನಲ್ಲಿ ಸಿದ್ಧರಾಮ ವಿಷ್ಣುವಿನ ಅವತಾರ. ಇದೂ ಅಲ್ಲದೆ ಸಿದ್ಧರಾಮನಿಗೆ ಲಿಂಗ ದೀಕ್ಷೆಯನ್ನು ಕೊಡುವುದಕ್ಕಾಗಿ ಹೊಸ ಸಂದರ್ಭವೊಂದನ್ನು ಕಲ್ಪಿಸಿಕೊಳ್ಳಲಾಗಿದೆ. ಅಮುಗಿದೇವಯ್ಯನ ಕೊಟ್ಟಣ ಹಾಕಿಸುವ ಪ್ರಸಂಗವೂ ಇಲ್ಲಿಯ ಸೃಷ್ಟಿಯೇ. ಈ ಅಮುಗಿದೇವಯ್ಯನ ಪ್ರಸಂಗ ರಾಘವಾಂಕನಲ್ಲಿಲ್ಲ.

ಮೂರನೆಯ ಹಾಗೂ ನಾಲ್ಕನೆಯ ಶೂನ್ಯಸಂಪಾದನೆಗಳಲ್ಲಿ ವ್ಯತ್ಯಾಸವೇನೂ ತೋರುವುದಿಲ್ಲ. ಸಿದ್ಧರಾಮನ ದೀಕ್ಷೆಯ ವಿಷಯದಲ್ಲಂತೂ ಎರಡೂ ಒಂದೇ ವಿಧವಾಗಿವೆ.

ನಾಲ್ಕನೆಯ ಶೂನ್ಯಸಂಪಾದನೆಯು ಬಹುಮಟ್ಟಿಗೆ ರಾಘವಾಂಕನನ್ನು ಅನುಸರಿಸುತ್ತದೆ. 'ಕೈಲಾಸದಿಂದ ಶ್ರೀ ಪರಮೇಶ್ವರನಿಂದ ಶುದ್ಧ ಸಾತ್ವಿಕವೇ ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ ಸಿದ್ಧರಾಮೇಶ್ವರನೆಂಬಭಿಧಾನದಿಂದ ಕೆರೆಯರವಟ್ಟಿಗೆ ಗುಡಿಗೋಪುರಂಗಳಂ ರಚಿಸುತ್ತಿರಲು' ಎಂದು ಹೇಳುತ್ತದೆ. ಎರಡನೆಯ ಶೂನ್ಯ ಸಂಪಾದನೆಯಲ್ಲಿ ಬರುವ ಹಣೆಗಣ್ಣ ಉರಿಯ ಪ್ರಸಂಗವನ್ನು ನಾಲ್ಕನೆಯ ಶೂನ್ಯಸಂಪಾದನೆ ಅನುಸರಿಸುತ್ತದೆ. ಸಿದ್ಧರಾಮನು ಇಷ್ಟಲಿಂಗದೊಳಗಣ ಸೂಕ್ಷ್ಮಭೇದವನ್ನು ತಿಳಿಸಲು ಕೇಳಿದಾಗ 'ಅದನ್ನು ಬಸವಣ್ಣ ಬಲ್ಲ' ಎಂದು ಅಲ್ಲಮ ಅವನನ್ನು ಕಲ್ಯಾಣಕ್ಕೆ ಕರೆದೊಯ್ಯುತ್ತಾನೆ.

ಸಿದ್ಧರಾಮನಿಗೆ ಲಿಂಗದೀಕ್ಷೆಯಾಗಿಲ್ಲವೆಂದು ಬಸವಣ್ಣ ಆಕ್ಷೇಪಿಸುತ್ತಾನೆ. ಚೆನ್ನಬಸವಣ್ಣನಿಂದ ಲಿಂಗದೀಕ್ಷೆಯಾಗುತ್ತದೆ.

ಆ) ಗೋರಕ್ಷ

ಸಿದ್ಧರಾಮನ ಸ್ಥಿತಿ ಕ್ರೋಧಾಗ್ನಿಯಲ್ಲಿ ಮುಳುಗೇಳುವಂಥದ್ದಾಗಿದ್ದರೆ ವಜ್ರ ಕಾಯದವನಾಗುವುದನ್ನು ಸಾಧಿಸಿದರೆ ಅದು ಪರಮಪುರುಷಾರ್ಥವೆಂದು ತಿಳಿದು ಅಜ್ಞಾನದಲ್ಲಿರುವುದು ಗೋರಕ್ಷನ ಸ್ಥಿತಿ.

ಬಸವ ಮೊದಲಾದ ಶರಣರಿಗೆ ನಾದಬಿಂದುಕಲಾಪ್ರಪಂಚದ ಮಾರ್ಗವನ್ನು ಸಾಧಿಸಲು ತಿಳಿಸಿದ ಅಲ್ಲಮನು ಮರ್ತ್ಯದ ಮಾನವರನ್ನು ಉದ್ಧರಿಸಲು ಸಾಧಕರ ತವನಿಧಿಯೆನಿಸಿದ್ದ ಶ್ರೀಗಿರಿಗೆ ಬರುತ್ತಾನೆ. ಅದರ ತುದಿಯಲ್ಲಿ ತಾನು ಬಯಸಿದುದನ್ನು ಪಡೆಯುವೆನೆಂದುಕೊಂಡು ವಜ್ರದೇಹಿಯಾಗಿ ದಿನಗಳನ್ನು ಕಳೆಯುತ್ತಿದ್ದ ಗೋರಕ್ಷನೆಂಬ ಸಾಧಕನನ್ನು ಕಾಣುತ್ತಾನೆ. ತನ್ನಲ್ಲಿಗೆ ಬಂದ ಪ್ರಭುವಿನ ಪಾದಗಳಿಗೆ ನಮಸ್ಕರಿಸದೆ ಅಹಂಕಾರ ಹಾಗೂ ಪ್ರತಿಷ್ಠೆಗಳಿಂದ ಕೂಡಿದ್ದ ಅವನು ಪ್ರಭುವಿಗೆ ಕೈ ಮುಗಿದು ಪೀಠದಲ್ಲಿ ಕುಳ್ಳಿರಿಸುತ್ತಾನೆ. ಏನೂ ಗೊತ್ತಿರದ ಅಪರಿಚಿತನು ತನ್ನ ಹೆಸರನ್ನು ನುಡಿಯುತ್ತ ಬಂದುದನ್ನು ಲಕ್ಷಿಸಿದ ಗೋರಕ್ಷನು ಆಗಂತುಕನ ಅಂತರಂಗವು ತನ್ನ ಬುದ್ಧಿಗೆ ಎಟುಕದೆಂದು ತಿಳಿಸುತ್ತಾನೆ. ಯಾರು ತಮ್ಮನ್ನು ತಾವು ತಿಳಿಯುವುದಿಲ್ಲವೋ ಅಂಥ ಮಂದ ಬುದ್ಧಿಯವರಿಗೆ ತನ್ನನ್ನರಿಯುವುದು ಸಾಧ್ಯವಿಲ್ಲವೆಂದು ಪ್ರಭು ಅವರಿಗೆ ತಿಳಿಸುತ್ತಾನೆ. ದೇಹವೇ ತಾನೆಂದು ತಿಳಿಸುವ ಗೋರಕ್ಷನು ಕಾಪಾಲಿಕರಲ್ಲಿ ಅದುವೇ ನ್ಯಾಯ ಧರ್ಮವೆಂದು ತಿಳಿಸಿ ತಾನು ಬಾಯ ಮಾತಿನ ಶೂರನಲ್ಲವೆಂದೂ ತನುಸಿದ್ಧನೆಂದೂ ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಪ್ರಭು ತನುವೆಂಬುದು ಕಾಲನ ನಿಯಮವೆಂದೂ ಅದು ಪ್ರಳಯದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲವೆಂದೂ ತಿಳಿಸುತ್ತಾನೆ.[೮೦] ಆಗ ಗೋರಕ್ಷನು ಅಲ್ಲಮನಿಗೆ ಖಡ್ಗವೊಂದನ್ನು ಕೊಟ್ಟು 'ನಾನು ಶರೀರದಿಂದ ಸಿದ್ಧನಹುದೋ ಅಲ್ಲವೋ ಎಂಬುದನ್ನು ತಿಳಿಯಲು ಈ ಖಡ್ಗದಿಂದ ಹೊಡೆದು ನೋಡು' ಎನ್ನುತ್ತಾನೆ. ಪ್ರಭು ಹಾಗೆಯೇ ಮಾಡಲು ಖಡ್ಗದ ಹೊಡೆತದಿಂದ ಗೋರಕ್ಷನ ಶರೀರಕ್ಕೆ ಏನೂ ಆಗದೆ ಖಣಿಲೆಂದು ಶಬ್ದ ಮಾತ್ರ ಉಂಟಾಗುತ್ತದೆ, ನೆಲ ನಡುಗುತ್ತದೆ. ಆದರೆ ಗೋರಕ್ಷನ ಒಂದು ಕೂದಲೂ ಕೊಂಕುವುದಿಲ್ಲ. ಆಗ ಅಲ್ಲಮನು ಅವನಿಗೆ 'ದೇಹಸಿದ್ಧಿಯಿಂದ ಪ್ರಳಯವನ್ನು ಗೆಲ್ಲುವುದು

[illegible]

[illegible]

[illegible]

[illegible]

ಸಾಧ್ಯವಿಲ್ಲವೆಂದೂ ಅದು ಸಿದ್ಧಿಯಲ್ಲವೆಂದೂ' ತಿಳಿಸುತ್ತಾನೆ. ಇದಕ್ಕೆ ಪ್ರತಿಯಾಗಿ ಗೋರಕ್ಷನು 'ಸಿದ್ಧಿ ಯಾವುದು? ಸಿದ್ಧನಾದರೆ ಅದಕ್ಕೆ ಚಿಹ್ನೆ ಯಾವುದು? ನೀನು ತಿಳಿದಿದ್ದರೆ ಅದನ್ನು ತೋರಿಸು' ಎಂದು ನುಡಿಯುತ್ತಾನೆ. ಆಗ ಅಲ್ಲಮನು ಅದೇ ಖಡ್ಗದಿಂದ ತನ್ನನ್ನು ಹೊಡೆದು ನೋಡೆಂದು ಅವನಿಗೆ ಹೇಳುತ್ತಾನೆ. ಗೋರಕ್ಷನು ಅವನು ತಿಳಿಸಿದಂತೆ ವರ್ತಿಸಿದಾಗ ಖಡ್ಗವು ಬಯಲಲ್ಲಿ ಬೀಸಿದಂತಾಗುತ್ತದೆ. ಯಾವ ಶಬ್ದವೂ ಹೊರಡುವುದಿಲ್ಲ. ತನ್ನ ಸಾಧನೆಗಿಂತ ಮಿಗಿಲಾದ ಸಾಧನೆ ಪ್ರಭುವಿನದೆಂದು ತಿಳಿದ ಗೋರಕ್ಷ ಶರಣಾಗತನಾಗಿ ಅದರ ಮಹಿಮೆಯನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತಾನೆ. ಆಗ ಪ್ರಭು ಕಾಯಕ್ಕೂ ಮಾಯೆಗೂ ಇರುವ ಸಂಬಂಧವನ್ನು ತಿಳಿಸಿ ಅದರಿಂದ ಭವ ಬಂಧನ ಬಿಗಿಯಾಗುತ್ತದೆಂದೂ ಇವುಗಳ ಸಂಬಂಧವನ್ನು ಕಳೆದುಳಿದವನು ಮಾತ್ರ ಸಿದ್ಧನೆಂಗೂ ತಿಳಿಸುತ್ತಾನೆ.

ಕಾಯ ಬಲಿದರೆ ಮಾಯೆ ಬಲಿವುದು
ಮಾಯೆ ಬಲಿದರೆ ಛಾಯೆ ಬಲಿವುದು
ಕಾಯ ಮಾಯಾ ಛಾಯೆ ಬಲಿದರೆ ಸಿದ್ಧತನವಲ್ಲ ।
ಕಾಯ ಮಾಯಾ ಛಾಯದಾಗಿನ
ದಾಯವನು ಕಳೆದುಳಿದನಾದೊಡೆ
ರಾಯನಾತನು ಸಿದ್ಧರಲಿ ಗೋರಕ್ಷ ಕೇಳೆಂದ ॥ [೮೧]

ಆದಿನಾಥನೇ ಪ್ರಭುವಿನ ರೂಪದಲ್ಲಿ ಬಂದಿದ್ದಾನೆಂದು ತಿಳಿದ ಗೋರಕ್ಷನು ಅವನ ಅಡಿಗಳಿಗೆರಗುತ್ತಾನೆ. ಗೋರಕ್ಷನಲ್ಲಿ ಉಂಟಾದ ಪರಿವರ್ತನೆಯು ಪರಿಪಾಕಭಾವವೆಂದು ತಿಳಿದ ಅಲ್ಲಮನು ಅವನ ಹಣೆಯನ್ನು ಹಿಡಿದೆತ್ತಿ ಉಪದೇಶವನ್ನು ನೀಡುತ್ತಾನೆ. ಗೋರಕ್ಷನಲ್ಲಿ ನಿರ್ಮಲವಾದ ತನು-ಮನಗಳು ಮೂಡುತ್ತವೆ. ಅವನದು ಕಾಯ ಸಿದ್ಧಿಯ ಭೇದವಲ್ಲದೆ ನಿತ್ಯ ಮುಕ್ತಿಯ ಸಿದ್ಧಿಯಲ್ಲವೆಂದು ತಿಳಿಸುವ ಪ್ರಭು 'ಗುಹೇಶ್ವರನೆಂಬವನೆ ನಾನಿದಕೆ ಸಂಶಯವೆಂಬುದಿಲ್ಲೈ ಸತ್ಯವಿದು'[೮೨] ಎಂದು ಹೇಳುತ್ತಾನೆ. ಆಗ ಪ್ರಭುವಿನಿಂದ ಮುಕ್ತಿಯನ್ನು ಪಡೆಯಬೇಕೆಂಬ ಹಂಬಲವುಳ್ಳವನಾದ ಅವನಲ್ಲಿ ಚಿಕಿತ್ಸಕಬುದ್ಧಿ ಜಾಗ್ರತವಾಗುತ್ತದೆ. ಅವನು 'ಜಾಣತನದ ಮಾತುಗಳು ಬೇಡ, ಗುಹೇಶ್ವರ ನೀನಾಗಿದ್ದರೆ ನಿನ್ನ ಕೈಯಲ್ಲಿ ಕುರುಹಿನ ಈ ಲಿಂಗವೇತಕ್ಕೆ? ಲಿಂಗವನ್ನು ಎದುರಿನಲ್ಲಿಟ್ಟು ನೀನು ಬೇರೆ ಅದು ಬೇರೆ

ಎಂದು ತೋರಿಸಿಕೊಂಡಾಗ ಕರ್ಮ–ಭಕ್ತಿ–ಜ್ಞಾನಗಳ ಸಾಧನೆಗಳಲ್ಲಿ ತೊಡಗಿಕೊಂಡಿರಲು ಕಾರಣವೇನು?' ಎಂದು ಅಲ್ಲಮನನ್ನು ಪ್ರಶ್ನಿಸುತ್ತಾನೆ.

ಜಾಣ ನುಡಿಗಳ ಬಿಡು ಗುಹೇಶ್ವರ
ನೀನೆಯಾದೊಡೆ ನಿನ್ನ ಕೈಯಲಿ
ದೇನು ಕುರುಹಿನ ಲಿಂಗವಿದೆಯಿದಿರಿಟ್ಟು ಬೇರೆನಿಸಿ ।
ನೀನು ತಾನಾಗಿದ್ದ ಬಳಕಲಿ
ದೇನು ಕಾರಣ ಕರ್ಮ ಭಕ್ತಿ
ಜ್ಞಾನದಾಯತದಿಂಗಿತಂಗಳು ಗುರುವೆ ಹೇಳೆಂದ ॥ [೮೩]

ಲಿಂಗನಿಷ್ಠೆಯನ್ನು ಸ್ವೀಕರಿಸಿ ಅಖಿಳರಿಗೆ ಮುಕ್ತ್ಯಾಂಗನೆಯನ್ನು ದೊರಕಿಸಿ ಕೊಡಬೇಕೆಂದು ಕರುಣೆಯಿಂದ ನಟಿಸಿದರೆ ತನಗೆ ಮತ್ತು ಅಂಗದ ಲಿಂಗಕ್ಕೆ ಭೇದಭಾವದ ಸಂಬಂಧವನ್ನು ಕಲ್ಪಿಸಲಾಗದೆಂದು ಅಲ್ಲಮನು ಅವನಿಗೆ ತಿಳಿಸುತ್ತಾನೆ.[೮೪] ಆಗ ತನಗೆ ಶಾಂತಿಯೆಂಬ ಸಂಪತ್ತಿನ ಸ್ನೇಹ ಹೊಂದುವ ಜ್ಞಾನವನ್ನು ಅನುಗ್ರಹಿಸಬೇಕೆಂದು ಗೋರಕ್ಷನು ಕೇಳುತ್ತಾನೆ. ಕೊನೆಯಲ್ಲಿ ಪ್ರಭು ದೀಕ್ಷೆಯನ್ನು ಕೊಡುತ್ತಾನೆ, ಗೋರಕ್ಷನಿಗೆ ಮಾಯೆಯ ಹಂಗು ಹರಿಯುತ್ತದೆ.

* ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ ಗೋರಕ್ಷನ ಪ್ರಸಂಗವಿಲ್ಲ. ಪ್ರಭು ಕದಳಿಯನ್ನು ಪ್ರವೇಶ ಮಾಡುವುದಕ್ಕೆ ಮೊದಲು ಇದನ್ನು ಸೂಚ್ಯವಾಗಿ ತಿಳಿಸಿ ಅಷ್ಟಕ್ಕೇ ಮುಗಿಸಿ ಬಿಡುತ್ತಾನೆ. ಹಲಗೆಯಾರ್ಯನ ಶೂನ್ಯಸಂಪಾದನೆಯಲ್ಲೂ ಅದನ್ನು ಬೆಳೆಸಿಲ್ಲ. ಆದರೆ ಗುಮ್ಮಳಾಪುರದ ಸಿದ್ಧಲಿಂಗಯತಿ ತನ್ನ ಶೂನ್ಯಸಂಪಾದನೆಯಲ್ಲಿ ಅದಕ್ಕೊಂದು ಸನ್ನಿವೇಶವನ್ನು ರೂಪಿಸಿಕೊಂಡು ಸ್ವಲ್ಪಮಟ್ಟಿಗೆ ಬೆಳೆಸಿದ್ದಾನೆ. ಗೂಳೂರು ಸಿದ್ಧವೀರಣ್ಣೊಡೆಯನು ಅನುಕೂಲಕ್ಕೆ ತಕ್ಕಂತೆ ಬೆಳೆಸಿ 'ಗೋರಕ್ಷನ ಸಂಪಾದನೆ ಮತ್ತು ಎಲ್ಲ ಗಣಂಗಳ ಐಕ್ಯ' ಎಂದು ಒಂದು ಅಧ್ಯಾಯವನ್ನು ಸೃಷ್ಟಿಸಿದ್ದಾನೆ. ಇದರ ಹಿಂದಿನ ಅಧ್ಯಾಯ 'ಶರಣರ ಅವಸಾನ ಪರಾಮರಿಕೆ'ಯಲ್ಲಿ ಪ್ರಭು ಎಲ್ಲ ಶರಣರಿಗೂ ನಿಜಸಮಾಧಿಯನ್ನು ಕೈಗೊಳ್ಳುವಂತೆ

---

* ಡಾ. ಎಂ. ಚಿದಾನಂದಮೂರ್ತಿ ಅವರ 'ಶೂನ್ಯ ಸಂಪಾದನೆಯನ್ನು ಕುರಿತು' ಕೃತಿ ಆಧರಿಸಿ ಇದನ್ನು ಸಿದ್ಧಪಡಿಸಲಾಗಿದೆ.

[illegible]

[illegible]

[illegible]

[illegible]

[illegible]

[illegible]

[illegible]

ತಿಳಿಸಿ ಅವರನ್ನು ಬೀಳ್ಕೊಂಡು ಕಲ್ಯಾಣದಿಂದ ಹೊರಡುತ್ತಾನೆ. ಈ ಅಧ್ಯಾಯದಲ್ಲಿ ಪ್ರಭು ಗೋರಕ್ಷನನ್ನು ಕಂಡು ಸಂಭಾಷಣೆ ನಡೆಸುತ್ತಾನೆ ಹಾಗೂ ಅವನ ವಜ್ರದೇಹವನ್ನು ಖಡ್ಗದಿಂದ ಹೊಡೆದು ನೋಡಿ ಪರೀಕ್ಷೆ ಮಾಡುತ್ತಾನೆ. ಇದಾದ ನಂತರ ವಚನವನ್ನು ನೋಡುತ್ತೇವೆ.

ಸಿದ್ಧರಾಮ ಹಾಗೂ ಗೋರಕ್ಷ ಇವರ ಪ್ರಸಂಗಗಳು ತಟಸ್ಥ ನಿಲುವಿನಿಂದ ಪ್ರಾರಂಭವಾಗುತ್ತವೆಯಾದರೂ ಅಂತಿಮವಾಗಿ ಊರ್ಧ್ವಲಕ್ಷವನ್ನು ಪಡೆಯುತ್ತವೆ. ಸಿದ್ಧರಾಮನ ಪ್ರಸಂಗದಲ್ಲಿ ಅಲ್ಲಮಪ್ರಭು ಅಹಂಕಾರವನ್ನು ತೆಗೆದು ಹಾಕಿದರೆ ಗೋರಕ್ಷನ ಪ್ರಸಂಗದಲ್ಲಿ ಅಜ್ಞಾನವನ್ನು ಅಳಿಸಿ ಹಾಕುತ್ತಾನೆ. ಈ ಕಾರ್ಯಗಳಿಗಾಗಿ ಅವನು ಪ್ರಬಲವಾದ ಸಿದ್ಧಿಗಳನ್ನು ಅವಲಂಬಿಸುತ್ತಾನೆ.

೯) ಗೊಗ್ಗಯ್ಯ

ಗೊಗ್ಗಯ್ಯ ಸಿದ್ಧರಾಮನಂತೆ ತನ್ನ ಕಾರ್ಯಕುಶಲತೆಯನ್ನು ತಾನೇ ಮೌಲ್ಯಮಾಪನ ಮಾಡುತ್ತ ತಾನೊಬ್ಬ ಉಚ್ಚಮಟ್ಟದ ವ್ಯಕ್ತಿ ಎಂಬ ಅಹಂಕಾರವನ್ನು ತಾಳಿದವನೂ ಅಲ್ಲ, ಗೋರಕ್ಷನಂತೆ ವಜ್ರಕಾಯದವನಾಗಿ ಪರಮಪುರುಷಾರ್ಥವನ್ನು ಸಾಧಿಸುವುದು ಸಾಧ್ಯವೆಂಬ ಅಜ್ಞಾನವನ್ನು ತಾಳಿದವನೂ ಅಲ್ಲ. ಸೊಗಸಾಗಿ ಅರಳಿದ ಕೆಂದಾವರೆಗಳು, ಇನ್ನಿತರ ಹೂಗಿಡಗಳು ಹಾಗೂ ಲತಾಮಂಟಪಗಳು ಇವುಗಳಿಂದ ಕೂಡಿದ ತೋಟವನ್ನು ಪಾಲಿಸುತ್ತ ಈಶ್ವರನಲ್ಲಿ ಭಕ್ತಿಭಾವವುಳ್ಳವನಾಗಿದ್ದ ಅವನು ವ್ಯವಸಾಯ ಮಾಡುತ್ತ ಸಾಮಾನ್ಯನಂತೆ ಸಹಜವಾಗಿ ಕಾಲ ಕಳೆಯುವವನಾಗಿದ್ದಾನೆ. ಅವನು ವ್ಯವಸಾಯಕ್ಕಾಗಿ ಚೆನ್ನಾಗಿ ಭೂಮಿಯನ್ನು ಅಗೆಯುತ್ತಿರುವಾಗ ಅಲ್ಲಮಪ್ರಭು ಬಂದು ಅವನನ್ನು ಸಂಧಿಸುತ್ತಾನೆ.

ಲೋಕವು ದೇಹದ ಮೇಲಿನ ಆಸೆಗಾಗಿ ಜ್ಞಾನವನ್ನು ಲೆಕ್ಕಿಸದೆ ಮೋಹಕ್ಕೆ ಒಳಗಾಗಿರುವುದನ್ನು ಗೊಗ್ಗಯ್ಯನ ರೂಪದಲ್ಲಿ ಕಾಣುವ ಅಲ್ಲಮನು ಅವನಲ್ಲಿ 'ಭಕ್ತಿಯ ಹಾದಿಯನ್ನು ಜಾಗೃತಗೊಳಿಸಿ ಆತ ಲಿಂಗಮಾರ್ಗವನ್ನು ಸಾಧಿಸುವಂತೆ'ಮಾಡಬೇಕೆಂದು ನಿರ್ಧರಿಸುತ್ತಾನೆ.[೮೯] ಅದಕ್ಕಾಗಿ ಅವನ ಸಮೀಪಕ್ಕೆ ಹೋಗಿ 'ಶರಣಾರ್ಥಿ' ಎನ್ನುತ್ತಾನೆ. ಇದಕ್ಕೆ ಪ್ರತಿಯಾಗಿ ಶರಣಾರ್ಥಿಗಳನ್ನು ಸಲ್ಲಿಸುವ ಗೊಗ್ಗಯ್ಯ ಅಲ್ಲಮನನ್ನು 'ನೀನಾರು'? ಎಂದು ಪ್ರಶ್ನಿಸುತ್ತಾನೆ. ತಾನು 'ಭಕ್ತಿಭಿಕ್ಷಾಂದೇಹಿ' ಎಂದು ತಿಳಿಸುವ ಅಲ್ಲಮನು ಗೊಗ್ಗಯ್ಯನಿಗೆ ವ್ಯರ್ಥವಾಗಿ ಬಳಲುವುದು ಬೇಡವೆಂದೂ, ತನು-ಮನ-ಧನಗಳನ್ನು ಅರ್ಪಿಸಿ ಮಿಕ್ಕ

[illegible]

[illegible]

[illegible]

[illegible]

[illegible]

ಪ್ರಸಾದವನ್ನುಂಡು ಸುಖಿಯಾಗಬೇಕೆಂದೂ ತಿಳಿಸುತ್ತ ಅವನ ಹೆಸರೇನೆಂದು ಕೇಳುತ್ತಾನೆ. ಗೊಗ್ಗಯ್ಯನು ತನ್ನ ಹೆಸರನ್ನು ತಿಳಿಸಿ ತಾನೊಬ್ಬ ಲೌಕಿಕನೆಂದೂ, ತನಗೇನೂ ತಿಳಿಯದೆಂದೂ ಅದಕ್ಕಾಗಿ ಪ್ರಭು ತನ್ನ ಮನಸ್ಸಿನೊಳಗಿನ ವಿಚಾರವನ್ನು ತಿಳಿಸಬೇಕೆಂದೂ ಕೇಳಿಕೊಳ್ಳುತ್ತಾನೆ.

ನಿಮ್ಮ ಹೆಸರೇನಯ್ಯ ಎಂದರೆ
ನಮ್ಮ ಹೆಸರೇ ಗೊಗ್ಗಯನು ಕೇ
ಳೆಮ್ಮ ಮತವಿದು ಲೌಕಿಕರು ನಾವರಿಯೆವೇನುವನು. ।
ಸುಮ್ಮನಿರಬೇಡೆಮಗೆ ವಿವರಿಸಿ
ನಿಮ್ಮ ಮನಸ್ಸಿನ ಬುದ್ಧಿ ಯಾವುದ
ನೆಮ್ಮಿಹುದು ಹೇಳೆಂದನಾ ಗೊಗ್ಗಯ್ಯನಲ್ಲಮಗೆ ॥ [೮೬]

ಯಾವ ವ್ಯವಸಾಯವನ್ನು ಮಾಡಿದರೂ ಜೀವಕ್ಕೆ ವ್ಯಥೆಗಳು ತಪ್ಪುವುದಿಲ್ಲ, ಸಾವು ಹಿಂಗುವುದಿಲ್ಲ ಅಲ್ಲದೆ ಅವನು ಮಾಡುವುದು ಭವಿಗಳ ಕೆಲಸ ಎಂದು ಅಲ್ಲಮ ನುಡಿಯುತ್ತಾನೆ. ಗುರು–ಲಿಂಗ–ಜಂಗಮ ಸೇವೆಯಲ್ಲಿದ್ದುಕೊಂಡು ಕೈಲಾಸ ಸೇರಿದರೂ ಸಾವು ನೋವುಗಳು ತಪ್ಪುವುದಿಲ್ಲವೆಂದು ಹೇಳುತ್ತ ಸಾವು ಹಿಂಗುವ ವ್ಯವಸಾಯವನ್ನು ಮಾಡಬೇಕೆಂದು ತಿಳಿಸುತ್ತಾನೆ.[೮೭] ಗೊಗ್ಗಯ್ಯನು ಕೃಪೆಯ ಚಿತ್ತದಲ್ಲಿ ಉಳುತ್ತ ಹೋಗಲಾಗಿ ಕಿತ್ತ ಹೆಂಟೆಯ ಕೆಳಗೆ ಹೊಂಗಳಸವೊಂದನ್ನು ಅಲ್ಲಮನು ಅವನಿಗೆ ತೋರಿಸುತ್ತಾನೆ. ಅಲ್ಲಿ ಸಮಾಧಿಸ್ಥನಾಗಿದ್ದ ಅನಿಮಿಷಯ್ಯನ ಲಿಂಗವೂ, ಜೀವಕಳೆಯೂ ಅವನಿಂದ ಬೇರ್ಪಟ್ಟು ಅಲ್ಲಮನನ್ನು ಸೇರಿಕೊಳ್ಳುತ್ತವೆ. ಅದೇ ಶಿವಲಿಂಗಭಕ್ತಿಯನ್ನು ಸಾಧಿಸುವ ಪರಿಯೆಂದು ತಿಳಿಸಿ ಶಿವಭಕ್ತಿಯ ರಹಸ್ಯದ ಘನವು ಗೊಗ್ಗಯ್ಯನಿಗೆ ವೇದಿಸುವಂತೆ ಮಾಡಿ ತನ್ನ ಲೀಲೆಯಲ್ಲಿ ಮುಂದುವರಿಯುತ್ತಾನೆ ಅಲ್ಲಮಲಿಂಗ.

* ಹರಿಹರನಲ್ಲಿ ಗೊಗ್ಗಯ್ಯನ ಪ್ರಸ್ತಾಪವಿಲ್ಲ, ಅನಿಮಿಷಯ್ಯನ ಪ್ರಸಂಗವಿದೆ. ಮೊದಲನೆಯ ಮತ್ತು ಎರಡನೆಯ ಶೂನ್ಯ ಸಂಪಾದನೆಗಳಲ್ಲಿ ಬಹುಮಟ್ಟಿಗೆ ಇದೇ ವಿಚಾರವನ್ನು ಅನುಸರಿಸಲಾಗಿದೆ.

---

* ಡಾ. ಎಂ. ಚಿದಾನಂದಮೂರ್ತಿ ಅವರ 'ಶೂನ್ಯ ಸಂಪಾದನೆಯನ್ನು ಕುರಿತು' ಕೃತಿ ಆಧರಿಸಿ ಇದನ್ನು ಸಿದ್ಧಪಡಿಸಲಾಗಿದೆ.

ನಾಲ್ಕನೆಯ ಶೂನ್ಯಸಂಪಾದನೆಯಲ್ಲಿ ಅನಿಮಿಷಯ್ಯನ ದರ್ಶನಕ್ಕೆ ಮೊದಲು ಅಲ್ಲಮ ಗೊಗ್ಗಯ್ಯನನ್ನು ಕಾಣುತ್ತಾನೆ. ಇದು ಪ್ರಭುಲಿಂಗಲೀಲೆಯ ವೃತ್ತಾಂತಕ್ಕೆ ಹೆಚ್ಚು ಕಡಿಮೆ ಸಮಾನಾಂತರವಾಗಿದೆ.

೪ ಊರ್ಧ್ವಕುಂಡಲಿನಿಯವರು

ಲೌಕಿಕರ ಬಹುಮುಖ ಬದುಕಿನಲ್ಲಿ ವೈವಿಧ್ಯತೆಗೆ ಲೆಕ್ಕವಿರುವುದಿಲ್ಲವೆಂಬುದನ್ನು ನೋಡಿದ್ದೇವೆ. ಇದಕ್ಕೆ ವಿರುದ್ಧವಾಗಿ ಪಂಚೇಂದ್ರಿಯಗಳನ್ನು ತಟಸ್ಥಗೊಳಿಸಿ ಮನೋಲಯದ ಮಾರ್ಗದಲ್ಲಿ ಸಾಗುವವರಲ್ಲಿ ಲೋಕವ್ಯವಹಾರಗಳಿಗೆ ಯಾವ ಪುರಸ್ಕಾರವೂ ಇರುವುದಿಲ್ಲ. ಲಿಂಗಮಾರ್ಗದಲ್ಲಿ ಮುನ್ನಡೆಯುತ್ತ ಮಹಾಲಿಂಗದಲ್ಲಿ ಒಂದಾಗುವ ಒಂದೇ ಒಂದು ಕ್ರಮದಲ್ಲಿ ಅವರು ಗಮನ ಹರಿಸಿರುತ್ತಾರೆ. ಈ ದಾರಿಯಲ್ಲಿ ಕೆಲವೊಮ್ಮೆ ಅವರು ಬೇರೆ ಬೇರೆ ನಿಲ್ದಾಣಗಳಲ್ಲಿ ಇರಬಹುದು. ಈ ಒಂದು ವ್ಯತ್ಯಾಸವನ್ನು ಬಿಟ್ಟರೆ ಲೌಕಿಕ ಚಟುವಟಿಕೆಗಳ ಪ್ರಮಾಣದಲ್ಲಿ ವೈವಿಧ್ಯತೆಯನ್ನು ನಮೂದಿಸುವುದು ಸಾಧ್ಯವಾಗುವುದಿಲ್ಲ ಆದುದರಿಂದ ಈ ವಿಭಾಗದಲ್ಲಿ ಒಬ್ಬೊಬ್ಬರ ಪ್ರಸಂಗವನ್ನು ಕೈಗೆತ್ತಿಕೊಂಡು ಅವರ ಲೌಕಿಕ ಚಟುವಟಿಕೆಗಳ ಮೇಲೆ ಬೆಳಕು ಹರಿಸುವ ಪ್ರಯತ್ನ ಸಫಲವಾಗುವುದಿಲ್ಲ.

ಅ) ಮುಕ್ತಾಯಕ್ಕ

ಗುಪ್ತಭಕ್ತಿಯಿಂದ ಐಕ್ಯಸ್ಥಲವನ್ನು ಮುಟ್ಟಿದ್ದ ಅಜಗಣ್ಣನು ಸಮಾಧಿಸ್ಥನಾಗುತ್ತಾನೆ. ಅವನ ಒಡಹುಟ್ಟಿದವಳಾದ ಮುಕ್ತಾಯಿಯು ತನ್ನಣ್ಣ ಶಿವೈಕ್ಯನಾದನೆಂಬುದನ್ನು ಅರಿಯದೆ ವಿಧಿಯ ಮೇಲೆ ಕೋಪಗೊಂಡವಳಾಗಿ ಅಳುತ್ತಿರುತ್ತಾಳೆ. ಅಣ್ಣನೇ ಸರ್ವಸ್ವವಾಗಿದ್ದ ತನಗೆ ಇನ್ನಾರು ಗತಿಯೆಂದು ಹಂಬಲಿಸುವ ಅವಳು ತನ್ನ ದುಃಖವನ್ನೆಲ್ಲ ಅಲ್ಲಮನ ಮುಂದೆ ತೋಡಿಕೊಳ್ಳುತ್ತಾಳೆ. ಐಕ್ಯಸ್ಥಲದಲ್ಲಿ ನಿಂತ ಅಜಗಣ್ಣನು ಮುಕ್ತನಾಗಿದ್ದಾನೆಂದೂ ಜನನ–ಮರಣಗಳಿಂದ ದೂರಾದ ಅವನು ಮರಣಹೊಂದಿದ್ದಾನೆಂದು ಭಾವಿಸುವುದು ತಪ್ಪೆಂದೂ ಅಲ್ಲಮ ಹೇಳುತ್ತಾನೆ. ಲಿಂಗವನರಿದ ಅಜಗಣ್ಣನು ಕರ್ಮೇಂದ್ರಿಯಗಳನ್ನು ಓಸರಿಸಿ ಹೊರಗಿನ ಮಾಟವನ್ನು ತೊರೆದು ಅಂತರ್ಮಾರ್ಗದಲ್ಲಿ ಶಿವಭಕ್ತಿಯನ್ನು ಆಚರಿಸಿದ್ದಾನೆಂದು ಅವಳಿಗೆ ತಿಳಿಯಪಡಿಸುತ್ತಾನೆ. ಸುಟ್ಟ ನೂಲು ನೂಲಿನಂತೆ ಕಂಡರೂ ಅದು ನೆಯ್ಗೆಯ

[illegible]

[illegible]

[illegible]

[illegible]

[illegible]

ಕೆಲಸಕ್ಕೆ ಬಾರದೇ ಇರುವಂತೆ ಲಿಂಗಜ್ಞಾನದ ಅಗ್ನಿಯಲ್ಲಿ ಬೆಂದು ಹೋದ ಅಜಗಣ್ಣನನ್ನು ಲೌಕಿಕನೆಂದು ಪರಿಗಣಿಸಲಾಗದು. ಹೀಗೆ ನಿರಾಳದಲ್ಲಿ ನಿಲ್ಲುವುದನ್ನು ಮುಕ್ತಿಯೆಂದು ತಿಳಿಸಿ ಅಲ್ಲಮನು ಆವಳಿಗೆ ಭಕ್ತಿಯ ಕೀಲವನ್ನು ಉಪದೇಶಿಸುತ್ತಾನೆ. ಮನಸ್ಸಿನ ಕತ್ತಲೆಯನ್ನು ಪರಿಹರಿಸಿಕೊಂಡ ಮುಕ್ತಾಯಿ 'ಸದ್ಯೋನ್ಮುಕ್ತೆಯಾಗುತ್ತಾಳೆ.'

ಆ) ಮರುಳುಶಂಕರದೇವ

ಅಲ್ಲಮಪ್ರಭು ಸಿದ್ಧರಾಮನೊಂದಿಗೆ ಕಲ್ಯಾಣಕ್ಕೆ ಬರುತ್ತಾನೆ. ಅಲ್ಲಿ ಬಸವಣ್ಣನ ಮನೆಯೊಳಗೆ ಮಹಾಪ್ರಸಾದಕುಂಡದ ಸಮೀಪದಲ್ಲಿ ರಾತ್ರಿ ಹಗಲು ಎಡಬಿಡದೆ ಸೇವೆ ಮಾಡುತ್ತಿದ್ದ ಮರುಳುಶಂಕರದೇವನನ್ನು ಕಾಣುತ್ತಾನೆ. ಅಲ್ಲಮ ಬರುತ್ತಿದ್ದಾಗ ಮರುಳುಶಂಕರದೇವ ಅವನಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾನೆ. ಹನ್ನೆರಡು ವರುಷಗಳಿಂದ ಗುಪ್ತಭಕ್ತಿಯನ್ನಾಚರಿಸುತಿದ್ದ ಮರುಳುಶಂಕರದೇವನ ಬಗ್ಗೆ ಪ್ರಭು ಸಿದ್ಧರಾಮನ ಮುಂದೆ ಮೆಚ್ಚುಗೆ ವ್ಯಕ್ತಪಡಿಸುತ್ತಾನೆ. ಅವನು ಕಾಯದಲ್ಲಿ ಕಂಗೆಡದ, ಕ್ರೋಧಾಗ್ನಿಯಲ್ಲಿ ಮುನ್ನುಗ್ಗದ, ಲೋಭಕ್ಕೆ ಬಲಿಯಾಗದ, ವ್ಯಾಮೋಹಕ್ಕೆ ಮನಸ್ಸುಗೊಡದ, ಮದಮತ್ಸರಗಳನ್ನು ಕಾರ್ಯರೂಪಕ್ಕಿಳಿಸದ ಶರಣನಾಗಿ ಲಿಂಗಪ್ರಸಾದ ಪ್ರೇಮಿಯಾದವನೆಂದು ತಿಳಿಸುತ್ತಾನೆ.

ಕಾಮದಲಿ ಕಂಗೆಡದೆ ಕ್ರೋಧ
ಸ್ತೋಮದಲಿ ಮುಂಗೆಡದೆ ಲೋಭದ
ಸೀಮೆಯಲಿ ಸಿಕ್ಕದೆ ವಿಮೋಹದ ಬಲೆಗೆ ಬಗೆಗುಡದೆ ।
ಆ ಮದೋನ್ನತ ಮತ್ಸರಂಗಳ
ನೇಮಿಸದೆ ಲಿಂಗಪ್ರಸಾದ
ಪ್ರೇಮಿಯಾದ ಮಹಾತ್ಮನೀತನು ರಾಮ ಕೇಳೆಂದ ॥ [೮೮]

ಇದುವೇ ಶೇಷಪ್ರಸಾದ ಅಲ್ಲಮನ ದೃಷ್ಟಿಯಲ್ಲಿ. ಈ ಗುಣಗಳ ವಿಶೇಷತೆಯನ್ನು ಹೊಂದಿರುವ ಅವನ ಸಮಾನರಾರೂ ಇಲ್ಲವೆಂದು ಪ್ರಭು ಬಸವಣ್ಣನಿಗೆ ತಿಳಿಸುತ್ತಾನೆ ಹಾಗೂ ಮರುಳುಶಂಕರದೇವನಿಗೆ ಐಕ್ಯಪದವಿಯನ್ನು ಕೊಡುತ್ತಾನೆ.

[illegible]

[illegible]

[illegible]

[illegible]

[illegible]

[illegible]

[illegible]

೫. ಅನುಭವಮಂಟಪದ ಸುತ್ತಮುತ್ತ

ಪ್ರಭು ಅನುಭವಮಂಟಪದಲ್ಲಿ ಬಸವಾದಿಗಳಿಗೆ ಇಷ್ಟಲಿಂಗದ ರಹಸ್ಯವನ್ನು ಅರುಹಿ ಅದು ಪ್ರಾಣಲಿಂಗದ ನೆಲೆಯನ್ನು ಅರಿಯುವ ದಾರಿಯೆಂದು ತಿಳಿಸುತ್ತಾನೆ. ಅಲ್ಲಿಗೆ ದಿಗಂಬರೆಯಾಗಿ ಬಂದ ಅಕ್ಕಮಹಾದೇವಿಯು ನಿಜವಾಗಿಯೂ ದೇಹಾಭಿಮಾನವನ್ನು ನೀಗಿರುವಳೋ ಇಲ್ಲವೆ ತೋರಿಕೆಗೆ ಹಾಗೆ ವರ್ತಿಸುತ್ತಿರುವಳೋ ಹೇಗೆಂಬುದನ್ನು ಪರೀಕ್ಷಿಸುತ್ತಾನೆ. ಸಕಲ ಶರಣ ಬಳಗಕ್ಕೆ ಅವಳ ಬಗೆಗಿದ್ದ ಸಂಶಯವು ದೂರಾಗಿ ಲಿಂಗಮಾರ್ಗದಲ್ಲಿ ಸಾಗುತ್ತಿದ್ದವಳೆಂಬುದು ಮನದಟ್ಟಾಗುತ್ತದೆ. ಎಲ್ಲರೂ ಅಕ್ಕಮಹಾದೇವಿಯನ್ನು ಮನಸಾರೆ ಹೊಗಳುತ್ತಾರೆ. ಅಲ್ಲಮಪ್ರಭು ಅವಳಿಗೆ ತಕ್ಕ ಉಪದೇಶವನ್ನು ನೀಡಿ ಅವಳು ಕಾಯದ ಕದಳೀಬನಕ್ಕೆ ಹೋಗಲು ಆಜ್ಞೆ ಮಾಡುತ್ತಾನೆ.

ಬಸವರಾಜನು ಶೂನ್ಯಸಿಂಹಾಸನವನ್ನು ರಚಿಸಿದ್ದಾನೆ. ಪ್ರಭು ಯಾವ ವೇಷದಲ್ಲಿ ಬಂದರೂ ಅವನನ್ನು ಗುರುತಿಸಲು ಸಿದ್ಧನಾಗಿದ್ದಾನೆ. ಅವನು ಬಂದು ತಾನು ರಚಿಸಿದ ಶೂನ್ಯ ಸಿಂಹಾಸನವನ್ನು ಆರೋಹಣ ಮಾಡಲೆಂದು ದಾರಿ ಕಾಯುತ್ತಾನೆ. ಒಂದು ದಿನ ಬಸವಣ್ಣನು ಶಿವ ಸಮಾದಿಯಲ್ಲಿದ್ದಾಗ ಅಲ್ಲಮ ಬರುವುದನ್ನು ಹಾಗೂ ತನಗೆ ತತ್ತ್ವವಿಭೂತಿಯನ್ನು ಕೊಡುವುದನ್ನು ಕಾಣುತ್ತಾನೆ. ಕಲ್ಯಾಣಪುರವನ್ನು ಸರ್ವರೀತಿಯಿಂದಲೂ ಶೃಂಗರಿಸಿ ಪ್ರಭು ಬರುವ ಮಂಗಳ ಮಹೋತ್ಸವಕ್ಕೆ ಕಾಯುತ್ತಾನೆ. ವೈಶಿಷ್ಟ್ಯವೆಂದರೆ ಅಲ್ಲಮನನ್ನು ಎದರುಗೊಳ್ಳಲು ಕಲ್ಯಾಣದ ಜನಸ್ತೋಮವೇ ಸಾಗುತ್ತದೆ. 'ಅವರವರ ಭಾವಕ್ಕೆ ಅವರವರ ತೆರನಾಗಿ ಇರುತಿಹನು ಶಿವಯೋಗಿ' ಎನ್ನುವಂತೆ ವಿಚಿತ್ರವಾಗಿ ತನ್ನ ವೇಷಗಳನ್ನು ಬದಲಿಸುತ್ತ ಬಂದ ಪ್ರಭುವನ್ನು ಗುರುತಿಸಿ ಬಸವಣ್ಣ ಅವನ ಪಾದಗಳಿಗೆರಗುತ್ತಾನೆ. ಕಲ್ಯಾಣಪುರದಲ್ಲಿ ಎಲ್ಲಿ ನೋಡಿದಲ್ಲಿ ಪ್ರಭುವೇ ಕಾಣಿಸುತ್ತಾನೆ.

'ಪ್ರಭುದೇವರು ಆರೋಗಣೆ ಮಾಡಿದ ಗತಿ'ಯಲ್ಲಿ ವಿಶ್ವೇಶ್ವರನ ರೂಪವಾದ ಪ್ರಭುವನ್ನು ಬಸವಣ್ಣ ತೃಪ್ತಿ ಪಡಿಸಬಯಸಿದ ಪ್ರಸಂಗವಿದೆ. ಶಿವನಿಂದ ಪಡೆದುಕೊಂಡ ಅನ್ನವನ್ನು ಅವನಿಗೇ ಅರ್ಪಿಸುವ ತವಕದಲ್ಲಿ ಬಸವಣ್ಣನು ಸಿದ್ಧಪಡಿಸಿದ ಅಡುಗೆಯನ್ನು ಬಡಿಸಿ ಸಂತೋಷಪಡುತ್ತಾನೆ. ಪ್ರಭು ಕೇಳಿದಷ್ಟು ಬಡಿಸಬೇಕೆಂಬ ಇಚ್ಛೆ ಅವನದು. ಪ್ರಭು ಇನ್ನೂ ಬೇಕೆಂದು ಕೇಳಿದಾಗ ಹೊಸ ಅಡುಗೆ ಮಾಡಿಸಿ

[illegible]

[illegible]

[illegible]

[illegible]

ಅರ್ಪಿಸುತ್ತಾನೆ. ಎಲ್ಲವನ್ನೂ ಪ್ರಭು ಕ್ಷಣಾರ್ಧದಲ್ಲಿ ಸೇವಿಸುತ್ತ ಹೋಗುತ್ತಾನೆ. ನೆರೆಮನೆಯವರ ಕಾಳೆಲ್ಲ ಅಡುಗೆಗೆ ಖರ್ಚಾದರೂ ಪ್ರಭುವಿನ ಹಸಿವು ಹಿಂಗುವುದಿಲ್ಲ. ಪ್ರಭುವಿನ ಇಂದ್ರಜಾಲಕ್ಕೆ ಮನಸೋತ ಬಸವಣ್ಣನು ತಮ್ಮನ್ನು ಲಕ್ಷಿಸಲಿಲ್ಲವೆಂದು ಸಿಟ್ಟಿಗೆದ್ದು ಜಂಗಮರೆಲ್ಲ ಹೊರಟು ಹೋದಾಗ ಅತ್ತ ಜಂಗಮಸಮೂಹವನ್ನು ಅಲಕ್ಷಿಸಿದ ನೋವಿಗೆ ಗುರಿಯಾಗುವ ಬಸವಣ್ಣ ಇತ್ತ ಅಲ್ಲಮನನ್ನು ತೃಪ್ತಿಪಡಿಸಲಾಗದುದಕ್ಕೆ ಚಿಂತಾಕ್ರಾಂತನಾಗುತ್ತಾನೆ. ತನು-ಮನ-ಧನಗಳ ಸಮರ್ಪಣೆಯನ್ನು ಹೊಂದಿದ ಅರ್ಪಣೆ ಪರಿಪೂರ್ಣವಲ್ಲವೆಂದು ಉಳಿದ ಶರಣರು ನುಡಿದಾಗ 'ಹೊತ್ತು ಹೋಗದ ಮುನ್ನ ತನುವಿನ ತುತ್ತ ನೀಡುವೆ ಗುರುವಿಗೆ'[೮೯] ಎಂದು ಹಾರೈಸಿ ತಾನೇ ಆರೋಗಣೆಯ ರೂಪದಲ್ಲಿ ಶರಣಾಗುತ್ತಾನೆ. ಶಿವನ ಅನ್ನವನ್ನು ಭಾಗಶಃ ತನ್ನ ರೂಪದಲ್ಲಿ ಉಳಿಸಿಕೊಂಡು ಬಸವಣ್ಣನು ಅರ್ಪಣೆಯನ್ನು ನಡೆಸುತ್ತಿದ್ದರಿಂದ ಅತೃಪ್ತನಾಗಿದ್ದ ಶಿವರೂಪಿ ಪ್ರಭು ಈಗ ಅರ್ಪಣೆ ಪೂರ್ಣವಾಯಿತೆಂದು ಹೀಗೆ ನುಡಿಯುತ್ತಾನೆ-

ತಿದ್ದಬೇಕೆನುತಾನೆ ಹವಣಿಸಿ
ಮೆದ್ದೆನಲ್ಲದೆ ದಿಟ ವಿಚಾರಿಸೆ
ಹೊದ್ದುವುವೆ ಹಸುತೃಷೆಗಳೆನ್ನಲಿ ಬಸವ ಕೇಳೆಂದ ॥ [೯೦]

'ನಿನ್ನ ಕಾಯಶ್ರೇಷ್ಠ ನೈವೇದ್ಯವನು ಕಾಣುತ ತುಷ್ಟಿ ತನುವಿಗೆ ತುಂಬಿತು,' ಎಂದು ನುಡಿದು ನರಸುರೋರಗರಲ್ಲಿ ಬಸವಣ್ಣನಿಗೆ ಯಾರೂ ಸಮವಲ್ಲವೆಂದು ಮೆಚ್ಚುಗೆಯ ನುಡಿಗಳನ್ನಾಡುತ್ತಾನೆ. ಅತ್ತ ಜಂಗಮಸಮೂಹ ಪ್ರಭುವಿನ ತೃಪ್ತಿಯಲ್ಲಿ ಸಂತೃಪ್ತವಾಗಿ 'ತೇಗಿದರೆ ಷಡುರುಚಿರಸಾಯನದ ಸಂದ ವಾಸನೆ ಸೂಸುತಿದೆ' ಎಂದು ನುಡಿದು ಭೋಜನವನ್ನು ನಿರಾಕರಿಸುತ್ತಾರೆ. ನಿರಹಂಕಾರ ಮನದಿಂದ ಭಕ್ತಿಯನ್ನು ಆಚರಿಸಿದರೆ ಅದು ಶಿವನಿಗೆ ತಲುಪುತ್ತದೆಂದು ಚಾಮರಸ ತಿಳಿಸುತ್ತಾನೆ.

೬ ಪರಮಾರ್ಥಕ್ಕೆ ಏಣಿ

ಬಸವಾದಿ ಶರಣರಿಗೆ ಲೋಕವ್ಯವಹಾರವು ಸೀಮಿತ ಕ್ಷೇತ್ರವನ್ನು ಒಳಗೊಂಡಿತ್ತೆಂಬುದನ್ನು ನೋಡಿದ್ದೇವೆ. ಪಂಚೇಂದ್ರಿಯಗಳ ತೃಪ್ತಿಗಾಗಿ ಬದುಕನ್ನು ಕತ್ತರಿಸುತ್ತ ಮೃತ್ಯುಮುಖವಾಗಿ ಸಾಗುವುದು ಭವಬಂಧನಕ್ಕೆ ಮೂಲ. ಈ ಭವದಿಂದ ದೂರ ಸರಿದು ಮೋಕ್ಷಾಪೇಕ್ಷಿಯಾಗಿ, ಊರ್ಧ್ವಗಾಮಿಯಾಗಿ ಮರಣವನ್ನು ಗೆಲ್ಲುವುದು ಲಿಂಗೈಕ್ಯಕ್ಕೆ ದಾರಿ. ಈ ಎರಡೂ ವೃತ್ತಿಗಳಲ್ಲಿ ಸಾಧನವಾಗುವುದು ದೇಹವೇ.

[illegible]

ಪಂಚೇಂದ್ರಿಯಗಳನ್ನು ಬಳಸಿಕೊಂಡು ಮನಸ್ಸಿನ ಅಧೀನದಲ್ಲಿ ಜೀವಾತ್ಮನಿರುವುದು ಭವಕ್ಕೆ ದಾರಿಯಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಪಂಚೇಂದ್ರಿಯಗಳನ್ನು ಸವಾರಿ ಮಾಡುವ ಮನಸ್ಸನ್ನೇ ಲಯಗೊಳಿಸಿ ಊರ್ಧ್ವಗಾಮಿಯಾಗುವುದು ಶರಣನ ಬದುಕು. ಚೆನ್ನಬಸವಣ್ಣನ ಒಂದು ವಚನವನ್ನು ನೋಡೋಣ.

ಗುಬ್ಬಿ ಹೆರರ ಮನೆಯ ತನ್ನ ಮನೆ ಎಂಬಂತೆ,
ಧರೆ ಧನ ವನಿತೆಯರು ಎನ್ನವರು ತನ್ನವರೆಂದು
ಹೋರಿ ಹೋರಿ ಸಾಯುತ್ತಿದೆ ಜೀವ,
ಸರ್ವಕರ್ತೃ ಕೂಡಲಚನ್ನಸಂಗಯ್ಯನೆಂದರಿಯದೆ. [೯೧]

ಎಲ್ಲರೂ ಹೆಣ್ಣು, ಹೊನ್ನು, ಮಣ್ಣು ಇವುಗಳಿಗಾಗಿ ಸಾಯುವವರೇ. ಈ ಎಲ್ಲವುಗಳ ವ್ಯವಹಾರಕ್ಕೆ ಪರಶಿವನೇ ಸರ್ವಕರ್ತನಾಗಿರುವುದರಿಂದ ಅವನನ್ನು ಅರಿಯಬೇಕೆಂಬುದು ಚೆನ್ನಬಸವಣ್ಣನ ಅಭಿಪ್ರಾಯ. ಇದನ್ನು ಸ್ಪಷ್ಟಪಡಿಸುವುದಕ್ಕಾಗಿ ಉಪಮೆಯೊಂದನ್ನು ವಚನದಲ್ಲಿ ಬಳಸಲಾಗಿದೆ. ಗುಬ್ಬಿ ಅನೇಕ ಕಡೆಗಳಲ್ಲಿ ವಾಸಿಸುತ್ತ ಉಪಯೋಗಿಸುವ ವಾಸಸ್ಥಾನಗಳೆಲ್ಲ ತನ್ನ ಮನೆಯೆಂದೇ ಭಾವಿಸುತ್ತದಂತೆ! ಆದರೆ ಆ ಸ್ಥಾನಗಳು ನಮ್ಮ ಕಣ್ಣ ಮುಂದೆಯೇ ಇಲ್ಲವಾಗುವುದನ್ನು ನಾವು ನೋಡುತ್ತೇವೆ. ಈ ಲೋಕದ ವ್ಯವಹಾರವೂ ಅದೇ ತೆರನಾಗಿದೆಯೆಂಬುದು ಚೆನ್ನಬಸವಣ್ಣನ ಅಭಿಪ್ರಾಯ. ಜೀವನು ಗುಬ್ಬಿ ಎಂದಾದರೆ ದೇಹಗಳು ಮನೆಗಳು. ಈ ಮನೆಗಳೂ ನಾಶವಾಗುತ್ತವೆ. ಅಂದರೆ ದೇಹ ಶಾಶ್ವತವಲ್ಲ. ನಿತ್ಯವೂ ಅನೇಕರು ಸಾಯುವುದನ್ನು ನೋಡುತ್ತಿದ್ದರೂ ದೇಹವೇ ನಾನೆಂಬ ಭಾವ ಮನೆಮಾಡಿಕೊಂಡಿರುವುದು ಆಶ್ಚರ್ಯವಲ್ಲದೆ ಮತ್ತೇನು? ಇದೇ ಅಭಿಪ್ರಾಯವನ್ನು ಬಸವಣ್ಣನ ವಚನವೊಂದು ಹೀಗೆ ಧ್ವನಿಸುತ್ತದೆ.

ಸಂಸಾರವೆಂಬುದೊಂದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ!
ಇದ ನೆಚ್ಚಿ ಕೆಡಬೇಡ–ಸಿರಿಯೆಂಬುದ!
ಮರೆಯದೆ ಪೂಜಿಸು ಕೂಡಲಸಂಗಮದೇವನ. [೯೨]

ಈ ವಚನದಲ್ಲಿ ಬಸವಣ್ಣ ಸಂಸಾರವನ್ನು, ಸಿರಿಯನ್ನು ನಂಬಲಾಗದೆಂದೂ ಪರಶಿವನನ್ನು ಮರೆಯದೆ ಪೂಜಿಸಬೇಕೆಂದೂ ತಿಳಿಸುತ್ತಾನೆ. ಈಗ ಅಲ್ಲಮಪ್ರಭುವಿನ ವಚನವೊಂದನ್ನು ನೋಡೋಣ.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ನೆಳಲ ಹೂಳಿಹೆನೆಂದು ಬಳಲುತ್ತಿದೆ ಜಗವೆಲ್ಲಾ
ನೆಳಲು ಸಾಯಬಲ್ಲುದೆ ಅಂಗಪ್ರಾಣಿಗಳಿಗೆ?
ಸಮುದ್ರದಾಚೆಯ ತಡಿಯಲ್ಲಿ ಕಳ್ಳನ ಕಂಡು,
ಇಲ್ಲಿಂದ ಮುನಿದು ಬೈದಡೆ, ಅವ ಸಾಯಬಲ್ಲನೆ?
ಭಾವದಲ್ಲಿ ಹೊಲಿದ ಹೊಲಿಗೆಯ ಭೇದವನರಿಯರು;
ಕಾಮಿಸಿದಡುಂಟೆ ನಮ್ಮ ಗುಹೇಶ್ವರಲಿಂಗವು? "[5]

'ಕಾಯ ಬಲಿದರೆ ಮಾಯೆ ಬಲಿಯುತ್ತದೆ, ಮಾಯೆ ಬಲಿದರೆ ಛಾಯೆ ಬಲಿಯುತ್ತದೆ. ಆದರಿಂದ ಸಿದ್ಧನಾಗುವುದು ಸಾಧ್ಯವಿಲ್ಲ. ಈ ಮೂರರ ರಹಸ್ಯವನ್ನರಿತು ಮುನ್ನಡೆದವನು ಶ್ರೇಷ್ಠ ಶರಣನೆನಿಸುತ್ತಾನೆ' ಎಂದು 'ಗೋರಕ್ಷನ ಗತಿ'ಯಲ್ಲಿ ಅಲ್ಲಮನ ಬಾಯಿಯಿಂದ ಚಾಮರಸ ನುಡಿಸುವ ಮಾತುಗಳು ಈ ವಚನದ ಸಾಲುಗಳಿಗೆ ಸಂವಾದಿಯಾಗಿ ನಿಲ್ಲುತ್ತವೆ. ಕಾಟಾಚಾರಕ್ಕೆ ಮಾಡಿದ ಪ್ರಯತ್ನಗಳಿಂದ ಮಾಯೆಯನ್ನು ಕಳೆಯುವುದು ಸಾಧ್ಯವಿಲ್ಲ. ಮಾಯೆಯೆಂಬ ನೆಳಲನ್ನು ಹೂಳುವುದಕ್ಕಾಗಿ ಮಾಡುವ ನಮ್ಮ ಪ್ರಯತ್ನಗಳು ಹೇಗೆ ವ್ಯರ್ಥವಾಗಿರುತ್ತವೆಂಬುದನ್ನು ತಿಳಿಸುತ್ತದೆ ಈ ವಚನ. ಅಪಾರವಾಗಿರುವ ಸಮುದ್ರದ ಈಚೆಯ ದಡದಲ್ಲಿ ನಾವಿದ್ದುಕೊಂಡು ಆಚೆಯ ದಡದಲ್ಲಿದ್ದ ಕಳ್ಳನನ್ನು ಬೈದು ಸಾಗಿಸಲಾಗದು. ಅದೇ ರೀತಿ ಜೀವ ಭಾವದ ಹೊಲಿಗೆಯಲ್ಲಿಯೇ ರೂಪುಗೊಂಡಿರುವ ಮಾಯೆಯನ್ನು ಕಳೆಯುವುದು ಕೂಡ ಮೇಲೆ ಉದಾಹರಿಸಿದ ಅಲ್ಲಮಪ್ರಭುವಿನ ವಚನದಲ್ಲಿ ತಿಳಿಸಿರುವಂತೆ ಬೈದು ಸಾಯಿಸಲು ಮಾಡಿದ ಪ್ರಯತ್ನವಾಗುತ್ತದೆ. ಭಾವದಲ್ಲಿ ಹೊಲಿದ ಹೊಲಿಗೆ ಬಿಚ್ಚುವ ಮಾರ್ಗವನ್ನು ಅನುಸರಿಸಬೇಕೆಂದೂ ಕೇವಲ ಕಾಮನೆಯಿಂದ ಮಾಯೆ ಹಿಂಗುವುದಿಲ್ಲವೆಂದೂ ಹಾಗೂ ಆದರಿಂದ ಪರಶಿವನ ಕೃಪೆಯನ್ನು ಪಡೆಯುವುದು ಸಾಧ್ಯವಿಲ್ಲವೆಂದೂ ತಿಳಿಸುತ್ತದೆ ಈ ವಚನ.

ಈ ತೆರನಾದ ಮಾಯಾಬಂಧನದಲ್ಲಿ ಸಿಲುಕಿ ಭವಕ್ಕೆ ಒಳಗಾಗುತ್ತಿರುವುದನ್ನು ತಪ್ಪಿಸಲು ಭಾವದಲ್ಲಿ ಹೊಲಿದ ಹೊಲಿಗೆಯನ್ನು ಬಿಚ್ಚಬೇಕೆಂಬುದನ್ನು ಹಾಗೂ ಪರಶಿವನನ್ನು ಮರೆಯದೆ ಪೂಜಿಸಬೇಕೆಂಬುದನ್ನು ಒಪ್ಪಿಕೊಳ್ಳೋಣ. ಆದರೂ ಲೋಕದ ವಿಚಿತ್ರ ವರ್ತನೆಗೆ ಕಾರಣ ತಿಳಿಯುವುದಿಲ್ಲ. ಮಾಯೆಯ ಪರಿಣಾಮವೇ ಹಾಗೆ! ಅದು ಯಾವ ರೂಪದಲ್ಲಿ ಬಂದು ದಾರಿ ತಪ್ಪಿಸುತ್ತದೆಂಬುದನ್ನು ಹೇಳಲಿಕ್ಕಾಗದು. ಅಲ್ಲಮ ಪ್ರಭುವಿನ ಇನ್ನೊಂದು ವಚನವನ್ನು ನೋಡೋಣ.

[illegible]

[illegible]

[illegible]

[illegible]

ಒಳಗೆ ತೊಳೆಯಲರಿಯದೆ ಹೊರಗನೆ ತೊಳೆದು

ಕುಡಿವುತಿರ್ದರಲ್ಲಾ !

ಪಾದೋದಕ ಪ್ರಸಾದವನರಿಯದೆ

ಭವಬಂಧನದಲ್ಲಿ

ಮುಳಗುತ್ತಿಹರು ಗುಹೇಶ್ವರಾ. [೯೪]

ತೋರಿಕೆಯ ಆಚರಣೆಗಳು ಭವಬಂಧನವನ್ನು ಹರಿಯಲಾರವು. ಕಾರಣವೆಂದರೆ ಬಹಿರಂಗದ ಆಚರಣೆಗಳ ಜೊತೆಗೆ ಅಂತರಂಗದ ಆಚರಣೆಗಳೂ ಅವಶ್ಯಕ. ಒಳಗೂ ತೊಳೆಯಬೇಕು, ಹೊರಗೂ ತೊಳೆಯಬೇಕು. ಅಂತರಂಗ ಶುದ್ಧಿಗೆ ಬಹಿರಂಗ ಶುದ್ಧಿ ಸಾಕ್ಷಿಯಾಗಬೇಕು. ಆಗ ಮಾತ್ರ ಭವಬಂಧನ ಹರಿಯುತ್ತದೆ. ಹೀಗೆ ಭವಬಂಧನ ಹರಿದ ಶರಣರ ಕ್ರಿಯೆಗಾಳಾವುವು? ಈಗ ಮತ್ತೊಂದು ವಚನವನ್ನು ತೆಗೆದು ಕೊಳ್ಳೋಣ.

ಕಾಲನ ಕೊಂದಾತನಲ್ಲದೆ ಶುದ್ಧ ಪ್ರಸಾದಿಯಲ್ಲ

ಕಾಮನ ತಿಂದಾತನಲ್ಲದೆ ಸಿದ್ಧಪ್ರಸಾದಿಯಲ್ಲ

ತ್ರಿಪುರವ ಸುಟ್ಟಾತನಲ್ಲದೆ ಪ್ರಸಿದ್ಧ ಪ್ರಸಾದಿಯಲ್ಲ

ಕೆಸರೊಳಗೆ ಕೊಳ್ಳಿಯಂ ಕುತ್ತಿ ಬಸುರ ಬಡಿದುಕೊಂಡಾತನಲ್ಲದೆ

ಪ್ರಸಾದಿಯಲ್ಲ ಕಾಣಾ ಗುಹೇಶ್ವರ. [೯೫]

ಶುದ್ಧ-ಸಿದ್ಧ-ಪ್ರಸಿದ್ಧ ಪ್ರಸಾದಗಳನ್ನು ಸೇವಿಸಿ ನಿಜಪ್ರಸಾದಿಯಾದವನು ಕಾಲನನ್ನು ಕೊಂದಿರುತ್ತಾನೆ, ಕಾಮನನ್ನು ತಿಂದಿರುತ್ತಾನೆ ಹಾಗೂ ಸ್ಥೂಲ-ಸೂಕ್ಷ್ಮ-ಕಾರಣ ಈ ತ್ರಿಪುರಗಳನ್ನು ಸುಟ್ಟಿರುತ್ತಾನೆ. ಅವನು ಮಾತ್ರ ಶರಣ ಎನಿಸಿಕೊಳ್ಳುತ್ತಾನೆ. ಇಂಥ ಶರಣನ ಸ್ಥಿತಿ ಹೇಗಿರುತ್ತದೆ. ಒಂದು ವಚನ ಹೀಗಿದೆ-

ಹುಟ್ಟುವಾತ ನಾನಲ್ಲಯ್ಯಾ, ಹೊಂದುವಾತ ನಾನಲ್ಲಯ್ಯಾ.

ಆದೇನೆಂಬೆನಯ್ಯಾ ಎಂತೆಂಬೆನಯ್ಯಾ?

ನಿಜವನರಿದ ಬಳಿಕ ಮತ್ತೆ ಹುಟ್ಟಲುಂಟೆ ಗುಹೇಶ್ವರಾ ! [೯೬]

ಇದು ಚಿತ್ತದಲ್ಲಿ ಶಿವಮಂತ್ರವೊಂದನ್ನು ಮಾತ್ರ ತುಂಬಿಕೊಂಡು ಪುಣ್ಯ-ಪಾಪಗಳಿಗೆ ಕಿಂಚಿತ್ತೂ ಅವಕಾಶವಿಲ್ಲದಂತೆ ಭಾವಬೆತ್ತಲೆಯಾಗಿ ಬದುಕುವ ಶರಣನ ಸ್ಥಿತಿ. ಚಿತ್ತವೃತ್ತಿನಿರೋಧವು ಇಡಿಯಾಗಿ

[illegible]
[illegible]
[illegible]
[illegible]
[illegible]

[illegible]

[illegible]
[illegible]
[illegible]
[illegible]
[illegible]

[illegible]

[illegible]
[illegible]
[illegible]

[illegible]

ಸಾಧಿಸಲ್ಪಟ್ಟಾಗ ಹುಟ್ಟುಸಾವುಗಳಿಗೊಳಗಾಗದ ಸ್ಥಿತಿ ಉಂಟಾಗುತ್ತದೆ. ಅಂದರೆ ಅದು ಸೃಷ್ಟಿ-ಸ್ಥಿತಿ-ಲಯಗಳಿಗೆ ಒಳಗಾಗುವ ಪ್ರಸಂಗವೇ ಬಾರದ ಪರಿಪೂರ್ಣತೆ.

ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ಭವಬಂಧನಕ್ಕೆ ಒಳಗಾಗಿ ಬದುಕುವವರಿಗೆ ಜನನ-ಮರಣಗಳು ಕಾರಣವಾಗುತ್ತವೆ. ಇಂಥ ಜೀವಿಗಳಿಗೆ ಲೌಕಿಕ ಸಾಧನೆಗಳು ಬಹಳ ಮಹತ್ವದ್ದಾಗಿರುತ್ತವೆ. ಬದುಕಿನುದ್ದಕ್ಕೂ ಅದಕ್ಕಾಗಿಯೇ ಹೊರಾಡುತ್ತ ಕೊನೆಗೊಮ್ಮೆ ಅವರು ಮೃತ್ಯುವಿನ ಬಾಯಿಗೆ ತುತ್ತಾಗುತ್ತಾರೆ. ಭವಕ್ಕೆ ಒಳಗಾಗುವ ಇಂಥ ಲೌಕಿಕ ಬದುಕನ್ನು ದೂರೀಕರಿಸಿ ಶರಣ ಮಾರ್ಗಾವಲಂಬಿಗಳಾಗಿ ಅದರಲ್ಲಿಯೇ ಪರಿಪೂರ್ಣತೆಯನ್ನು ಕಂಡ ಬಸವಾದಿ ಶರಣರ ಮಾರ್ಗದರ್ಶಕನಾಗಿದ್ದ ಅಲ್ಲಮಪ್ರಭುವಿನ ಬದುಕನ್ನು ಆಧಾರವಾಗಿಟ್ಟುಕೊಂಡು ರಚಿಸಿದ ಪ್ರಭುಲಿಂಗಲೀಲೆ ಕಾವ್ಯದಲ್ಲಿ ಈ ಎಲ್ಲ ಅಂಶಗಳನ್ನು ಕಾಣುತ್ತೇವೆ.

ಮಾಯಾದೇವಿ, ಅವಳ ತಂದೆತಾಯಿಗಳು, ಅವಳ ಸಖಿಯರು, ಪುರಜನ ಇವರೆಲ್ಲ ಭವಕ್ಕೆ ಒಳಗಾದವರು. ಅವರಿಗೆ ಪುಣ್ಯ-ಪಾಪದ ವಿಷಯದಲ್ಲಿ ಯಾವ ವಿಚಾರವೂ ಮೂಡಿರುವುದಿಲ್ಲ. ಅದೇ ರೀತಿ ದೊರೆ ಕೌಶಿಕ ಹಾಗೂ ಆತನ ಅನುಚರರಿಗೆ ಪಂಚೇಂದ್ರಿಯಗಳ ತೃಪ್ತಿಯೇ ನಿಜವಾದ ತೃಪ್ತಿ. ಇವರು ಮಾಯಾ ಮೋಹಗಳ ಬಲೆಯಿಂದ ಎಂದಿಗೂ ಹೊರಗೆ ಬರಲಾರದವರು.

ಗೋರಕ್ಷ, ಸಿದ್ಧರಾಮ, ಗೊಗ್ಗಯ್ಯ ಇವರು ಲೋಕವ್ಯವಹಾರದ ಪರಿಸರದಲ್ಲಿ ಬದುಕುತ್ತಿದ್ದವರಾದರೂ ಪ್ರಭುವಿನ ದರ್ಶನ-ಸ್ಪರ್ಶಗಳಿಂದ ಆಧ್ಯಾತ್ಮಿಕ ಜಗತ್ತನ್ನು ಪ್ರವೇಶಿಸಿದರು. ಉಳಿದಂತೆ ಬಸವಾದಿ ಶರಣರು ಇಡಿಯಾಗಿ ಯೋಗಮಾರ್ಗದಲ್ಲಿ ಹೆಜ್ಜೆ ಇಡುತ್ತ ಪರಿಪೂರ್ಣತೆಯತ್ತ ಮುನ್ನಡೆದರು.

ಈ ಎಲ್ಲ ಪಾತ್ರಗಳನ್ನು ಚಾಮರಸನು ತನ್ನ ಕಾವ್ಯೋದ್ದೇಶಕ್ಕೆ ಪೂರವಾಕವಾಗಿ ರಚಿಸಿ ಮುನ್ನಡೆಸಿದ್ದಾನೆ. ಲೌಕಿಕತೆಯಿಂದ ಪಾರಮಾರ್ಥಿಕತೆಯ ವರೆಗಿನ ಮಾರ್ಗವನ್ನು ನಿರೂಪಿಸುವಲ್ಲಿ ಈ ಪಾತ್ರಗಳು ಹೇಗೆ ಪೂರಕವಾಗಿವೆ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ.

ವೀರಶೈವಾಚರಣೆಯು ಇಡಿಯಾಗಿ ಪ್ರಭುಲಿಂಗಲೀಲೆ ಕಾವ್ಯವಾಗಿ ಸಂಕೇತಗಳ ರೂಪದಲ್ಲಿ ಮೂಡಿ ಬಂದಿದೆ. ಈ ಕಾವ್ಯನಿರೂಪಣೆಯಲ್ಲಿ ಮಾಯಾದೇವಿ, ಕೌಶಿಕ, ಗೋರಕ್ಷ, ಸಿದ್ಧರಾಮ, ಗೊಗ್ಗಯ್ಯ, ವಿಮಳೆ, ಮುಕ್ತಾಯಕ್ಕ, ಮರುಳುಶಂಕರದೇವ, ಅಕ್ಕಮಹಾದೇವಿ, ಬಸವಣ್ಣ, ಅಲ್ಲಮಪ್ರಭು ಮೊದಲಾದವರೆಲ್ಲ ವೀರಾಶೈವಾಚರಣೆಯ ವಿವಿಧ ಸಂಕೇತಗಳಾಗಿ ನಿಲ್ಲುತ್ತಾರೆ. ಇಂಥ ಸಂಕೇತಗಳಿಂದ ಚಾಮರಸನ ಕಾವ್ಯವು ಹೇಗೆ ಅರ್ಥಪೂರ್ಣವಾಗಿ ರೂಪುಗೊಂಡಿದೆಯೆಂಬುದನ್ನು ಮುಂದಿನ ಅಧ್ಯಾಯ 'ಕಾವ್ಯದರ್ಶನ'ದಲ್ಲಿ ಪರಿಶೀಲಿಸಲಾಗುವುದು.

ಟಿಪ್ಪಣಿಗಳು

೧. ಡಾ. ಕೆ. ಕೃಷ್ಣಮೂರ್ತಿ, ಮಮ್ಮಟನ ಕಾವ್ಯಪ್ರಕಾಶ; ೧–೩, ಪುಟ ೮

೨. ತೀ. ನಂ. ಶ್ರೀ ಕಂಠಯ್ಯ, ಭಾರತೀಯ ಕಾವ್ಯ ಮೀಮಾಂಸೆ; ಪುಟ ೧೪೮

೩. ಪ್ರ. ಲೀ , ಗತಿ ೨, ಪದ್ಯ ೪೧

೪. ವಯೋ ವಿಂಶತಿಪರ್ಯಂತಮಾರಭ್ಯ ದ್ವಾದಶಾಬ್ದಕಾತ್
ಉತ್ತಮಂ ಸ್ಯಾತ್ತದುಪರಿ ಯಾವತ್‌ತ್ರಿಂಶತ್ತು ಮಧ್ಯಮಮ್ ॥
ಶಿವತತ್ತ್ವರತ್ನಾಕರ , ಕಲ್ಲೋಲ ೬, ತರಂಗ ೩, ಪದ್ಯ ೩೪

೫. ಶಿವತತ್ತ್ವರತ್ನಾಕರ , ಕಲ್ಲೋಲ ೬, ತರಂಗ ೩, ಪದ್ಯಗಳು ೩೬–೪೦

೬. ಪ್ರ, ಲೀ , ಗತಿ ೩, ಪದ್ಯ ೩೩

೭. ಪ್ರ, ಲೀ , ಗತಿ ೩, ಪದ್ಯ ೩೪

೮. ಇನಿತು ನೆಯ್ದಿಲುಗಣ್ಣ ಕೋಕ । ಸ್ತನದ ತೊಳಪ ಮೃಣಾಳನಾಳದ ।
ತನುಲತೆಯ ಮಿಸುಗುವ ತರಂಗದ ನಿಱಿಯ ನಿಱಿಗೆಗಳ ।
ಇನಿತು ಚೆಲುವಿನಲಿಪ್ಪ ಮಾಯಾಂ । ಗನೆಯ ಲಾವಣ್ಯಾಂಬು ಸರಸಿಯ ।
ಲನುಚರಿಸುವಂತಪ್ಪ ಹಂಸನ ಕೇಳ್ದನಾಚಾರ್ಯ ॥
ಪ್ರ, ಲೀ , ಗತಿ ೩, ಪದ್ಯ ೪೦

೯. ಪ್ರ, ಲೀ , ಗತಿ ೩, ಪದ್ಯ ೩೬

೧೦. ಪ್ರ, ಲೀ , ಗತಿ ೩, ಪದ್ಯ ೩೨

೧೧. ನೃತ್ತಂ ಯದುದ್ಧತಂ ತತ್ತು ತಾಂಡವಂ ತಂಡುನೇ ಶಿವ :
ವಿಕೃತೈರಂಗಹಾರಾದ್ಯೈರುಪೇತಮುಪದಿಷ್ಟವಾನ್ ।
ತಂಡುನೋಕ್ತಂ ಮುನಿಭ್ಯೋ ವೈ ಮನುಷ್ಯೇಭ್ಯೋ ಮಹರ್ಷಿಭಿಃ ॥
ಲಾಸ್ಯರೂಪಂ ತು ಯನ್ನತ್ತಂ ತತ್ಪಾರ್ವತ್ಯೈ ಮಹೇಶ್ವರಃ ।
ಪುರೋಪವಿಷ್ಟವಾನ್ ಸಮ್ಯಕ್ ಸುಕುಮಾರಪ್ರಯೋಗತಃ ॥
ಶಿವತತ್ತ್ವ ರತ್ನಾಕರ , ಕಲ್ಲೋಲ ೬, ತರಂಗ ೩, ಪದ್ಯಗಳು ೯–೧೧

೧೨. ಶಿವತತ್ತ್ವ ರತ್ನಾಕರ , ಕಲ್ಲೋಲ ೬, ತರಂಗ ೯, ಪದ್ಯಗಳು ೧–೪

[illegible]

[illegible]

[illegible]

೧೩. ಪ್ರ, ಲೀ , ಗತಿ ೪, ಪದ್ಯಗಳು ೫ ರಿಂದ ೧೮
೧೪. ಪ್ರ, ಲೀ , ಗತಿ ೪, ಪದ್ಯ ೫೨
೧೫. ಶಿವತತ್ತ್ವ ರತ್ನಾಕರ, ಕಲ್ಲೋಲ ೬, ತರಂಗ ೩
೧೬. ಶಿವತತ್ತ್ವ ರತ್ನಾಕರ, ಕಲ್ಲೋಲ ೬, ತರಂಗ ೪
೧೭. ಶಿವತತ್ತ್ವ ರತ್ನಾಕರ, ಕಲ್ಲೋಲ ೬, ತರಂಗ ೫
೧೮. ಪ್ರ, ಲೀ , ಗತಿ ೪, ಪದ್ಯ ೨೯
೧೯. ಪ್ರ, ಲೀ , ಗತಿ ೪, ಪದ್ಯ ೫೧
೨೦. ಪ್ರ, ಲೀ , ಗತಿ ೪, ಪದ್ಯ ೫೪
೨೧. ಪ್ರ, ಲೀ , ಗತಿ ೪, ಪದ್ಯ ೫೫
೨೨. ಪ್ರ, ಲೀ , ಗತಿ ೪, ಪದ್ಯ ೫೬
೨೩. ಪ್ರ, ಲೀ , ಗತಿ ೪, ಪದ್ಯ ೫೮
೨೪. ಪ್ರ, ಲೀ , ಗತಿ ೪, ಪದ್ಯ ೫೯
೨೫. ಪ್ರ, ಲೀ , ಗತಿ ೪, ಪದ್ಯ ೫೭
೨೬. ಪ್ರ, ಲೀ , ಗತಿ ೭, ಪದ್ಯ ೨೬
೨೭. ಸೋಮಃ ಶಾಂತಂ ದದೌ ತಾಸಾಂ ಗಂಧರ್ವಾಶ್ಚ ಶುಭಾಂ ಗಿರಮ್ ॥
ಅಗ್ನಿಃ ಸರ್ವಾಂಗಕಾಂತಿಂ ಚ ಕಸ್ಮಾನ್ನೇಷ್ಟತಮಾಃ ಸ್ತ್ರೀಯಃ
ಸ್ತ್ರೀಣಾಮಪಾಂಗದೃಷ್ಟ್ಯೈವ ಜೀಯತೆ ಜಗತಾಂ ತ್ರಯಂ ॥
ಶಿವತತ್ತ್ವರತ್ನಾಕರ , ಕಲ್ಲೋಲ ೬, ತರಂಗ ೧೨, ಪದ್ಯಗಳು ೩, ೪ ಮತ್ತು ೬
೨೮. ಪ್ರ, ಲೀ , ಗತಿ ೩, ಪದ್ಯಗಳು ೧೩ ಮತ್ತು ೧೪
೨೯. ಪ್ರ, ಲೀ , ಗತಿ ೪, ಪದ್ಯ ೩೨
೩೦. ಪ್ರ, ಲೀ , ಗತಿ ೪, ಪದ್ಯ ೩೫
೩೧. ಪ್ರ, ಲೀ , ಗತಿ ೪, ಪದ್ಯ ೬೦
೩೨. ಪ್ರ, ಲೀ , ಗತಿ ೫, ಪದ್ಯ ೧೧
೩೩. ಪ್ರ, ಲೀ , ಗತಿ ೫, ಪದ್ಯ ೨೧
೩೪. ಪ್ರ, ಲೀ , ಗತಿ ೫, ಪದ್ಯ ೨೩
೩೫. ಪ್ರ, ಲೀ , ಗತಿ ೫, ಪದ್ಯ ೩೭
೩೬. ಪ್ರ, ಲೀ , ಗತಿ ೫, ಪದ್ಯ ೫೯
೩೭. ಪ್ರ, ಲೀ , ಗತಿ ೫, ಪದ್ಯ ೬೮
೩೮. ಪ್ರ, ಲೀ , ಗತಿ ೬, ಪದ್ಯ ೩
೩೯. ಪ್ರ, ಲೀ , ಗತಿ ೭, ಪದ್ಯ ೪೧
೪೦. ಶಿವತತ್ತ್ವರತ್ನಾಕರ , ಕಲ್ಲೋಲ ೬, ತರಂಗ ೧೨
೪೧. ಶಿವತತ್ತ್ವರತ್ನಾಕರ , ಕಲ್ಲೋಲ ೬, ತರಂಗ ೧೨
೪೨. ಪ್ರ, ಲೀ , ಗತಿ ೨, ಪದ್ಯ ೧೧
೪೩. ಪ್ರ, ಲೀ , ಗತಿ ೧೦, ಪದ್ಯ ೩
೪೪. ಪ್ರ, ಲೀ , ಗತಿ ೬, ಪದ್ಯ ೩

೪೫. ಪ್ರ, ಲೀ , ಗತಿ ೧೦, ಪದ್ಯ ೩೩
೪೬. ಪ್ರ, ಲೀ , ಗತಿ ೩, ಪದ್ಯ ೩೩
೪೭. ಪ್ರ, ಲೀ , ಗತಿ ೩, ಪದ್ಯ ೪೦
೪೮. ಪ್ರ, ಲೀ , ಗತಿ ೪, ಪದ್ಯ ೧೦
೪೯. ಪ್ರ, ಲೀ , ಗತಿ ೪, ಪದ್ಯ ೧೯
೫೦. ಪ್ರ, ಲೀ , ಗತಿ ೫, ಪದ್ಯ ೧೦
೫೧. ಪ್ರ, ಲೀ , ಗತಿ ೧೦, ಪದ್ಯ ೩
೫೨. ಪ್ರ, ಲೀ , ಗತಿ ೪, ಪದ್ಯಗಳು ೨೧ ಮತ್ತು ೫೫
೫೩. ಪ್ರ, ಲೀ , ಗತಿ ೪, ಪದ್ಯಗಳು ೪೧, ೪೨ , ಗತಿ ೫, ಪದ್ಯ ೨೮
೫೪. ಪ್ರ, ಲೀ , ಗತಿ ೩, ಪದ್ಯ ೩೪
೫೫. ಪ್ರ, ಲೀ , ಗತಿ ೪, ಪದ್ಯ ೫
೫೬. ಪ್ರ, ಲೀ , ಗತಿ ೪, ಪದ್ಯ ೫೫
೫೭. ಪ್ರ, ಲೀ , ಗತಿ ೪, ಪದ್ಯ ೧೮
೫೮. ಪ್ರ, ಲೀ , ಗತಿ ೪, ಪದ್ಯ ೧೫
೫೯. ಪ್ರ, ಲೀ , ಗತಿ ೪, ಪದ್ಯ ೫೦
೬೦. ಪ್ರ, ಲೀ , ಗತಿ ೪, ಪದ್ಯ ೮
೬೧. ಪ್ರ, ಲೀ , ಗತಿ ೪, ಪದ್ಯ ೨೧
೬೨. ಪ್ರ, ಲೀ , ಗತಿ ೪, ಪದ್ಯ ೫೮
೬೩. ಪ್ರ, ಲೀ , ಗತಿ ೪, ಪದ್ಯ ೩೫
೬೪. ಪ್ರ, ಲೀ , ಗತಿ ೪, ಪದ್ಯ ೧೬
೬೫. ಪ್ರ, ಲೀ , ಗತಿ ೪, ಪದ್ಯ ೫
೬೬. ಪ್ರ, ಲೀ , ಗತಿ ೪, ಪದ್ಯ ೧೨
೬೭. ಪ್ರ, ಲೀ , ಗತಿ ೪, ಪದ್ಯ ೧೧
೬೮. ಪ್ರ, ಲೀ , ಗತಿ ೪, ಪದ್ಯ ೭
೬೯. ಪ್ರ, ಲೀ , ಗತಿ ೪, ಪದ್ಯ ೨೩
೭೦. ಶಿವತತ್ತ್ವ ರತ್ನಾಕರ , ಕಲ್ಲೋಲ ೬, ತರಂಗ ೧೨
೭೧. ಪ್ರ, ಲೀ , ಗತಿ ೭, ಪದ್ಯ ೬೧
೭೨. ಪ್ರ, ಲೀ , ಗತಿ ೭, ಪದ್ಯ ೮೬
೭೩. ಪ್ರ, ಲೀ , ಗತಿ ೧೦, ಪದ್ಯ ೧೫
೭೪. ಪ್ರ, ಲೀ , ಗತಿ ೧೦, ಪದ್ಯ ೧೬
೭೫. ಪ್ರ, ಲೀ , ಗತಿ ೧೦, ಪದ್ಯ ೧೭
೭೬. ಗೂಗೆಗಾದಿತ್ಯನ ಕರಂಗಳು । ಮೂಗರಿಗೆ ಮಾತುಗಳು ಡಂಬಕ ।
ಯೋಗಿಗನುಭವ ಕೋಪಿಗುಪಶಮೆ ನಾಯ್ಗೆ ನಾರಂಗ ॥
ಮೂಗುಹೀನಗೆ ಮುಕುರವುಜೀಸಿಕೆ । ಯಾಗಬಲ್ಲವೆ ಭಕ್ತಿಗೆಳಸದೆ ।
ರೋಗಿಗೌಷಧಿಯರುಚಿಯಾದಂತಾಯಿತವನಿಪಗೆ ॥

ಪ್ರ, ಲೀ , ಗತಿ ೧೦, ಪದ್ಯ ೨೩

೭೭. ಆತನಿಗೆ ನೆಜ್ ನೋಡುತಿವಳಿಗೆ । ಭೂತ ಹೊಡೆಯಿತೊ ಮೇಣು ಪಿತ್ತದ ।
ಧಾತು ಹೆಚ್ಚಿತೊ ಸುಖದಲುಂಡುಟ್ಟಿರಲು ಹೇಳಿದೊಡೆ ॥
ಏತಕಿವಳು ವಿರಕ್ತೆಯೆನೆ ವಿಪ । ರೀತದಲಿ ತಲೆಗೆದಱು ಬತ್ತಲೆ ।
ಕೌತುಕವ ಮಾಡಿದಳು ಶಿವ ಎನುತರಸ ಬೆಱಗಾದ ॥
ಪ್ರ, ಲೀ , ಗತಿ ೧೦, ಪದ್ಯ ೨೫

೭೮. ಪ್ರ, ಲೀ , ಗತಿ ೧೦, ಪದ್ಯ ೨೭

೭೯. ಪ್ರ, ಲೀ , ಗತಿ ೧೩, ಪದ್ಯ ೭೧

೮೦. ಎಲೆ ಮರುಳೆ ಮೃದುವಾದ ಮಾಯೆಯ । ಬಲೆಯ ಬಲ್ಲಿತ ಮಾಡಿ ಸಾವನು ।
ಗೆಲಿದೆನೆಂದು ನಿರರ್ಥಕದಲಿ ಹಾರೈಸದಿರು ಬಱದೆ ॥
ತಿಳಿವೊಡೀ ತನು ತಾನೆ ಕಾಲನ । ನಿಳಯ ನೀನಿದ ನಂಬಿ ನುಡಿದರೆ ।
ಪ್ರಳಯ ನಿನ್ನನು ಬಿಡುವುದೇ ಗೋರಕ್ಷ ಕೇಳೆಂದ ॥
ಪ್ರ, ಲೀ , ಗತಿ ೧೯, ಪದ್ಯ ೨೪

೮೧. ಪ್ರ, ಲೀ , ಗತಿ ೧೯, ಪದ್ಯ ೩೭

೮೨. ಪ್ರ, ಲೀ , ಗತಿ ೧೯, ಪದ್ಯ ೪೪

೮೩. ಪ್ರ, ಲೀ ; ಗತಿ ೧೯, ಪದ್ಯ ೪೭

೮೪. ಅಂಗವಿಸಿ ತಾನೀ ಪ್ರಕಾರದ । ಲಿಂಗನಿಷ್ಠೆಯನಖಿಳರಿಗೆ ಮು ।
ಕ್ಯಂಗನೆಯ ಮದುವೆಯನು ಮಾಡುವೆನೆಂದು ಕರುಣದಲಿ ॥
ಹಿಂಗದೀಪರಿ ನಟಿಸಿದರೆಯೆನ । ಗಂಗಲಿಂಗಕೆ ಭೇದ ಭಾವದ ।
ಸಂಗವುಂಟೆಂದೆಂಬರೇ ಗೋರಕ್ಷ ಕೇಳೆಂದ ॥
ಪ್ರ, ಲೀ , ಗತಿ ೧೯, ಪದ್ಯ ೪೮

೮೫. ಪ್ರ, ಲೀ , ಗತಿ ೧೧, ಪದ್ಯ ೬

೮೬. ಪ್ರ, ಲೀ , ಗತಿ ೧೧, ಪದ್ಯ ೧೦

೮೭. ಪ್ರ, ಲೀ , ಗತಿ ೧೧, ಪದ್ಯ ೧೧

೮೮. ಪ್ರ, ಲೀ , ಗತಿ ೧೫, ಪದ್ಯ ೧೬

೮೯. ಪ್ರ, ಲೀ , ಗತಿ ೨೩, ಪದ್ಯ ೪೭

೯೦. ಪ್ರ, ಲೀ , ಗತಿ ೨೩, ಪದ್ಯ ೫೦

೯೧. ಚನ್ನಬಸವಣ್ಣನವರ ವಚನಗಳು , ವ. ಸಂ. ೨೯, ಪುಟ ೧೫

೯೨. ಚನ್ನಬಸವಣ್ಣನವರ ಷಟ್‌ಸ್ಥಳದ ವಚನಗಳು , ವ. ಸಂ. ೧೬೭, ಪುಟ ೪೩

೯೩. ಸ. ವ. ಸಂ , ಸಂಪುಟ ೨ ವ. ಸಂ. ೧೪೯, ಪುಟ ೧೨೭

೯೪. ಸ. ವ. ಸಂ , ಸಂಪುಟ ೨ ವ. ಸಂ. ೧೬೧, ಪುಟ ೫೧

೯೫. ಅಲ್ಲಮನ ಟೀಕಿನ ವಚನಗಳು , ವ. ಸಂ. ೭೬೫, ಪುಟ ೩೫೩

೯೬. ಸ. ವ. ಸಂ , ವ. ಸಂ. ೬೨೨, ಪುಟ ೧೬೮

❋ ❋ ❋ ❋

ಅಧ್ಯಾಯ – ಐದು

ಕಾವ್ಯದರ್ಶನ

ಅಧ್ಯಾಯ – ೫

ಕಾವ್ಯದರ್ಶನ

ಭಾಗ ೧ : ಕಾವ್ಯ ವಿಚಾರ

೧. ಕಾವ್ಯ ಮತ್ತು ಅದರ ಸ್ವರೂಪ

ಕಾವ್ಯ ಎಂದರೇನು? ಈ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರಿಸುವುದು ಸಾಧ್ಯವಿಲ್ಲ. ಕಾವ್ಯಸ್ವರೂಪವನ್ನು ತಿಳಿಸಲು ಹೊರಟ ಭಾರತೀಯ ಆಲಂಕಾರಿಕ ಆನಂದವರ್ಧನನು ಅದರ ಲಕ್ಷಣವನ್ನು ಸಾಮಾನ್ಯ ರೂಪದಲ್ಲಿ ಹೇಳದೆಯೇ ವಿಷಯನಿರೂಪಣೆಗೆ ತೊಡಗುತ್ತಾನೆಂದು ಇನ್ನೊಬ್ಬ ಆಲಂಕಾರಿಕ ಮಹಿಮಭಟ್ಟ ಆಕ್ಷೇಪಿಸುತ್ತಾನೆ.[೧] ಇದು ಆನಂದವರ್ಧನನ ಸಮಸ್ಯೆ ಮಾತ್ರವಾಗಿರದೆ ಎಲ್ಲರ ಸಮಸ್ಯೆಯೂ ಆಗಿದೆ. ಆದ್ದರಿಂದ ಭಾರತೀಯ ಆಲಂಕಾರಿಕರಾಗಲಿ, ಪಾಶ್ಚಾತ್ಯ ಕಾವ್ಯಮೀಮಾಂಸಕರಾಗಲಿ ಈ ಪ್ರಶ್ನೆಯನ್ನು ಹಾಗೆಯೇ ಜೀವಂತವಾಗಿಟ್ಟು ಕಾವ್ಯದ ಲಕ್ಷಣ, ಸ್ವರೂಪ, ಪರಿಣಾಮ ಮುಂತಾದವುಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಾರತೀಯ ಆಲಂಕಾರಿಕರಲ್ಲಿ ಭಾಮಹನಿಂದ ಮೊದಲುಗೊಂಡು ಜಗನ್ನಾಥನ ವರೆಗಿನ ಮೀಮಾಂಸಕರು, ಪಾಶ್ಚಾತ್ಯ ಮೀಮಾಂಸಕರಲ್ಲಿ ಪ್ಲೇಟೋನಿಂದ ಮೊದಲುಗೊಂಡು ಟಿ. ಎಸ್. ಎಲಿಯೆಟ್ ವರಗೆ ಇಂಥ ಅಂಶಗಳನ್ನು ವಿಪುಲವಾಗಿ ಚರ್ಚಿಸಿದ್ದಾರೆ. ಕಾರಣವೆಂದರೆ ಕಾವ್ಯಸಾಗರವು ಅಪಾರವಾಗಿದೆ ಹಾಗೂ ವೈವಿಧ್ಯತೆಯಿಂದ ತುಂಬಿ ತುಳುಕುತ್ತಿದೆ. ಮಾನವನ ಸಾಂಸ್ಕೃತಿಕ ಬದುಕಿನೊಂದಿಗೆ ಹೆಣೆದುಕೊಂಡು ಬಂದಿರುವ ಈ ಕಾವ್ಯವು ಸಂಸ್ಕೃತಿಯ ಬೆಳಕು ಬೀಳುತ್ತಿರುವ ವರೆಗೂ ಮುಂದುವರೆಯುತ್ತಿರುತ್ತದೆ.

'ಕಾವ್ಯ' ಪದವನ್ನು ವ್ಯಾಖ್ಯಾನಿಸುವುದು ಸುಲಭವಲ್ಲವಾದರೂ ಅನೇಕರು ಅದಕ್ಕಾಗಿ ಸಾಹಸ ಮಾಡಿದುದನ್ನು ನೋಡುತ್ತೇವೆ. ಇಂಥವರ ಎಲ್ಲ ಹೇಳಿಕೆಗಳನ್ನು ಸಂಗ್ರಹಿಸುವುದು ಇಲ್ಲಿಯ

[illegible]

[illegible]

[illegible]

[illegible]

[illegible]

[illegible]

ಉದ್ದೇಶವಲ್ಲವಾದರೂ ಕೆಲವೊಂದು ಹೇಳಿಕೆಗಳನ್ನು ಪರಿಶೀಲಿಸಲಾಗುತ್ತಿದೆ. 'ಶಬ್ದಾರ್ಥೌ ಸಹಿತೌ ಕಾವ್ಯಂ' ಅಂದರೆ 'ಶಬ್ದ ಮತ್ತು ಅರ್ಥ ಇವು ಕೂಡಿರುವುದು ಕಾವ್ಯ'[೨] ಭಾಮಹನ ದೃಷ್ಟಿಯಲ್ಲಿ. ಇದನ್ನು ಕುಂತಕನು ಸುಧಾರಿಸಲು ಪ್ರಯತ್ನಿಸುತ್ತಾನೆ. 'ವಕ್ರಕವಿವ್ಯಾಪಾರದಿಂದ ಕೂಡಿದ್ದೂ ಬಲ್ಲವರಿಗೆ ಆಹ್ಲಾದವನ್ನುಂಟು ಮಾಡತಕ್ಕದ್ದೂ ಆಗಿರುವ, ಬಂಧದಲ್ಲಿ ವ್ಯವಸ್ಥೆಗೊಂಡ ಶಬ್ದಾರ್ಥಗಳು ಒಟ್ಟಿಗೆ ಕಾವ್ಯ'[೩] ಅವನ ದೃಷ್ಟಿಯಲ್ಲಿ. 'ಸಹೃದಯರ ಹೃದಯವನ್ನು ಆಹ್ಲಾದಗೊಳಿಸುವ ಶಬ್ದಾರ್ಥಗಳಿಂದ ಪ್ರಚುರವಾಗಿರುವುದೇ ಕಾವ್ಯ ಲಕ್ಷಣ'[೪] ಇದು ಮಹಿಮಭಟ್ಟನು ಅಕ್ಷೇಪಿಸಿದ ಆನಂದವರ್ಧನನ ಹೇಳಿಕೆ. 'ರಸಾತ್ಮಕವಾದ ವಾಕ್ಯವು ಕಾವ್ಯ'[೫] ಎಂದು ಹೇಳಿದವನು ವಿಶ್ವನಾಥ. ಹೀಗೆ ಕಾವ್ಯಕ್ಕೆ ವ್ಯಾಖ್ಯೆಯನ್ನು ಹೇಳುವ ನಿಟ್ಟಿನಲ್ಲಿ ಅನೇಕರು ತಮ್ಮದೆ ಆದ ರೀತಿಯಲ್ಲಿ ಪ್ರಯತ್ನಿಸಿದ್ದಾರೆ. ಪಾಶ್ಚಾತ್ಯರ ಹೇಳಿಕೆಗಳಲ್ಲಿ ನಾವು ಮೊದಲು ಲಕ್ಷಿಸುವುದು ಪ್ಲೇಟೋನನ್ನು. ಅವನ ಅಭಿಪ್ರಾಯದಂತೆ 'ಇತಿಹಾಸಕ್ಕಿಂತ ಕಾವ್ಯವು ಜೀವನಾಧಾರದ ಸತ್ಯಕ್ಕೆ ಹೆಚ್ಚು ಸಮೀಪವಾಗಿರುತ್ತದೆ.' [೬] ಇನ್ನು ವಿಲಿಯಂ ವರ್ಡ್ಸ್‌ವರ್ಥನ ಬಹುಚರ್ಚಿತ ಹೇಳಿಕೆ ಹೀಗಿದೆ, 'ತೀವ್ರವಾದ ಭಾವನೆಗಳು ತಮ್ಮಿಂದ ತಾವೇ ಎಂಬಂತೆ ಉಕ್ಕಿ ಹೊರಹೊಮ್ಮುವುದೇ ಕಾವ್ಯ. ಶಾಂತ ಮನಸ್ಸಿನಲ್ಲಿ (ಮೊದಲು ಅನುಭವಿಸಿದ ಒಂದು) ಭಾವನೆಯನ್ನು ಮತ್ತೆ ನೆನಪಿಗೆ ತಂದುಕೊಂಡಾಗ ಅದರ ಉಗಮವಾಗುತ್ತದೆ.'[೭] 'ಭಾಷೆಯ ಸಂಗೀತದ ಮುಖಾಂತರ ತಲುಪಿಸುವ ವಿಚಾರದ ಸಂಗೀತವೇ ಕಾವ್ಯ.'[೮] ಚಾಟ್‌ಫೀಲ್ಡನ ದೃಷ್ಟಿಯಲ್ಲಿ. ಆಯ್. ಎ. ರಿಚಾರ್ಡ್ಸ್ ಅಭಿಪ್ರಾಯ ಪಡುವುದು ಹೀಗೆ, 'ಕಾವ್ಯವೆಂದರೆ ಅವ್ಯವಸ್ಥಾಸ್ಥಿತಿಯನ್ನು ದಾಟುವುದಕ್ಕೆ ಸಾಧ್ಯವಿರುವ ಒಂದು ಪರಿಪೂರ್ಣ ಸಾಧನ'[೯] ಕಾವ್ಯವೆಂದರೆ 'ಸೌಂದರ್ಯದಲ್ಲಿರುವ ಸತ್ಯ'[೧೦] ಎಂದು ಗಿಲ್‌ಫಿಲನ್ ಹೇಳಿದರೆ 'ಕಾವ್ಯವು ಛಂದೊಬದ್ಧವಾದ ಸೌಂದರ್ಯಾಭಿವ್ಯಕ್ತಿ'[೧೧] ಎಂದು ಎಡ್ಗರ್ ಅಲೆನ್ ಪೋ ತಿಳಿಸುತ್ತಾನೆ. 'ಮಾನವ ಬದುಕನ್ನು ಹಾಗೂ ಜೀವಕುಲವನ್ನು ಕುರಿತು ರಸಾತ್ಮಕವಾಗಿ ಶಬ್ದ ಮುಖದಲ್ಲಿ ಹಿಡಿದಿರಿಸುವುದೇ ಕಾವ್ಯ. ಅದು ನಮ್ಮ, ನಿಮ್ಮ, ಅದರ, ಇದರ ಶಬ್ದಚಿತ್ರವಾಗಿದ್ದು ಸಮಸ್ತ ಲೋಕವ್ಯವಹಾರವನ್ನು ಹೃದಯಂಗಮವಾಗಿ ಬಣ್ಣಿಸುವ ಕೌಶಲವಾಗಿದೆ. ಹೀಗೆ ಕವಿ ಅನುಭವಿಸಿದ ಲೋಕಾನುಭವ ಸ್ವಾನುಭವವಾಗಿ ಅಂತರಂಗದ ಅಲೌಕಿಕ ದರ್ಶನದ ರೂಪದಲ್ಲಿ ಹೊರಹೊಮ್ಮಿ ಬಂದು ಕಾವ್ಯವಾಗುತ್ತದೆ.'[೧೨] ಇದು ಬ. ಗಿ. ಯಲ್ಲಟ್ಟಿಯವರ ಅಭಿಪ್ರಾಯ. ಕಾವ್ಯವನ್ನು 'ಗಾಳಿಯ ಬಣ್ಣವನ್ನು ಚಿತ್ರಿಸಬಯಸುವ ಪಿಶಾಚಿಯ ಪ್ರಯತ್ನ'ವೆಂದೂ 'ಭೂತದ ಮದ್ಯ' ಎಂದೂ ಕರೆದವರಿದ್ದಾರೆ.[೧೩]

[illegible]

ತಮ್ಮ ತಮ್ಮ ಲಹರಿಗೆ ಮಿಂಚಿ ಮಾಯವಾದುದನ್ನು ಸೆರೆಹಿಡಿಯಲು ಪ್ರಯತ್ನಿಸಿದವರ ತಡಕಾಟಗಳನ್ನು ನಾವಿಲ್ಲಿ ಕಾಣುತ್ತೇವೆ. ಧ್ವನಿಯನ್ನು ನೋಡಲು ಸಾಧ್ಯವಾಗದಿದ್ದರೂ ಕಿವಿಯ ಮುಖಾಂತರ ಆಸ್ವಾದಿಸಬಹುದು. ವಿದ್ಯುತ್ತನ್ನು ನೋಡಲಾಗದಿದ್ದರೂ ಅದರ ಪರಿಣಾಮವನ್ನು ವಿಧವಿಧವಾಗಿ ಅನುಭವಿಸಬಹುದು. ಕಾಂತತತ್ವದ ವಿಷಯದಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತವಾಗುತ್ತದೆ. ಅಷ್ಟೇ ಏಕೆ ಬೆಳಕನ್ನೇ ನೋಡಿದವರಿಲ್ಲ! ಆದರೆ ಅದರ ಪರಿಣಾಮ ಎಲ್ಲಡೆಯಲ್ಲಿ ಗೋಚರಿಸುತ್ತದೆ. ಕಾವ್ಯವೆನ್ನುವುದೂ ಹೀಗೆಯೇ. ಏಕೆಂದರೆ ಅದು ತನ್ನರಿವನ್ನು ನೇರವಾಗಿ ತೋರದೆ ಸಹೃದಯರ ಹೃದಯಾಕಾಶದಲ್ಲಿ ಹಾರಾಡುತ್ತ, ವಸಂತಋತುವಿನ ಕೋಗಿಲೆಯೆಂತೆ ನಾದಮಾಧುರ್ಯದ ಜೋಗುಳಗಳದಲ್ಲಿ ಅವರನ್ನು ಸದಾಕಾಲವೂ ರಮಿಸುತ್ತ ಲೋಕಸಂಚಾರಿಯಾಗಿರುತ್ತದೆ. ಇದನ್ನು ತೀ. ನಂ. ಶ್ರೀಕಂಠಯ್ಯನವರು ಹೀಗೆ ತಿಳಿಸುತ್ತಾರೆ. "ಇದು ಅನಿವಾರ್ಯವಾದ ಕಷ್ಟ. ಅತೀಂದ್ರಿಯ ವಸ್ತುವಾದ ಕಾವ್ಯದ ಲಕ್ಷಣವನ್ನು ಹೇಳುವುದೆಂದರೆ 'ಬ್ರಹ್ಮ'ದ ಲಕ್ಷಣವನ್ನು ಹೇಳುವಂತೆಯೇ. ಎರಡೂ ಅನುಭವೈಕಗಮ್ಯವಾದವು."[೧೪] ಆದುದರಿಂದ ನಾವೀಗ ಕಾವ್ಯದ ವ್ಯಾಖ್ಯೆಯಿಂದ ದೂರ ನಿಂತು ಅದರ ಸ್ವರೂಪ ಮತ್ತು ಪರಿಣಾಮಗಳನ್ನು ಲಕ್ಷಿಸೋಣ.

'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂದು ಪ್ರಾರಂಭವಾಗುವ ಭಾಮಹನ 'ಸಹಿತೌ' ಶಬ್ದಕ್ಕೆ ಹಿತದಿಂದ ಕೂಡಿದ್ದು ಎಂಬ ವಿವರಣೆ ಭಾಮಹಾದಿಗಳಿಗೆ ಸಮ್ಮತವಲ್ಲವೆಂದು ಡಾ. ಕೆ. ಕೃಷ್ಣಮೂರ್ತಿ ಅಭಿಪ್ರಾಯ ಪಡುತ್ತಾರೆ. ಆದರೆ ಅರ್ಥ ಶಬ್ದದ ವಿವರಣೆ ಆಹ್ಲಾದಕಾರಿಯಾಗಿರುವಂಥದು ಎಂದು ತಿಳಿಸುತ್ತ ನಾಗವರ್ಮನ 'ಕಾವ್ಯಾವಲೋಕನ' ದಿಂದ ಸೂತ್ರವೊಂದನ್ನು ಉದಾಹರಿಸುತ್ತಾರೆ.[೧೫] ಆನಂದವರ್ಧನನ ಹೇಳಿಕೆಯಲ್ಲಿ ನಾವಿದನ್ನು ಲಕ್ಷಿಸಿದ್ದೇವೆ. ಕಾವ್ಯದ ಫಲ ಆನಂದವೆಂಬುದು ಮಮ್ಮಟನ ಅಭಿಪ್ರಾಯ.[೧೬] ಇದು ಪ್ರಕಟವಾಗುವುದು ರಸಾಸ್ವಾದನೆಯ ಮೂಲಕ. 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದು ವಿಶ್ವನಾಥ ಹೇಳುವುದು ಈ ಅಭಿಪ್ರಾಯಾದ ಹಿನ್ನೆಲೆಯಲ್ಲಿಯೇ. ಹೀಗೆ ಸಹೃದಯರಿಗೆ ಆನಂದವನ್ನುಂಟು ಮಾಡುವುದು ಕಾವ್ಯದ ಉದ್ದೇಶ. ಈ ಎಲ್ಲವನ್ನೂ 'ಅರ್ಥ' ಶಬ್ದವು ಒಳಗೊಳ್ಳುವುದರಿಂದ ಅದು ಕಾವ್ಯಾರ್ಥ ಅಥವಾ ಕಾವ್ಯದ ಸಂಪತ್ತು. ಇಲ್ಲದಿದ್ದರೆ ಕಾವ್ಯವು ಬಡತನದಿಂದ ನರಳಬೇಕಾಗುತ್ತದೆ.

[illegible]

[illegible]

ಕಾವ್ಯವನ್ನು ಬರೆಯುವವನು ಕವಿ. ಕವ್- ಅಂದರೆ ವರ್ಣಿಸು - ಎಂಬ ಧಾತುವಿನಿಂದ ಕವಿ ಶಬ್ದವನ್ನು ಸಾಧಿಸುತ್ತಾರೆ. ಇಂಗ್ಲಿಷ ನಿಘಂಟುವಿನಲ್ಲಿ poetry ಶಬ್ದಕ್ಕೆ ಅರ್ಥವಿವರಣೆ ಹೀಗಿದೆ - poet's art, poet's work, poetic quality ಮತ್ತು tender pleasing quality.[೧೭] ಕವಿಯು ದರ್ಶನವುಳ್ಳವನೆಂದೂ, ಅವನು ವಿವಿಧ ವಸ್ತುಗಳ ಧರ್ಮಾಂಶದ ತತ್ತ್ವವನ್ನು ಕಾಣುವುದೇ ದರ್ಶನವೆಂದೂ ಹೇಳಲಾಗಿದೆ. ಅಂದರೆ ಕವಿಯಾದವನು ವಸ್ತುನಿಷ್ಠತೆಯ ಭಾವದಿಂದ ಮುನ್ನಡೆದಾಗ ಯಾವದೇ ರಾಗದ್ವೇಷದ ಭಾವನೆಗೆ ಅವಕಾಶ ಕೊಡುವುದು ಸಾಧ್ಯವಿಲ್ಲ. ಆಗಲೇ ಅವನು ಪ್ರತಿಯೊಂದು ವಸ್ತುವಿನಲ್ಲಿ ಧರ್ಮಾಂಶದ ತತ್ತ್ವವನ್ನು ಕಾಣುವುದು ಸಾಧ್ಯವಾಗುತ್ತದೆ. ಅದನ್ನೇ 'ಋಷಿಯಲ್ಲದ ಕವಿಯಿಲ್ಲ' ಎನ್ನುವುದು. ಈ ಧರ್ಮಾಂಶಕ್ಕೆ ಚ್ಯುತಿಯುಂಟಾದರೆ ಅದು ಕಾವ್ಯದ ಚ್ಯುತಿ.[೧೮] ಭಾರತೀಯ ಅಲಂಕಾರಿಕನಾದ ಭಟ್ಟನಾಯಕನ ಪ್ರಕಾರ ನನ್ನದು, ನನ್ನದಲ್ಲದ್ದು ಅಥವಾ ತಟಸ್ಥನದು ಎಂಬ ಮೂರು ಬಗೆಯ ಸಂಬಂಧಗಳ ಪರಿಧಿಯ ಆಚೆ ನಿಲ್ಲುವ ಕೌಶಲವನ್ನು ಸಾಧಿಸಿಕೊಂಡಾಗ ಲೋಕಾನುಭವಗಳನ್ನು ಕಲಾ ಅನುಭವಗಳನ್ನಾಗಿ ಪರಿವರ್ತಿಸಲು ಸಾಧ್ಯ. ಇದು ನಿಜವಾದ ಸೌಂದರ್ಯಾಸ್ವಾದನೆಯ ನಿಲುವು. ಹೀಗೆ ಇದು ವೈಯಕ್ತಿಕ ಅಪೇಕ್ಷೆಗಳ ಗೆರೆಯನ್ನು ದಾಟಿ ವಸ್ತುಗಳನ್ನು ಗಾಢವಾಗಿ ಒಲಿಯುವುದು. ಇದನ್ನೇ ತತ್ತ್ವಜ್ಞಾನಿ ಕ್ಯಾಂಟ ನಿಸ್ಸಂಗ ಪರಿಭಾವಕತ್ವ (Disinterested contemplation) ಎನ್ನುತ್ತಾನೆ. ಈ ನಿಲುವನ್ನೇ ಎಡ್ವರ್ಡ ಬುಲ್ಲೋ 'ಮಾನಸಿಕ ದೂರ (psychical distance) ಎನ್ನುತ್ತಾನೆ.'[೧೯]

ಶಬ್ದಾರ್ಥರೂಪದ ಅಭಿವ್ಯಕ್ತಿಯಲ್ಲಿ ಮೈ ಪಡೆದುಕೊಳ್ಳುವ ಕವಿಯ ಅನುಭವವಿಶೇಷವೇ ಕಾವ್ಯ.[೨೦] ಎಡ್ಗರ್ ಅಲೆನ್ ಪೋ ಹೇಳುವಂತೆ ಛಂದೋಬದ್ಧವಾದ ಅಭಿವ್ಯಕ್ತಿಯು ಕಾವ್ಯದ ಒಂದು ಗುಣ ಮಾತ್ರವಾಗಿದ್ದು ಅದು ಅನಿವಾರ್ಯವೇನೂ ಅಲ್ಲ. ಆದರೆ ಕಾವ್ಯದ ಭಾಷೆಯು ಛಂದೋಬದ್ಧತೆಯೊಂದಿಗೆ ಸಂಗೀತದ ಸ್ಪರ್ಶ ಪಡೆದು ಸಹೃದಯನ ಹೃದಯವನ್ನು ಆವರಿಸುತ್ತದೆ. ಅಂದರೆ ಕಾವ್ಯದೊಳಗಿನ ಶಬ್ದ, ಅದರ ನಾದ, ಲಯ ಇತ್ಯಾದಿಗಳಿಂದ ಒಂದು ಬಗೆಯ ರಮ್ಯತೆ ಉಂಟಾಗುತ್ತದೆ.[೨೧] ಇಂಥ ಈ ಶಬ್ದವು ಮನಸ್ಸಿನಲ್ಲಿರುವ ಕಾವ್ಯಾರ್ಥದೊಡನೆ ಕೂಡಿ ಬರುವ ಪದಸಮೂಹ.[೨೨] ಅದು ಚಮತ್ಕಾರದಿಂದ ಕೂಡಿದ್ದಾಗಿ, ರಮಣೀಯಾರ್ಥವೂ ಆಗಿದ್ದು ಆಸ್ವಾದಿಸಲು ತಕ್ಕುದಾದ ರಸಾತ್ಮಕ ವಾಕ್ಯವಾಗಿರುತ್ತದೆ.

[illegible]

[illegible]

ಕಾವ್ಯದ ಶರೀರ ಹಾಗೂ ಆತ್ಮ ಇವುಗಳ ವಿಷಯವಾಗಿ ಭಾರತೀಯ ಆಲಂಕಾರಿಕರಲ್ಲಿ ಶತಮಾನಗಳಿಂದ ವಾದವಿವಾದ ಮೂಡಿ ಬಂದಿದೆ. 'ಮನಸ್ಸಿನಲ್ಲಿರುವ ಅರ್ಥದೊಡನೆ ಕೂಡಿ ಬರುವ ಪದಸಮೂಹವೇ ಕಾವ್ಯದ ಹೊರಮೈ.'[೨೩] ಎಂಬುದು ದಂಡಿಯ ಅಭಿಪ್ರಾಯ. ಆದರೆ ಕಾವ್ಯದ ಆತ್ಮದ ಬಗ್ಗೆ ಮಾತ್ರ ಭಿನ್ನಾಭಿಪ್ರಾಯ ತಾರಕಕ್ಕೇರಿದೆ. 'ರೀತಿರಾತ್ಮಾ ಕಾವ್ಯಸ್ಯ'[೨೪] ಎಂದು ವಾಮನ ಹೇಳಿದರೆ 'ಕಾವ್ಯಸ್ಯಾತ್ಮಾ ಧ್ವನಿಃ'[೨೫] ಎಂದು ಆನಂದವರ್ಧನ ಹೇಳುತ್ತಾನೆ. ವಿಶ್ವನಾಥನು 'ರಸವೊಂದೇ ಕಾವ್ಯದ ಆತ್ಮ'[೨೬] ಎಂದು ತಿಳಿಸುತ್ತಾನೆ. ಹೀಗೆ ರೀತಿ, ಧ್ವನಿ, ರಸ ಈ ಮೂರು ಪ್ರಸ್ಥಾನದವರ ನಡುವೆ ತೂಗುಯ್ಯಾಲೆಯಲ್ಲಿದ್ದ ವಿವರಣೆಯು ಜಗನ್ನಾಥ ಪಂಡಿತನ ಕೈಯಲ್ಲಿ ವ್ಯಾಪಕತೆಯನ್ನು ಪಡೆದು 'ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದವು ಕಾವ್ಯ'[೨೭] ಎಂದು ಮೂಡಿ ಬಂದಿತು. ಇದು 'ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾಪದಾವಲೀ' ಎಂಬ ದಂಡಿಯ ವಾಕ್ಯವನ್ನು ಹೋಲುತ್ತದೆಂದು ತೀ. ನಂ. ಶ್ರೀಕಂಠಯ್ಯನವರು ತಿಳಿಸುತ್ತ ಈ ಲಕ್ಷಣವು ನವೀನವೂ ವಿಚಾರಾರ್ಹವೂ ಆಗಿದೆಯೆಂದು ಅಭಿಪ್ರಾಯ ಪಡುತ್ತಾರೆ.[೨೮]

ಶರೀರ ಮತ್ತು ಆತ್ಮ ಇವುಗಳ ಸಂಬಂಧ ದ್ವಿಚಕ್ರವಾಹನವೊಂದರ ಟಯರ್ (tyre) ಮತ್ತು ಟ್ಯೂಬು (tube)ಗಳ ಸಂಬಂಧದಂತಲ್ಲ. ಸ್ಥೂಲಶರೀರದಲ್ಲಿ ಸೂಕ್ಷ್ಮಶರೀರವಿದ್ದು ಅದರಲ್ಲಿ ಕಾರಣಶರೀರದ ರೂಪದಲ್ಲಿ ಆತ್ಮವು ಇದೆಯೆಂಬುದನ್ನು ಯೋಗದರ್ಶನದಲ್ಲಿ ನೋಡಿದ್ದೇವೆ. ಇವುಗಳ ನಡುವಿನ ಅವಿನಾಭಾವ ಸಂಬಂಧವು ಅಸದೃಶವಾಗಿರುತ್ತದೆ. ಸ್ಥೂಲಶರೀರದ ಅಧೀನದಲ್ಲಿ ಬರುವ ಹಾಗೂ ಅದಕ್ಕೆ ಬದುಕಿನ ಅರ್ಥ ಕೊಡುವ ವಿವಿಧ ಮಂಡಲಗಳು ಅಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಅವುಗಳಲ್ಲೊಂದು ಉಸಿರಾಟಕ್ಕೆ ಸಂಬಂಧಿಸಿದುದಾಗಿದ್ದು ಅದಕ್ಕೆ ಪ್ರಾಣವು ಆಧಾರವಾಗಿರುವುದರ ಜೊತೆಗೆ ಆ ಪ್ರಾಣಕ್ಕೆ ಆತ್ಮವು ಆಧಾರವಾಗಿರುತ್ತದೆ. ಹೀಗೆ ಒಂದಕ್ಕೊಂದು ನಿಕಟ ಸಂಬಂಧ ಹಾಗೂ ಪ್ರಭಾವವನ್ನು ಹೊಂದಿರುವ ಇವುಗಳಲ್ಲಿ ಯಾವುದಾದರೊಂದು ಮಂಡಲವು ನಿಷ್ಕ್ರಿಯವಾದರೂ ಮರಣ ಸಂಭವಿಸುವುದು ನಿಶ್ಚಿತವಾಗಿರುತ್ತದೆ. ಕಾವ್ಯದ ವಿಷಯದಲ್ಲಿಯೂ ಇದು ಅನ್ವಯವಾಗುತ್ತದೆ. 'ಶ್ರೇಷ್ಠಮಟ್ಟದ ಕವಿಯೊಬ್ಬ ಭಾಷೆಯ ಸಾಧ್ಯತೆಗಳನ್ನು ಅನ್ವೇಷಣೆ ಮಾಡಿ ಅದನ್ನು ಸೂರೆ ಮಾಡುತ್ತಾನೆ. ಒಂದು ದೃಷ್ಟಿಯಲ್ಲಿ ಅನುಭವಕ್ಕೆ ಕೇವಲ ಆಕಾರ ಕೊಡುವುದಷ್ಟೇ ಅಲ್ಲ; ಹಾಗೆ ಪಡೆಯುವ ಆಕಾರ, ಆತ್ಮಕ್ಕೆ ಶರೀರ ಹೇಗೋ ಹಾಗೆ, ಅನುಭವದ ಜೀವಂತಿಕೆಯ ಒಂದು ಭಾಗವಾಗುತ್ತದೆ. ಇದು

[illegible]

[illegible]

ಅನುಭವದ ಶರೀರೀಕರಣ ಕ್ರಿಯೆ ಎನ್ನಬಹುದು'.[೫೯] ಹೀಗೆ ಜೀವ, ಒಡಲು, ಅವಯವಗಳು, ನುಡಿ, ತೊಡಿಗೆ, ನಡೆ, ಸುಕುಮಾರತೆ– ಇವೆಲ್ಲವುಗಳ ಸಮ್ಯಕ್ ಸಂಬಂಧದಿಂದಾಗಿ ಕಾವ್ಯ ಮೂಡಿ ಬಂದರೆ ಅಲ್ಲಿ ಕಾವ್ಯಾರ್ಥವನ್ನು ಕಾಣುವುದು ಸಾಧ್ಯ. ಈ ಅರ್ಥದಲ್ಲಿಯೇ 'ಹರಿಶ್ಚಂದ್ರಕಾವ್ಯ' ಮೂಡಿ ಬಂದಿದೆಯೆಂದು ಹೇಳುವ ರಾಘವಾಂಕ ಅದು ಪಂಪಾಂಬಿಕೆಯ ವಿರೂಪಾಕ್ಷನಿಗೆ ಸಲ್ಲುತ್ತದೆಂದು ಆ ಕಾವ್ಯದ ಕಥಾರಂಭದಲ್ಲಿ ತಿಳಿಸುತ್ತಾನೆ.[೬೦] ಈ ವಿರೂಪಾಕ್ಷ ಸಚ್ಚಿದಾನಂದ ಸ್ವರೂಪಿಯಲ್ಲವೆ? ಲೋಕೋತ್ತರಾನಂದವನ್ನುಂಟು ಮಾಡುವುದು ಕವಿಯ ಆಶಯವಾಗಿರುತ್ತದೆ. ಸತ್ಯ, ಶಿವತ್ವ ಹಾಗೂ ಸೌಂದರ್ಯ ಇವುಗಳ ಅರ್ಪಣೆಯಿಂದ ಅವನು ಅದನ್ನು ಸಾಧಿಸುತ್ತಾನೆ. ಇಂಥ ಸಾಧನೆ ಕವಿಯ ಕೃತಕೃತ್ಯತೆ ಎನಿಸುತ್ತದೆ. ಈ ವಿವರಣೆಯ ಹಿನ್ನೆಲೆಯಲ್ಲಿ ಜಗನ್ನಾಥ ಪಂಡಿತನ ಹೇಳಿಕೆಯನ್ನು ಅರ್ಥೈಸಬೇಕಾಗುತ್ತದೆ.

ಧರ್ಮ, ಅರ್ಥ, ಕಾಮ, ಮೋಕ್ಷಗಳ ಪ್ರಾಪ್ತಿಯೂ ಕಾವ್ಯದ ಪ್ರಯೋಜನಗಳಲ್ಲೊಂದು.[೬೧] ಬಸವಾದಿ ಶರಣರೂ ಈ ಚತುರ್ವರ್ಗವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದು ಈ ಅಂಶಗಳನ್ನು ಬಹಿರಂಗದ ಸಾಧನೆಗೆ ಅನ್ವಯಿಸುವುದು ಅವರಿಗೆ ಸಮ್ಮತವಿಲ್ಲ. ಅವರ ಅಭಿಮತದಂತೆ ಮೋಕ್ಷಾಪೇಕ್ಷಿಯಾಗಿ ಅಂತರ್ಯದಲ್ಲಿ ಊರ್ಧ್ವಗಮನದಲ್ಲಿ ಮುನ್ನಡೆಯುತ್ತ ಪರಿಪೂರ್ಣಾವಸ್ಥೆಯನ್ನು ತಲುಪಿ ಚಿದ್ಘನದಲ್ಲಿ ಒಂದಾಗುವುದು ಪುರುಷಾರ್ಥಗಳ ಗುರಿ. ಅದು ಪರಮಪುರುಷಾರ್ಥರೂಪದ ಸಾಧನೆ, ಉರಿಲಿಂಗಪೆದ್ದಿಯ ಒಂದು ವಚನ ಹೀಗಿದೆ.

ಶ್ರೀ ಗುರು ಲಿಂಗ ಜಂಗಮ ಪ್ರಸಾದ
ಒಂದೇ ಪರಶಿವಮೂರ್ತಿ ಮಹಾವಸ್ತುಗಳು ಕೇಳಿರಣ್ಣಾ
ಅಱಿದು ಧ್ಯಾನಿಸಿ ಪೂಜಿಸಿ ಸೇವಿಸಿ ಅರ್ಚಿಸಿ ಅರ್ಪಿಸಿ ಧರಿಸಿ
ಧರ್ಮ ಅರ್ಥ ಕಾಮ ಮೋಕ್ಷ
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ
ಈ ಚತುರ್ವಿಧ ಪದವಿಯನೂ ಕೊಡುವರೆ,
ಗುರು ಲಿಂಗ ಜಂಗಮ ಪ್ರಸಾದವ ನಂಬುವುದು

ಇದು ಸತ್ಯ, ಶಿವನಾಣೆ,

ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. [೬೨]

ಈ ವಚನದಲ್ಲಿ ಚತುರ್ವಿಧ ಪುರುಷಾರ್ಥಗಳಿಗೆ ಚತುರ್ವಿಧ ಪದವಿಗಳನ್ನು ಸಮೀಕರಿಸಲಾಗಿದೆ. ಸಾಯುಜ್ಯಮುಕ್ತಿ ವೀರಶೈವತ್ವದ ಅಂತಿಮ ಹಂತವಾಗಿದ್ದು ಅದು ಲಿಂಗಾಂಗಸಾಮರಸ್ಯವನ್ನು ಹೊಂದಿದ ಸ್ಥಿತಿ. ಈ ಸ್ಥಿತಿಯು ಶಿವಯೋಗದಿಂದ ಮಾತ್ರ ಸಾಧ್ಯವೆಂಬುದನ್ನು 'ಯೋಗದರ್ಶನ'ದಲ್ಲಿ ನೋಡಿದ್ದೇವೆ. ಅಂದರೆ ಕಾವ್ಯವು ಈ ಸ್ಥಿತಿಯನ್ನು ದೂರಕಿಸಿ ಕೊಡುವುದು ಸಾಧ್ಯವಿಲ್ಲದಿದ್ದರೂ ಅದು ಸಹೃದಯರನ್ನು ಆ ದಿಕ್ಕಿನಲ್ಲಿ ಕೊಂಡೊಯ್ಯುವುದು ನಿಶ್ಚಿತವಾಗಿಯೂ ಸಾದ್ಯ. ಇದುವೇ ಕಾವ್ಯದ ಪ್ರಯೋಜನ. ಕಾವ್ಯರಸಾಸ್ವಾದನೆ ಯೋಗಿಗಳ ದಿವ್ಯಾನಂದಕ್ಕಿಂತ ಮಿಗಿಲಾದದ್ದೆಂದು ತಿಳಿಸುವ ಭಟ್ಟನಾಯಕ ಹಾಗೂ ಕುಂತಕರ ಅಭಿಪ್ರಾಯವನ್ನು ಅಭಿನವಗುಪ್ತ ಒಪ್ಪದಿರುವುದು ಈ ವಿಚಾರದ ಹಿನ್ನೆಲೆಯಲ್ಲಿಯೇ ಇದ್ದಿರಬಹುದು.[೬೩]

ಅಲ್ಲಾಹ ಎಂದರೆ ಪರಶಿವ.[೬೪] ಪವಿತ್ರ ಕುರ್‌ಆನ್‌ದಲ್ಲಿ ನಿರ್ಗುಣ ಪರಶಿವನ ವಿವರಣೆ ಹೀಗಿದೆ. ಕುಲ್ ಹುವ್ವಲ್ಲಾಹು ಅಹದ್ (ನಿರ್ಗುಣ ಪರಶಿವ ಒಬ್ಬನೇ), ಅಲ್ಲಾಹುಸ್ಸಮದ್ (ಅವನು ನಿರಪೇಕ್ಷ), ಲಮ್ಮೇ ಯಲಿದ್ ವಲಮ್ಮೇ ಯುಲದ್ (ಅವನು ಆದಿಅಂತ್ಯಗಳಿಲ್ಲದವನು), ವಲಮ್ಮೇ ಕುಲ್‌ಹು ಕುಫ್‌ವನ್ ಅಹದ್. (ಅವನ ಸರಿಸಮಾನ ಯಾರೂ ಇಲ್ಲ, ಅವನು ಏಕೈಕ)[೬೫] ಆದೇ ರೀತಿ ಹೂವಲ್ ಅವ್ವಲ್ ಹೂವಲ್ ಆಖೀರ್ (ಅವನೇ ಆದಿ ಅವನೇ ಅಂತ್ಯ)[೬೬] ಎಂದು ತಿಳಿಸಲಾಗಿದೆ. ಇಂಥ ಅಲ್ಲಾಹನಲ್ಲಿ ಐಕ್ಯ ಹೊಂದಲು ಇಸ್ಲಾಂದಲ್ಲಿ ಕಲ್ಮಾ, ರೋಜಾ, ಸ್ವಲಾತ, ಜಕಾತ್ ಮತ್ತು ಹಜ್ ಎಂಬ ಐದು ಸೂತ್ರಗಳನ್ನು ಸೂಚಿಸಲಾಗಿದೆ.[೬೭]

ಕುರ್‌ಆನ್‌ದಲ್ಲಿಯೇ ಇನ್ನೊಂದೆಡೆ ಹೀಗೆ ತಿಳಿಸಲಾಗಿದೆ.'ಇನ್ನಾ ತ್ವಯನಾ ಕಲ್ ಕೌಸರ, ಫಸ್ವಲ್ಲಿಲಿ ರಬ್ಬಿಕ್ ವನಹರ್ ಇನ್ನಾ ಶಾನಿಕ್ ಹುವಲ್ ಅಬ್ತುರ್'[೬೮] ಅಂದರೆ 'ನಿನಗೆ ಆತ್ಮಜ್ಞಾನ ದಯಪಾಲಿಸಿದೆ, ಅಹಂಭಾವ ತ್ಯಜಿಸಿ ಸದ್ಗುರುವಿನ ಸ್ವಲಾತ್ (ದರ್ಶನ) ಮಾಡು, ಇದರಿಂದ ದ್ವೈತಭಾವ ಅಳಿಯುತ್ತದೆ' ಎಂದು. ಈ ರೀತಿಯಾಗಿ ಸದ್ಗುರುವಿನ ಮಾರ್ಗದರ್ಶನದಲ್ಲಿ ಪ್ರತಿ ಉಸಿರಿಗೂ ಅವನನ್ನು ಧ್ಯಾನಿಸುತ್ತ ನಿರಂತರವಾಗಿ ಅವನ ಸ್ವರೂಪಜ್ಞಾನವನ್ನರಿಯುವುದು 'ಸ್ವಲಾತೆ ದಾಯಮಿ' ಆಗಿದೆ.[೬೯]

[illegible]

[illegible]

[illegible]

[illegible]

[illegible]

ಹೀಗೆ ಹಜರತ್ ಮೊಹಮ್ಮದ್ (ಸ್ವ)ರ ಮಹತ್ತರ ಕೊಡುಗೆಯಾದ ಕಲ್ಮಾ 'ಲಾ ಇಲಾಹಾ ಇಲ್ಲಲ್ಲಾ ಮೊಹಮ್ಮದುರ್ ರಸೂಲ್ ಅಲ್ಲಾಹೆ'[೪೦] (ಅವ್ಯಕ್ತಂ ಏಕಂ ಮೊಹಮ್ಮದ್ ಅವತಾರಂ) ದ ಜ್ಞಾನಪ್ರಕಾಶವನ್ನು ಪಡೆದ ಅಸ್‌ಹಾಬೆ ಸುಫ್ಫಾ (ಪೈಗಂಬರರ ಆತ್ಮೀಯರು) ಜಗತ್ತಿನಾದ್ಯಂತ ಕಲ್ಮಾದ ದಿವ್ಯಜ್ಞಾನವನ್ನು ಹರಡಿ 'ಸೃಷ್ಟಿಯೇ ಸೃಷ್ಟಿಕರ್ತನ ಪ್ರತಿರೂಪ' ಎಂದು ಸಾರಿದರು.[೪೧]

ಇದು ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳ ಸಾಧನೆಗೆ ಸಮಾನಾಂತರವೆನಿಸುತ್ತದೆ.

ಕಾವ್ಯವು ಕವಿಕಾರ್ಯವೆಂಬುದನ್ನು ನೋಡಿದ್ದೇವೆ. ಈ ಕಾರ್ಯಕ್ಕೆ ಪ್ರತಿಭೆ ಅವಶ್ಯ. ಪ್ರತಿಭೆ ಎನ್ನುವುದು ಒಂದು ಪ್ರಜ್ಞಾ ವಿಶೇಷ.[೪೨] 'ಯಾವುದು ಶಬ್ದಸಮೂಹವನ್ನೂ, ಅರ್ಥಪುಂಜವನ್ನೂ, ಅಲಂಕಾರ ತಂತ್ರವನ್ನೂ, ಇದೇ ಬಗೆಯ ಇತರ ಉಕ್ತಿಮಾರ್ಗವನ್ನೂ ಹೃದಯದಲ್ಲಿ ಹೊಳೆಯಿಸುತ್ತದೋ ಅದೇ ಪ್ರತಿಭೆ' ಎಂಬುದು ರಾಜಶೇಖರನ ಅಭಿಪ್ರಾಯ.[೪೩] ಭಟ್ಟತೌತನು ಇದನ್ನು 'ಪ್ರಜ್ಞಾನವನವೋನ್ಮೇಷಶಾಲಿನೀ ಪ್ರತಿಭಾ ಮತಾ' ಎಂದು ವ್ಯಾಖ್ಯಾನಿಸಿದ್ದಾನೆ.[೪೪] 'ಹೃದಯ ಎಂದರೆ ಮನಸ್ಸು ಅಥವಾ ಭಾವ ಎಂದು ಅರ್ಥೈಸಿ ರಾಜಶೇಖರನ ವ್ಯಾಖ್ಯಾನವನ್ನು ಒಪ್ಪಿಕೊಳ್ಳಬಹುದು. ಆದರೆ ಪ್ರಜ್ಞೆ ಎಂದರೇನೆಂಬುದು ಸ್ಪಷ್ಟವಾಗದ ಹೊರತು ಭಟ್ಟತೌತನ ವ್ಯಾಖ್ಯೆ ಸ್ಪಷ್ಟವಾಗುವುದಿಲ್ಲ.

ಭಾರತೀಯ ಕಾವ್ಯ ಮೀಮಾಂಸೆಯ ಹಿಂದೆ ಭಾರತೀಯ ತತ್ತ್ವಜ್ಞಾನದ ವಿಚಾರಧಾರೆಯೊಂದು ನಿರಂತರವಾಗಿ ಹರಿದು ಬಂದಿದೆ.[೪೫] ಪ್ರಜ್ಞೆಯನ್ನು ಶರಣರ ವಚನಗಳಲ್ಲಿ 'ಅರಿವು' ಎಂದು ಗುರುತಿಸಲಾಗಿದೆ. 'ಅರಿವೇ ಗುರು' ಎಂಬ ಉಕ್ತಿಯಲ್ಲಿ 'ಅರಿವಿಗಿಂತ ಮಹತ್ತಾದುದು ಬೇರೊಂದಿಲ್ಲ' ಎಂಬರ್ಥ ಸೂಸುತ್ತದೆ. ಈ ಅಂಶವನ್ನು ಶರಣರು ಕಂಡುಕೊಂಡುದು ತಮ್ಮ ಅನುಭಾವದಿಂದ. ಮನೋಲಯ ಮಾರ್ಗಾಚರಣೆಯೇ ಅನುಭಾವವೆಂಬುದನ್ನು ಹಾಗೂ ಅದು ಪ್ರಾಣಾಯಾಮದಿಂದ ಸಾಧ್ಯವೆಂಬುದನ್ನು ನೋಡಿದ್ದೇವೆ. ಪ್ರಾಣವನ್ನು ನಿಗ್ರಹಿಸಿದಾಗ ಅದು ಸಾಧಕನನ್ನು ಅನಂತ ಶಕ್ತಿಯ ಆಗರಕ್ಕೆ ಒಯ್ಯುತ್ತದೆ. ಆಗ ಪ್ರಪಂಚದ ಯಾವುದೇ ಶಕ್ತಿ ಅವನ ಕರಗತವಾಗುತ್ತದೆ.[೪೬] ಇಂಥ ವ್ಯಕ್ತಿಯಿಂದ ಕಾವ್ಯ ಹೊರಹೊಮ್ಮುವುದಾದರೆ ಆ ಕಾವ್ಯದಿಂದ ತ್ರಿಕಾಲಾಬಾಧಿತ ಸತ್ಯ ಪ್ರವಹಿಸುವುದು ಸಾಧ್ಯವಿದೆ. ಕಾರಣವೆಂದರೆ ಅವನೊಬ್ಬ ದೃಷ್ಟಾರ ಹಾಗೂ ಅಲ್ಲಿ ಪ್ರತಿಪಾದಿಸಲ್ಪಟ್ಟ ದರ್ಶನವು ವಿಶ್ವದರ್ಶನ. 'ಋಷಿಯಿಲ್ಲದ ಕವಿಯಿಲ್ಲ' ಎಂಬ ಉಕ್ತಿ ಈ ವಿಚಾರದ ಹಿಂದಿನ ಸತ್ಯವನ್ನು ಧ್ವನಿಸುವುದೇ ಆಗಿದೆ.

[illegible]

[illegible]

[illegible]

[illegible]

ಭಾರತೀಯ ಕಾವ್ಯ ಮೀಮಾಂಸೆಯು ಪ್ರಜ್ಞೆ ಎಂದರೆ ಒಂದು ವಿಶೇಷ ರೀತಿಯ ಚಕ್ಷುಸ್ (ಕಣ್ಣು) ಎಂದು ತಿಳಿಸುತ್ತ ಅದು ಹಿಂದು-ಮುಂದು-ಇಂದುಗಳನ್ನು ಏಕಕಾಲಕ್ಕೆ ತೆರೆದು ತೋರಿಸುವ 'ದಿವ್ಯ ಚಕ್ಷುಸ್' ಎಂಬ ಅರ್ಥವನ್ನು ಪ್ರತಿಪಾದಿಸುತ್ತದೆ.[೪೭] ಅಂತೆಯೇ ಕವಿ ಎಂದರೆ ಆತ್ಮಜ್ಞಾನಿ ಅಥವಾ ಯೋಗಿ ಎಂದು ಹೇಳಲಾಗಿದೆ.[೪೮]

ಕಾವ್ಯ ಮತ್ತು ಅದರ ಸ್ವರೂಪಗಳನ್ನು ಅಭ್ಯಸಿಸಿರುವ ನಾವು ಕಾವ್ಯ ಮತ್ತು ಶಾಸ್ತ್ರಗಳಿಗಿರುವ ಸಂಬಂಧವನ್ನು ಈಗ ನೋಡೋಣ. ವಾಙ್ಮಯವನ್ನು ಸಂಸ್ಕೃತದ ಆಲಂಕಾರಿಕರು ವೇದ, ಶಾಸ್ತ್ರ ಮತ್ತು ಕಾವ್ಯ ಎಂದು ಮೂರು ವರ್ಗವಾಗಿ ವಿಂಗಡಿಸುತ್ತಾರೆ.[೪೯] ಭಟ್ಟನಾಯಕನ ಮತದಂತೆ ಶಾಸ್ತ್ರವೆಂದರೆ ವೇದ.[೫೦] ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ವೇದ ಮತ್ತು ಶಾಸ್ತ್ರಗಳಿಗೆ ಒಂದು ಸಂಬಂಧವಿದೆ ಎಂಬುದು ತಿಳಿದು ಬರುತ್ತದೆ. ಪ್ರಭುಲಿಂಗಲೀಲೆಯ ಮೊದಲ ಪದ್ಯದಲ್ಲಿ ವೇದ, ಪುರಾಣ ಮತ್ತು ಶಾಸ್ತ್ರ ಇವುಗಳಿಂದ ಪ್ರಭು ಕೀರ್ತಿಸಲ್ಪಟ್ಟವನು ಎಂದು ಚಾಮರಸನು ತಿಳಿಸುತ್ತಾನೆ.[೫೧] ವೇದ ಮತ್ತು ಶಾಸ್ತ್ರ ಬೇರೆ ಬೇರೆ ಎಂಬ ಸಂಸ್ಕೃತ ಆಲಂಕಾರಿಕರ ಅಭಿಪ್ರಾಯವನ್ನು ಇದು ಪುರಸ್ಕರಿಸುತ್ತದೆ. ಬ್ರಹ್ಮವಿದ್ಯೆಯೇ ವಿದ್ಯೆಯೆಂದೂ ಅದುವೇ ಅಧ್ಯಾತ್ಮ ಅಥವಾ ಆತ್ಮವಿದ್ಯೆಯೆಂದೂ ತಿಳಿಸುತ್ತ ಶಾಸ್ತ್ರವಿದ್ಯೆಯು ಅವಿದ್ಯೆಯೆಂದು ಚಿದಾನಂದಾವಧೂತನು ತಿಳಿಸುತ್ತಾನೆ.[೫೨] ಇದರಿಂದ ತಿಳಿದು ಬರುವುದೇನೆಂದರೆ ಯೋಗಿಗಳು ಅಂತರಂಗಾಚರಣೆಯಲ್ಲಿ ಅರಿತುಕೊಳ್ಳುವ ವಿಶ್ವರಹಸ್ಯವು ಜ್ಞಾನ ಅಥವಾ ವೇದ, ಅದನ್ನು ಶಬ್ದಗಳ ರೂಪದಲ್ಲಿ ಹಿಡಿದಿಡುವುದು ಶಾಸ್ತ್ರ ಹಾಗೂ ಇಂಥ ಶಾಸ್ತ್ರವನ್ನು ಕಥಾನಕವಾಗಿ ಕಾವ್ಯದಲ್ಲಿ ನಿರೂಪಿಸುವುದು ಪುರಾಣ ಎಂಬುದು ಮೇಲಿನ ಉದ್ಧರಣಗಳಿಗೆ ಅರ್ಥವಿವರಣೆ ಎನಿಸುತ್ತದೆ. ಇದರ ಹಿನ್ನೆಲೆಯಲ್ಲಿ ಶಾಸ್ತ್ರಕಾವ್ಯ ಮತ್ತು ಕಾವ್ಯಶಾಸ್ತ್ರ ಇವುಗಳನ್ನು ಲಕ್ಷಿಸೋಣ.

ವೀರಶೈವಾಚರಣೆಯು ಷಟ್‌ಸ್ಥಲಗಳನ್ನು ಒಳಗೊಂಡಿದ್ದು ಅದರ ಸಾಧನೆಯ ಪೂರ್ವಭಾವಿಯಾಗಿ ಭಕ್ತನ ಮನಸ್ಸನ್ನು ಗಟ್ಟಿಗೊಳಿಸಬೇಕಾಗುತ್ತದೆ. ಆಗ ಮಾತ್ರ ಮುಂದಿನ ಮೆಟ್ಟಲುಗಳನ್ನು ಏರಲು ಅವನಿಗೆ ಸಾಧ್ಯವಾಗುತ್ತದೆ. ಇದಕ್ಕಾಗಿಯೇ ಶರಣರ ವಚನಗಳಲ್ಲಿ ಭಕ್ತಸ್ಥಲದಲ್ಲಿ ಇಂಥ ಉಪದೇಶವು ಸುದೀರ್ಘವಾಗಿ ಮೂಡಿ ಬಂದಿರುವುದನ್ನು ಕಾಣುತ್ತೇವೆ. ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಹಾಗೂ ಮೃತ್ಯುವಿನಿಂದ ಅಮೃತತ್ವದೆಡೆಗೆ ಸಾಗಬೇಕೆನ್ನುವ ಉಪನಿಷತ್ತುಗಳ ಅಭಿಮತವೂ ಇದೇ ಆಗಿದೆ. ಲೋಕವ್ಯವಹಾರದಲ್ಲಿ ಸಿಲುಕಿಕೊಂಡು ಹೊರಬರಲಾಗದ ಜೀವರುಗಳಿಗೆ

ಇಂಥ ಈ ಉಪದೇಶವು ನೇರವಾಗಿದ್ದರೆ ರುಚಿಸುವ ಸಾಧ್ಯತೆ ಕಡಿಮೆ. ಅದಕ್ಕಾಗಿಯೇ ಲೋಕವ್ಯವಹಾರದ ರೂಪದಲ್ಲಿಯೇ ಉಪದೇಶವು ಮೂಡಿ ಬರುವುದಾದರೆ ಅದು ಬಹಳಷ್ಟು ಜನರಿಗೆ ಹಿಡಿಸುತ್ತದೆ, ಸಕ್ಕರೆಲೇಪಿತ ಕಹಿ ಮಾತ್ರೆಯಂತೆ ಉತ್ತಮ ಫಲಿತಾಂಶ ನೀಡುತ್ತದೆ. ಈ ಕಾರಣಕ್ಕಾಗಿಯೇ ತತ್ತ್ವವನ್ನು ನೇರವಾಗಿ ನಿರೂಪಿಸಲು ಪ್ರಯತ್ನಿಸದೆ ವಿವಿಧ ಗುಣಲಕ್ಷಣಗಳಿಗೆ ಹಾಗೂ ತತ್ತ್ವಾಂಶಗಳಿಗೆ ಸಾಂಕೇತಿಕ ರೂಪ ಧರಿಸಿ ಅಮಿತಾನಂದವನ್ನು ಒದಗಿಸುವಂಥವುಗಳೇ ಪುರಾಣಗಳು, ಪುರಾಣಕಾವ್ಯಗಳು. ರಾಮಾಯಣ, ಮಹಾಭಾರತ, ಆದಿ ಪುರಾಣ, ಹರಿಶ್ಚಂದ್ರ ಕಾವ್ಯ, ಶ್ರೀ ದೇವೀ ಮಹಾತ್ಮೆ ಮುಂತಾದವುಗಳು ಪುರಾಣಕಾವ್ಯಗಳು.

ಕೆಲವರು ನಿಮಿತ್ತ ಮಾತ್ರ ಲೌಕಿಕದಲ್ಲಿದ್ದುಕೊಂಡು ತಾತ್ವಿಕ ಮಾರ್ಗದರ್ಶನಕ್ಕಾಗಿ ತವಕಿಸುತ್ತಿರುತ್ತಾರೆ. ಅಂಥವರಿಗೆ ತತ್ತ್ವವನ್ನು ನೇರವಾಗಿ ಪ್ರತಿಪಾದಿಸುವ ಮಾತುಗಳು ರುಚಿಸುತ್ತವೆ. ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಬಯಸುವ ಅರಸನಂತೆ ನಿಷ್ಠುರವಾಗಿ ವರ್ತಿಸುವ ಈ ಗುಂಪಿನ ಕೃತಿಗಳನ್ನು ಭಾರತೀಯ ಆಲಂಕಾರಿಕರು 'ಪ್ರಭುಸಂಮಿತ' ಎಂದು ಕರೆದಿದ್ದಾರೆ.[೫೩] ಈ ದಾರಿಯಲ್ಲಿ ಸಾಗಿ ಬಂದಂಥವುಗಳೆಂದರೆ ವೇದಗಳು, ಆಗಮಗಳು, ಉಪನಿಷತ್ತುಗಳು, ಶ್ರುತಿಗಳು, ಸ್ಮೃತಿಗಳು, ಶ್ರೀಮದ್ಭಗವದ್ಗೀತಾ, ಅನುಭವಾಮೃತ, ಜ್ಞಾನಸಿಂಧು, ಕೈವಲ್ಯಪದ್ಧತಿಗಳು, ವಿವೇಕಚಿಂತಾಮಣಿ ಮುಂತಾದವುಗಳು. ಎರಡೂ ಗುಂಪುಗಳ ದಾರಿಗಳು ಬೇರೆ ಬೇರೆಯಾದರೂ ಗುರಿ ಮಾತ್ರ ಒಂದೇ. ಪ್ರಸ್ತುತ ಪ್ರಭುಲಿಂಗಲೀಲೆಯು ಮೊದಲನೆಯ ಗುಂಪಿನಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ.

ಶಾಸ್ತ್ರವನ್ನು ನೇರವಾಗಿ ಪ್ರಸ್ತುತ ಪಡಿಸುವ ಕೃತಿಗಳಲ್ಲಿಯೂ ಕಾವ್ಯಗುಣಗಳು ತೋರುವುದು ಸಹಜ. ಕಾರಣವೆಂದರೆ ಅವುಗಳ ರಚನಾಕಾರರೂ ಕವಿಗಳೇ ಆಗಿರುತ್ತಾರೆ. ಇವುಗಳನ್ನು ಶಾಸ್ತ್ರಕಾವ್ಯಗಳು ಎಂದು ಹೆಸರಿಸುವುದಾದರೆ ತಾತ್ವಿಕ ಅಂಶಗಳಿಗೆ ಕಥಾನಕದ ರೂಪು ಕೊಟ್ಟು ಸುಂದರ ಕಾವ್ಯಗಳನ್ನಾಗಿಸಿದಂಥವುಗಳನ್ನು ಕಾವ್ಯಶಾಸ್ತ್ರಗಳು ಎಂದು ಕರೆಯಬೇಕಾಗುತ್ತದೆ. ಇವುಗಳಿಂದ ವಾಚಕನ ಮನಸ್ಸು ಸಂಸ್ಕಾರ ಹೊಂದಿ ಧರ್ಮಾಧರ್ಮಗಳ ಪರಿಜ್ಞಾನ ತನ್ನಷ್ಟಕ್ಕೆ ತಾನೇ ಒದಗಿ ಸನ್ಮಾರ್ಗದಲ್ಲಿ ನಡೆಯಬೇಕೆಂಬ ಪ್ರವೃತ್ತಿ ಉಂಟಾಗುತ್ತದೆ.[೫೪] ಹೀಗೆ ಈ ಕಾವ್ಯಗಳ ಹಿಂದಿನ ಉದ್ದೇಶ ಸಹೃದಯರಿಗೆ ಆನಂದವನ್ನುಂಟು ಮಾಡುವುದರ ಜೊತೆಗೆ ತತ್ತ್ವದರ್ಶನವನ್ನು ಮಾಡುವುದೂ ಆಗಿರುತ್ತದೆ. ಕಾಂತೆಯಂತೆ ಮುದಗೊಳಿಸುವ ಈ ಗುಂಪಿನ ಕೃತಿಗಳನ್ನು ಭಾರತೀಯ ಆಲಂಕಾರಿಕರು 'ಕಾಂತಾಸಂಮಿತ'[೫೫] ಎಂದು

[illegible]

[illegible]

[illegible]

ಕರೆದಿದ್ದಾರೆ. ಯಾವುದೇ ಕಾವ್ಯರಚನೆಯ ಹಿಂದೆ ತತ್ತ್ವದರ್ಶನದ ಉದ್ದೇಶ ಇದ್ದೇ ಇರುತ್ತದಾದರೂ ಐತಿಹಾಸಿಕ ವಸ್ತುವನ್ನೊಳಗೊಂಡ ಕಾವ್ಯಗಳಲ್ಲಿ ಅದರ ಪ್ರಮಾಣ ಕಡಿಮೆ.

ಮನುಷ್ಯಮಾತ್ರರಲ್ಲಿ ಮೂಲ ಪ್ರವೃತ್ತಿಗಳು (primary instincts) ವ್ಯಕ್ತವಾಗುವುದರಲ್ಲಿ ಹೆಚ್ಚು ವ್ಯತ್ಯಾಸವೇನೂ ಆಗುವುದಿಲ್ಲ. ಆದ್ದರಿಂದ ಈ ಪ್ರವೃತ್ತಿಗಳು ಬಾಹ್ಯದಲ್ಲಿರುವ ವಿಷಯಗಳೊಂದಿಗೆ ತಾಕಲಾಟಕ್ಕಿಳಿಯುವುದನ್ನು ವಸ್ತುವಾಗಿಸಿಕೊಂಡು ರಚಿಸಲ್ಪಟ್ಟ ಭಾರತೀಯ ಅಥವಾ ಪಾಶ್ಚಾತ್ಯ ಕೃತಿಗಳ ನಿರೂಪಣೆಯಲ್ಲಿ ಮೂಲಭೂತವಾದ ವ್ಯತಾಸವೇನೂ ತೋರುವುದಿಲ್ಲ. ಆದರೆ ಭಾರತೀಯ ಸಂಸ್ಕೃತಿ ಹಾಗೂ ಪಾಶ್ಚಾತ್ಯ ಸಂಸ್ಕೃತಿ ಇವುಗಳ ಹಿನ್ನೆಲೆಯಲ್ಲಿ ಕಾವ್ಯವನ್ನು ವಿಶ್ಲೇಷಿಸುವಾಗ ಒಂದು ಅಂಶವನ್ನು ಅವಶ್ಯ ಗಮನಿಸಬೇಕಾಗುತ್ತದೆ. ಭಾರತೀಯ ಸಿದ್ಧಾಂತದಂತೆ ಪುಣ್ಯ-ಪಾಪಗಳು ಮೋಕ್ಷಕ್ಕೆಳಸುವ ಜೀವಿಯಲ್ಲಿ ಪ್ರಧಾನ ಪಾತ್ರವಹಿಸುವಂತಿದ್ದರೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಮೂಲದಿಂದ ಮೂಡಿಬಂದ ಪಾಪದಿಂದ ಮಾತ್ರ ಬಿಡುಗಡೆ ಹೊಂದುವುದು ಮೋಕ್ಷದ ಪ್ರಧಾನಾಂಶ. ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣ ರೂಪಿಯ ಪರಮಾತ್ಮನಲ್ಲಿ ಸಾಧಕನು ಆನಂದಘನನಾಗಿ ಸಮರಸವಾಗುವುದು ಸಾಧ್ಯವೆನ್ನುವ ಅಂಶವು ಭಾರತೀಯ ಕಾವ್ಯಗಳು ಸುಖಾಂತವಾಗುವಂತೆ ಮಾಡಿದೆ. ಈ ಪ್ರಮುಖ ವ್ಯತ್ಯಾಸದ ಹಿನ್ನೆಲೆಯಲ್ಲಿ ಪಾಶ್ಚಾತ್ಯರ ರುದ್ರನಾಟಕ (tragedy)ಗಳನ್ನು ಮತ್ತು ಭಾರತೀಯ ಕಾವ್ಯಗಳನ್ನು ವಿಶ್ಲೇಷಿಸಬೇಕಾಗುತ್ತದೆ.

'ಪ್ರಭುಲಿಂಗಲೀಲೆ'ಯು ಭಾರತೀಯ ತತ್ತ್ವ ಸಿದ್ಧಾಂತದ ಹಿನ್ನೆಲೆಯಲ್ಲಿ ರೂಪಗೊಂಡಿರುವ ಒಂದು ಕಾವ್ಯ. ಅಂತೆಯೇ ಸಚ್ಚಿದಾನಂದ ದರ್ಶನದ ಕಡೆಗೆ ಕರೆದೊಯ್ಯುವ ಸಾಧನವಾಗಿರುವ ಲಿಂಗಾಂಗಸಾಮರಸ್ಯದ ಚೌಕಟ್ಟಿನಲ್ಲಿ ಅದನ್ನು ವಿಶ್ಲೇಷಿಸುವುದು ಸರಿಯಾದ ಉಪಕ್ರಮವೆನಿಸುತ್ತದೆ.

೨. ವಸ್ತು ಮತ್ತು ರಚನೆ

೨.೧ ಕವಿ-ಕಾವ್ಯ-ಕಾಲ-ಜೀವನ ವಿಚಾರ

ವೀರಶೈವದ ಗಂಗೋತ್ರಿಯನ್ನು ಬೆರಳು ಮಾಡಿ ತೋರಿಸುವ ಪ್ರಯತ್ನ ದಶಕಗಳಿಂದ ನಡೆದಿದ್ದು ಅದಿನ್ನೂ ಪ್ರಗತಿಯಲ್ಲಿದೆ. ಆದರೆ ಈ ಗಂಗೆಯು ತನ್ನ ಪಾತ್ರವನ್ನು ನಿರ್ಮಿಸಿಕೊಂಡು ಪ್ರಥಮವಾಗಿ ಮೈದುಂಬಿಕೊಂಡು ಹರಿದುದನ್ನು ಮಾತ್ರ ನಿರ್ದಿಷ್ಟವಾಗಿ ಗುರುತಿಸಿದ್ದಾರೆ. ಆದೆಂದರೆ ಧಾರ್ಮಿಕ,

[illegible]

ಸಾಮಾಜಿಕ, ಸಾಂಸ್ಕೃತಿಕ, ಹೀಗೆ ಬಹುಮುಖ ಕ್ರಾಂತಿಯನ್ನು ಹೊತ್ತು ತಂದ ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಕಾಲ. ಮುಂದೆ ಸುಮಾರು ಮೂರು ಶತಮಾನಗಳ ವರೆಗೆ ಗುಪ್ತಗಾಮಿನಿಯಾಗಿದ್ದ ನದಿ ಹದಿನೈದನೆಯ ಶತಮಾನದಲ್ಲಿ ವಿಜಯನಗರದ ಪ್ರೌಢದೇವರಾಯನ ಆಳ್ವಿಕೆಯಲ್ಲಿ ಮತ್ತೊಮ್ಮೆ ಮೈದುಂಬಿ ಹರಿಯತೊಡಗಿತು. ಈ ಬಾರಿ ಅದಕ್ಕೆ ಪಾತ್ರ ನಿರ್ಮಿಸಿಕೊಳ್ಳುವ ಅಗತ್ಯವಿರಲಿಲ್ಲ.

ವಿಜಯನಗರದ ರಾಜ್ಯ ಸ್ಥಾಪನೆಯ ಹಿಂದಿನ ಉದ್ದೇಶ ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವುದು ಹಾಗೂ ಉತ್ತರದಿಂದ ಒದಗಿದ ಮಹಮ್ಮದೀಯರ ದಾಳಿಗಳನ್ನು ಎದುರಿಸುವುದಾಗಿತ್ತು.[೫೬] ಬಸವಾದಿ ಶರಣರ ಕ್ರಾಂತಿಯ ನಂತರ ಸುಮಾರು ಮೂರು ನೂರು ವರ್ಷಗಳ ಅವಧಿಯಲ್ಲಿ ಧಾರ್ಮಿಕ, ಸಾಹಿತ್ಯಿಕ ಚಟುವಟಿಕೆಗಳಿಗೆ ತೀವ್ರ ಆಘಾತವಾಯಿತು. ಕಲಚೂರ್ಯ ಮನೆತನದ ಬಿಜ್ಜಳನ ಕೊಲೆ ಹಾಗೂ ಮಹಮ್ಮದೀಯರ ಸತತ ದಾಳಿಗಳಿಂದ ಈ ಆಘಾತವು ಮತ್ತಷ್ಟು ಹೆಚ್ಚಿತು. ದೇವಗಿರಿ, ಓರಂಗಲ್, ಆನೆಗುಂದಿ, ಕಲಬುರ್ಗಿ ರಾಜ್ಯಗಳು ದಾಳಿಕಾರರ ಪಾಲಾದವು. ಈ ಅವಧಿಯಲ್ಲಿಯೇ ಬಹಮ್ಮನೀ ಬಾದಶಹರಿಗೂ ವಿಜಯನಗರದ ಅರಸರಿಗೂ ಎರಡು ಶತಮಾನಗಳ ಕಾಲ ಘೋರ ಕಾಳಗಗಳು ನಡೆಯುತ್ತಲೇ ಇದ್ದವು. ಹೀಗಾಗಿ ಈ ಅವಧಿಯಲ್ಲಿ ಧಾರ್ಮಿಕ, ಸಾಹಿತ್ಯಿಕ ಚಟುವಟಿಕೆಗಳು ತಟಸ್ಥವಾಗುವಂತಾಯಿತು.[೫೭] ಇಂಥ ರಾಜಕೀಯ ವಿಪ್ಲವಗಳಿಗೆ ಬಲಿಯಾಗಿ ಚದುರಿ ಹೋಗಿದ್ದ ವಚನ ಸಾಹಿತ್ಯದ ಅಭಿವೃದ್ಧಿಗೂ ಶರಣಜನಸಮುದಾಯಕ್ಕೂ ಉತ್ತೇಜನ ದೊರೆತುದು ವಿಜಯನಗರ ರಾಜ್ಯಸ್ಥಾಪನೆಯಿಂದ. 'ಈ ಸಾಮ್ರಾಜ್ಯವು ಸುಮಾರು ಮುನ್ನೂರು ವರ್ಷಗಳ ಕಾಲ ದಕ್ಷಿಣ ಭಾರತದ ಬಹುಭಾಗವನ್ನು ಆಳಿತು. ಅದರ ರಾಜರು ಯಾವುದೇ ಶಾಖೆಯ ಅನುಯಾಯಿಗಳಾಗಿದ್ದರೂ ಸರ್ವಧರ್ಮಗಳಿಗೆ ಸಮಾನವಾದ ಗೌರವ ಮತ್ತು ಅವಕಾಶಗಳನ್ನು ಒದಗಿಸಿ ಕೊಟ್ಟು ಅವುಗಳ ಬೆಳವಣಿಗೆಗೆ ಕಾರಣೀಭೂತರಾದರು.'[೫೮] ಹೀಗಾಗಿ ಈ ಅವಧಿಯಲ್ಲಿ ವೀರಶೈವತ್ವದ ನಡೆನುಡಿಗಳಿಗೆ ಹೆಚ್ಚು ಉತ್ತೇಜನ ದೊರಕಿತು.

'ಸಂಗಮವಂಶದ ದೊರೆಗಳು ನಿಷ್ಠ ಶಿವಭಕ್ತರಾಗಿದ್ದರು.'[೫೯] ಈ ವಂಶದ ಪ್ರೌಢರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ವೈಭವದ ಔನ್ನತ್ಯವನ್ನು ಮುಟ್ಟಿತು. ಹೀಗಾಗಿ ಈತನ ಕಾಲದಲ್ಲಿ ಕನ್ನಡ ಸಾಹಿತ್ಯ, ಅದರಲ್ಲಿಯೂ ವೀರಶೈವ ಸಾಹಿತ್ಯ, ಸಮೃದ್ಧವಾಗಿ ಬೆಳೆಯಿತು. ವೈಶಿಷ್ಟವೆಂದರೆ ಈ

[illegible]

[illegible]

[illegible]

[illegible]

ಪ್ರೌಢದೇವರಾಯನನ್ನು ಕುರಿತು ಅದೃಶ್ಯ ಕವಿ ಎನ್ನುವವನು 'ಪ್ರೌಢರಾಯನ ಕಾವ್ಯ' ಎಂಬ ಕೃತಿಯನ್ನು ರಚಿಸಿದ್ದಾನೆ.[೬೦] ಚಾಮರಸನು ಈ ಪ್ರೌಢದೇವರಾಯನ ಆಸ್ಥಾನದಲ್ಲಿದ್ದನೆಂದು ಹೇಳಲಾಗಿದೆ.[೬೧]

ಚಾಮರಸನು ಪ್ರಭುಲಿಂಗಲೀಲೆಯಲ್ಲಿ ಸ್ವಂತಕ್ಕೆ ಸಂಬಂಧಿಸಿದ ಯಾವ ಮಾಹಿತಿಯನ್ನೂ ತಿಳಿಸಿಲ್ಲ; ತನ್ನ ಹೆಸರನ್ನಾಗಲೀ ತಂದೆತಾಯಿಗಳ ಹೆಸರನ್ನಾಗಲೀ ತಿಳಿಸಿಲ್ಲ; ಅವನ ಗುರು ಪರಂಪರೆ, ಹುಟ್ಟಿ ಬೆಳೆದ ಊರು, ವಾಸ ಸ್ಥಾನ ಮೊದಲಾದವು ಕೂಡ ತಿಳಿದು ಬರುವುದಿಲ್ಲ. ಯಾವುದೇ ರೀತಿಯ ಐತಿಹಾಸಿಕ ಮಾಹಿತಿಯ ಪ್ರಸ್ತಾಪವಿಲ್ಲದ ಪ್ರಸಂಗದಲ್ಲಿ ಬಾಹ್ಯ ಪರಿಕರಗಳನ್ನು ಅವಲಂಬಿಸಬೇಕಾಗುತ್ತದೆ. ಆದರೆ ಈ ಬಾಹ್ಯ ಪರಿಕರಗಳಲ್ಲಿ ಕೂಡ ಯಾವುದೂ ಚಾರಿತ್ರಿಕ ಕೃತಿಯಾಗಿರದಿರುವುದೊಂದು ತೊಡಕಿನ ಅಂಶ. ಹೀಗಾಗಿ ಚಾಮರಸನ ಬಗೆಗಿನ ದಾಖಲೆಗಳಿಗಾಗಿ ಪೌರಾಣಿಕ ಜಗತ್ತಿಗೆ ಶರಣು ಹೋಗಬೇಕಾದುದು ಅನಿವಾರ್ಯವಾಗಿದೆ.

ಚಾಮರಸನಿಗೆ ಸಂಬಂಧಿಸಿದ ಉಲ್ಲೇಖಗಳನ್ನುಳ್ಳ ಕಾವ್ಯಗಳು ಮತ್ತು ಕೃತಿಕಾರರು:

ಕವಿ	ಕಾಲ	ಕೃತಿ
ಅದೃಶ್ಯ ಕವಿ	ಕ್ರಿ. ಶ. ೧೫೨೫	ಪ್ರೌಢರಾಯನ ಕಾವ್ಯ
ಸಿದ್ಧನಂಜೇಶ	ಕ್ರಿ. ಶ. ೧೫೮೦	ಗುರುರಾಜ ಚಾರಿತ್ರ
ಶಾಂತಲಿಂಗ ದೇಶಿಕ	ಕ್ರಿ. ಶ. ೧೬೭೨	ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ
ಶಂಕರ ಕವಿ	ಕ್ರಿ. ಶ. ೧೭೬೩	ಚೋರಬಸವ ಚರಿತ್ರೆ
ಪಿಡುಪರ್ತಿ ಸೋಮನಾಥ	?	ಪ್ರಭುಲಿಂಗಲೀಲೆ(ತೆಲುಗು-ದ್ವಿಪದಿ)
ಪಿಡುಪರ್ತಿ ಬಸವ ಕವಿ	?	ಪ್ರಭುಲಿಂಗಲೀಲೆ (ತೆಲುಗು-ಚಂಪೂ)

[illegible]

[illegible]

[illegible]

ತಿರುವಣ್ಣಾಮಲೆಯ ಶಿವಪ್ರಕಾಶಸ್ವಾಮಿ	?	ಪ್ರಭುಲಿಂಗಲೀಲೆ (ತಮಿಳು)
	?	ಪ್ರಭುಲಿಂಗಲೀಲೆ (ಸಂಸ್ಕೃತ)
ಬ್ರಹ್ಮದಾಸ	ಕ್ರಿ.ಶ.೧೬೭೫	ಲೀಲಾವಿಶ್ವಂಭರ (ಪ್ರಭುಲಿಂಗಲೀಲೆ, ಮರಾಠಿ–ಓವೀ)

ಇವುಗಳಲ್ಲದೆ ಪ್ರಭುಲಿಂಗಲೀಲೆಯ ಒಂದೆರಡು ಹಸ್ತಪ್ರತಿಗಳಲ್ಲಿ ಚಾಮರಸನ ಹೆಸರು, ಕಾವ್ಯದ ಉದ್ದೇಶ, ಗುರಿಗಳನ್ನು ತಿಳಿಸುವ ನಾಲ್ಕು ಕಂದ ಒಂದು ವೃತ್ತ ಇವೆ.[೬೨]

ಇವೆಲ್ಲವುಗಳಿಂದ ತಿಳಿದು ಬರುವುದೇನೆಂದರೆ ಚಾಮರಸನು ಗದುಗಿನವನಾಗಲೀ, ನಾಗಣಾಪುರದವನಾಗಲೀ, ಕೋಟುಮುಚಿಗೆಯವನಾಗಲೀ ಇದ್ದಿರಬಹುದು. ಇವೆಲ್ಲ ಒಂದಕ್ಕೊಂದು ತೀರಾ ಸಮೀಪದ ಊರುಗಳಾಗಿದ್ದು ಬೆಳುವಲದೇಶದಲ್ಲಿ ಪ್ರಸಿದ್ಧವಾದವುಗಳು.[೬೩] ಅವನ ತಾಯಿಯ ತವರೂರು, ಅವನ ಮನೆತನದ ಊರು, ಶಿಕ್ಷಣ ಪಡೆದ ಊರು ಇವುಗಳನ್ನು ಲಕ್ಷಿಸಿದರೆ ಒಂದು ಊರಲ್ಲಿ ಜನಿಸಿ, ಇನ್ನೊಂದರಲ್ಲಿ ಬೆಳೆದು ಮತ್ತೊಂದರಲ್ಲಿ ಶಿಕ್ಷಣ ಪಡೆದಿರುವ ಸಾಧ್ಯತೆ ಇದೆ. ಏನಿದ್ದರೂ ಎಲ್ಲವೂ ಊಹೆಗೆ ಸಂಬಂಧಿಸಿದ್ದು. ಅವನು ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಜನಿಸಿದ್ದನಲ್ಲದೆ ಅವನ ಆಸ್ಥಾನದಲ್ಲಿದ್ದನು.[೬೪]

ಪ್ರಭುಲಿಂಗಲೀಲೆಯ ಕರ್ತೃ ಚಾಮರಸ ಎನ್ನುವುದನ್ನು ತೆಲುಗು, ತಮಿಳು, ಮರಾಠಿ ಭಾಷಾಂತರ ಕೃತಿಗಳು ತಿಳಿಸುತ್ತವೆ. ಚಾಮರಸನಿಂದ ರಚಿತವಾದ ಪ್ರಭುಲಿಂಗಲೀಲೆಯನ್ನು ಅನುವಾದಿಸಿರುವುದಾಗಿ ಅವರೆಲ್ಲ ಸ್ಪಷ್ಟಪಡಿಸುತ್ತಾರೆ. ಮರಾಠಿಯಲ್ಲಿ ಓವೀರೂಪದಲ್ಲಿ ಭಾಷಾಂತರಿಸಿದ ಬ್ರಹ್ಮದಾಸ ಚಾಮರಸನನ್ನು ಮುನಿ ಎಂದೂ ತನ್ನ ಕೃತಿಯನ್ನು ಲೀಲಾ ವಿಶ್ವಾಂಭರ ಎಂದೂ ಕರೆದಿದ್ದಾನೆ.[೬೫]

ಏಕಾದಶಶತೇ ಏಕಾದಶ
ಪದೇ ವದಲಾ ಮುನಿ ಚಾಮರಸ ॥
ಪಂಪಾಪತಿ ವಿರೂಪಾಕ್ಷ ಈಶ

ವರವಿಶೇಷ ಲಾವುನಿ ॥

ಲೀಲಾವಿಶ್ವಾಂಭರಾಚ ಚರಿತ್ರ

ಸರೋವರ ರಚಿಲೇ ಪವಿತ್ರ ॥

ಮೋಕ್ಷಲಾಭೇ ಸ್ನಾನೇ ಮಾತ್ರ

ಜೀವ ಸ್ವತಂತ್ರ ಪರಬ್ರಹ್ಮ ॥ [೬೬]

ಉಳಿದಂತೆ ವಿವಿಧ ಕಾವ್ಯಗಳಲ್ಲಿ ಬರುವ ಪ್ರಭುಲಿಂಗಲೀಲೆಯ ಮಹತಿಯ ಬಗೆಗಿನ ಅಭಿಪ್ರಾಯಗಳು ಚಾಮರಸನ ಬದುಕಿನ ಕಲಸುಮೇಲೋಗರ ಮಾತ್ರ. ಈ ಮೇಲೋಗರದ ರುಚಿಯು ಊಟ ಮಾಡುವವರ ನಾಲಿಗೆಗಳಿಗೆ ಮಾತ್ರ ಸಂಬಂಧಿಸಿದುದು ಪ್ರಸ್ತುತ ಆ ವಿಷಯದ ಬಗೆಗೆ ಚರ್ಚಿಸುವುದು ಅನವಶ್ಯಕ. ಆದರೆ ಅವುಗಳ ಹಿಂದೆ ಸತ್ಯವೊಂದು ನಿಶ್ಚಿತವಾಗಿಯೂ ಅಡಗಿದೆ ಎಂದು ಹೇಳಬಹುದು. ಅದೆಂದರೆ 'ಪ್ರಭುಲಿಂಗಲೀಲೆ ಸರ್ವೋತ್ಕೃಷ್ಟ ಕಾವ್ಯಗಳಲ್ಲೊಂದು' ಎಂಬುದು.

ಪ್ರೌಢದೇವರಾಯನು ಕ್ರಿ.ಶ. ೧೪೨೯ ರಿಂದ ೧೪೪೬ ರ ವರೆಗೆ ಆಳಿದನೆಂದು ಇತಿಹಾಸದಿಂದ ತಿಳಿದು ಬರುತ್ತದೆ.[೬೭] ಇದರಿಂದ ಚಾಮರಸನು ೧೪೩೦ ರ ಸುಮಾರಕ್ಕೆ ಇದ್ದನೆಂದು ಕವಿಚರಿತೆಕಾರರು ಗ್ರಹಿಸಿದ್ದಾರೆ.[೬೮] ಅವನಿಗೆ 'ವೀರಶೈವಮತಸಾರೋದ್ಧಾರ' ಹಾಗೂ 'ಅನ್ಯಮತಕೋಳಾಹಳ' ಎಂಬ ಬಿರುದುಗಳಿದ್ದವು.[೬೯]

೨.೨ ಪ್ರಭುಲಿಂಗಲೀಲೆಯ ವಸ್ತು

ತಾತ್ವಿಕ ಕಾವ್ಯವೊಂದರಲ್ಲಿ ವಸ್ತು ಯಾವ ಮಟ್ಟದಲ್ಲಿ ನಿರೂಪಿತವಾಗಿರುತ್ತದೆಂಬುದನ್ನು ತಿಳಿಯುವುದು ಸುಲಭದ ಮಾತಲ್ಲ. ತತ್ತ್ವವೊಂದನ್ನು ಕಾವ್ಯರೂಪಕ್ಕೆ ತರುವಾಗ ನೇರವಾಗಿ ತತ್ತ್ವಪ್ರತಿಪಾದನೆ ಮಾಡುವುದರಿಂದ ಲೋಕವ್ಯವಹಾರದಲ್ಲಿರುವವರಿಗೆ ಅದು ರುಚಿಸುವುದಿಲ್ಲವೆಂಬುದನ್ನು ನೋಡಿದ್ದೇವೆ. ಲೋಕವ್ಯವಹಾರವು ಹಾಸುಹೊಕ್ಕಾಗಿರುವ ಜನರೇ ಹೆಚ್ಚಾಗಿ ಕಾವ್ಯದ ರಸಾಸ್ವಾದವನ್ನು ಮಾಡಬೇಕಾಗುವುದರಿಂದ ಅವರ ಬಯಕೆಯ ಭಕ್ಷ್ಯಗಳ ರೂಪದಲ್ಲಿಯೇ ಕಾವ್ಯಾನ್ನವನ್ನು ಬಡಿಸಬೇಕಾಗುತ್ತದೆ. ತತ್ತ್ವವನ್ನೇ ನೇರವಾಗಿ ಬಯಸುವವರಿಗಂತೂ ಅದು ಹೇಗಾದರೂ ಪಚನವಾಗುತ್ತದೆ. ಈ ಅಂಶದ ಹಿನ್ನೆಲೆಯಲ್ಲಿ ಪ್ರಭುಲಿಂಗಲೀಲೆಯ ನಿರೂಪಣೆಯ ಹಿಂದೆ ರೂಪುಗೊಂಡಿರುವ ವಸ್ತುವನ್ನು ಗ್ರಹಿಸಬೇಕು.

[illegible]

[illegible]

[illegible]

[illegible]

[illegible]

ಅಲ್ಲಮಪ್ರಭು ಸಂಪ್ರದಾಯದ

ಸಲ್ಲಲಿತ ಸನ್ಮಾರ್ಗವನು ನಾ

ನೆಲ್ಲರರಿವಂದದಲಿ ಪೇಳುವೆನುಚಿತ ವಚನದಲಿ [೨೦]

ಮಂಗಲಾಚರಣದ ಗತಿಯಲ್ಲಿ ಶಿವಸ್ವರೂಪಿಗಳಾದ ಶರಣರಿಗೆ ಶರಣಾರ್ಥಿಗಳನ್ನು ಸಲ್ಲಿಸಿದ ತಕ್ಷಣವೇ ಈ ರೀತಿಯಾಗಿ ಕವಿ ತನ್ನ ಉದ್ದೇಶವನ್ನು ಸ್ಪಷ್ಟಪಡಿಸುತ್ತಾನೆ. ಚಾಮರಸನು ಪ್ರಭುಲಿಂಗಲೀಲೆಯನ್ನು ವಚನಗಳ ಆಧಾರದಿಂದ ರಚಿಸಿದ್ದಾಗಿ ಕಂಡು ಬರುತ್ತದೆ.[೨೧] ಶಿವಶರಣರ ವಚನಗಳು ಷಟ್‌ಸ್ಥಲಾಚರಣೆಯ ಚೌಕಟ್ಟನ್ನು ಹೊಂದಿವೆ. ಷಟ್‌ಸ್ಥಲಾಚರಣೆ ಎಂದರೆ ಶಿವಯೋಗಾಚರಣೆ ಎಂಬುದನ್ನು ನೋಡಿದ್ದೇವೆ. ಕಾವ್ಯದಲ್ಲಿ ಸ್ಥಾನ ಪಡೆದಿರುವ ಇಷ್ಟಲಿಂಗದ ಗತಿ, ಸಾಧಕಾಂಗದ ಗತಿ ಹಾಗೂ ಮನೋಲಯದ ಗತಿ ಇವು ಶಿವಯೋಗಾಚರಣೆಯ ಅಂಶಗಳು. ಅಂದರೆ ಕಾವ್ಯದಲ್ಲಿ ಶಿವಯೋಗವನ್ನು ನಿರೂಪಿಸುವುದು ಕವಿಯ ಆಶಯವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಪ್ರಭುಲಿಂಗಲೀಲೆಯನ್ನು ಲಕ್ಷಿಸಿದಾಗ ಕಂಡು ಬರುವುದೇನೆಂದರೆ 'ಕಾವ್ಯದ ತುಂಬೆಲ್ಲ ಪ್ರಭು ಲೀಲೆಯನ್ನು ಮೆರೆಯುತ್ತ ಸುಳಿದಾಡಿದ್ದಾನೆ'ಎಂಬುದು. ಆತನ ವೈರಾಗ್ಯ, ಮಾಯಾತಿರಸ್ಕಾರ, ಬಸವಾದಿ ಶರಣರ ಉದ್ಧಾರ ಮುಂತಾದುವುಗಳು ಚರಿತ್ರೆಯ ಅಂಶಗಳಾಗಿ ಮೂಡಿ ಬಂದಿವೆ. ಅಂತೆಯೇ ಚಾಮರಸನ ಕಾವ್ಯದ ಸಂಪಾದನೆಯನ್ನು ಮಾಡಿರುವವರಲ್ಲಿ ಕೆಲವರು ಅದು ಅಲ್ಲಮಪ್ರಭುವಿನ ಚರಿತ್ರೆಯಾಗಿದೆಯೆಂದು ತಿಳಿಸುತ್ತಾರೆ. ಶಿ. ಶಿ. ಬಸವನಾಳರ ದೃಷ್ಟಿಯಲ್ಲಿ ಅದು 'ಶ್ರೀಮದಲ್ಲಮಪ್ರಭುವಿನ ಚರಿತ್ರೆಯ ವಿಷಯ.'[೨೨] ಎಂ. ಆರ್. ಶ್ರೀನಿವಾಸಮೂರ್ತಿಯವರ ದೃಷ್ಟಿಯಲ್ಲಿಯೂ ಅದು 'ಅಲ್ಲಮನ ಚರಿತ್ರೆ.'[೨೩] ಡಾ. ಎಸ್. ವಿದ್ಯಾಶಂಕರ ಅವರ ದೃಷ್ಟಿಯಲ್ಲಿ ಅದು 'ಹಿರಿಯ ಚೇತನವೊಂದರ ಅಮಾನುಷ ಜೀವನ ಚರಿತ್ರೆ.'[೨೪]

ಕೆಲವರಿಗೆ ಪ್ರಭುಲಿಂಗಲೀಲೆಯು 'ಲೀಲೆ' ಮಾತ್ರವಾಗಿ ಕಂಡಿದೆ. ಡಾ. ಎಂ. ಎಸ್. ಸುಂಕಾಪುರ ಅವರ ದೃಷ್ಟಿಯಲ್ಲಿ ಅದು 'ಪ್ರಭುದೇವರು ಲಿಂಗಸ್ವರೂಪರಾಗಿ ಲೋಕಕಲ್ಯಾಣಕ್ಕಾಗಿ ಎಸಗಿದ ಲೀಲೆಯನ್ನು ವಿವರಿಸುವಂಥದ್ದು.' ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ ಅವರ ದೃಷ್ಟಿಯಲ್ಲಿ ಅದು "ಪ್ರಭುದೇವನ 'ಲೀಲಾವಿಲಾಸ' ಹಾಗೂ 'ತತ್ತ್ವಮಹೋನ್ನತಿ'ಯ ಸಮರಸ ಸಮನ್ವಯದ ಅಭಿವ್ಯಕ್ತಿ"[೨೫] ಡಾ. ವಿ. ಎಸ್.

[illegible]

[illegible]

[illegible]

[illegible]

[illegible]

[illegible]

ಕಂಬಿಯವರ ದೃಷ್ಟಿಯಲ್ಲಿ ಅದು "ಪ್ರಾಕೃತ ಜೀವನದಿಂದ ಅಪ್ರಾಕೃತ ಜೀವನಕ್ಕೆ ಏರಿ, ಅಲ್ಲಿಂದ ಅಮನಸ್ಕಾವಸ್ಥೆಯಲ್ಲಿ ಬದುಕುವ ಸಾಹಸಮಯ ಜೀವಿಗಳ ಜೀವನದ ಚಿತ್ರಣ."

ಶಿವಯೋಗ-ಅಲ್ಲಮಪ್ರಭುಚರಿತ್ರೆ-ಅಲ್ಲಮಪ್ರಭುಲೀಲೆ ಹೀಗೆ ಈ ಮೂರು ಅಭಿಪ್ರಾಯಗಳಲ್ಲಿ ಯಾವುದನ್ನಾದರೂ ತಿರಸ್ಕರಿಸುವುದು ಸರಿ ಎನಿಸುವುದಿಲ್ಲ. ಏಕೆಂದರೆ ಈ ಎಲ್ಲ ಅಭಿಪ್ರಾಯಗಳಿಗೆ ಸುಳಿವುಗಳು ಪ್ರಭುಲಿಂಗಲೀಲೆಯಲ್ಲಿ ಗೋಚರಿಸುವುದರಿಂದಾಗಿಯೇ ಇವು ರೂಪುಗೊಂಡಿವೆ. ಅಂದರೆ ಈ ಮೂರು ಅಭಿಪ್ರಾಯಗಳ ಸಂಯೋಜಿತ ಸಂರಚನೆಯನ್ನು ಪ್ರಭುಲಿಂಗಲೀಲೆ ಹೊಂದಿರುವ ಸಾಧ್ಯತೆಯಿದೆ. ಕಾವ್ಯವನ್ನು ವಿವಿಧ ಸ್ತರಗಳಲ್ಲಿ ಅಭ್ಯಸಿಸಿದಾಗ ಒಂದೊಂದಾಗಿ ಅಭಿಪ್ರಾಯಗಳು ಸ್ಪುಟವಾಗುತ್ತ ಹೋಗುತ್ತವೆ. ವಾಚ್ಯಾರ್ಥದ ರೂಪದಲ್ಲಿ ಅಲ್ಲಮಪ್ರಭುವಿನ ಚರಿತ್ರೆಯಾಗಿ, ಲಕ್ಷ್ಯಾರ್ಥದ ರೂಪದಲ್ಲಿ ಅವನ ಲೀಲೆಯಾಗಿ ಹಾಗೂ ಧ್ವನ್ಯಾರ್ಥದ ರೂಪದಲ್ಲಿ ಶಿವಯೋಗದ ಪ್ರತಿಪಾದನೆಯಾಗಿ ಚಾಮರಸನ ಕಾವ್ಯ ತೋರುವ ಸಾಧ್ಯತೆಗಳು ಇವೆ. ಈ ಎಲ್ಲವುಗಳ ಸಮನ್ವಯವನ್ನು ಪ್ರಭುಲಿಂಗಲೀಲೆಯ ರೂಪದಲ್ಲಿ ಎರಕ ಹೊಯ್ದಿರುವುದನ್ನು ಮುಂದೆ ಚರ್ಚಿಸಲಾಗುವುದು.

೨.೩ ಕಾವ್ಯದ ಸಂರಚನೆ

ಪ್ರಭುಲಿಂಗಲೀಲೆಯು ಭಾಮಿನಿ ಷಟ್ಪದಿಯಲ್ಲಿದ್ದು ಒಟ್ಟು ೨೫ ಅಧ್ಯಾಯಗಳಲ್ಲಿ ೧೧೧೧ ಪದ್ಯಗಳನ್ನು ಒಳಗೊಂಡಿದೆ. ಇಲ್ಲಿ ಅಧ್ಯಾಯಗಳನ್ನು 'ಗತಿಗಳು' ಎಂದು ಹೆಸರಿಸಲಾಗಿದೆ. ಪ್ರಾರಂಭದಿಂದ ಕೊನೆಯವರೆಗೆ ಒಂದೇ ಷಟ್ಪದಿ ರೂಪವನ್ನು ಬಳಸಲಾಗಿದ್ದು ಪ್ರತಿಯೊಂದು ಗತಿಯ ಪ್ರಾರಂಭದಲ್ಲಿ ಸೂಚನಾಪದ್ಯವಿದೆ. ಕನಿಷ್ಟ ಸಂಖ್ಯೆಯ ೨೧ ಪದ್ಯಗಳನ್ನು ಹೊಂದಿರುವಂಥದು 'ಮಂಗಲಾಚರಣದ ಗತಿ'ಯಾಗಿದ್ದರೆ ಗರಿಷ್ಠ ಸಂಖೆಯ ೮೭ ಪದ್ಯಗಳನ್ನು ಹೊಂದಿರುವಂಥದು 'ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿ.' ಕೊನೆಯದಾದ 'ಪರಮೇಶ್ವರನು ಗಿರಿಜೆಗೆ ಬೋಧಿಸಿದ ಗತಿ'ಯಲ್ಲಿ ೨೫ ಪದ್ಯಗಳಿವೆ. ಪ್ರತಿಯೊಂದು ಗತಿಯನ್ನು ಪ್ರಾರಂಭಿಸುವುದಕ್ಕೆ ಮೊದಲು ಶಿವಶರಣರ ವಚನಗಳನ್ನು ಕೊಡಲಾಗಿದೆ. ಪ್ರೊ. ಶಿ. ಶಿ. ಬಸವನಾಳರು ಸಂಪಾದಿಸಿರುವ ಪ್ರತಿಯಲ್ಲಿ ಕೊಟ್ಟಿರುವಂತೆ ಒಟ್ಟು ೧೦೩ ವಚನಗಳಿದ್ದು ಅವುಗಳಲ್ಲಿ ಅಲ್ಲಮಪ್ರಭುವಿನ ವಚನಗಳ ಸಂಖ್ಯೆ ೫೭. ಎರಡನೆಯ, ಐದನೆಯ ಹಾಗೂ ಒಂಬತ್ತನೆಯ ಗತಿಗಳಲ್ಲಿ ಕನಿಷ್ಟ ಒಂದೊಂದು ವಚನವಿದ್ದು ಅವೆಲ್ಲ ಅಲ್ಲಮಪ್ರಭುವಿನ ವಚನಗಳು.

ಹದಿನೇಳನೆಯದಾದ ಮಹಾದೇವಿಯಕ್ಕನಿಗೆ ಪ್ರಭು ಪ್ರಸನ್ನವಾದ ಗತಿಯಲ್ಲಿ ಗರಿಷ್ಠವಾಗಿ ಹದಿನೈದು ವಚನಗಳಿವೆ. ಇಷ್ಟಲಿಂಗದ ಗತಿಯಲ್ಲಿ ಕೊಟ್ಟ ನಾಲ್ಕು ವಚನಗಳಲ್ಲಿ ಎರಡು ಅಲ್ಲಮಪ್ರಭುವಿನ ವಚನಗಳಾಗಿದ್ದರೆ ಸಾಧಕಾಂಗದ ಗತಿ ಹಾಗೂ ಮನೋಲಯದ ಗತಿ ಇವುಗಳಲ್ಲಿ ಎಲ್ಲವೂ ಆತನ ವಚನಗಳೇ ಆಗಿವೆ.

ಚಾಮರಸನ ಕಾವ್ಯವು ಅಲ್ಲಮಪ್ರಭು ಸಂಪ್ರದಾಯವನ್ನು ಅನುಸರಿಸಿರುವುದರಿಂದ ಇಡೀ ಕಾವ್ಯವು ಷಟ್‌ಸ್ಥಲಗಳ ಚೌಕಟ್ಟಿನಲ್ಲಿ ರೂಪುಗೊಂಡಿದೆ. ಅಂತೆಯೇ ಷಟ್‌ಸ್ಥಲಗಳಲ್ಲಿ ಮೂಡಿ ಬಂದಿರುವ ಬಸವಾದಿ ಶರಣರ ವಚನಗಳ ಧಾಟಿಯಲ್ಲಿಯೇ ಪ್ರಾರಂಭವಾಗಿ ಆ ಧಾಟಿಯಲ್ಲಿಯೇ ಮುಕ್ತಾಯವಾಗುವುದು ಕಾವ್ಯಕ್ಕೆ ಕಡ್ಡಾಯವಾಗಿ ಪರಿಣಮಿಸಿದೆ. ಈ ನಿಲುವಿನ ಹಿನ್ನೆಲೆಯಲ್ಲಿ ಪ್ರತಿಯೊಂದು ಗತಿಯ ವಸ್ತುವನ್ನು ಆ ಗತಿಯ ಪ್ರಾರಂಭದಲ್ಲಿ ಕೊಟ್ಟ ವಚನಗಳ ವಿಷಯದೊಂದಿಗೆ ಸಮೀಕರಿಸಲಾಗಿದೆ. ಹೀಗೆ ಯಾವುದೇ ಒಂದು ಗತಿಯಲ್ಲಿಯ ವಸ್ತು ಆ ಗತಿಯ ವಚನಗಳ ವಸ್ತುವಿನೊಂದಿಗೆ ಸಮಾನಾಂತರವಾಗಿ ರೂಪುಗೊಂಡಿರುವುದನ್ನು ಕಾಣುತ್ತೇವೆ. ಚಾಮರಸನು ಆಯ್ದುಕೊಂಡ ವಚನಗಳು ಷಟ್ಸ್ಥಲಗಳ ಕ್ರಮವನ್ನು ಪಾಲಿಸುತ್ತವೆ. ಮೊದಲ ಗತಿಯ ವಚನಗಳು[೨೮] ಭಕ್ತಸ್ಥಲಕ್ಕೆ ಸಂಬಂಧಿಸಿದ್ದರೆ ಕೊನೆಯ ಗತಿಯ ಕೊನೆಯ ವಚನವು[೨೯] ಐಕ್ಯಸ್ಥಲಕ್ಕೆ ಸಂಬಂಧಿಸಿದೆ. ವಚನಗಳ ಸಂಖ್ಯೆ ಹೆಚ್ಚಾಗಿರುವ ಗತಿಗಳಲ್ಲಿ ಕೂಡ ಷಟ್ಸ್ಥಲ ಕ್ರಮವು ಗೋಚರಿಸುತ್ತದೆ.

ಕಾವ್ಯದ ಸಂರಚನೆಗೆ ಸಂಬಂಧಿಸಿದ ಹಲವಾರು ಅಂಶಗಳು ಸಾಂಕೇತಿಕ ಅರ್ಥವನ್ನು ಹೊರಸೂಸುತ್ತವೆ. ಕಾವ್ಯದ ಯಾವುದೇ ಹಂತದಲ್ಲಿ ಕವಿ ತನ್ನ ಹೆಸರು, ವಂಶಾವಳಿ ಯಾವುದನ್ನೂ ಸೂಚಿಸಿಲ್ಲ. ಸರ್ವಾರ್ಪಣ ಭಾವನೆಯಿಂದ ಕಾವ್ಯರಚನೆ ಮಾಡಿದ ಶರಣಕವಿಯ ವಿಷಯದಲ್ಲಿ ಹೀಗಾಗಿರುವುದು ಸೋಜಿಗವೇನಲ್ಲ.[೩೦] ಗುರು-ಲಿಂಗ-ಜಂಗಮ ಎಲ್ಲವೂ ಆಗಿರುವ ಪ್ರಭುವನ್ನು ಕೀರ್ತಿಸಹೊರಟ ಕವಿಗೆ ಆ ಭಾವದೊಂದಿಗೆ ಸಮರಸವಾಗುವುದರಿಂದ ಮಾತ್ರ ಸಿದ್ಧಿ ಸಾಧ್ಯವಿದೆ ಎನ್ನುವುದು ಸ್ಪಷ್ಟವಾಗಿದೆ. ಮಾಡಿದೆನೆನ್ನುವುದನ್ನು ಬಾಯಿಬಿಟ್ಟು ಹೇಳುವುದಲ್ಲ, ಅದು ಮನಸ್ಸಿನಲ್ಲಿಯೂ ಹೊಳೆಯಬಾರದು ಎಂಬ ಬಸವಣ್ಣನ ವಚನವನ್ನು[೩೧] ಕವಿ ಇಲ್ಲಿ ಸಾಕಾರಗೊಳಿಸಿದ್ದಾನೆ. ಯಾವ ಹೆಗ್ಗಳಿಕೆಯನ್ನೂ ಹೇಳಿಕೊಳ್ಳಲು ಇಚ್ಛಿಸದ ಅವನು ಯಾರನ್ನೂ ದೂಷಿಸಲು ಹೋಗಿಲ್ಲ. ಇದು ಶರಣರ ಮಾರ್ಗಾನುಸರಣೆಯಲ್ಲವೆ? ಅಲ್ಲಮಪ್ರಭು ಎಂದರೆ ವಿಶ್ವಂಭರನಾದ[೩೨] ಪರಶಿವರೂಪದ ಪ್ರಭುವೆಂದು

ಭಾವದಲ್ಲಿ ಪಡಿಮೂಡಿಸಿಕೊಂಡಿರುವ ಚಾಮರಸನು ಆ ಪ್ರಭುವಿಗೆ ಶರಣಾರ್ಥಿಗಳನ್ನು ಸಲ್ಲಿಸಿ, ಶಿವ ಸ್ವರೂಪಿಗಳಾದ ಬಸವಾದಿ ಪ್ರಮಥರಿಗೆ ಶರಣಾರ್ಥಿಗಳನ್ನು ಸಲ್ಲಿಸುತ್ತಾನೆ. ಎಲ್ಲ ಶಕ್ತಿಗಳನ್ನೂ ಅಂತರ್ಗತ ಮಾಡಿಕೊಂಡಿರುವ ಪ್ರಭುವಿಗೆ ನಮಸ್ಕರಿಸಿದಾಗ ಕಾವ್ಯಶಕ್ತಿಗಾಗಲಿ, ಇನ್ನಿತರ ಶಕ್ತಿದೇವತೆಗಳಿಗಾಗಲಿ ನಮಿಸುವ ಪ್ರಮೇಯವೇ ಕವಿಗೆ ಉಂಟಾಗಿಲ್ಲ.

ಚಾಮರಸನು ತನ್ನ ಕಾವ್ಯದಲ್ಲಿ ಪ್ರತಿಪಾದಿಸಿರುವುದು ಶಕ್ತಿವಿಶಿಷ್ಟಾಧ್ವೈತವನ್ನು.[೮೩] ಮಹಾಕಾರಣದಲ್ಲಿ ಪ್ರಾರಂಭವಾಗಿ ಮಹಾಕಾರಣದಲ್ಲಿಯೇ ಮುಕ್ತಾಯವಾಗುವ ಈ ಕಾವ್ಯದ ಮಧ್ಯದಲ್ಲಿ ತೋರುವ ಸ್ಥೂಲ-ಸೂಕ್ಷ್ಮ-ಕಾರಣಗಳು ಅನಿತ್ಯವಾಗಿದ್ದು ಅವೆಲ್ಲ ಮಹಾಕಾರಣದಲ್ಲಿ ಅಂತರ್ಗತವಾಗುವಂಥವು ಎಂಬುದನ್ನು ಅದು ಸೂಚಿಸುತ್ತದೆ. ನಾಮ-ರೂಪು-ಕ್ರಿಯೆಗಳು ನಿರಾವಲಂಬದಲ್ಲಿ ಒಂದಾಗುತ್ತವೆಂದೂ ಅದುವೇ ವೀರಶೈವತತ್ವವೆಂದೂ ಕವಿಯ ಆಶಯ. 'ನಾಮರೂಪಕ್ರೀವಿಳಾಸವನಿಳುಹಿ ನಿತ್ಯ ನಿರಾವಲಂಬದ ಸುಖಿಗಳಾದರು'[೮೪] ಎಂದು ಪರಮೇಶ್ವರನು ಗಿರಿಜೆಗೆ ಬೋಧಿಸುವಲ್ಲಿ ಇದು ಸ್ಪಷ್ಟವಾಗುತ್ತದೆ. ಹೀಗೆ ನಾಮ-ರೂಪು-ಕ್ರಿಯೆ-ನಿತ್ಯ ನಿರಾವಲಂಬ ಎಲ್ಲವೂ ಒಂದೇ ಮೂಲದ ಅಂಶವಾಗಿರುವಂಥವು. ಇದು ಸ್ಥೂಲ-ಸೂಕ್ಷ್ಮ-ಕಾರಣಗಳು ಮಹಾಕಾರಣದಲ್ಲಿ ಅಂತರ್ಗತವಾಗಿ ಒಂದೇ ಮೂಲದಲ್ಲಿ ಲೀನವಾಗುವಂಥವು ಎಂದು ಹೇಳಿದಂತೆಯೇ. ಇದನ್ನು ಸಂಕೇತಿಸುವುದಕ್ಕಾಗಿ ಕಾವ್ಯದ ಪದ್ಯಗಳ ಸಂಖ್ಯೆಯನ್ನು ೧೧೧೧ಕ್ಕೆ ಹೊಂದಿಸಲಾಗಿದೆ. ಅದ್ವೈತತತ್ತ್ವದ ನಿರೂಪಣೆಯನ್ನು ಸಂಕೇತಗಳ ರೂಪದಲ್ಲಿ ಇಷ್ಟೊಂದು ಅರ್ಥಪೂರ್ಣವಾಗಿ ಸೂಚಿಸುವುದು ಬೇರಿನ್ನಾವ ವಿಧದಿಂದ ಸಾಧ್ಯ? ಜೊತೆಗೆ ಮೂಲಪಾಠವನ್ನು ಯಾರೂ ಅಂದಗೆಡಿಸುವ ದುಸ್ಸಾಹಸಕ್ಕೆ ಕೈಹಾಕದಂತೆ ಅದನ್ನು ಈ ರೀತಿ ನಿರ್ದಿಷ್ಟ ಸಂಖ್ಯೆಗೆ ಸೀಮಿತಗೊಳಿಸಿದ್ದಾನೆನ್ನಬಹುದು. ಚಾಮರಸನ ಸತ್‌ಸಂಕಲ್ಪ ಕೆಲಸ ಮಾಡಿದ ಪರಿಯನ್ನು ನೋಡಿ ಸೋಜಿಗವೆನಿಸುತ್ತದೆ.[೮೫]

ಕಾವ್ಯದ ವಸ್ತು ಇಪ್ಪತ್ತೈದು ಘಟಕಗಳಲ್ಲಿ ವಿಭಾಗಿಸಲ್ಪಟ್ಟಿದ್ದು ಅವುಗಳನ್ನು ಅಧ್ಯಾಯ, ಆಶ್ವಾಸ, ಪರ್ವ, ಸಂಪುಟ ಮುಂತಾದ ಯಾವ ಸಾಂಪ್ರದಾಯಕ ಹೆಸರಿನಿಂದಲೂ ಸೂಚಿಸದೆ 'ಗತಿ' ಎಂದು ಸೂಚಿಸಲಾಗಿದೆ. ಅವೆಲ್ಲ ಬಳಸಬಾರದ ಬರಿಯ ಬೊಮ್ಮದ ಕಡೆಗೆ ಅಥವಾ ಶಕ್ತಿ ವಿಶಿಷ್ಟಾದ್ವೈತದೆಡೆಗೆ ಗುರಿಯನ್ನು ಹೊಂದಿರುವ ಗತಿಗಳು ಮಾತ್ರ! ಅಂತೆಯೇ ಅವುಗಳ ಸಂಖ್ಯೆ ಶಿವನ ಪಂಚವಿಂಶತಿ ಲೀಲೆಗಳಿಗೆ ಸಮವಾಗಿದೆ. ಮನುಷ್ಯಮಾತ್ರರು ಮಾಯೆಯ ಸೆಳವಿನಿಂದ ತಪ್ಪಿಸಿಕೊಳ್ಳುವುದು ಅಸಾಧ್ಯದ

[illegible]

[illegible]

[illegible]

ಮಾತು. ಆದರೆ ಈ ಮಾಯೆಯ ಸೆಳವಿನಿಂದ ತಪ್ಪಿಸಿಕೊಂಡು ಹೋಗಬೇಕಾದವರು ಅದೆಷ್ಟು ದೀರ್ಘ ಹೋರಾಟ ಮಾಡಬೇಕಾಗುತ್ತದೆಂಬುದನ್ನು 'ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿ'ಯಲ್ಲಿ ಪ್ರಭುವಿನ ಲೀಲಾರೂಪದ ಹೋರಾಟದಲ್ಲಿ ಕಾಣುತ್ತೇವೆ. ಇದನ್ನು ಸಾಂಕೇತಿಸುತ್ತದೆನ್ನುವ ಅರ್ಥದಲ್ಲಿ ಈ ಗತಿಯಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಪದ್ಯಗಳಿವೆ. ಇನ್ನೂ ಅನೇಕ ಸಾಂಕೇತಿಕ ಅಂಶಗಳನ್ನು ಕಾವ್ಯದ ವಸ್ತುವಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಚರ್ಚಿಸಲಾಗುವುದು.

೨.೪ ಕಾವ್ಯತತ್ತ್ವ-ನಿರೂಪಣೆ

ಆಗಮೋಕ್ತ ವೀರಶೈವತ್ವವು ಹನ್ನೆರಡನೆಯ ಶತಮಾನದಲ್ಲಿ ಬೃಹತ್ ಪಾತ್ರವೊಂದನ್ನು ನಿರ್ಮಿಸಿಕೊಂಡು ತುಂಬಿದ ಹೊಳೆಯಾಗಿ ಹರಿಯಿತೆಂಬುದನ್ನು ನೋಡಿದ್ದೇವೆ. ಈ ಶತಮಾನದಲ್ಲಿ ಮೂಡಿ ಬಂದ ಸಾಮಾಜಿಕ-ಧಾರ್ಮಿಕ ಕ್ರಾಂತಿಯ ಪರಿಣಾಮ ಎಷ್ಟೊಂದು ಆಳವಾಗಿತ್ತೆಂದರೆ ಮುಂದೆ ಸುಮಾರು ಮೂರು ನೂರು ವರ್ಷಗಳ ವರೆಗೆ ಮಹಮ್ಮದೀಯರ ದಾಳಿಗಳಿಗೆ ತುತ್ತಾದರೂ ಶರಣರು ಸುಳಿದಾಡಿದ್ದ ಪ್ರದೇಶಗಳಲ್ಲಿ ವೀರಶೈವಾಚಾರದ ಚಟುವಟಿಕೆಗಳು ಗುಪ್ತವಾಗಿ ಹರಿಯುತ್ತಲೇ ಬಂದವು. ಹದಿನೈದನೆಯ ಶತಮಾನದಲ್ಲಿ, ಪ್ರೌಢದೇವರಾಯನ ಕಾಲದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲಿ ನವಮನ್ವಂತರವೊಂದು ಮೂಡಿ ಬಂದಿತು. ಬಸವಾದಿ ಪ್ರಮಥರು ಶಿವಸ್ವರೂಪಿಗಳೆಂದೂ, ಪರಶಿವನೇ ಅಲ್ಲಮನಾಗಿ ತಮ್ಮನ್ನೆಲ್ಲ ಉದ್ಧರಿಸಲು ಬಂದವನೆಂದೂ ಧಾರ್ಮಿಕ ಕ್ಷೇತ್ರದವರಲ್ಲಿ ಬಲವಾದ ನಂಬುಗೆಯುಂಟಾಗಿ ಆ ಶರಣರ ಕೀರ್ತಿಯನ್ನು ಮೆರೆಯುವುದೆಂದರೆ ಮೋಕ್ಷದ ದಾರಿಯಲ್ಲಿ ನಿಖರವಾದ ಹೆಜ್ಜೆಗಳನ್ನಿಟ್ಟಂತೆ ಎಂಬ ಭಾವ ಒಡಮೂಡಿತು. ಇಂಥ ವಿಚಾರವು ಸಾಹಿತ್ಯ ರಚನೆಯ ದಿಕ್ಕನ್ನೇ ಬದಲಿಸಿತು. ಅವರ ಮುಂದೆ ಸರ್ವಾರ್ಪಣ ಭಾವದಲ್ಲಿ ನಿಂತು ರಚಿಸಿದ ಸರಳ ಸುಂದರ ವಚನಗಳಿದ್ದವು. ನಡೆ ಮತ್ತು ನುಡಿಗಳಲ್ಲಿ ಎಳ್ಳಷ್ಟೂ ವ್ಯತ್ಯಾಸವನ್ನು ತೋರದ ಶಿವಶರಣರ ಆದರ್ಶ ಜೀವನದ ಮಾದರಿಗಳಿದ್ದವು. ಇಂಥ ಶಿವಶರಣರ ಬದುಕಿನ ಔನ್ನತ್ಯಗಳನ್ನು ಕೊಂಡಾಡುವುದೆಂದರೆ ಶಿವನ ಲೀಲೆಗಳನ್ನು ಕೀರ್ತಿಸಿದಂತೆಯೇ ಎಂಬ ಭಾವ ವಾಙ್ಮಯದವರಲ್ಲಿ ನೆಲೆಯೂರಿ ನಿಂತಿತು. ರಾಜಾಶ್ರಯದಲ್ಲಿ ಬದುಕುತ್ತ ಅನ್ನದ ಋಣಕ್ಕಾಗಿ, ಕೀರ್ತಿಕಾಮನೆಗಾಗಿ ನೆಲದೊಡೆಯನು ಒಮ್ಮೊಮ್ಮೆ ಹೊಗಳಿಕೆಗೆ ಅಪಾತ್ರನಾಗಿದ್ದರೂ ಇಂದ್ರ-ಚಂದ್ರನೆಂದು ಅವನನ್ನು ಹೊಗಳಿ ಕಾವ್ಯ ಕಟ್ಟುವುದು

[illegible]

[illegible]

ಶರಣಮಾರ್ಗಕ್ಕೆ ಅಪಥ್ಯವಾಗಿ ಪರಿಣಮಿಸಿತು. ಗುರು–ಲಿಂಗ–ಜಂಗಮಕ್ಕೆ ತಮ್ಮ ತನು–ಮನ–ಧನಗಳನ್ನು ಮೀಸಲಾಗಿಟ್ಟು ಬದುಕುವುದು ಪರಮಪುರುಷಾರ್ಥವೆಂಬ ಭಾವ ಗಟ್ಟಿಯಾಗಿ ನೆಲೆಯೂರಿತು.

ಅಕ್ಷರಶಃ ವೀರಶೈವತ್ವದಲ್ಲಿ ಬದುಕುತ್ತ ದಿನಗಳನ್ನು ನೂಕುವುದು ಸುಲಭದ ಮಾತಲ್ಲ. ಭಾವ ಬೆತ್ತಲೆಯಾಗಿ ಅಲ್ಲಿ ಶಿವತ್ವವೇ ತುಂಬಿ ಸರ್ವಜೀವಿಗಳಲ್ಲಿಯೂ ಸರ್ವಸಮತಾಭಾವದಿಂದ ಬದುಕುವುದು ಈ ಮಾರ್ಗದ ಬಹುಮುಖ್ಯ ಆಶಯ. ಸಮಾಜದಲ್ಲಿ ಎಲ್ಲರಂತೆ ತಾವು ಒಬ್ಬರಾಗಿ ಅಂತರ್ಯದಲ್ಲಿ ಲಿಂಗಾನುಸಂಧಾನಿಯಾಗಿದ್ದು ನಿರುಪದ್ರವಿಗಳಾಗಿ ಬದುಕುವವರದು ಒಂದು ಗುಂಪು. ಈ ಗುಂಪಿನಲ್ಲಿ ಅಜಗಣ್ಣ, ಮರುಳುಶಂಕರದೇವ ಮೊದಲಾದವರು ಬರುತ್ತಾರೆ. ಅಂತರಂಗ–ಬಹಿರಂಗಗಳೆರಡನ್ನೂ ಏಕಮುಖವಾಗಿಸಿ ವೀರಶೈವತ್ವದ ಬಟ್ಟೆಯಲ್ಲಿದ್ದು ಸಾಮಾಜಿಕರ ನಡುವೆ ಬಿರುಗಾಳಿಯಂತೆ ಸುಳಿಯುತ್ತ, ತಾವು ನಡೆದ ದಾರಿಗಳೆಲ್ಲ ಸ್ವಚ್ಛವಾಗಿ ಕಂಗೊಳಿಸುವಂತೆ ಮಾಡುವವರದು ಇನ್ನೊಂದು ಗುಂಪು. ಇದರಲ್ಲಿ ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಎಡೆಯೂರ ಸಿದ್ಧಲಿಂಗಶಿವಯೋಗಿ ಮೊದಲಾದವರು ಬರುತ್ತಾರೆ. ಈ ಗುಂಪಿನವರು ನುಡಿದುದೇ ವೇದವಾಗುತ್ತದೆ. ನಡೆದುದೇ ದಾರಿಯಾಗುತ್ತದೆ. ಇವರು ವಿರಕ್ತರಲ್ಲಿ ವಿರಕ್ತರು; ಪರಮವಿರಾಗಿಗಳು. ಭಕ್ತರ ದೃಷ್ಟಿಯಲ್ಲಿ ಪರಶಿವನಿಗೂ ಇವರಿಗೂ ಯಾವ ವ್ಯತ್ಯಾಸವೂ ತೋರುವುದಿಲ್ಲ. ಈ ತೆರೆನಾದ ಬದುಕೇ ನಿಜವಾದ ವಿರಕ್ತರ ಬದುಕು. ಇಂಥವರು ಸಂಸಾರಿಕರಾಗಿರಬಹುದು ಇಲ್ಲವೆ ಆಗಿರದಿರಬಹುದು.

ವಿಜಯನಗರದ ನೂರೊಂದು ವಿರಕ್ತರ ಕೂಡ ಚಾಮರಸನ ಹೆಸರು ಉಕ್ತವಾಗುವುದರಿಂದ ಅವನು ವಿರಕ್ತನಾಗಿರಬಹುದು.[೮೧] ಚಾಮರಸ, ಜಕ್ಕಣಾರ್ಯ, ಲಕ್ಕಣ್ಣ ದಂಡೇಶ ಮೊದಲಾದವರು ಇವರಲ್ಲಿ ಸೇರಿದವರೆಂದು ಹೇಳಲಾಗಿದೆ.[೮೨] ಈ ನೂರೊಂದು ವಿರಕ್ತರಿಗೆ ಶಂಕರಾಚಾರ್ಯ ಸ್ವಾಮಿಗಳೆಂಬುವರು ಷಟ್ಸ್ಥಲ ಜ್ಞಾನೋಪದೇಶ ಮಾಡಿದಂತೆ ತಿಳಿಯುವುದರಿಂದ ಅವರೇ ಚಾಮರಸನಿಗೆ ಗುರುವಾಗಿದ್ದಿರಬಹುದು.[೮೩] ಹಾಗಾದರೆ ಷಟ್ಸ್ಥಲ ಜ್ಞಾನೋಪದೇಶಕ್ಕೂ ವಿರಕ್ತಿಗೂ ಇರುವ ಸಂಬಂಧವಾವುದು? ನಿಜಗುಣ ಶಿವಯೋಗಿ, ಅನಿತ್ಯದಿಂದ ಕೂಡಿದ ವನಿತಾದಿ ವಿಷಯಗಳಿಗೆ ಸಂಬಂಧಿಸಿದಂತೆ ದೋಷದರ್ಶನವಾಗುವುದು ವೈರಾಗ್ಯಕ್ಕೆ ಕಾರಣವೆಂದು ತಿಳಿಸುತ್ತಾನೆ. ವಿಷಯಗಳನ್ನೆಲ್ಲ ಬಿಟ್ಟು ತಾನು ತನ್ನ ಸ್ವರೂಪದಲ್ಲಿದ್ದು ಅವುಗಳಿಗೆ ಎರಗದಿರುವುದೇ ವಿರಕ್ತನ ಕಾರ್ಯವೆನ್ನುತ್ತಾನೆ.[೮೪] ಲೋಕದ ಜನರೆಲ್ಲ ಮೃತ್ಯುವಿಗೆ ವಶರಾಗುವವರೆಂದೂ ಪರಶಿವನು ಮೃತ್ಯುಂಜಯನೆಂದೂ ತಿಳಿಸುತ್ತ

[illegible]

[illegible]

[illegible]

ಮೃತ್ಯು ಹುಟ್ಟಿ ಅವನಲ್ಲಿಯೇ ಲಯವಾಗುವ ಆ ಮೃತ್ಯುಂಜಯನನ್ನು ಕೂಡುವ ಆಚರಣೆಯೇ ವಿರಕ್ತಿಯೆಂದೂ, ಕೇವಲ ತನುವಿರಕ್ತಿಯಿಂದ ಮುಕ್ತಿ ಸಾಧ್ಯವಿಲ್ಲವೆಂದೂ ಇದರಿಂದ ಸ್ಪಷ್ಟವಾಗುತ್ತದೆ.[೬೦] ಸಂಸಾರಯೋಗಿಯಾಗಿದ್ದರೂ ಶಿವಯೋಗಿ ಅವಿವೇಕಿಯಂತೆ ಮೋಹಿಸಿ ಕೆಡುವುದಿಲ್ಲವೆಂದು ಸರ್ಪಭೂಷಣ ಶಿವಯೋಗಿ ತಿಳಿಸುತ್ತಾನೆ.[೬೧] ಹೀಗೆ ವಿಷಯಗಳಿಗೆ ಎರಗದೆ, ಮೃತ್ಯುವಿನಿಂದ ಮುಟ್ಟಿಸಿಕೊಳ್ಳದೆ, ಮೃತ್ಯುಂಜಯನನ್ನು ಆರಾಧಿಸಿ ಮೃತ್ಯುಂಜಯನಲ್ಲಿಯೇ ಸಮರಸವಾಗುವವನು ವಿರಕ್ತನೆನಿಸುತ್ತಾನೆ. ಷಟ್ಸ್ಥಲಾಚಾರ್ಯನಾದ ಅಲ್ಲಮಪ್ರಭುವಿನ ಸನ್ಮಾರ್ಗವನ್ನು ಪ್ರತಿಪಾದಿಸಬಯಸುವ ಚಾಮರಸನು ಇಂಥ ವಿರಕ್ತಿಯನ್ನು ಹೊಂದಿದ್ದವನಾಗಿರಬೇಕು.

ಚಾಮರಸನ ಚರಿತ್ರೆ ಅವನ ಕಥಾನಾಯಕನ ಚರಿತ್ರೆಯಂತೆ ತಿಳಿದಿದ್ದು ಸ್ವಲ್ಪ ಮಾತ್ರ.[೬೨] ಅವನ ಕೃತಿಯನ್ನು ನೋಡಿದರೆ ಜ್ಞಾನ ವೈರಾಗ್ಯಗಳ ಮೂರ್ತಿಯೂ ಸ್ವತಂತ್ರ ಸಿದ್ಧಪುರುಷನೂ ಆದ ಅಲ್ಲಮನ ಜೀವಾಳವನ್ನು ಅರಿತು ಬಿತ್ತರಿಸುವುದಕ್ಕೆ ಬೇಕಾದ ವಿರಕ್ತಿ, ಸ್ವತಂತ್ರ ದೃಷ್ಟಿಗಳು ಅವನಲ್ಲಿರಬೇಕೆಂದು ಊಹಿಸಬಹುದು.[೬೩] ಪ್ರಭುಲಿಂಗಲೀಲೆಯ ಶ್ರೇಷ್ಠತೆಗೆ ಕಥಾನಾಯಕ ಮತ್ತು ಕೃತಿಕಾರ ಇವರ ಮನೋಧರ್ಮದ ಮೇಳವಿಕೆಯು ಮುಖ್ಯ ಕಾರಣವಾಗಿದೆ.[೬೪] ಷಟ್ಸ್ಥಲ ಮಾರ್ಗಾನುಸರಣೆಯನ್ನು ಹಾಸಿ ಅದನ್ನೇ ಹೊದ್ದುಕೊಂಡು ಬದುಕುತ್ತಿದ್ದ ಚಾಮರಸನ ಒಳಗಣ್ಣಿಗೆ ಶಿವಶರಣರ ನಡೆನುಡಿಯ ಮಿಂಚು ಕಾವ್ಯದ ಸ್ಪರ್ಶವನ್ನು ಒದಗಿಸಿರಬೇಕು. ಶರಣಸಮುದಾಯಕ್ಕೆ ತಾನು ಸಲ್ಲಿಸಬೇಕೆಂದುಕೊಂಡಿದ್ದ ಭಕ್ತಿಕಾಣಿಕೆಗೆ ಮೂರ್ತರೂಪ ಕೊಡಲು ಚಡಪಡಿಸುತ್ತಿದ್ದ ಶರಣಜೀವಿಗೆ ಅರ್ಥವೊಂದು ಕಾವ್ಯದ ರೂಪದಲ್ಲಿ ಮೂಡಿ ನಿಂತಿರಬೇಕು. ಇಂಥ ಶರಣಮಾರ್ಗಕ್ಕೆ ಹಾಗೂ ಆ ದಿವ್ಯಾಕಾಶದಲ್ಲಿ ಸೂರ್ಯನಂತೆ ಮೂಡಿ ನಿಂತಿದ್ದ ಅಲ್ಲಮಪ್ರಭುವಿನ ಸ್ಮರಣೆಗೆ ತಾನು ಸಲ್ಲಿಸಬೇಕೆಂದಿದ್ದ ಕಾಣಿಕೆಗಾಗಿ 'ಪ್ರಭುಲಿಂಗಲೀಲೆ' ಕಾವ್ಯದ ರೂಪದಲ್ಲಿ ಪ್ರಸಾದವನ್ನು ಸಿದ್ಧಗೊಳಿಸುವ ಸಂಕಲ್ಪವನ್ನು ಅವನು ಮಾಡಿರಬೇಕು. ಶರಣತತ್ತ್ವವನ್ನು ಅಕ್ಷರಶಃ ಒಡಮೂಡಿಸಲು ಮೂಡಿ ನಿಂತ ಸಂಕಲ್ಪದಲ್ಲಿ ಚಾಮರಸನ ಈ ಭಾವವನ್ನು ನಾವು ಕಾಣುವುದು 'ಪ್ರಭುಲಿಂಗಲೀಲೆ'ಯಲ್ಲಿ.

ಅಲ್ಲಮಪ್ರಭುವಿನ ಬದುಕನ್ನು ವಸ್ತುವಾಗಿಟ್ಟುಕೊಂಡು ಮೊಟ್ಟಮೊದಲು ಕಾವ್ಯ ರಚಿಸಿದವನು ಹರಿಹರ.[೬೫] ಈ ಕಾವ್ಯದ ಜೊತೆಗೆ ಅವನಿಂದ ರಚಿತವಾದ ಇನ್ನಿತರ ಸಾಹಿತ್ಯವು ಚಾಮರಸನ ಮುಂದಿದ್ದಿತು. ಬಸವಾದಿ ಶರಣರ ನಡೆನುಡಿಗಳು ಷಟ್ಸ್ಥಲ ವಚನಗಳ ರೂಪದಲ್ಲಿ ರಾರಾಜಿಸುತ್ತಿದ್ದವು.

[illegible]

[illegible]

[illegible]

ಈ ಶರಣರ ಆಚಾರ ವಿಚಾರಗಳನ್ನು ಕಾವ್ಯದಲ್ಲಿ ಪಡಿಮೂಡಿಸಿದ್ದ ಪಾಲ್ಕುರಿಕೆ ಸೋಮನಾಥ (೧೨೦೦), ರಾಘವಾಂಕ (೧೨೨೫), ಭೀಮಕವಿ (೧೪೦೦), ಪದ್ಮಣಾಂಕ (೧೪೦೦), ಪುಲಿಗೆರೆಯ ಸೋಮನಾಥ(೧೪೦೦) ಇವರ ಕೃತಿಗಳ ಪರಿಚಯ ಅವನಿಗಿದ್ದಿರಬೇಕು. ತನ್ನ ಸಮಕಾಲೀನ ಕೃತಿಗಳಾದ ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ', ಮಹಾಲಿಂಗದೇವನ 'ಏಕೋತ್ತರಶತಸ್ಥಲ' ಹಾಗೂ 'ಷಟ್‌ಸ್ಥಲ ವಿವೇಕ', ಜಕ್ಕಣಾರ್ಯನ 'ಏಕೋತ್ತರ ಸ್ಥಲ', ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾ ವಿಲಾಸ ಚಾರಿತ್ರ' ಮುಂತಾದವುಗಳನ್ನೂ ಅವನು ಪರಿಶೀಲಿಸಿರಬೇಕು. ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆ (೧೪೨೦)ಯ ಪರಿಚಯವೂ ಅವನಿಗಿದ್ದಿರಬೇಕು. ಇದರ ಜೊತೆಗೆ,

ಕುಱುಗಳೋಪಾದಿಯಲಿ ಕಬ್ಬಿನ
ಹೊಱಗಣೆಲೆಯನೆ ಮೇದಕಟ ಮೆಲು
ಕಿಱುವುತಲ್ಪಸುಖಕ್ಕೆ ಸೋಲದೆ ಕಬ್ಬಿನೊಳು ರಸವ
ನೆಱೆಸವಿವ ಗಜದಂತೆ ಭಕ್ತಿಯ
ತೆಱನ ತಿಳಿದಾಚರಿಸಬೇಕೆಂ
ದಱುವವರು ಲಾಲಿಸುವುದೀ ಪ್ರಭುಲಿಂಗಲೀಲೆಯನು ॥ ೯

ಎಂದು ತಿಳಿಸುವ ಅವನು ಅಲ್ಲಮಪ್ರಭು ಸಂಪ್ರದಾಯವನ್ನು ಅಂತರಂಗದಲ್ಲಿ ಕಂಡುಂಡವನಾಗಿರಬೇಕು. ಈ ಎಲ್ಲ ಅಂತರಂಗ-ಬಹಿರಂಗ ಅಂಶಗಳ ಜೊತೆಗೆ ಅವನಲ್ಲಿ ತುಂಬಿಕೊಂಡಿದ್ದ ನವನವೋನ್ಮೇಷಶಾಲಿನಿಯಾದ ಹಾಗೂ ನವನವೋಲ್ಲೆಖಶಾಲಿನಿಯಾದ ಪ್ರಜ್ಞೆ ಅಥವಾ ಅರಿವು ಪ್ರತಿಭೆಯಾಗಿ ಹೊರಬರಲು ತವಕಿಸುತ್ತಿದ್ದಿರಬೇಕು. ಇಂಥ ದಟ್ಟ ತಿಳುವಳಿಕೆಯ ಹಿನ್ನೆಲೆಯಲ್ಲಿ ಚಾಮರಸನ ಕವಿ ಹೃದಯದಿಂದ ಮೂಡಿ ಬಂದ ಕಾವ್ಯವೇ 'ಪ್ರಭುಲಿಂಗಲೀಲೆ'.

ಅಲ್ಲಮಪ್ರಭು ಸಂಪ್ರದಾಯ, ಷಟ್ಸ್ಥಲಾಚರಣೆ ಹಾಗೂ ಶಿವಯೋಗಾಚರಣೆ ಇವು ಒಂದೇ ಕ್ರಿಯೆಯ ಮೂರು ಬೇರೆ ಬೇರೆ ಹೆಸರುಗಳೆಂಬುದನ್ನು 'ಯೋಗದರ್ಶನ'ದಲ್ಲಿ ನೋಡಿದ್ದೇವೆ. ಶಿವಯೋಗದ ತಾತ್ವಿಕ ಅಂಶಗಳನ್ನು ಪದ್ಯರೂಪದಲ್ಲಿ ತರುವುದರಿಂದ ಲೌಕಿಕ ಹೃದಯಿಗರಿಗೆ ಅದು ರಸಾನುಭೂತಿಯನ್ನುಂಟು ಮಾಡುವುದು ಸಾದ್ಯವಿಲ್ಲವೆಂದು ತಿಳಿದಿದ್ದ ಚಾಮರಸ ಅದಕ್ಕೆ ಸಾಂಕೇತಿಕ ಅರ್ಥವನ್ನು ಹುಡುಕತೊಡಗಿರಬೇಕು. ಇಂಥ ಸಂಕೇತಗಳನ್ನು ರೂಪಿಸಲು ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸಿ

[illegible]

[illegible]

[illegible]

[illegible]

[illegible]

ಶಿವನ ಯಾವುದಾದರೊಂದು ಲೀಲೆಯನ್ನು ಆಯ್ದುಕೊಂಡು ಕಾವ್ಯದ ನೆಯ್ಗೆಯನ್ನು ಸಿದ್ಧಪಡಿಸಬಹುದಾಗಿತ್ತು. ಬಸವಾದಿ ಶರಣರ ನಡೆನುಡಿಗಳಿಗೆ ಮಾರು ಹೋಗಿದ್ದ ಅವನು ಈ ಶರಣ ಸಮುದಾಯದವರನ್ನೇ ಸಂಕೇತಗಳಿಗಾಗಿ ಆಯ್ಕೆ ಮಾಡಿಕೊಳ್ಳಲು ಆಲೋಚಿಸಿದಾಗ ಕಾವ್ಯಕ್ಕೆ ಹೊಸ ರೂಪವೊಂದು ಗೋಚರಿಸತೊಡಗಿರಬೇಕು. ತನ್ನ ಬದುಕನ್ನು ಅಲ್ಲಮಪ್ರಭುವಿನ ದಿವ್ಯಸನ್ನಿಧಿಗೆ ಸಮರ್ಪಿಸಲು ಬಯಸುತ್ತಿದ್ದ ಕವಿಗೆ ಅಲ್ಲಮನೇ ಪರಶಿವನ ಸಂಕೇತವಾಗಿ ಮೂಡಿ ನಿಂತಿರಬೇಕು. ಶಿವಯೋಗವನ್ನು ಕಾವ್ಯದ ವಸ್ತುವಾಗಿರಿಸಿಕೊಂಡು, ಪರಶಿವನನ್ನು ಅಲ್ಲಮನ ರೂಪದಲ್ಲಿ ಸ್ವೀಕರಿಸಿ ಇಬ್ಬರ ಲೀಲೆಯನ್ನು ಕಾವ್ಯದ ವಸ್ತುವನ್ನಾಗಿ ಮಾಡಲು ನಿರ್ಧರಿಸಿರಬೇಕು. ಈ ಎಲ್ಲವುಗಳನ್ನೂ ಒಂದು ಕ್ರಿಯೆಯಲ್ಲಿ ಎರಕ ಹೊಯ್ದಂತೆ ಚಾಮರಸನು ಕಾವ್ಯವನ್ನು ಸೃಷ್ಟಿಸಿರುವುದಕ್ಕೆ ಸಾಕ್ಷಿಯಾಗಿ 'ಪ್ರಭುಲಿಂಗಲೀಲೆ' ನಮ್ಮ ಮುಂದಿದೆ.

'ಲೋಕವೆಂದರೆ ಚರಾಚರಗಳೆಲ್ಲವನ್ನೂ ಒಳಗೊಂಡ ವಿಶ್ವದ ನಡವಳಿಕೆ'[೯೭] ಎಂಬುದನ್ನು ನೋಡಿದ್ದೇವೆ. ಜೀವಿಗಳನ್ನು ಅಂಡಜ, ಸ್ವೇದಜ, ಉದ್ಬಿಜ ಹಾಗೂ ಜರಾಯುಜ ಎಂದು ನಾಲ್ಕು ಪ್ರಕಾರಗಳಲ್ಲಿ ಹೆಸರಿಸಲಾಗಿದೆ.[೯೮] ಇವುಗಳಲ್ಲಿ ಮಾನವ ಜನ್ಮಕ್ಕೆ ಸಂಬಂಧಿಸುವ ಜರಾಯುಜದಲ್ಲಿ ಉಂಟಾಗುವ ಕ್ರಮವನ್ನು ನಿಜಗುಣ ಶಿವಯೋಗಿಯು ಅರ್ಥಪೂರ್ಣವಾಗಿ ಹೇಳಿದ್ದಾನೆ. ಸ್ವರ್ಗದಲ್ಲಿ ಮಹಾಸುಖಭೋಗವನ್ನುಂಡು ಅದು ತೀರಿದಾಗ ಜನ್ಮದ ಪುನರಾವೃತ್ತಿ ಪ್ರಾರಂಭವಾಗುತ್ತದೆಂದು ತಿಳಿಸುತ್ತ ಅದು ಗಗನ, ವಾಯು, ಧೂಮ, ಮೇಘ, ವೃಷ್ಟಿ, ಅನ್ನ ಹೀಗೆ ಕ್ರಮವಾಗಿ ಬರುತ್ತದೆಂದೂ ಬಳಿಕ ಪಂಚಭೂತಾತ್ಮಕವಾದ ಆಹಾರವು ಪಚನಕ್ಕೆ ಆಧಾರವಾಗುತ್ತದೆಂದೂ ತಿಳಿಸುತ್ತಾನೆ. ಜೀವನ ವ್ಯಾಪಾರ ಪ್ರಾರಂಭವಾಗಲು ಇದು ಮಲರೂಪ ಮತ್ತು ರಸರೂಪದಿಂದ ಸಹಾಯಕವಾಗುತ್ತದೆ. ಈ ಕ್ರಮದಲ್ಲಿಯೇ ಪುರುಷನ ಶುಕ್ಲವು ವಾಯುವಶದಿಂದ ಸ್ತ್ರೀಯ ಗರ್ಭಕೋಶವನ್ನು ಪ್ರವೇಶಿಸಿ ಅಲ್ಲಿ ಜರ ಹಾಗೂ ಆಯುವೆಂಬೆರಡು ಮಾಂಸರೂಪಗಳನ್ನು ಆಶ್ರಯಿಸಿ ಪಿಂಡವು ಉದಿಸುತ್ತದೆ. ಶೈಶವ, ಬಾಲ್ಯ, ತಾರುಣ್ಯ, ಪ್ರೌಢಾವಸ್ಥೆ, ಮುಪ್ಪು ಇವುಗಳನ್ನು ದಾಟುವ ಜೀವಿಯು ಪುಣ್ಯಪ್ರಾಪ್ತಿಯಿಂದ ಚತುರ್ವಿಧ ಮುಕ್ತಿಗಳನ್ನು ಕ್ರಮಿಸಿ ಶಿವತತ್ತ್ವವನ್ನು ಹೊಂದುತ್ತಾನೆಂದೂ ಪುಣ್ಯಹೀನನಾಗಿ ಕರ್ಮ, ಭಕ್ತಿ, ಯೋಗ, ಜ್ಞಾನ ಮುಂತಾದವುಗಳನ್ನು ಕಳೆದುಕೊಂಡವನು ನರಕಕ್ಕೆ ಭಾಜನನಾಗುತ್ತಾನೆಂದೂ ತಿಳಿಸುತ್ತಾನೆ.[೯೯]

ಇದು ಪಿಂಡಾಂಡದ ಆಗಮನ-ನಿರ್ಗಮನ ಅಥವಾ ಆದರ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಸಂಬಂಧಿಸಿದ ವಿಚಾರ. ಇನ್ನು ಬ್ರಹ್ಮಾಂಡದ ವಿಚಾರ. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಇವು ಪಂಚಭೂತಗಳೆಂದೂ ಇವುಗಳಿಂದಾದ ಪ್ರಕ್ರಿಯಾತ್ಮಕ ರೂಪಗಳೇ ಬ್ರಹ್ಮಾಂಡದ ಅಂಶಗಳೆಂದೂ ತತ್ತ್ವಜ್ಞಾನಿಗಳು ತಿಳಿಸುತ್ತಾರೆ. ಇವು ಸೃಷ್ಟಿಯ ಯಾವುದೇ ರೂಪವನ್ನು ವಿವರಿಸಲು ಪ್ರಯೋಗಿಸುವ ಪ್ರಾರಂಭಿಕ ಅಂಶಗಳು. ಇವುಗಳಲ್ಲಿ ಪೃಥ್ವಿತತ್ತ್ವವು ಉಳಿದ ನಾಲ್ಕೂ ತತ್ತ್ವಗಳ ಗುಣಗಳನ್ನು ಒಳಗೊಂಡಿರುವಂಥದು. ಜಡತ್ವವು ಇದರ ಮೂಲ ಲಕ್ಷಣ. ಇದು ತನ್ನಲ್ಲಿ ಜಲವನ್ನು ಒಳಗೊಂಡಿದೆ, ಅಗ್ನಿಯಂತೆ ಸುಡುತ್ತದೆ, ಗಾಳಿಯಂತೆ ಚಲನೆಯನ್ನು ಹೊಂದಿದೆ, ಆಕಾಶದಂತೆ ಶಬ್ದವನ್ನುಂಟು ಮಾಡುತ್ತದೆ. ಜಲದಲ್ಲಿ ಉಷ್ಣವನ್ನುಂಟು ಮಾಡುವ ಅಗ್ನಿಯ ಗುಣವಿದೆ, ವಾಯುವಿನ ಚಲನೆಯಿದೆ ಹಾಗೂ ಆಕಾಶದ ಶಬ್ದವೂ ಇದೆ. ಅಗ್ನಿಯಲ್ಲಿ ವಾಯುವಿನಂತೆ ಚಲಿಸುವ ಮತ್ತು ಆಕಾಶದಂತೆ ಶಬ್ದವನ್ನುಂಟು ಮಾಡುವ ಗುಣಗಳಿವೆ.ಕೊನೆಯದಾಗಿ ವಾಯುವಿನಲ್ಲಿ ಶಬ್ದೋತ್ಪತ್ತಿ ಇದೆ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಮೊದಲ ತತ್ತ್ವವು ಆಕಾಶವೆಂದೂ ಆದರೊಂದಿಗೆ ಬೇರೆ ಗುಣಗಳು ಸೇರುವುದರಿಂದಾಗಿ ಉಳಿದ ತತ್ತ್ವಗಳು ಉಂಟಾದುವೆಂದೂ ತಿಳಿಯುತ್ತದೆ.[೧೦೦]

ಮಾಯೆಯೆಂಬುದು ಬಯಲು. ಅದರಿಂದ ಬ್ರಹ್ಮ, ವಿಷ್ಣು, ರುದ್ರ ಎಂಬ ತ್ರಿಮೂರ್ತಿಗಳಾಗಿ ಅವರು ಸೃಷ್ಟಿ, ಸ್ಥಿತಿ, ಲಯಗಳಿಗೆ ಕರ್ತೃಗಳಾದರು. ಅಲ್ಲಿ ಅಹಂಕಾರದಿಂದ ಹಲವು ಶಾಖೆಗಳಾಗಿ ಅವು ಬಂಧನದಲ್ಲಿ ಸಿಲುಕಿ ಅಲ್ಲಿಯೇ ಹುಟ್ಟುತ್ತ ಅಲ್ಲಿಯೇ ಲಯವನ್ನು ಹೊಂದುತ್ತಲಿರುವುವು. ಇವೆಲ್ಲ ಆಕಾಶದಲ್ಲಿ ಹುಟ್ಟಿ ಆದರಲ್ಲಿಯೇ ಕರಗುವಂಥವು. ಆದುದರಿಂದ ಆಕಾಶವೇ ಸಾಕ್ಷಾತ್ ಬ್ರಹ್ಮಸ್ವರೂಪವು, ಅದೇ ನಿಶ್ಚಲವಾದ ನಿರಾಲಂಬ.[೧೦೧] ಈ ವಿವರಣೆಗಳಿಗೆ ಸರಿಸಮವಾದ ಶರಣರ ವಚನವೊಂದು ಹೀಗಿದೆ.

ಏನೆಂದೆನಲಿಲ್ಲದ ಮಹಾಘನವು
ತನ್ನ ಲೀಲೆಯಿಂದ ತಾನೇ ಸ್ವಯಂಭು ಲಿಂಗವಾಯಿತ್ತು!
ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ,
ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ,
ಆತ್ಮನಿಂದಾದುದು ಆಕಾಶ,
ಆಕಾಶದಿಂದಾದುದು ವಾಯು,

[illegible]

[illegible]

[illegible]

ವಾಯುವಿನಿಂದಾದುದು ಅಗ್ನಿ,

ಅಗ್ನಿಯಿಂದಾದುದು ಅಪ್ಪು,

ಅಪ್ಪುವಿನಿಂದಾದುದು ಪೃಥ್ವಿ,

ಪೃಥ್ವಿಯಿಂದಾದುದು ಸಕಲ ಜೀವವೆಲ್ಲಾ.

ಇವೆಲ್ಲಾ ನಿಮ್ಮ ನೆನಹು ಮಾತ್ರದಿಂದಾದವು

ಸಿಮ್ಮಲಿಗೆಯ ಚೆನ್ನರಾಮಾ. [೧೦೨]

ಹೀಗೆ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಎಂಬ ಶಿವನ ಅಷ್ಟ ತನುವೆ ಜಗತ್ತಾಗಿಹುದು.[೧೦೩]

ಈ ನಿರಾಲಂಬವನ್ನು ಸ್ವಯಂಭು ಎಂದೂ, ಮಹಾಘನವೆಂದೂ ನಿಶ್ಶೂನ್ಯವೆಂದೂ ಬಯಲೆಂದೂ ಶಿವಶರಣರು ಕರೆದಿದ್ದಾರೆ. ಬೆಳಕಿನ ಮಹಾನ್ ಆಕರ ಅಥವಾ ಕೋಟಿಸೂರ್ಯಪ್ರಭೆ ಎಂದು ಗುರುತಿಸಲ್ಪಡುವ ಇದನ್ನು ಶಿವಶರಣರು ವಚನಗಳಿಗೆ ಸಂಕೇತದ ರೂಪದಲ್ಲಿ ಸ್ವೀಕರಿಸಿದ್ದಾರೆ.

ವೇದನಾದಾತೀತನು : ತುರಿಯ ಪರಮಾನಂದನು

ನಿರವಯ ; ಸೂರ್ಯಕೋಟಿ ಪ್ರಭೆಯ ಬೆಳಗಿನ ಸಹಸ್ರ ಕಿರಣದ

ಅಗ್ರಪಟಲದ ಬೆಳಗು ಕೂಡಲಸಂಗಯ್ಯನು. ೧೦೪

ಈ ವಚನವು ಮೇಲಿನ ಹೇಳಿಕೆಗೆ ಸಾಕ್ಷಿಯಾಗುತ್ತದೆ. ಇದು ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಲಯಗಳಿಗೆ ಸಂಬಂಧಿಸಿದ ವಿಚಾರ. ಬ್ರಹ್ಮಾಂಡಕ್ಕೂ ಪಿಂಡಾಂಡಕ್ಕೂ ಈ ಕ್ರಮವನ್ನು ಪೂರೈಸುವುದಕ್ಕೆ ಸಮಾನ ಗುಣಗಳಿವೆಯೆಂದು ತಿಳಿಸುತ್ತ ಎರಡಕ್ಕೂ ಆದಿ ಮತ್ತು ಅಂತ್ಯ ಆ ನಿರಾಲಂಬ ಸ್ಥಿತಿಯೇ ಎಂದು ಶರಣರ ಅಭಿಪ್ರಾಯವಾಗಿದೆ.[೧೦೫]

ವಿಜ್ಞಾನದ ದೃಷ್ಟಿಯಲ್ಲಿ [illegible] ಸೃಷ್ಟಿಯ ಮೂಲ ಬೆಳಕು. ಪ್ರೋಟಾನ್, ಎಲೆಕ್ಟ್ರಾನ್ ಮತ್ತು ನ್ಯೂಟ್ರಾನ್ ಎಂಬ ಮೂರು ಬೆಳಕಿನ ಕಣಗಳಿಂದ ಪ್ರತಿಯೊಂದು ಮೂಲವಸ್ತು ನಿರ್ಮಾಣವಾಗಿದೆಯೆಂದೂ ಈ ಮೂಲವಸ್ತುಗಳ ರಾಸಾಯನಿಕ ಕ್ರಿಯೆಗಳಿಂದಾಗಿ ಲಕ್ಷಾಂತರ ಸಂಯುಕ್ತ ವಸ್ತುಗಳು ನಿರ್ಮಾಣವಾಗಿವೆಯೆಂದೂ ವಿಜ್ಞಾನಿಗಳು ಸಾಧಿಸಿದ್ದಾರೆ. ಹೀಗೆ ಸೃಷ್ಟಿಯ ಉತ್ಪತ್ತಿಯ ವಿಷಯದಲ್ಲಿ ತತ್ತ್ವಶಾಸ್ತ್ರ ಮತ್ತು ವಿಜ್ಞಾನ ಎರಡೂ ಬೆಳಕೇ ಅದರ ಮೂಲವೆಂದು ತಿಳಿಸುತ್ತವೆ.[೧೦೬]

ಇಂದಿನ ವಿಜ್ಞಾನ ಪ್ರಾಯೋಗಿಕ ತಳಹದಿಯ ಮೇಲೆ ಪ್ರತಿಪಾದಿಸಿದ ವಿಶ್ವೋತ್ಪತ್ತಿ ಸಿದ್ಧಾಂತವನ್ನು ಶರಣರು ತಮ್ಮ ಅನುಭಾವದ ಒಳಗಣ್ಣಿನಿಂದ ಪ್ರತಿಪಾದಿಸಿರುವುದು ಅದ್ಭುತವಾದ ಸಂಗತಿಯಾಗಿದೆ.[೧೦೭]

ಬ್ರಹ್ಮಾಂಡಕ್ಕೂ ಪಿಂಡಾಡಕ್ಕೂ ಪರಶಿವತತ್ತ್ವವು ಮೂಲವಾಗಿದೆ. ಅಲ್ಲಿಂದಲೇ ಜೀವಾತ್ಮನು ಹೊರಬಂದು ಅಲ್ಲಿಯೇ ಸಮರಸವಾಗುವ ಕ್ರಮವನ್ನು ಶಿವಯೋಗವು ಪ್ರತಿಪಾದಿಸುತ್ತದೆ. ನಿಜಗುಣ ಶಿವಯೋಗಿಯು ತಿಳಿಸಿದಂತೆ ಪುಣ್ಯಪ್ರಾಪ್ತಿಯಿಂದ ಚತುರ್ವಿಧ ಮುಕ್ತಿಗಳನ್ನು ಕ್ರಮಿಸಿ ಶಿವತತ್ತ್ವವನ್ನು ಹೊಂದುವುದು ಹಾಗೂ ಪುಣ್ಯಹೀನನಾಗಿ ಕರ್ಮ, ಭಕ್ತಿ, ಯೋಗ, ಜ್ಞಾನ ಇವುಗಳನ್ನು ಕಳೆದುಕೊಂಡು ನರಕಕ್ಕೆ ಭಾಜನವಾಗುವುದು ಇವೆರಡರಲ್ಲಿ ಶಿವಯೋಗವು ಮೊದಲನೆಯದನ್ನು ಪುರಸ್ಕರಿಸುತ್ತದೆ. ಈ ಶಿವ ಯೋಗವನ್ನು ಕಾವ್ಯದಲ್ಲಿ ವಸ್ತುವನ್ನಾಗಿ ಇಟ್ಟುಕೊಂಡಿರುವ ಚಾಮರಸನು ಪ್ರಭುಲಿಂಗಲೀಲೆಯ ಕ್ರಿಯೆ (action) ಯನ್ನು ರೂಪಿಸಿರುವುದನ್ನು ಮುಂದೆ ಪರಿಶೀಲಿಸಲಾಗುವುದು.

೨.೫ ಪ್ರಭುಲಿಂಗಲೀಲೆಯ ವಾಚ್ಯ-ವ್ಯಂಗ್ಯ -ಧ್ವನಿ

ಕಲಾಕೃತಿಯೊಂದನ್ನು ಪರಿಶೀಲಿಸುವಾಗ ವಾಚ್ಯಾರ್ಥಕ್ಕೆ ಮೊದಲ ಪ್ರಾಶಸ್ತ್ಯವಿರುತ್ತದೆ. ಆ ನಂತರ ಲಕ್ಷ್ಯಾರ್ಥ ಹಾಗೂ ಧ್ವನ್ಯಾರ್ಥ ಸ್ಥಾನ ಪಡೆಯುತ್ತವೆ. ಈ ಮಾತು ಕಾವ್ಯಪ್ರಕಾರಕ್ಕೂ ಅನ್ವಯಿಸುತ್ತದೆ. ಇದಕ್ಕೆ ಕಾರಣ ಸುಲಭವಾಗಿದೆ. ಮನುಷ್ಯಮಾತ್ರರು ಬಾಹ್ಯ ಜಗತ್ತಿನೊಂದಿಗೆ ಮೊದಲು ಸಂಪರ್ಕಿಸುವುದು ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು. ಆ ನಂತರ ಆರನೆಯ ಇಂದ್ರಿಯವೆಂದು ತಿಳಿಯಲ್ಪಡುವ ಮನವನ್ನು ಸಾಧನ ಮಾಡಿಕೊಂಡಾಗ ಲಕ್ಷ್ಯಾರ್ಥವು ಸ್ಫುರಿಸತೊಡುಗುತ್ತದೆ. ನೇರವಾಗಿ ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ಬಾಹ್ಯ ಜಗತ್ತಿನೊಂದಿಗೆ ವರ್ತಿಸುವುದನ್ನು ಪಾಶ್ಚಾತ್ಯ ಸಾಹಿತ್ಯ ಕ್ಷೇತ್ರದಲ್ಲಿ sensual approach ಎಂದು ಗುರುತಿಸಿದ್ದರೆ ಮನವನ್ನು ಸಾಧನ ಮಾಡಿಕೊಳ್ಳುವ ವರ್ತನೆಯನ್ನು sensuous approach ಎಂದು ಗುರುತಿಸಿದ್ದಾರೆ. ಆರನೆಯ ಇಂದ್ರಿಯದಿಂದ ಆಚೆಗೆ ಸರಿದು ಚಿತ್ತವನ್ನು ಸಾಧನ ಮಾಡಿಕೊಂಡಾಗ ಧ್ವನ್ಯಾರ್ಥವು ಹೊಳೆಯತೊಡಗುತ್ತದೆ. ನಾವು ಈಗಾಗಲೇ ನೋಡಿರುವಂತೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ಮನಸ್ಸು ಮತ್ತು ಚಿತ್ತ ಇವು ಬೇರೆ ಬೇರೆ ಎಂದು ತಿಳಿಯಲಾಗಿದ್ದರೆ ಆಧುನಿಕ ಮನಃ ಶಾಸ್ತ್ರವು ಚಿತ್ತವನ್ನು ಒಳಮನಸ್ಸು ಎಂದು ತಿಳಿದು ವಿವರಣೆಗೆ ತೊಡಗುತ್ತದೆ. ವೈಶಿಷ್ಟ್ಯವೆಂದರೆ ಚಿತ್ತದ ಪರಿಪಾಕವನ್ನು ಹೊಂದಿದ ಯೋಗಿಗಳು ಅರ್ಥವ್ಯಾಪ್ತಿಯನ್ನು

ದಿಗಂತದವರೆಗೆ, ಅನಂತದ ವರೆಗೆ ಹೊಂದಿರುತ್ತಾರೆ. ಈ ಹಂತದಲ್ಲಿ ಧ್ವನ್ಯಾರ್ಥವು ಏಕಮುಖಿಯಾಗುವ ಬದಲಾಗಿ ಬಹುಮುಖಿಯಾಗಿ ವರ್ತಿಸತೊಡಗುತ್ತದೆ. ಇಂಥ ನವನವೋನ್ಮೇಷಶಾಲಿನಿಯಾದ ಪ್ರಜ್ಞೆಯಿಂದಾಗಿ ಕವಿಕಾರ್ಯವು ವಿವಿಧ ಮುಖಗಳನ್ನು ಪಡೆಯುತ್ತದೆ ಹಾಗೂ ಸಹೃದಯರಿಗೆ ರಸಾಸ್ವಾದವನ್ನುಂಟು ಮಾಡುವಲ್ಲಿ ಮೇಲ್ಪಂಕ್ತಿಯನ್ನು ಪಡೆದುಕೊಳ್ಳುತ್ತದೆ. ಚಿತ್ತದ ಪರಿಪಾಕವನ್ನು ಹೊಂದಿದ್ದ ಚಾಮರಸ ಅಲ್ಲಮನ ಚರಿತ್ರೆಯನ್ನು, ಪ್ರಭುಲೀಲೆಯನ್ನು ಹಾಗೂ ಶಿವಯೋಗವನ್ನು ಅಸದೃಶವಾಗಿ ಮೇಳೈಸಿ ಕಾವ್ಯವನ್ನು ರಚಿಸಿದ್ದಾನೆ. ಅಲ್ಲಿ ವಾಚ್ಯಾರ್ಥದ ರೂಪದಲ್ಲಿ ಅಲ್ಲಮನ ಚರಿತ್ರೆ ಗೋಚರಿಸಿದರೆ, ಲಕ್ಷ್ಯಾರ್ಥದ ರೂಪದಲ್ಲಿ ಪ್ರಭುಲೀಲೆಯು ಹೊಳೆಯುತ್ತದೆ ಹಾಗೂ ಧ್ವನ್ಯಾರ್ಥದ ರೂಪದಲ್ಲಿ ಶಿವಯೋಗವು ಮೈದಾಳುತ್ತದೆ. ಇಂಥ ಸಮನ್ವಯವನ್ನು ಅತ್ಯುನ್ನತ ಮಟ್ಟದಲ್ಲಿ ಸಾಧಿಸಿ ರಚಿಸಿದ ಪ್ರಭುಲಿಂಗಲೀಲೆಯನ್ನು ಮೊದಲು ವಾಚ್ಯಾರ್ಥದಲ್ಲಿ ಪರಿಶೀಲಿಸಲಾಗುವುದು.

(ಅ) ವಾಚ್ಯ : ಅಲ್ಲಮಪ್ರಭು ಚರಿತ್ರೆಯ ರೂಪದಲ್ಲಿ

ಒಂದಾನೊಂದು ದಿನ ಶಿವನ ಒಡ್ಡೋಲಗದಲ್ಲಿ ಪಾರ್ವತಿ 'ಶಿವನೆ, ನಿನ್ನೊಡ್ಡೋಲಗದೊಳೊಪ್ಪುವ ಮಹಾಘನ ಮಹಿಮರೆಲ್ಲರು ಭವಕೆ ಬಾರದೆ ನಿತ್ಯಸುಖದಿಂದಿಪ್ಪರೋ ಮೇಣು ಇವರಿಗೆಯು ನೆಲೆಯಿಲ್ಲವೊ?' ಎಂದು ಕೇಳುತ್ತಾಳೆ. ಆಗ ಶಿವನು ನಾಮರೂಪ ಕ್ರಿಯೆಗಳನ್ನು ಗೆಲಬಲ್ಲವರಿಗೆ ಮಾತ್ರ ನಿತ್ಯಸುಖವೆಂದೂ ಅದಕ್ಕಾಗಿ ಅವರು ಭೂಮಿಯಲ್ಲಿ ಮಾನವ ಶರೀರಿಗಳಾಗಿ ಜನಿಸಿ ಸಾಧನೆ ಮಾಡಿ ನಿಜವನರಿಯ ಬೇಕಾಗುವುದೆಂದೂ ತಿಳಿಸುತ್ತಾನೆ. 'ಭೂಲೋಕದಲ್ಲಿ ನಿಜವನ್ನು ಬೋಧಿಸುವ ಗುರು ಯಾರು?' ಎಂದು ಪಾರ್ವತಿ ಕೇಳುತ್ತಾಳೆ. 'ಸುಜ್ಞಾನಿ ನಿರಹಂಕಾರರೆಂಬವರಿಗೆ ಮಗನಾದ, ನನ್ನ ನಿಜಸ್ವರೂಪನಾದ ಅಲ್ಲಮನು' ಎಂದು ಶಿವನು ನುಡಿಯುತ್ತಾನೆ. ಪಾರ್ವತಿಯು, ಅಲ್ಲಮನು ತನಗೆ ಗೊತ್ತಿದ್ದವನಾದುದರಿಂದ ತಾನು ಅವನನ್ನು ಸುಲಭವಾಗಿ ವಶಪಡಿಸಿಕೊಂಡು ನಿಜತತ್ತ್ವವನ್ನು ತಿಳಿಯುವೆನೆಂದು ಪೈಜೆ ಮಾಡಿ ತನ್ನ ತಾಮಸ ಗುಣದ ಮೂರುತಿಯಾದ ಮಾಯೆಯನ್ನು ಆ ಕಾರ್ಯಕ್ಕೆ ತೊಡಗಿಸುತ್ತಾಳೆ.

ಮಾಯೆಯು ಬನವಸೆಯ ರಾಜದಂಪತಿಗಳಾದ ಮಮಕಾರ ಮೋಹಿನಿಯರಿಗೆ ಮಗಳಾಗಿ ಜನಿಸುತ್ತಾಳೆ. ದಿನಗಳು ಕಳೆದಂತೆ ಅವಳು ಬೆಳೆಯುತ್ತ ಬೆಳೆಯುತ್ತ ರೂಪಯೌವನಸಂಪನ್ನಳಾಗಿ ಹರಯಕ್ಕೆ

[illegible]

[illegible]

[illegible]

[illegible]

ಬರುತ್ತಾಳೆ. ಅವಳಿಗೆ ತಕ್ಕ ವರನ ವಿಚಾರವಾಗಿ ಮಮಕಾರಭೂಪಾಲನು ಆಲೋಚಿಸುತ್ತಿದ್ದಾಗ ಅವನ ಕುಲಗುರುವಾದ ಅಹಂಕಾರಾಚಾರ್ಯನು ಬಂದು ಅವಳಿಗೆ ಪರಶಿವನೇ ಯೋಗ್ಯನಾದ ಪತಿಯೆಂದು ಹೇಳಿ, ಅವಳಿಗೆ ಪರಶಿವನನ್ನು ಒಲಿಸಿಕೊಳ್ಳುವ ಮಂತ್ರೋಪದೇಶವನ್ನು ಮಾಡಿ ಹೊರಟು ಹೋಗುತ್ತಾನೆ.

ಮಾಯೆ ಮಧುಕೇಶ್ವರನ ದೇವಾಲಯಕ್ಕೆ ನಿತ್ಯವೂ ಹೋಗಿ ಪೂಜೆ ಸಲ್ಲಿಸುತ್ತಿರುತ್ತಾಳೆ. ಒಂದು ದಿನ ಅವಳು ಲಾಸ್ಯ ಸೇವೆಯನ್ನು ಸಲ್ಲಿಸಿ ಪ್ರಸಾದ ತೆಗೆದುಕೊಂಡು ಕುಳಿತಿರುವಾಗ ಅಲ್ಲಮನು ಮದ್ದಳೆಕಾರನಾಗಿ ಬಂದು ಗುಡಿಯ ಹೊರಗಡೆ ನಿಂತು ಎಲ್ಲರಿಗೂ ಆಶ್ಚರ್ಯವಾಗುವಂತೆ ಮದ್ದಳೆಯನ್ನು ಬಾರಿಸತೊಡಗುತ್ತಾನೆ. ರಂಗಮಂಟಪದಲ್ಲಿದ್ದ ಮಾಯಾದೇವಿ ಅವನನ್ನು ಒಳಕ್ಕೆ ಕರೆಯಿಸುತ್ತಾಳೆ. ಆತನನ್ನು ನೋಡಿದ ಕೂಡಲೇ ಮೋಹಪರವಶಳಾಗಿ ಅವನನ್ನು ನಾಟ್ಯಾಚಾರ್ಯನಾಗಿ ನೇಮಿಸಿಕೊಂಡು ತನ್ನ ಅಂತಃಪುರದಲ್ಲಿಯೇ ಒಂದೆಡೆ ಬಿಡಾರ ಮಾಡಿಸುತ್ತಾಳೆ. ರಾತ್ರಿ ಇಬ್ಬರೂ ಒಂದೇ ಸ್ಥಳದಲ್ಲಿದ್ದರೂ ನಿರ್ಲಿಪ್ತನಾದ ಅವನು ತನಗೆ ವಶನಾಗದೆ ನಿರ್ಮೋಹಿಯಾಗಿರುವುದನ್ನು ಕಂಡು ಶೋಕಾಶ್ಚರ್ಯಭರಿತಳಾಗುತ್ತಾಳೆ. ಮಾಯೆ ತನ್ನ ಕಾರ್ಯವನ್ನು ಮಾಡಲಿಕ್ಕೆ ತಡ ಮಾಡಿದಳೆಂದು ಬಗೆದ ಪಾರ್ವತಿ ಅವಳನ್ನು ಎಚ್ಚರಿಸುವುದಕ್ಕಾಗಿ ವಿಮಳೆಯನ್ನು ಕಳಿಸುತ್ತಾಳೆ.

ವಿಮಳೆ ಬನವಸೆಗೆ ಬಂದು ಮಾಯಾದೇವಿಗೆ ಅಲ್ಲಮನು ಯಾರೆಂಬುದನ್ನು ತಿಳಿಸುತ್ತಾಳೆ. ಮಾಯೆ, 'ಇವನೇನು ಆ ಪರಬ್ರಹ್ಮನಾದ ಅಲ್ಲಮನೆ, ಮದ್ದಳೆಯಲ್ಲಮನು, ನೀನು ಹೇಳುವುದೆಲ್ಲ ಸುಳ್ಳು' ಎಂದು ಉತ್ತರಿಸುತ್ತಾಳೆ. ವಿಮಳೆ 'ವಿಷಯ ವಿಕಳತೆಯನ್ನು ಬಿಟ್ಟು ಸಾತ್ವಿಕ ಬುದ್ಧಿಯಿಂದ ನೋಡಿದರೆ ಗೊತ್ತಾಗುತ್ತದೆ' ಎಂದು ಹೇಳುತ್ತಾಳೆ. ಅವನ ರಹಸ್ಯವನ್ನು ತಿಳಿದುಕೊಳ್ಳಲು ಇಬ್ಬರೂ ಕೂಡಿ ಮಧುಕನಾಥನ ದೇವಾಲಯಕ್ಕೆ ಬರುತ್ತಾರೆ. ಅಲ್ಲಮನನ್ನು ತನ್ನಲ್ಲಿ ಒಲಿಸಿಕೊಳ್ಳಲೆತ್ನಿಸಿದ ಮಾಯೆಯನ್ನು ನೋಡಿ ಅವನು ಅವಳ ಉದ್ದೇಶವನ್ನು ಅರಿತವನಾಗಿ ಮದ್ದಳೆಯನ್ನು ಬಿಸುಟು ಅಲ್ಲಿಂದ ಹೊರಟು ಹೋಗುತ್ತಾನೆ. ಶೋಕಸಂತಪ್ತಳಾದ ಮಾಯೆಗೆ ವಿಮಳೆ ಸಮಾಧಾನ ಹೇಳುತ್ತಾಳೆ. ಮಾಯೆ ವಿಮಳೆಯೊಂದಿಗೆ ಅರಣ್ಯವನ್ನು ಪ್ರವೇಶಿಸಿ, ಕಲ್ಲುಮುಳ್ಳುಗಳ ದಾರಿಯನ್ನು ನಡೆದು, ಬಿಸಿಲು ಸುಂಟರಗಾಳಿಗಳಿಗೆ ತುತ್ತಾಗುತ್ತ ಅಲ್ಲಮನನ್ನು ಅರಸಿ ಅವನ ಹಿಂದೆಯೇ ಹೋಗುತ್ತಾಳೆ. ಅಲ್ಲಮ ಮಾಯೆಯ ಕಷ್ಟಕ್ಕೆ ಮರುಗಿ ಆಕೆಗೆ ಕಾಣಿಸಿಕೊಳ್ಳುತ್ತಾನೆ. ಅವಳು ಶೋಕ, ಕೋಪ, ದರ್ಪ ಇವುಗಳ ಭರದಲ್ಲಿ 'ನಾನು ಮಾಯೆ, ಹರಿಹರ ಬ್ರಹ್ಮಾದಿಗಳನ್ನು ಗೆಲಿದವಳು, ತಪಸ್ವಿಗಳನ್ನು ವ್ಯಥೆಗೊಳಿಸಿದವಳು'

[illegible]

[illegible]

[illegible]

[illegible]

ಎಂದು ಮುಂತಾಗಿ ಬಡಾಯಿ ಕೊಚ್ಚಿಕೊಳ್ಳುತ್ತಾಳೆ. ಅದಕ್ಕೆ ಅಲ್ಲಮ 'ಹರಿಹರಬ್ರಹ್ಮಾದಿಗಳನೆಲ್ಲರನು ಕಾಡಿದೆನೆಂದು ನೀ ನುಡಿದೆ. ಮರುಳೆ, ನಿನ್ನನದಾರು ನಾನಾ ಪರಿಯಲಾಡಿಸುವರು?' ಎಂದು ಕೇಳುತ್ತಾನೆ. 'ಅದೆಲ್ಲ ಇರಲಿ ಕೃಪೆ ಮಾಡು,' ಎಂದು ಮಾಯೆ ಬೇಡಿಕೊಳ್ಳುತ್ತಾಳೆ. ಅಲ್ಲಮ ಅದನ್ನು ನಿರಾಕರಿಸುತ್ತಾನೆ. ವಿಮಳೆ ಹೇಳಿ ನೋಡುತ್ತಾಳೆ, ಅದೂ ವ್ಯರ್ಥವಾಗುತ್ತದೆ. ಕೊನೆಗೆ ಅಲ್ಲಮ 'ಮಾಯೆಗೆ ಪರಮತತ್ತ್ವಜ್ಞಾನವಿಲ್ಲ' ಎಂದು ಹೇಳಿ ಅಂತರ್ಧಾನನಾಗುತ್ತಾನೆ. ವಿಮಳೆ ಅವಳನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾಳೆ.

ಈಗ ಪಾರ್ವತಿಯ ಸಾತ್ವಿಕಾಂಶವು ಉಡುತುಡಿಯಲ್ಲಿ ಸುಮತಿ ನಿರ್ಮಳರ ಮಗುವಾಗಿ ಮಹದೇವಿಯಕ್ಕನೆಂಬ ಹೆಸರನ್ನು ಧರಿಸುತ್ತದೆ. ಶಿವನ ಆಜ್ಞಾನುಸಾರವಾಗಿ ಬಸವಾದಿ ಪ್ರಮಥರೂ ಧರೆಯಲ್ಲಿ ಅವತರಿಸುತ್ತಾರೆ. ಮಹದೇವಿಯಕ್ಕ ಶಿವಭಕ್ತಿಯೇ ರೂಪುಗೊಂಡಂತೆ ಬೆಳೆಯುತ್ತ ಯೌವನವತಿಯಾಳಾಗುತ್ತಾಳೆ. ಒಮ್ಮೆ ಆ ಊರಿನ ಅರಸನಾದ ಕೌಶಿಕ ವೈಹಾಳಿಯಿಂದ ತಿರುಗಿ ಬರುತ್ತಿದ್ದಾಗ ಮಹಾದೇವಿಯಕ್ಕನನ್ನು ಅವಳ ಮನೆಯ ಬಾಗಿಲಲ್ಲಿ ಕಂಡು ಅವಳ ರೂಪಾತಿಶಯಕ್ಕೆ ಮರುಳಾಗುತ್ತಾನೆ. ಅವನು ಅವಳನ್ನು ಮದುವೆಯಾಗುವುದಾಗಿ ತಿಳಿಸಿದಾಗ ಆಕೆ ಉಪಾಯವೊಂದನ್ನು ಆಲೋಚಿಸಿ ದೊರೆಯನ್ನು ಮನೆಗೆ ಕರೆಸಿಕೊಳ್ಳುತ್ತಾಳೆ. ಕೌಶಿಕ ಅವಳ ಬಯಕೆಗಳನ್ನು ಸಲ್ಲಿಸುವೆನೆಂದು ಪ್ರಮಾಣ ಮಾಡುತ್ತಾನೆ. ಅವನು ಶಿವಭಕ್ತನಾದರೆ ಅವನನ್ನು ವರಿಸುವುದಾಗಿ ಒಪ್ಪಿಕೊಂಡು ಮಹದೇವಿಯಕ್ಕ ಆತನ ಅರಮನೆಗೆ ಹೋಗುತ್ತಾಳೆ. ಅರಸನು ಪ್ರಣಯಾಲಾಪಗಳಿಗೆ ಮೊದಲು ಮಾಡಲು ಆಕೆ, 'ನೀನು ಒಪ್ಪಿಕೊಂಡಂತೆ ಮೊದಲು ಶಿವಭಕ್ತನಾಗು' ಎಂದು ತಿಳೀಸುತ್ತಾಳೆ. ದೊರೆಯು, 'ನಮಗೆ ಶಿವಭಕ್ತಿಯನು ಮಾಡುವ ಸಮಯವಳವಡದು' ಎನ್ನುತ್ತಾನೆ. 'ನಮಗೆ ನಿಮ್ಮಯ ಸಂಗವಳವಡದು' ಎಂದು ಮಹದೇವಿಯಕ್ಕ ಉತ್ತರಿಸಿ ಆತನು ಕೊಟ್ಟಿದ್ದ ವಸ್ತ್ರಭೂಷಣಾದಿಗಳನ್ನು ಅಲ್ಲಿಯೇ ಬಿಟ್ಟು ದಿಗಂಬರಳಾಗಿ ಘನವಿರಕ್ತಿಯನ್ನು ಕೈಗೊಂಡು ಅಲ್ಲಿಂದ ಹೊರಡುತ್ತಾಳೆ.

ಭಕ್ತರನ್ನು ಉದ್ಧರಿಸಲೋಸುಗ ಕಾರಣ ಶರೀರವನ್ನು ತಾಳಿ ಬರುತ್ತಿದ್ದ ಅಲ್ಲಮ ದಾರಿಯಲ್ಲಿ ಗೊಗ್ಗಯ್ಯನನ್ನು ನೋಡಿ, ಆತನ ಕೂಡ ವಾದಿಸಿ ಅವನಿಗೆ ಪ್ರಾಣಲಿಂಗಾನುಸಂಧಾನವನ್ನು ತಿಳಿಸುತ್ತಾನೆ. ಅಲ್ಲಿ ಸಮಾಧಿಸ್ಥನಾಗಿದ್ದ ಅನಿಮಿಷನೆಂಬ ಶಿವಯೋಗಿಯನ್ನು ಅವನಿಗೆ ತೋರಿಸುತ್ತಾನೆ. ಆ ಶಿವಯೋಗಿಯ ಲಿಂಗವೂ ಜೀವಕಳೆಯೂ ಬಂದು ಅಲ್ಲಮನನ್ನು ಸೇರುತ್ತವೆ. ಇದನ್ನೆಲ್ಲ ಕಣ್ಣಾರೆ ಕಂಡ ಗೊಗ್ಗಯ್ಯ

[illegible]

[illegible]

[illegible]

[illegible]

ಅಲ್ಲಮನ ಮಾಹಾತ್ಮ್ಯವನ್ನು ಕೊಂಡಾಡಿ ಆತನಿಂದ ಉಪದೇಶ ಪಡೆದುಕೊಳ್ಳುತ್ತಾನೆ. ಮುಂದೆ ಅಲ್ಲಮಪ್ರಭು ಮುಕ್ತಾಯಕ್ಕನನ್ನು ಭೆಟ್ಟಿಯಾಗುತ್ತಾನೆ. ಆಕೆಯು ತನ್ನ ಸಹೋದರನಾದ ಅಜಗಣ್ಣನು ಲಿಂಗೈಕ್ಯನಾದುದಕ್ಕೆ ದುಃಖಿಸುತ್ತಿದ್ದುದನ್ನು ನೋಡಿ, ಶಿವಭಕ್ತನಾದ ಅಜಗಣ್ಣ ಸಾಯಲಿಲ್ಲ ಲಿಂಗೈಕ್ಯನಾಗಿದ್ದಾನೆ, ನಿತ್ಯನಾಗಿದ್ದಾನೆಂದು ತಿಳಿಸುತ್ತಾನೆ. ಅವಳನ್ನು ಸಂತಯಿಸಿ ವೀರಶೈವೋಪದೇಶವನ್ನಿತ್ತು ಉದ್ಧರಿಸುತ್ತಾನೆ.

ಸೊನ್ನಲಾಪುರಕ್ಕೆ ಬರುವ ಪ್ರಭು ಅಲ್ಲಿ ಯೋಗೀಶ್ವರನಾದ ಸಿದ್ಧರಾಮನು ನಡೆಸಿದ್ದ ಕೆರೆದೇವಾಲಯಗಳನ್ನು ಕಟ್ಟುವ ಕೆಲಸವನ್ನು ಕಂಡು, ನಿಷ್ಕಾಮ ಕರ್ಮದ ಹೊಲಬನರಿಯದ ಅವನಿಗೆ ಉಪದೇಶ ಮಾಡಬೇಕೆಂದು ಬಗೆದು, ಕೆಲಸ ಮಾಡುತ್ತಿದ್ದವರೊಂದಿಗೆ ಮಾತನಾಡುತ್ತ ಸಿದ್ಧರಾಮನನ್ನು ನಿಂದಿಸುತ್ತಾನೆ. ಸಿದ್ಧರಾಮ ಅಲ್ಲಿಗೆ ಬರುತ್ತಾನೆ. ಮಾತಿಗೆ ಮಾತು ಮಥಿಸಿ ಅವನು ತಡೆಯಲಾರದ ಸಿಟ್ಟಿನಿಂದ ಪ್ರಭುವನ್ನು ಭಸ್ಮಮಾಡಲೆಳಸಿ ನೊಸಲ ಕಣ್ಣನ್ನು ತೆರೆಯುತ್ತಾನೆ. ಪ್ರಭು ಆ ಜ್ವಾಲೆಯನ್ನು ಅಡಿಗಳಿಂದ ತೊಡೆಯುತ್ತಾನೆ. ಆಗ ಸಿದ್ಧರಾಮನಿಗೆ ಎಚ್ಚರವಾಗುತ್ತದೆ. ತನ್ನನ್ನೇ ಉದ್ದಾರ ಮಾಡಲು ಬಂದ ಗುರುವೆಂದು ತಿಳಿದು ಆತನಿಗೆ ಆನತನಾಗುತ್ತಾನೆ. ಪ್ರಭು ಅವನಿಗೆ ಜೀವಪರಮರನ್ನು ಒಂದು ಮಾಡುವ ಶಕ್ತಿಭಕ್ತಿಗಳ ಹೊಂದಿಕೆಯನ್ನು ಅರಿಕೆ ಮಾಡಿಕೊಡುತ್ತಾನೆ.

ಪ್ರಭು ಮುಂದೆ ಸಿದ್ಧರಾಮನೊಂದಿಗೆ ಕಲ್ಯಾಣ ನಗರಕ್ಕೆ ಬರುತ್ತಾನೆ. ಇಬ್ಬರೂ ಬಸವರಸನ ಬಾಗಿಲಲ್ಲಿ ಬಂದು ನಿಂತಿರಲು ಆ ಸುದ್ದಿಯನ್ನು ಹಡಪದಪ್ಪಣ್ಣನು ಬಸವಣ್ಣನಿಗೆ ತಿಳಿಸುತ್ತಾನೆ. ಶಿವಪೂಜಾನಿರತನಾಗಿದ್ದ ಬಸವಣ್ಣ ಅವರನ್ನು ಒಳಗೆ ಕರೆದುಕೊಂಡು ಬರಲು ತಿಳಿಸುತ್ತಾನೆ. ರಾಜಪುರುಷರ ಮನೆಯ ಒಳಗೆ ತಾವು ಬರುವುದಿಲ್ಲವೆಂದು ಪ್ರಭು ಹಡಪದಪ್ಪಣ್ಣನಿಗೆ ಹೇಳುತ್ತಿರುವಾಗ ಮಡಿವಾಳ ಮಾಚರಸನೂ ಚೆನ್ನಬಸವಣ್ಣನೂ ಹೊರಗೆ ಬಂದವನು ಅಲ್ಲಮಪ್ರಭುವೆಂದು ಬಸವರಾಜನಿಗೆ ಹೇಳುತ್ತಾರೆ. ಬಸವರಸನು ಪಶ್ಚಾತ್ತಾಪದಿಂದ ನೊಂದವನಾಗಿ ಶಿವಗಣ ಸಹಿತ ಹೊರಗೆ ಬಂದು ಪ್ರಭುವಿನ ಚರಣ ತಳದಲ್ಲಿ ಬೀಳುತ್ತಾನೆ ಹಾಗೂ ತನ್ನ ತಪ್ಪನ್ನು ಮನ್ನಿಸಬೇಕೆಂದು ಕೇಳುತ್ತಾನೆ. ಪ್ರಭು ಸಿದ್ಧರಾಮನನ್ನೊಡಗೂಡಿ ಒಳಗೆ ದಯಮಾಡಿಸುತ್ತಾನೆ. ಅಲ್ಲಿ ಹನ್ನೆರಡು ವರ್ಷ ಗುಪ್ತಭಕ್ತಿಯನ್ನಾಚರಿಸುತ್ತಿದ್ದ ಮರುಳುಶಂಕರದೇವನನ್ನು ಬಸವೇಶ್ವರನಿಗೆ ತೋರಿಸಿ, ಆತನಿಗೆ ಐಕ್ಯ ಪದವಿಯನ್ನು ಕೊಡುತ್ತಾನೆ.

[illegible]

ಪ್ರಭು ಅನುಭವ ಮಂಟಪದಲ್ಲಿ ಬಸವಾದಿಗಳಿಗೆ ಇಷ್ಟಲಿಂಗದ ಗುಟ್ಟನ್ನು ಬೋಧಿಸಿ ಅದು ಪ್ರಾಣಲಿಂಗದ ನೆಲೆಯನರಿಯುವ ದಾರಿಯೆಂದು ತಿಳಿಸುತ್ತಿರುತ್ತಾನೆ. ಆ ಸಮಯಕ್ಕೆ ಸರಿಯಾಗಿ ಮಹದೇವಿಯಕ್ಕ ಅಲ್ಲಿಗೆ ಬಂದು ಪ್ರಭುವಿಗೆ ನಮಸ್ಕರಿಸುತ್ತಾಳೆ. ಅವನು ಮಾರ್ಮಿಕ ಪ್ರಶ್ನೆಗಳಿಂದ ಅವಳನ್ನು ಪರೀಕ್ಷಿಸಿ, ಅವಳು ದೇಹಾಭಿಮಾನವನ್ನು ನಿಜವಾಗಿ ನೀಗಿರುವಳೆಂದು ಅರಿತು, ತಕ್ಕ ಉಪದೇಶ ಮಾಡಿ ಶ್ರೀಗಿರಿಯ ಕದಳೀಬನಕ್ಕೆ ಹೋಗಲು ಅನುಜ್ಞೆ ಕೊಡುತ್ತಾನೆ. ಮಹದೇವಿಯಕ್ಕ ಎಲ್ಲ ಶಿವಶರಣರನ್ನು ಬೀಳ್ಕೊಂಡು ಶ್ರೀಗಿರಿಗೆ ತೆರಳುತ್ತಾಳೆ. ಪ್ರಭು ಬಸವಾದಿಗಳಿಗೆ ಪ್ರಾಣಲಿಂಗದ ಪರಿಯನ್ನು ತಿಳಿಸಿ ಸಾಧನೆ ಮುಂದುವರೆಯಲು ಸೂಚಿಸಿ ಶ್ರೀಗಿರಿಗೆ ಬರುತ್ತಾನೆ. ಅಲ್ಲಿ ವಜ್ರಕಾಯದ ಗೋರಕ್ಷನನ್ನು ಕಂಡು ಅವನದು ಮುಕ್ತಿಯ ಮಾರ್ಗವಲ್ಲವೆಂದು ಅರಿವು ಮೂಡಿಸುತ್ತಾನೆ. ಗೋರಕ್ಷ ನಿರ್ದೇಹಿಯಾಗುವ ಮಾರ್ಗವನ್ನು ಬೋಧಿಸಬೇಕೆಂದು ಕೇಳಿದಾಗ ಅಲ್ಲಮ ಅದನ್ನು ಅವನಿಗೆ ಕರುಣಿಸುತ್ತಾನೆ. ಮುಂದೆ ಅವನು ಅರಣ್ಯದಲ್ಲಿ ಹೋಗುತ್ತಿದ್ದಾಗ ಕಿರಾತಕನೊಬ್ಬನಿಗೆ ಪ್ರಾಣಹಿಂಸೆಯು ಪಾಪವೆಂದು ತಿಳಿಸುತ್ತಾನೆ. ಮುನಿಗಳಿಗೆ ಸಂಸಾರ ಬಾಧೆಯು ಬಿಟ್ಟಿಲ್ಲವೆಂದರಿತು ಅವರಿಗೆಲ್ಲ ನಿಜಮಾರ್ಗವನ್ನು ಅರುಹುತ್ತಾನೆ.

ಬಸವಣ್ಣ ಕಲ್ಯಾಣನಗರದಲ್ಲಿ ಶೂನ್ಯ ಸಿಂಹಾಸನವನ್ನು ರಚಿಸಿ ಅಲ್ಲಮಪ್ರಭುವಿನ ಮಾರ್ಗನಿರೀಕ್ಷಣೆಯಲ್ಲಿರುತ್ತಾನೆ. ಮಾರುವೇಷದಲ್ಲಿ ಬಂದ ಆತನನ್ನು ಬಸವಣ್ಣ ಗುರುತಿಸಿ ಭಕ್ತಿಯಿಂದ ತನ್ನರಮನೆಗೆ ಕರೆದುಕೊಂಡು ಬಂದು ಶೂನ್ಯಸಿಂಹಾಸನದಲ್ಲಿ ಕುಳ್ಳಿರಿಸುತ್ತಾನೆ. ಭಕ್ತಿಪರವಶನಾಗಿದ್ದ ಬಸವಣ್ಣ ಆರೋಗಣೆಗೆಂದು ಬಂದ ಜಂಗಮರನ್ನು ಮರೆಯಲು, ಅವರೆಲ್ಲರೂ ಖತಿಗೊಂಡು ಹೊರಟು ಹೋಗುತ್ತಾರೆ. ಇದರಿಂದ ಬಸವಣ್ಣ ಚಿಂತಾಕ್ರಾಂತನಾಗುತ್ತಾನೆ. ಪ್ರಭು ತನಗೆ ಆರೋಗಣೆ ಮಾಡಿಸಿ ತೃಪ್ತಿಪಡಿಸಿದರೆ ಎಲ್ಲ ಜಂಗಮರೂ ತೃಪ್ತರಾಗುವರೆಂದು ತಿಳಿಸುತ್ತಾನೆ. ಬಸವೇಶ್ವರನು ಆರೋಗಣೆಗೆ ಎಡೆಮಾಡಿಸಲು ಅನುವಾಗುತ್ತಾನೆ. ಪ್ರಭು ತ್ವರಿತವಾಗಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರಿಗಾಗಿ ಮಾಡಿದ ಅಡಿಗೆಯನ್ನೂ, ಉಗ್ರಾಣಗಳಲ್ಲಿಯ ಸಾಮಗ್ರಿಗಳ ಅಡಿಗೆಯನ್ನೂ ಭಕ್ಷಿಸುತ್ತಾನೆ. ಆತನ ಹಸಿವೆ ಹಿಂಗದಿದ್ದಾಗ ಬಸವಣ್ಣ ವಿನೀತನಾಗಿ ತನ್ನನ್ನೇ ಅವನಿಗೆ ಅರ್ಪಿಸುತ್ತಾನೆ ಪ್ರಭು ಸಂಪ್ರೀತನಾಗಿ ಜಂಗಮರನ್ನು ಊಟಕ್ಕೆ ಕರೆಯಲು ಆಜ್ಞಾಪಿಸುತ್ತಾನೆ. ಪ್ರಭುವಿನ ಆರೋಗಣೆಯಲ್ಲಿಯೇ ಅವರೆಲ್ಲ ತೃಪ್ತರಾಗಿರುವರೆಂಬುದನ್ನು ಕಂಡು ಬಸವಣ್ಣನಿಗೆ ಆನಂದಾಶ್ಚರ್ಯವಾಗುತ್ತದೆ. ಪ್ರಭುದೇವ

ಬಸವಾದಿಗಳಿಗೆಲ್ಲ ಜ್ಞಾನೋಪದೇಶ ಮಾಡಿ, ಬಸವಣ್ಣನ ಕತದಿಂದ ಲೋಕದ ಉದ್ಧಾರವಾಯಿತೆಂದು ಆತನನ್ನು ಹೊಗಳಿ ಅವರಿಗೆಲ್ಲ ನಿತ್ಯ ಪದವಿಯನ್ನು ಕೊಟ್ಟು ಅಲ್ಲಿಂದ ದಯಮಾಡಿಸುತ್ತಾನೆ.

ಇದನ್ನೆಲ್ಲ ಪರಶಿವನು ಪಾರ್ವತಿಗೆ ತಿಳಿಸಿ ಹೇಳಲು, ಅವಳು ಶಿವನ ಕರುಣೆಯಿಂದ ನಿತ್ಯನಾದ ಅಲ್ಲಮಪ್ರಭುವಿನ ನಿಜವನ್ನರಿತೆನೆಂದು ಸಂತಸ ಪಡುತ್ತಾಳೆ. ಅಲ್ಲಮ ನಿಜಭಕ್ತರಿಗೆ ಚಿಂತಿತಾರ್ಥವನ್ನೀಯುತ್ತ ಎಲ್ಲರ ಹೃತ್ಕಮಲದಲ್ಲಿರುತ್ತಾನೆ. [೧೦೮]

ಚರಿತ್ರನಿರೂಪಣೆ ಕುರಿತು

ವೀರಶೈವ ಇತಿಹಾಸದಲ್ಲಿ ಪ್ರಭುದೇವನ ಚರಿತ್ರೆ ಚಿದಂಬರ ರಹಸ್ಯವೆನಿಸಿದೆ.[೧೦೯] ಬಸವಾದಿ ಪ್ರಮಥರ ಕಾಲದಲ್ಲಿ ಹಾಗೂ ಆ ನಂತರದ ಮೂರ್‍ನಾಲ್ಕು ಶತಮಾನಗಳಲ್ಲಿ 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ' ಎಂಬ ಭಾವ ಗಟ್ಟಿಗೊಂಡಿದ್ದರಿಂದಾಗಿ ಯಾವುದೇ ಚಾರಿತ್ರಿಕ ದಾಖಲೆಗೆ ಅಲ್ಲಮಪ್ರಭು ಸಿಕ್ಕಿರುವ ಸಾಧ್ಯತೆ ಇಲ್ಲವೆಂದೇ ಹೇಳಬೇಕು. ಏಕೆಂದರೆ 'ಸ್ಥಾವರಲಿಂಗ ಪ್ರತಿಷ್ಠಾಪನೆ ಹಾಗೂ ದೇವಾಲಯ ನಿರ್ಮಾಣಗಳಲ್ಲಿ ಅಲಕ್ಷ್ಯ, ಪರೋಪಕಾರದಲ್ಲಿ ನಿರಪೇಕ್ಷೆ, ಪರಾವಲಂಬನದಲ್ಲಿ ಉಪೇಕ್ಷೆ ಎಂಬ ವೀರಶೈವ ತತ್ತ್ವಗಳು ಬೆಳೆಬೆಳೆದಂತೆ ಶಾಸನ ಬರವಣಿಗೆ ತಾನಾಗಿಯೇ ಇಳಿದು ಹೋಯಿತು.[೧೧೦] ಕ್ರಿ. ಶ. ೧೬೬೦ ರ ಆನಂದಪುರ ಮಠದ ತಾಮ್ರಶಾಸನವೇ ಮೊದಲ ಶಾಸನವಾಗಿ ಈಗ ಲಭ್ಯವಿದೆ.[೧೧೧] ಅಲ್ಲಿ ಸೂಚಿತವಾದ ಇನ್ನೆರಡು ಆಧಾರಗಳು ಅಸ್ಪಷ್ಟವಾಗಿವೆ. ಒಟ್ಟಿನಲ್ಲಿ ಬಸವಾದಿ ಪ್ರಮಥರಿಗೆ ಹಿರಿಯ ಮಾರ್ಗದರ್ಶಕನಾಗಿದ್ದ ಅಲ್ಲಮಪ್ರಭುವಿನ ಚರಿತ್ರೆಯನ್ನು ಪುರಾಣಕಾವ್ಯಗಳಲ್ಲಿ ಹುಡುಕುವುದು ಸಾಹಸದ ಮಾತಾಗುತ್ತದೆ. ಏಕೆಂದರೆ ವೀರಶೈವ ಪುರಾಣಕಾವ್ಯಗಳ ಮುಖ್ಯ ಉದ್ದೇಶ ಚರಿತ್ರೆಯಾಗಿರದೆ ಅಲ್ಲಮಪ್ರಭು ಸಂಪ್ರದಾಯದ ಪ್ರತಿಪಾದನೆ ಹಾಗೂ ಅವನ ಬದುಕಿನ ಲೀಲಾರೂಪದ ಅಂಶಗಳನ್ನು ಮಾತ್ರ ವರ್ಣಿಸುವುದಾಗಿದೆ. ಹೀಗಾಗಿ ಅವು ನಿಜಚರಿತ್ರೆಯನ್ನು ನಿಲುಕಿಸಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ.[೧೧೨] ಚಾಮರಸನ ಪ್ರಭುಲಿಂಗಲೀಲೆ ಈ ಮಾತಿಗೆ ಹೊರತಾದುದೇನೂ ಆಗಲಾರದು. ಆದುದರಿಂದ ಅದನ್ನು ಚರಿತ್ರೆ ಎಂದು ಪ್ರತಿಪಾದಿಸಹೊರಟರೆ ಅನೇಕ ಸಮಸ್ಯೆಗಳು ಎದುರಾಗುತ್ತವೆ.

[illegible]

[illegible]

[illegible]

[illegible]

ಪ್ರಭುಲಿಂಗಲೀಲೆಯನ್ನು ಕುರಿತು ವಿಮರ್ಶಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಬೇರೆ ಬೇರೆಯಾಗಿರುವುದನ್ನು ಗಮನಿಸಿದರೆ ಮೇಲಿನ ಹೇಳಿಕೆಗೆ ಹೆಚ್ಚಿನ ಅರ್ಥ ಮೂಡುತ್ತದೆ. ಕಾವ್ಯವನ್ನು 'ಅಲ್ಲಮನ ಚರಿತ್ರೆ'ಯ ರೂಪದಲ್ಲಿ ಸ್ವೀಕರಿಸಿದವರು ಮಿಕ್ಕ ವಿಷಯಗಳೆಲ್ಲ ಚರಿತ್ರನಿರೂಪಣೆಗೆ ಪೂರಕವೆಂದು ಭಾವಿಸಿದ್ದರೆ ಅದನ್ನು 'ಪ್ರಭುವಿನ ಲೀಲೆ' ಎಂದು ಸ್ವೀಕರಿಸಿದವರು ಚಾರಿತ್ರಿಕ ಅಂಶಗಳು ಅದಕ್ಕೆ ಪೂರಕವೆಂದು ಭಾವಿಸಿದ್ದಾರೆ. ಈ ಚರಿತ್ರೆ ಮತ್ತು ಲೀಲೆ ಇವುಗಳ ಕವಲು ದಾರಿಯನ್ನು ಕ್ರಮಿಸುವ ಪ್ರಸಂಗದಲ್ಲಿಯೇ ಚಾಮರಸ ಮೋಡಿ ಮಾಡಿರುವ ಸಾಧ್ಯತೆಯಿದೆ. ಈ ಕವಲು ದಾರಿಯಲ್ಲಿ ಸ್ವಲ್ಪ ತಡೆದು ವಸ್ತುಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕಾವ್ಯದ ಉದ್ದೇಶ ಸ್ಪಷ್ಟವಾಗುತ್ತದೆ.

ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು 'ಪ್ರಭುಲಿಂಗಲೀಲೆ ಅಲ್ಲಮನ ಚರಿತ್ರೆಯಾಗಿದೆ' ಎಂದು ತಿಳಿಸುತ್ತ ಅವನು ಪರಶಿವನ ಅವತಾರವೆಂದೂ, ಶಿವಶರಣರು ತಮ್ಮ ಜೀವಿತ ಕಾಲದಲ್ಲಿಯೇ ಆತನನ್ನು ಸಾಕ್ಷಾತ್ ಶಿವರೂಪಿಯೆಂದು ತಿಳಿದಿದ್ದರೆಂದೂ ಅಭಿಪ್ರಾಯ ಪಡುತ್ತಾರೆ.[೧೧೩] ಬಳ್ಳಿಗಾವೆ, ಬನವಸೆ ಪ್ರಾಂತಗಳಲ್ಲಿ ಅವನು ನಿರಂಜನ ಲಿಂಗವಾಗಿ ಕ್ಷೇತ್ರಪತಿಯಾಗಿದ್ದನೆಂದು ತಿಳಿಸುತ್ತ 'ಆ ಜೀವವು ಪಕ್ವ ಸ್ಥಿತಿಗೆ ಬಂದ ಮೆಟ್ಟಲುಗಳು ನಮಗೆ ಕಾಣುವುದಿಲ್ಲ'[೧೧೪] ಎಂದೂ ಅಭಿಪ್ರಾಯ ಪಡುತ್ತಾರೆ. 'ಮಹಾತ್ಮರ ಜೀವನ ಚರಿತ್ರೆಯನ್ನು ಕಾವ್ಯರೂಪದಲ್ಲಿ ಹೇಗೆ ಬರೆಯಬೇಕೆಂಬುದಕ್ಕೆ ಪ್ರಭುಲಿಂಗಲೀಲೆ ಉತ್ತಮ ನಿದರ್ಶನವಾಗಿದೆ,'[೧೧೫] ಎಂದು ತಿಳಿಸುವ ಎಂ. ಆರ್. ಶ್ರೀ. ವೀರಶೈವತತ್ತ್ವದ ಪ್ರತಿಪಾದನೆಯನ್ನು ಕುರಿತಾಗಿ ಬರೆಯುವಾಗ 'ಪ್ರಭುಲಿಂಗಲೀಲೆ ಕವಿಯ ಅಭಿಪ್ರಾಯದಲ್ಲಿ ಕೇವಲ ಜೀವನಚರಿತ್ರೆಯಲ್ಲ, ವೇದಾಂತದ ಸಾರವಾಗಿಯೂ ಅನುಭಾವಿಗಳಿಗೆ ಅಮೃತಪ್ರಾಯವಾಗಿಯೂ ಇರುವುದರಿಂದ ಅವನು ತಿಳಿಸುತ್ತಾನೆ'[೧೧೬] ಎಂದೂ ಬರೆಯುತ್ತಾರೆ.

ಪ್ರೊ. ಶಿ. ಶಿ. ಬಸವನಾಳರ ದೃಷ್ಟಿಯಲ್ಲಿ ಪ್ರಭುಲಿಂಗಲೀಲೆಗೆ ಅಲ್ಲಮಪ್ರಭುವಿನ ಚರಿತ್ರೆಯೇ ವಿಷಯವಾಗಿದೆ.[೧೧೭] ಈ ಚರಿತ್ರನಾಯಕನ ಸ್ವರೂಪಗ್ರಹಣವನ್ನು ಚಾಮರಸನು ಹೇಗೆ ಮಾಡಿದ್ದಾನೆಂಬುದೇ ವಾಚಕರು ಲಕ್ಷಿಸಬೇಕಾದ ಅಂಶ, ಅವರ ದೃಷ್ಟಿಯಲ್ಲಿ![೧೧೮] ಶಿವನು ಲೀಲೆಗಳನ್ನು ನಟಿಸಿದಂತೆ ಅಲ್ಲಮನು ಪ್ರಭುಲಿಂಗಲೀಲೆಯನ್ನು ನಟಿಸಿದ್ದಾನೆ. ಅದಕ್ಕಾಗಿಯೇ ಅಲ್ಲಮಪ್ರಭುವನ್ನು ನಿರ್ದೇಹಿಯೆಂದೂ ಕಾರಣಶರೀರವನ್ನು ಮಾತ್ರ ಧರಿಸಿದವನೆಂದೂ ಚಾಮರಸ ಬಣ್ಣಿಸಿದ್ದಾನೆಂದು ಅವರು ಅಭಿಪ್ರಾಯ ಪಡುತ್ತಾರೆ.[೧೧೯] ನೈಜ ವೈರಾಗ್ಯ, ಮಾಯಾತಿರಸ್ಕಾರ, ಬಸವಾದಿ ಪ್ರಮಥರ ಉದ್ಧಾರ, ಆಧ್ಯಾತ್ಮಿಕ

[illegible]

[illegible]

[illegible]

ತತ್ವಗಳ ತಿಳಿಯಾದ ಹಾಗೂ ಸೂಕ್ಷ್ಮವಾದ ವಿಚಾರ ಇವು ಪ್ರಭುಚರಿತೆಗೆ ಮುಖ್ಯವಾದವುಗಳೆಂದು ಪ್ರೋ. ಬಸವನಾಳರ ಅಭಿಪ್ರಾಯ. [೧೨೦]

ಅಲ್ಲಮಪ್ರಭುವಿನ ವ್ಯಕ್ತಿ ಚಿತ್ರಣದಲ್ಲಿಯೇ ಚಾಮರಸನು ತನ್ನೆಲ್ಲ ಶಕ್ತಿಯನ್ನು ಕೇಂದ್ರೀಕರಿಸಿ ಎಲ್ಲ ಸನ್ನಿವೇಶಗಳನ್ನು ಮೂಲ ಉದ್ದೇಶ ಸಿದ್ಧಿಗೆ ಅನುಗೊಳಿಸಿಕೊಂಡು ವ್ಯಕ್ತಿಕೇಂದ್ರಿತ ಚರಿತ್ರೆಯನ್ನು ಸಮರ್ಪಕವಾಗಿ ಬರೆದಿದ್ದಾನೆಂದು ಡಾ. ರಂ. ಶ್ರೀ ಮುಗಳಿಯವರ ಅಭಿಪ್ರಾಯ.[೧೨೧] ಅಲ್ಲಮನ ಮೂರ್ತಿಸ್ವರೂಪವನ್ನು ಚಿತ್ರಿಸುವಲ್ಲಿ ಚರಿತ್ರೆಯ ಜೀವಾಳಕ್ಕೆ ಬಾಧೆಯಿಲ್ಲ[೧೨೨] ಎಂದು ತಿಳಿಸುವ ಡಾ. ಮುಗಳಿ ಚಾಮರಸನು ಚರಿತ್ರನಾಯಕನ ಜೀವಾಳವನ್ನರಿತು ಉಜ್ವಲ ಜೀವಂತ ಚಿತ್ರವನ್ನು ಮೂಡಿಸಿದ್ದಾನೆಂದೂ ಪ್ರಭುಲಿಂಗಲೀಲೆ ತೂಕದ ಚರಿತ್ರಕಾವ್ಯವೆಂದೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.[೧೨೩]

'ಹದಿನೈದನೆಯ ಶತಮಾನದ ಕವಿಗಳೂ ಶರಣರೂ ತಮಗೆ ಉಪಲಬ್ಧವಿದ್ದ ವಚನಸಾಹಿತ್ಯವನ್ನು ಸಂಗ್ರಹಿಸಿ, ನಿಜವಾದ ಸಂಗತಿಯನ್ನು ಕಂಡು ಹಿಡಿದು ಶರಣರ ಚರಿತ್ರೆಗಳನ್ನು ಕಾವ್ಯಮುಖದಿಂದ ಹಾಡಿದರು. ಅಂಥವರಲ್ಲಿ ಚಾಮರಸನೂ ಒಬ್ಬ' ಎಂಬುದು ಡಾ. ಎಂ. ಎಸ್. ಸುಂಕಾಪುರ ಅವರ ಅಭಿಪ್ರಾಯ. [೧೨೪]

ಪ್ರಭುಲಿಂಗಲೀಲೆಯ ಗದ್ಯಾನುವಾದ ಮಾಡಿರುವ ಡಾ. ಎಸ್. ವಿದ್ಯಾಶಂಕರ್ ಹಾಗೂ ಅದನ್ನು ಶೂನ್ಯ ಸಂಪಾದನೆಯೊಂದಿಗೆ ಸಮಾನಾಂತರವಾಗಿಟ್ಟು ಅಭ್ಯಾಸ ಮಾಡಿರುವ ಡಾ. ಚಿದಾನಂದಮೂರ್ತಿ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರೊ ಜಿ. ಎಸ್. ಸಿದ್ಧಲಿಂಗಯ್ಯ ಮೊದಲಾದವರು ಚಾಮರಸನ ಚಾರಿತ್ರಿಕ ಮಾರ್ಗವನ್ನೇ ಪುರಸ್ಕರಿಸುತ್ತಾರೆ.

ಪ್ರಭುಲಿಂಗಲೀಲೆಯಲ್ಲಿ ಅನೇಕ ಅಂಶಗಳು ಚರಿತ್ರೆಗೆ ಪೂರಕವಾಗಿ ನಿಲ್ಲುತ್ತವೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನ ಮುಂದಾಳ್ತನದಲ್ಲಿ ಸಾಮಾಜಿಕ, ಧಾರ್ಮಿಕ, ವೈಚಾರಿಕ ಕ್ರಾಂತಿ ನಡೆದಿರುವುದಕ್ಕೆ ಶಿವಶರಣರ ವಚನಗಳೇ ಸಾಕ್ಷಿ. ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಮಹದೇವಿಯಕ್ಕ ಹಾಗೂ ಇನ್ನಿತರ ಶರಣ ಶರಣೆಯರ ವಚನಗಳು ನಮ್ಮ ಮುಂದಿದ್ದು ಅವು ಅನೇಕ ಚಾರಿತ್ರಿಕ ಅಂಶಗಳನ್ನು ಒದಗಿಸುತ್ತವೆ. ಮೇಲೆ ಸೂಚಿಸಲ್ಪಟ್ಟ ಶರಣರನೇಕರ

[illegible]

ಉಲ್ಲೇಖಗಳನ್ನೊಳಗೊಂಡ ಶಾಸನಗಳು ಈಗ ಲಭ್ಯವಿವೆ. ಹೀಗೆ ಅವರೆಲ್ಲ ಚಾರಿತ್ರಿಕ ವ್ಯಕ್ತಿಗಳಾಗಿ ನಿಲ್ಲುತ್ತಾರೆ. ಬನವಾಸಿ, ಬಸವ ಕಲ್ಯಾಣ, ಸೊನ್ನಲಾಪುರ ಈಗ ಚಾರಿತ್ರಿಕ ಸ್ಥಳಗಳಾಗಿವೆ. ಬಸವಣ್ಣ ಸ್ಥಾಪಿಸಿ ಮುನ್ನಡೆಸಿಕೊಂಡು ಬಂದ ಅನುಭವಮಂಟಪದ ಸ್ಥಳದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ವೀರಶೈವ ಕಾವ್ಯಗಳಲ್ಲಿ, ಶರಣರ ವಚನಗಳಲ್ಲಿ ಅದರ ಉಲ್ಲೇಖಗಳಿವೆ. ಈ ದಾಖಲೆಗಳಿಗೆ ಕಳಶಪ್ರಾಯವಾಗಿರುವ ಸೊನ್ನಲಾಪುರದ ದೇವಾಲಯ ಹಾಗೂ ಅಲ್ಲಿಯ ಕೆರೆ ಪ್ರಭುಲಿಂಗಲೀಲೆಯಲ್ಲಿ ಬರುವ ಸಿದ್ಧರಾಮನ ಗತಿಯ ಸನ್ನಿವೇಶಕ್ಕೆ ಪ್ರಬಲ ಆಧಾರಗಳಾಗಿ ನಿಲ್ಲುತ್ತವೆ.

ಚಾಮರಸನ ಕಾವ್ಯದಲ್ಲಿ ಹಲವಾರು ಚಾರಿತ್ರಿಕ ಅಂಶಗಳಿರುವಾಗಲೂ ಅದು ಗಮನಾರ್ಹ ಚಾರಿತ್ರಿಕ ಕಾವ್ಯವಾಗಿಲ್ಲವೆಂದು ಸಮರ್ಥಿಸುವ ಅಂಶಗಳೂ ಅಲ್ಲಿ ಗೋಚರಿಸುತ್ತವೆ. ಪರಮೇಶ್ವರ, ಪಾರ್ವತಿ, ಮಮಕಾರ, ಮೋಹಿನಿ, ಮಾಯೆ, ಅಹಂಕಾರಾಚಾರ್ಯ, ವಿಮಳೆ, ಸುಜ್ಞಾನಿ, ನಿರಹಂಕಾರ, ಸುಮತಿ, ನಿರ್ಮಳ, ಗೊಗ್ಗಯ್ಯ ಇವು ಚರಿತ್ರೆಯಲ್ಲಿ ಎಲ್ಲಿಯೂ ಕಂಡು ಬರದ ಹೆಸರುಗಳು. ಇಲ್ಲಿ ಬರುವ ದೂರ್ವಾಸಮುನಿ ದ್ವಾಪರ ಯುಗದಿಂದ ಕಲಿಯುಗಕ್ಕೆ ಕಾಲಿಟ್ಟಿದ್ದಾನೆ. ಅಲ್ಲದೇ ಚಾಮರಸ ತಿಳಿಸುವಂತೆ ಎಲ್ಲ ಶರಣಶರಣೆಯರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟಿರುವ ಗುರು ಅಲ್ಲಮಪ್ರಭುವಾಗಿಲ್ಲದಿರುವುದು ಬೇರೆ ಆಧಾರಗಳಿಂದ ತಿಳಿದು ಬರುತ್ತದೆ.

ಲೀಲೆಗೆ ಸಂಬಂಧಿಸಿದ ವಿಷಯಗಳನ್ನು ಚರಿತ್ರೆಗೆ ಸೇರಿಸುವುದು ಅಸಾಧ್ಯದ ಮಾತು. ಮಾಯಾ ವಿಡಂಬನೆ ಮಾಡಿದ್ದು; ಗೊಗ್ಗಯ್ಯ, ಸಿದ್ಧರಾಮ, ಗೋರಕ್ಷ ಇವರುಗಳ ಪವಾಡರೂಪದ ಪ್ರಸಂಗಗಳು; ಪ್ರಭುಕೀವು ರಕ್ತ ಸೋರುವ ಹುಣ್ಣುಗಳಿಂದ ಎಲ್ಲ ಕಡೆಗೂ ತೋರುವುದು; ಅವನು ಬಸವಣ್ಣನ ಮನೆಯಲ್ಲಿ ಆರೋಗಣೆ ಮಾಡಿದ ಪ್ರಸಂಗ ಇವೆಲ್ಲವುಗಳನ್ನು ಯುಕ್ತಾಯುಕ್ತವಾಗಿ ವಿವರಿಸುವಲ್ಲಿ ಚರಿತ್ರೆ ಸಹಾಯಕ್ಕೆ ನಿಲ್ಲುವುದಿಲ್ಲ.

'ಚಾಮರಸ ಕಾವ್ಯದಲ್ಲಿ ಪ್ರಭುವಿನ ಲಿಂಗರೂಪದ ಲೀಲೆಯನ್ನು ಪ್ರತಿಪಾದಿಸಿದ್ದಾನೆಂಬುದಕ್ಕೆ ಅವನು ಕಾವ್ಯವನ್ನು ಹೆಸರಿಸಿದ ಕ್ರಮವೇ ಸ್ಪಷ್ಟಪಡಿಸುತ್ತದೆ' ಎಂಬ ವಿಚಾರದಿಂದ ಪ್ರೇರಿತರಾಗಿ ಪ್ರಭುಲಿಂಗಲೀಲೆಯನ್ನು ಪ್ರಭುವಿನ ಲೀಲೆಯ ರೂಪದಲ್ಲಿ ಸ್ವೀಕರಿಸಿದವರಿದ್ದಾರೆ. ವೈಶಿಷ್ಟ್ಯವೆಂದರೆ ಚರಿತ್ರಕಾವ್ಯವೆಂದು ತಿಳಿಸಿದವರೇ ಅದು ಲೀಲಾರೂಪದ ಪುರಾಣಕಾವ್ಯವೆಂದು ಮೌನವಾಗಿ

[illegible]

[illegible]

[illegible]

[illegible]

[illegible]

ಒಪ್ಪಿಕೊಂಡಿದ್ದಾರೆ. ಶ್ರೀ. ಎಂ. ಆರ್. ಶ್ರೀಯವರು ಪ್ರಭುಲಿಂಗಲೀಲೆ ವೀರಶೈವ ಪುರಾಣವಾಗಿ ಪರಿಗಣಿತವಾಗುತ್ತದೆಂದೂ ಅದು ಕವಿಯ ಅಭಿಪ್ರಾಯದಲ್ಲಿ ಜೀವನಚರಿತ್ರೆ ಮಾತ್ರವಾಗಿರದೆ ವೇದಾಂತದ ಸಾರವೂ ಆಗಿದೆಯೆಂದು ತಿಳಿಸುತ್ತಾರೆ.[೧೪೪] ಶ್ರೀ ಬಸವನಾಳರು, 'ಚಾಮರಸನು ಶ್ರೀ ಮದಲ್ಲಮಪ್ರಭುವಿನ ಲೀಲೆಯನ್ನು ರಸೈಕದೃಷ್ಟಿಯಿಂದ ಕಾವ್ಯರೂಪವಾಗಿ ರಚಿಸಿ ಕೃತಕೃತ್ಯನಾಗಿದ್ದಾನೆ' ಎಂದು ತಿಳಿಸುತ್ತಾರೆ.[೧೪೫] ಡಾ. ಮುಗಳಿಯವರು ಅದು ಲಿಂಗನು ಮಾಡಿದ ಲೀಲೆಯೆಂದು ತಿಳಿಸುತ್ತ ಕಥಾರಚನೆಯಲ್ಲಿ ಆಧ್ಯಾತ್ಮಿಕವಾದ ಸಾಂಕೇತಿಕ ಧ್ವನಿಯ ಏಕತೆ ಕಾಣುತ್ತದೆಂದು ತಿಳಿಸುತ್ತಾರೆ.[೧೪೬] ಡಾ. ಸುಂಕಾಪುರರು ಅದು ಲೋಕಕಲ್ಯಾಣಕ್ಕಾಗಿ ಎಸಗಿದ ಲೀಲೆಯನ್ನು ವಿವರಿಸುವ ಸತ್ಕಾವ್ಯವೆಂದು ತಿಳಿಸುತ್ತ ಪ್ರಭು ತನ್ನ ಲೀಲೆಯಲ್ಲಿ ಅಂತರ್ಮಾರ್ಗದೋಜೆಯನ್ನು ಬೋಧಿಸುತ್ತಾನೆಂದು ಅಭಿಪ್ರಾಯ ಪಡುತ್ತಾರೆ.[೧೪೭] ಡಾ. ವೃಷಭೇಂದ್ರಸ್ವಾಮಿಗಳ ದೃಷ್ಟಿಯಲ್ಲಿ ಅದು ಪ್ರಭುದೇವನ ಲೀಲಾವಿಲಾಸದ ಅಭಿವ್ಯಕ್ತಿ ಮತ್ತು ಇದರಲ್ಲಿ ಅವನು ತನ್ನ ಲೀಲಾವಿನೋದ ನಾಟಕವನ್ನು ಆಡಿ-ಮಾಡಿ ತೋರಿಸಿದ್ದಾನೆ.೧೪೮ 'ಪ್ರಭುಲಿಂಗಲೀಲೆ' ವಿಶ್ವದ ಸಚಾರಚರ ಲೀಲೆಯಾಗಿದೆ.[೧೪೯] ಹಾಗೂ ಲೀಲೆಯಾಗಿ ಸಾಗುತ್ತಲೂ ಇದೆ.[೧೫೦] ಡಾ. ವಿದ್ಯಾಶಂಕರರ ದೃಷ್ಟಿಯಲ್ಲಿ ಅದು ಶಿವರೂಪಿಯಾದ ಅಲ್ಲಮಪ್ರಭುವಿನ ಲೋಕೋದ್ಧಾರಕ ಲೀಲೆಗಳ ಕಥನವಾಗಿದೆ.[೧೫೧]

ವೀರಶೈವ ಇತಿಹಾಸದಲ್ಲಿ ಅಲ್ಲಮಪ್ರಭುವಿನ ಚರಿತ್ರೆ ಯಾವ ಹಂತದಲ್ಲಿಯೂ ನಿಖರವಾಗಿ ದೊರೆತಿಲ್ಲವೆಂಬುದನ್ನು ನೋಡಿದ್ದೇವೆ. ಅವನ ತಂದೆತಾಯಿಗಳ, ಬಂಧು ಬಳಗದವರ ಹೆಸರುಗಳಾಗಲಿ ಕಾರ್ಯಕ್ಷೇತ್ರದ ವ್ಯಾಪ್ತಿಯಾಗಲಿ ಯಾವುದರ ವಿಷಯದಲ್ಲಿಯೂ ಚಾರಿತ್ರಿಕ ಅಂಶಗಳು ಉಪಲಬ್ಧವಿಲ್ಲ. ಹೀಗಿರುವಾಗ ಅಲ್ಲಮನ ಚಾರಿತ್ರಿಕ ಅಂಶಗಳಾಗಿ ವೀರಶೈವ ಪುರಾಣ ಕಾವ್ಯಗಳಲ್ಲಿ ಹುಡುಕಾಡಿದರೆ ಅದು ಕಾವ್ಯಾಂಶಗಳನ್ನು ಚರಿತ್ರೆಯ ಅಂಶಗಳೆಂದು ಭಾವಿಸಿದಂತಾಗುತ್ತದೆ. ಚಾರಿತ್ರಿಕ ಅಂಶಗಳನ್ನು ಕಾವ್ಯದಲ್ಲಿ ಅಳವಡಿಸಬೇಕಾದರೂ ಅವು ಕಾವ್ಯದ ಉದ್ದೇಶವನ್ನು ಸಫಲಗೊಳಿಸುವುದಕ್ಕಾಗಿಯೇ ಹೊರತು ಚಾರಿತ್ರಿಕ ಅಂಶಗಳ ಸಫಲತೆಗಾಗಿ ಅಲ್ಲವೇ ಅಲ್ಲ. ಈಗಾಗಲೇ ನೋಡಿರುವಂತೆ ಕಾವ್ಯದ ವಿವಿಧ ಸ್ತರಗಳನ್ನು ಸಂಯೋಜಿಸಿ ರಚಿಸಿರುವ ಚಾಮರಸನ ಕಾವ್ಯದಲ್ಲಿ ಚಾರಿತ್ರಿಕ ಅಂಶಗಳು ಪ್ರಭುವಿನ ಲೀಲೆಯನ್ನು ಕೀರ್ತಿಸಲು ಪೂರಕವಾಗಿ ತಂದಂಥವುಗಳೆಂದು ಗ್ರಹಿಸುವುದು ಹೆಚ್ಚು ಸಮಂಜಸವೆನಿಸುತ್ತದೆ.

ಪ್ರಾಣಲಿಂಗದ ಸ್ಪರ್ಶವಿಲ್ಲದವರಿಗೆ ದಿನನಿತ್ಯದ ವ್ಯವಹಾರವು ಪಂಚೇಂದ್ರಿಯಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅವರೆಲ್ಲ ಮನಸ್ಸನ್ನು ಸಾಧನ ಮಾಡಿಕೊಂಡು ಬದುಕುತ್ತಿರುತ್ತಾರೆ. ಯಾರಿಗೆ

[illegible]

[illegible]

[illegible]

ಮನಸ್ಸನ್ನು ನಿಗ್ರಹಿಸಿ, ಚಿತ್ತದ ಪರಿಪಾಕವನ್ನು ಸಾಧಿಸಿ ಅದನ್ನು ಸಾಧನ ಮಾಡಿಕೊಂಡು ಬದುಕುವುದು ಸಾಧ್ಯವಿರುತ್ತದೆಯೋ ಅಂಥವರ ವ್ಯವಹಾರವು ಲೋಕವ್ಯವಹಾರಕ್ಕಿಂತ ತೀರ ಭಿನ್ನವಾಗಿರುತ್ತದೆ. ಈ ಎರಡು ವಿಧದವರ ಚರಿತ್ರೆಗೂ ಬಹಳ ವ್ಯತ್ಯಾಸವಿರುತ್ತದೆ. ಲೋಕವ್ಯವಹಾರದವರ ಚರಿತ್ರೆಯು ಬಹಿರ್ಮುಖ ವ್ಯವಹಾರದ ದಾಖಲೆ ಎನಿಸುತ್ತಿದ್ದರೆ ಚಿತ್ತದ ಪರಿಪಾಕದವರ ಚರಿತ್ರೆಯು ಅಂತರ್ಮುಖ ವ್ಯವಹಾರದ ದಾಖಲೆಯಾಗುತ್ತದೆ. ಅಲ್ಲಮ ಪ್ರಭುವಿನ ಇಂಥ ಚರಿತ್ರೆಯನ್ನು ಚಾಮರಸ ಚಾರುಚರಿತ್ರೆಯೆಂದು ಬಗೆದು ಅದನ್ನು ಲೀಲೆಯೆಂದು ಹೆಸರಿಸಿದ್ದಾನೆ. ಇದಕ್ಕೆ ಸಂಬಂಧಿಸಿದಂತೆ ಒಂದು ಪದ್ಯ ಹೀಗಿದೆ–

ಲಿಂಗಭಕ್ತರು ತಿಳಿವು ದಿದನಾ
ವಂಗದಲಿ ಶರಣರುಗಳಾದವ
ರಂಗನೆಯರಳುಪಿಂಗೆ ನೆಜ್‌ನಿರ್ಲೇಪವೃತ್ತಿಯಲಿ ।
ಸಂಗಿಯಂತಿರೆ ನಟಿಸಿ ತಾ ನಿ
ಸ್ಸಂಗಿಯಾಗಿಹ ಪರಿಯನೀ ಪ್ರಭು
ಲಿಂಗಲೀಲೆಯೊಳಾ ಸ್ವತಂತ್ರನ ಚಾರು ಚರಿತೆಯಲಿ ॥ [೧೫೨]

ಶಿವಯೋಗಿಗಳ ಅಂತರಂಗದ ಬದುಕನ್ನೇ ತೆರೆದು ತೋರಿಸಲು ಪ್ರಯತ್ನಿಸಿದೆ ಈ ಪದ್ಯ. ಶರಣರು ಅಂಗನೆಯರ ವಿಷಯದಲ್ಲಿ ನಿರ್ಲಿಪ್ತತೆಯನ್ನು ಹೊಂದಿರುತ್ತಾರೆ. ಈ ಶರಣರ ಸಂಪರ್ಕದಲ್ಲಿ ಶರಣಜೀವಿಗಳು ಬರುವಂತೆ ಲೋಕಜೀವಿಗಳೂ ಬರುತ್ತಾರೆ. ಲೌಕಿಕರೊಂದಿಗೆ ಅವರವರ ಧಾಟಿಯಲ್ಲಿಯೇ ವ್ಯವಹರಿಸುವ ಶರಣರು ಆಂತರ್ಯದಲ್ಲಿ ಅಲೌಕಿಕ ಭಾವವನ್ನೇ ಹೊಂದಿರುತ್ತಾರೆ. ತೋರಿಕೆಗೆ ಲೌಕಿಕರೊಂದಿಗೆ ಬೆರೆಯುವ ಶರಣರ ವೃತ್ತಿಯನ್ನು ಲೌಕಿಕರು ಲೋಕವ್ಯವಹಾರವೆಂದೇ ಭಾವಿಸುತ್ತಾರೆಂದು ಚಾಮರಸನ ಅಭಿಪ್ರಾಯ. ಪ್ರಭುವಿನ ಇಂಥ ಚಾರುಚರಿತ್ರೆಯನ್ನು ನಾವು ಪ್ರಭುಲಿಂಗಲೀಲೆಯಲ್ಲಿ ಗ್ರಹಿಸಬೇಕೆಂದು ಕವಿಯ ಆಶಯವಾಗಿದೆ. ಇದೇ ಅಭಿಪ್ರಾಯವನ್ನು ಅವನು ಬಸವಣ್ಣನ ವಿಷಯದಲ್ಲಿ ವ್ಯಕ್ತಪಡಿಸುತ್ತಾನೆ.[೧೫೩] ಮರುಳುಶಂಕರದೇವನ ವಿಷಯದಲ್ಲಿ ವ್ಯಕ್ತಪಡಿಸುತ್ತಾನೆ. ಮರುಳುಶಂಕರದೇವನ ಚಾರುಚರಿತ್ರೆಯು ಅರಿವಿನ ತಿರುಳೆಂದೂ ಲಿಂಗಾಗಮದ ಹೊಳಹಿನ ಹುರುಳೆಂದೂ, ನಿರ್ಮಲವಾದ ಧರ್ಮವೆಂದೂ ಪ್ರಭುವಿನಿಂದ ನುಡಿಸುತ್ತಾನೆ.[೧೫೪]

[illegible]

[illegible]

[illegible]

ಆ) ವ್ಯಂಗ್ಯ : ಪ್ರಭುವಿನ ಲೀಲೆಯ ರೂಪದಲ್ಲಿ

ಪ್ರಾಣವೆಂದರೇನೆಂಬುದನ್ನು ತಿಳಿದುಕೊಂಡು ಅದನ್ನು ನಿಗ್ರಹಿಸುವುದನ್ನು ಕಲಿತಾಗ ಆ ವ್ಯಕ್ತಿಗೆ ಪ್ರಪಂಚದಲ್ಲಿರುವ ಪ್ರತಿಯೊಂದು ಶಕ್ತಿ ಕರಗತವಾಗುತ್ತದೆಂಬುದನ್ನು ನೋಡಿದ್ದೇವೆ. ಅಮನಸ್ಕ ಸ್ಥಿತಿ ಎಂದು ಕರೆಯಲ್ಪಡುವ ಮನೋಲಯದಿಂದಾಗಿ ಅಪಾರ ಶಕ್ತಿಯನ್ನು ಕರಗತ ಮಾಡಿಕೊಳ್ಳುವವನು ಮನುಷ್ಯ ಸಹಜವಲ್ಲದ ಕ್ರಿಯೆಗಳಲ್ಲಿ ತೊಡಗುತ್ತಾನೆ. ಆಗ ಆತ ಅಧಃಸೃಷ್ಟಿಯಿಂದ ಊರ್ಧ್ವಸೃಷ್ಟಿಯ ಆಚೆಗೂ ವಿಹರಿಸಬಲ್ಲ.[೧೩೫] ಇಂಥ ಅಮನಸ್ಕ ಯೋಗಿಯ ಬದುಕನ್ನು ಚಿತ್ರಿಸುವ ಕಾವ್ಯ ಅಮನಸ್ಕ ಕಾವ್ಯವು. ಚಾಮರಸ ಕವಿಯು ಪ್ರಭುದೇವರ ಅಮನಸ್ಕ ಬದುಕಿನ ಹಲವಾರು ಮುಖಗಳನ್ನು, ಬೋಧೆಗಳನ್ನು ಚಿತ್ರಿಸಿದ್ದಾನೆ.[೧೩೬] ಈ ವಿಚಾರದ ಹಿನ್ನೆಲೆಯಲ್ಲಿ ಮಾಯೆ, ಗೊಗ್ಗಯ್ಯ, ಸಿದ್ಧರಾಮ, ಗೋರಕ್ಷ ಇವರ ಪ್ರಸಂಗಗಳನ್ನು ಹಾಗೂ ಬಸವಣ್ಣನಲ್ಲಿ ಆರೋಗಣೆ ಮಾಡಿದುದನ್ನು 'ಪ್ರಭುವಿನ ಲೀಲೆ'ಯ ಕ್ಷೇತ್ರವ್ಯಾಪ್ತಿಗೆ ತಂದು ಪರಿಶೀಲಿಸಬೇಕು.

ಪ್ರಭು ಲಿಂಗಸ್ವರೂಪನಾಗಿ ಲೀಲೆಗಳನ್ನು ತೋರುತ್ತ ಕಾವ್ಯದುದ್ದಕ್ಕೂ ಸುಳಿದಿದ್ದಾನೆ. ಆದರೂ ಮನುಷ್ಯ ಮಾತ್ರರಿಗೆ ಅಸಾಧ್ಯವೆಂಬಂತೆ ತೋರುವ ಕೆಲವು ಪ್ರಸಂಗಗಳು ಪ್ರಮುಖ ಲೀಲೆಗಳಾಗಿ ಗೋಚರಿಸುತ್ತವೆ. ಇವುಗಳಲ್ಲಿ ಮಾಯೆಯ ಪ್ರಸಂಗವೂ ಒಂದು. ಸಾಹಿತ್ಯ, ಧರ್ಮ, ತತ್ತ್ವದೃಷ್ಟಿಗಳಿಂದ ಪರಿಶೀಲಿಸಿದಾಗ, ಅತ್ಯಂತ ಮಹತ್ವದ್ದೆನಿಸುವ ಈ 'ಮಾಯಾವಿಡಂಬನೆ'ಯ ಸಂಪುಟ ಅನ್ಯಾದೃಶವಾದು-ದಾಗಿದೆ.[೧೩೭] ಮಾಯೆಯ ಸಖಿಯರು ಅಲ್ಲಮನನ್ನು ಒಲಿಸಿ ಅವಳು ಮಲಗುವ ಮನೆಗೆ ಕರೆತಂದು ಒಳಕ್ಕೆ ಹೊಗಿಸುತ್ತಾರೆ. ಆ ಪ್ರಸಂಗದಲ್ಲಿ ಅಲ್ಲಮ ಮಾಯಾದೇವಿಗೆ ಮಿಂಚಿನ ಹೊಳಪಿನಂತೆ ಗೋಚರಿಸುತ್ತಾನೆ ಹಾಗೂ ಅವಳ ಅಪ್ಪುಗೆಗೆ ಒಳಗಾಗುವುದಿಲ್ಲ. ಬಯಲಿನಂತೆ ಸೋಂಕಿದರೂ ಸಂಭೋಗಕ್ಕೆ ಸಿಕ್ಕುವುದಿಲ್ಲ, ಅಕ್ಷರದಂತೆ ಬಾಯಲ್ಲಿ ನಲಿದರೂ ಚುಂಬನಕ್ಕೆ ಸಿಕ್ಕುವುದಿಲ್ಲ. ಮಾಯೆ ಲೋಕವನ್ನು ಮರುಳು ಮಾಡುತ್ತ ನರ್ತಿಸುತ್ತಿದ್ದರೆ ಪ್ರಭು ಮದ್ದಳೆಯನ್ನು ಬಾರಿಸುತ್ತ ಮಾಯಾಂಗನೆಯನ್ನು ಆಡಿಸುತ್ತಿರುತ್ತಾನೆ. ಅವನು ಮಾಯೆಯಲ್ಲಿ ಮಾತ್ರವಲ್ಲ ವಿಮಳೆಯಲ್ಲೂ ಸಂದೇಹವನ್ನು ಹುಟ್ಟು ಹಾಕುತ್ತಾನೆ.

ಕಾವ್ಯದಲ್ಲಿ ಮಾಯಾಪ್ರಸಂಗವು ಪ್ರಭುವಿನ ನಕಾರಾತ್ಮಕ ಲೀಲೆಯಾಗಿದ್ದರೆ ಗೊಗ್ಗಯ್ಯ, ಸಿದ್ಧರಾಮ, ಗೋರಕ್ಷರ ಪ್ರಸಂಗಗಳು ಸಕಾರಾತ್ಮಕ ಲೀಲೆಗಳಾಗಿವೆ. ಗೊಗ್ಗಯ್ಯ ಸೊಗಸಾಗಿ ಅರಳಿದ

ಹೂಗಿಡಗಳ, ಲತಾಮಂಟಪಗಳ ತೋಟದ ಒಡೆಯ ಅಲ್ಲಮ ಅವನಿಗೆ ಒಂದು ನಿಮಿತ್ತ ದೃಷ್ಟಾಂತವನ್ನು ತೋರಿಸುತ್ತಾನೆ. ಕೃಪೆಯ ಚಿತ್ತದಲ್ಲಿ ಗೊಗ್ಗಯ್ಯ ಉಳುತ್ತ ಹೋದಾಗ ನಿಮಿಷ ಮಾತ್ರದಲ್ಲೇ ಅವನಿಗೆ ಹೊಂಗಳಸವೊಂದನ್ನು ತೋರಿಸುತ್ತಾನೆ. ಅಲ್ಲಿ ಸಮಾಧಿಸ್ಥನಾಗಿದ್ದ ಅನಿಮಿಷಯ್ಯನನ್ನು ಇಬ್ಬರೂ ಕಾಣುತ್ತಾರೆ. ಅವನ ಕೈಯಲ್ಲಿದ್ದ ಅತ್ಯಂತ ಪ್ರಕಾಶಮಾನವಾದ ಲಿಂಗವೂ ಜೀವಕಳೆಯೂ ಬಂದು ಅಲ್ಲಮನನ್ನು ಸೇರಿಕೊಳ್ಳುತ್ತವೆ.

ಗೊಗ್ಗಯ್ಯ ಲೌಕಿಕನಾಗಿದ್ದರೆ ಸಿದ್ಧರಾಮ ಸಾಧನೆಯ ಮಾರ್ಗದಲ್ಲಿ ಮುಂದುವರೆಯುತ್ತಿದ್ದವನು. ಪ್ರಭು ಗೊಗ್ಗಯ್ಯನನ್ನು ಭಕ್ತನ ರೂಪದಲ್ಲಿ ಕಂಡು ಉದ್ಧರಿಸಲುದ್ಯುಕ್ತನಾದರೆ ಸಿದ್ಧರಾಮನನ್ನು ಕರ್ಮಯೋಗಿಯ ರೂಪದಲ್ಲಿ ಕಂಡು ಅವನನ್ನು ಉದ್ಧರಿಸಲು ಮುಂದಾಗುತ್ತಾನೆ. ಸತಿಸುತರ ಕೂಟವು ಭಯವೆಂದು ಸಂಸಾರವನ್ನು ನಿರಾಕರಿಸಿ ಮತ್ತೆ ಬೋಳುಮಂಡೆಯ ಕೀರ್ತಿಗಾಗಿ ಸಿದ್ಧರಾಮ ಗುರಿಯಾದುದಕ್ಕಾಗಿ ಅಲ್ಲಮ ಆಶ್ಚರ್ಯಪಡುತ್ತ ಅಲ್ಲಿ ಕೆಲಸ ಮಾಡುತ್ತಿದ್ದವರ ಮುಂದೆ ಅವನನ್ನು ನಿಂದಿಸುತ್ತಾನೆ. ಅವರು ಅವನನ್ನು ಬಂಧಿಸಹೋದರೆ ಅಲ್ಲಮ ಅಪ್ಪುಗೆಗೆ ಸಿಕ್ಕವುದಿಲ್ಲ. ಸಿಟ್ಟಿಗೆದ್ದ ಅವರು ಕಲ್ಲು ಗುಂಡುಗಳ ಮಳೆ ಸುರಿಸಿದರೆ ಅವು ನಿರ್ದೇಹಿಯಾದ ಅವನಿಗೆ ತಾಗುವುದಿಲ್ಲ. ಇದಕ್ಕೆ ಪ್ರತಿಯಾಗಿ ಕಲ್ಲುಗಳ ರಾಶಿಯ ಮೇಲೆ ಅಲ್ಲಮ ನಗುತ್ತ ನಿಂತುಕೊಳ್ಳುತ್ತಾನೆ, ಬಹುರೂಪಗಳಿಂದ ಶೋಭಿಸುತ್ತಾನೆ. ಕೋಪೋದ್ರಿಕ್ತನಾದ ಸಿದ್ಧರಾಮ ಗುಡುಗುತ್ತ ಬಂದಾಗ ಕೋಪ ಅವನಿಗೆ ತಕ್ಕುದಲ್ಲವೆಂದು ಅಲ್ಲಮ ಹೇಳುತ್ತಿದ್ದರೆ ಅವನನ್ನು ಭಸ್ಮ ಮಾಡುವುದಕ್ಕಾಗಿ ಸಿದ್ಧರಾಮ ನೊಸಲಗಣ್ಣು ತೆರೆಯುತ್ತಾನೆ. ಪ್ರಭು ಸರ್ವನಾಶವನ್ನು ತಪ್ಪಿಸುವುದಕ್ಕಾಗಿ ತನ್ನ ಅಡಿಗಳಿಂದ ಆ ಜ್ವಾಲೆಯನ್ನು ತೊಡೆದು ಹಾಕುತ್ತಾನೆ.

ಗೋರಕ್ಷ ಕಾಯವನ್ನು ವಜ್ರಕಾಯ ಮಾಡಿಕೊಂಡಿರುತ್ತಾನೆ. ಅವನ ಸೂಚನೆಯಂತೆ ಅಲ್ಲಮ ಅವನ ಶರೀರಕ್ಕೆ ಖಡ್ಗದಿಂದ ಹೊಡೆದಾಗ ಏನೂ ತೊಂದರೆಯಾಗದೆ ಖಣಿಲೆಂದು ಶಬ್ದ ಮಾತ್ರ ಹುಟ್ಟುತ್ತದೆ. ಅಲ್ಲಮನ ಸೂಚನೆಯಂತೆ ಗೋರಕ್ಷ ಅವನನ್ನು ಅದೇ ಖಡ್ಗದಿಂದ ಹೊಡೆದಾಗ ಬಯಲಲ್ಲಿ ಬೀಸಿದಂತೆ ಖಡ್ಗದ ಹೊಡೆತಕ್ಕೆ ಶಬ್ದ ಕೂಡ ಹೊರಡದಾಗುತ್ತದೆ.

[illegible]

[illegible]

[illegible]

ಬಸವಣ್ಣನ ಮನೆಯಲ್ಲಿ ಆರೋಗಣೆ ಮಾಡುವ ಪ್ರಭು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರಿಗಾಗಿ ಮಾಡಿದ ಅಡಿಗೆಯನ್ನೂ ಉಗ್ರಾಣದಲ್ಲಿಯ ಆಹಾರ ಸಾಮಗ್ರಿಗಳನ್ನೂ ಭಕ್ಷಿಸುತ್ತಾನೆ. ಏನನ್ನೂ ಸೇವಿಸದ ಜಂಗಮರು ಅಲ್ಲಮನ ಆರೋಗಣೆಯಲ್ಲಿಯೇ ತೃಪ್ತರಾಗಿರುತ್ತಾರೆ.

೯) ಧ್ವನಿ : ಶಿವಯೋಗದ ಪ್ರತಿಮೆಯಾಗಿ

ಪ್ರಭುಲಿಂಗಲೀಲೆಯನ್ನು ವಾಚ್ಯಾರ್ಥಕ್ಕೆ ಸೀಮಿತಗೊಳಿಸಿ ಅದು ಚರಿತ್ರಕಾವ್ಯವೆಂದು ಪ್ರತಿಪಾದಿಸುವ ಪ್ರಸಂಗದಲ್ಲಿ ಎದುರಾಗುವ ತೊಂದರೆಗಳನ್ನು ನೋಡಿದ್ದಾಯಿತು. ಕಾಲ್ಪನಿಕ ಪಾತ್ರಗಳು, ಲೀಲೆಗೆ ಸಂಬಂಧಿಸಿದ ಪ್ರಸಂಗಗಳು ಇವೇ ಮುಂತಾದವುಗಳು ಚರಿತ್ರೆಯ ಪರಿಧಿಯನ್ನು ಮೀರಿ ಹೊರಗೆ ಗೋಚರಿಸತೊಡಗಿದುದನ್ನು ಕಂಡು ಚಾಮರಸ ತನ್ನ ಕಾವ್ಯದಲ್ಲಿ ಚರಿತ್ರೆಯೊಂದಿಗೆ ಲೀಲೆಯನ್ನು ಸಂಯೋಜಿಸಿ ನಿರೂಪಿಸಿದ್ದಾನೆಂಬ ಅಭಿಪ್ರಾಯಕ್ಕೆ ಬಂದುದನ್ನು ನೋಡಲಾಯಿತು. ಕಾವ್ಯ ಚರಿತ್ರೆ ಹಾಗೂ ಲೀಲೆಗಳ ಸಂಯೋಜಿತ ಪ್ರಯತ್ನವೆಂದು ಬಗೆದರೂ ಅದರಲ್ಲಿ ಪರಿಮಿತಿಗಳನ್ನು, ವಿಕಲ್ಪಗಳನ್ನು, ತ್ರುಟಿಗಳನ್ನು ಕಾಣಬಹುದು. ವಿದ್ವಾಂಸರೂ ಇವುಗಳನ್ನು ಗುರುತಿಸಿದ್ದಾರೆ. ಅವರ ದೃಷ್ಟಿಯಲ್ಲಿ ಇಂಥ ನೂರಾರು ಅಂಶಗಳು ಚಾಮರಸನ ಕಾವ್ಯವನ್ನು ಅದರ ಪೂರ್ಣರೂಪದ ಉದ್ದೇಶಸಾಧನೆಯಿಂದ ವಿಮುಖಗೊಳಿಸಿವೆ!

ಪ್ರಭುಲಿಂಗಲೀಲೆಯ ಮೌಲ್ಯವನ್ನು ನಿಷ್ಕರ್ಷಿಸುವಲ್ಲಿ ವಿದ್ವಾಂಸರು ಅದನ್ನು ಇನ್ನುಳಿದ ವೀರಶೈವ ಕಾವ್ಯಗಳ ಜೊತೆಗೆ ತೌಲನಿಕವಾಗಿ ನೋಡಿದ್ದಾರೆ. ಚಾಮರಸ ಕೊಟ್ಟಿರುವ ಪ್ರಭುವಿನ ಚಿತ್ರಣವನ್ನು ಹಾಗೂ ವಿವಿಧ ಸನ್ನಿವೇಶಗಳನ್ನು ಹರಿಹರನ ಪ್ರಭುದೇವರ ರಗಳೆ ಹಾಗೂ ಮಹಾದೇವಿಯಕ್ಕನ ರಗಳೆ, ಭೀಮ ಕವಿಯ ಬಸವಪುರಾಣ, ಲಕ್ಕಣ್ಣದಂಡೇಶನ ಶಿವತತ್ತ್ವ ಚಿಂತಾಮಣಿ, ಶೂನ್ಯಸಂಪಾದನೆಗಳು, ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ಪರ್ವತೇಶನ ಪ್ರಭುದೇವರ ಸಾಂಗತ್ಯ ಮತ್ತಿತರ ಕೃತಿಗಳಲ್ಲಿಯ ಚಿತ್ರಣ ಹಾಗೂ ಸನ್ನಿವೇಶಗಳೊಂದಿಗೆ ಸಮಾನಾಂತರವಾಗಿಟ್ಟು ಪರೀಶೀಲಿಸಿದ್ದಾರೆ.

ಮಾಯಾದೇವಿಯ ಪ್ರಸಂಗವು ಹರಿಹರ, ಪರ್ವತೇಶ ಮುಂತಾದವರಲ್ಲಿ ಪ್ರಭುಲಿಂಗಲೀಲೆಯಲ್ಲಿ ನಿರೂಪಿಸಿರುವುದಕ್ಕಿಂತ ವ್ಯತ್ಯಾಸವಿರುವುದನ್ನು ಎತ್ತಿ ತೋರಿಸಲಾಗಿದೆ. ಮಾಯೆಯ ಜನನವಾದ ಮೇಲೆ

ದೂರ್ವಾಸಮುನಿಯ ಸನ್ನಿವೇಶವು ಎಳಂದೂರು ಹರೀಶ್ವರನಲ್ಲಿ ವ್ಯತ್ಯಾಸವನ್ನು ಪಡೆದುಕೊಂಡಿದೆ. ಮಾಯೆಯ ಸಖಿಯರಲ್ಲಿ ಒಬ್ಬಳು ಅಲ್ಲಮನನ್ನು ಕಂಡು ಅವನು ಮಾಯೆಯ ಪರವಾಗಿ ಮನಸ್ಸು ಮಾಡಲು ತಿಳಿಸುತ್ತಾಳೆ. ಅವಳು ಮದಮಾನಿ ಎಂದೂ, ಸಕಳೆ ಎಂದೂ ಸೂಚಿಸಲಾಗಿದೆ. ಪ್ರಭುಲಿಂಗಲೀಲೆಯಲ್ಲಿ ಪಾರ್ವತಿ ತಾನೇ ವಿಮಳೆಯನ್ನು ಕಳಿಸಿದರೆ ಪ್ರಭುದೇವರ ಸಾಂಗತ್ಯದಲ್ಲಿ ಈಶ್ವರ ಪಾರ್ವತಿಗೆ ಹಾಸ್ಯ ಮಾಡಿದಾಗ ವಿಮಳೆಯನ್ನು ಕಳಿಸುವುದಾಗುತ್ತದೆ. ವಿಮಳೆ ಬರುವುದರ ಬಗ್ಗೆಯೂ ವಿವಿಧ ಕಾವ್ಯಗಳಲ್ಲಿ ವ್ಯತ್ಯಾಸವಿದೆ. ಮಹದೇವಿಯಕ್ಕನ ಮನೆಗೆ ಕೌಶಿಕ ಸಂಪರ್ಕ ಪಡೆಯುವುದು ಹಾಗೂ ಅಕ್ಕ–ಕೌಶಿಕರ ಸಂಬಂಧ ಕೃತಿಗಳಲ್ಲಿ ಬೇರೆಬೇರೆಯಾಗಿದೆ. ಬಸವಾದಿಗಳ ಜನ್ಮಕಾರಣಗಳು ವೀರಶೈವ ಗ್ರಂಥಗಳಲ್ಲಿ ಒಂದೇ ರೀತಿಯಾಗಿಲ್ಲ. ಚಾಮರಸ ಮತ್ತು ಭೀಮಕವಿಗಳಲ್ಲಿ ಆರೋಗಣೆಯ ಪ್ರಸಂಗದ ಕ್ರಮವು ಬೇರೆಬೇರೆಯಾಗಿದೆ. ಅಲ್ಲಮ ಲಿಂಗೈಕ್ಯನಾಗುವ ಪ್ರಸಂಗವನ್ನು ಚಾಮರಸ ಹೇಳಿಲ್ಲ. ಉಳಿದ ಕಾವ್ಯಗಳಲ್ಲಿ ಈ ಸ್ಥಳವು ಬೇರೆಬೇರೆಯಾಗಿ ಪ್ರಸ್ತಾಪಗೊಂಡಿದೆ. ಹೀಗೆ ಚಾರಿತ್ರಿಕ ದೃಷ್ಟಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಪ್ರಭುಲಿಂಗಲೀಲೆ ಹಾಗೂ ಇನ್ನಿತರ ಕೃತಿಗಳಲ್ಲಿ ಈ ಪ್ರಮುಖ ಅಂಶಗಳನ್ನಲ್ಲದೆ ಇನ್ನೂ ಅನೇಕ ವ್ಯತ್ಯಾಸಗಳನ್ನು ಎತ್ತಿ ತೋರಿಸಲಾಗಿದೆ. ಇದೇ ರೀತಿಯ ವ್ಯತ್ಯಾಸಗಳು ಲೀಲಾರೂಪದ ಪ್ರಸಂಗಗಳಿಗೂ ಅನ್ವಯವಾಗುತ್ತವೆ.

ಪ್ರಭುಲಿಂಗಲೀಲೆಯ ಕಥಾಹಂದರ ಹಾಗೂ ನಿರೂಪಣೆಯಲ್ಲಿಯೂ ನ್ಯೂನತೆಗಳು ಸೂಚಿಸಲ್ಪಟ್ಟಿವೆ. ಕಾವ್ಯದ ವಸ್ತುವನ್ನು ನಿರ್ಣಯಿಸುವಲ್ಲಿ, ಪಾತ್ರಗಳನ್ನು ನಿರೂಪಿಸುವಲ್ಲಿ, ಕಾವ್ಯದ ಸಂಯೋಜನೆಯನ್ನು ಸಾಧಿಸುವಲ್ಲಿ ಚಾಮರಸ ಇಡಿಯಾಗಿ ಸಮರ್ಥನಾಗಿಲ್ಲವೆಂಬ ಅಭಿಪ್ರಾಯಗಳು ಮೂಡಿ ಬಂದಿವೆ. ಮಾಯಾಸಂಪುಟದಲ್ಲಿ ಅಲ್ಲಮನ ಚಿತ್ರಣ ಮಾಯೆಯ ಚಿತ್ರಣದ ಮುಂದೆ ಸಹಜವಾಗಿಲ್ಲವೆನಿಸುವುದೆಂದೂ ಪ್ರಭುವಿನ ಚಿತ್ರಣವನ್ನು ಹಾಗೆ ಕೊಡಮಾಡುವುದು ಚಾಮರಸನಿಗೆ ಪ್ರಿಯವಾಗಿಲ್ಲದಿರುವುದರಿಂದ ಅವನು ಪೇಚಿಗೆ ಒಳಗಾಗಿದ್ದಾನೆಂದೂ ಅಭಿಪ್ರಾಯ ಪಡಲಾಗಿದೆ.[೧೩೮] ವಿಮಳೆಯ ಬಾಯಿಯಿಂದ ಪ್ರಭುವಿನ ವೃತ್ತಾಂತವನ್ನು ತಿಳಿಸುವುದರ ಬದಲಾಗಿ ಕಾವ್ಯಾರಂಭದಲ್ಲಿ ಅದನ್ನು ಪ್ರಸ್ತಾಪಿಸಿದ್ದರೆ ಉಚಿತವಾಗಿರುತ್ತಿತ್ತೆಂದೂ ಚಾಮರಸನಿಂದ ಈ ವಿಷಯದಲ್ಲಿ ಕಾವ್ಯದ ನಾಯಕನಿಗೆ ಸಲ್ಲತಕ್ಕ ಗೌರವ ಸಂದಿಲ್ಲವೆಂದೂ ೧೩೯ ತಿಳಿಸುತ್ತ ವಿಮಳೆಯ ಮೂಲಕ ಭೋಧಿಸಿದ ತತ್ತ್ವಜ್ಞಾನವು ಚಾಮರಸನ ಅಭಿನಿವೇಶವಾಗಿದೆಯೆಂದೂ ಅದು ಕಾವ್ಯದ ಪರಿವೇಶವನ್ನು ಹೊದೆದು

[illegible]

[illegible]

ಬಂದಿಲ್ಲವೆಂದೂ ಅಭಿಪ್ರಾಯ ಪಡಲಾಗಿದೆ.[೧೪೦] ಮಾಯಾಕೋಲಾಹಲದ ಸಂಪುಟವೇ ಒಂದು ಸ್ವಯಂ ಪೂರ್ಣಕಾವ್ಯವೆಂದೂ ಕಾವ್ಯವನ್ನು ಅಷ್ಟೊಂದು ವಿಸ್ತರಿಸಿದ್ದು ಸಮತೂಕವಲ್ಲವೆಂದೂ, ಕವಿಯು ಇದಿಷ್ಟೇ ಕಾವ್ಯವೆಂದು ಭಾವಿಸಿದ್ದಿರಬಹುದೆಂದು ಊಹಿಸುತ್ತ, ಬರೆಯುತ್ತ ಹೋದಂತೆ ಮುಂದಿನ ಘಟನೆಗಳನ್ನು ಜೋಡಿಸಿರಬೇಕೆಂದು ತಿಳಿಯಲಾಗಿದೆ.[೧೪೧] 'ಮಾಯಾಕೋಲಾಹಲ ಸಂಪುಟ' ಹಾಗೂ 'ಆತ್ಮೋದ್ಧರಣ, ಅನತೋದ್ಧರಣ ಸಂಪುಟ ಇವುಗಳನ್ನು ಬೆಸೆಯುವ ಕೊಂಡಿಯಾಗಿ ಬಂದಿರುವ ಅಕ್ಕಮಹಾದೇವಿಯ ಪ್ರಸಂಗವು ನಿರ್ಬಲವಾದ ಕೊಂಡಿಯಾಗಿದೆಯೆಂದು ತಿಳಿಸುತ್ತ ಕಾವ್ಯಶಿಲ್ಪದ ದೃಷ್ಟಿಯಿಂದ ಅದು ಅಸಹಜವೆಂದು ಅಭಿಪ್ರಾಯ ಪಡಲಾಗಿದೆ.[೧೪೨] ಅನಿಮಿಷ ಕಾರುಣ್ಯ ಪ್ರಸಂಗವನ್ನು ತಾನು ಹಾಕಿಕೊಂಡ ನಿರ್ಬಂಧಗಳಿಂದಾಗಿ ಸಮರ್ಥವಾಗಿ ನಿರೂಪಿಸದೆ ಕವಿಯು ಪೆಚ್ಚಾಗಿ ಹೋಗಿದ್ದಾನೆಂದೂ ಗೊಗ್ಗಯ್ಯನಂಥ ಮುಗ್ದ ಭಕ್ತನನ್ನು ತಿದ್ದಲು ಇಂಥ ದಿವ್ಯ ದರ್ಶನದ ಕುರುಹು ಅವಶ್ಯಕವಾಗಿರಲಿಲ್ಲವೆಂದು ತಿಳಿಯಲಾಗಿದ್ದು ಚಾಮರಸನ ಈ ಸನ್ನಿವೇಶವು ಜಾಳುಜಾಳಾಗಿ ಮೂಡಿದೆಯೆಂದು ತಿಳಿಯಲಾಗಿದೆ.[೧೪೩] ಅಕ್ಕಮಹಾದೇವಿಯ ಘಟನೆಯೊಂದಿಗೇ ಪ್ರಭುಲಿಂಗಲೀಲೆ ಮುಗಿಯಬೇಕಾಗಿತ್ತೆಂದೂ ಶಿವಲಿಂಗ ಭಕ್ತಿಯನ್ನು ಬೆಳೆಯಿಸುವುದು ಪ್ರಭುದೇವನ ಉದ್ದೇಶವಾಗಿದ್ದರಿಂದ ಕಥೆ ಮುಂದುವರೆದಿದೆಯೆಂದೂ ಹೇಳಲಾಗಿದೆ.[೧೪೪] ಪ್ರಭುಲಿಂಗವಾದ ಲೀಲಾಸಂಪುಟ ಹಾಗೂ ಲೀಲಾವಿನ್ಯಾಸ ಸಂಪುಟ ಇವುಗಳಲ್ಲಿ ಕಾವ್ಯದೃಷ್ಟಿಯಿಂದ ಸಮರಸ ಸಂಬಂಧ ತೋರುವುದಿಲ್ಲವೆಂದೂ ಪ್ರಭುವಿನ ವಿಕಾಸಶೀಲ ವ್ಯಕ್ತಿತ್ವ ಚಾಮರಸನಲ್ಲಿ ಕೃತಕವಾಗಿ ಮೂಡಿ ಬಂದಿದ್ದು ಅನೇಕ ಸನ್ನಿವೇಶಗಳಲ್ಲಿ ವಿಪರ್ಯಾಸವಾಗಿ ಕಾಣುತ್ತದೆಂದು ತಿಳಿಯಲಾಗಿದೆ.[೧೪೫] ಪ್ರಭುಲಿಂಗಲೀಲೆ ಕಾವ್ಯವು ಕವಿಪ್ರತಿಭೆಯ ಕುಲುಮೆಯಲ್ಲಿ ಏಕರಸವಾಗಿ ಕುದಿದು, ಏಕತ್ವದ ಮೂರ್ತಿಯಾಗಿ ಎರಕಗೊಂಡಂತೆ ಅಭಿವ್ಯಕ್ತಗೊಂಡಿಲ್ಲವೆಂದೂ[೧೪೬] ಚಾಮರಸನು 'ವಿಶ್ವಮಹಾಕವಿ' ಸಾಲಿನಲ್ಲಿ ಆಸೀನನಾಗಲು ಅನಿವಾರ್ಯವಾಗಿ ಅಸಮರ್ಥನಾಗಿದ್ದಾನೆಂದೂ ಅಭಿಪ್ರಾಯ ಪಡಲಾಗಿದೆ.[೧೪೭]

ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ಹುಟ್ಟಿಕೊಂಡಿರುವ ಚಾಮರಸನ ಕಾವ್ಯದ ವಸ್ತು, ವಿನ್ಯಾಸ, ರಚನೆ, ನಿರೂಪಣೆ ಮುಂತಾದವುಗಳ ವಿಷಯದಲ್ಲಿ ಕಳೆದ ಐದೂವರೆನೂರು ವರ್ಷಗಳಲ್ಲಿ ಮೂಡಿ ಬಂದ ಪ್ರತಿಕ್ರಿಯೆಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯ ವರೆಗಿನವು ಕೇವಲ ಧನ್ಯಾತ್ಮಕವಾಗಿವೆ. ಚಾಮರಸನನ್ನು ಹಾಗೂ ಅವನ ಕೃತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ವೀರಶೈವ ಮತದವರಿಂದ ಕೆಲವು ಕಾವ್ಯಗಳು ರಚಿಸಲ್ಪಟ್ಟಿವೆ. ಅವುಗಳಲ್ಲಿ ಸ್ವಮತಾಭಿಮಾನದೊಂದಿಗೆ

[illegible]

ಪರಮತದೂಷಣೆ ಇದ್ದಿರಬಹುದು. ಆದರೆ ಅವುಗಳಲ್ಲಿ ಪ್ರಭುಲಿಂಗಲೀಲೆಯ ಬಗ್ಗೆ ಋಣಾತ್ಮಕ ಧ್ವನಿ ಇಲ್ಲ. ವೈಶಿಷ್ಟ್ಯವೆಂದರೆ ವೀರಶೈವಮತಾನುಯಾಯಿಗಳಲ್ಲದವರಾರೂ ಕಾವ್ಯದ ಬಗೆಗಾಗಲೀ, ಚಾಮರಸನ ಬಗೆಗಾಗಲೀ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ. ಸತ್ತವರ ಕಥೆಯಲ್ಲ[೧೪೮] ಎಂಬ ಮಾತು, ಸಿದ್ಧನಂಜೇಶನ ಗುರುರಾಜಚಾರಿತ್ರದಲ್ಲಿ ಬರುವ ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿಗೆ ಸಂಬಂಧಿಸಿದ ಉಲ್ಲೇಖ, ಕನಕಸ್ನಾನಪ್ರಸಂಗ ಮುಂತಾದವುಗಳಿಗೆ ಪ್ರೇರಣೆ ನೀಡಿರಬಹುದು. ಚಾಮರಸನ ದೃಷ್ಟಿ ಮಾತ್ರ ತೋರಿಕೆಗಾಗಿ ಬದುಕಿ ಲೀಲೆಯನ್ನು ಮೆರೆದವರ'[೧೪೯] ಕಡೆಗೇ ಇದೆ. 'ಸತ್ತವರ ಕಥೆಯಲ್ಲ' ಎಂಬ ಉಕ್ತಿ ಕುಮಾರವ್ಯಾಸನ ಕಾವ್ಯವೊಂದಕ್ಕೇ ಅನ್ವಯವಾಗುವುದಿಲ್ಲ, ಬದಲಾಗಿ ಲೌಕಿಕ ಬದುಕನ್ನು ನೇರವಾಗಿ ಅಥವಾ ಸಾಂಕೇತಿಕವಾಗಿ ಚಿತ್ರಿಸುತ್ತ ಸಾವಿನ ದವಡೆಯಲ್ಲಿ ನುಜ್ಜುಗುಜ್ಜಾದವರ ಪ್ರಸಂಗಗಳನ್ನು ನಿರೂಪಿಸಿದವರೆಲ್ಲರ ಕೃತಿಗಳಿಗೂ ಅನ್ವಯವಾಗುತ್ತದೆ. ಆದೇ ರೀತಿ ಅದೃಶ್ಯ ಕವಿಮ ಪ್ರೌಢರಾಯನ ಕಾವ್ಯ, ಶಾಂತಲಿಂಗದೇಶಿಕನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ, ಶಂಕರಕವಿಯ ಚೋರಬಸವಚರಿತ್ರೆ ಇವುಗಳಲ್ಲಿ ಚಾಮರಸನ ಕಾವ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಸ್ವಮತಾಭಿಮಾನ ವ್ಯಕ್ತವಾಗಿದೆ. ಅವೆಲ್ಲ ಅಲ್ಲಮಪ್ರಭುಸಂಪ್ರದಾಯ ಎಂದರೇನು ಎಂಬುವುದರ ತಿಳುವಳಿಕೆಯೊಂದಿಗೆ ರಚಿತವಾದ ಕಾವ್ಯಗಳು. ಕಾವ್ಯವನ್ನು ತೆಲುಗಿಗೆ ಭಾಷಾಂತರಿಸಿದ ಪಿಡುಪರ್ತಿ ಸೋಮನಾಥ ಹಾಗೂ ಪಿಡುಪರ್ತಿ ಬಸವಕವಿ, ತಮಿಳಿಗೆ ಭಾಷಾಂತರಿಸಿದ ತಿರುವಣ್ಣಾಮಲೆಯ ಶಿವಪ್ರಕಾಶಸ್ವಾಮಿ, ಮರಾಠಿಗೆ ಭಾಷಾಂತರಿಸಿದ ಬ್ರಹ್ಮದಾಸ, ಸಂಸ್ಕೃತಕ್ಕೆ ಭಾಷಾಂತರಿಸಿದ ಒಬ್ಬ ಅಜ್ಞಾತ ಕವಿ ಇವರೆಲ್ಲ ತಮ್ಮ ಕಾವ್ಯಗಳನ್ನು ರಚಿಸುವಲ್ಲಿ ಪಡೆದುಕೊಂಡ ದರ್ಶನಕ್ಕೆ ಕಾರಣವಾದ ಅಂಶಗಳನ್ನು ಲಕ್ಷಿಸಬೇಕು. ಅವರೆಲ್ಲ ಚಾಮರಸನ ತತ್ತ್ವಸಿದ್ಧಾಂತದ ಸೆಳೆಮಿಂಚಿನಲ್ಲಿ ತಮ್ಮ ಅಭಿವ್ಯಕ್ತಿಯ ದಾರಿಯನ್ನು ಕಂಡುಕೊಂಡವರು. ತಮ್ಮ ತಮ್ಮ ಭಾಷೆಗಳಲ್ಲಿ ಪ್ರಭುಲಿಂಗಲೀಲೆಯ ವಸ್ತುವನ್ನು ಕಾವ್ಯರೂಪಕ್ಕಿಳಿಸಿ ಕೃತಕೃತ್ಯತೆಯನ್ನು ಅನುಭವಿಸಿದ್ದಾರೆ.

ಚಾಮರಸನ ಕಾವ್ಯವನ್ನು ಕುರಿತು ಹತ್ತೊಂಬತ್ತನೆಯ ಶತಮಾನದ ಕೊನೆಯ ವರೆಗಿನ ಪ್ರತಿಕ್ರಿಯೆಗಳಿಗೆ ಹೋಲಿಸಿದರೆ ಇಪ್ಪತ್ತನೆಯ ಶತಮಾನದ ಪ್ರತಿಕ್ರಿಯೆಗಳು ವಿಭಿನ್ನವಾದ ರೂಪಗಳನ್ನು ಪಡೆದುಕೊಂಡಿರುವುದು ಕಂಡು ಬರುತ್ತದೆ. ಇದಕ್ಕೆ ಅಲ್ಲಮಪ್ರಭುಸಂಪ್ರದಾಯವನ್ನು ಅರ್ಥೈಸಿಕೊಳ್ಳ-ದಿರುವುದೂ ಕಾರಣಾವಾಗಿರಬಹುದು. ಅತ್ಯಂತ ಗುಪ್ತವಾಗಿ ನಡೆದುಕೊಂಡು ಬಂದಿರುವ ಶಿವಯೋಗದ ಅಂತರಂಗಾಚರಣೆಯ ಸ್ಪರ್ಶವಿರದ ಕಾರಣದಿಂದಾಗಿ ಶಿವಶರಣರ ವಚನಗಳನ್ನು ಬೇರೆಬೇರೆ

[illegible]

[illegible]

ಚೌಕಟ್ಟುಗಳಲ್ಲಿ ಅರ್ಥೈಸುವುದನ್ನು ಕಾಣುತ್ತೇವೆ. ಅದೇ ರೀತಿ ಈ ವಿಷಯದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಪ್ರಭುಲಿಂಗಲೀಲೆಯನ್ನು ಅರ್ಥೈಸಿಕೊಳ್ಳುವಲ್ಲಿಯೂ ವ್ಯತ್ಯಾಸ ತೋರಿರುವುದು ಸಹಜ ಹೀಗಾಗಿ ಚಾಮರಸನ ದೃಷ್ಟಿಕೋನದಿಂದ ಭಿನ್ನ ದೃಷ್ಟಿಹೊಂದಿದರಿಗೆ ಕಾವ್ಯದಲ್ಲಿ ದೋಷಗಳು ಗೋಚರಿಸಿರುವುದೂ ಸಹಜ. ಪ್ರಭುಲಿಂಗಲೀಲೆಯನ್ನು ಚಾರಿತ್ರಿಕ ಕಾವ್ಯವೆಂದಾಗಲಿ ಲೀಲಾರೂಪದ ಕಾವ್ಯವೆಂದಾಗಲಿ ಅಥವಾ ಅವುಗಳ ಸಂಯೋಜನೆ ಎಂದಾಗಲಿ ನೋಡುವುದರ ಬದಲಾಗಿ ಅದೊಂದು ಶಿವಯೋಗಾಚರಣೆಯ ಪ್ರತಿಮಾ ಕಾವ್ಯವೆಂದು ಪರಿಗಣಿಸಿದರೆ ಇಪ್ಪತ್ತನೆಯ ಶತಮಾನದಲ್ಲಿ ಗುರುತಿಸಲ್ಪಟ್ಟ ನೂರಾರು ದೋಷಗಳಿಂದ ಮುಕ್ತವಾಗಿ ಅದು ಸ್ಫಟಿಕದಂತೆ ಗೋಚರಿಸುತ್ತದೆ.

೨.೬ ಚಾಮರಸನ ಪ್ರತಿಮಾವಿಧಾನ

'ಪ್ರತಿಮಾಕಾವ್ಯದ ವಿಶೇಷತೆಯೆಂದರೆ ಅದು ಮೇಲೆ ನೋಡಲು ತೀರಾ ವರ್ಣನಾತ್ಮಕವೆಂಬಂತೆ ತೋರುತ್ತದೆ. ಆದರೆ ಬಹಿರಂಗ ವಸ್ತುವೊಂದರ ಯಥಾವತ್ತಾದ ಪ್ರತಿಫಲನಕ್ಕಿಂತ ಬೇರೆಯಾದ ಏನೋ ಒಂದನ್ನು ನಮ್ಮ ಕಲ್ಪನೆಗೆ ಮುಟ್ಟಿಸುತ್ತದೆ.'[೧೫೦] 'ದೂರದೂರದ ಎರಡು ವಸ್ತುಗಳಿಗಿರುವ ಯಾವುದೇ ಸಾದೃಶ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಅವೆರಡಕ್ಕಿರುವ ಒಳಸಂಬಂಧವನ್ನು ಕವಿಯ ಪ್ರಜ್ಞೆ ಮಾತ್ರ ಗ್ರಹಿಸಿ, ಅವುಗಳನ್ನು ಸಂಘಟಿಸುವುದರಿಂದ, ಅದು ವರೆಗೂ ಮನೋಗೋಚರವಾಗದಿದ್ದ ಹೊಸತೊಂದು ಹುಟ್ಟಿಕೊಳ್ಳುತ್ತದೆ, ಇದೇ ಪ್ರತಿಮೆ. ಹೀಗೆ ಪ್ರತಿಮೆ ಎಂಬುದು ಕವಿಮನಸ್ಸಿನ ಸೃಜನೆ'[೧೫೧] ಪ್ರಭುಲಿಂಗಲೀಲೆಯಲ್ಲಿ ಬಿಡಿಬಿಡಿಯಾದ ಪ್ರತಿಮೆಗಳನ್ನು ಕಾಣುತ್ತೇವೆ. ಪ್ರಭುವಿನ ಲೀಲಾಸಂಪುಟದ ಭಾಗಗಳಾದ ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ, ಗೋರಕ್ಷ ಇವರ ಪ್ರಸಂಗಗಳು ಪ್ರತಿಮೆಗಳಾಗಿ ತೋರುತ್ತವೆ. 'ಒಂದು ದೃಷ್ಟಿಯಿಂದ ಪಾರ್ವತಿಯ ತಾಮಸ ಕಳೆಯಾಗಿ ಬಂದ ಮಾಯೆ, ಆವಳಿಗೆ ತಿಳಿವನ್ನು ಕೊಟ್ಟ ವಿಮಳೆ, ಸಾತ್ವಿಕ ಕಳೆಯಾಗಿ ಬಂದ ಅಕ್ಕಮಹಾದೇವಿ, ಸುಜ್ಞಾನಿ ಮತ್ತು ನಿರಹಂಕಾರರ ಮಗನಾಗಿ ಹುಟ್ಟಿದ ಅಲ್ಲಮ ಈ ಮುಂತಾದ ಕಥಾರಚನೆಯಲ್ಲಿ ಆಧ್ಯಾತ್ಮಿಕವಾದ ಸಾಂಕೇತಿಕ ಧ್ವನಿಯ ಏಕತೆ ಕಾಣುತ್ತದೆ.'[೧೫೨] ಕೆಲವು ಪ್ರಸಂಗಗಳಲ್ಲಿ ಚಾಮರಸ ಒಂದೊಂದು ಪದ್ಯದಲ್ಲಿಯೇ ಪ್ರತಿಮೆಗಳನ್ನು ಕಟ್ಟಿಕೊಟ್ಟಿರುವುದನ್ನು ಕಾಣಬಹುದು. ಇಡೀ ಕಾವ್ಯವೇ ಶಿವಯೋಗಕ್ಕೆ ಪ್ರತಿಮೆ ಎಂದು ಗ್ರಹಿಸಿ ವಿಶ್ಲೇಷಿಸುತ್ತ ಹೋದಂತೆ ಅಲ್ಲಮಪ್ರಭು ಸಂಪ್ರದಾಯದ ಹೊಳಹುಗಳು ತಮ್ಮಷ್ಟಕ್ಕೆ ತಾವೇ ಬಿಚ್ಚಿಕೊಳ್ಳುತ್ತವೆ. ವೀರಶೈವತ್ವವನ್ನು ನಿರೂಪಿಸುವ ಸಮಗ್ರ ತತ್ವಕ್ಕೆ ರೂಪಪರಿವರ್ತನೆಯನ್ನುಂಟು ಮಾಡಿ

ಅದನ್ನು ಕಾವ್ಯರೂಪಕ್ಕಿಳಿಸುವಾಗ ಆವಶ್ಯಕವಾದ ಪರಿಕರಗಳನ್ನೆಲ್ಲ ಸಮರ್ಥವಾಗಿ ಬಳಸಿ, ಅದಕ್ಕೆ ಚರಿತ್ರೆಯ ಸ್ಪರ್ಶ ಕೊಟ್ಟು ವಸ್ತು ವಿವಿಧ ಸ್ತರಗಳಲ್ಲಿ ವಿಧವಿಧವಾಗಿ ಗೋಚರಿಸುವಂತೆ ಮಾಡಿರುವುದು ಚಾಮರಸನ ಹಿರಿಮೆಯಾಗಿದೆ.

ನಿರ್ಗುಣ ಪರಶಿವನಿಂದ ಮೂಡಿ ಬಂದಿರುವ ಅಂತರಾತ್ಮ ಅಂಗುಷ್ಠ ಪರಿಮಾಣವುಳ್ಳ ಜೀವಾತ್ಮನಾಗಿದ್ದಾನೆ. ಶಿವನ ಅಷ್ಟತನುವನ್ನು ತ್ರಿಮಲಗಳ ರೂಪದಲ್ಲಿ ಪಡೆದಿರುವ ಜೀವಾತ್ಮನನ್ನು ಅವುಗಳಿಂದ ದೂರೀಕರಿಸುವುದಕ್ಕಾಗಿ ಅನುಸಂಧಾನದ ದೀಕ್ಷೆ ಪಡೆಯಬೇಕು. ಗುರು ಹಸ್ತಮಸ್ತಕ ಸಂಯೋಗದಲ್ಲಿ ಅಂತರ್ಗತನಾಗಿದ್ದ ಪರಮಾತ್ಮನನ್ನು ಇಷ್ಟಲಿಂಗದ ರೂಪದಲ್ಲಿ ತೋರಿಸುತ್ತಾನೆ. ಸಾಧನೆಯ ಮಾರ್ಗದಲ್ಲಿ ಮುಂದುವರೆದು ಲಿಂಗಾಂಗಸಾಮರಸ್ಯವನ್ನು ಹೊಂದಿ ಮೋಕ್ಷವನ್ನು ಪಡೆಯುವುದು ಜೀವನ ಅಂತಿಮ ಗುರಿ ಹಾಗೂ ಅದುವೇ ಶಿವಯೋಗಸಿದ್ಧಿ. ಯೋಗದರ್ಶನದಲ್ಲಿ ಇದನ್ನು ಸಮೀಕ್ಷಿಸಿ ಪ್ರಭುಲಿಂಗಲೀಲೆಯಲ್ಲಿ ಶಿವಯೋಗಾಚರಣೆಯ ವಿವಿಧ ಅಂಶಗಳು ಮೂಡಿ ಬಂದಿರುವುದನ್ನು ನೋಡಿದ್ದೇವೆ. ಇಂಥ ತಾತ್ತ್ವಿಕ ವಿಷಯವೊಂದನ್ನು ಕಾವ್ಯರೂಪಕ್ಕೆ ಇಳಿಸುವಲ್ಲಿ, ಅದಕ್ಕೆ ಲೋಕವ್ಯವಹಾರದ ಸ್ಪರ್ಶಕೊಡುವಲ್ಲಿ ಚಾಮರಸ ಸಾಧ್ಯವಿದ್ದಷ್ಟೂ ರಂಜನೀಯವಾಗಿಸಲು ಪ್ರಯತ್ನಿಸಿದ್ದಾನೆ.

ಸಾಮಾನ್ಯರ ಬಳಕೆಯ ಜಗತ್ತನ್ನು ಕವಿಯಾದವನು ನೇರವಾಗಿ ಬಳಸುವುದಿಲ್ಲ ಹಾಗೆ ಮಾಡಿದರೆ ಅದು ಕಾವ್ಯವೆಂದನಿಸಿಕೊಳ್ಳದೆ ಚರಿತ್ರೆಯ ಕ್ಷೇತ್ರವನ್ನು ಪ್ರವೇಶಿಸತೊಡಗುತ್ತದೆ ಇಲ್ಲವೆ ಭೌತಶಾಸ್ತ್ರವೊಂದರ ಸೀಮೆಯನ್ನು ಒಳಗೊಳ್ಳತೊಡಗುತ್ತದೆ. ಅದಕ್ಕೆ ಪ್ರತಿಯಾಗಿ ಕವಿ ಲೋಕಸಂಬಂಧವನ್ನು ಉಳಿಸಿಕೊಂಡು ತನ್ನ ಕಾವ್ಯದ ಉದ್ದೇಶ ಸಾಧನೆಗಾಗಿ ಆ ಬಳಕೆಯ ಜಗತ್ತನ್ನು ಅವನು ಆಯ್ದುಕೊಳ್ಳುತ್ತಾನೆ. ಕಾರಣವೆಂದರೆ ಕಾವ್ಯವನ್ನು ಆಸ್ವಾದಿಸುವವರು ಲೋಕಜೀವಿಗಳೇ ಆಗಿರುತ್ತಾರೆ. ಹೀಗೆ ಕಾವ್ಯೋದ್ದೇಶಕ್ಕೆ ಅವಶ್ಯವೆನಿಸುವಷ್ಟರ ಮಟ್ಟದಲ್ಲಿ ಹಾಗೂ ಅವಶ್ಯವೆನಿಸುವ ರೂಪದಲ್ಲಿ ಕವಿ ಲೋಕವ್ಯವಹಾರವನ್ನು ಬಳಸಿಕೊಳ್ಳುತ್ತಾನೆ. ಅಂದರೆ ಕವಿಪ್ರತಿಭೆಯ ಲೀಲಾವ್ಯಾಪಾರಕ್ಕೆ ಲೋಕವ್ಯವಹಾರವೇ ಆಧಾರ.[೧೫೩] ಕಾವ್ಯದಲ್ಲಿ ಸಮಗ್ರ ಕ್ರಿಯೆಗೆ ಒಂದೇ ಒಂದು ಪ್ರತಿಮೆಯನ್ನು ಸೃಷ್ಟಿಸುವ ಬದಲಾಗಿ ವಿವಿಧ ಹಂತದ ಅಂಶಗಳಿಗೆ ಒಂದೊಂದು ಪ್ರತಿಮೆಯನ್ನು ಸೃಷ್ಟಿಸಿರುವುದು ಚಾಮರಸನ ಅತ್ಯುನ್ನತ ಮಟ್ಟದ ಕಾವ್ಯತಂತ್ರವಾಗಿದೆ. ಅವನು ಅನುಸರಿಸಿದ ತಂತ್ರದ

ವಿಶೇಷತೆಯೇನೆಂದರೆ ಪ್ರತಿಮೆಗಳಿಗೆ ಚರಿತ್ರೆಯಿಂದ ವ್ಯಕ್ತಿಗಳನ್ನು ಆಯ್ದುಕೊಂಡಿರುವುದು, ಅದು ಸಾಧ್ಯವಾಗದ ಅಥವಾ ಆಭಾಸವೆನಿಸುವ ಪ್ರಸಂಗಗಳಲ್ಲಿ ಕಾಲ್ಪನಿಕವಾಗಿ ಸೃಷ್ಟಿಸಿ ಪರಿಣಾಮಕಾರಿಯಾದ ನೇಯ್ಗೆಯ ಮುಖಾಂತರ ಕಾವ್ಯಬಟ್ಟೆಯನ್ನು ತಯಾರಿಸಿರುವುದು. ಈ ಕಾರಣದಿಂದಾಗಿ ಚಾಮರಸನ ಕೃತಿ ಚಾರಿತ್ರಿಕ ಕಾವ್ಯವಾಗಿಯೂ ಗೋಚರಿಸುತ್ತದೆ, ಲೀಲಾರೂಪದ ಕಾವ್ಯವಾಗಿಯೂ ಗೋಚರಿಸುತ್ತದೆ. ಆದರೆ ಕವಿ ಅದನ್ನು ಹೆಸರಿಸಿರುವುದು ಪ್ರಭುಲಿಂಗನ ಲೀಲೆ ಎಂದು.

೨.೭ ಸಾಂಕೇತೀಕರಣ

ನಿತ್ಯ, ನಿರ್ಮಳ, ನಿರಂಜನರೂಪ ಮತ್ತು ಅದಕ್ಕೆ ಹೊಂದಿಕೊಂಡಿರುವ ಪರಾಶಕ್ತಿ ಇವುಗಳನ್ನು ಲೋಕದ ಯಾವುದೇ ಅಂಶಕ್ಕೆ ಹೋಲಿಸಿದರೂ ಅದು ಪೂರ್ಣಪ್ರಮಾಣದಲ್ಲಿ ಸಾಧ್ಯವಾಗುವುದಿಲ್ಲ. ಕಾರಣವೆಂದರೆ ಬ್ರಹ್ಮಾಂಡಕ್ಕೆ ಮೂಲವಾಗಿರುವ ಈ ಎರಡು ಶಕ್ತಿಗಳಿಂದ ಕಣದ ರೂಪದಲ್ಲಿ ಲೋಕವು ಮೂಡಿ ಬಂದು ಚಟುವಟಿಕೆಗಳನ್ನು ಮುಂದುವರೆಸಿದೆ. ಅಂತೆಯೇ ಆ ಎರಡೂ ಶಕ್ತಿಗಳಿಗೆ ಸಂಕೇತಗಳನ್ನು ರೂಪಿಸುವುದರ ಬದಲಾಗಿ ಇನ್ನುಳಿದವರಂತೆ ಚಾಮರಸನೂ ನಿತ್ಯ ನಿರ್ಮಳ ನಿರಂಜನ ರೂಪವನ್ನು ಪರಮೇಶ್ವರ ಎಂದು ಕರೆದಿದ್ದರೆ ಪರಾಶಕ್ತಿಯನ್ನು ಪಾರ್ವತಿ ಎಂದು ಕರೆದಿದ್ದಾನೆ.

ಅ) ಅಲ್ಲಮಪ್ರಭು

ಸರ್ವಶಕ್ತನೂ ಸರ್ವವನ್ನು ಒಳಗೊಂಡವನೂ ಸರ್ವಾಂತರ್ಯಾಮಿಯೂ ಸರ್ವಾಧಿಕನೂ ಪರಿಪೂರ್ಣನೂ ಮಹಾಮಾಯಾವಿಯೂ ಆಗಿರುವ ನಿರ್ಗುಣ ಪರಶಿವನನ್ನು 'ಪ್ರಭು' ಎಂದು ಹೇಳಲಾಗಿದೆ.[೧೫೪] ಪ್ರಭುಲಿಂಗಲೀಲೆಯಲ್ಲಿ ಚಾಮರಸ ಪರಶಿವನನ್ನು ಸಂಕೇತಿಸುವುದಕ್ಕಾಗಿ ಅಲ್ಲಮನನ್ನು ಆಯ್ದುಕೊಂಡಿದ್ದಾನೆ, ಹೀಗೆ ಮಾಡುವಲ್ಲಿ ಪರಶಿವನಿಗೂ ಅಲ್ಲಮನಿಗೂ ಅವಿನಾಭಾವ ಸಂಬಂಧವನ್ನು ಕಲ್ಪಿಸಿದ್ದಾನೆ. ಅವನ ದೃಷ್ಟಿಯಲ್ಲಿ ಶಿವನೇ ಅಲ್ಲಮ, ಅಲ್ಲಮನೇ ಶಿವ. ಹೀಗೆ ಕವಿ ಅಲ್ಲಮನ ಚಿತ್ರಣದಲ್ಲಿ ಪರಶಿವನ ಚಿತ್ರವನ್ನು ಕೊಡುತ್ತಾನೆ. ಆಯಾ ಸಂದರ್ಭಗಳಲ್ಲಿ ಅಲ್ಲಮನನ್ನು 'ಪ್ರಭು' ಎಂದೇ ಸೂಚಿಸುತ್ತಾನೆ. ಕಾವ್ಯದ ಮೊದಲ ಪದ್ಯವೇ ಇದಕ್ಕೆ ಸಾಕ್ಷಿ. ಅಲ್ಲಿ ಹೇಳಿರುವ ಲಕ್ಷಣಗಳೆಲ್ಲವೂ ಪರಶಿವನಿಗೆ ಅನ್ವಯವಾಗುತ್ತವೆ. ಆ ಪದ್ಯವನ್ನು ಚಾಮರಸ ಮುಕ್ತಾಯ ಮಾಡುವುದೂ 'ಗುಹೇಶ್ವರಲಿಂಗ'ನಿಗೆ ಶರಣಾರ್ಥಿಗಳನ್ನು ಸಲ್ಲಿಸುತ್ತ. ಗುಹೇಶ್ವರಲಿಂಗ ಮತ್ತಾರೂ ಆಗಿರದೆ ಎಲ್ಲ ಶಿವಶರಣರು ತಮ್ಮ

[illegible]

[illegible]

[illegible]

[illegible]

[illegible]

[illegible]

ವಚನಗಳಿಗೆ ಬಳಸಿರುವಂತೆ ಅಲ್ಲಮ ಕೂಡ ಬಳಿಸಿರುವ ಪರಶಿವನ ಸಂಕೇತ. ಗುಹೇಶ್ವರನೇ ತಾನೆಂಬುದನ್ನು ಅಲ್ಲಮ ತನ್ನ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾನೆ.

ಕರೆಯದೆ ಬಂದುದ ಹೇಳದೆ ಹೋದುದನಾರು ಬಲ್ಲರು?
ಅಂದಂದಿಗೆ ಬಂದ ಪ್ರಾಣಿಗಳಾರು ಅರಿಯರಲ್ಲ.
ಬಂದಬಂದವರೆಲ್ಲ ಮಿಂದುಂಡು ಹೋದರು
ಗುಹೇಶ್ವರಲ್ಲಯ್ಯನುಣ್ಣದೆ ಹೋದುದನಾರು ಅರಿಯರಲ್ಲ.[೧೫೫]

ಕಾವ್ಯದ ಮೊದಲ ಗತಿಯ ಮೊದಲ ಪದ್ಯದಲ್ಲಿ ಚಾಮರಸ ಅತ್ಯಂತ ಪ್ರಜ್ಞಾಪೂರ್ವಕವಾಗಿ 'ಅಲ್ಲಮ' ಪದವನ್ನು ದೂರೀಕರಿಸಿದ್ದಾನೆ.

'ಪಾರ್ವತಿ ಪರಮೇಶ್ವರ ಸಂವಾದದ ಗತಿ' ಯಲ್ಲಿ ಪರಮೇಶ್ವರ ಪಾರ್ವತಿಗೆ ತಿಳಿಸುವಂತೆ ಅವನ ಸ್ವರೂಪವೇ ಸುಜ್ಞಾನಿ ನಿರಹಂಕಾರರೆಂಬ ದಂಪತಿಗಳ ಭಂಗಗೊಳ್ಳದ ತಪಸ್ಸಿನಲ್ಲಿ ಸುಳಿದಿದೆ.

ಏನು ಹೇಳುವೆನಾದಿಯಲಿ ಸು
ಜ್ಞಾನಿ ನಿರಹಂಕಾರರೆಂಬರ
ನೂನತಪವನು ಮಾಡಲೆನ್ನ ನಿಜಸ್ವರೂಪವರ
ಸೂನುವೆಂಬಂದದಲಿ ಸುಳಿದನು
ತಾನೆಯಲ್ಲಮನೆಂಬ ಪೆಸರೊಳು
ಮಾನಿನಿಯೆ ಕೇಳಾ ಮಹಾತ್ಮನೊಳಱಿವುದಱಿವುಗಳ [೧೫೬]

ನಿರಹಂಕಾರದಿಂದ ಅಖಂಡ ಯೋಗಸಾಧನೆಯಲ್ಲಿ ತೊಡಗುವವರಿಗೆ ಸುಜ್ಞಾನೋದಯವಾಗಿ ಅಂಗುಷ್ಠ ಪರಿಮಾಣದ ಅಂತರಾತ್ಮ ಸುಳಿಯುತ್ತಾನೆ. ಈ ಅಂತರಾತ್ಮ ಪರಮಾತ್ಮನೆಂಬುದನ್ನು ಯೋಗದರ್ಶದಲ್ಲಿ ನೋಡಿದ್ದೇವೆ. ಹೀಗೆ ಅಲ್ಲಮ 'ಪ್ರಭು'ವಾಗಿ ಲೀಲೆಯಲ್ಲಿ ತೊಡಗಿದುದನ್ನು ಚಾಮರಸ ಚಿತ್ರಿಸಿರುವಲ್ಲಿ ಪರಶಿವನ ಲಿಂಗರೂಪದ ಲೀಲೆಯ ಪ್ರತಿಪಾದನೆಯನ್ನು ಕಾಣುತ್ತೇವೆ. ಇಷ್ಟು ಮಾತ್ರವಲ್ಲದೆ ಅಲ್ಲಮನನ್ನು ಗುರು, ಲಿಂಗ, ಜಂಗಮ ಈ ಮೂರು ರೂಪಗಳಲ್ಲಿಯೂ ಚಿತ್ರಿಸಿದ್ದಾನೆ.

ತಾನೆ ತನ್ನ ವಿನೋದದಿಂದ ಮ
ಹಾನುಭಾವವ ಬಯಸಿ ಬಳಲುವ

ಮಾನವರಿಗಾ ಪ್ರಾಣಲಿಂಗವನಱುಹಿಸುವೆನೆನುತ

ತಾನೆ ವರ ಗುರು ತಾನೆ ಜಂಗಮ

ತಾನೆ ಶಿವಲಿಂಗಸ್ವರೂಪವ

ನೂನವಿಲ್ಲದೆ ಧರಿಸಿಕೊಂಡಾ ಪ್ರಭುವೆ ಬರುತಿರ್ದ [೧೫೭]

ಆ) ಮಾಯಾದೇವಿ

ಪ್ರಕೃತಿ ಮಾಯೆಯಾಗಿದ್ದಾಳೆ, ಮಹೇಶ್ವರ ಮಾಯಾವಿಯಾಗಿದ್ದಾನೆ ಹಾಗೂ ಈ ಜಗತ್ತೆಲ್ಲವೂ ಅವನಿಂದ ವ್ಯಾಪ್ತವಾಗಿದೆ.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್

ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ॥ [೧೫೮]

ಪುರುಷರೂಪದ ಪರಶಿವನು ಬ್ರಹ್ಮಾಂಡವನ್ನು ವ್ಯಾಪಿಸಿರುವಂತೆ ಪಿಂಡಾಂಡವನ್ನೂ ವ್ಯಾಪಿಸಿದ್ದಾನೆ. ನಮಗೆ ಜೀವಾತ್ಮನ ರೂಪದಲ್ಲಿ ಪುರುಷನಿದ್ದರೆ ಶರೀರದ ರೂಪದಲ್ಲಿ ಪ್ರಕೃತಿ ಇದ್ದಾಳೆ. ಆಣವಮಲದ ರೂಪದಲ್ಲಿ ಪುರುಷನ ಅಂಶ, ಮಾಯಾಮಲದ ರೂಪದಲ್ಲಿ ಪ್ರಕೃತಿಯ ಅಂಶ ಹಾಗೂ ಕಾರ್ಮಿಕಮಲದ ರೂಪದಲ್ಲಿ ಸಂವರ್ಧನೆ ಸಮ್ಮಿಳಿತಗೊಂಡು ಪಿಂಡರೂಪದ ಜೀವಾತ್ಮ ಜನ್ಮ ತಾಳುತ್ತಾನೆ. ಪರಮಾತ್ಮನ ಅಂಶವಾದ ಜೀವಾತ್ಮ ಪಿಂಡದ ಸೆಳವಿನಲ್ಲಿ ಸಿಲುಕಿಕೊಳ್ಳುವುದು ಮಾಯರೂಪದ ಬಂಧನವೆನಿಸಿದರೆ ಆ ಬಂಧನವನ್ನು ಕಳಚುವುದು ಮಾಯಾಕೋಳಾಹಳ ಎನಿಸುತ್ತದೆ. ನಾಮ-ರೂಪು-ಕ್ರಿಯೆಗಳಿಂದ ಉಂಟಾಗುವ ಪ್ರತಿಬಂಧವನ್ನು ಸಂಕೇತಿಸುವುದಕ್ಕಾಗಿ ಚಾಮರಸ ಮಾಯದೇವಿಯ ಪಾತ್ರವನ್ನು ಸೃಷ್ಟಿಸಿದ್ದಾನೆ. ಶರೀರವೇ ಮಾಯೆ, ಈ ಶರೀರವನ್ನು ಧರಿಸಿರುವ ಸ್ತ್ರೀ ಹಾಗೂ ಪುರುಷ ಇಬ್ಬರೂ ಪರಸ್ಪರರಿಗೆ ಮಾಯೆ. ಪಾರ್ವತಿಯ ತಾಮಸ ಗುಣದಿಂದ ಮಾಯೆ ಮೂಡಿ ಬಂದಿರುವುದರಿಂದ ಪ್ರಭುಲಿಂಗಲೀಲೆಯಲ್ಲಿ ಅದಕ್ಕೆ ಸ್ತ್ರೀ ರೂಪವನ್ನು ಆರೋಪಿಸಲಾಗಿದೆ. ಬದುಕಿನ ಸೃಷ್ಟಿ-ಸ್ಥಿತಿ-ಲಯಗಳ ವಿಷಯದಲ್ಲಿ ಜೀವಿಯು ಜಾಗ್ರತನಾಗಿದ್ದುಕೊಂಡು ಮೋಕ್ಷಕ್ಕೆಳಸುವ ಬದಲಾಗಿ ಅಜ್ಞಾನವಶಾತ್ ಹೆಜ್ಜೆ ಹಾಕುವುದು ಸಹಜ. ಆಗ ಏನೆಲ್ಲವನ್ನೂ ತುಳಿದು ನಿಲ್ಲಬಯಸುವ ಅವನು ಶರೀರ ಸುಖವೇ ಪರಮಸುಖವೆಂದು ಸಾಗುತ್ತಾನೆ. ಈ ಅಜ್ಞಾನವು ತಾರುಣ್ಯದಲ್ಲಿ ಪರಾಕಾಷ್ಠತೆಯನ್ನು ತಲುಪುವ ಸಾಧ್ಯತೆಯಿಂದಾಗಿ ಚಾಮರಸ ಚಿತ್ರಿಸಿರುವ ಮಾಯಾದೇವಿ ತಾರುಣ್ಯದ ಹೊಸ್ತಿಲಲ್ಲಿದ್ದಾಳೆ ಹಾಗೂ

ಶಿವತ್ವಕ್ಕೆ ಸವಾಲು ಹಾಕುವವಳಾಗಿದ್ದಾಳೆ. ಹೀಗೆ ಅಜ್ಞಾನದಿಂದ ಕೂಡಿದ ಮನಸ್ಸಿನ ಪ್ರತಿಕ್ರಿಯೆಗಳು ಮಾಯಾದೇವಿಯ ಪ್ರತಿಕ್ರಿಯೆಗಳ ರೂಪದಲ್ಲಿ ನಿರೂಪಿತವಾಗಿವೆ. ಈ ಅಜ್ಞಾನದ ಸೆಳೆತವು ಮೋಹ-ಮಮಕಾರಗಳಿದ್ದಲ್ಲಿ ತೀವ್ರವಾಗಿ ಮೂಡಿ ಬರುತ್ತದೆಯಾದ್ದರಿಂದ ಮಾಯಾದೇವಿಯ ತಂದೆತಾಯಿಗಳು ಮಮಕಾರ ಹಾಗೂ ಮೋಹಿನಿಯರಾಗಿ ನಿರೂಪಿಸಲ್ಪಟ್ಟಿದ್ದಾರೆ.

ಇ) ದೂರ್ವಾಸಮುನಿ

ಶಮೆ, ದಮೆ, ವಿವೇಕ, ವೈರಾಗ್ಯ, ಮುಂತಾದವುಗಳು ಸಾಧಕನನ್ನು ಪರಿಪೂರ್ಣತೆಯೆಡೆಗೆ ತೆಗೆದುಕೊಂಡು ಹೋಗುವ ಗುಣಗಳು. ಇವುಗಳನ್ನು ಒಳಗೊಂಡವನು ಸರ್ವಸಮತಾಭಾವದಿಂದ ವರ್ತಿಸುತ್ತ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತ ತನ್ನ ಸಂಪರ್ಕದಲ್ಲಿ ಬಂದವರಿಗೆ ಮಾರ್ಗದರ್ಶನ ಮಾಡುತ್ತಿರುತ್ತಾನೆ. ಈ ಗುಣಗಳೆಲ್ಲವನ್ನು ಹೊಂದಿದವನು ನಿಜವಾಗಿಯೂ ಋಷಿಯೇ ಆಗಿರಬೇಕಾಗುತ್ತದೆ. ಈ ಗುಣಗಳನ್ನು ಸಂಕೇತಿಸುವುದಕ್ಕಾಗಿ ಚಾಮರಸ ದೂರ್ವಾಸಮುನಿಯಪಾತ್ರವನ್ನು ಸೃಷ್ಟಿಸಿದ್ದಾನೆ. ದೂರ್ವಾಸ ಆದಿಋಷಿಯಾಗಿರುವುದು ಈ ಮಾತನ್ನು ದೃಢಪಡಿಸುತ್ತದೆ.[೧೫೯]

ಈ) ಮಾಯಾದೇವಿಯ ಸಖಿಯರು

ಪಾರ್ವತಿಯ ತಾಮಸಗುಣದಿಂದ ಮೂಡಿ ಬಂದಿರುವ ಮಾಯಾದೇವಿಗೆ ತಾಮಸಗುಣದ ಲಕ್ಷಣಗಳಾದ ಅಜ್ಞಾನ, ಮೋಹ, ಚಾಪಲ್ಯ, ಹೀನವೃತ್ತಿ, ಪಾಪಿಷ್ಠತ್ವ, ಪರನಿಂದೆ ಮುಂತಾದವುಗಳು ಸಹಕಾರಿಯಾಗಬೇಕಷ್ಟೇ! ಜೀವನಿಗೆ ಇಹಲೋಕದ ಅಧಿದೈವಿಕ ತಾಪತ್ರಯಗಳಾದ ಮದ, ಮತ್ಸರ, ಚಿಂತೆ, ದುಃಖ, ಜನನ-ಮರಣ, ನೆರೆ-ತೆರೆ ಮುಂತಾದವು ತೋರಲು ಸಹಾಯಕವಾಗುವಂತೆ ತಾಮಸಗುಣದ ಲಕ್ಷಣಗಳನ್ನು ಸಂಕೇತಿಸುವುದಕ್ಕಾಗಿ ಚಾಮರಸ ಮಾಯದೇವಿಯ ಸಖಿಯರನ್ನು ಸೃಷ್ಟಿಸಿದ್ದಾನೆ. ಅವರ ಹೆಸರುಗಳಿಂದಲೇ ಯಾರು ಯಾವ ಗುಣವನ್ನು ಸಂಕೇತಿಸುತ್ತಾರೆಂಬುದನ್ನು ತಿಳಿದುಕೊಳ್ಳಬಹುದು. ಅವರುಗಳೆಂದರೆ ಕಾಮರೇಖೆ, ಕಳಾವಿಳಾಸಿನಿ, ಪ್ರೇಮಕಾರಣೆ, ರಾಗಿ, ಲೋಭಿಣಿ, ನಾಮನಿರ್ಮಿತೆ, ಸಕಳಸಂಪದೆ, ಭೋಗಿ, ಮದಮಾನಿ, ಹೇಮೆ ಮತ್ತು ಹೆಕ್ಕಳೆ.[೧೬೦]

ಉ) ಅಹಂಕಾರಾಚಾರ್ಯ

ಸ್ಥೂಲತನುವಿಗೆ ಸೂಕ್ಷ್ಮತನು ಆಧಾರವಾಗಿರುವಂತೆ ಸ್ಥೂಲ–ಸೂಕ್ಷ್ಮಗಳೆರಡಕ್ಕೂ ಕಾರಣತನು ಆಧಾರವಾಗಿದೆ. ಜೀವಾತ್ಮನ ಚೈತನ್ಯ ಹಾಗೂ ಛಾಯೆಯೊಡನೆ ಕೂಡಿ ಇರುವ ಅಹಂಕಾರವನ್ನು ಜ್ಞಾನೇಂದ್ರಿಯಗಳು ಕೂಡಿದಾಗ ವಿಜ್ಞಾನಮಯಕೋಶವೆನಿಸುವುದು.[೧೬೧] ಈ ವಿಜ್ಞಾನಮಯಕೋಶವು ಅನ್ನಮಯಕೋಶಕ್ಕೂ ಆನಂದಮಯಕೋಶಕ್ಕೂ ಸೇತುವೆಯಾಗಿದೆ. ಈ ವಿಜ್ಞಾನಮಯಕೋಶರೂಪವಾದ ಅಹಂಕಾರವನ್ನೇ ಆತ್ಮಾನಾತ್ಮವಿವೇಕಶೂನ್ಯರು ಆತ್ಮನೆಂದು ಬಗೆಯುವರು.[೧೬೨] ಈ ಅಹಂಕಾರಕ್ಕೂ ತಾಮಸಗುಣಕ್ಕೂ ನಿಕಟಸಂಬಂಧ. ಪಾರ್ವತಿಯ ತಾಮಸಗುಣದಿಂದ ಮಾಯೆ ಮೂಡಿ ಬಂದಿದ್ದರೂ ಅವಳಲ್ಲಿ ವಿವೇಕೋದಯವಾಗಿ ಅವಳು ತಲುಪುವ ಗುರಿ ಶಿವಾಂಶವೇ. ಇಂಥ ಮಾಯೆಗೆ ಗುರುವಾಗಿ ಬರುವವನು ಅತ್ತ ಕಾರಣಶರೀರವನ್ನೂ ಹೊಂದದ ಇತ್ತ ಸ್ಥೂಲ ಶರೀರವನ್ನೂ ಹೊಂದದ ವಿಜ್ಞಾನಕೋಶರೂಪದ ಅಹಂಕಾರ ಗುಣದವನೇ ಆಗಿರಬೇಕು. ಈ ಗುಣಗಳಿರುವ ಗುರುವಿನ ಸಂಕೇತವನ್ನು ಬಳಸುವುದಕ್ಕಾಗಿ ಮಾಯಾದೇವಿಯ ತಂದೆಯ ಮನೆತನಕ್ಕೆ ಒಬ್ಬ ಗುರುವನ್ನು ಸೃಷ್ಟಿಸಿರುವ ಚಾಮರಸ ಅವನನ್ನು ಅಹಂಕಾರಾಚಾರ್ಯ ಎಂದೇ ಹೆಸರಿಸಿದ್ದಾನೆ!

ಊ) ವಿಮಳೆ

ದೇಹಸೌಖ್ಯ ಪ್ರವೃತ್ತಿ (materialism) ಯು ಮಾನವನನ್ನು ಹಲವಾರು ಪ್ರಸಂಗಗಳಲ್ಲಿ ಕುರುಡನನ್ನಾಗಿ ಮಾಡುತ್ತದೆ. ಯೌವನದಲ್ಲಿ ಈ ಪ್ರವೃತ್ತಿಯ ಅಟ್ಟಹಾಸವು ಅವನನ್ನು ರಸಾತಳಕ್ಕೇ ಒಯ್ಯುವ ಸಾಧ್ಯತೆಯಿರುತ್ತದೆ. ಇಂಥ ಪ್ರಸಂಗಗಳಲ್ಲಿ ಅವನ ಸಹಾಯಕ್ಕೆ ಬರುವಂಥದೆಂದರೆ ಸಾರಾಸಾರ ವಿಚಾರ ಮಾಡುವ ಶಕ್ತಿ. ಬುದ್ಧಿಗಮ್ಯವಾದ ಇಂಥ ವಿಚಾರಶಕ್ತಿಯಿಂದ ಸನ್ಮಾರ್ಗದಲ್ಲಿ ನಡೆಯುವಂಥವನು ಜೀವನದಲ್ಲಿ ಅರ್ಥಪೂರ್ಣ ಭವಿಷ್ಯವನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ವಿರುದ್ಧವಾಗಿ ವರ್ತಿಸುವವನ ಪತನವು ಇನ್ನಷ್ಟು ತೀವ್ರಗೊಳ್ಳುತ್ತದೆ. ಲಂಗುಲಗಾಮಿಲ್ಲದ ಮನಸ್ಸಿಗೆ ಸ್ನೇಹಾಕಾಂಕ್ಷಿಯಾಗಿ ಮೂಡಿ ಬರುವ ಬುದ್ಧಿಗೆ ಮಹಾಭೂತವನ್ನು ಅಪ್ಪುವಿನ ರೂಪದಲ್ಲಿ, ಅಧಿದೇವತೆಯನ್ನು ವಿಷ್ಣುವಿನರೂಪದಲ್ಲಿ ತಿಳಿಸುತ್ತ ಈ ಬುದ್ಧಿಯ ಕಾರ್ಯವೆಂದರೆ ನಿಶ್ಚಯಿಸುವುದು ಎಂದು ಹೇಳಲಾಗಿದೆ. [೧೬೩] ತಾಮಸಗುಣಗಳ ಸಮೂಹವಾಗಿರುವ ಸಖಿಯರ ಗುಂಪಿನಲ್ಲಿ ಅಜ್ಞಾನವಶಾತ್ ಕುಣಿಯುವ

[illegible]

[illegible]

ಯೌವನಾವಸ್ಥೆಯ ಮಾಯೆಯ ಮನಸ್ಸಿಗೆ ಗುರಿಯ ನೆನಪನ್ನು ತಂದು ಕೊಡುವ ಇಂಥ ಬುದ್ಧಿಯನ್ನು ಸಂಕೇತಿಸುವುದಕ್ಕಾಗಿ ಚಾಮರಸ ವಿಮಳೆಯ ಪಾತ್ರವನ್ನು ಸೃಷ್ಟಿಸಿದ್ದಾನೆ.

ಎ) ಮಹದೇವಿಯಕ್ಕ-ನಿರ್ಮಳ-ಸುಮತಿ

ತಾಮಸಗುಣಗಳಿಗೆ ಪ್ರತಿಯಾಗಿ ಸತ್ಯ, ಜ್ಞಾನ, ತಪ, ಮೌನ, ಹರುಷ, ಶಮೆ, ವಿವೇಕ, ಸಾಹಸ, ನಿಶ್ಚಯ, ಧೈರ್ಯ ಇವು ಸಾತ್ವಿಕ ಗುಣಗಳು[೧೬೪] ತಾಮಸಗುಣಗಳು ಮನಸ್ಸನ್ನು ಹಾಗೂ ಅದರ ಮೂಲಕ ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು, ಬಹಿರ್ಮುಖವಾಗಿ ಹರಿದು, ಜೀವಾತ್ಮನನ್ನು ಜನನ-ಮರಣಗಳ ರಾಟಾಳದಲ್ಲಿ ಸಿಲುಕಿಸುವಂಥವುಗಳಾದ್ದರಿಂದ ಸದಾ ಅವುಗಳಲ್ಲಿಯೇ ಹೊರಳಾಡುವ ಜೀವಿಯು ಅಲ್ಲಮಪ್ರಭು ಸಂಪ್ರದಾಯಕ್ಕೆ ಹೊರಗಾಗಿರುತ್ತಾನೆ. ಭವಕ್ಕೆ ಮೂಲನಾಗುವ ಇಂಥವನು ಶಿವದೀಕ್ಷೆಯಿಂದ ಬಹುದೂರ ಉಳಿಯುತ್ತಾನೆ. ಆದರೆ ಸಾತ್ವಿಕ ಗುಣಗಳನ್ನು ಹೊಂದಿರುವ ಜೀವಿಗೆ ಶಿವಸ್ವರೂಪಿ ಗುರು ಸಂತೋಷದಿಂದ ಮಾರ್ಗದರ್ಶನ ಮಾಡುತ್ತಾನೆ. ಅಂಥವನ ಚಿತ್ತವು ಸ್ವಾತಿಯ ಹನಿಗಾಗಿ ಕಾಯ್ದು ಕುಳಿತಿರುವ ಮುತ್ತಿನ ಚಿಪ್ಪಿನಂತಿರುತ್ತದೆ.[೧೬೫] ಶರಣಸತಿ-ಲಿಂಗಪತಿ ತತ್ತ್ವದಂತೆ ಗಂಡೂ ಸತಿ ಹೆಣ್ಣೂ ಸತಿ. ಇಂಥ ದೀಕ್ಷಾರ್ಹ ಜೀವಿಯನ್ನು ಸಂಕೇತಿಸಲು ಅಕ್ಕಮಹಾದೇವಿಯ ಪಾತ್ರವನ್ನು ಸೃಷ್ಟಿಸಲಾಗಿದೆ. ಇಂಥ ಸಾತ್ವಿಕ ಸ್ವಭಾವವು ಮೂಡಿ ಬರುವುದು ನಿರ್ಮಲ ಚಾರಿತ್ರ್ಯದ ಹಾಗೂ ಸದ್ಬುದ್ಧಿಯ ಅನುಗ್ರಹದಲ್ಲಿ ಅಂತೆಯೇ ಅಕ್ಕಮಹಾದೇವಿಯ ತಂದೆತಾಯಿಗಳು ನಿರ್ಮಳ-ಸುಮತಿಯರು.

ಏ) ಕೌಶಿಕ

ಜೀವಾತ್ಮನನ್ನು ಭವಕ್ಕೆ ಸೆಳೆಯುವಲ್ಲಿ ಪಾರ್ವತಿಯು ಒಳಗೊಂಡಿರುವ ರಾಜಸ ಹಾಗೂ ತಾಮಸ ಗುಣಗಳು ಶಿವಾಂಶಕ್ಕೆ ಪ್ರತಿಕ್ರಿಯಾತ್ಮಕವಾಗಿ ವರ್ತಿಸುತ್ತವೆ. ಅದನ್ನು ಸಂಕೇತಿಸುವುದಕ್ಕಾಗಿ ಅಲ್ಲಮಪ್ರಭು ಮತ್ತು ಮಾಯಾದೇವಿಯ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಪಾರ್ವತಿಯಲ್ಲಿ ಆಶ್ರಯ ಪಡೆದಿರುವ ತಮೋಗುಣಗಳು ಅಲ್ಲಿರುವ ಸಾತ್ವಿಕಗುಣಗಳಿಗೂ ಪ್ರತಿಕ್ರಿಯಾತ್ಮಕವಾಗಿ ವರ್ತಿಸಿ ಜೀವಾತ್ಮನ ಭವಕ್ಕೆ ಕಾರಣವಾಗುವ ಸಾಧ್ಯತೆ ಇರುತ್ತದೆ. ಅಕ್ಕಮಹಾದೇವಿ ಪಾರ್ವತಿಯ ಸಾತ್ವಿಕ ಗುಣಾಂಶವನ್ನು ಹೊತ್ತು ಬಂದಿದ್ದಾಳೆ. ಅವಳ ಈ ಗುಣಾಂಶಕ್ಕೆ ತಮೋಗುಣರೂಪದ ಪ್ರತಿಕ್ರಿಯೆಯನ್ನು ತೋರಿಸಬೇಕಾಗಿದೆ. ಹೀಗೆ ಮಾಡುತ್ತ ತಮೋಗುಣವನ್ನು ಮೀರಿ ಹೋಗುವ ಸಾತ್ವಿಕಗುಣಕ್ಕೆ ಅಂತಿಮವಾಗಿ ಶಿವತ್ವದ ಸಾನ್ನಿಧ್ಯ

ದೊರಕುತ್ತದೆಂಬುದನ್ನು ಚಾಮರಸ ನಿರೂಪಿಸಬೇಕಾಗಿದೆ. ಆದ್ದರಿಂದ ಸಾತ್ವಿಕ ಗುಣಾಂಶದ ಅಕ್ಕಮಹಾದೇವಿಗೆ ಪ್ರತಿಕ್ರಿಯಾತ್ಮಕವಾದ ತಮೋಗುಣವನ್ನು ಸಂಕೇತಿಸುವುದಕ್ಕಾಗಿ ಕವಿ ಕೌಶಿಕನ ಪಾತ್ರವನ್ನು ಸೃಷ್ಟಿಸಿದ್ದಾನೆ. ಇಂಥ ತಮೋಗುಣವನ್ನು ಪ್ರತಿಬಂಧಿಸುವುದು ಅಲ್ಲಮಪ್ರಭು ಸಂಪ್ರದಾಯಕ್ಕೆ ಆವಶ್ಯಕ ಅಂತೆಯೇ ಸಾತ್ವಿಕಗುಣವನ್ನು ಸಂಕೇತಿಸುವ ಅಕ್ಕಮಹಾದೇವಿ ತಮೋಗುಣವನ್ನು ಸಂಕೇತಿಸುವ ಕೌಶಿಕನನ್ನು ಮೀರಿ ಹೋಗುತ್ತಾಳೆ.

ಐ) ಗೊಗ್ಗಯ್ಯ

ಪಂಚೇಂದ್ರಿಯಗಳನ್ನು ಪೂರ್ಣವಾಗಿ ತೃಪ್ತಿಪಡಿಸುವುದೆಂದರೆ ತೂತುಗಳುಳ್ಳ ಪಾತ್ರೆಯನ್ನು ನೀರಿನಿಂದ ತುಂಬಿದಂತೆ! ಈ ಅಸಾಧ್ಯ ಕಾರ್ಯದಲ್ಲಿ ತೊಡಗುವ ಲೋಕಜೀವಿಯು ಬಹಿರ್ಮುಖವಾಗಿ ವ್ಯವಹರಿಸುತ್ತ ಹೋದಂತೆ ಕಾಲನ ಪಾಶವು ಬಿಗಿಯಾಗುತ್ತ ಹೋಗಿ, ಮುಪ್ಪಡರಿ ಕೊನೆಗೊಮ್ಮೆ ಆ ಪಂಚೇಂದ್ರಿಯಗಳ ಮನೆಯಾದ ಶರೀರವನ್ನು ದೂರೀಕರಿಸುತ್ತಾನೆ. ಆದರೆ ಬಹಿರ್ಮುಖವಾಗಿ ಹರಿಯುವ ಮನಸ್ಸನ್ನು ವಶದಲ್ಲಿಟ್ಟುಕೊಂಡವನು ಅರಿಷಡ್ವರ್ಗವನ್ನು, ಸಪ್ತವ್ಯಸನಗಳನ್ನು, ಅಷ್ಟಮದಗಳನ್ನು ಕೂಡ ತನ್ನ ಹಿಡಿತದಲ್ಲಿಟ್ಟುಕೊಂಡಿರುತ್ತಾನೆ. ಸದಸದ್ವಿವೇಕದಿಂದ ಕೂಡಿದ ಅವನ ಚಿತ್ತವು ಬ್ರಹ್ಮಬೀಜವನ್ನು ಬಿತ್ತಲು ಹದಗೊಂಡ ಭೂಮಿಯಂತಿರುತ್ತದೆ. ಅಂಥವನು 'ಬಿಂದುವನ್ನು ಒಸರಲೀಯದೆ ಊರ್ಧ್ವಮುಖದಲಿ ಬಿತ್ತಿ ಬೆಳೆವವರ'[೧೬೬] ಸಾಲಿಗೆ ಸೇರುತ್ತಾನೆ. ದೀಕ್ಷಾ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವ ಇಂಥ ವ್ಯಕ್ತಿಯನ್ನು ಸಂಕೇತಿಸುವವನು ಗೊಗ್ಗಯ್ಯ. ತನುವೆಂಬ ತೋಟದಲ್ಲಿ ಸದಾಚಾರಗಳೆಂಬ ಹೂಗಿಡಗಳನ್ನು ಬೆಳೆಯಿಸಿರುವ ಅವನನ್ನು ಬ್ರಹ್ಮಬೀಜವನ್ನು ಬಿತ್ತುವ ಗುರು ಹುಡುಕಿಕೊಂಡು ಬರುತ್ತಾನೆ.

ಔ) ಅನಿಮಿಷಯ್ಯ

'ನಿಮಿಷ' ಎಂದರೆ ಕಾಲದ ಒಂದು ಮಾನ. ಕಣ್ಣು ಪಿಳುಕಿಸಲು ತಗಲುವ ಅವಧಿಯೇ ಈ ನಿಮಿಷ.[೧೬೭] ಇದಕ್ಕೆ ವಿರುದ್ಧವಾಗಿ 'ಅನಿಮಿಷ' ಎಂದರೆ ಕಾಲಾತೀತ ಎಂದರ್ಥ. ಪುರುಷನಾದ ಪರಶಿವನು ತನ್ನಲ್ಲಿ ಪ್ರಕೃತಿಯನ್ನು ಒಳಗೊಂಡಿರುವನೇ ಹೊರತು ಪ್ರಕೃತಿಗೆ ತಾನು ಅಧೀನನಲ್ಲ, ಹೀಗಾಗಿ ಪ್ರಾಕೃತಿಕ ಗುಣವಾಗಿರುವ 'ಕಾಲ'ಕ್ಕೆ ಅವನು ಅತೀತನಾಗಿದ್ದಾನೆ. ಈ ಪರಶಿವನ ಅಂಶವು ಅಂಗುಷ್ಠ ಪರಿಮಾಣದಲ್ಲಿ ಜೀವಿಯಲ್ಲಿದ್ದು ಪ್ರಾಣಕ್ಕೆ ಆಧಾರವಾಗಿರುತ್ತದೆಂಬುದನ್ನು ಗಮನಿಸಿದ್ದೇವೆ. ಪರಶಿವನ ಇಂಥ ಕಾಲಾತೀತ

[illegible]

[illegible]

[illegible]

ಅಂಶವನ್ನು ಸಂಕೇತಿಸಲು ಅನಿಮಿಷನನ್ನು ರೂಪಿಸಲಾಗಿದೆ. ಗುರುರೂಪದಲ್ಲಿದ್ದು ಜೀವಿಯ ಜೀವನ ವ್ಯಾಪಾರವು ನಡೆಯುವಂತೆ ನೋಡಿಕೊಳ್ಳುತ್ತಾನೆಂಬ ಕಾರಣದಿಂದ ಅನಿಮಿಷನು 'ಅಯ್ಯ'ನಾಗಿ ಮೂಡಿ ಬಂದಿದ್ದಾನೆ.

ಕ) ಅಜಗಣ್ಣ–ಮುಕ್ತಾಯಕ್ಕ

ಲೋಕವಿದ್ಯೆಗಳಿಗೆ ಕೊರತೆಯಿಲ್ಲ ಹಾಗೂ ಅವುಗಳನ್ನು ಲೆಕ್ಕ ಮಾಡುವುದೂ ಸಾದ್ಯವಿಲ್ಲ. ಈ ವಿದ್ಯೆಗಳೆಲ್ಲವನ್ನೂ ಅಪೂರ್ಣವೆಂದು ಗುರುತಿಸುತ್ತ ಆತ್ಮವಿದ್ಯೆ ಮಾತ್ರ ಪರಿಪೂರ್ಣ ವಿದ್ಯೆಯೆಂದು ತಿಳಿಯುತ್ತಾರೆ. ಆತ್ಮವಿದ್ಯೆಯನ್ನು ಕರಗತ ಮಾಡಿಕೊಂಡವನು ಬಾಹ್ಯವಿಷಯಗಳೆಲ್ಲವನ್ನೂ ತಿಳಿಯಲು ಸಮರ್ಥನಾಗಿರುತ್ತಾನೆ. ಅವಿರಳವಾಗಿರುವ ಆತ್ಮವಿದ್ಯೆಯನ್ನು ಗಳಿಸಿಕೊಂಡು ಒಂದಾಗಿರುವ ಮುಕ್ತಾತ್ಮನನ್ನು ಸಂಕೇತಿಸುವುದಕ್ಕಾಗಿ ಅಜಗಣ್ಣನ ಪಾತ್ರವನ್ನು ಸೃಷ್ಟಿಸಲಾಗಿದೆ. ಮುಕ್ತಸ್ಥಿತಿಯಿಂದ ಬಹಳಷ್ಟು ದೂರವಿರುವವರು ಅದಕ್ಕಾಗಿ ಹಂಬಲಿಸುತ್ತ, ಮುಕ್ತಸ್ಥಿತಿಯನ್ನು ದಯಪಾಲಿಸೆಂದು ಪರಶಿವನನ್ನು ಪ್ರಾರ್ಥಿಸುತ್ತ ಧ್ಯಾನಮಗ್ನರಾಗುವಂಥವರು. ಶರಣಸತಿ–ಲಿಂಗಪತಿ ಭಾವದಂತೆ ಮಹಾಲಿಂಗರೂಪದ ಪರಶಿವನಲ್ಲಿ ಮೊರೆಯಿಡುವ ಜೀವಿ ಗಂಡಿರಲಿ–ಹೆಣ್ಣಿರಲಿ ಸತಿಯೇ ಎಂಬುದನ್ನು ನೋಡಿದ್ದೇವೆ. ಇಂಥ ಮುಕ್ತಿಕಾಂತೆಯನ್ನು ಸಂಕೇತಿಸುವುದಕ್ಕಾಗಿ ಮುಕ್ತಾಯಕ್ಕನ ಪಾತ್ರವನ್ನು ಸೃಷ್ಟಿಸಲಾಗಿದೆ. ಅಜಗಣ್ಣನು ಕೊನೆಯ ಹಂತವನ್ನು ದಾಟಿ ನಿಂತಿರುವ ಪರಿಪೂರ್ಣನಾಗಿದ್ದರೆ ಮುಕ್ತಾಯಕ್ಕ ಪ್ರಾರಂಭದ ಹಂತದಲ್ಲಿ ನಿಂತಿರುವ ಜೀವಿಯಾಗಿದ್ದಾಳೆ.

ಖ) ಸಿದ್ಧರಾಮ

ಅನುಸಂಧಾನಗಳಲ್ಲಿ ಅನೇಕ ವಿಧ. ವಿವಿಧ ಶಕ್ತಿಗಳನ್ನು ಆರಾಧಿಸುತ್ತ ಹೋದಂತೆ ಸಾಧಕನ ಶಕ್ತಿ ಹೆಚ್ಚುತ್ತ ಹೋಗುತ್ತದೆ. ಬರಬರುತ್ತ ಅದು ಬಾಹ್ಯಕ್ರಿಯೆಗಳಲ್ಲಿ ತೋರತೊಡಗುತ್ತದೆ. ತನು–ಮನಗಳಲ್ಲಿ ಶಕ್ತಿಯ ಆಧಿಕ್ಯದಿಂದಾಗಿ ಅವನಿಗೆ ವಿವಿಧ ಸಿದ್ಧಿಗಳು ವಶವಾಗುತ್ತವೆ. ಲೋಕವ್ಯವಹಾರದವರ ನಡುವೆ ಅವನ ನುಡಿಗಳು ಸತ್ಯವಾಗಿ ಗೋಚರಿಸತೊಡಗುತ್ತವೆ. ವಶವಾದ ಸಿದ್ಧಿಗಳನ್ನು ಲೋಕಕಲ್ಯಾಣಕ್ಕಾಗಿ ಬಳಸುವುದರ ಬದಲಾಗಿ ತನ್ನ ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಂಡಾಗ ಅದರಿಂದ ಲೋಕಕ್ಕೆ ಕೇಡಾಗುವುದರ ಜೊತೆಗೆ ಸ್ವಂತಕ್ಕೂ ಕೇಡು. ಅಂಥವನು ಮೋಕ್ಷದಿಂದ ವಂಚಿತನಾಗುತ್ತಾನೆ. ಸಾಧನೆಯ

[illegible]

[illegible]

[illegible]

[illegible]

[illegible]

[illegible]

[illegible]

ಮಾರ್ಗದಲ್ಲಿರುವ ಹಾಗೂ ಅಹಂಕಾರ ಮೊದಲಾದ ರಾಜಸ ಗುಣಗಳನ್ನು ಹೊಂದಿರುವ ವ್ಯಕ್ತಿಯನ್ನು ಸಂಕೇತಿಸುವ ಸಲುವಾಗಿ ಸೊನ್ನಲಿಗೆಯ ಸಿದ್ಧರಾಮನ ಪಾತ್ರವು ಸೃಷ್ಟಿಸಲ್ಪಟ್ಟಿದೆ.

ಗ) ಬಸವಣ್ಣ

ಶಿವಯೋಗದ ದೀಕ್ಷೆಯನ್ನು ಕೊಡುವವನು ಮೋಕ್ಷಕ್ಕೆ ದಾರಿ ತೋರಿಸುವ ಗುರು ಮಾತ್ರವಲ್ಲ ಸಾಕ್ಷಾತ್ ಶಿವನೇ ಆಗಿರುತ್ತಾನೆಂಬುದನ್ನು ನೋಡಿದ್ದೇವೆ. ದೀಕ್ಷಿತನಾದ ಶಿಷ್ಯ ಸರಿಯಾದ ದಾರಿಯಲ್ಲಿ ಮುನ್ನಡೆಯುತ್ತಿದ್ದಾನೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವ ಗುರು ಅವನ ದೋಷಗಳನ್ನು ತಿದ್ದುತ್ತ, ಅವನಿಗೆದುರಾಗುವ ಪ್ರತಿಬಂಧಕಗಳನ್ನು ನಿವಾರಿಸುತ್ತ, ಸರಿಯಾದ ದಾರಿಯಲ್ಲಿ ಮುನ್ನಡೆಸುತ್ತ ಲಿಂಗಾಂಗಸಾಮರಸ್ಯದ ಕೊನೆಯ ಮೆಟ್ಟಲನ್ನು ಏರುವಂತೆ ಮಾಡುತ್ತಾನೆ. ನಾವೀಗಾಗಲೇ ಗುರುವಿನ ಸಂಕೇತವಾಗಿ ಅಲ್ಲಮನನ್ನು ಲಕ್ಷಿಸಿದ್ದೇವೆ. ದೀಕ್ಷಾಬೋಧೆಯನ್ನು ಹೊಂದಿ ಸಾಧನೆಯ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಹಂತದ ವ್ಯಕ್ತಿಯನ್ನು ಸಂಕೇತಿಸುವುದಕ್ಕಾಗಿ ಕವಿ ಬಸವಣ್ಣನನ್ನು ಆಯ್ದುಕೊಂಡಿದ್ದಾನೆ. ಹೀಗಾಗಿ ಗುರುರೂಪದ ಅಲ್ಲಮಪ್ರಭು ಸಾಧನೆಯ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಶಿಷ್ಯ ಬಸವಣ್ಣನನ್ನು ಹೆಜ್ಜೆಹೆಜ್ಜೆಗೆ ಪರೀಕ್ಷಿಸುತ್ತಾನೆ.

ಒಳ್ಳೆಯ ನೆನಹು, ಅರಿವು, ವಿವೇಕ, ಸುಶೀಲ, ಮುಂತಾದವುಗಳು ಇಂಥ ಸಾಧಕನ ಜೀವಾತ್ಮರೂಪದ ಚೇತನವು ಊರ್ಧ್ವಗತಿಯಲ್ಲಿ ಮುನ್ನಡೆಯಲು ಸಹಾಯಕವಾಗುತ್ತವೆ. ಇವುಗಳನ್ನು ಸಂಕೇತಿಸುವುದಕ್ಕಾಗಿ ಕವಿ ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ, ಬಾಚರಸ, ಹಡಪದ ಅಪ್ಪಣ್ಣ ಮೊದಲಾದವರನ್ನು ಬಳಸಿಕೊಂಡಿದ್ದಾನೆ. ತಾಮಸ ಗುಣದ ಮಾಯೆಯ ಸಖಿಯರಿಗೆ ಎದುರಾಗಿಟ್ಟು ಸಾತ್ವಿಕಗುಣದ ಸಾಧಕನಾಗಿರುವ ಬಸವಣ್ಣನ ಈ ಸಹಾಯಕರನ್ನು ನೋಡಬಹುದು. ಇಂಥ ಸಾಂಕೇತಿಕ ಅಂಶಗಳನ್ನು ಕವಿ ಕೆಲವೊಮ್ಮೆ ಬಹಿರಂಗವಾಗಿಯೇ ತಿಳಿಸಿ ಬಿಡುತ್ತಾನೆ.[೧೬೮]

ಘ) ಮರುಳುಶಂಕರದೇವ

ಸಾಧಕ ಲಿಂಗಾಂಗಸಾಮರಸ್ಯದ ಮಾರ್ಗದಲ್ಲಿ ಸಾಗುವುದಕ್ಕೆ ಮಾತ್ರವಲ್ಲ ಆ ಗುರಿಯನ್ನು ತಲುಪುವ ಕ್ರಮವನ್ನು ಅರಿತ ನಂತರವೂ ಕೊನೆಯ ಉಸಿರು ದಾಟುವ ವರೆಗೆ ಸಾತ್ವಿಕ ಗುಣಗಳೊಂದಿಗೆ ವ್ಯವಹರಿಸುತ್ತಿರಬೇಕು. ಗರ್ವ, ಕ್ರೋಧ, ಅಹಂಕಾರ, ವಿಷಯ, ವಾದ, ಅಪ್ರಿಯ ವಚನ, ದಂಭ, ಮತ್ಸರ

[illegible]

[illegible]

[illegible]

[illegible]

[illegible]

[illegible]

ಇವು ರಾಜಸ ಗುಣಗಳು. ಇವುಗಳಲ್ಲಿ ಯಾವುದಾದರೂ ಒಂದನ್ನು ಒಳಗೊಂಡರೂ ಶರಣನು ತನ್ನ ಗುರಿಯಿಂದ ದೂರ ಸರಿಯುವ ಪ್ರಸಂಗ ಬರಬಹುದು. ಬಸವಣ್ಣನ ಪಾತ್ರವು ಸಾಂಕೇತಿಕವಾಗಿರುವಂತೆ ಅವನಲ್ಲಿ ತೋರುವ ಸೂಕ್ಷ್ಮರೂಪದ ಅಹಂಕಾರವೂ ಸಾಧಕನಲ್ಲಿ ತೋರಬಹುದಾದ ಅಹಂಕಾರಕ್ಕೆ ಸಾಂಕೇತಿಕವಾದುದು. ಈ ಅಹಂಕಾರವು ಶರಣಮಾರ್ಗದಲ್ಲಿರುವವನಿಗೆ ತಕ್ಕುದಲ್ಲ. 'ಬ್ರಹ್ಮವನು ತಿಳಿದವನು ಸುಮ್ಮನಾಗಿರಬೇಕು' ಎಂಬ ತತ್ತ್ವದಂತೆ ಶರಣನಾದವನು ಅಂತರಂಗ-ಬಹಿರಂಗಗಳನ್ನು ಒಂದು ಮಾಡಿ ಶುದ್ಧ ಅಂತಃಕರಣದವನಾಗಿ ಬದುಕುತ್ತಿದ್ದರೂ ಬಾಹ್ಯದಲ್ಲಿ ಅದು ಸ್ವಲ್ಪವೂ ತೋರದಂತೆ ಇರುವುದು ಅತ್ಯಾವಶ್ಯಕ. ಇಂಥ ಸತ್ಯಶುದ್ಧ ಬದುಕು ಅಂತಿಮ ಗುರಿಯನ್ನು ತಲುಪಿಸುವುದು ಎಂದು ತಿಳಿಸುವುದಕ್ಕಾಗಿ ಆ ಸ್ಥಿತಿಯಲ್ಲಿ ಬದುಕುವ ಶರಣನ ಸಂಕೇತದ ರೂಪದಲ್ಲಿ ಮರುಳುಶಂಕರದೇವನ ಪಾತ್ರವನ್ನು ಸೃಷ್ಟಿಸಲಾಗಿದೆ.

ಚ) ಗೋರಕ್ಷ

ಶಿವಯೋಗಾನುಸಂಧಾನದಲ್ಲಿ ತೊಡಗುವವನು ಪ್ರಾಣಾಯಾಮದೊಂದಿಗೆ ಮಂತ್ರವನ್ನು ಹುರಿಗೊಳಿಸಬೇಕಾಗುತ್ತದೆಂಬುದನ್ನೂ ಪ್ರಾಣಾಯಾಮಕ್ಕೆ ಶರೀರವು ಮಾಧ್ಯಮವಾಗಬೇಕೆಂಬುದನ್ನೂ ನೋಡಿದ್ದೇವೆ. ಶಾರೀರಿಕವಾಗಿ ಸದೃಢವಾಗಿದ್ದವನಿಗೆ ಮನೋಲಯ ಮಾರ್ಗದಲ್ಲಿ ಮುನ್ನಡೆಯಲು ಸುಲಭವಾಗುತ್ತದೆ. ಆದರೆ ಶರೀರವನ್ನು ಮಾತ್ರ ಲಕ್ಷಿಸುತ್ತ, ಅದನ್ನು ಕಾಪಾಡುವುದಕ್ಕೆ ಮಾತ್ರ ಗರಿಷ್ಠ ಮಹತ್ವವನ್ನೀಯುತ್ತ ಶಿವಯೋಗಾನುಸಂಧಾನಕ್ಕೆ ಮನಸ್ಸು ಮಾಡದವನು ಕೊನೆಗೊಮ್ಮೆ ಮೃತ್ಯುವಿನ ಬಾಯಿಗೆ ತುತ್ತಾಗುವುದು ನಿಶ್ಚಿತ. ಹೀಗೆ ಮರಣವನ್ನು ಗೆಲ್ಲಲು ಸಾಧ್ಯವಾಗುವ ಅನುಸಂಧಾನವನ್ನು ಬದಿಗಿಟ್ಟು ಸ್ವಪ್ರತಿಷ್ಠೆಗಾಗಿ ಲಂಬಿಕಾಯೋಗ ಮೊದಲಾದ ಸಾಧನೆಗಳಲ್ಲಿ ತೊಡಗುವವನು ಹಠಯೋಗಿ ಎನಿಸಿಕೊಳ್ಳುತ್ತಾನೆ. ಇಂಥ ಹಠಯೋಗಿಯು ಮೋಕ್ಷದಿಂದ ದೂರ ಉಳಿಯುತ್ತಾನೆ. ಈ ಹಠಯೋಗದ ಸಾಧನೆಯಲ್ಲಿರುವವನನ್ನು ಸಂಕೇತಿಸಲು ಚಾಮರಸ ಗೋರಕ್ಷನ ಪಾತ್ರವನ್ನು ಸೃಷ್ಟಿಸಿದ್ದಾನೆ.

ಛ) ಕಿರಾತಕರು ಮತ್ತು ಮುನಿಗಳು

ಪ್ರಭುಲಿಂಗಲೀಲೆಯಲ್ಲಿ ಕಂಡು ಬರುವ ಇತರ ಚಿಕ್ಕಪುಟ್ಟ ಪಾತ್ರಗಳೆಂದರೆ ಬೇಟೆಯಾಡುವ ಕಿರಾತಕರು ಮತ್ತು ಮುನಿಗಳು ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ವಿಷಯಾದಿಗಳ

ಬೇಟೆಯಲ್ಲಿ ತೊಡಗಿರುವವರು ಕಿರಾತಕರಾಗಿ ಸಂಕೇತಿಸಲ್ಪಟ್ಟಿದ್ದರೆ ಸಾಧನೆಯ ಮಾರ್ಗದಲ್ಲಿ ಮುಂದುವರೆಯುತ್ತಿದ್ದರೂ ಗುರಿಯ ಬಗ್ಗೆ ಸ್ಪಷ್ಟ ಕಲ್ಪನೆ ಹೊಂದಿರದವರನ್ನು ಸಂಕೇತಿಸಲು ಕವಿ ಮುನಿಗಳನ್ನು ಆಯ್ದುಕೊಂಡಿದ್ದಾನೆ.

ಟಿಪ್ಪಣಿಗಳು

೧. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೦೯

೨. ಶಬ್ದಾರ್ಥೌ ಸಹಿತೌ ಕಾವ್ಯಂ ಗದ್ಯಂ ಪದ್ಯಂ ಚ ತದ್ ದ್ವಿಧಾ ।
ಸಂಸ್ಕೃತಂ ಪ್ರಾಕೃತಂ ಚೈತದ್ ಅಪಭ್ರಂಶ ಇತಿ ತ್ರಿಧಾ ॥
ಡಾ. ಕೆ. ಕೃಷ್ಣಮೂರ್ತಿ , ಕನ್ನಡ ಕಾವ್ಯಾಲಂಕಾರ, ೧–೧೬, ಪುಟ ೮

೩. ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರಶಾಲಿನಿ ।
ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿಧಾಹ್ಲಾದಕಾರಿಣಿ ॥
(ಕುಂತಕ , ವಕ್ರೋಕ್ತಿ ಜೀವಿತ , ೧–೭)
ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೦೯

೪. ಸಹೃದಯ ಹೃದಯಾಹ್ಲಾದಿ ಶಬ್ದಾರ್ಥಮಯತ್ವಮೇವ ಕಾವ್ಯಲಕ್ಷಣಂ
(ಆನಂದ ವರ್ಧನ , ಧ್ವನ್ಯಾಲೋಕ, ೧–೧
ಅದೇ– ಪುಟ ೧೦೮, ೧೦೯

೫. ವಾಕ್ಯಂ ರಸಾತ್ಮಕಂ ಕಾವ್ಯಂ – ದೋಷಾಸ್ತಸ್ಯಾಪಕರ್ಷಕಾಃ ।
ಉತ್ಕರ್ಷಹೇತವಃ ಪ್ರೋಕ್ತಾ ಗುಣಾಲಂಕಾರರೀತಯಃ ॥
(ವಿಶ್ವನಾಥ , ಸಾಹಿತ್ಯದರ್ಪಣ, ೧–೩)
ಅದೇ– ಪುಟ ೧೧೨

೬. Poetry comes nearer to vital truth than history. – Plato
Immortal quotations and proverbs, compiled by Dr. P.D.Sharma, page 106

೭. Poetry is the spontaneous overflow of powerful feelings ….. recollected in tranquility.
- William Wordsworth
- ಅದೇ –

೮. Poetry is the music of thought, conveyed to us through the music of language.
- Chatfield .
- ಅದೇ –

೯. Poetry is a perfectly possible means of overcoming chaos.

- I.A. Richards

- ಅದೇ –

೧೦. Poetry is truth dwelling in beauty.

- Gilfillan

- ಅದೇ–

೧೧. Poetry is the rhythmical creation of beauty in words.

-Edgar Allan Poe

– ಅದೇ –

೧೨. ಬ. ಗಿ. ಯಲ್ಲಟ್ಟಿ ಅವರೊಂದಿಗೆ ನಡೆಸಿದ ಚರ್ಚೆಯಲ್ಲಿ ಮೂಡಿ ಬಂದದ್ದು.

೧೩. (a) Poetry is the impish attempt to paint the colour of the wind.

- Maxwell Bodenheim

– ಅದೇ–

(b) Poetry is the Devil's wine.

- St. Augustine

- ಅದೇ–

೧೪. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೧೭

೧೫. ಡಾ. ಕೆ. ಕೃಷ್ಣಮೂರ್ತಿ , ಕನ್ನಡ ಕಾವ್ಯಾಲಂಕಾರ , ಅಧ್ಯಾಯ ೧, ಅಡಿ ಟಿಪ್ಪಣಿ ೧೪, ಪುಟ ೮

೧೬. ಕಾವ್ಯಂ ಯಶಸೇ s ರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ

ಸದ್ಯಃ ಪರನಿವೃತಯೇ ಕಾಂತಾಸಂಮಿತತಯೋಪದೇಶಯುಜೇ ॥

ಮಮ್ಮಟನ ಕಾವ್ಯಪ್ರಕಾಶ, ೧–೨

ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೬೭

೧೭. Ed. by Maurice Waite , Little Oxford Dictionary

೧೮. ಮಲ್ಲೇಪುರಂ. ಜಿ. ವೆಂಕಟೇಶ , ಭಾರತೀಯ ಕಾವ್ಯ ಶಾಸ್ತ್ರ ಪರಿಭಾಷೆ ಪುಟ ೧೨೬, ೧೨೭

೧೯. ಡಾ. ಜಿ. ಎಸ್. ಶಿವರುದ್ರಪ್ಪ , ಕಾವ್ಯಾರ್ಥ ಚಿಂತನ, ಪುಟ ೧೫೬, ೧೫೭

೨೦. ಅದೇ – ಪುಟ ೧೮೨

೨೧. ಅದೇ – ಪುಟ ೧೮೫

ತೈಃ ಶರೀರಂ ಚ ಕಾವ್ಯಾನಾಮಲಂಕಾರಾಶ್ಚ ದರ್ಶಿತಾಃ ।

ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ ॥

(ದಂಡಿಯ ಕಾವ್ಯಾದರ್ಶ, ೧–೧೦)

ಡಾ. ಕೆ. ಕೃಷ್ಣಮೂರ್ತಿ , ಕನ್ನಡ ಕಾವ್ಯಾದರ್ಶಿ, ಪುಟ ೧೪೨

೨೨. ಡಾ.ಕೆ. ಕೃಷ್ಣಮೂರ್ತಿ , ಕನ್ನಡ ಕಾವ್ಯಾದರ್ಶಿ, ಪುಟ ೧೪೨

೨೩. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೨೫

೨೪. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೪೦

೨೬. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೧೨
೨೭. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೧೪
೨೮. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೧೪
೨೯. ಜಿ. ಎಸ್. ಶಿವರುದ್ರಪ್ಪ , ಕಾವ್ಯಾರ್ಥಚಿಂತನ ; ಪುಟ ೧೧೭
೩೦. ರಸಜೀವ ಭಾವವೊಡಲರ್ಥವವಯವ ಶಬ್ದ ।
ವಿಸರವೇ ನುಡಿಯಲಂಕಾರವೇ ತೊಡಿಗೆಯು ತ ।
ವೆ ಸುಲಕ್ಷಣವೆ ಲಕ್ಷಣ ವಿಮಳಪದನ್ಯಾಸ ನಡೆ ರೀತಿ ಸುಕುಮಾರತೆ ॥
ರಸಿಕತನ ಸುಳಿ ಸುಖಂ ನಿಳಯವಂತಪ್ಪ ಮಿಾ ।
ಪೊಸ ಕಾವ್ಯಕನ್ನಿಕೆಯ ಪಡೆದು ಪಂಪಾಂಬಿಕೆಯ ।
ರಸ ವಿರೂಪಾಕ್ಷಂಗೆ ಕೊಟ್ಟ ಹಂಪೆಯ ರಾಘವಾಂಕನೇಂ ಕೃತಕೃತ್ಯನೋ ॥
ಸಂ. ಟಿ. ಎಸ್. ವೆಂಕಣ್ಣಯ್ಯ ಮತ್ತು ಎ. ಆರ್. ಕೃಷ್ಣಶಾಸ್ತ್ರೀ ,
ಹರಿಶ್ಚಂದ್ರಕಾವ್ಯ ಸಂಗ್ರಹ ; ೧-೭
೩೧. ಚತುರ್ವರ್ಗಫಲಾಸ್ವಾದಮಪ್ಯತಿಕ್ರಮ್ಯ ತದ್ವಿದಾಂ ।
ಕಾವ್ಯಾಮೃತರಸೇನಾಂತಶ್ಚಮತ್ಕಾರೋ ವಿತನ್ಯತೇ ॥ (ವಕ್ರೋಕ್ತಿಜೀವಿತ)
ಅಡಿ ಟಿಪ್ಪಣಿ ೨೪
ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೭೫
೩೨. ಸಂ. ಡಾ. ಎಚ್. ಪಿ. ಮಲ್ಲೇದೇವರು , ಉರಿಲಿಂಗಪೆದ್ದಿಗಳ ವಚಗಳು;
ವ.ಸಂ. ೭೨, ಪುಟ್^ ೪೧
೩೩. ತೀ. ನಂ. ಶ್ರೀ ಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೧೭೫, ಅಡಿಟಿಪ್ಪಣಿ ೨೫
೩೪. ಅಲ್ಲಂಗೆ ದ್ವಯಜ್ಯೋತಿ ಬೆಳಗಿಲ್ಲ ಮಸೂತಿಯ ನಮಾಜದಿಂ ಎಡೆಯಾಟವಿಲ್ಲ
ಹಲವಕ್ಕೆ ಹರಿದು ತಿಳಿಯಲಿಲ್ಲಾ ಕಾಡನೊಳಗಾದ ಶಂಕರಪ್ರಿಯ
ಚನ್ನಕದಂಬಲಿಂಗ ನಿರ್ಮಾಯ ಪ್ರಭುವೆ.
–ಕಾಡಸಿದ್ದೇಶ್ವರ ವಚನ
ಟೀಕು ,– ಅಲ್ಲಾನೆಂದಡೆ ಶಿವನು. ಅಂತಪ್ಪ ಪರಶಿವ ಲಿಂಗೈಕ್ಯರಾದ ಶಿವಜ್ಞಾನಿಗಳಿಗೆ ಭಿನ್ನ ಜ್ಞಾನಪ್ರಕಾಶ ನಾಸ್ತಿ ಎಂಬುದೀಗ ಅಲ್ಲಂಗೆ ದ್ವಯ ಜ್ಯೋತಿ ಬೆಳಗಲಿಲ್ಲಾ..........
ಸಂ. ಪ್ರೊ. ಎ. ಎಲ್.ಹಿರೇಮಠ , ಕಾಡಸಿದ್ಧೇಶ್ವರ ವಚನಗಳು ; ಶರಣನ ಐಕ್ಯ ಸ್ಥಲ,
ಪುಟ ೩೦೩
೩೫. ಸಂ. ಟಿ. ಎಫ್. ದೇಸಾಯಿ , ಕನ್ನಡ ಕುರ್‌ಆನ್ ಮಜೀದ್;
೧೧೨ – ಸೂರತುಲ್ ಇಖ್ಲಾಸ
೩೬. ಅದೇ–ಸೂರಾ–ಎ–ಅಲ್‌ಹದೀದ್
೩೭. ಮುಫ್ತಿ ಮೊಹ್ಮದ್ ಖಿಫಾಯತುಲ್ಲಾ , ಕಾಮಿಲ್–ತಾಲಿಮ್–ಉಲ್–ಇಸ್ಲಾಂ;
ಹಿಸ್ಸಾದುವಮ್, ಪುಟ ೧
೩೮. ಸಂ. ಟಿ. ಎಫ್ , ದೇಸಾಯಿ, ಕನ್ನಡ ಕುರ್ ಆನ್ ಮಜೀದ್ , ಸೂರಾ ಎ ಕೌಸರ
೩೯. ಶಮಾ ನಿಯಾಜಿ , ಸೂಫಿ ನಿಯಾಜಿ ಔರ ಜಜ್ಜಮೆಂಟ , ಪುಟ ೧೩
ಮುಫ್ತಿ ಮೊಹ್ಮದ್ ಬಿಫಾಯ ತುಲ್ಲಾ , ಕಾಮಿಲ್–ತಾಲಿಮ್–ಉಲ್–ಇಸ್ಲಾಮ್;

ಹಿಸ್ಸಾದುವಮ್, ಪುಟ ೧

೪೦. ಶ್ರೀ ಎ.ಎಚ್. ಪಾಗೆ , ಮೊಹರಮ್ ಹಬ್ಬದ ನಿಜಾಂಶ. ಪುಟ ೭

೪೧. (ಉರ್ದುಮೂಲ – ಶಮಾ ನಿಯಾಜಿ , ತಾಜಿಯಾ ಕೀ ಹಕೀಕತ್)

೪೨. ಡಾ ಜಿ.ಎಸ್. ಶಿವರುದ್ರಪ್ಪ , ಕಾವ್ಯಾರ್ಥ ಚಿಂತನ, ಪುಟ ೧೩

೪೩. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೧೯

೪೪. ಪ್ರಜ್ಞಾನವನವೋನ್ಮೇಷಶಾಲಿನೀ ಪ್ರತಿಭಾ ಮತಾ
ಅಡಿಟಿಪ್ಪಣಿ ೧ (ಮಾಣಿಕ್ಯಚಂದ್ರನ ಔಚಿತ್ಯ ವಿಚಾರ ಚರ್ಚಾ, ವೃತ್ತಿ ೩೫)
ಅದೇ– ಪುಟ ೧೧೮

೪೫. ಡಾ. ಜಿ. ಎಸ್. ಶಿವರುದ್ರಪ್ಪ , ಕಾವ್ಯಾರ್ಥ ಚಿಂತನ, ಪುಟ ೧೩

೪೬. ಸ್ವಾಮಿ ವಿವೇಕಾನಂದ , ರಾಜಯೋಗ, ಪುಟ ೨೮

೪೭. ಡಾ. ಜಿ. ಎಸ್. ಶಿವರುದ್ರಪ್ಪ , ಕಾವ್ಯಾರ್ಥ ಚಿಂತನ, ಪುಟ ೧೪

೪೮. ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು,
ಮುಂದಣ ಕವಿಗಳೆನ್ನ ಕರುಣದ ಕಂದಗಳು,
ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸು,
ಹರಿಬ್ರಹ್ಮರೆನ್ನ ಕಕ್ಷಕುಳ
ನೀ ಮಾವ; ನಾ ನಳಿಯ ಗುಹೇಶ್ವರ.
ಟೀಕು ,– ಹಿಂದಣ ಕವಿಗಳೆಂದೊಡೆ ಅನಾಗತವ
ಬಲ್ಲ ಜ್ಞಾನಿಗಳೆಂದರ್ಥ. ಮುಂದಣ ಕವಿಗಳೆಂದೊಡೆ ಅತೀತವ ಬಲ್ಲ ಜ್ಞಾನಿಗಳೆಂದರ್ಥ. ಅತೀತನೆಂದೊಡೆ ಆತ್ಮತತ್ತ್ವ
ಸಂ ಇಮ್ಮಡಿ ಶಿವಬಸವಸ್ವಾಮಿಗಳು , ಅಲ್ಲಮಪ್ರಭುವಿನ ಟೀಕಿನ ವಚನಗಳು; ವ.ಸ. ೫೫೦,
ಪುಟ ೨೫೧,

೪೯. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೦೨

೫೦. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೦೩ ಅಡಿಟಿಪ್ಪಣಿ ೬

೫೧. ಶ್ರೀ ಮದಮಲಜ್ಞಾನ ಭಕ್ತಿ । ಪ್ರೇಮ ವೇದ ಪುರಾಣ ಶಾಸ್ತ್ರ ।
ಸ್ತೋಮನುತನತ ಚಾರುಚರಣಾಂಭೋಜ ಘನಮಹಿಮ ॥
ಪ್ರ. ಲೀ. ಗತಿ ೧, ಪದ್ಯ ೧

೫೨. ಚಿದಾನಂದಾವಧೂತ , ಜ್ಞಾನಸಿಂಧು , ಅಧ್ಯಾಯ ೩೪, ಪದ್ಯ ೩೫ ರಿಂದ ೩೭

೫೩. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೭೧

೫೪. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೭೦

೫೫. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ, ಪುಟ ೧೭೨

೫೬. ಡಾ. ಜಿ. ಎಸ್. ಖಿವಾರಿ, ಸಂಶೋಧನ ಮಹಾಪ್ರಬಂಧ , ಪುಟ ೬

೫೭. ಸಂ ರಾವಬಹಾದ್ದೂರ ಫ. ಗು. ಹಳಕಟ್ಟಿ , ಶೂನ್ಯಸಂಪಾದನೆಗೆ ಪ್ರಸ್ತಾವನೆ, ಪುಟ ೧

೫೮. ಡಾ. ಜಿ. ಎಸ್. ಖಿವಾರಿ; ಸಂಶೋಧನ ಮಹಾಪ್ರಬಂಧ , ಪುಟ ೮

೫೯. ಸಂ. ಸಂ. ಶಿ. ಭೂಸನೂರಮಠ , ಪ್ರೌಢರಾಯನ ಕಾವ್ಯ , ಪ್ರಸ್ತಾವನೆ, ಪುಟ ೨೯

೬೦. ಸಂ. ಸಂ. ಶಿ. ಭೂಸನೂರಮಠ , ಪ್ರೌಢರಾಯನ ಕಾವ್ಯ , ಪ್ರಸ್ತಾವನೆ, ಪುಟ ೨೯

೬೧. ಸಂ. ಶಿ. ಶಿ. ಬಸವನಾಳ , ಚಾಮರಸ ಕೃತ ಪ್ರಭುಲಿಂಗಲೀಲೆ, ಮುನ್ನುಡಿ, ಪುಟ ೩

೬೨. ಡಾ. ಎಂ. ಎಸ್. ಸುಂಕಾಪುರ , ಕವಿ ಚಾಮರಸ ವಿರಚಿತ ಪ್ರಭುಲಿಂಗಲೀಲೆ, ಗತಿ ೧, ಮಂಗಲಾಚರಣ

೬೩. ಡಾ. ಎಂ. ಎಸ್. ಸುಂಕಾಪುರ , ಕವಿ ಚಾಮರಸ ವಿರಚಿತ ಪ್ರಭುಲಿಂಗಲೀಲೆ, ಪ್ರಸ್ತಾವನೆ ಪುಟ X

೬೪. ಪ್ರೌಢರಾಯನ ಕಾವ್ಯ , ಭೈರವೇಶ್ವರ ಕಾವ್ಯಕಥಾಸೂತ್ರ ರತ್ನಾಕರ

೬೫. ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ, ಪುಟ ೨೦, ೨೧

೬೬. ಬ್ರಹ್ಮದಾಸ , ಲೀಲಾವಿಶ್ವಾಂಭರ, ಪದ್ಯಗಳು ೬೬ ಮತ್ತು ೬೭
ಪ್ರ. ಲೀ. , ಪ್ರಸ್ತಾವನೆ, ಪುಟ ೨೧

೬೭. Rev. E.P.Rice , History of Kanarese Literature page ೬೮

೬೮. ಶ್ರೀ. ಆರ್. ನರಸಿಂಹಾಚಾರ್ , ಕರ್ನಾಟಕ ಕವಿ ಚರಿತೆ, ಭಾಗ ೨

೬೯. ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ; ಪ್ರಸ್ತಾವನೆ, ಪುಟ ೩

೭೦. ಪ್ರ. ಲೀ. , ಗತಿ ೧, ಪದ್ಯ ೮

೭೧. ಸಂ. ಚೆನ್ನಪ್ಪ ಉತ್ತಂಗಿ , ಸಿದ್ಧರಾಮ ಸಾಹಿತ್ಯ ಸಂಗ್ರಹ, ಪುಟ ೬೧

೭೨. ಪ್ರಭುಲಿಂಗಲೀಲೆ, ವೀರಶೈವರಲ್ಲಿ ಕೇವಲ ವೈರಾಗ್ಯಮೂರ್ತಿಯೆಂದು ಅತ್ಯಂತ ವಿಖ್ಯಾತಿಯನ್ನು ಹೊಂದಿದ, ಬಸವಣ್ಣನಿಂದ ಸ್ಥಾಪಿತವಾದ ಶೂನ್ಯಸಿಂಹಾಸನದ ಆದ್ಯಗುರುವಾದ ಶ್ರೀಮದಲ್ಲ-ಮಪ್ರಭುವಿನ ಚರಿತ್ರೆಯ ವಿಷಯವಾಗಿದೆ.
ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ; ಪ್ರಸ್ತಾವನೆ, ಪುಟ ೫

೭೩. ಪ್ರಭುಲಿಂಗಲೀಲೆ ಅಲ್ಲಮನ ಚರಿತ್ರೆಯಾಗಿದೆ.
ಸಂ. ಎಂ. ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಪ್ರಭುಲಿಂಗಲೀಲೆಯ ಸಂಗ್ರಹ , ಪೀಠಿಕೆ, ಪುಟ ೧೪

೭೪. ಪ್ರಭುಲಿಂಗಲೀಲೆ ಪ್ರಭುವಿನ ಮಾನುಷ ಶಕ್ತಿಗಿಂತ ದೈವೀಶಕ್ತಿಗೆ ಹೆಚ್ಚು ಬೆಲೆಕೊಟ್ಟು ಅನುಪಮನೂ, ಜಿತಕಾಮನೂ, ಪರಮವೈರಾಗ್ಯಮೂರ್ತಿಯೂ ಆಗಿರುವಂತೆ ಚಿತ್ರಿತವಾದ ಹಿರಿಯ ಚೇತನವೊಂದರ ಅಮಾನುಷ ಜೀವನಚರಿತ್ರೆಯಾಗಿದೆ.
ಡಾ ಎಸ್. ವಿದ್ಯಾಶಂಕರ, ಚಾಮರಸನ ಪ್ರಭುಲಿಂಗಲೀಲೆ , ಪೀಠಿಕೆ ಪುಟ ೨

೭೫. ಪ್ರಭುಲಿಂಗಲೀಲೆ ಪ್ರಭುದೇವರು ಲಿಂಗಸ್ವರೂಪರಾಗಿ ಲೋಕಕಲ್ಯಾಣಕ್ಕಾಗಿ ಎಸಗಿದ ಲೀಲೆಯನ್ನು ವಿವರಿಸುವ ಸತ್ಕಾವ್ಯ.
ಸಂ. ಡಾ. ಎಂ. ಎಸ್. ಸುಂಕಾಪುರ , ಕವಿ ಚಾಮರಸ ವಿರಚಿತ ಪ್ರಭುಲಿಂಗಲೀಲೆ . ಪ್ರಸ್ತಾವನೆ, ಪುಟ. XI

೭೬. ಡಾ. ಎಸ್. ಎಂ. ವೃಷಬೇಂದ್ರಸ್ವಾಮಿ , ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ, ಪುಟ ೧೫೫

೭೭. ಡಾ. ವ್ಹಿ. ಎಸ್. ಕಂಬಿ, ಚಾಮರಸನ ಅಮನಸ್ಕ ಕಾವ್ಯ, ಪುಟ ೧

೭೮. ಸಹಜದಿಂದೆ ನಿರಾಲಂಬವಾಯಿತ್ತು । ನಿರಾಲಂಬದಿಂದೆ ನಿರಾಳವಾಯಿತ್ತು ।
ನಿರಾಳದಿಂದೆ ನಿರವಯವಾಯಿತ್ತು । ನಿರವಯದಿಂದೆ ಆದಿಯಾಯಿತ್ತು ।
ಆ ಆದಿಯ ಮೂರ್ತಿಯಿಂದಲೊಬ್ಬ ಶರಣನಾದ । ಆ ಶರಣನ ಮೂರ್ತಿಯಿಂದೆ ಸದಾಶಿವನಾದ

।

ಆ ಸದಾಶಿವನ ಮೂರ್ತಿಯಿಂದೆ ಈಶ್ವರನಾದ । ಆ ಈಶ್ವರನ ಮೂರ್ತಿಯಿಂದೆ ಬ್ರಹ್ಮನಾದ ।
ಆ ಬ್ರಹ್ಮನ ಮೂರ್ತಿಯಿಂದಲಾದವು ಸಕಲ ಜಗದ ಜೀವಜಂತುಗಳು ।
ಇಂತಿವರೆಲ್ಲ ನಮ್ಮ ಗುಹೇಶ್ವರನ ಕರಸ್ಥಲದ ಹಂಗಿನಲ್ಲಿ ಬೆಳೆದರು ॥
ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಗತಿ ೧ ವಚನ ೧

೭೯. ಪರುಷಕ್ಕೆ ಬೆಲೆಯುಂಟೇ । ಪ್ರಾಣಕ್ಕೆ ನಿರ್ಮಾಲ್ಯವುಂಟೇ ।
ರುಚಿಗೆ ಎಂಜಲುಂಟೇ । ಸುಖಕ್ಕೆ ಅರೋಚಕವುಂಟೇ ।
ಗುಹೇಶ್ವರಾ ನಿಮ್ಮನಱಿದ ಶರಣಂಗೆ ಭವಬಂಧನವುಂಟೇ ॥
ಅದೇ- ಗತಿ ೨೫, ವಚನ ೨

೮೦. ಡಾ. ಎಂ. ಎಸ್. ಸುಂಕಾಪುರ , ಕವಿ ಚಾಮರಸ ವಿರಚಿತ ಪ್ರಭುಲಿಂಗಲೀಲೆ;
ಪ್ರಸ್ತಾವನೆ-ಪುಟ V

೮೧. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ,
ಏಡಿಸಿ ಕಾಡಿತ್ತು ಶಿವನ ಡಂಗುರ !
ಮಾಡಿದೆನ್ನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ
ಮಾಡಿದೆನೆಂಬುದು ಮನದಲಿಲ್ಲದಿದ್ದರೆ
ಬೇಡಿತ್ತನೀವ ಕೂಡಲಸಂಗಮದೇವ.
ಸಂ. ಬಸವನಾಳ ಶಿವಲಿಂಗಪ್ಪನವರು , ಬಸವಣ್ಣನವರ ಷಟಸ್ಥಳದ ವಚವಗಳು, ಪುಟ ೬೦

೮೨. ಮರಾಠಿ 'ಪ್ರಭುಲಿಂಗಲೀಲೆ'ಗೆ ಹೆಸರು 'ಲೀಲಾವಿಶ್ವಂಭರ' ಎಂದು

೮೩. ಸಂ. ಎಂ, ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ,
ಪ್ರಭುಲಿಂಗಲೀಲೆಯ ಸಂಗ್ರಹ; ಪೀಠಿಕೆ, ಪುಟ ೫೨

೮೪. ದೇವಿ ಕೇಳ್ ನಿನ್ನಂಶದಾ ಮಹ । ದೇವಿ ನನ್ನಂಶದ ಗಣಂಗಳು ।
ದೇವಕನ್ನೆಯರೆಲ್ಲರಲ್ಲಮನಿಂದೆ ಜಗವಱಿಯೆ ॥
ತೀವಿ ತಮ್ಮಯ ನಾಮರೂಪು । ಕ್ರೀ ವಿಳಾಸವನಿಳುಹಿ ನಿತ್ಯ ನಿ ।
ರಾವಲಂಬದ ಸುಖಿಗಳಾದರು ಗಿರಿಜೆ ಕೇಳೆಂದ ॥
ಪ್ರ. ಲೀ. ಗತಿ ೨೫, ಪದ್ಯ ೧೭

೮೫. ಡಾ. ಎಂ. ಎಂ. ಕಲಬುರ್ಗಿ , ಕನ್ನಡ ಗ್ರಂಥ ಸಂಪಾದನ ಶಾಸ್ತ್ರ, ಪುಟ ೧೧೬

೮೬. ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ ೩

೮೭. ಸಂ. ಎಂ, ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ,
ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ, ಪುಟ ೧೧

೮೮. ಸಂ. ಎಂ, ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ,
ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ, ಪುಟ ೧೧

೮೯. ವೈರಾಗ್ಯ ಲಕ್ಷಣ ,- ಬಳಿಕ ವೈರಾಗ್ಯಕ್ಕೆ ವನಿತಾದಿ ವಿಷಯಂಗಳ ಅನಿತ್ಯತ್ವಾದಿ ದೋಷದರ್ಶನವೇ ಕಾರಣವಹುದು. ಮೇಲಾವಪ್ರಕಾರದಿಂದಾದೊಡಮವನು ಬಿಡುವುದೇ ಸ್ವರೂಪವಹುದು. ಬಳಿಕಾ ವಿಷಯಂಗಳಿಗೆಱಗದಿಹುದೇ ಕಾರ್ಯಮಕ್ಕುಂ
ಸಂ. ಪ್ರೊ. ಜಿ. ಎಂ. ಉಮಾಪತಿ ಶಾಸ್ತ್ರಿಗಳು , ಶ್ರೀಮನ್ನಿಜಗುಣಶಿವಯೋಗಿ, ವಿವೇಕ ಚಿಂತಾಮಣಿ , ಪ್ರಥಮ ಪರಿಚ್ಛೇದ, ಪುಟ ೫೧

೯೦. ಮೃತ್ಯು ವಶವಾಗಿಹುದು ಜಗವಿದು । ಮೃತ್ಯುವಶ ತಾನಲ್ಲ ಕೇಳೈ ।
ಮೃತ್ಯು ಜಯಸಿದರಾರು ನೋಡಲಿ ಲೋಕ ಮೂರರಲಿ ॥
ಮೃತ್ಯು ಜಯಸಿದೆ ನಾನು ನನಗೆಯು । ಮೃತ್ಯುಂಜಯ ನಾಮೆಂಬದಾಯಿತು ।
ನಿತ್ಯವೇದವು ಒದರುವವು ಮೃತ್ಯುಂಜಯಾಯೆನುತ ॥
ಚಿದಾನಂದಾವಧೂತ, ಜ್ಞಾನಸಿಂಧು, ವೈರಾಗ್ಯನಿರ್ಣಯ, ಪದ್ಯ ೫೨

೯೧. ಶಿವಯೋಗಿ ಸಕಲ ಸಂಸಾರದೊಳಗಿರ್ದೊಡೇ–
ನವಿವೇಕಿಯಂತೆ ಮೋಹಿಸಿ ಕೆಡುವುದುಂಟೇ ॥
ಕೈವಲ್ಯ ಕಲ್ಪವಲ್ಲರಿ , ಜ್ಞಾನ ಪ್ರತಿಪಾದನ ಸ್ಥಲ ; ಪದ್ಯ ೬೯

೯೨. ರಂ. ಶ್ರೀ. ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೩೧

೯೩. ರಂ. ಶ್ರೀ. ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೩೧

೯೪. ರಂ. ಶ್ರೀ. ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೩೧

೯೫. ರಂ. ಶ್ರೀ. ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೩೧

೯೬. ಪ್ರ. ಲೀ. ಗತಿ ೧ ಪದ್ಯ ೧೪

೯೭. ಡಾ. ಕೆ. ಕೃಷ್ಣಮೂರ್ತಿ, ಮಮ್ಮಟನ ಕಾವ್ಯಪ್ರಕಾಶ, ೧–೩

೯೮. ವಚನ ಪರಿಭಾಷಾಕೋಶ , ಪುಟ ೬೫

೯೯. ಶ್ರೀಮನ್ನಿಜಗುಣ ಶಿವಯೋಗಿ , ವಿವೇಕ ಚಿಂತಾಮಣಿ ,ಪುಟ ೨೫೪ ರಿಂದ ೨೫೮

೧೦೦. ದೇವಯ್ಯಭಾಗ, ಯಥಾ ಬ್ರಹ್ಮಾಂಡ ತಥಾ ಪಿಂಡಾಂಡ , ಶರಣ ವಾಹಿನಿ, ನವಂಬರ ೧೯೯೧

೧೦೧. ಚಿದಾನಂದಾವಧೂತ , ಜ್ಞಾನಸಿಂಧು; ನಿರಾಲಂಬ, ಪದ್ಯಗಳು ೬–೮

೧೦೨. ಸಮಗ್ರ ವಚನ ಸಂಪುಟ ೨ , ಚಂದಿಮರಸನ ವಚನ ಸಂ. ೨೫, ಪುಟ ೧೯೬

೧೦೩. ಚೆನ್ನಬಸವಣ್ಣನವರ ವಚನಗಳು , ಕರಣಹಸಿಗೆ , ಪುಟ ೬೫೯

೧೦೪. ವಿಶ್ವಜಿತನು, ಧನುಜಿತನು, ಸರ್ವಜಿತನು, ಸುತ್ರಾಮಜಿತನು, ನೃಜಿತನು, ಉರ್ವರಾಜಿತನು; ಅಶ್ವಜಿತನು, ಗೋಜಿತನು ಸ್ವರ್ಜಿತನು ಸುಸಂವೇದ್ಯನು, ವೇದನಾದಾತೀತನು; ತುರಿಯ ಪರಮಾನಂದನು, ನಿರವಯ; ಸೂರ್ಯಕೋಟಿಪ್ರಭೆಯ ಬೆಳಗಿನ ಸಹಸ್ರಕಿರಣದ ಅಗ್ರಪಟಲದ ಬೆಳಗು ಕೂಡಲಸಂಗಯ್ಯನು
ಬಸವಣ್ಣನವರ ಷಟ್‌ಸ್ಥಳದ ವಚನಗಳು; ವಚನ ಸಂ. ೯೫೭, ಪುಟ ೨೬೩

೧೦೫. "ಪಿಂಡ ಬ್ರಹ್ಮಾಂಡಯೋರೈಕ್ಯ" ಎಂದುದಾಗಿ,
ಸ್ಥೂಲ ಬ್ರಹ್ಮಾಂಡದೊಳಗುಳ್ಳ ಗುಣಂಗಳಾಶ್ರಯವು ಪಿಂಡದಲ್ಲಿ ಸೂಕ್ಷ್ಮರೂಪಿಂದ ಸಂಗ್ರಹವಾಗಿ ತೋರ್ಪುದು.
ಚೆನ್ನಬಸವಣ್ಣನವರ ವಚನಗಳು , ಕರಣಹಸಿಗೆ, ಪುಟ ೬೫೯

೧೦೬. ದೇವಯ್ಯ ಬಾಗ , ಯಥಾ ಬ್ರಹ್ಮಾಂಡ ತಥಾ ಪಿಂಡಾಂಡ,ಶರಣವಾಹಿನಿ, ನವ್ಹಂಬರ ೧೯೯೧

೧೦೭. ಪ್ರ. ಸಂ. ಪ್ರೊ. ಬಿ. ವಿರೂಪಾಕ್ಷಪ್ಪ , ಬಸವ ಪಥ, ವಚನಗಳಲ್ಲಿ ವಿಶ್ವೋತ್ಪತ್ತಿ ಸಿದ್ಧಾಂತ, ಸಂಪುಟ ೧೯, ಡಿಸೆಂಬರ ೧೯೯೭

೧೦೮. ಈ ಕಥಾನಿರೂಪಣೆಯನ್ನು ಪ್ರೊ. ಶಿ. ಶಿ. ಬಸವನಾಳ ಹಾಗೂ ಶ್ರೀ ಎಂ. ಆರ್. ಶ್ರೀನಿವಾಸ ಮೂರ್ತಿ ಅವರ ನಿರೂಪಣೆಗಳನ್ನು ಆಧರಿಸಿ ಮಾಡಲಾಗಿದೆ.

೧೦೯. ಡಾ. ಎಂ. ಎಂ. ಕಲಬುರ್ಗಿ , ಶಾಸನಗಳಲ್ಲಿ ಶಿವಶರಣರು, ಪುಟ ೭೫

೧೧೦. ಡಾ. ಎಂ. ಎಂ. ಕಲಬುರ್ಗಿ , ಶಾಸನಗಳಲ್ಲಿ ಶಿವಶರಣರು, ಪುಟ ೧೧
೧೧೧. ಡಾ. ಎಂ. ಎಂ. ಕಲಬುರ್ಗಿ , ಶಾಸನಗಳಲ್ಲಿ ಶಿವಶರಣರು, ಪುಟ ೧೧
೧೧೨. ಡಾ. ಎಂ. ಎಂ. ಕಲಬುರ್ಗಿ , ಶಾಸನಗಳಲ್ಲಿ ಶಿವಶರಣರು, ಪುಟ ೧೧
೧೧೩. ಎಂ. ಆರ್. ಶ್ರೀನಿವಾಸ ಮೂರ್ತಿ , ಪ್ರಭುಲಿಂಗಲೀಲೆಯ ಸಂಗ್ರಹ; ಪೀಠಿಕೆ, ಪುಟ ೧೪
೧೧೪. ಎಂ. ಆರ್. ಶ್ರೀನಿವಾಸ ಮೂರ್ತಿ , ಪ್ರಭುಲಿಂಗಲೀಲೆಯ ಸಂಗ್ರಹ; ಪೀಠಿಕೆ, ಪುಟ ೧೫
೧೧೫. ಎಂ. ಆರ್. ಶ್ರೀನಿವಾಸ ಮೂರ್ತಿ , ಪ್ರಭುಲಿಂಗಲೀಲೆಯ ಸಂಗ್ರಹ; ಪೀಠಿಕೆ, ಪುಟ ೪೪
೧೧೬. ಎಂ. ಆರ್. ಶ್ರೀನಿವಾಸ ಮೂರ್ತಿ , ಪ್ರಭುಲಿಂಗಲೀಲೆಯ ಸಂಗ್ರಹ; ಪೀಠಿಕೆ, ಪುಟ ೫೧
೧೧೭. ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ, ಪುಟ ೫
೧೧೮. ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ, ಪುಟ ೧೨
೧೧೯. ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ, ಪುಟ ೧೩, ೧೪
೧೨೦. ಸಂ. ಶಿ. ಶಿ. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ, ಪುಟ ೧೬
೧೨೧. ಡಾ. ರಂ. ಶ್ರೀ ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ , ಪುಟ ೩೩೨
೧೨೨. ಡಾ. ರಂ. ಶ್ರೀ ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ , ಪುಟ ೩೩೩
೧೨೩. ಡಾ. ರಂ. ಶ್ರೀ ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ , ಪುಟ ೩೩೫
೧೨೪. ಡಾ. ಎಂ. ಎಸ್. ಸುಂಕಾಪುರ , ಕವಿ ಚಾಮರಸ ವಿರಚಿತ ಪ್ರಭುಲಿಂಗಲೀಲೆ; ಪ್ರಸ್ತಾವನೆ, ಪುಟ XXII
೧೨೫. ಎಂ. ಆರ್. ಶ್ರೀನಿವಾಸ ಮೂರ್ತಿ, ಪ್ರಭುಲಿಂಗಲೀಲೆ ಸಂಗ್ರಹ , ಪೀಠಿಕೆ, ಪುಟ ೫೧
೧೨೬. ಶಿ. ಶಿ ಬಸವನಾಳ, ಚಾಮರಸ ಕೃತ ಪ್ರಭಬುಲಿಂಗಲೀಲೆ, ಪ್ರಸ್ತಾವನೆ, ಪುಟ ೨೧
೧೨೭. ಡಾ. ರಂ. ಶ್ರೀ ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ , ಪುಟ ೩೩೪
೧೨೮. ಡಾ. ಎಂ. ಎಸ್. ಸುಂಕಾಪುರ , ಕವಿ ಚಾಮರಸ ವಿರಚಿತ ಪ್ರಭುಲಿಂಗಲೀಲೆ, ಪ್ರಸ್ತಾವನೆ, ಪುಟ XII
೧೨೯. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ , ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ, ಪುಟ ೨೦೫
೧೩೦. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ , ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ, ಪುಟ ೨೦೫
೧೩೧. ಡಾ. ಎಸ್. ವಿದ್ಯಾಶಂಕರ್ , ಚಾಮರಸನ ಪ್ರಭುಲಿಂಗಲೀಲೆ ,ಗದ್ಯಾನುವಾದ, ಪೀಠಿಕೆ, ಪುಟ ೧೨
೧೩೨. ಪ್ರ. ಲೀ. ಗತಿ ೫, ಪದ್ಯ ೧
೧೩೩. ಬಸವರಾಜನ ಚಾರು ಚರಿತೆಯ । ಬಿಸಿಲಿಗಖಿಲದ ಮನದ ಭಕ್ತಿಯ ।
ಬಿಸರು ಹಂಗಳು ವಿಕಸಿತವ ನೈದಿರಲು ತಾನಱುದು ॥
ವಸುಮತಿಗೆ ಕಲಿಕಾಲದೊಳಗಿದು । ಪೊಸತಲಾ ಎಂದೆನುತ ಸಂತೋ।
ಷಿಸುತಲಿರ್ದನು ಗುರು ಗುಹೇಶ್ವರಲಿಂಗ ಲೀಲೆಯಲಿ ॥
ಪ್ರ. ಲೀ. ಗತಿ ೧೪, ಪದ್ಯ ೨
೧೩೪. ಮರುಳುಶಂಕರನೆಂಬನಱುವಿನ । ತಿರುಳು ಲಿಂಗಾಗಮದ ಹೊಳಹಿನ ।
ಹುರುಳು ನಿರ್ಮಳ ಧರ್ಮವರ್ಮದ ಚಾರು ಚಾರಿತ್ರ್ಯ ॥

ನಿರುತ ಶಾಂತಿಯ ಚಿತ್ತವೃತ್ತಿಯ । ಪರಮಪಾವನ ಮೂರ್ತಿಯಾತನ ।
ಪರಿಗಳನುಪಮತರ ಕಣಾ ರಾಮಯ್ಯ ಕೇಳೆಂದ ॥
ಪ್ರ. ಲೀ. ಗತಿ ೧೫, ಪದ್ಯ ೧೪

೧೩೫. ಡಾ. ವ್ಹಿ. ಎಸ್. ಕಂಬಿ , ಚಾಮರಸನ ಅಮನಸ್ಕ ಕಾವ್ಯ , ಪುಟ ೨೨

೧೩೬. ಡಾ. ವ್ಹಿ. ಎಸ್. ಕಂಬಿ , ಚಾಮರಸನ ಅಮನಸ್ಕ ಕಾವ್ಯ , ಪುಟ ೨೦

೧೩೭. ಡಾ. ಎಂ. ಎಸ್. ವೃಷಭೇಂದ್ರಸ್ವಾಮಿ, ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ, ಪುಟ ೧೭೪

೧೩೮. ಅದೇ– ಪುಟ ೧೬೫ ಅಡಿಟಿಪ್ಪಣಿ ಹಾಗೂ ಪುಟ ೧೬೬ ಅಡಿಟಿಪ್ಪಣಿ

೧೩೯. ಪ್ರಭುಲಿಂಗಲೀಲೆಯ ಕಥಾನಾಯಕನಾದ ಪ್ರಭುದೇವನ ಈ 'ಇತಿವೃತ್ತ'ವನ್ನು ಕಾವ್ಯಾರಂಭ–ದಲ್ಲಿಯೇ ಪ್ರಸ್ತಾಪಿಸುವುದು ಉಚಿತವಾಗಿದ್ದಿತು. ಮಾಯೆಯ ಕಥೆಗೆ ಆ ಸ್ಥಾನ ಇಲ್ಲಿ ದೊರಕಿದೆ. ಅದನ್ನು ಈ ಸನ್ನಿವೇಶದಲ್ಲಿ ತಂದುದು ಕಥಾದೃಶ್ಯಗಳನ್ನು ಹಿಂದುಮುಂದು ನೆಯ್ಯುವ ತಂತ್ರವೆಂದು ಮೆಚ್ಚಬಹುದಲ್ಲದೆ, ಅದರ ಸ್ಥಾನಪಲ್ಲಟದ ಔಚಿತ್ಯವನ್ನು ಪ್ರಶ್ನಿಸಲೇಬೇಕಾಗುತ್ತದೆ.
ಅದೇ– ಪುಟ ೧೬೮, ಅಡಿ ಟಿಪ್ಪಣಿ *

೧೪೦. ವಿಮಳೆಯ ಮೂಲಕ ಬೋಧಿಸಿದತತ್ವಜ್ಞಾನ ವೀರಶೈವಗುರು ಚಾಮರಸನ ಅಭಿನಿವೇಶವಾಗಿದೆ. ಕಾವ್ಯದ ಪರಿವೇಶ ಹೊದೆದು ಬಂದಿಲ್ಲ. ಮಾಯೆಗೆ ತಿಳಿವು ನೀಡಲು ಇದು ಅವಶ್ಯಕವೆಂಬುದೇನೋ ಸಹಜ. ಆದರೆ , ಕಾವ್ಯ ?
ಅದೇ– ಪುಟ ೧೬೮, ಅಡಿಟಿಪ್ಪಣಿ

೧೪೧. ಹದಿನೇಳನೆಯ ಶತಮಾನದ ಪರ್ವತೇಶ ಪ್ರಭುದೇವರ ಸಾಂಗತ್ಯವೆಂಬ ತನ್ನ ಕೃತಿಯಲ್ಲಿ ಇದಿಷ್ಟನ್ನೇ 'ಇತಿವೃತ್ತ'ವನ್ನಾಗಿ ಮಾಡಿಕೊಂಡಿರುವುದನ್ನು ಗಮನಿಸಬೇಕು. ಚಾಮರಸನೂ ಕೂಡಾ 'ಇಷ್ಟೇ ತನ್ನ ಕಾವ್ಯ'ವೆಂದು ಭಾವಿಸಿರಲೂ ಸಾಧ್ಯವಿದೆ. ಬರೆಯುತ್ತ ಹೋದಂತೆ ಮುಂದಿನ ಘಟನೆಗಳನ್ನು ಜೋಡಿಸಿರಬೇಕೆನ್ನುವಷ್ಟು ಬೇರೆಯೇ ಆಗಿವೆ ಈ ಎರಡು ಸಂಪುಟಗಳು !
ಅದೇ– ಪುಟ ೧೭೬ ಅಡಿಟಿಪ್ಪಣಿ *

೧೪೨. ಅದೇ– ಪುಟ ೧೭೬ ಮತ್ತು ೧೭೭

೧೪೩. ಅದೇ– ಪುಟ ೧೮೦ ಮತ್ತು ೧೮೧

೧೪೪. ಅದೇ– ಪುಟ ೧೯೮ , ಅಡಿಟಿಪ್ಪಣಿ #

೧೪೫. ಅದೇ– ಪುಟ ೧೬೩ ಮತ್ತು ೧೬೪

೧೪೬. ಅದೇ– ಪುಟ ೨೦೫ , ಅಡಿಟಿಪ್ಪಣಿ #

೧೪೭. ಅದೇ– ಪುಟ ೨೦೭ ಮತ್ತು ೨೦೮

೧೪೮. ಪ್ರ. ಲೀ. , ಗತಿ ೧, ಪದ್ಯ ೧೩

೧೪೯. ಭಾರತವನೊರೆದಾ ಕುಮಾರವ್ಯಾಸಂಗೊಸೆದು ।
ಭೂರಮಣನೊಲಿದು ಕನಕಸ್ನಾನಮಂ ಮಾಳ್ಪೊ ।
ಡಾರಂಭಿಸಲ್ಕೆ ಸತ್ತವರ ಕಥೆಗುಂಟೆ ಕನಕಸ್ನಾನ ತೆಗೆಯನ್ನಲು ॥
ಧಾರಿಣಿಯೊಳುಳ್ಳ ಕಥೆಯಲ್ಲ ಸತ್ತವರ ಕಥೆ ।
ತೋಱು ಬದುಕಿದರ ಕಥೆಯೊಳವೆ ಎನಲೊಳವೆಂದು ।
ಚಾರುಪ್ರಭುಲಿಂಗಲೀಲೆಯನೊರೆದು ಮೆಱಸಿದಂ ಲೀಲೆಯಾ ಚಾಮರಸನು ॥
(ಸಿದ್ಧನಂಜೇಶನ ಗುರುರಾಜಚಾರಿತ್ರದಿಂದ)

ಸಂ. ಎಸ್. ಎಸ್. ಬಸವನಾಳ ಚಾಮರಸ ಕೃತ ಪ್ರಭುಲಿಂಗಲೀಲೆ, ಪ್ರಸ್ತಾವನೆ, ಪುಟ ೩, ಅಡಿಟಿಪ್ಪಣಿ ೬

೧೫೦. ಡಾ. ಜಿ.ಎಸ್. ಶಿವರುದ್ರಪ್ಪ , ಕಾವ್ಯಾರ್ಥ ಚಿಂತನ , ಪುಟ ೮೭

೧೫೧. ಡಾ. ಜಿ.ಎಸ್. ಶಿವರುದ್ರಪ್ಪ , ಕಾವ್ಯಾರ್ಥ ಚಿಂತನ , ಪುಟ ೮೬

೧೫೨. ಡಾ. ರಂ. ಶ್ರೀ ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ , ಪುಟ ೩೩೪

೧೫೩. ತೀ. ನಂ. ಶ್ರೀಕಂಠಯ್ಯ, ಭಾರತೀಯ ಕಾವ್ಯಮೀಮಾಂಸೆ, ಪುಟ ೧೪೮

೧೫೪. ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಂ ।
ಸರ್ವಸ್ಯ ಪ್ರಭುಮೀಶಾನಂ ಸರ್ವಸ್ಯ ಶರಣಂ ಬ್ರಹತ್ ॥
ಸ್ವಾಮಿ ಆದಿದೇವಾನಂದ , ಶ್ವೇತಾಶ್ವತರೋಪನಿಷತ್, ಅಧ್ಯಾಯ ೩, ಪದ್ಯ ೧೬

೧೫೫. ಚಾಮರಸನು ಇದನ್ನು 'ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿ'ಯ ವಸ್ತುವಿಗೆ ಬಳಸಿದ್ದಾನೆ.

೧೫೬. ಪ್ರ. ಲೀ. ಗತಿ ೨, ಪದ್ಯ ೩೬

೧೫೭. ಪ್ರ. ಲೀ. ಗತಿ ೧೩, ಪದ್ಯ ೨

೧೫೮. ಸಂ. ಸ್ವಾಮಿ ಆದಿದೇವಾನಂದ , ಶ್ವೇತಾಶ್ವತರೋಪನಿಷತ್ , ಅಧ್ಯಾಯ ೪, ಪದ್ಯ ೧೦

೧೫೯. ಪ್ರಥಮದಲ್ಲಿ ನಿತ್ಯನಿರ್ಮಳನಿರಂಜನನಪ್ಪ ಪರಶಿವನು, ದ್ವಿತೀಯದಲ್ಲಿ ವಾಙ್ಮನೋತೀತನಪ್ಪ ನಂದಿಕೇಶ್ವರ ದೇವರು, ತೃತೀಯದಲ್ಲಿ ಪರಮ ಋಷೀಶ್ವರನಪ್ಪ ದೂರ್ವಾಸದೇವರು, ಚತುರ್ಥದಲ್ಲಿ ದ್ವಿತೀಯಸ್ವಯಂಭು ತ್ರಿಣೇತ್ರದೇವರು -------
ಸಂ. ಇಮ್ಮಡಿ ಶಿವಬಸವಸ್ವಾಮಿಗಳು , ಅಲ್ಲಮಪ್ರಭುವಿನ ಟೀಕಿನ ವಚನಗಳು, ಪೀಠಿಕೆ, ಪುಟ ೧

೧೬೦. ಕಾಮರೇಖೆ ಕಳಾವಿಳಾಸಿನಿ । ಪ್ರೇಮಕಾರಿಣಿ ರಾಗಿ ಲೋಭಿಣಿ ।
ನಾಮ ನಿರ್ಮಿತೆ ಸಕಳ ಸಂಪದೆ ಭೋಗಿ ಮದಮಾನಿ ॥
ಹೇಮೆ ಹೆಕ್ಕಳೆಯೆನಿಪ ನಾನಾ । ನಾಮಗಳ ಹೆಗ್ಗಡಿತಿ ದಾದಿಯ ।
ರಾ ಮಹಾ ವಿನಿಯೋಗದಬಲೆಯರೈದಿದರು ಕೂಡಿ ॥
ಪ್ರ. ಲೀ. ಗತಿ ೪ , ಪದ್ಯ ೨೬

೧೬೧. ಪ್ರತ್ಯಗಾತ್ಮ ಚೈತನ್ಯಚ್ಛಾಯೆಯೊಡಗೂಡಿ ಲೋಹಕಾಂತಕುಂತದಂತಿರ್ದಹಂಕಾರಮುಂ ಜ್ಞಾನೇಂದ್ರಿಯಂಗಳುಂ ಕೂಡಿ, ವಿಜ್ಞಾನಮಯ ಕೋಶವೆನಿಸುವುದು.
ಸಂ. ಪ್ರೊ. ಜಿ.ಎಂ. ಉಮಾಪತಿಶಾಸ್ತ್ರಿಗಳು, ವಿವೇಕ ಚಿಂತಾಮಣಿ, ಪ್ರಥಮ ಪರಿಚ್ಛೇದ, ಪಂಚಕೋಶ ವಿವೇಕ.

೧೬೨. ಬಳಿರೇ ವಿಜ್ಞಾನಮಯಕೋಶರೂಪವಾದ ಅಹಂಕಾರವನೇ ಆತ್ಮಾನಾತ್ಮವಿವೇಕಶೂನ್ಯರುಗಳು, ಅಹಮೆಂಬುತಮ್ಮಾ ಅನುಭವದಿಂದಾತ್ಮನೆಂದು ಬಗೆವರದಕ್ಕೆ ನೀಲೋತ್ಪಲಮೆಂಬಲ್ಲಿ ನೀಲಗುಣ ವಿಶೇಷಣದೊಡನೆ ವಿಶೇಷ್ಯಮಾದ ಉತ್ಪಲವು ವೇದ್ಯಮಪ್ಪಂತೆ, ಕೃಶೋಽಹಮೆಂಬಲ್ಲಿ ಸ್ಥೂಲತನುವಿನೊಡನೆ, ಶ್ರೋತಾಹಮೆಂಬಲ್ಲಿ ಇಂದ್ರಿಯದೊಡನೆ, ಧ್ಯಾತಾಹಮೆಂಬಲ್ಲಿ ಅಂತಃಕರಣದೊಡನೆ ಕೂಡಿ ಪ್ರತ್ಯಗಾತ್ಮಂಗೆ ವೇದ್ಯಮಪ್ಪುದಱಿಂ ಅಹಂಕಾರವಾತ್ಮನೆಂಬುದಲ್ತು
ಅದೇ– ಪ್ರಥಮ ಪರಿಚ್ಛೇದ , ಅಹಂಕಾರಕ್ಕಾತ್ಮತ್ವ ಖಂಡನೆ

೧೬೩. ಗರ್ವಃ ಕ್ರೋಧೋಽತ್ಯಹಂಕಾರಸ್ಸತೀಸಂಗಃ ಪ್ರಲಾಪನಂ ।
ಅಪ್ರಿಯಂ ದಂಭಮಾತ್ಸರ್ಯೌ ರಾಜಸಸ್ಯ ಚ ಲಕ್ಷಣಂ ॥
ಗುಣತ್ರಯ, ಪುಟ ೬೭೧

ಬುದ್ಧಿಗೆ–ಅಪ್ಪುವೆಂಬ ಮಹಾಭೂತ , ವಿಷ್ಣುವಧಿದೇವತೆ , ಅಲ್ಲಿ ಬುದ್ಧಿ ನಿಶ್ಚಯಿಸುತ್ತಿಹುದು.
ಕರಣಚತುಷ್ಟಯ, ಪುಟ ೬೬೪
ಸಂ. ಡಾ. ಆರ್. ಸಿ. ಹಿರೇಮಠ , ಚನ್ನಬಸವಣ್ಣನವರ ವಚನಗಳು , ಕರಣಹಸಿಗೆ.

೧೬೪. ಸತ್ಯಂ ಜ್ಞಾನಂ ತಪೋ ಮೌನಂ ತೋಷಶ್ಯಾಂತಿರ್ವಿವೇಕಿತಾ ।
ಉತ್ಸಾಹೋ ನಿಶ್ಚಯೋ ಧೈರ್ಯಂ ಸಾತ್ವಿಕಸ್ಯ ಚ ಲಕ್ಷಣಂ ॥ ಗುಣತ್ರಯ, ಪುಟ ೬೭೧
– ಅದೇ–

೧೬೫. ಬಲಿದ ಶುಕ್ತಿಯೊಳು ಸ್ವಾತಿಯ ಬಿಂದು ಮುತ್ತಾಗುವೊಲು
ಕೆರೆಜಲದ ಚಿಪ್ಪಿನೊಳಾಗುತಿಹುದೇ
ಸಲುವಾತ್ಮಜಾಗರೂಕರಿಗಲ್ಲದ ಜ್ಞಾನ
ಮಲಜೀವರ್ಗರುಹೆ ಶ್ರೀ ಗುರುಸಿದ್ಧನಹುದುಂಟೇ
ಕೈವಲ್ಯ ಕಲ್ಪವಲ್ಲರಿ , ಜ್ಞಾನಪ್ರತಿಪಾದನ ಸ್ಥಳ, ಪದ್ಯ

೧೬೬. ಪ್ರ. ಲೀ. ಗತಿ ೧೧, ಪದ್ಯ (ಅ)

೧೬೭. ನಿಮಿಷ= Twinkling, winking, the twinkling of an aye considered as a measure of time, a moment
ಆರ್. ಎಫ್. ಕಿಟೆಲ್ , ಕನ್ನಡ–ಇಂಗ್ಲೀಷ ಡಿಕ್ಷನರಿ,
ಪುಟ ೮೭೧

೧೬೮. ಮನವೆಯಕ್ಕನು ಚೆನ್ನಬಸವನೆ । ನೆನಹು ಮಡಿವಳನಱಿವು ಬಾಚರ ।
ಸನೆ ವಿವೇಕ ಸುಶೀಲವೇ ತಾ ಹಡಪದಪ್ಪಣ್ಣ ॥
ತನುವೆ ಕಿನ್ನರ ಬಸವನೇ ಚೇ । ತನಕಳಾತ್ಮಕನಂತು ಬಸವ ।
ಣ್ಣನ ಮಹಾತ್ಮೆಯನೇನ ಹೊಗಳುವೆನೆಂದ ಗುರುರಾಯ ॥
ಪ್ರ. ಲೀ. ಗತಿ ೨೪, ಪದ್ಯ ೩೦

❊ ❊ ❊ ❊ ❊

ಭಾಗ ೨: ಪ್ರತಿಮಾ ವ್ಯವಹಾರ

೧.ಪ್ರತಿಮಾಕಾವ್ಯ – ನಿರೂಪಣೆ

ಶಿವಯೋಗದ ಕ್ರಮವನ್ನು ವೇದ, ಆಗಮ, ಉಪನಿಷತ್ತು, ಶ್ರುತಿ, ಪುರಾಣಗಳು ಕೂಡ ಪುರಸ್ಕರಿಸುತ್ತವೆ.

> ವೇದ ವೇದಾರ್ಥ ಸಾರಾಯದಿಂದ ಹದಿನಾಱು ಶಾಸ್ತ್ರ ಹದಿನೆಂಟು ಪುರಾಣಂಗಳಾದವು,
> ಆ ಶಾಸ್ತ್ರ ಪುರಾಣಂಗಳ ಸಾರಾಯದಿಂದ ಜ್ಯೋತಿಜ್ಞಾನವಾಯಿತ್ತು.
> ಆ ಜ್ಯೋತಿಜ್ಞಾನದಿಂದ ಮನೋಜ್ಞಾನ, ಶ್ರುತಿಜ್ಞಾನ, ಮನಪರಿಯಾಯಜ್ಞಾನ,
> ಆವಧಿಜ್ಞಾನ, ಕೇವಲಜ್ಞಾನ ಇಂತು ಪಂಚಜ್ಞಾನವೆಂಬ ಪಂಚಸ್ಥಲವಾಯಿತ್ತು.
> ಮತಿಜ್ಞಾನ ಉಳ್ಳಾತನೆ ಭಕ್ತ, ಶ್ರುತಿಜ್ಞಾನ ಉಳ್ಳಾತನೆ ಮಹೇಶ್ವರ,
> ಮನಪರಿಯಾಯಜ್ಞಾನ ಉಳ್ಳಾತನೆ ಪ್ರಸಾದಿ, ಏದಿಜ್ಞಾನ ಉಳ್ಳಾತನೆ ಪ್ರಾಣಲಿಂಗಿ,
> ಕೇವಲಜ್ಞಾನ ಉಳ್ಳಾತನೆ ಶರಣ, ಸ್ಥಲವೆಂಬುಬೆ ನಾಸ್ತಿ
> ಈ ಪಂಚಜ್ಞಾನಕ್ಕೆ ಮೂಲವಾದ ಜೋತಿಜ್ಞಾನವೆ
> ಪಂಚಜ್ಞಾನಸ್ಥಲದಲ್ಲಿ ಯೇಕಾಕಾರದಲ್ಲಿದ್ದ ಐಕ್ಯನು.
> ಇಂತೆಂದುದಾಗಿ ಕೂಡಲಚೆನ್ನಸಂಗಯ್ಯನಲ್ಲಿ ಪಂಚಸ್ಥಲದ ನೆಲೆಯ ಬಲ್ಲ
> ಐಕ್ಯ ಬಸವಣ್ಣಂಗೆ ನಮೋ ನಮೋ ಎಂಬೆನು. [೧]

ಈ ವಚನದಲ್ಲಿ ತಿಳಿಸಿದ ಆರು ಸ್ಥಲಗಳನ್ನು ಶಿವಶರಣರು ಪ್ರಮುಖವಾಗಿಟ್ಟುಕೊಂಡು ಅವುಗಳಲ್ಲಿ ಉಪಸ್ಥಲಗಳನ್ನು ಸೂಚಿಸುತ್ತ ಅನುಭಾವವನ್ನು ವಚನಗಳ ರೂಪದಲ್ಲಿ ನಿರೂಪಿಸಿದ್ದಾರೆ. ಈ ಅನುಸಂಧಾನವನ್ನು ಚಾಮರಸ ಅಲ್ಲಮಪ್ರಭುಸಂಪ್ರದಾಯವೆಂದು ಕರೆದಿದ್ದಾನೆ. ಅದನ್ನು ಕಾವ್ಯರೂಪದಲ್ಲಿ ಎರಕ ಹೊಯ್ಯುವ ಮೊದಲು ಅದರ ವಿವಿಧ ಹಂತಗಳನ್ನು ಪಾತ್ರಗಳ ರೂಪದಲ್ಲಿ ಸಂಕೇತಿಸಿದ್ದಾನೆ. ಆ ಪಾತ್ರಗಳನ್ನು ಪುರಾಣ, ಚರಿತ್ರೆಗಳಿಂದ ಆಯ್ದುಕೊಳ್ಳುವುದಲ್ಲದೆ ಕಲ್ಪನೆಯ ಕುಲುಮೆಯಲ್ಲಿ ಕೂಡ ಕೆಲವು

ಪಾತ್ರಗಳನ್ನು ರೂಪಿಸಿದ್ದಾನೆ. ಕವಿ ತಾನು ಆಯ್ದುಕೊಂಡ ಎಲ್ಲ ಸಂಕೇತಗಳನ್ನು ಅರ್ಥಪೂರ್ಣವಾಗಿ ಸಂಯೋಜಿಸುತ್ತ ಪ್ರತಿಮಾಕಾವ್ಯ ಪ್ರಭುಲಿಂಗಲೀಲೆಯನ್ನು ಹೆಣೆದಿರುವುದನ್ನು ಈಗ ಗಮನಿಸಲಾಗುತ್ತಿದೆ.

ಅವಿನಾಭಾವ ಶಕ್ತಿಯಿಂದೊಡಗೂಡಿದ ಸತ್ಯ ವಸ್ತು ತನ್ನ ತಾನರಿಯದೆ ಒಂದನಂತಕಾಲ ನೆಲೆಸಿದ್ದುದು ಪುರುಷವಾಗಿದೆ ಹಾಗೂ ಶಿವಸಮೇತವಾದ ದೃಕ್ ಕ್ರಿಯಾಶಕ್ತಿಯು ಮಲತ್ರಯಗಳ ಮೂಲಕ ತಿರೋಧಾನ ಶಕ್ತಿಯೆನಿಸಿ ಪ್ರಕೃತಿಯಾಗಿದೆ ಎಂಬುದನ್ನು ನೋಡಿದ್ದೇವೆ. ಪ್ರಭುಲಿಂಗಲೀಲೆಯಲ್ಲಿ ಇದನ್ನು ನಿರೂಪಿಸಲು ಕವಿ 'ಪಾರ್ವತಿ ಪರಮೇಶ್ವರ ಸಂವಾದದ ಗತಿ' ಎಂಬ ಪ್ರತಿಮಾರೂಪದ ಅಧ್ಯಾಯವನ್ನು ರಚಿಸಿದ್ದಾನೆ.

೧.೧ ಗುರುಸ್ಥಲ

ಪ್ರಭುಲಿಂಗಲೀಲೆಯಲ್ಲಿ ಪರಶಿವನನ್ನು, ಶಿವಯೋಗದ ದೀಕ್ಷಾ ಗುರುವನ್ನು ಹಾಗೂ ಜಂಗಮಲಿಂಗನನ್ನು ಒಟ್ಟಿಗೇ ಸಂಕೇತಿಸಲು ಚಾಮರಸ ಅಲ್ಲಮಪ್ರಭುವನ್ನು ಆಯ್ದುಕೊಂಡಿದ್ದಾನೆಂಬುದನ್ನು ನೋಡಿದ್ದೇವೆ. ಹೀಗಾಗಿ ಕಾವ್ಯದಲ್ಲಿ ಅಲ್ಲಮನ ಚಿತ್ರಣ ಬಂದಾಗ ಈ ಮೂರು ಸಂಕೇತ ಮೂಲಗಳಲ್ಲಿ ಯಾವುದಾದರೂ ಒಂದರ ಅಥವಾ ಒಂದಕ್ಕಿಂತ ಹೆಚ್ಚು ಮೂಲಗಳ ಸಂಕೇತದ ರೂಪದಲ್ಲಿ ನೋಡಿದರೆ ಕವಿಯ ಆಶಯ ಹೆಚ್ಚು ಸ್ಫುಟವಾಗುತ್ತ ಹೋಗುತ್ತದೆ.

ಶುದ್ಧಸತ್ವಗುಣ ಮಾತ್ರ ಶಿವತ್ವದಲ್ಲಿ ಸಮರಸವಾಗಲು ಅರ್ಹವಾಗುವುದರಿಂದ ಪಾರ್ವತಿಯ ತಾಮಸ ಗುಣದಿಂದ ಮೂಡಿ ಬಂದಿರುವ ಮಾಯೆಗೆ ಅಲ್ಲಮ ಒಳಗಾಗುವುದು ಅಸಂಭವ. ಹೀಗಾಗಿ ಸಾತ್ವಿಕಗುಣದ ಅಕ್ಕಮಹಾದೇವಿ ಪ್ರಭುವಿನ ಕೃಪೆಗೆ ಪಾತ್ರಳಾಗುತ್ತಾಳೆ. ಚಿತ್ತದ ಪರಿಪಾಕವಾಗುವ ಶಿವಯೋಗಾನುಸಂಧಾನದ ರೂಪದಲ್ಲಿ ಪ್ರಭುಲಿಂಗಲೀಲೆ ಇರುವುದರಿಂದ ಅದರಲ್ಲಿ ಅಲ್ಲಮಪ್ರಭು ಗುರುವಾಗಿ, ಲಿಂಗವಾಗಿ, ಜಂಗಮವಾಗಿ, ಮಹಾಲಿಂಗವಾಗಿ ಚಿತ್ರಣಗೊಂಡಿದ್ದಾನೆ.

ಗುರು :– ಪಾರ್ವತೀ ಪರಮೇಶ್ವರ ಸಂವಾದದ ಗತಿಯಲ್ಲಿ ತಾನು ಅಲ್ಲಮನೆಂಬ ಹೆಸರಿನಿಂದ ಗುರುವಾಗಿ ಸುಳಿದಿರುವುದಾಗಿ ಶಿವನು ಗಿರಿಜೆಗೆ ತಿಳಿಸುತ್ತಾನೆ.[೨] ಗೊಗ್ಗಯ್ಯನಲ್ಲಿಗೆ ಬಂದ ಪ್ರಭು ತಾನು 'ಭಕ್ತಿಭಿಕ್ಷಾಂದೇಹಿ' ಎಂದು ತಿಳಿಸುತ್ತ ಅವನನ್ನು 'ಭಕ್ತಯ್ಯ' ಎಂದು ಸಂಬೋಧಿಸುತ್ತಾನೆ.[೩]

ಮುಕ್ತಾಯಕ್ಕನನ್ನು ಕಾಣಲು ಬಂದ ಪ್ರಭು 'ಸಲ್ಲಲಿತ ಲಿಂಗಾನುಭಾವದ ಬೆಲ್ಲವನು ಮೆಲಕಲಿಸಿ ನಿಜಸುಖದಲ್ಲಿ ನಿಲಿಸುವೆನೆನುತ' ಬರುತ್ತಿದ್ದನೆಂದು ಚಾಮರಸ ತಿಳಿಸುತ್ತಾನೆ.[೪] ಮುಕ್ತಾಯಕ್ಕ ಅವನಿಗೆ 'ಪರಮತತ್ತ್ವವ ನುಡಿದು ಹೇಳುವ ಗುರುವೆ' ಎಂದು ನುಡಿಯುತ್ತಾಳೆ.[೫] ಸೊನ್ನಲಪುರಕ್ಕೆ ಬರುತ್ತಿರುವ ಪ್ರಭುವನ್ನು ಚಾಮರಸ 'ಪ್ರಾಣಲಿಂಗವನರುಹಿಸುವ ವರಗುರು' ಎಂದು ತಿಳಿಸುತ್ತಾನೆ.[೬] ಸಿದ್ಧರಾಮ 'ಸಾವು ತಪ್ಪುವ ಭೇದವನ್ನು ತಿಳಿಸಬೇಕೆಂದೂ, ಮುಕ್ತಿಮಾರ್ಗವನ್ನು ಬೋಧಿಸಬೇಕೆಂದೂ' ಅವನಲ್ಲಿ ಪ್ರಾರ್ಥಿಸುತ್ತಾನೆ.[೭] ಮಹದೇವಿಯಕ್ಕನಿಗೆ ಪ್ರಸನ್ನವಾದ ಗತಿಯಲ್ಲಿ ಅಕ್ಕ ಮುಕ್ತಿಯ ಸೊಂಪು ಶೋಭಿಸುವ ಅಲ್ಲಮಪ್ರಭುವಿದ್ದೆಡೆಗೆ ಬಂದಳೆಂದೂ[೮] ನಿರ್ವಿಕಾರದ ನಿರಿಗೆಯ ಅಮಲಜ್ಞಾನವನ್ನು ಕಣ್ದೆರೆಸುವ ಪ್ರಭುರಾಯನನ್ನು ಕಂಡಳೆಂದೂ[೯] ಚಾಮರಸ ತಿಳಿಸುತ್ತಾನೆ. ಗೋರಕ್ಷನಲ್ಲಿಗೆ ಬರುವ ಪ್ರಭು ಅವನಿಗೆ ತಾನು 'ಒಡಲಿನಾಸೆಗೆ ಕುದಿದು ಕೋಟಲೆಬಡುವವರ ಕಳವಳವ ಕಳಚಲು ನಡೆದು ಬಂದವರಾವೆಲೈ' ಎಂದು ತಿಳಿಸುತ್ತಾನೆ.[೧೦] ಇದಕ್ಕನುಗುಣವಾಗಿ 'ಪರಿಪಾಕಭಾವದ ಹಸನನರಿದಿನ್ನೀತಗುಪದೇಶಿಸುವೆನೆಂದೆನುತ ಒಸೆದು ಹಣೆವಿಡಿದೆತ್ತಿ ಕರುಣವ ಪಸರಿಸುತ ಗೋರಕ್ಷನನು ಮನ್ನಿಸಿದ' ಎಂದು ಚಾಮರಸ ತಿಳಿಸುತ್ತಾನೆ. ಭಕ್ತರ ಚಿತ್ತದಲ್ಲಿ ಸುಜ್ಞಾನ ಬೀಜವನ್ನು ಬಿತ್ತಲು ನಟಿಸಿರುವುದಾಗಿ ಅಲ್ಲಮ ಗೋರಕ್ಷನಿಗೆ ತಿಳಿಸುತ್ತಾನೆ.[೧೧]

ಲಿಂಗ :- ಅಲ್ಲಮಪ್ರಭು ಷಟ್ಸ್ಥಲ ಸಾಧನೆಯಿಂದ ಅಂತರ್ಮುಖಿಯಾಗಿ, ಪ್ರಶಾಂತನಾಗಿ ಅಂತರ್ಗತವಾದ ಚಿದಂಶವನ್ನು ಸರ್ವವ್ಯಾಪಕವಾಗಿ ಮಾಡಿದ್ದನು.[೧೨] ಅವನು ಪ್ರಾಕೃತಿಕ ಗುಣಗಳಿಂದ ದೂರವಿದ್ದು ಈ ಪ್ರಪಂಚದ ಕಾರ್ಯಕಲಾಪಗಳನ್ನು ಹೊರಗಡೆ ನಿಂತು ನೋಡುತ್ತಿದ್ದನು.[೧೩] ಇದುವೇ ಪ್ರಭುವಿನ ಲಿಂಗಲೀಲೆ. ಚಾಮರಸ ಪೀಠಿಕಾರೂಪದ ಅನೇಕ ಪದ್ಯಗಳಲ್ಲಿ ಅಲ್ಲಮನನ್ನು ಲಿಂಗರೂಪಿಯಾಗಿಯೇ ನಿರೂಪಿಸುತ್ತಾನೆ ಇಲ್ಲವೆ ನೇರವಾಗಿ ಅಲ್ಲಮಲಿಂಗ ಎಂದು ಸೂಚಿಸುತ್ತಾನೆ. ಪ್ರಭು ಮದ್ದಳೆಯ ಬಾರಿಸಿದ ಗತಿಯಲ್ಲಿ 'ಅಲ್ಲಮ ಸಂಗಿಯಂತಿರೆ ನಟಿಸಿ ತಾ ನಿಸ್ಸಂಗಿಯಾಗಿಹನು' ಎಂದು ತಿಳಿಸುತ್ತಾನೆ. ಅದರ ಮುಂದಿನ ಎರಡು ಪದ್ಯಗಳಲ್ಲಿ 'ಅಲ್ಲಮಲಿಂಗ' ಪದಪ್ರಯೋಗ ಮಾಡುತ್ತಾನೆ. ಇದೇ ಗತಿಯಲ್ಲಿ ಮಾಯಾದೇವಿಯ ಸಖಿಯರು 'ನಿನ್ನ ಹೆಸರೇನು, ದೇಶವಾವುದು?'ಎಂದು ಕೇಳುವ ಪ್ರಶ್ನೆಗೆ ಅಲ್ಲಮ ಉತ್ತರಿಸುವುದು ಹೀಗೆ-

ದೇಶವೆಮ್ಮದು ಹೇಳುವೊಡೆ ಪರ
ದೇಶ ಬಿರಿದಿನ ಬಿಂಕಕಾಱರ

ವಾಸಿಗರನಲ್ಲೆನಿಸುವಲ್ಲಮನೆಂಬ ಪೆಸರೆನಗೆ ।
ಲೇಸು ಮಾಡುವ ಠಾವುಗಳಲಭಿ
ಲಾಷೆಯಿಲ್ಲದೆ ಹೊದ್ದುವೆವು ಸುಖ
ವಾಸಿಗಳು ನಾವೆಂದನಲ್ಲಮ ನಗುತ ಸತಿಯರಿಂಗೆ ॥ [೧೪]

'ಲಿಂಗರೂಪದ ತಾನು ಪರಮಾತ್ಮನ ಅಂಶ. ಅಹಂಕಾರದಿಂದ ಕೂಡಿರುವ ದೇಹಿಗಳನ್ನು ಲಿಂಗರೂಪಗಳಲ್ಲವೆನಿಸುವ ಅಲ್ಲಮನೆಂಬ ಹೆಸರಿನವನು ತಾನು. ಸದಾಚಾರದಿಂದ ಕೂಡಿದ ಚಿದಾತ್ಮರಲ್ಲಿ ಬೇಕುಬೇಡೆಂಬುದನ್ನು ಲಕ್ಷಿಸದೆ ಪ್ರವೇಶ ಪಡೆದು ದೇಹಿಯಾಗುವ ಸುಖಿ' ಎನ್ನುವುದರ ಸಾಂಕೇತಿಕ ಅರ್ಥ ಇದು. ಬಸವಾದಿ ಪ್ರಮಥರು ಧರೆಗಿಳಿದ ಗತಿಯಲ್ಲಿ

ನಿನ್ನ ನಿರ್ಮಳ ಸಾತ್ವಿಕದ ಸಂ
ಪನ್ನ ಕಳೆಯನು ಕಳುಹಿ ಧರೆಯೊಳು
ಚೆನ್ನೆಯಾಗಿರೆ ಜನಿಸಿ ನೆಱೆ ನಿಷ್ಕಾಮ ಭಕ್ತಿಯಲಿ ।
ಮುನ್ನಲಿರುತಿರಲಲ್ಲಮಪ್ರಭು
ತನ್ನತಾನೇ ನಿಜವ ತೋಱುವ
ನಿನ್ನು ಸಂಶಯವಿಲ್ಲ ದಿಟವಿದು ಗಿರಿಜೆ ಕೇಳೆಂದ ॥ [೧೫]

ಎಂದು ಶಿವನು ಪಾರ್ವತಿಗೆ ತಿಳುಸುವಲ್ಲಿ ಈ ಅರ್ಥವು ನಿಖರವಾಗಿ ಬಿಚ್ಚಿಕೊಳ್ಳುತ್ತದೆ. ಮಾಯಾಸಂಪುಟದುದ್ದಕ್ಕೂ ಅಲ್ಲಮಪ್ರಭು ಪ್ರಾಕೃತಿಕ ಗುಣಗಳಿಂದ ನಿರ್ಲೇಪಿತವಾದ ಚಿದ್ರೂಪಿಯ ಸಂಕೇತವಾಗಿ ವ್ಯವಹರಿಸುತ್ತಾನೆ. ಮುಂದೆ ಮಾಯೆ ಹಾಗೂ ವಿಮಳೆಯರ ಪ್ರಸಂಗಗಳಲ್ಲಿ ಇದನ್ನು ವಿಸ್ತೃತವಾಗಿ ಚರ್ಚಿಸಲಾಗುವುದು. ಗೋರಕ್ಷನ ಬಳಿಗೆ ಕಾರಣ ಶರೀರದ ಪ್ರಭು ಬಂದಾಗ ಅವನು ತನಗಿಂತ ಮುಂದುವರಿದವನನ್ನು ಕಂಡು ಬಯಲ ದೇಹಿಯನ್ನು ಅಪ್ಪಲು ಸಾಧ್ಯವಾಗದೆಂದು ವಿಚಾರಿಸುತ್ತಾನೆ.[೧೬] ಇದೇ ಗತಿಯಲ್ಲಿ 'ಮಹಿಯ ಲೌಕಿಕರಲ್ಲಿ ಮಱಹಿಸಿ ವಿಹಿತವೆಂಬಂತಿರೆ ಗುಹೇಶ್ವರ ಸಹಜನಾಮವೆ ನಟಿಸಿದೆನು ನಾ ಲಿಂಗಲೀಲೆಯಲಿ' ಎಂದು ಪ್ರಭು ಗೋರಕ್ಷನಿಗೆ ನುಡಿಯುತ್ತಾನೆ.[೧೭]

ಜಂಗಮ :- ಜಂಗಮಲಿಂಗದಲ್ಲಿ ಸ್ವಯಲಿಂಗ, ಚರಲಿಂಗ, ಪರಲಿಂಗ ಎಂದು ಮೂರು ವಿಧವಿದ್ದು ಅವುಗಳಲ್ಲಿ ಶಿವಲಿಂಗದೊಡನೆ ಸರ್ವೇಂದ್ರಿಯಗಳನ್ನು ಸಮರಸಗೊಳಿಸಿ ಭೇದಭ್ರಾಂತಿ ಮರಳಿ ಹುಟ್ಟದೆ

[illegible]

[illegible]

[illegible]

[illegible]

[illegible]

ನಿಜಾನಂದದಿಂದ ತನ್ನಿಚ್ಛೆ ಬಂದಂತೆ ವಿಹರಿಸುವುದನ್ನು ಚರಲಿಂಗವೆಂದು ಹೇಳಲಾಗಿದೆ.[೧೮] ಚರಲಿಂಗರೂಪದ ಅಂತರಾತ್ಮನು ಮೂಡಿ ಬಂದಿರುವುದನ್ನು ಚಾಮರಸ ಅಲ್ಲಮನ ಜನನದ ಪ್ರತಿಮಾನಿರೂಪಣೆಯಿಂದ ತಿಳಿಸುತ್ತಾನೆ. ನಿರಹಂಕಾರ-ಸುಜ್ಞಾನಿ ದಂಪತಿಗಳು ಅಖಂಡಯೋಗ ಸಾಧನೆಯಲ್ಲಿ ತೊಡಗಿದ್ದಾಗ ಸುಷುಮ್ನಾನಾಳದಲ್ಲಿ ನಿಜಸಮಾಧಿಯಲ್ಲಿ ಬೆಳಗುವ ತೇಜೋಭರಿತ ಬಾಲಕನನ್ನು ಕಾಣುತ್ತಾರೆ.[೧೯] ಮುಂದೆ ಅವನು ಸಗುಣನಿರ್ಗುಣ ಮೂರ್ತಿಯಲ್ಲದ ಶಿಶುವಾಗಿಯೂ[೨೦] ಗುರುಲಿಂಗ-ಜಂಗಮಲಿಂಗ-ಶಿವಲಿಂಗ ಪ್ರಕಾಶ ವ್ಯೋಮಮೂರುತಿ ಎನ್ನುವಂತೆ ಚಿದ್ರೂಪಶಿಶುವಾಗಿಯೂ[೨೧] ಗೋಚರಿಸುತ್ತಾನೆ. ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿಯಲ್ಲಿ ವಿಮಳೆ ಮಾಯೆಯನ್ನು ಕುರಿತು 'ಅಲ್ಲಮನು ಸಕಳರಿಗೆ ಸಾಕಾರನಾಗಿ, ನಿರ್ಮಳಮತಿಗೆ ನಿರ್ಗುಣನಾಗಿರುತ್ತಾನೆ.' ಎಂದು ನುಡಿಯುತ್ತಾಳೆ.[೨೨] ಅದೇ ಗತಿಯಲ್ಲಿ ಮಾಯೆ ಅಲ್ಲಮನನ್ನು ಹದಿನಾಲ್ಕು ಲೋಕಗಳಲ್ಲಿ ಹುಡುಕುತ್ತಿದ್ದಾಗ 'ನಲಿದು ಹರಿತಹ ಮಾಯೆಯನು ಮೂದಲಿಸಿ ಮುರಿದೋಡಿಸುವೆನೆನುತ' ಅವಳಿಗೆ ತೋರುತ್ತಾನೆ.[೨೩] ಮಾಯೆ 'ನಯವಾಗಿ ಮಾತನಾಡಿ ಮೆಲ್ಲನೆ ಜಾರಿ ಹೋದರೆ ನಿನ್ನನ್ನು ಹಿಡಿದಲ್ಲದೆ ಬಿಡೆನು' ಎಂದು ತಿಳಿಸಿದಾಗ ಅವಳಿಗೆ ನಿರ್ವಯಲ ಬಲೆಯನ್ನು ಬೀಸುವ ಪ್ರಭು ಮರುನಿಮಿಷದಲ್ಲಿ ಅಲ್ಲಿಂದ ನಿರ್ಗಮಿಸಿ ಬಿಡುತ್ತಾನೆ.[೨೪] ಸಿದ್ದರಾಮನ ಗತಿಯಲ್ಲಿ ಅಲ್ಲಮನ ಬರುವಿಕೆಯನ್ನು 'ತಾನೇ ವರಗುರುವಾಗಿ, ಜಂಗಮವಾಗಿ ಹಾಗೂ ಶಿವಲಿಂಗ ಸ್ವರೂಪಿಯಾಗಿ ಬರುತ್ತಿದ್ದನು' ಎಂದು ಚಾಮರಸ ತಿಳಿಸುತ್ತಾನೆ.[೨೫]

ಮಹಾಲಿಂಗ :-'ಪರಬ್ರಹ್ಮರೂಪದ ಮಹಾಲಿಂಗವು ಚಿದ್ರೂಪವೂ, ಪರಮತತ್ವವೂ, ಶಿವನಾಮವುಳ್ಳದ್ದೂ, ಸೃಷ್ಟಿಗೆ ಕಾರಣವೂ, ವಿಶ್ವದ ಬಗ್ಗಡವಿಲ್ಲದ್ದೂ, ನಿರವಯವವೂ ಅವೇದ್ಯವೂ ಆಗಿದೆ. ಅಲ್ಲದೆ ಅದು ಸತ್ತು ಮತ್ತು ಆನಂದಗಳ ದಿವ್ಯ ಸ್ಫುರಣವೂ ಅಪ್ರಮಾಣವೂ ಅನಿರ್ದೇಶ್ಯವೂ ಜಡಪ್ರಪಂಚಕ್ಕೆ ವಿಲಕ್ಷಣವೂ ಅವಿನಾಶಿಯೂ ಆಗಿದೆ.'[೨೬] ಇದನ್ನು ಚಾಮರಸ ಹೀಗೆ ನಿರೂಪಿಸುತ್ತಾನೆ. ಶಿವನ ಸಾತ್ವಿಕರೂಪವಾದ ಅಲ್ಲಮಪ್ರಭುವಿನ ಸಂಗವನ್ನು ಹೃದಯದಲ್ಲಿ ತೀವ್ರಗೊಳಿಸುವವರಿಗೆ ಅವನ ನಿಜರೂಪ ತಿಳಿಯುತ್ತದೆಂದು ದೂರ್ವಾಸಮುನಿ ಋಷಿಗಳಿಗೆ ಸೂಚಿಸುತ್ತಾನೆ. ಮಾಯೆ ಹುಟ್ಟಿದ ಉದ್ದೇಶವನ್ನು ತಿಳಿಸುತ್ತ[೨೭] ನಿರಹಂಕಾರ-ಸುಜ್ಞಾನಿಗಳಿಗೆ ಧ್ಯಾನದಲ್ಲಿ ಒಲಿಯುವ ಅಲ್ಲಮ ಆದಿ-ಅಂತ್ಯವಿಲ್ಲದ, ಅಪ್ರಮೇಯನಾಗಿರುವ, ಚಂಡಕರಕೋಟಿಪ್ರಕಾಶೋದ್ದಂಡಮಯನಾಗಿರುವ

[illegible]

[illegible]

ಮಹಾಲಿಂಗನಾಗಿದ್ದಾನೆ.[೫೮] ಅವರು ಅಲ್ಲಮನನ್ನು ಕರೆಯುವುದೂ ಮಹಾಲಿಂಗನ ರೂಪದಲ್ಲಿಯೇ![೫೯] ನಾಮ-ರೂಪ-ಕ್ರಿಯೆಗಳಿಗೆ ಒಳಗಾಗಿರುವ ಹರಿಹರಬ್ರಹ್ಮಾದಿಗಳನ್ನು ತನ್ನ ಅಧೀನದಲ್ಲಿರಿಸಿಕೊಂಡಿರುವ ಮಾಯೆಯನ್ನು ತಾನು ಆಡಿಸುವುದಾಗಿ ಅಲ್ಲಮ ತಿಳಿಸುತ್ತಾನೆ.[೬೦] ಮುಕ್ತಾಯಕ್ಕ ಅಲ್ಲಮನನ್ನು ವೇದಶಾಸ್ತ್ರಾಗಮಗಳುಪಮಿಸದ ಬಹಳ ನಿಧಿಯೆಂದು ಕರೆಯುತ್ತಾಳೆ.[೬೧] 'ಪ್ರಭುದೇವರು ಕಲ್ಯಾಣಕ್ಕೆ ಬಂದ ಗತಿಯಲ್ಲಿ ಬಸವಣ್ಣ ಅಲ್ಲಮನನ್ನು ಪಶುಪತಿ ಎಂದು ತಿಳಿಸುತ್ತಾನೆ.[೬೨] ಗೋರಕ್ಷನ ಗತಿಯಲ್ಲಿ 'ನಿಲ್ಲದೆರಗಲು ಸತ್ತನಾದೊಡೆ ಬಲ್ಲಿತಹ ಗೋರಕ್ಷನನು ನಾವಿಲ್ಲಿ ಸೃಜಿಸುವೆವು' ಎಂದು ಪ್ರಭು ಸರ್ವಶಕ್ತನಾಗಿ ನುಡಿಯುತ್ತಾನೆ. ಸಕಲ ಜೀವಿಗಳಲ್ಲಿ ದಯೆಯನ್ನು ಬೇಡನಿಗೆ ಉಪದೇಶಿಸಿ ಪರಬ್ರಹ್ಮಸ್ವರೂಪನಾದ ಪ್ರಭು ತೆರಳಿದನೆಂದು 'ಮುನಿಗಳಿಗೆ ಬೋಧಿಸಿದ ಗತಿ'ಯಲ್ಲಿ ಚಾಮರಸ ತಿಳಿಸುತ್ತಾನೆ.[೬೩] ಪ್ರಭುದೇವರು ಶೂನ್ಯಸಿಂಹಾಸನವನ್ನೇರಿದ ಗತಿ'ಯಲ್ಲಿ ಅಲ್ಲಮನ ಬರುವಿಕೆಯನ್ನು ಚೆನ್ನಬಸವಣ್ಣ, 'ವೇದನಿಕಾಯಗಳರಸಿದರೂ ಅಡಿಯ ತೋರಿಸದ ಅಮಲಬೊಮ್ಮನೇ ನಡೆದು ಬರುತ್ತಿರುವನು, ಎಂದು ತಿಳಿಸುತ್ತಾನೆ.[೬೪] ಅದೇ ಗತಿಯಲ್ಲಿ ಚಾಮರಸ ಅಲ್ಲಮನನ್ನು ವರ್ಣಿಸುತ ನೇರವಾಗಿ ಮಹಾಲಿಂಗನ ಲಕ್ಷಣಗಳನ್ನೇ ಹೇಳುತ್ತಾನೆ.[೬೫] ಪ್ರಭುದೇವರು ಆರೋಗಣೆ ಮಾಡಿದ ಗತಿಯಲ್ಲಂತೂ ಕವಿ ಅಲ್ಲಮನನ್ನು ಸಾಕ್ಷಾತ್ ಮಹಾಲಿಂಗನೆಂದೇ ವರ್ಣಿಸುತ್ತಾನೆ.

ವಿಶ್ವತೋಮುಖ ವಿಶ್ವತೋಕರ
ವಿಶ್ವತೋದರ ವಿಶ್ವತೋಪದ
ವಿಶ್ವತೋಮಯನೆನಿಸಿ ಮೆಱೆವ ಮಹಾಮಹಾತ್ಮಂಗೆ ।
ಶಾಶ್ವತಂಗಳನೀವ ಘನ ಮಹಿ
ಮಸ್ವರೂಪನ ಲೀಲೆಗಾವುದು
ವಿಶ್ವದೊಳಗರಿದೆನುತಲಿರ್ದುದು ಭಕ್ತಸಂದೋಹ ॥ [೬೬]

ಅದೇ ಗತಿಯಲ್ಲಿ ಅಲ್ಲಮ ತಾನು ಶುದ್ಧ ಸಾಕ್ಷಾತ್ ಅಮೃತದೇಹಿಯೆಂದು ಬಸವಣ್ಣನಿಗೆ ತಿಳಿಸುತ್ತಾನೆ.[೬೭] ಮನೋಲಯದ ಗತಿಯ ಕೊನೆಯ ಪದ್ಯದಲ್ಲಿ ಅಲ್ಲಮ ಅಖಿಳ ಶರಣರಿಗೆ ನಿತ್ಯ ಪದವಿಯನ್ನಿತ್ತು ತಾನು ಪರಿಪೂರ್ಣತೆಯ ನಿರ್ಲೇಪವೃತ್ತಿಯಲ್ಲಿ ತತ್ತ್ವಮಸಿ ವಾಕ್ಯಗಳಿಂದ ಅತ್ತತ್ತ ಎಂಬಂತೆ ಅನುಪಮನಾಗಿ ಹೋದನೆಂದು ಚಾಮರಸ ತಿಳಿಸುತ್ತಾನೆ.[೬೮] ಹೀಗೆ ಅಲ್ಲಮ ವಿಶ್ವನಿಯಾಮಕನ ಸಂಕೇತ ಎಂಬುದನ್ನು

ಸ್ಥಿರೀಕರಿಸುವ ನಿಟ್ಟಿನಲ್ಲಿ 'ಪ್ರಭುಲಿಂಗಲೀಲೆ'ಯನ್ನು ಮರಾಠಿಗೆ ಭಾಷಾಂತರಿಸಿದ ಬ್ರಹ್ಮದಾಸ ಕವಿ ಅದನ್ನು 'ಲೀಲಾವಿಶ್ವಂಭರ' ಎಂದು ಹೆಸರಿಸಿದ್ದಾನೆ.

೧. ೨ ಪಿಂಡೋತ್ಪತ್ತಿ ಸ್ಥಲ

ರಜತಾದ್ರಿ ಎಂಬ ಹೆಸರಿನ ಕೈಲಾಸಪರ್ವತದಲ್ಲಿ ಕೇವಲ ಸತ್ವಗುಣ ಸ್ವಭಾವದ ಆದಿರುದ್ರನು ವಾಸವಾಗಿದ್ದಾನೆ. ಅಲ್ಲಿ ಹಗಲಿರುಳುಗಳ ಹಂಗಿಲ್ಲದ ದೇವರುಗಳಿದ್ದಾರೆ. ಚಾಮರಸ ಇಲ್ಲಿ ಶಿವನ ಸ್ವರೂಪದರ್ಶನವನ್ನು ಮಾಡಿಸುತ್ತಾನೆ. ಈ ಶಿವನಿಗೆ ಮೂಲತತ್ತ್ವವೇ ಮುಖ, ವಾಯುವೇ ತೋಳು, ಆದಿ-ಅನಾದಿಗಳೇ ಕಾಲುಗಳು, ಅಗ್ನಿ-ಸೂರ್ಯ-ಚಂದ್ರರೇ ಕಣ್ಣುಗಳು, ಸೇರ್ಪಡೆಯಾದ ಆತ್ಮತೇಜಸ್ಸೇ ಶಿರದಲ್ಲಿ ಹೊಳೆಯುವ ಚಂದ್ರ.[೬೦] ಪುರುಷರೂಪದ ಶಿವನೊಂದಿಗೆ ಪ್ರಕೃತಿರೂಪದ ಪಾರ್ವತಿಯೂ ಇಲ್ಲಿ ಮೂಡಿ ಬಂದಿದ್ದಾಳೆ. ಜ್ಞಾನ-ಅಜ್ಞಾನಗಳೇ ಅವಳ ಕಾಲುಗಳು, ಮೋಹ-ಸ್ನೇಹಗಳೇ ತೋಳುಗಳು, ಸಾತ್ವಿಕ ಮದದ ಗಡಿಯೇ ನಡು, ಕಾಮ-ಲೋಭಗಳೇ ಕುಚಗಳು, ಮಮತೆಯೇ ಮನೋಹರವಾದ ಮುಖ, ಅರಿವಿನ ಕುರುಹೇ ಕಣ್ಣುಗಳು.[೬೧]

ಸೂಕ್ಷ್ಮವಾಗಿ ಅವಲೋಕಿಸಿದರೆ ಶುದ್ಧ ನಿರ್ಗುಣಸ್ವರೂಪಕ್ಕೂ ಸತ್ವ-ರಜ-ತಮಗಳಿಂದ ಕೂಡಿರುವ ಸಗುಣರೂಪದ ಪ್ರಾಕೃತಿಕ ಅಂಶಕ್ಕೂ ಇರುವ ವ್ಯತ್ಯಾಸವು ಈ ಶಿವ ಪಾರ್ವತಿಯರ ವರ್ಣನೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಪರಶಿವನ ಸಂಕಲ್ಪದಲ್ಲಿ ಪ್ರಕೃತಿಯು ಮೂಡಿ ಬಂದಿರುವುದರಿಂದ ಶಿವಶಕ್ತಿಯರಲ್ಲಿ ಅವಿನಾಭಾವ ಸಂಬಂಧವಿದೆ. ಕವಿ ತಿಳಿಸಿರುವಂತೆ ಚಂದ್ರನಿಗೂ ಅವನ ಬೆಳದಿಂಗಳಿಗೂ, ಕರ್ಪುರಕ್ಕೂ ಅದರ ಕಂಪಿಗೂ, ಸುವರ್ಣಕ್ಕೂ ಅದರ ಹೊಳಪಿಗೂ ಇರುವ ಸಂಬಂಧದಂತೆ ಅದು ಹೊರನೋಟಕ್ಕೆ ಕಾಣಿಸದಂತಿದೆ! [೬೨]

ಪರಶಿವನಿಂದ ಕಿಡಿಯ ರೂಪದಲ್ಲಿ ಹೊರಬಂದು ಭವಬಂಧನಕ್ಕೆ ಒಳಗಾಗುವ ಜೀವಾತ್ಮ ಆ ಬಂಧನವನ್ನು ಕಳಚಿಕೊಳ್ಳುವುದು ವೀರಶೈವದ ಆವಶ್ಯಕ ಅಂಶ. ಇದನ್ನೇ ಪಾರ್ವತಿ ಶಿವನನ್ನು ಕುರಿತು 'ನಿನ್ನೊಡ್ಡೋಲಗದೊಳೊಪ್ಪುವ ಮಹಾಘನಮಹಿಮರೆಲ್ಲರು ಭವಕೆ ಬಾರದೆ ನಿತ್ಯಸುಖದಿಂದಿಪ್ಪರೋ ಮೇಣು ಇವರಿಗೆಯು ನೆಲೆಯಿಲ್ಲವೋ' ಎಂದು ಕೇಳುತ್ತಾಳೆ. ಪ್ರತಿಯಾಗಿ ಶಿವನು 'ವಿರಚಿಸುತ್ತಿಹ ನಾಮರೂಪಗಳೊರೆದ ಸತ್ಕ್ರಿಯೆಯಿದ್ದುವಾದೊಡೆ ದೊರಕಲರಿಯದು ನಿತ್ಯ ಸುಖ' ಎನ್ನುತ್ತಾನೆ.

ಸತ್ಕ್ರಿಯೆಯಿದ್ದರೂ ನಾಮರೂಪಗಳನ್ನು ಹೊಂದಿದವರಿಗೆ ನಿತ್ಯಸುಖ ದೊರಕದೆಂದು ತಿಳಿಸುವ ಶಿವ ಅದಕ್ಕೆ ಹರಿವಿರಿಂಚಿಗಳನ್ನು ಉದಾಹರಿಸುತ್ತಾನೆ. ಇಂಥ ನಾಮ-ರೂಪು-ಕ್ರಿಯೆಗಳನ್ನು ಗೆಲ್ಲುವ ಕ್ರಮವಾವುದೆಂದು ಪಾರ್ವತಿ ಪ್ರಶ್ನಿಸಿದಾಗ ಚಾಮರಸ ವೀರಶೈವತ್ವದ ಪ್ರಾರಂಭದ ಘಟ್ಟವನ್ನು ಒಂದು ಪದ್ಯದಲ್ಲಿ ಹಿಡಿದಿಟ್ಟಿದ್ದು ಅದನ್ನು ಶಿವನು ಗಿರಿಜೆಗೆ ಕೊಡುವ ಉತ್ತರದ ರೂಪದಲ್ಲಿ ತಿಳಿಸುತ್ತಾನೆ.

ಭೋಗಭೂಮಿಯ ಭೋಗತನುವಿನ
ಲಾಗದನುಪಮ ಸಿದ್ಧಿ ಕರ್ಮೋ
ದ್ಯೋಗ ಭೂಮಿಯ ಕರ್ಮ ತನುವಿನಲಲ್ಲದದ ಱಂದೆ
ಯೋಗಯೋಗ್ಯರು ಯೋಚಿಸುತ ಭೂ
ಭಾಗದಲಿ ಮಾನವ ಶರೀರಿಗ
ಳಾಗಿ ಸಾಧಿಸಿ ನಿಜವನಱವರು ಗಿರಿಜೆ ಕೇಳೆಂದ [೪೩]

ಸ್ವರ್ಗವು ಭೋಗಭೂಮಿ. ಪುಣ್ಯ ಸಂಪಾದಿಸಿದವರು ಅಲ್ಲಿ ಸ್ಥಾನ ಪಡೆದು ಅಲ್ಲಿಯ ಸುಖವನ್ನು ಅನುಭವಿಸುತ್ತಾರೆ. ಆದರೆ ಅವರಿಗೆ ಮೋಕ್ಷವಿಲ್ಲ. ಕರ್ಮಾನುಸರಣೆಯಿಂದ ಭವಬಂಧನಕ್ಕೆ ಒಳಗಾಗುವ ಜೀವಾತ್ಮನ ತನು ಕರ್ಮತನು. ಸಿದ್ಧಿಯನ್ನು ಪಡೆದುಕೊಳ್ಳುವುದು ನಾವು ವಾಸಿಸುತ್ತಿರುವ ಕರ್ಮಭೂಮಿಯ ಮೇಲೆಯೇ. ಇದಕ್ಕಾಗಿ ಶಿವಯೋಗಾಚರಣೆ ಅತ್ಯಾವಶ್ಯಕ ಅಂಶ. ಇಂಥ ಯೋಗಯೋಗ್ಯರು ಮಾನವ ಶರೀರಿಗಳಾಗಿ ಯೋಗಸಾಧನೆಯಿಂದ ನಿಜತ್ವವನ್ನು ಅರಿಯಬೇಕು. ಆಗ ಪಾರ್ವತಿ 'ನಿಜಸ್ಥಿತಿಯನ್ನು ಉಪದೇಶಿಸುವ ಗುರುವಾರು?' ಎಂದು ಶಿವನನ್ನು ಕೇಳುತ್ತಾಳೆ. ಶಿವನು 'ಸುಜ್ಞಾನಿ ನಿರಹಂಕಾರ ಎನ್ನುವವರ ತಪಸ್ಸಿನಲ್ಲಿ ಸುಳಿದ ಅಲ್ಲಮ' ಎಂದು ತಿಳಿಸುತ್ತಾನೆ. ಶುದ್ಧಾತ್ಮರೂಪದ ಗುರುವೇ ಅಲ್ಲಮನೆಂಬುದನ್ನು ತಾನು ಬಲ್ಲೆನೆಂದು ನುಡಿಯುತ್ತ, ತಿಳಿಯಬೇಕೆನ್ನುವವರಿಗೆಲ್ಲ ಅವನು ಸುಲಭಸಾಧ್ಯವೆಂದು ಪಾರ್ವತಿ ನುಡಿಯುತ್ತಾಳೆ. ಎಲ್ಲದರ ಮೇಲೂ ಪ್ರಭುತ್ವ ಸಾಧಿಸಿದ ಅವನು ಕೇವಲ ಶಬ್ದಗಳಿಗೆ ಸಿಕ್ಕುವವನಲ್ಲವೆಂದೂ, ಅದರಿಂದ ಅವಳಿಗೆ ಸೋಲು ನಿಶ್ಚಿತವೆಂದೂ ತಿಳಿಸುತ್ತಾನೆ ಶಿವ. ಪಾರ್ವತಿ ಪೈಜೆ ಮಾಡಿ ತನ್ನ ತಾಮಸಕಳೆಯ ಮೂರುತಿಯಾದ ಮಾಯೆಯನ್ನು ಇಳೆಗೆ ಕಳಿಸುತ್ತ ಅಲ್ಲಮನನ್ನು ಅರಿತುಕೊಂಡು ಬರಬೇಕೆಂದು ಸೂಚಿಸುತ್ತಾಳೆ. ಹೀಗೆ ತಿರೋಧಾನ ಹೊಂದುವ ಜೀವಾತ್ಮವು ಅಷ್ಟತನುವನ್ನು ಆವರಣಗಳ ರೂಪದಲ್ಲಿ ಪಡೆದುಕೊಂಡು 'ಸೋಹಂ' ಎಂಬುದನ್ನು ಮರೆತು ಭ್ರಾಂತಿಯಿಂದ ಭೂಮಿಯ ಮೇಲೆ ಜನ್ಮ ತಾಳುತ್ತದೆ. ನಾಮ-ರೂಪು-ಕ್ರಿಯೆಗಳೊಂದಿಗೆ ಬಂದಿರುವ

[illegible]

[illegible]

[illegible]

ಜೀವಾತ್ಮವು ಗಂಡಿರಲಿ, ಹೆಣ್ಣಿರಲಿ ಮಾಯಾರೂಪಿಯೇ! ಹೀಗೆ ಕರ್ಮ ಭೂಮಿಯ ಮೇಲೆ ಪಿಂಡೋತ್ಪತ್ತಿಯಾಗುತ್ತದೆ.

೧.೩ ಮಾಯಾವಿಲಾಸವಿಡಂಬನ ಸ್ಥಲ

ಮಾಯಾ ಶಬ್ದವು ಎಲ್ಲಕ್ಕೂ ಮೊದಲು ಋಗ್ವೇದದಲ್ಲಿ ನೋಡಲು ಸಿಗುತ್ತದೆ.[೪೪] ಪರಶಿವನಲ್ಲಿ ಸಾಮರಸ್ಯರೂಪದಿಂದಿದ್ದ ಚಿಚ್ಛಕ್ತಿಯ ಅನೇಕ ರೂಪಗಳಲ್ಲಿ ಮಾಯೆಯೂ ಒಂದು.[೪೫] ಮಹಾಲಿಂಗದಿಂದ ಉದ್ಭವಿಸಿದ ಕಿಡಿಗಳು ಜೀವಾತ್ಮರಾದರೆ, ಮಹಾಲಿಂಗವು ಪಂಚಮುಖಗಳಲ್ಲಿ ಉದ್ಭವಿಸಿದ ಸಾದಾಖ್ಯಗಳಿಂದ ಮೈದೋರಿದ ತತ್ವಗಳು ಆತ್ಮಗಳಿಗೆ ದೇಹವಾಗುತ್ತವೆ.[೪೬] 'ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಎಂಬ ಶಿವನ ಅಷ್ಟತನು ಜಗತ್ತಾಗಿಹುದು. ಸ್ಥೂಲಬ್ರಹ್ಮಾಂಡದೊಳಗುಳ್ಳ ಗುಣಗಳ ಆಶ್ರಯವು ಪಿಂಡದಲ್ಲಿ ಸೂಕ್ಷ್ಮರೂಪದಿಂದ ಸಂಗ್ರಹವಾಗಿ ತೋರುತ್ತದೆ.'[೪೭] ಜೀವಾತ್ಮನು ಆಣವ, ಮಾಯಾ, ಕಾರ್ಮಿಕ ಮಲಗಳಿಂದ್ಯುಕ್ತನಾಗಿ ತಿರೋಧಾನಶಕ್ತಿಯಾಗಿ ಬಂದು ಜೀವಿಯಾಗಿದ್ದಾನೆ, ರೂಪು ಪಡೆದಿದ್ದಾನೆ. ರೂಪೆಂದರೆ ಭವಕ್ಕೆ ಬದ್ಧತೆ ಒದಗುತ್ತದೆ. ಈ ರೂಪದಿಂದ ದೂರವಾಗಿ ನಿರೂಪಿಯಾದರೆ ಶೂನ್ಯತ್ವ ಪ್ರಾಪ್ತಿಯಾಗುತ್ತದೆ.[೪೮] ಶೂನ್ಯವೆಂದರೆ ಮಹಾಲಿಂಗ.

ಸ್ಥೂಲ, ಸೂಕ್ಷ್ಮ, ಕಾರಣ ತನುಗಳನ್ನುಂಟು ಮಾಡುತ್ತ ಮಾಯೆ ತನುವಾಗಿ ತೋರುತ್ತಿರುವುದು. ೪೯ ಹೀಗೆ ನಾಮ-ರೂಪು-ಕ್ರಿಯೆಗಳಿಂದ ಕೂಡಿರುವ ಮಾಯೆಯ ಬೇರುಗಳು ಬ್ರಹ್ಮಾಂಡದ ಉದ್ದಗಲಕ್ಕೂ ಪಸರಿಸಿವೆ.[೫೦] ಅಷ್ಟತನುಗಳ ರೂಪದಲ್ಲಿ ಜೀವಾತ್ಮನನ್ನು ಆವರಿಸಿರುವ ಮಾಯೆಯ ಬಂಧನವು ಮತೆ ಮತ್ತೆ ಜನನ-ಮರಣಗಳಿಗೆ ಕಾರಣವಾಗಿ ಭವದ ಚಕ್ರದಲ್ಲಿ ತಿರುಗಿಸುತ್ತದೆ. ಜನನಮರಣಗಳ ಚಟುವಟಿಕೆಗಳ ಫಲವು ಸಂಚಿತ ಕರ್ಮಗಳ ಮೂಲಕ ಪಾಪ-ಪುಣ್ಯಗಳ ರೂಪದಲ್ಲಿ ಸಂಗ್ರಹವಾಗುತ್ತ, ಜೀವಾತ್ಮನೊಂದಿಗೆ ಸುತ್ತುತ್ತ ಹೊಸ ಹೊಸ ಜನ್ಮಗಳಿಗೆ ಕಾರಣವಾಗುತ್ತದೆ. 'ಕರ್ಮವು ಸೋಪಕ್ರಮ ಹಾಗೂ ನಿರೂಪಕ್ರಮ ಎಂದು ಎರಡು ವಿಧವಾಗಿದೆ. ಸೋಪಕ್ರಮ ಕರ್ಮವು ಬೇಗನೆ ಫಲ ಕೊಡುತ್ತದೆ. ನಿರೂಪಕ್ರಮ ಕರ್ಮವು ನಿಧಾನವಾಗಿ ಫಲ ಕೊಡುತ್ತದೆ. ಮಾಯೆ ಈ ರೂಪದಲ್ಲಿ ಕಾರ್ಯ ಮಾಡುತ್ತದೆ.'[೫೧]

ಕೇವಲ ಸತ್, ಚಿತ್, ಆನಂದ, ಪ್ರಕಾಶಸ್ವರೂಪವಾದ ಹಾಗೂ ಮಹಾಕಾಶವಾದ ಪರಬ್ರಹ್ಮವು ಶೂನ್ಯಸದೃಶವಾಗಿ ಬೆಳಗುತ್ತದೆ.[೫೨] ಆನಂದ ಘನದ ರೂಪದಲ್ಲಿರುವ ಪರಬ್ರಹ್ಮನ ಈ ಆನಂದವನ್ನು ಜೀವಾತ್ಮನೂ ಸವಿಯುತ್ತಾನೆ. ಆದರೆ ಜೀವಾತ್ಮ ಸವಿಯುವ ಆನಂದವು ಕ್ಷಣಿಕವಾಗಿರುತ್ತದೆ. ಅನೇಕ ಸಲ ಆನಂದದೊಂದಿಗೆ ದುಃಖವೂ ಉಂಟಾಗುತ್ತದೆ. ಇದಕ್ಕೆಲ್ಲ ಕಾರಣವೆಂದರೆ ಜೀವನು ಮಾಯಾಧೀನವಾದ ಸ್ಥೂಲತನುವನ್ನು ಸಾಧನ ಮಾಡಿಕೊಂಡು ಆನಂದವನ್ನು ಸವಿಯುವುದು ಹಲವಾರು ಪ್ರಸಂಗಗಳಲ್ಲಿ ಆನಂದವನ್ನುಂಟು ಮಾಡುತ್ತವೆಂದು ತಿಳಿದ ಪ್ರಸಂಗಗಳೇ ದುಃಖಕ್ಕೆ ದಾರಿ ಮಾಡಿಕೊಡುತ್ತವೆ.

ಪೃಥ್ವಿ-ಅಪ್ಪುಗಳಿಂದ ಸ್ಥೂಲತನು, ಅಗ್ನಿ-ವಾಯುಗಳಿಂದ ಸೂಕ್ಷ್ಮತನು, ಆಕಾರ-ಹಮ್ಮುಗಳಿಂದ ಕಾರಣತನು, ಪಂಚಕರ್ಮೇಂದ್ರಿಯಗಳಿಂದ ನಿರ್ಮಲತನು, ಪಂಚವಿಷಯಗಳಿಂದ ಆನಂದತನು, ಪಂಚಜ್ಞಾನೇಂದ್ರಿಯಗಳಿಂದ ಚಿನ್ಮಯತನು, ಪಂಚಪ್ರಾಣವಾಯುಗಳಿಂದ ಚಿದ್ರೂಪತನು ಹಾಗೂ ಪಂಚಕರಣಗಳಿಂದ ಶುದ್ಧತನು ಆಗಿರುವುವು.[೫೩] ಹೀಗೆ ಶುದ್ಧತನುವಿನ ಯಾವ ಸ್ಪರ್ಶವೂ ಇಲ್ಲದ ಭವಕ್ಕೆ ದಾರಿ ಮಾಡುವ, ಸ್ಥೂಲ-ಸೂಕ್ಷ್ಮ-ಕಾರಣ ತನುಗಳನ್ನು ಮಾತ್ರ ಹೊಂದಿರುವ ಹಾಗೂ ಸಾಧನೆಯಿಂದ ಏನನ್ನೂ ಹೊಂದಿರದ ಜೀವಿಗೆ ಆನಂದವು ಸುಖದುಃಖಗಳ ರೂಪದಲ್ಲಿ ತೋರಿ ಅಡಗುತ್ತಿರುತ್ತದೆ. ಅದರಲ್ಲಿಯೂ ಮನುಷ್ಯನಲ್ಲಿ ಅಷ್ಟಮದಗಳಿಂದ ಕೂಡಿದ ಮೂಲಾಹಂಕಾರವು ಎಂಥವರನ್ನಾದರೂ ಹುಲ್ಲುಕಡ್ಡಿಗೆ ಸಮಾನವೆಂದು ತಿರಸ್ಕರಿಸಿ ನುಡಿಯುವಂತೆ ಮಾಡುತ್ತದೆ.[೫೪] ಹೀಗೆ ಪ್ರಭುಶಕ್ತಿಯನ್ನು ಅವಹೇಳನ ಮಾಡುತ್ತ ಸ್ಥೂಲತನುವಿನ ಮುಖಾಂತರ ಕ್ಷಣಿಕ ಆನಂದವನ್ನು ಸವಿಯುವುದಕ್ಕಾಗಿ ಏನೆಲ್ಲವನ್ನು ಮಾಡಲು ಕುಣಿಯುವ ಜೀವಿಯನ್ನು ಸಂಕೇತಿಸಲು ಚಾಮರಸ ಮಾಯಾದೇವಿಯ ಪಾತ್ರವನ್ನು ಸೃಷ್ಟಿಸಿದ್ದಾನೆ. ಕಾವ್ಯದಲ್ಲಿ ಮಾಯೆ ತಾರುಣ್ಯದ ಹೊಸ್ತಿಲಲ್ಲಿರುವುದರಿಂದ ತಾರುಣ್ಯಾವಸ್ಥೆಯ ಮಹೋನ್ಮತ್ತ ಚಟುವಟಿಕೆಗಳ ಪರಿಚಯವೂ ನಮಗಾಗುತ್ತದೆ.

ಅನೇಕ ಜನ್ಮಗಳಲ್ಲಿ ಗಳಿಸಿದ ಪುಣ್ಯದ ಫಲದಿಂದ ಜೀವಾತ್ಮನಿಗೆ ಪಿಂಡರೂಪ ಒದಗಿ ಬರುತ್ತದೆ. ೫೫ ಆದಿಯಲ್ಲಿ ಶಿವನಿಂದ ನಾದ ಬಿಂದುಗಳಾದವು ಹಾಗೂ ಅವುಗಳಿಂದ ಸಕಲ ಜೀವಿಗಳು ಸಂಭವಿಸಿದರು ಎಂದು ಹೇಳಲಾಗಿದೆ. ತಾಯಿ-ತಂದೆಗಳ ಶುಕ್ಲಶೋಣಿತದ ನೆವದಿಂದಾಗಿ ಶಿವನ ಮಾಯೆಗಳಿಂದ ನಾದದ ಉತ್ಪತ್ತಿಯಾಯಿತೆಂದೂ ಆ ನಾದವನ್ನು ಉಭಯಬಿಂದುಗಳು ಕೂಡಲು ಉದರದಲ್ಲಿ ಬೆಳವಣಿಗೆ ಉಂಟಾಯಿತೆಂದೂ ತಿಳಿಸಲಾಗಿದೆ.[೫೬] ಹೀಗೆ ಪುರುಷರೂಪದ ಆಣವಮಲ ಹಾಗೂ ಪ್ರಕೃತಿರೂಪದ

ಮಾಯಾಮಲ ಇವುಗಳೊಂದಿಗೆ ತಾಯಿಯು ಸೇವಿಸಿದ ಆಹಾರದ ರೂಪದಲ್ಲಿ ಪಂಚಭೂತಾತ್ಮಕವಾದ ಕಾರ್ಮಿಕಮಲವು ಒದಗುತ್ತ ಹೋದಂತೆ ಪಿಂಡವು ಬೆಳೆಯತೊಡಗುತ್ತದೆ. ನವಮಾಸಗಳು ತುಂಬುವುದರೊಂದಿಗೆ ಬೆಳವಣಿಗೆಯು ಪೂರ್ಣವಾಗಿ ಅಧೋಮುಖದಿಂದ ಭೂಮಿಗೆ ಬರುತ್ತದೆ.

ಶೈಶವಾವಸ್ಥೆ ಹಾಗೂ ಬಾಲ್ಯಾವಸ್ಥೆಗಳಲ್ಲಿ ಕರಣಾದಿಗಳು ಪ್ರಬಲವಾಗಿ ಬೆಳೆದಿರುವುದಿಲ್ಲವಾದ್ದರಿಂದ ಹಸಿವು, ತೃಷೆ, ನಿದ್ರೆ, ಆಟ-ಪಾಠ ಮುಂತಾದವುಗಳಲ್ಲಿ ಮಾತ್ರ ಈ ಅವಸ್ಥೆಗಳ ಸಮಯವು ಕಳೆದು ಹೋಗುತ್ತದೆ. ಹದಿಮೂರರಿಂದ ಹತ್ತೊಂಬತ್ತು ವರ್ಷ ವಯಸ್ಸಿನ ನಡುವಿನ ಅವಧಿಯಾದ ಕಿಶೋರಾವಸ್ಥೆಯು ವ್ಯಕ್ತಿ ಜೀವನದ ಪ್ರಮುಖ ಹಂತ. ಈ ಅವಧಿಯಲ್ಲಿ ಪ್ರೌಢಸಹಜವಾದ ಮನೋಭಾವ ಮತ್ತು ನಡೆನುಡಿಗಳು ರೂಪುಗೊಳ್ಳುತ್ತವೆ. ಹುಡುಗಿಯರ ಕಿಶೋರಾವಸ್ಥೆಯು ಸುಮಾರು ಹದಿಮೂರನೇ ವರ್ಷದಿಂದ ಹದಿನೇಳನೇ ವರ್ಷದ ವರೆಗೆ ವ್ಯಾಪಿಸುತ್ತದೆ. ಈ ಅವಧಿಯು ಅತಿ ಒತ್ತಡದ ಹಾಗೂ ಪ್ರಯಾಸದ ಅವಧಿಯಾಗಿದೆಯೆಂದು ಸ್ಟೇನ್ಲಿ ಹಾಲ್ ಅಭಿಪ್ರಾಯ ಪಡುತ್ತಾನೆ.[೫೭] ಭಿನ್ನಲಿಂಗದ ವ್ಯಕ್ತಿಗಳಿಗೆ ಮಾರುಹೋಗುವುದು ಈ ಅವಧಿಯಲ್ಲಿ ಸಾಮಾನ್ಯ. ಈ ಅವಧಿಯಲ್ಲಿ ಲೈಂಗಿಕಾಸಕ್ತಿ ಹೆಚ್ಚುವುದರಿಂದ ಕಿಶೋರ-ಕಿಶೋರಿಯರಲ್ಲಿ ಪರಸ್ಪರ ತೀವ್ರ ಆಸಕ್ತಿ ಹುಟ್ಟಿ ಅವರು ಚಿತ್ತಕ್ಷೋಭೆಗಳಿಂದ ಬಳಲುತ್ತಾರೆ.[೫೮] ವೈಶಿಷ್ಟ್ಯವೆಂದರೆ ಬಹಳಷ್ಟು ಜನರು ಜೀವನ ಪರ್ಯಂತವೂ ಈ ಸ್ವರೂಪದಿಂದ ಹೊರಬರಲಾರದೆ ತೊಳಲುತ್ತಿರುತ್ತಾರೆ. ಚಾಮರಸ ಚಿತ್ರಿಸಿರುವ ಮಾಯಾದೇವಿಯಲ್ಲಿ ಈ ಎಲ್ಲವುಗಳನ್ನೂ ಕಾಣುತ್ತೇವೆ. ಇಷ್ಟು ಮಾತ್ರವಲ್ಲದೆ ವಿಶ್ವನಿಯಾಮಕನನ್ನು ತುಚ್ಛೀಕರಿಸುತ್ತ ಉಡಾಫೆಯಿಂದ ವರ್ತಿಸುವ ಗುಣಗಳನ್ನೂ ಅವಳು ಪಡೆದುಕೊಂಡಿದ್ದಾಳೆ. ಹೀಗೆ ಚಾಮರಸ ಅತ್ಯಂತ ಜಾಣ್ಮೆಯಿಂದ ಹೆಣೆದಿರುವ ಮಾಯಾಸಂಪುಟದಲ್ಲಿ ಸಾಂಕೇತಿಕರಣವೂ ಉನ್ನತ ಮಟ್ಟದಲ್ಲಿ ಹೇಗೆ ಕಂಗೊಳಿಸುತ್ತದೆಂಬುದನ್ನು ನೋಡೋಣ. ಆಣವ ಮಾಯಾ, ಕಾರ್ಮಿಕ ಮಲಗಳಿಂದ್ಯುಕ್ತವಾಗಿ ನಾಮ-ರೂಪು-ಕ್ರಿಯೆಗಳನ್ನು ಹಿಡಿದಿರುವ ಜೀವಿಯು ಜಗನ್ನಿಯಾಮಕ ಪ್ರಭುವನ್ನು ಆತ್ಮಸ್ವರೂಪದಲ್ಲಿ ಹೊಂದಿದ್ದಾನೆ. ಪ್ರಾಕೃತಿಕ ಅಂಶಗಳಿಂದ ಕೂಡಿರುವ ನಮ್ಮ ಶರೀರ ಶಾಶ್ವತವಲ್ಲ. ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ಮನಸ್ಸು ಜೀವಾತ್ಮನನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸುತ್ತದಾದರೂ ತಾನು ಹೊಂದಿರುವ ಆಯುಷ್ಯದ ಮಿತಿಯಿಂದಾಗಿ ಜೀವಾತ್ಮನು ಶರೀರವನ್ನು ಬಿಟ್ಟು ಹೋಗುವಾಗ ಅದರ ನಶ್ವರತೆ ಹಾಗೂ ನಿರುಪಯುಕ್ತತೆಗಳು ಸ್ಪಷ್ಟವಾಗುತ್ತವೆ. ಇಂಥ ಉನ್ಮತ್ತ ಮನಸ್ಸನ್ನು

ಸಂಕೇತಿಸುವ ಮಾಯಾದೇವಿ ಹಾಗೂ ಆತ್ಮಸ್ವರೂಪವನ್ನು ಸಂಕೇತಿಸುವ ಅಲ್ಲಮಪ್ರಭು ಈ ಎರಡು ತತ್ತ್ವಗಳ ನಡುವಿನ ಸಂಘರ್ಷವನ್ನು ಮಾಯಾಸಂಪುಟದ ರೂಪದಲ್ಲಿ ಚಿತಿಸಿರುವ ಚಾಮರಸ ಪ್ರತಿ ಹೆಜ್ಜೆಗೂ ಸಾಂಕೇತಿಕವಾಗಿಯೇ ಮುಂದುವರೆಯುತ್ತಾನೆ. ಅಲ್ಲಮಪ್ರಭು ಬಾರಿಸುವ ಮದ್ದಳೆಯ ತಾಳಕ್ಕೆ ಕಾರಮುಗಿಲಿನ ಗರ್ಜನೆಯನ್ನು ಕೇಳಿದ ನವಿಲಿನಂತೆ ಮಾಯಾದೇವಿ ಕುಣಿಯುವುದನ್ನು ನೋಡಿದ್ದೇವೆ. ನಮ್ಮೊಳಗಿನ ಜೀವದ್ರವದ ಚೈತನ್ಯದ ಸ್ಫುರಣಗಳು ಪ್ರಕಟಗೊಳ್ಳತೊಡಗಿದಂತೆ ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ವರ್ತಿಸುವ ಮನಸ್ಸು ಅವುಗಳಿಗೆ ಪ್ರತಿಕ್ರಿಯಿಸುವುದು ಹೀಗೆಯೇ. ಸಮಗ್ರ ಮಾಯಾ ಸಂಪುಟವನ್ನು ಒಂದು ಪ್ರತಿಮೆಯ ರೂಪದಲ್ಲಿ ನೋಡಿದರೆ ಅದು ಹೀಗೆ ರೂಪುಗೊಳ್ಳುತ್ತದೆ.

ನಮ್ಮ ದೇಹ ಒಂದು ದೇವಾಲಯವಿದ್ದಂತೆ.[೫೯] ಈ ದೇವಾಲಯಕ್ಕೆ ಆವರಣದ ರೂಪದಲ್ಲಿ ಚರ್ಮವಿದೆ. ಚರ್ಮಾವರಣವನ್ನು ವಾದ್ಯದ ರೂಪದಲ್ಲಿ ಜಗನ್ನಿಯಾಮಕನಾದ ಪ್ರಭು ಬಾರಿಸುತ್ತಿರುತ್ತಾನೆ. ವಾದ್ಯದಿಂದ ಹೊರಡುವ ತಾಳವು ಸರಿಯಾಗಿದ್ದರೆ ದೇವಾಲಯದಲ್ಲಿ ನಡೆಯುವ ಚಟುವಟಿಕೆಗಳ ರೂಪದ ಪೂಜೆಗೆ ಅರ್ಥ ಮೂಡುತ್ತದೆ. ಅದಕ್ಕೆ ಬದಲಾಗಿ ಮನವೆಂಬ ಪೂಜಾರಿ ಪ್ರಭುವನ್ನು ತನ್ನಿಚ್ಛೆಗೆ ತಕ್ಕಂತೆ ಬಳಸಿಕೊಳ್ಳತೊಡಗಿದಾಗ ಚಟುವಟಿಕೆಗಳು ಅರ್ಥ ಕಳೆದುಕೊಳ್ಳ ತೊಡಗುತ್ತವೆ. ಗುಡಿಯನ್ನು ತನ್ನಿಚ್ಛೆ ಬಂದಂತೆ ಬಳಸುವ ಪೂಜಾರಿಯಂತೆ ಮನಸ್ಸು ಶರೀರವೆಂಬ ಚರ್ಮವಾದ್ಯವನ್ನು ಹೇಗೆ ಹೇಗೋ ಅಪ್ಪಳಿಸತೊಡಗುತ್ತದೆ. ಆದರಿಂದ ಹೊರಡುವ ಧ್ವನಿಗಳ ಸಮ್ಮಿಶ್ರಣದಲ್ಲಿ ಕುಣಿತವು ಒಂದು ನಿರ್ಧಿಷ್ಟ ಅವಧಿಯ ವರೆಗೆ ಮುಂದುವರೆಯುತ್ತದೆ. ಚರ್ಮವಾದ್ಯವು ಹರಿದು ಹೋಗುವ ವರೆಗೆ ಮಾತ್ರ ಕುಣಿತಕ್ಕೆ ಅವಕಾಶ! ಒಮ್ಮೆ ಅದು ಹರಿದು ಹೋಯಿತೆಂದರೆ ಅದನ್ನು ಬದಲಾಯಿಸಲೇಬೇಕಾಗುತ್ತದೆ. ಆಗ ಮಾತ್ರ ಪುನಃ ಧ್ವನಿಯನ್ನು ಕೇಳುವುದು ಸಾಧ್ಯ. ದೇಹವೆಂಬ ದೇವಾಲಯದ ಒಳಗಿರುವ ಲಿಂಗರೂಪದ ಚೈತನ್ಯವು ವಾದ್ಯರೂಪದ ಶರೀರಗಳನ್ನು ಬದಲಾಯಿಸುತ್ತಲೇ ಹೋಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಹಲಿಂಗರಂಗನ 'ಅನುಭವಾಮೃತ' ದಲ್ಲಿ ಒಂದು ದೃಷ್ಟಾಂತ ಹೀಗಿದೆ.

ಬುದ್ಧಿ ಸುಖದುಃಖೇಚ್ಛೆ ಮೊದಲಾ
ಗಿರ್ದ ನವವಿಧ ಗುಣಗಳಲಿ ಮೆರೆ
ದಿರ್ದ ಗುಣಿಯೆಂದೆನಿಸಿ ಕರ್ತೃತ್ವಾಭಿಮಾನದಲಿ ।
ಬದ್ಧನಾಗಿಹ ಪರಕೆ ತೊಳಲುತ

ಮದ್ದಲೆಯೊಳೆಡೆಯಾಡುವಿಲಿಯಂ

ತಿದ್ದವನು ತಿಳಿ ವ್ಯಾವಹಾರಿಕನಾತ್ಮನಲ್ಲೆಂದ।। ೬೦

ಮದ್ದಳೆ ಒಂದು ಚರ್ಮವಾದ್ಯ. ಅದು ನಮ್ಮ ಶರೀರದ ಸಂಕೇತ. ಅರಿಷಡ್ವರ್ಗದ ಮೇಲೆ, ಸಪ್ತವ್ಯಸನಗಳ ಮೇಲೆ, ಅಷ್ಟಮದಗಳ ಮೇಲೆ ಅಧಿಕಾರ ಚಲಾಯಿಸುವವನು ಮಾತ್ರ ಈ ಮದ್ದಳೆಯನ್ನು ಬಾರಿಸುವುದು ಸಾಧ್ಯವಿದೆ. ಆದರೆ ಮನಸ್ಸಿನ ಕೈವಶವಾಗಿರುವ ಜೀವಿ ಹೇಗೆ ಹೇಗೋ ಇದರಿಂದ ಸಪ್ಪಳ ಹೊರಡಿಸುತ್ತಿರುತ್ತಾನೆ. ದೇಹವೆಂಬ ಮದ್ದಳೆಯಲ್ಲಿ ಜೀವಿಯೆಂಬ ಇಲಿ ಹೇಗೋ ಪ್ರವೇಶ ಮಾಡಿದೆ. ಒಳಗಿರುವ ಕಾರ್ಗತ್ತಲೆಯಿಂದಾಗಿ ಅದರ ಚಟುವಟಿಕೆಗಳು ಯಾವ ಗೊತ್ತು ಗುರಿ ಇಲ್ಲದೆ ಸಾಗುತ್ತ ಆವರಣದ ಭಾಗಕ್ಕೆ ಬಂದು ಅಪ್ಪಳಿಸುವ ರೂಪದಲ್ಲಿ ಮುಂದುವರೆದಿವೆ. ಈ ಯಾದೃಚ್ಛಿಕ ಪ್ರಯತ್ನಗಳಿಂದಾಗಿ ಯಾವ ತಾಳಮೇಳವೂ ಇಲ್ಲದ ಎಂಥದೋ ಸಪ್ಪಳ ಉಂಟಾಗುತ್ತದೆ. ಒಂದೊಮ್ಮೆ ಚರ್ಮಾವರಣವು ಹರಿದು ಹೋಯಿತೆಂದರೆ ಇಲಿ ಬೇರೆ ಕಡೆಗೆ ಹೊರಟು ಹೋಗುತ್ತದೆ.

ತನ್ನ ಪ್ರಾರಬ್ಧ ಕರ್ಮಗಳಿಂದಾಗಿ ಜೀವಿ ಶರೀರವೆಂಬ ಮದ್ದಳೆಯನ್ನು ಪ್ರವೇಶಿಸುತ್ತಾನೆ. ಏಕೆ ಜನ್ಮವೆತ್ತಿ ಬರುತ್ತೇವೆ ಎಂಬುದನ್ನಾಗಲಿ, ಮರಣವೇಕೆ ಬರುತ್ತದೆ ಎಂಬುದನ್ನಾಗಲಿ ಅರಿಯದ ನಾವು ಆಯಾ ಸಮಯಕ್ಕೆ ತಕ್ಕಂತೆ ಜೀವನ ವ್ಯಾಪಾರದಲ್ಲಿ ತೊಡಗಿಕೊಳ್ಳುತ್ತೇವೆ. ಬದುಕಿನ ಸಂಧ್ಯಾಕಾಲದಲ್ಲಿ ಸೂರ್ಯ ಕ್ಷಿತಿಜವನ್ನು ತಲುಪುತ್ತಿರುವುದು ಗೊತ್ತಾಗುತ್ತದೆಯೇ ಹೊರತು ಮುಳುಗುವುದಾಗಲಿ, ಮುಳುಗಿದ್ದಾಗಲಿ ಗೊತ್ತಾಗುವುದಿಲ್ಲ. ಅರ್ಥವಿಲ್ಲದ ಬದುಕಿನ ಇಂಥ ಚಟುವಟಿಕೆಗಳು ಮದ್ದಳೆಯೊಳಗಿನ ಇಲಿಯು ಉಂಟು ಮಾಡುವ ಸಪ್ಪಳಗಳಂತಿರುತ್ತವೆ. ಹೀಗೆ ಅಪ್ಪಳಿಸುವಾಗ ಯಾವುದಾದರೊಂದು ಪ್ರಸಂಗದಲ್ಲಿ ಚರ್ಮಾವರಣವು ಹರಿದು ಹೋಗುವುದು ಬಹಳಷ್ಟು ಜನರ ಬದುಕಿನ ವ್ಯಂಗ್ಯ ಸಾಕ್ಷಾತ್ಕಾರ!

ಶರೀರವೆಂಬ ಗುಡಿಯಲ್ಲಿ ಆತ್ಮಚೈತನ್ಯವೆಂಬ ದೇವನನ್ನು ತನ್ನ ಇಂದ್ರಿಯಸುಖಕ್ಕಾಗಿ ಹಂಬಲಿಸುತ್ತ ಪ್ರಾರ್ಥಿಸುವ ಜೀವಿ ಮಾಯಾದೇವಿಯಾಗಿದ್ದರೆ ಜಗನ್ನಿಯಾಮಕನಾದ ಪ್ರಭು ಮದ್ದಳೆ ಬಾರಿಸುವ ಅಲ್ಲಮನಾಗಿದ್ದಾನೆ. ಈ ಸಾಂಕೇತಿಕ ಅರ್ಥದ ಹಿನ್ನಲೆಯಲ್ಲಿ ಮಾಯಾಸಂಪುಟವನ್ನು ಪರೀಶೀಲಿಸುವುದು ಉಚಿತವಾಗಿರುತ್ತದೆ.

[illegible]

[illegible]

[illegible]

[illegible]

[illegible]

[illegible]

ಮೋಹ-ಮಮಕಾರಗಳ ನಡುವೆ ನಾಮ-ರೂಪು-ಕ್ರಿಯೆಗಳಿಗೆ ಅಸ್ತಿತ್ವವುಂಟಾಗುತ್ತದೆನ್ನುವ ಅರ್ಥದಲ್ಲಿ ಮಾಯಾದೇವಿ ಮಮಕಾರ ಹಾಗೂ ಮೋಹಿನಿ ದೇವಿಯರ ಮಗಳಾಗಿ ಜನಿಸುತ್ತಾಳೆ. ಅವರು ಗೌರೀವ್ರತವನ್ನು ಆಚರಿಸುತ್ತ ನಾನಾ ಶಕ್ತಿದೇವತೆಗಳನ್ನು ಪೂಜಿಸಿ ಪಡೆದ ಮಗಳು ಶುದ್ಧ ಸತ್ವಗುಣದ ಶಿವಾಂಶದಿಂದ ಮೂಡಿ ಬಾರದೆ ಪಾರ್ವತಿಯ ತಮೋಗುಣದಿಂದ ಮೂಡಿ ಬರುತ್ತಾಳೆ. ಹೀಗೆ ಮೂಡಿ ಬಂದವಳು ಚಾಮರಸನ ದೃಷ್ಟಿಯಲ್ಲಿ ನವರಸಭರಿತ ಪಾತ್ರ.[೬೧] ನಾಮ-ರೂಪು-ಕ್ರಿಯೆಗಳಿಂದಾಗಿ ಜೀವಾತ್ಮ ಕನಿಷ್ಠವೆಂದರೂ ಅನ್ನ, ವಸತಿ, ಬಟ್ಟೆಗಳಿಗಾಗಿ ಪ್ರಯತ್ನಿಸಬೇಕಾಗುತ್ತದೆ. ಅಂತೆಯೇ ಇವುಗಳ ರೂಪದ ಮಾಯೆಯಿಂದ ಆವರಿಸಲ್ಪಟ್ಟ ಶಿವಜ್ಞಾನಿಗಳ ಚಿತ್ತ ಪಲ್ಲಟಿಸಿ, ಆಶಾಪಾಶಗಳು ಹೆಚ್ಚಿ, ಕಾಮಗ್ರಹದ ವಿಕಾರ ಉಂಟಾಗುತ್ತದೆ.[೬೨] ನಾಮ-ರೂಪ-ಕ್ರಿಯೆಗಳಿಂದ್ಯುಕ್ತವಾಗಿ ಪಡೆದ ಪಿಂಡವು ಮಾಯಾರೂಪ ಎನಿಸುವುದರಿಂದ ತಂದೆತಾಯಿಗಳು ಮಗಳನ್ನು 'ಮಾಯೆ' ಎಂದು ಹೆಸರಿಸುತ್ತಾರೆ.[೬೩] ಮಮಕಾರನ ಗುರು ಅಹಂಕಾರಾಚಾರ್ಯ ಮಾಯೆಯ ರೂಪರೇಖಾಜಾಲವನ್ನು ಪರಿಶೀಲಿಸಿ, ಕಾರಣಕನ್ಯೆಯೆಂದು ಹೇಳಿ ಅವಳು ಸದಾಶಿವನಿಗೆ ಮಾತ್ರ ಸಲ್ಲುವವಳೆಂದು ತಿಳಿಸುತ್ತಾನೆ.[೬೪] ಮಾನವ ಜನ್ಮವೇ ಮುಕ್ತಿಗೆ ಸೋಪಾನವಾಗುವುದರಿಂದ ಶರೀರವನ್ನು ಶಿವಧ್ಯಾನಕ್ಕೆ ಮಾತ್ರ ಮೀಸಲಿರಿಸಬೇಕೆಂಬುದು ಇಲ್ಲಿಯ ತಾತ್ಪರ್ಯ. ಇದಕ್ಕನುಗುಣವಾಗಿ ಮಧುಕೇಶ್ವರನನ್ನು ಪೂಜಿಸುವ ಮಾಯೆಯ ಉದ್ದೇಶ ಕೇವಲ ಇನಿಯನನ್ನು ಬಯಸುವುದು.[೬೫] ಪಂಚೇಂದ್ರಿಯಗಳ ಸುಖಕ್ಕಾಗಿ ಹಾತೊರೆಯುವ ಜೀವಿ ಅದಕ್ಕಾಗಿ ದೇವರ ಕೃಪೆ ಬಯಸಿದಂತೆ ಎಂಬುದು ಇಲ್ಲಿಯ ಅರ್ಥ. ಜೀವಿ ಸಾಂಸಾರಿಕ ಸುಖಕ್ಕಾಗಿ ಆಡುವ ಆಟ, ಮಾಡುವ ಮಾಟ, ಕೂಡುವ ಬಗೆ ಇವುಗಳಿಗೆ ಲೆಕ್ಕವಿಲ್ಲ. ಇವೆಲ್ಲವುಗಳನ್ನೂ ಎರಡು ಬಗೆಯಾಗಿ ಪ್ರತಿಬಿಂಬಿಸಬಯಸುವ ಚಾಮರಸ ಮಾಯೆಯನ್ನು ಮಧುಕೇಶ್ವರನ ಲಾಸ್ಯಕ್ಕೆ ತೊಡಗಿಸುತ್ತಾನೆ ಹಾಗೂ ಅವಳು ಶರೀರ ಸುಖಕ್ಕಾಗಿ ಹಾತೊರೆಯುವಂತೆ ಮಾಡುತ್ತಾನೆ. ಕಿಶೋರಾವಸ್ಥೆ ಅತಿ ಒತ್ತಡದ ಹಾಗೂ ಪ್ರಯಾಸದ ಅವಧಿ ಎಂಬುದನ್ನು ನೋಡಿದ್ದೇವೆ. ಮಾಯೆಯ ಶೈಶವಾವಸ್ಥೆ ಹಾಗೂ ಬಾಲ್ಯಾವಸ್ಥೆಗಳನ್ನು ಕೇವಲ ಏಳು ಪದ್ಯಗಳಲ್ಲಿ[೬೬] ಮುಗಿಸಿರುವ ಚಾಮರಸ ಕಿಶೋರಾವಸ್ಥೆಯ ನಿರೂಪಣೆಗಾಗಿ ಮೂರು ಗತಿಗಳನ್ನು ಬಳಸಿಕೊಂಡಿದ್ದಾನೆ.

'ಮಾಯೆ ಮಧುಕನಾಥನನ್ನು ಪೂಜಿಸಿದ ಗತಿ' ಯಲ್ಲಿ ಜೀವಿ ಪಂಚೇಂದ್ರಿಯಗಳ ಸುಖಕ್ಕಾಗಿ ಹಾತೊರೆಯುತ್ತ ಹಾರಾಡುವ ಪ್ರಸಂಗಗಳನ್ನು ಮಾಯಾದೇವಿಗೆ ಆರೋಪಿಸುತ್ತ ಕವಿ ಚಿತ್ರಿಸುತ್ತಾನೆ. ಈ

ಗತಿಯ ಮೂರನೆಯ ಪದ್ಯದಿಂದ ಮೂವತ್ತೈದನೆಯ ಪದ್ಯದವರೆಗೆ ಕವಿ ಕೇವಲ ಮಾಯೆ ಮತ್ತು ಅವಳ ಸಖಿಯರ ಶೃಂಗಾರವರ್ಣನೆಯನ್ನು ಮಾಡುತ್ತಾನೆ. ಮಾಯೆ ನಡೆಸುವ ಪೂಜೆ ಆಡಂಬರದಿಂದ ಕೂಡಿದ್ದು ನಗರದವರೆಲ್ಲ ಸಡಗರದಿಂದ ಅದನ್ನು ವೀಕ್ಷಿಸುತ್ತಾರೆ. ಗುಪ್ತವಾಗಿ ನಡೆಸುವ ಶಿವಧ್ಯಾನರೂಪದ ಪೂಜೆಯಲ್ಲಿ ಸಾಧಕ ಅಂತರ್ಯದಲ್ಲಿ ದಶನಾದಗಳನ್ನು ಕೇಳುತ್ತಿದ್ದರೆ ಮಾಯೆ ಸಖಿಯರೊಡನೆ ಕೂಡಿ ಬಾಹ್ಯದಲ್ಲಿ ದಶವಿಧ ನಾದಗಳನ್ನು ಉಂಟು ಮಾಡುತ್ತಾಳೆ. ಸಾಧಕನವು ಅನಾಹತ ನಾದಗಳಾಗಿದ್ದರೆ ಮಾಯೆಯವು ಆಹತನಾದಗಳು.

ಹಿಡಿದು ಬಾಜಿಸೆ ಘಂಟೆ ಶಂಖದ
ಗಡಣ ಜಾಗಟೆ ಜಗಳೆ ಮದ್ದಳೆ
ಜಡಿವ ಕಹಳೆ ಮೃದಂಗವಾವುಜ ಭೇರಿ ಕಂಸಾಳ ।
ನುಡಿವ ಗಂಭೀರ ಧ್ವನಿಯಲತಿ
ಸಡಗರಿಸಿದುದು ನಗರ ಮಾಯಾ
ಮಡದಿ ಮಾಡುವ ದೇವಪೂಜೆಯ ರಭಸರಚನೆಯಲಿ ॥ [೬೭]

ಮಾಯೆ ನೈವೇದ್ಯಕ್ಕಾಗಿ ಸಲ್ಲಿಸುವ ಆಹಾರ ಪದಾರ್ಥಗಳಾದರೂ ಎಂಥವು? ಅವೆಲ್ಲ ಕಚ್ಚಾ ಆಹಾರಗಳು ಇಲ್ಲವೆ ಹುಳಿಪದಾರ್ಥಗಳು. ಅವುಗಳೆಂದರೆ ಬಾಳಕ ಹಪ್ಪಳಗಳು, ಹಲವಾರು ಬಗೆಯ ಪಲ್ಯಗಳು, ಕಾಯಿಹುಳಿಗಳು, ಪಾನೀಯಗಳು, ಹಣ್ಣು ಉಪ್ಪಿನಕಾಯಿಗಳು, ಮೊಸರು–ಮಜ್ಜಿಗೆಗಳು, ಚಕ್ಕುಲಿ, ಪಚಡಿ, ಸಾರು, ರಸಾಯನ, ಪಸುಂಬರಿ, ಕೆನೆಗಟ್ಟಿದ ಹಾಲು ಹಾಗೂ ಇವುಗಳೊಂದಿಗೆ ಸಕ್ಕರೆ.[೬೮] ಇವೆಲ್ಲ ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ಇಂದ್ರಿಯ ಸುಖಕ್ಕಾಗಿ ಹಾತೊರೆಯುವ ಮನಸ್ಸಿನ ವಿವಿಧ ಮುಖಗಳ ಸಂಕೇತಗಳು ಇದಾದ ನಂತರ ವೀಳೆಯದ ರೂಪದಲ್ಲಿ ಹೋಳಿದ ಅಡಿಕೆಗಳನ್ನು, ಕರ್ಪೂರದ ಬೆಳ್ಳೆಲೆಗಳನ್ನು ಹಾಗೂ ಶುಭ್ರವಾದ ಸುಣ್ಣವನ್ನು ಅವಳು ಮಧುಕೇಶ್ವರನಿಗೆ ಅರ್ಪಿಸುತ್ತಾಳೆ.[೬೯] ಇಂದ್ರಿಯ ಸುಖಕ್ಕಾಗಿ ಹಾತೊರೆಯುವ ಭಾವನೆಯ ಪರಾಕಾಷ್ಠತೆಯನ್ನು ಸೂಚಿಸುವುದಕ್ಕಾಗಿ ಮಾಯೆ ಧೂಪದ ಹೊಗೆಯಲ್ಲಿ ಕೆಂಪಾದ ಕಣ್ಣುಗಳುಳ್ಳವಳಾಗಿ, ದೀಪಗಳ ಬೇಗೆಯಲ್ಲಿ ಬೆಂದು ಬೆವರಿಡುವ ದೇಹದವಳಾಗಿ ಮಧುಕೇಶ್ವರನನ್ನು ಸಂಭೋಗಿಸಿಯೇ ಹೊರಗೆ ಬಂದಳೆನ್ನುವಂತೆ ತೋರಿದಳೆಂದು ತಿಳಿಸುತ್ತಾನೆ ಚಾಮರಸ.

ಮಿಸುಪ ಧೂಪದ ಧೂಮದಲಿ ಕೆಂ
ಪೆಸೆವ ಲೋಚನವಾನತೆಯ ಭರ
ವಸಕೆ ಸೂಸಿದ ಸುಳಿಗುರುಳು ದೀಪಂಗಳುಬ್ಬೆಯಲಿ ।
ಕುಸರಿ ಬೆಮರಿಡುವಂಗ ಮಿಗೆ ರಂ
ಜಿಸಲು ಮಧುಕೇಶ್ವರನ ಸಂಭೋ
ಗಿಸಿಯೇ ಬಂದಳೊ ಪೇಳೆನಲ್ಮೆಱೆದಿರ್ದಳಾ ಮಾಯೆ ॥ [೭೦]

ಈಗ ಅವಳು ಸಖಿಯರ ಸಹಕಾರದೊಂದಿಗೆ ಲಾಸ್ಯಕ್ಕೆ ಸಿದ್ಧಳಾಗುತ್ತಾಳೆ. ಇಲ್ಲಿ ಕವಿ ನಾಟ್ಯಶಾಸ್ತ್ರವನ್ನು ಸಮಗ್ರವಾಗಿ ಚಿತ್ರಿಸುವಲ್ಲಿ ಸಮರ್ಥನಾಗಿರುವುದನ್ನು ಲೋಕದರ್ಶನದಲ್ಲಿ ಗಮನಿಸಿದ್ದೇವೆ. ಈ ಎಲ್ಲವನ್ನೂ ಜನ ಚಿತ್ರದ ಬೊಂಬೆಗಳಂತೆ ಗವಾಕ್ಷಗಳ ಮುಖಾಂತರ ನೋಡುತ್ತಿದ್ದರೂ ಮಾಯಾದೇವಿಗೆ ಅದಾವುದರ ಪರಿವೆಯೇ ಇರುವುದಿಲ್ಲ. ಕಿಶೋರ–ಕಿಶೋರಿಯರು ಶರೀರಸುಖಕ್ಕಾಗಿ ಹಾತೊರೆಯುವಾಗಿನ ಅಂಶಗಳನ್ನು ವಿವಿಧ ಪ್ರತಿಮೆಗಳ ರೂಪದಲ್ಲಿ ಕೊಡುವ ಉಪಕ್ರಮ ಇದಾಗಿದೆಯೆಂಬುದನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸಬಹುದು.

'ಪ್ರಭು ಮದ್ದಳೆಯ ಬಾರಿಸಿದ ಗತಿ'ಯಲ್ಲಿ ಅಲ್ಲಮ ಹದಿನಾರು–ಹದಿನೆಂಟು ವರ್ಷದವನಂತೆ ವೇಷವನ್ನು ಧರಿಸಿ ನಟ್ಟುವ ಜಾತಿರೀತಿಯನ್ನು ನಟಿಸುತ್ತಿದ್ದನೆಂದು ಚಾಮರಸ ತಿಳಿಸುತ್ತಾನೆ.[೭೧] ಕಿಶೋರ–ಕಿಶೋರಿಯರು ತಮ್ಮ ವಯಸ್ಸಿಗೆ ತಕ್ಕ ಸಂಗಾತಿಗಳನ್ನು ಈ ರೂಪದಲ್ಲಿ ಯೋಚಿಸುತ್ತಾರೆನ್ನುವುದು ಇಲ್ಲಿಯ ತಾತ್ಪರ್ಯ. ಮಾಯೆಗೆ ಆತುರತೆಯೇನೋ ಇದೆ. ಜೊತೆಗೆ ಸಾಮಾಜಿಕ ಕಟ್ಟಳೆಗಳ ಭೀತಿಯೂ ಇದೆ. ಸಂಭೋಗಕ್ರಿಯೆಗಾಗಿ ಹಾತೊರೆಯುವ ಕಿಶೋರ–ಕಿಶೋರಿಯರ ಮನಸ್ಸಿನ ಭಾವನೆಗಳನ್ನು ಅವಳು ವ್ಯಕ್ತಪಡಿಸುವುದನ್ನು ಚಾಮರಸ ಹೀಗೆ ತಿಳಿಸುತ್ತಾನೆ.

ಮನದಲಾತುರವಿಹುದು ಬುದ್ಧಿಯ
ಮೊನೆಗೆ ನಾಚಿಗೆ ಬಹುದು ನಗೆಗ
ಣ್ಣಿನಲಿ ಕಳವಳವಿಹುದು ಕಾಯದಲಿಹುದು ನಸು ಭೀತಿ ।
ವಿನಯವಿಹುದೆಱಕದಲಿ ಜಿಹ್ವೆಯ

[illegible]

ಕೊನೆಯಲಿಹುದನ್ಯಪ್ರಸಂಗತೆ

ಯಿನಿತು ಮಾಯೆಯಲಿರ್ದುದಂದಲ್ಲಮನ ಬೇಟದಲಿ[೭೧] ॥

ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ನಿತ್ಯಸುಖವನ್ನು ಪಡೆಯಬಯಸುವವರ ಮಾನಸಿಕ ಹೊಯ್ದಾಟವನ್ನು ಚಿತ್ರಿಸಲು ಕವಿ ಮಾಯಾದೇವಿಯ ಕನಸಿನ ಪ್ರಸಂಗವನ್ನು ಆಯ್ದುಕೊಂಡಿದ್ದಾನೆ. ಮಾಯೆ ಅಲ್ಲಮನನ್ನು ಕೂಡುವ ಕನಸು ಕಾಣುತ್ತಾಳೆ. ಅಲ್ಲಮ ಅವಳಿಗೆ ಕಾಣಿಸಿದರೂ ಸುರತಸುಖಭಾವನೆಗೆ ಸಿಗುವುದಿಲ್ಲ. ಆದರೆ 'ಮನದಲ್ಲಿ ಮೋಹವ ಮಾಡುತ್ತ ಇಡೀ ರಾತ್ರಿ ಕಾದಿರುವನು' ಎಂದು ಅವಳು ಭಾವಿಸುವ ಹಾಗೆ ಮಾಡುತ್ತಾನೆ. [೭೨]

ಶರೀರ ಶಾಶ್ವತವಲ್ಲ ಪ್ರಾಕೃತಿಕ ಗುಣದಿಂದಾಗಿ ಪ್ರತಿ ಕ್ಷಣವೂ ಅದರಲ್ಲಿ ಬದಲಾವಣೆ ಆಗುತ್ತಲೇ ಇರುತ್ತದೆ. ಶೈಶವ, ಬಾಲ್ಯ, ಯೌವನ, ಮುಪ್ಪು ಹೀಗೆ ನಮಗೆ ತಿಳಿದಂತೆ ಅದರಲ್ಲಿ ತೋರುವ ಬದಲಾವಣೆಗಳನ್ನು ವಿಂಗಡಿಸುತ್ತೇವೆ. ಈ ವಿವಿಧ ನಿಲ್ದಾಣಗಳ ಯಾವ ಹಂತದಲ್ಲಾದರೂ ಮೃತ್ಯು ಮುಖ ತೋರಬಹುದು. ದಿನಗಳು ಸರಿದಂತೆ ಜೀವನಿಗೆ ಮರಣದ ವಾಸನೆ ಬಡಿಯತೊಡಗುತ್ತದೆ. ಮನಸ್ಸಿನ ಕೈಗೊಂಬೆಯಾಗಿ ವರ್ತಿಸುತ್ತ ಸಾಗುವ ಜೀವನಲ್ಲಿ ಬದುಕಿನ ಸ್ವವಿಮರ್ಶೆ ಪ್ರಾರಂಭವಾಗುತ್ತದೆ. ಹೀಗೆ ಮೂಡತೊಡಗುವ ಸಾರಾಸಾರ ವಿಚಾರದ ಸಂಕೇತವೇ ವಿಮಳೆ. ಈ ವಿಚಾರಶಕ್ತಿ ಸ್ನೇಹಾಕಾಂಕ್ಷಿಯಾಗಿ ಮೂಡಿ ಬರುತ್ತದೆ. ಬುದ್ಧಿಗಮ್ಯವಾದ ಇಂಥ ವಿಚಾರದಿಂದ ಜೀವನದಲ್ಲಿ ಪರಿವರ್ತನೆ ತೋರಬಹುದು ಇಲ್ಲವೆ ಎಂದಿನಂತೆ ಉಡಾಫೆಯ ಧಾಟಿ ಮುಂದುವರೆಯಬಹುದು. ಮಾಯಾದೇವಿಯಲ್ಲಿ ನಾವು ಈ ಎರಡರ ಮಿಶ್ರಣವನ್ನು ಕಾಣುತ್ತೇವೆ. ಮನಸ್ಸು ಬುದ್ಧಿಯನ್ನು ಸುಲಭವಾಗಿ ಅಪ್ಪಿಕೊಳ್ಳುವುದಿಲ್ಲವಾದರೂ ಸಾರಾಸಗಟಾಗಿ ತಿರಸ್ಕರಿಸುವುದೂ ಇಲ್ಲ.

ಇಂದುಮುಖಿ ನೀನೆತ್ತಣಿಂದಲಿ

ಬಂದೆಯೇತಕೆ ನಿನ್ನ ಹೆಸರೇ

ನೆಂದು ಮಾಯಾದೇವಿ ಕೇಳಿದಳೊಲಿದು ವಿಮಳೆಯನು ॥ [೭೩]

ಜನನ-ಮರಣಗಳ ರಹಸ್ಯವನ್ನು ಭೇದಿಸುವುದು ಜೀವನಿಗೆ ಸಾಧ್ಯವಿಲ್ಲ. ಭೌತಿಕ ಶರೀರದ ರಹಸ್ಯ ಗೊತ್ತಾದರೆ ಲಿಂಗಾಂಗಸಾಮರಸ್ಯದ ಗುರಿ ಇಟ್ಟುಕೊಳ್ಳಬಹುದು. ಆದರೆ ಕಾಲನ ಒತ್ತಡಕ್ಕೆ ಸಿಕ್ಕು ಶರೀರ ಶಿಥಿಲವಾಗತೊಡಗಿದರೆ ಏನನ್ನೂ ಮಾಡಲಾಗುವುದಿಲ್ಲ. ಆಗಲೂ ಪಂಚೇಂದ್ರಿಯಗಳಿಗೇ ಶರಣು

[illegible]

[illegible]

[illegible]

[illegible]

[illegible]

[illegible]

[illegible]

ಹೋಗುವುದಾದರೆ ಚಿದ್ರೂಪ ಪ್ರಭು ಮದ್ದಳೆಯನ್ನು ಒಡೆದು ಹಾಕಿ ಇನ್ನೊಂದು ಚರ್ಮವಾದ್ಯವನ್ನು ಹುಡುಕುತ್ತ ಹೊರಟು ಬಿಡುತ್ತಾನೆ. ಇದು ಪ್ರಾಕೃತಿಕ ಶರೀರಕ್ಕೆ ಮರಣದ ರೂಪದಲ್ಲಿ ತೋರುವ ಸತ್ಯ. ಕೋಮಲಾಂಗವೇನೋ ಇರಬಹುದು, ಆದರೆ ಅದು ನಿತ್ಯವಲ್ಲ. ಅದರಲ್ಲಿ ಕಾಮನ ಕೈಮಸಕವಿದ್ದರೆ ಕೋಮಲಾಂಗಿಯ ಪೂಜೆ ವ್ಯರ್ಥವಾಗುತ್ತದೆ. 'ವಿಕೃತ ವೇಷದ ಅಲ್ಲಮನೇ ಪ್ರತ್ಯಕ್ಷ ಪರಬೊಮ್ಮ' ಎಂದು ವಿಮಳೆ ತಿಳಿಸಿದರೆ 'ಅವನು ಕೇವಲ ಮದ್ದಳೆಯಲ್ಲಮನು' ಎಂದು ಉನ್ಮತ್ತ ಭಾವನೆಯ ಪ್ರತೀಕದ ಮಾಯೆ ನುಡಿಯುತ್ತಾಳೆ. ಜಗವನ್ನು ಆಡಿಸುವ ಮಾಯೆಯನ್ನು ಮಾಯಾವಿಯಾದ ಪ್ರಭು ಮದ್ದಳೆಯನ್ನು ಬಾರಿಸುತ್ತ ಆಡಿಸುತ್ತಾನೆ. ಪೂಜೆಯನ್ನು ನಿಮಿತ್ತ ಮಾಡಿಕೊಂಡು ಆಶಾಪಾಶಗಳ ಕಡೆಗೇ ಮಾಯೆಯ ಲಕ್ಷ್ಯ ಹರಿಯುತ್ತದೆ. ಮಧುಕೇಶ್ವರನಿಗೆ ಸಲ್ಲಿಸಲ್ಪಡುತ್ತಿದ್ದ ಲಾಸ್ಯವು ಹೊರಳಿ ಅಲ್ಲಮನನ್ನು ವಶಪಡಿಸಿಕೊಳ್ಳುವ ಸಂಚಾಗಿ ರೂಪುಗೊಳ್ಳುತ್ತದೆ.[೨೫] ಹೀಗೆ ಪಂಚೇಂದ್ರಿಯಗಳ ಮುಖಾಂತರವೇ ಪರಮಸುಖ ಸಾಧಿಸಬಯಸುವ ಲೌಕಿಕ ಭಾವಕ್ಕೆ ಪ್ರತಿಫಲವೇನು? ಇದನ್ನು ಚಾಮರಸ,

ಸಾಕೆನುತ ನಟ್ಟುವಿಗತನವನು
ನೂಕುತಲಿ ಮದ್ದಳೆಯ ತಾನೊಡ
ಹಾಕಿ ನಗುತಲಿ ಹೋದನಲ್ಲಮನಖಿಳ ಜಗವಱಿಯೆ ॥ [೨೬]

ಎಂದು ತಿಳಿಸುತ್ತಾನೆ.

ಈಗ ಪ್ರಾರಂಭವಾಗುತ್ತದೆ ಹದಿನಾಲ್ಕು ಲೋಕಗಳ ಪಯಣ. ಮನುಷ್ಯಮಾತ್ರರಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ತನುಗಳಿರುತ್ತವಷ್ಟೇ. ಇವುಗಳಲ್ಲಿ ಸ್ಥೂಲತನು ಪಾಂಚಭೌತಿಕವಾದುದಾಗಿದ್ದು ಸೂಕ್ಷ್ಮತನು ವಾಯುಪಂಚಕ, ಇಂದ್ರಿಯದಶಕ ಹಾಗೂ ಮನಬುದ್ಧಿಗಳೆರಡನ್ನು ಹೊಂದಿ ಹದಿನೇಳು ತತ್ತ್ವಗಳಿಂದ ಕೂಡಿ ಲಿಂಗಭೌತಿಕವಾದುದಾಗಿದೆ. ಅಹಂಕಾರ, ಚಿತ್ತ, ಹಾಗೂ ಆತ್ಮ ಈ ಮೂರರಿಂದ ಕೂಡಿದ್ದು ಕಾರಣತನುವಾಗಿರುತ್ತದೆ.[೨೨] ಈ ಎಲ್ಲವುಗಳಿಂದ ಬಿಡುಗಡೆ ಹೊಂದುವುದು ಮೋಕ್ಷವೆಂಬುದನ್ನು ನೋಡಿದ್ದೇವೆ. ಕಾರ್ಮಿಕಮಲದಿಂದಾಗಿ ಸ್ಥೂಲತನುವಿಗೆ ಜಡತ್ವ ಉಂಟಾಗುವುದರಿಂದ ಅದು ಜೀವನವನ್ನು ಕರ್ಮಭೂಮಿಗೆ ಸೀಮಿತಗೊಳಿಸುತ್ತದೆ. ಅನಿಮಿತ್ತ ಘಟನೆಯೊಂದರಿಂದ ಸ್ಥೂಲತನುವಿಗೆ ಅಂತ್ಯ ಒದಗಿದರೆ ಹದಿನೇಳು ತತ್ತ್ವಗಳ ಸೂಕ್ಷ್ಮತನು ಹಾಗೂ ಮೂರು ತತ್ತ್ವಗಳ ಕಾರಣತನು ಎರಡೂ ಜಾಗ್ರತವಾಗಿರುವ ಸಾಧ್ಯತೆ ಇರುತ್ತದೆ. ಸ್ಥೂಲತನು ಬಿದ್ದು ಹೋದ ನಂತರ ಸೂಕ್ಷ್ಮ ತನುವಿಗೆ ಆದರ ಕಾರ್ಮಿಕ ಮಲದ

[illegible]

[illegible]

[illegible]

[illegible]

[illegible]

[illegible]

[illegible]

[illegible]

ಬಂಧನವಿರುವುದಿಲ್ಲವಾದ್ದರಿಂದ ಹದಿನಾಲ್ಕು ಲೋಕಗಳಿಗೆ ಅದರ ವ್ಯಾಪ್ತಿ ವಿಸ್ತರಿಸುತ್ತಿರುವಂತೆ ತೋರುತ್ತದೆ. 'ಶ್ರೀ ದೇವೀ ಮಹಾತ್ಮೆ'ಯಲ್ಲಿ ಬರುವ ವಿವರಣೆಯಿಂದ ಈ ಮಾತುಗಳಿಗೆ ಪುಷ್ಟೀಕರಣ ಉಂಟಾಗುತ್ತದೆ.[೭೮] ಅಲ್ಲಮಪ್ರಭು ಮದ್ದಳೆಯನ್ನು ಒಡೆದು ಹಾಕಿದಾಗ ಅಂದರೆ ಮಾಯಾದೇವಿಯ ಸ್ಥೂಲತನು ಅಂತ್ಯ ಕಂಡಾಗ ಸೂಕ್ಷ್ಮತನು ಅವನನ್ನು ಅರಸುತ್ತ ಹದಿನಾಲ್ಕು ಲೋಕಗಳಲ್ಲಿ ಸಂಚರಿಸುತ್ತದೆ. ಈಗಲಾದರೂ ಮಾಯೆಗೆ ವಿವೇಕೋದಯವಾಗಬೇಕಿತ್ತು. ಹಾಗಾಗದೆ ಅವಳು ಅಲ್ಲಮನೊಂದಿಗೆ ಸೆಣಸಲು ಮುಂದಾಗುತ್ತಾಳೆ. ವಿಷಯವಾಸನೆಯು ಸ್ಥೂಲತನುವಿನೊಂದಿಗೆ ಕೊನೆಗೊಳ್ಳದೆ ಸೂಕ್ಷ್ಮತನುವಿಗೆ ವರ್ಗಾವಣೆಯಾದಾಗ ಈ ರೀತಿಯ ಹುಡುಕಾಟವು ಪ್ರಾರಂಭವಾಗುತ್ತದೆಂಬುದನ್ನು ಚಾಮರಸ ಇಲ್ಲಿ ಸೂಚಿಸುತ್ತಿರುವಂತೆ ತೋರುತ್ತದೆ. ವಿಶ್ವವಿಕಾಸ ಸಿದ್ಧಾಂತಕ್ಕನುಗುಣವಾಗಿ ಅವನು ಹದಿನಾಲ್ಕು ಲೋಕಗಳ ವಿಚಾರವನ್ನು ಮಾಡಿದ್ದಾನೆ. ಇವುಗಳನ್ನು ಊರ್ಧ್ವಲೋಕ, ಮಧ್ಯಲೋಕ ಹಾಗೂ ಅಧೋಲೋಕವೆಂದು ಪುರಾಣಗಳೆಲ್ಲ ಹೇಳುತ್ತವೆ.[೭೯]

ಇದೀಗ ನೋಡಿರುವಂತೆ ಸೂಕ್ಷ್ಮತನುವಿನಲ್ಲಿ ಘಟಕವಾಗಿರುವ ಮನಸ್ಸು ಕ್ರಿಯಾಶೀಲವಾಗಿ ಸೂಕ್ಷ್ಮತನು ಸ್ವರ್ಗ–ನರಕಗಳೆರಡರಲ್ಲೂ ಸುತ್ತುವಂತೆ ಮಾಡಬಹುದು. ಇಲ್ಲಿ ಮಾಯಾದೇವಿ ಯಾವುದೇ ರೀತಿಯ ಪಾರಲೌಕಿಕ ಸಾಧನೆಯನ್ನು ಮಾಡದಿರುವುದರಿಂದ ಸೂಕ್ಷ್ಮತನುವನ್ನು ಹೊದ್ದುಕೊಂಡು ಹಲುಬುತ್ತ, ಬಾಯಿ ಬಿಡುತ್ತ ಮರುಗುತ್ತಿದ್ದಳೆಂದು ಚಾಮರಸ ತಿಳಿಸುತ್ತಾನೆ. ಈ ಪ್ರಸಂಗದಲ್ಲಿ ಅವಳು ಕಾಳ್ಗಿಚ್ಚು, ಧೂಳು, ಚುಚ್ಚುವ ಮುಳ್ಳು, ಮಡು, ಹಳ್ಳ, ಪಾಚಿ, ಕೊಳ್ಳ, ಪೊದರು, ಬಿಸಿಲು, ಸುಂಟರಗಾಳಿ, ಕೆಂಧೂಳಿ ಮುಂತಾದವುಗಳಲ್ಲಿ ನಡೆದು ಬರುತ್ತ ಕಾಲು ಒಡೆದು ಶಕ್ತಿಗುಂದಿ ಬೀಳುತ್ತೇಳುತ್ತ ಹಸಿವು, ಬಾಯಾರಿಕೆ, ಆಯಾಸಗಳಿಂದ ಬಳಲುತ್ತ ಅಲ್ಲಮನನ್ನು ಹುಡುಕುತ್ತಾಳೆ. ಅಲ್ಲಿ ಅವಳು ಹಾವು, ಹುಲಿ, ಕಾಡಾನೆ, ಕಾಡುಕೋಣಗಳನ್ನು ಎದುರಿಸುತ್ತಾಳೆ.[೮೦] ಈ ಎಲ್ಲ ಅಂಶಗಳು ನರಕದ ವರ್ಣನೆಯಲ್ಲಿ ಕಾಣಸಿಗುತ್ತವೆ. ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಹಾಗೂ ಬೌದ್ಧ–ಜೈನ ಸಾಹಿತ್ಯಗಳಲ್ಲಿ ಇವುಗಳ ಉಲ್ಲೇಖವಿರುವಂತೆ ಗ್ರೀಕ, ಆಂಗ್ಲ ಮುಂತಾದ ಸಾಹಿತ್ಯಗಳಲ್ಲಿ ಈ ಲೋಕಗಳ ಉಲ್ಲೇಖವಿದೆ.[೮೧] ತಾಪಸಕುಲಕ್ಕೆ ಧೈರ್ಯ ಹೇಳುವುದಕ್ಕಾಗಿ ಅಲ್ಲಮ ಸುಳುಹು ತೋರಿದರೆ ಅವನನ್ನು ಕಾಣುತ್ತಲೇ ಮಾಯೆ ಕುಟಿಲ, ಕುತ್ಸಿತ, ಕುಮಂತ್ರದವನೆಂದು ಅವನನ್ನು ಬಯ್ಯುತ್ತಾಳೆ.[೮೨] ಭಗವಂತನಲ್ಲಿ ಹರಕೆ ಹೊತ್ತಾಗ ವಾಸನೆ- ಯಿಂದೊಡಗೂಡಿದ ಅವರ ಬಯಕೆ ಕೈಗೂಡದಿದ್ದಾಗ ಸಂಸಾರಿಗಳು ದೈವವನ್ನು ಶಪಿಸುವುದು

ಹೀಗೆಯೇ! ಈಗ ಮಾಯೆಯ ಆಟಾಟೋಪ ಎಲ್ಲೆ ಮೀರುತ್ತದೆ. ಬ್ರಹ್ಮ, ವಿಷ್ಣು, ದೇವತೆಗಳ ಸಮೂಹ ಇವರೆಲ್ಲರನ್ನೂ ನಾಮ-ರೂಪು-ಕ್ರಿಯೆಗಳನ್ನು ಆರೋಪಿಸುತ್ತ ದಂಡಿಸಿ ತನ್ನ ಪ್ರತಾಪವನ್ನು ಮೆರೆದಿರುವುದಾಗಿ ಅವಳು ಅಲ್ಲಮನಿಗೆ ತಿಳಿಸುತ್ತಾಳೆ. ೮೩ ಹೀಗೆ ಹೇಳುತ್ತಲೇ ಅವನನ್ನೂ ಸಿಕ್ಕಿಸುವುದಾಗಿ ಜಂಭದಿಂದ ನುಡಿಯುತ್ತಾಳೆ. ಆದರೆ ನಾಮ-ರೂಪ-ಕ್ರಿಯಾ ಕಳಾಪವಿರಾಮನಾದ ತಾನು ಅವಳನ್ನೇ ಆಡಿಸುತ್ತಿರುವುದಾಗಿ ಪ್ರಭು ಅವಳಿಗೆ ತಿಳಿಸುತ್ತಾನೆ. ೮೪ ಆದರೂ ತನಗೆ ಕೃಪೆ ಮಾಡಬೇಕೆಂದು ಅವಳು ಕೇಳಿದಾಗ ಭಕ್ತಿಯಲ್ಲಿ ಉಕ್ಕಬೇಕಾದವಳು ಕಾಮದಲ್ಲಿ ಉಕ್ಕಿದರೆ ಅದು ಸಾಧ್ಯವಿಲ್ಲವೆಂದು ಪ್ರಭು ನುಡಿಯುತ್ತಾನೆ. ಇಂಥ ಪ್ರಸಂಗದಲ್ಲಿ ವಿಮಳೆ ಮಾಯೆಯ ಸಹಾಯಕ್ಕೆ ಬಂದರೂ ಫಲಕಾರಿಯಾಗುವುದಿಲ್ಲ. ಅಷ್ಟಮದಗಳಲ್ಲಿ, ಸಪ್ತವ್ಯಸನಗಳಲ್ಲಿ ಅರಿಷಡ್ವರ್ಗದಲ್ಲಿ ಮುಳುಮುಳುಗಿ ಎದ್ದವರು ಅಂತ್ಯದಲ್ಲಿ ವಿವೇಕಿಗಳಾಗಿ ಭಗವಂತನ ಕೃಪೆಗೆ ಯಾಚಿಸಿದರೂ ಅವರವರ ಕರ್ಮಗಳಿಗೆ ಪ್ರಭು ತಕ್ಕಷ್ಟು ಫಲಗಳನ್ನು ಮಾತ್ರ ಕರುಣಿಸುತ್ತಾನೆ. ಅಲ್ಲಮ ಏನು ಮಾಡಿದರೂ ಅವನನ್ನು ಹಿಡಿದಲ್ಲದೆ ಬಿಡೆನೆಂದು ಮಾಯೆ ನುಡಿದಾಗ ಕಾಮಕ್ಕೂ ಪರಮತತ್ತ್ವದ ಸೀಮೆಗೂ ಸಂಬಂಧವಿಲ್ಲವೆಂದು ತಿಳಿಸುತ್ತ ನಿರ್ವಯಲಜಾಲವನ್ನು ಬೀಸಿ ಹೋಗುತ್ತಾನೆ. ಪಂಚೇಂದ್ರಿಯಗಳೇ ಪರಮಸಾಧನವೆಂದು ಮರಣಪರ್ಯಂತ ಸಾಧಿಸುವವರಿಗೆ ಸತ್ಯ ಇದಕ್ಕಿಂತ ಬೇರೆ ರೀತಿಯಾಗಿ ತೋರುವುದು ಸಾಧ್ಯವಿಲ್ಲ!

ಕೋಟ್ಯಂತರ ಜನರ ಬದುಕು ಅಂತ್ಯವಾಗುವುದು ಈ ವರೆಗೆ ಚಾಮರಸ ನಿರೂಪಿಸಿದ ಮರೆವಿನ ಸಂಪುಟದ ರೂಪದಲ್ಲಿಯೇ. ಎಲ್ಲೋ ಒಬ್ಬರು ಎಚ್ಚತ್ತು ಅರಿವಿನ ಸಂಪುಟವನ್ನು ತೆರೆಯಲು ಸಾಧ್ಯವಾಗುತ್ತದೆ. ಅಂಥವರು ಸದ್ಗುರುವಿನಿಂದ ಷಟ್ಸ್ಥಲದೀಕ್ಷೆಯನ್ನು ಪಡೆದು ಲಿಂಗಾಂಗ ಸಾಮರಸ್ಯವನ್ನು ಸಾಧಿಸುತ್ತಾರೆ. ಇನ್ನು ಮುಂದೆ ಈ ಅರಿವಿನ ಸಂಪುಟದ ವಿವಿಧ ಮಜಲುಗಳನ್ನು ನಿರೂಪಿಸುವ ಚಾಮರಸ ನಂತರ ಬರುವ ಎಂಟನೆಯ ಗತಿಯಲ್ಲಿ ಮಾಯಾರೂಪದ ಮರೆವಿನ ಸಂಪುಟವನ್ನು ಲಯಗೊಳಿಸುವುದರ ಜೊತೆಯಲ್ಲೇ ಸಚ್ಚಿದಾನಂದರೂಪದ ಅರಿವಿನ ಸಂಪುಟಕ್ಕೆ ಬೀಜಾಂಕುರ ಮಾಡುತ್ತಾನೆ.

೧.೪ ಗುರುಮಹಾತ್ಮೆಯ ಸ್ಥಲ

ಅಲ್ಲಮನನ್ನು ಗುರು, ಲಿಂಗ, ಜಂಗಮ ಹಾಗೂ ಮಹಾಲಿಂಗ ಈ ರೂಪಗಳಲ್ಲಿ ಚಾಮರಸ ಚಿತ್ರಿಸಿರುವುದನ್ನು ನೋಡಿದ್ದೇವೆ. ಇವುಗಳಲ್ಲಿ ಲಿಂಗರೂಪವನ್ನು ಅರಿಯುವುದು ಸಾಮಾನ್ಯರ ಅಳವಿಗೆ

[illegible]

[illegible]

[illegible]

ಸಿಗುವಂಥದ್ದಲ್ಲ. ಅವರೆಲ್ಲ ಮಾಯಾಮೋಹಗಳಲ್ಲಿ ಮುಳುಗುತ್ತ ಮರೆವಿನ ಸಂಪುಟದಲ್ಲಿ ಕರಗಿ ಹೋಗುವವರಾಗಿರುತ್ತಾರೆ. ಅರಿವಿನ ಸಂಪುಟದಲ್ಲಿ ಪಾದಾರ್ಪಣೆ ಮಾಡುವವರಲ್ಲಿ ಕರಣಾದಿಗಳೂ ಅತ್ಯಂತ ಶುದ್ಧವಾಗಿರುವುದರ ಜೊತೆಗೆ ತಾವು ಕೇವಲ ಜೀವರಲ್ಲವೆಂಬ ಭಾವವಿರುತ್ತದೆ. ಇಂಥವರು ಪಿಂಡರೂಪಕ್ಕೆ ಬಂದಿರುವ ಕಾರಣದಿಂದಾಗಿ ಶಿವನ ಅಷ್ಟತನುವಿನ ರೂಪದ ಆವರಣವು ಅವರಿಗೆ ಅಂಟಿಕೊಂಡಿದ್ದರೂ ಅದು ಅತ್ಯಂತ ತೆಳುವಾಗಿರುತ್ತದೆ. ನಿಮಿತ್ತಮಾತ್ರವಾಗಿರುವ ಈ ಆವರಣವನ್ನು ಜಂಗಮರೂಪದ ದೀಕ್ಷಾಗುರುವಿನ ಕೃಪೆಯಿಂದ ಇಲ್ಲವಾಗಿಸಿಕೊಂಡು ಧ್ಯಾನದಲ್ಲಿ ಕುಂಡಲಿನಿಯನ್ನು ಊರ್ಧ್ವಮುಖಿಯಾಗಿಸುತ್ತಾರೆ. ಈ ವಿಚಾರವನ್ನು ತಿಳಿಸುವುದಕ್ಕಾಗಿ ಚಾಮರಸ ಶಿವಾಂಶಸಂಭೂತರಾದ ಗಣಾಧೀಶ್ವರರನ್ನು ಧರೆಗೆ ಇಳಿಸುತ್ತಾನೆ. ನಿಮಿತ್ತ ಮಾತ್ರದಿಂದ ಜನನಕ್ಕೆ ಬರುವ ಅವರ ವ್ಯವಹಾರಗಳು ಲೋಕಜೀವಿಗಳಂತಾಗಿರದೆ ಸದಾಕಾಲವೂ ಶಿವಮುಖಿಯಾಗಿರುತ್ತವೆ. ಆದುದರಿಂದ 'ಬಸವಾದಿ ಪ್ರಮಥರು ಧರೆಗಿಳಿದ ಗತಿ'ಯಲ್ಲಿ ಪಾರ್ವತಿಯ ಸಾತ್ವಿಕ ಕಳೆಯನ್ನು ಹಾಗೂ ವೃಷಭರಾಜನೊಂದಿಗೆ ಇತರ ಪ್ರಮಥಗಣವನ್ನು ಶಿವನು ಧರೆಗೆ ಕಳಿಸಿದನೆಂದು ಚಾಮರಸ ತಿಳಿಸುತ್ತಾನೆ.

ಪಾರ್ವತಿಯ ತಾಮಸ ಕಳೆಯ ರೂಪದಲ್ಲಿ ಬಂದು ಆ ಶಕ್ತಿ ದೇವತೆಯ ನೇಮವನ್ನು ಹಿಡಿದು ಶಿವಸ್ವರೂಪದ ಅಲ್ಲಮನನ್ನು ಸಾಧಿಸುವುದಕ್ಕಾಗದು. ಅಂಧಃಕಾರರೂಪದ ಮಾಯೆಗೆ ಪ್ರಕಾಶರೂಪದ ಅಲ್ಲಮ ಸಿಗುವುದಾದರೂ ಹೇಗೆ? ಲಜಃ ಅಂತೆಯೇ ಮಾಯೆ ಮಮಕಾರ-ಮೋಹಿನಿಯರಿಂದ ಅಗಲುತ್ತ ಬೋಂಕನೆ ರಜತ ಪರ್ವತಕ್ಕೆ ಹೋಗುತ್ತಾಳೆ. ಆಗ ಅಹಂಕಾರಾಚಾರ್ಯ ಬಂದು ಅವರಿಗೆ ಸಮಾಧಾನ ಹೇಳುತ್ತಾನೆ. ಶರೀರವೇಕೆ ಒದಗಿ ಬರುತ್ತದೆನ್ನುವುದಾಗಲೀ ಅದು ಮರಳಿ ಹೋಗುತ್ತದೇಕೆನ್ನುವುದಾಗಲೀ ಮನುಷ್ಯ ಮಾತ್ರರಿಗೆ ಗೊತ್ತಾಗುವುದಿಲ್ಲ.

ಏನು ಕಾರಣ ಬಂದಳೋ ಬಳಿ
ಕೇನು ಕಾರಣ ಹೋದಳೋ ನಾ
ವೇನಬಲ್ಲೆವು ಬಱದೆ ಚಿಂತಿಸಬೇಡ ಸಾಕೇಳು ।
ನೀನು ನಿಜಪುರಕೆನುತಲೊಡಗೊಂ
ಡಾ ನರೇಂದ್ರನ ಸತಿಸಹಿತ ದು
ಮ್ಮಾನವನು ಪರಿಹರಿಸಿ ತಂದನು ಬಳಿಕಹಂಕಾರ ॥ [೮೭]

[illegible]

[illegible]

[illegible]

ಹೀಗೆ ವಿಮಳೆಯೊಂದಿಗೆ ಮಾಯೆ ಸ್ವಸ್ಥಾನಕ್ಕೆ ಹೋದಾಗ ಶಿವನು ಗಿರಿಜೆಗೆ ಸಾತ್ವಿಕ ಕಳೆಯನ್ನು ಕಳಿಸಲು ತಿಳಿಸುತ್ತಾನಲ್ಲದೆ ಇಳೆಯಲ್ಲಿ ನಿಷ್ಕಾಮ ಭಕ್ತಿಯಿಂದ ನಡೆದರೆ ಅರಿವಿನ ರೂಪದಲ್ಲಿ ಅಲ್ಲಮ ತೋರುತ್ತಾನೆಂದು ಹೇಳುತ್ತಾನೆ.[೮೭] ಯಾರಿಗೆ ಅಡಗಿಸಿಟ್ಟ ನಿಧಿಯು ದಕ್ಕುವುದಿದೆಯೋ ಅಂಥವರನ್ನು ಕಾಲ ನಡೆಸಿಕೊಂಡು ಹೋಗುತ್ತದೆಂದು ವೃಷಭರಾಜನಿಗೆ ತಿಳಿಸುವ ಶಿವ ಸರ್ವರೂ ಸ್ವಾನುಭಾವ ಸುಖಸ್ವರೂಪವನ್ನು ಪಡೆಯುವುದಕ್ಕೆ ಅನುಕೂಲವಾಗಲು ಅವನು ಭೂಮಿಯಲ್ಲಿ ಅವತರಿಸಬೇಕೆಂದು ತಿಳಿಸುತ್ತಾನೆ.[೮೮] ಶಿವಯೋಗದ ದೀಕ್ಷೆಗೆ ಅರ್ಹರಾಗುವವರು ಎಂಥವರು ಎಂಬುದನ್ನು ಸೂಚಿಸಲು ಚಾಮರಸ ವೃಷಭರಾಜನ ಗುಣಗಳನ್ನು ವರ್ಣಿಸುತ್ತ ಕೆಳಗಿನಂತೆ ತಿಳಿಸುತ್ತಾನೆ.

ದೂಷಕರ ನುಡಿಗೇಳಿ ಮನದಲಿ
ರೋಷವನು ತಾಳದನೆ ಮದದಲಿ
ವಾಸಿಯನು ಮಾಡಿದೊಡೆ ಮಾಱುತ್ತರವನುಸುರಿದನೆ ।
ಈಸು ಶಮೆ ದಮೆ ಸಮತೆಯುಳ್ಳ ಸ
ದಾ ಶುಚಿಗಳಾರೆನುತ ವೃಷಭನ
ನಾ ಸದಾಶಿವ ಪೊಗಳುತಿರ್ದನು ಪಂಚವದನದಲಿ ॥ [೮೯]

ಹೀಗೆ ವೃಷಭರಾಜ, ಪ್ರಮಥಗಣದವರು, ರುದ್ರಕನ್ನೆಯರು ಶಿವನ ಆಜ್ಞೆಗನುಗುಣವಾಗಿ ಭೂಮಿಗೆ ಇಳಿದು ಬರುತ್ತಾರೆಂದು ತಿಳಿಸುತ್ತ ಹನ್ನೆರಡನೆಯ ಶತಮಾನದ ಶರಣ ಬಳಗ ಅವತರಿಸುವುದರ ಹಿನ್ನೆಲೆಗೆ ಪೀಠಿಕೆಯೊಂದನ್ನು ನಿರ್ಮಿಸಿ ಕಾವ್ಯವನ್ನು ಮುಂದುವರೆಸುತ್ತಾನೆ ಚಾಮರಸ.

೧.೫ ಪ್ರಸಾದ ಮಹಾತ್ಮೆಯ ಸ್ಥಲ

ಪ್ರಸಾದವೆಂದರೆ ಅನುಗ್ರಹ.[೯೦] ಲಿಂಗಾಂಗಸಾಮರಸ್ಯಕ್ಕೆ ದಾರಿ ಮಾಡಿ ಕೊಡುವ ಈ ಅನುಗ್ರಹಕ್ಕೆ ಪಾತ್ರವಾಗುವ ವ್ಯಕ್ತಿ ಭವಬಂಧನವನ್ನು ಕಳೆದುಕೊಂಡು ಶಿವಧ್ಯಾನಾಸಕ್ತನಾಗಿ ಶಿವನೇ ಆಗುತ್ತಾನೆ.

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇವ ಸಿದ್ಧ್ಯತಿ

‘ಮನಸ್ಸಿನ ನೈರ್ಮಲ್ಯದ ಚಿಹ್ನವೇ ಪ್ರಸಾದವೆಂದು ವಿದಿತವಾಗಿದೆ.’[೯೧] ಇದನ್ನು ಕರುಣಿಸುವವನು ಶಿವಸ್ವರೂಪಿ ಗುರುವಾಗಿರುತ್ತಾನೆ. ಅನುಗ್ರಹವನ್ನು ಕರುಣಿಸುವ ಗುರು ಹಾಗೂ ಪಡೆದುಕೊಳ್ಳುವ ಶಿಷ್ಯ ಇಬ್ಬರೂ ತಮ್ಮ ಸ್ಥಾನಗಳಿಗೆ ಪಾತ್ರತೆ ಹೊಂದಿರಬೇಕಾಗುತ್ತದೆ. ‘ಪ್ರಮಥರು ಕಲ್ಯಾಣಕ್ಕೆ ಬಂದ ಗತಿ’ಯಲ್ಲಿ ಚಾಮರಸ ತಿಳಿಸುವಂತೆ ಮಹಾದೇವಿಯಕ್ಕ, ಬಸವರಾಜ, ಇನ್ನುಳಿದ ಪ್ರಮಥರು ಶಿವನ ಆಜ್ಞೆಗನುಗುಣವಾಗಿ ಭೂಲೋಕದಲ್ಲಿ ಉದಯಿಸುತ್ತಾರೆ.

ಉಡುತಡಿಯೆಂಬ ಪಟ್ಟಣದಲ್ಲಿ ನಿರ್ಮಳ-ಸುಮತಿಯರೆಂಬ ದಂಪತಿಗಳ ಗರ್ಭಶುಕ್ತಿಯಲ್ಲಿ ಶ್ರೇಷ್ಠ ಮುತ್ತುದಯಿಸುತ್ತದೆ. ಪಾರ್ವತಿಯ ತಾಮಸಗುಣವೇ ರೂಪಾಗಿ ಮೂಡಿಬಂದ ಮಾಯೆ ನವರಸ ಪಾತ್ರೆಯಾಗಿದ್ದರೆ ಅವಳ ಸಾತ್ವಿಕ ಗುಣವು ರೂಪಾಗಿ ಬಂದ ಮಹಾದೇವಿಯಕ್ಕ ಅಗ್ಗಳದ ಮುತ್ತು ಚಾಮರಸನ ದೃಷ್ಟಿಯಲ್ಲಿ. ಷಟ್‌ಸ್ಥಲಮಾರ್ಗದ ದೀಕ್ಷೆಯನ್ನು ಪಡೆಯುವ ವ್ಯಕ್ತಿಗೆ ಅಕ್ಕಮಹಾದೇವಿ ಸಂಕೇತವೆಂಬುದನ್ನು ನೋಡಿದ್ದೇವೆ. ಅಕ್ಕಮಹಾದೇವಿಯಂಥವರು ಶಿವಯೋಗಾನುಸಂಧಾನದ ದೀಕ್ಷೆಗೆ ಅರ್ಹರು ಎಂಬ ವಿಚಾರವನ್ನು ಸ್ಪಷ್ಟಪಡಿಸಲು ‘ಶಿವಯೋಗ’ ಪದವನ್ನು ಚಾಮರಸ ಇಲ್ಲಿ ಬಳಸುತ್ತಾನೆ. ಇಡೀ ಕಾವ್ಯದಲ್ಲಿ ಈ ಪದವು ಬಳಕೆಯಾಗಿರುವುದು ಇಲ್ಲಿ ಮಾತ್ರ.

ಹೆಟ್ಟುಗೆಗೆ ಶಿವಯೋಗರಾಜ್ಯದ
ಪಟ್ಟಗಟ್ಟುವರಂತೆ ನೊಸಲಿನೊ
ಳಿಟ್ಟರಮಲ ವಿಭೂತಿಯನು ಭವಭಯದ ಸೋಂಕುಗಳು ।
ಮುಟ್ಟದಂತಿರೆ ರಕ್ಷೆಯೆಂದೆನೆ
ಕಟ್ಟಿದರು ಕಂಠದಲಿ ಲಿಂಗವ
ನೊಟ್ಟಜೆಯಲಾ ಸುಮತಿ ನಿರ್ಮಳರಾ ಕುಮಾರಿತಿಗೆ ॥ [೯೨]

ಅಮಲಸ್ಥಿತಿ ಹಾಗೂ ಸದಾಚಾರಸಂಪನ್ನತೆ ಇವುಗಳಿಂದ ಇದು ಸಾಧ್ಯವೆಂದು ಸೂಚಿಸುತ್ತಿರುವಂತೆ ನಿರ್ಮಲ-ಸುಮತಿಯರು ವನಿತೆಗೆ ಶಿವಯೋಗರಾಜ್ಯದ ಪಟ್ಟ ಕಟ್ಟುತ್ತ ನೊಸಲಿನಲ್ಲಿ ಅಮಲ ವಿಭೂತಿಯನ್ನು ಇಡುತ್ತಾರೆ, ಕಂಠದಲ್ಲಿ ಲಿಂಗವನ್ನು ಕಟ್ಟುತ್ತಾರೆ, ಉತ್ತಮಾಂಗದಲ್ಲಿ ಹಸ್ತವನ್ನಿಡುತ್ತಾರೆ; ಕಿವಿಯಲ್ಲಿ ಶಿವಪಂಚಾಕ್ಷರಿಯನ್ನು ಉಪದೇಶಿಸಿ ಹರಸುತ್ತಾರೆ.[೯೩] ನುಡಿಯಲ್ಲಿ ಕಲ್ಪಲತೆಯಂತಿದ್ದ ದೇವತಾ ಕಳೆಯ ಮಹಾದೇವಿಯಕ್ಕ ಭಕ್ತಿಯ ಬಳ್ಳಿಯಂತೆ ಬೆಳೆಯುತ್ತಿದ್ದಳೆಂದು ಚಾಮರಸ ತಿಳಿಸುತ್ತಾನೆ.[೯೪]

[illegible]

[illegible]

[illegible]

[illegible]

ಸೊನ್ನಲಪುರದಲ್ಲಿ ಸಿದ್ಧರಾಮ ಜನಿಸುತ್ತಾನೆ, ಇಂಗಳೇಶ್ವರದ ಬಾಗೇವಾಡಿಯಲ್ಲಿ ಮಾದರಸ ಮಾದಲಾಂಬಿಕೆಯರಿಗೆ ಸುಜ್ಞಾನದ ರೂಪದಲ್ಲಿ ಬಸವಣ್ಣ ಜನಿಸುತ್ತಾನೆ, ಇನ್ನುಳಿದ ಪ್ರಮಥಗಣದವರು, ರುದ್ರಕನ್ನಿಕೆಯರು ಅವರು ಪಡೆದ ಆಜ್ಞೆಗಳಿಗನುಗುಣವಾಗಿ ಜನಿಸುತ್ತಾರೆ. ಶಿವಯೋಗದ ದೀಕ್ಷೆಯನ್ನು ಪಡೆಯುವ ಜೀವಿಯ ಲಕ್ಷಣಗಳನ್ನು ಬಸವಣ್ಣನಿಗೆ ಆರೋಪಿಸುತ್ತ ಚಾಮರಸ ತಿಳಿಸುವುದು ಹೀಗೆ–

ಅಳನು ಮಿಡುಕನು ಮಿನುಗಿಸಲು ಕಂ
ಗಳನಿದೇನೆಂದವರು ಕಂಡು
ಮ್ಮಳಿಸಿ ಪಿಱಿಱಿತರುಗಳವು ಮಱಹಿನಲಿರಲು ಶಿವನೊಲಿದು ।
ತೊಳಗಿ ಬೆಳಗುತ ಬಂದು ಮಿಗೆ ಮನೆ
ಯೊಳಗೆ ಕುಳ್ಳಿತು ಶಿಶುವ ನಿಜಕರ
ತಳದೊಳೆತ್ತಿದನೊಲವಿನಿಂದಲಿ ಭಕ್ತವತ್ಸಲನು ॥ [೯೫]

ಇಂಥ ಶುದ್ಧ ಪಿಂಡಕ್ಕೆ ಶಿವಸ್ವರೂಪಿ ಗುರುವಿನಿಂದ ದೀಕ್ಷೆಯಾಗುವ ಬದಲು ನೇರವಾಗಿ ಶಿವನೇ ಬಂದು ಕಿವಿಯಲ್ಲಿ ಪಂಚಾಕ್ಷರಿಯನ್ನು ಉಪದೇಶಿಸುತ್ತಾನೆ.[೯೬] ಅಲ್ಲಿ ತಂದೆತಾಯಿಗಳು ಲಿಂಗ ಮತ್ತು ವಿಭೂತಿಯನ್ನು ಕಾಣುತ್ತಾರೆ. ಶಿವನು ಉಪದೇಶ ಮಾಡಿ ಬಸವನೆಂದು ಹೆಸರಿಡುತ್ತಾನೆ. ಪರವಾದಿಗಳ ರೂಪದಲ್ಲಿ ಬಿಜ್ಜಳ ಉದಯಿಸುವುದು, ಅಕ್ಕನಾಗಮ್ಮನನ್ನು ಬೀಳ್ಕೊಂಡು ಬಿಜ್ಜಳನಾಳುತ್ತಿದ್ದ ಕಲ್ಯಾಣಪುರಕ್ಕೆ ಹೋಗುವುದು, ಅರಸನಿಗೆ ಅಪಾರವಾದ ನಿಧಾನವನ್ನು ತೆಗೆಯಿಸಿ ಕೊಡುವುದು, ಮಹಾಪ್ರಧಾನಿಯಾಗುವುದು, ವಿವಾಹವಾಗುವುದು, ಅಕ್ಕನಾಗಮ್ಮ ಚೆನ್ನಬಸವಣ್ಣನಿಗೆ ಜನ್ಮ ಕೊಡುವುದು, ಹಲವಾರು ಪವಾಡಗಳನ್ನು ಮಾಡುವುದು ಮುಂತಾದವುಗಳನ್ನು ಚಾಮರಸ ಒಟ್ಟು ಒಂಬತ್ತು ಪದ್ಯಗಳಲ್ಲಿ ಮುಗಿಸಿ ಬಿಡುತ್ತಾನೆ.[೯೭] ಮಲಯಜ ಗಾಳಿ ಸೋಂಕುವುದರಿಂದ ಮರಗಿಡಗಳು ಪರಿಮಳ ಸೂಚಿಸುವಂತೆ ಬಸವಣ್ಣ ಜನಿಸುವುದರೊಂದಿಗೆ ಅನೇಕಶಿವ ಭಕ್ತರು, ಶಿವಭಕ್ತೆಯರು ಜನಿಸುತ್ತಾರೆ.[೯೮] ಇಳೆಯೆಲ್ಲ ಭಕ್ತಿಯಿಂದ ತುಂಬಿ ತುಳುಕುತ್ತಿದ್ದಿತೆಂದು ಭಾಸವಾಗುತ್ತದೆ ಚಾಮರಸನಿಗೆ. ಸ್ವಾತಿ ನಕ್ಷತ್ರದ ಮಳೆಗೆ ಬಾಯಿ ಬಿಡುತ್ತ ಇವರೆಲ್ಲ ಚಿಪ್ಪುಗಳ ರೂಪದಲ್ಲಿದ್ದು ಗುರುಗುಹೇಶ್ವರನ ಕರುಣಾಮೃತಕ್ಕಾಗಿ ಕಾಯುತ್ತಿದ್ದರೆಂದು ಕವಿ ತಿಳಿಸುತ್ತಾನೆ. ಶಿವಯೋಗರಾಜ್ಯದ ಅಧಿಕಾರಿಗಳಾಗಬೇಕಾಗಿದ್ದ ಇಷ್ಟೊಂದು ಬೃಹತ್ ಸಂಖ್ಯೆಯ ಶರಣರು

[illegible]

[illegible]

[illegible]

ಆಗ ಉದಯಿಸಿದ ಕಾರಣದಿಂದಾಗಿ ಹನ್ನೆರಡನೆಯ ಶತಮಾನವನ್ನು ಭಕ್ತಿಯ ಮಹಾಪೂರದ ಯುಗವೆಂದು ಕರೆದಿದ್ದಾರೆ.

ಇಲ್ಲಿ ಬರುವ ಕೆಲವು ಶಬ್ದಗಳು ಹಾಗೂ ಹೇಳಿಕೆಗಳು ವಿಶೇಷವಾದ ಸಾಂಕೇತಿಕ ಅರ್ಥವನ್ನು ಕೊಡುತ್ತವೆ. ಹೆಟ್ಟುಗೆಗೆ ಶಿವಯೋಗರಾಜ್ಯದ ಪಟ್ಟ ಕಟ್ಟಿದರು ಎಂದರೆ ಶರಣಸತಿಯನ್ನು ಲಿಂಗಪತಿಯ ದಾರಿಯಲ್ಲಿ ನಡೆಸಿದರು, ಮಡಿವಾಳ ಮಾಚಿದೇವನು ಚತುರ್ದಶ ಭುವನದ ಸಚರಾಚರವನ್ನು ಪಾವನ ಮಾಡಲೆಂಬಂತೆ ಅಂದರೆ ಶರಣ ಮಾರ್ಗದವರ ಅಂತರಂಗ-ಬಹಿರಂಗಗಳನ್ನು ಮಡಿ ಮಾಡಲೆಂಬಂತೆ ಜನಿಸಿದನು. ವೇದ, ಶಾಸ್ತ್ರ, ಪುರಾಣ, ಆಗಮ, ಮುಂತಾದವುಗಳು ಬಸವರಾಜನಿಗೆ ವೇದಿಸಿದವು ಎಂದರೆ ಶಿವಧ್ಯಾನಾಸಕ್ತನಿಗೆ ಇವೆಲ್ಲ ಅಂತರಂಗದಲ್ಲಿ ತಮ್ಮಷ್ಟಕ್ಕೆ ತಾವೇ ತೋರಿದವು,[೯೯] ಬಸವರಾಜನಿಗೊಬ್ಬ ಕುಮಾರನಾದನು ಎಂದರೆ ಶಿವಧ್ಯಾನಾಸಕ್ತನಿಗೆ ಮಹಾಲಿಂಗದ ದರ್ಶನವಾಯಿತು[೧೦೦] ಎಂದೆಲ್ಲ ಅರ್ಥವಾಗುತ್ತದೆ. ಶಿವದೀಕ್ಷೆಗೆ ಕಾಯುವವರ ಚಿತ್ತ ಅತ್ಯಂತ ಶುದ್ಧ ಎನ್ನುವುದಕ್ಕೆ ಗರ್ಭಶುಕ್ತಿ, ಆತ್ಮನ ಸ್ಥಾನ ಎನ್ನುವುದಕ್ಕೆ ಪರಮನಿಕ್ಕೆ, ಯೋಗದೀಕ್ಷೆ ಎನ್ನುವುದಕ್ಕೆ ಉಪನಯನ ಹಾಗೂ ಶರಣ ಸರ್ವಾಂಗಲಿಂಗಿ ಎನ್ನುವುದಕ್ಕೆ ಕಲ್ಪಲತೆ-ದಿವ್ಯಲಿಂಗ-ಚಿಂತಾಮಣಿ ಎಂದು ಪ್ರಯೋಗಿಸಲಾಗಿದೆ.

೧.೬ ತಾಮಸನಿರಸನ ಸ್ಥಲ

ಶರಣಸತಿ-ಲಿಂಗಪತಿ ತತ್ತ್ವದಂತೆ ದೀಕ್ಷೆಗೆ ಅರ್ಹವೆನಿಸುವ ಜೀವಿಯನ್ನು ಸಂಕೇತಿಸಲು ಅಕ್ಕಮಹಾದೇವಿಯನ್ನು ಹಾಗೂ ಪಾರ್ವತಿಯ ಸಾತ್ವಿಕ ಗುಣವನ್ನು ಹೊತ್ತು ಬಂದಿರುವ ಜೀವಿಗೆ ತಮೋಗುಣರೂಪದ ಪ್ರತಿಕ್ರಿಯಾತ್ಮಕ ಶಕ್ತಿಯನ್ನು ಸಂಕೇತಿಸಲು ಕೌಶಿಕನನ್ನು ರೂಪಿಸಲಾಗಿದೆ ಎಂಬುದನ್ನು ನೋಡಿದ್ದೇವೆ. ಅಂತೆಯೇ 'ಮಹದೇವಿಯಕ್ಕನ ಗತಿ'ಯಲ್ಲಿ ಸತ್ವಗುಣಕ್ಕೆ ತಮೋಗುಣವು ಪ್ರತಿಕ್ರಿಯಿಸುವುದನ್ನು ಹಾಗೂ ಆ ತಮೋಗುಣವನ್ನು ಸತ್ವಗುಣವು ಮೀರಿ ನಿಲ್ಲುವುದನ್ನು ಪ್ರತಿಮಾರೂಪದಲ್ಲಿ ಚಿತ್ರಿಸಿರುವುದನ್ನು ನೋಡಬಹುದು.

ಯೌವನದ ಕಳೆಯನ್ನು ಹೊತ್ತ ಅಕ್ಕಮಹಾದೇವಿ ಪುಟಕ್ಕಿಟ್ಟ ಚಿನ್ನದಂತೆ ಬೆಳೆಯುತ್ತಾಳೆ. ಕೌಶಿಕ ವೈಹಾಳಿಯಿಂದ ಮರಳುತ್ತಿರುವಾಗ ಅಕ್ಕಮಹಾದೇವಿಯನ್ನು ಕಾಣುತ್ತಾನೆ ಹಾಗೂ ಅವಳನ್ನು ತನ್ನ ರಾಣಿಯನ್ನಾಗಿ ಮಾಡಿಕೊಳ್ಳಬಯಸುತ್ತಾನೆ. ಅಂದರೆ ಮಹಾದೇವಿಯಕ್ಕನಿಗೆ ಆಂತರಿಕವಾಗಿ ಅಲ್ಲದಿದ್ದರೂ

[illegible]

ಬಾಹ್ಯವಾಗಿ ವಿಷಯವಾಸನೆಯು ಬೆನ್ನು ಹತ್ತುತ್ತದೆ. ಸತ್ವಗುಣವು ತಮೋಗುಣವನ್ನು ಮೀರಿ ನಿಲ್ಲುವುದು ಯೋಗದೀಕ್ಷೆ ಪಡೆಯುವುದಕ್ಕೆ ಆವಶ್ಯಕವಾಗುವುದರಿಂದ ತಮೋಗುಣವನ್ನು ಮೀರಿ ಭಾವಬೆತ್ತಲೆ ಮಾಡಿಕೊಂಡಿರುವುದನ್ನು ದೀಕ್ಷಾಪೇಕ್ಷೆಯು ಗುರುವಿನ ಮುಂದೆ ಖಚಿತಪಡಿಸಬೇಕಾಗುತ್ತದೆ. ಇದರ ಸಂಕೇತದ ರೂಪದಲ್ಲಿ ಅಕ್ಕಮಹಾದೇವಿ ಕೌಶಿಕನ ವಸ್ತ್ರಾಭರಣಗಳನ್ನು ಕಳಚಿ ಹುಟ್ಟುಡುಗೆಯಲ್ಲಿ ಅಲ್ಲಿಂದ ಹೊರಟು ಬರುತ್ತಾಳೆ. ಈ ಎಲ್ಲ ಅಂಶಗಳನ್ನು ಒಂದು ಘಟನಾವಳಿಯ ರೂಪದಲ್ಲಿ ಹೊಂದಿಸಿ ಚಾಮರಸ ಮಹಾದೇವಿಯಕ್ಕನ ಗತಿಯನ್ನು ರೂಪಿಸಿದ್ದಾನೆ. ಚಾರಿತ್ರಿಕ ಅಂಶಗಳಿಗೆ ಹೆಚ್ಚು ಒತ್ತು ಕೊಟ್ಟು ನಿರೂಪಿಸಿದಂತೆ ತೋರುವ ಈ ಗತಿಯಲ್ಲಿ ಸತ್ವಗುಣದ ಕೈ ಮೇಲಾಗುವುದನ್ನು ಹಾಗೂ ಅದು ಚಿತ್ತ ಶುದ್ಧಿ ಮಾಡಿಕೊಂಡು ನಿರ್ಗುಣತ್ವದ ಕಡೆಗೆ ಹಜ್ಜೆ ಹಾಕುವುದನ್ನು ಕಾಣಬಹುದು.

೧.೭ ಗುರುಕಾರುಣ್ಯ ಸ್ಥಲ

ಪ್ರಭುಲಿಂಗಲೀಲೆ ಕಾವ್ಯದಲ್ಲಿ ಅತ್ಯಂತ ಚಾಕಚಕ್ಯತೆಯಿಂದ ರಚಿಸಲ್ಪಟ್ಟ ಅಧ್ಯಾಯಗಳಲ್ಲಿ ಗೊಗ್ಗಯ್ಯನ ಗತಿಯೂ ಒಂದು. ಚಾಮರಸ ತನ್ನ ಕಾವ್ಯರಚನಾ ಕೌಶಲ್ಯವನ್ನೆಲ್ಲ ಬಳಸಿಕೊಳ್ಳುವ ಗುಣಕ್ಕೆ ಈ ಗತಿ ಸಾಕ್ಷಿಯಾಗಿದೆ. ಷಟ್ಸ್ಥಲಾಚರಣೆಯಲ್ಲಿ ಅತ್ಯಾವಶ್ಯಕವಾಗಿರುವ ಹಾಗೂ ಪ್ರಥಮ ಕ್ರಿಯೆಯಾಗಿರುವ ಗುರೂಪದೇಶವನ್ನು ನಿರೂಪಿಸುವುದಕ್ಕಾಗಿ ಕವಿ ಅರ್ಥಪೂರ್ಣ ಸಂಕೇತಗಳನ್ನು ಹೊಂದಿಸುತ್ತ ಮಾಲೆಯೊಂದನ್ನು ರಚಿಸಿದ್ದಾನೆ. ಇಲ್ಲಿ ಮೊದಲನೆಯ ಪದ್ಯಕ್ಕೆ ಎರಡು ಪದ್ಯಗಳನ್ನು ಪಾಠಾಂತರದ ರೂಪದಲ್ಲಿ ಕೊಡಲಾಗಿದೆ. 'ಅ' ಪದ್ಯವು ಷಟ್ಸ್ಥಲಾಚರಣೆಯನ್ನು ನಿರೂಪಿಸುತ್ತದಾದರೂ ಅದರಲ್ಲಿ 'ಗುರೂಪದೇಶ' ಪದವನ್ನು ಬಿಟ್ಟಿರುವ ಕವಿ ಅದರ ಅವಶ್ಯಕತೆಯನ್ನು ಕಂಡವನಾಗಿ ಆ ಶಬ್ದವನ್ನು ಬಳಸುತ್ತ ತಾನು ಪರಿಷ್ಕರಿಸಿದ ಪ್ರತಿಗಳಲ್ಲಿ ಪರ್ಯಾಯ ಪದ್ಯವನ್ನೇ ಕಾಣಿಕೆಯಾಗಿ ಕೊಟ್ಟಿದ್ದಾನೆ. ಯಾವುದನ್ನು ಉಳಿಸಿಕೊಂಡರೂ ಕಾವ್ಯೋದ್ದೇಶಕ್ಕೆ ಚ್ಯುತಿ ಇಲ್ಲವಾದರೂ ಕವಿಗೆ 'ಬ' ಪದ್ಯವು ಹೆಚ್ಚು ಸಮಂಜಸವೆಂದು ಕಂಡಿರಬೇಕು. [೧೧೧]

ಕೀಳು ವಿಷಯಗಳ ಸೆಳೆತದಲ್ಲಿ ಸಿಗುವವರು ಕಾಲನ ಬಾಯಿಯಲ್ಲಿ ಬೀಳುತ್ತಾರೆ. ಅದಕ್ಕೆ ಬದಲಾಗಿ ಲಿಂಗಾನುಸಂಧಾನದ ಸ್ಪರ್ಶವನ್ನು ಪಡೆಯುವವರು ಹಸಿವು, ತೃಷೆ, ನಿದ್ರೆ, ರೋಗ, ಮುಂತಾದವುಗಳ ಉಪದ್ರವದಿಂದ ದೂರಾಗಿ ಸೌಖ್ಯದಲ್ಲಿರುತ್ತಾರೆ. ೧೦೨ ಇಂಥ ಗುಣಗಳನ್ನು ಹೊಂದುವ

[illegible]

[illegible]

[illegible]

[illegible]

[illegible]

ದೀಕ್ಷಾರ್ಥಿಯ ಸಂಕೇತದಲ್ಲಿ ಗೊಗ್ಗಯ್ಯನಿದ್ದರೆ ಅದನ್ನು ಕರುಣಿಸುವ ಗುರುವಿನ ಸಂಕೇತದಲ್ಲಿ ಅಲ್ಲಮನಿದ್ದಾನೆ. ಅರಿಷಡ್ವರ್ಗ, ಸಪ್ತವ್ಯಸನಗಳು, ಅಷ್ಟಮದಗಳು ಮುಂತಾದವುಗಳ ಸಂಕೇತಗಳಾದ ಮುಳ್ಳುಗಿಡಗಳು, ಕಳೆ, ಕಸಕಡ್ಡಿ ಇಂಥ ಯಾವುದನ್ನೂ ಹೊಂದಿರದ ಆದರೆ ಶುದ್ಧ ಕರಣಾದಿಗಳನ್ನು ಸಂಕೇತಿಸುವ ತಾವರೆ ನೈದಿಲೆಗಳ ಕೊಳಗಳನ್ನು ಹಾಗೂ ನಾನಾವಿಧದ ಹೂಗಿಡಗಳ ಲತಾಮಂಟಪಗಳನ್ನು ಒಳಗೊಂಡ ವನದ ಯಜಮಾನ ಗೊಗ್ಗಿದೇವ.[೧೦೩] ಸಂಕೇತಗಳನ್ನು ಬದಿಗಿಟ್ಟು ವಿಷಯವನ್ನು ನೇರವಾಗಿ ತಿಳಿಸುವ ಆತುರದಲ್ಲಿ ಚಾಮರಸ ಗೊಗ್ಗಯ್ಯನು ಪಾವನೀಕೃತನಾದ ಹಾಗೂ ಚಿತ್ತನಿರ್ಮಳನಾದ ಭಾವಭಕ್ತ ಎನ್ನುತ್ತಾನೆ. ಅವನು ಕೃಷಿ (ಲಿಂಗಾಂಗಸಾಮರಸ್ಯ) ನಿಮಿತ್ತವಾಗಿ ಭೂಮಿಯನ್ನು (ದೇಹವನ್ನು) ಚೆನ್ನಾಗಿ ಅಗೆಯುತ್ತಿದ್ದವನು, ಆ ಪ್ರಸಂಗದಲ್ಲಿ ಗುರುರೂಪದ ಅಲ್ಲಮ ಅವನ ಬಳಿಗೆ ಸುಳಿಯುತ್ತಾನೆಂದು ತಿಳಿಸುತ್ತಾನೆ.[೧೦೪] ವಿಷಯ ಸುಖಗಳಲ್ಲಿ ಮುಳುಗೇಳುವವರ ಕಡೆಗೆ ದೃಷ್ಟಿಯನ್ನು ಕೂಡ ಬಿಡದ ಗುರು ಪಾವನಚಿತ್ತರನ್ನು ಮಾತ್ರ ಲಕ್ಷಿಸುತ್ತಾನೆಂಬ ಧ್ವನಿ ಇಲ್ಲಿ ಹೊರಡುತ್ತದೆ.[೧೦೫]

ಗುರು ಯಾವ ರೂಪದಲ್ಲಿ ಒದಗಿ ಬರುತ್ತಾನೆಂಬುದನ್ನು ಹೇಳುವುದು ಕಷ್ಟ. 'ತಾನಾರು, ತನ್ನ ಆಗಮನ ಎಲ್ಲಿಂದ, ತಾನು ಹೋಗುವುದೆಲ್ಲಿ' ಮುಂತಾದವುಗಳ ಬಗೆಗಿನ ಯಾವ ಕಲ್ಪನೆಯೂ ಇರದ ಪಾವನಚಿತ್ತನಾದ ಭಕ್ತನೊಬ್ಬ ಗೊಗ್ಗಯ್ಯನ ರೂಪದಲ್ಲಿದ್ದಾನೆ. ಅವನು 'ನಾನಾರು, ನನ್ನ ಬದುಕಿನ ಗುರಿಯೇನು?' ಎಂದು ಕೇಳುವುದರ ಬದಲಾಗಿ ಅಲ್ಲಮನನ್ನು 'ನೀನಾರು' ಎಂದು ಕೇಳುತ್ತಾನೆ. ಜೀವಭಾವವುಳ್ಳವನಲ್ಲಿ ಪ್ರಕಟವಾಗಿ ತೋರುವ ದೋಷವೆಂದರೆ ಇದೇ![೧೦೬] ಶಿವಧ್ಯಾನಕ್ಕೆ ಅರ್ಹನಾದ ಭಕ್ತನನ್ನು ಅರಸುವ ಗುರುವಿಗೆ ಅಂಥವನೊಬ್ಬನನ್ನು ಕಂಡಾಗ ಅಪಾರ ಸಂತೋಷವಾಗುತ್ತದೆ.[೧೦೭] ಅವನ ಹೆಸರೇನೆಂದು ಅಲ್ಲಮ ಕೇಳಿದರೆ ತಾನು ಲೋಕವ್ಯವಹಾರಿ ಎಂದು ಗೊಗ್ಗಯ್ಯ ತಿಳಿಸುತ್ತಾನೆ. ಯಾವ ಕರ್ಮ ಮಾಡಿದರೂ ಜೀವಕ್ಕೆ ವ್ಯಥೆ ಪಡುವುದು ನಿಶ್ಚಿತವಾದ್ದರಿಂದ ನೋವು ನಿಲ್ಲಿಸಿ ಸಾವನ್ನು ಹಿಂಗಿಸುವ ವ್ಯವಸಾಯವನ್ನು ಮಾತ್ರ ಮಾಡಬೇಕೆಂದು ಅಲ್ಲಮ ತಿಳಿಸುತ್ತಾನೆ.[೧೦೮] ಕೈಲಾಸದಲ್ಲಿದ್ದರೂ ನೋವು-ಸಾವುಗಳಿಗೆ ಒಳಗಾಗಬೇಕಾಗುವುದೆಂದು ತಿಳಿಸುತ್ತ ಜೀವನ ಭಾವವು ನಿರ್ಭಾವವಾಗಬೇಕೆಂದು ಹೇಳುತ್ತಾನೆ. ಕಬ್ಬಿಣದ ಕಡಲೆಯಂತೆ ತೋರುವ ಈ ಶಾಸ್ತ್ರಕ್ಕೆ ಆಸಕ್ತಿ ತೋರದ ಗೊಗ್ಗಯ್ಯ ಲಿಂಗಾನುಸಂಧಾನದ ನೇರ ಕ್ರಿಯೆಗಾಗಿ ಹಾತೊರೆಯುವನಂತೆ ತೋರುತ್ತಾನೆ.[೧೦೯]

[illegible]

[illegible]

[illegible]

ಈಗ ಪ್ರಾರಂಭವಾಗುತ್ತದೆ ದೃಷ್ಟಾಂತರೂಪದಲ್ಲಿರುವ ಗುರೂಪದೇಶದ ನಿರೂಪಣೆ. ವೈಶಿಷ್ಟ್ಯವೆಂದರೆ ಚಾಮರಸ ಇಲ್ಲಿ ತನ್ನ ಉದ್ದೇಶವನ್ನು ಬಹಿರಂಗವಾಗಿಯೇ ತಿಳಿಸುತ್ತಾನೆ. ಗುರುರೂಪದ ಅಲ್ಲಮಪ್ರಭು ಇದನ್ನು ದೃಷ್ಟಾಂತದ ರೂಪದಲ್ಲಿ ತಿಳಿಸಬೇಕೆಂದು ಆಲೋಚಿಸುತ್ತ ಆ ಗೊಗ್ಗಯ್ಯ ಕೃಪೆಯ ಚಿತ್ತದಲ್ಲಿ ಉಳುತ್ತ ಹೋದಂತೆ ಹೊಂಗಳಸವೊಂದನ್ನು ತೋರಿಸುತ್ತಾನೆ.[೧೧೦]

ಅಥ ಶೃಣು ಮಹಾಶ್ಚರ್ಯಂ ರಾಜಯೋಗಾಭಿಧಾನಕಂ

ಇಮಂ ಸದ್ಗುರುಣಾ ಯಾತಿ ಸಜ್ಜನೋ ನಾನ್ಯಕರ್ಮಭಿಃ || [೧೧೧]

ಎನ್ನುವಂತೆ ಇದು ಗುರುಕೃಪಾಸಾಧ್ಯವಲ್ಲದೆ ಕೇವಲ ಕ್ರಿಯಾಸಾಧ್ಯವಲ್ಲ. ಈ ದೃಷ್ಟಾಂತದಲ್ಲಿ ಅಲ್ಲಮ ಗುರು, ಗೊಗ್ಗಯ್ಯ ಉಪದೇಶ ಪಡೆಯುವವ ಹಾಗೂ ಈಗಾಗಲೇ ನೋಡಿರುವಂತೆ ಅನಿಮಿಷ ಕಾಲಾತೀತವಾದ ಹಾಗೂ ಪ್ರಕಾಶರೂಪದ ಮೂಲ. ಅಲ್ಲಮಪ್ರಭುವಿನ ವಚನವೊಂದು ಇದನ್ನು ಪುಷ್ಟೀಕರಿಸುತ್ತದೆ.[೧೧೨] ಇಲ್ಲಿ 'ಸಮಾಧಿ' ಶಬ್ದವು ಶ್ಲೇಷೆಯ ರೂಪದಲ್ಲಿ ಬಳಕೆಯಾಗಿದ್ದು 'ಭೂಮಿಯಲ್ಲಿ ಸಮಾಧಿ' ಎನ್ನುವುದು ವಾಚ್ಯಾರ್ಥಕ್ಕೆ ಹೊಂದುತ್ತಿದ್ದರೆ 'ಶಿವಯೋಗಸಮಾಧಿ' ಎನ್ನುವುದು ಧ್ಯಾನಾವಸ್ಥೆಗೆ ಲಕ್ಷ್ಯಾರ್ಥವಾಗುತ್ತದೆ. ಯೋಗಸಮಾಧಿಯಲ್ಲಿ ಸಾಧಕ ಚಲಿಸದೆ ಇರುವಂಥ ಜ್ಯೋತಿಸ್ವರೂಪವಾದ ಲಿಂಗವನ್ನು ಕಾಣುತ್ತಾನೆಂದು ಚೆನ್ನಸದಾಶಿವಯೋಗಿ ತಿಳಿಸುತ್ತಾನೆ.[೧೧೩] ಮಹಾಲಿಂಗಪುರದ ಚೆನ್ನವೀರಸ್ವಾಮಿಗಳು ಮುರಗೋಡ ಮಹಾಂತಶಿವಯೋಗಿಗಳಿಂದ ಗುರೂಪದೇಶವನ್ನು ಪಡೆದಾಗಿನ ಪ್ರಸಂಗ ಹೀಗೆಯೇ ಇರುವುದನ್ನು ಬ. ಗಿ. ಯಲ್ಲಟ್ಟಿಯವರು 'ಉರಿಯುಂಡ ಕರ್ಪುರ'ದಲ್ಲಿ ತಿಳಿಸಿರುವುದನ್ನು ಯೋಗದರ್ಶನದಲ್ಲಿ ನೋಡಿಯಾಗಿದೆ.[೧೧೪]

ದೇಹವೆಂಬ ಭೂಮಿಯಿಂದ ಜೀವಾತ್ಮನನ್ನು ಮುಚ್ಚಿರುವ ಅಷ್ಟಾವರಣ ರೂಪದ ಹೆಂಟೆಯನ್ನು ಕಿತ್ತಾಗ ಆ ಜೀವಾತ್ಮರೂಪದ ಹೊಂಗಳಸ ತೋರುತ್ತದೆ. ತೋರಿಸುವ ಗುರು ಹಾಗೂ ನೋಡುವ ಶಿಷ್ಯ ಇಬ್ಬರಿಗೂ ಅದು ಗೋಚರ. ಆ ಪ್ರಸಂಗದಲ್ಲಿ ಅವರಿಬ್ಬರೂ ಲಿಂಗಧ್ಯಾನದಲ್ಲಿದ್ದು ಬಿಟ್ಟ ಕಣ್ಣು ಬಿಟ್ಟಂತೆಯೇ ಇರುವ ಅನಿಮಿಷದೃಷ್ಟಿಯನ್ನು ಹೊದಿದವರಾಗಿರುತ್ತಾರೆ . ಅಂತರಂಗವನ್ನು ಹೊಕ್ಕು ನಿಶ್ಚಿಂತ ನಿಲವನ್ನು ನೋಡುವ ಅನುಭವಿಯಂತೆ ಆಗ ಅವರಿದ್ದರೆಂದು ತಿಳಿಸುತ್ತಾನೆ ಚಾಮರಸ. ಗುಹೆಯಲ್ಲಿ ಲಿಂಗವೇ ಪ್ರಾಣ ಹಾಗೂ ತನುವಾದಂತೆ ಅತ್ಯಂತ ಪ್ರಕಾಶಮಾನವಾದ ಲಿಂಗದ ಧ್ಯಾನದಲ್ಲಿ ಮರವಟ್ಟ ದೇಹದ ಮಹಂತನನ್ನು ಗೊಗ್ಗಯ್ಯ ಅಲ್ಲಮನೊಡನೆ ಕಾಣುತ್ತಾನೆ.[೧೧೫] ಅಂದರೆ ಸುಷುಮ್ನಾನಾಳದ

[illegible]

[illegible]

[illegible]

[illegible]

ಮೂಲಕ ನವಚಕ್ರಗಳ ಗುಹೆಯನ್ನು ಪ್ರವೇಶಿಸಿ ಚಿದ್ರೂಪಲಿಂಗವನ್ನು ಅವರು ಕಾಣುತ್ತಾರೆ. ಅದುವೇ ಶಿವಲಿಂಗಭಕ್ತಿಯನ್ನು ಸಾಧಿಸುವ ಪರಿಯೆಂದು ಹೇಳುತ್ತ 'ಅನಿಮಿಷನೇ ಗುರು ತಾನು ಶಿಷ್ಯ' ಎನ್ನುವಂತೆ ಅಲ್ಲಮ ನಟಿಸುತ್ತಿದ್ದನೆಂದು ಚಾಮರಸ ತಿಳಿಸುತ್ತಾನೆ.[೧೧೬] ಹೌದು, ಲಿಂಗಾನುಸಂಧಾನವನ್ನು ಉಪದೇಶಿಸುವಾಗ ಪ್ರತಿಯೊಬ್ಬ ಗುರು ಕೋಟಿಸೂರ್ಯಪ್ರಭೆಯ ರೂಪದ ಪರಶಿವನನ್ನು ಗುರುವಾಗಿ ಸ್ವೀಕರಿಸುತ್ತಾನೆ. ಶಿವಯೋಗಿ ಪ್ರಯೋಗಿಸುವ ಶಿವಮಂತ್ರಕ್ಕೂ ಚಿಚ್ಛಕ್ತಿಗೂ ಇರುವ ಸಂಬಂಧ ಸೂಜಿಗಲ್ಲಿಗೂ ಸೂಜಿಗೂ ಇರುವ ಸಂಬಂಧದಂತೆ. ಆಗ ಕೋಟಿಸೂರ್ಯಪ್ರಭೆಯ ರೂಪದ ಪರಶಿವಲಿಂಗವು ಅಂಗುಷ್ಠ ಪರಿಮಾಣದಲ್ಲಿ ಬಂದು ಕಂಗಳ ಮುಂದೆ ಹೊಳೆಯತೊಡಗುತ್ತದೆ. ಇದನ್ನೇ ಚಾಮರಸ ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣವಾದ ಅಂಶವು ಅನಿಮಿಷನಿಂದ ಅಲ್ಲಮನಿಗೆ ವರ್ಗಾವಣೆಯಾಯಿತೆಂದು ತಿಳಿಸುತ್ತಾನೆ.[೧೧೭] ಇಲ್ಲಿ ಅಲ್ಲಮನೇ ಅನಿಮಿಷ, ಅನಿಮಿಷನೇ ಅಲ್ಲಮ.[೧೧೮] ಗುರುದೀಕ್ಷಾ ಪ್ರಸಂಗದಲ್ಲಿ ಅನುಸರಿಸುವ ವಿಧಾನ ಇದಾಗಿದೆಯೆಂಬುದನ್ನು ಈ ಮೊದಲೇ ನೋಡಿದ್ದೇವೆ. ಆಗ ಅಲ್ಲಮ ಗೊಗ್ಗಯ್ಯನಿಗೆ ಸಾಕ್ಷಾತ್ ಶಿವನಾಗಿ ತೋರುತ್ತಾನೆ.[೧೧೯] ಗುರುವಿನಲ್ಲಿ ನೆಲಸಿದ ಲಿಂಗಕಳೆಯನ್ನು ಅವನು ಅವನ ಉಪದೇಶದಿಂದ ಅರಿದ ಗೊಗ್ಗಯ್ಯ ನಿರುಪಮನಿಳಯನಾಗಿರುವನೆಂದು ಹೊಗಳುತ್ತಾನೆ.[೧೨೦] ಹೀಗೆ ಗುರೂಪದೇಶ ಪ್ರಸಂಗ ಗೊಗ್ಗಯ್ಯನ ಗತಿಯ ರೂಪದಲ್ಲಿ ಮೂಡಿ ಬಂದಿದೆ.

೧.೮ ಲಿಂಗಮಾಹಾತ್ಮ್ಯ ಸ್ಥಲ

ಆತ್ಮಜ್ಞಾನವನ್ನು ಪಡೆಯುವವರು ವಿರಳರಲ್ಲಿ ವಿರಳರು. ಅಂಥ ಅವಿರಳಜ್ಞಾನಿಯಾದ ಅಜಗಣ್ಣನ ಸ್ಥಿತಿಯನ್ನು ಕಂಡು ಅದಕ್ಕಾಗಿ ಹಂಬಲಿಸುವಂಥವಳು ಮುಕ್ತಾಯಕ್ಕ. ಅವರು ಹೆಸರುಗಳೇ ತಿಳುಸುವಂತೆ ಅಜಗಣ್ಣ ಜಗತ್ತಿನ ಆಗುಹೋಗುಗಳಿಂದ ಹೊರಗಾಗಿದ್ದವನು. ಮುಕ್ತಾಯಕ್ಕ ಅಷ್ಟಾವರಣಗಳಿಂದ್ಯುಕ್ತವಾದ ಜೀವಾತ್ಮನನ್ನು ಹೊಂದಿ ಕರಣಾದಿಗಳನ್ನು ಶುದ್ಧವಾಗಿಟ್ಟುಕೊಂಡವಳು. ಇಂಥ ಮುಕ್ತಿಕಾಂತೆಯು ದೀಕ್ಷಾಗುರುವಿನ ಮುಂದೆ ತನ್ನ ಸಂಶಯಗಳನ್ನು ನಿವಾರಿಸಿಕೊಂಡಾಗ ಅನುಸಂಧಾನದ ಮಾರ್ಗಕ್ಕೆ ಒಲಿದು ಬರುವುದನ್ನು 'ಮುಕ್ತಾಯಕ್ಕನ ಗತಿ'ಯಲ್ಲಿ ನಿರೂಪಿಸಲಾಗಿದೆ. ಚಾಮರಸ ಈ ಗತಿಗಾಗಿ ಬಳಸಿಕೊಂಡ ವಚನಗಳೂ ಇದೇ ಅರ್ಥವನ್ನು ಹೊರಸೂಸುತ್ತವೆ. ಅವುಗಳಿಗೆ ಸಮಾನಾಂತರವಾಗಿ ತೋರುವ ಮೊದಲ ಪದ್ಯದಲ್ಲಿ ಅವನು ಈ ಮಾತನ್ನುಸ್ಥಿರೀಕರಿಸುತ್ತಾನೆ.[೧೨೧]

[illegible]

[illegible]

ಗುಪ್ತಭಕ್ತಿಯಲ್ಲಿ ತೊಡಗುವವರು ಅದರ ಆಚರಣೆಯ ಗೌಪ್ಯವನ್ನು ಕಾಯ್ದುಕೊಂಡು ಹೋಗುತ್ತಾರೆ. ಈ ವಿಷಯವನ್ನು ಗ್ರಹಿಸಲಾಗದ ಮುಕ್ತಾಯಕ್ಕ ಸಿಟ್ಟಿನಲ್ಲಿರುವಾಗ ಗುರುರೂಪದಲ್ಲಿ ಅಲ್ಲಮ ಅವಳನ್ನು ಭೆಟ್ಟಿಯಾಗುತ್ತಾನೆ. ಉಪದೇಶವು ಗುರುಮುಖದಿಂದಲ್ಲದೆ ಸಾಧಕನಿಂದ ಸ್ವಯಂ ಸಾಧ್ಯವಿಲ್ಲವಾದ್ದರಿಂದ ಅಲ್ಲಮ ಗುರುವಾಗಿ ನಿಂತು ಮುಮುಕ್ಷುವಿನ ಸಂಶಯಗಳೆಲ್ಲವನ್ನು ನಿವಾರಿಸುವುದು ಹಾಗೂ ಉಪದೇಶವನ್ನು ಕರುಣಿಸಿ ಲಿಂಗಾನುಸಂಧಾನಕ್ಕೆ ತೊಡಗಿಸುವುದು ಈ ಗತಿಯ ವಸ್ತು. ಶರೀರ ಜೀವಾತ್ಮನಿಗೆ ವಸ್ತ್ರದ ರೂಪದಲ್ಲಿ ಬಂದು ಹೋಗುವಂಥದು. ಶರಣರಾದವರು ಈ ಶರೀರವನ್ನು ಹೊತ್ತು ತರುವುದು ಯಾರ ಸಂಬಂಧಕ್ಕಾಗಿಯೂ ಅಲ್ಲ. ಅವರೆಲ್ಲ ಅಜಗಣ್ಣನಂತೆ ನಿತ್ಯರೆಂದು ಅಲ್ಲಮ ಮುಕ್ತಾಯಕ್ಕನಿಗೆ ನುಡಿಯುತ್ತಾನೆ,[೧೨೨] ಅಜಗಣ್ಣನ ಸ್ಥಿತಿಗೂ ಮುಕ್ತಾಯಕ್ಕನ ಸ್ಥಿತಿಗೂ ಇರುವ ಅಂತರವನ್ನು ತಿಳಿಸುತ್ತಾನೆ. ಕರಣಾದಿಗಳನ್ನು ಶುದ್ಧವಾಗಿಟ್ಟುಕೊಂಡವರು ಲಿಂಗವನ್ನು ತಿಳಿಯುವುದಕ್ಕಾಗಿ ಕರ್ಮೇಂದ್ರಿಯಗಳನ್ನು ಪಕ್ಕಕ್ಕೆ ಸರಿಸಿ ಒಳಮಾರ್ಗವೊಂದನ್ನೇ ಅನುಸರಿಸುತ್ತಾರೆ.[೧೨೩] ವಿಷಯಗಳ ಕಡೆಗೆ ಹರಿಯುವ ಇಂದ್ರಿಯಗಳನ್ನು ತಟಸ್ಥಗೊಳಿಸುತ್ತ ಮನಸ್ಸನ್ನು ಅಂತರ್ಮುಖಿಯಾಗಿಸಿ ಸಾಧಕನು ಅನುಸಂಧಾನದಲ್ಲಿ ತೊಡಗುವಂತೆ ಮಾಡುವುದು ಗುರುವಿನ ಕೆಲಸ.[೧೨೪] ಪಂಚೇಂದ್ರಿಯಗಳೆಂಬ ಎಳೆಗಳಿಂದ ಹಾಸು ಹಾಗೂ ಕರಣಾದಿಗಳೆಂಬ ಎಳೆಗಳಿಂದ ಹೊಕ್ಕು ಸಿದ್ಧವಾದಾಗ ಜೀವಾತ್ಮನು ಅಣೆಗಳನ್ನು ತುಳಿಯುತ್ತ ಹೋದಂತೆ ಬದುಕಿನ ಬಟ್ಟೆ ಸಿದ್ಧವಾಗುತ್ತ ಹೋಗುತ್ತದೆನ್ನುವುದು ಲೌಕಿಕರ ಅನುಭವಕ್ಕೆ ಬರುವಂಥದು. ನೂಲಿನ ರೂಪದಲ್ಲಿರುವ ಪಂಚೇಂದ್ರಿಯಗಳು ಹಾಗೂ ಕರಣಾದಿಗಳು ಲಿಂಗಜ್ಞಾನದ ಅಗ್ನಿಯಲ್ಲಿ ಸುಟ್ಟಾಗ ಅದು ನೂಲಿನಂತೆ ತೋರುವ ಸ್ಥಿತಿ ಮಾತ್ರವಲ್ಲದೆ ಪುನರ್ಜನ್ಮರೂಪದ ಬಟ್ಟೆ ಸಾಧ್ಯವಿಲ್ಲ.

ಬೆಂದ ನುಲಿಯಾಕಾರವಾಗಿಹು
ದೆಂದೊಡದು ನೆಯಿವವರ ಕೆಲಸಕೆ
ಬಂದುದುಂಟೇ ಮರುಳೆ ಲಿಂಗಜ್ಞಾನವಹ್ನಿಯಲಿ ।
ಬೆಂದು ಹೋದೊಡಲುಗನು ಭಾವಿಸ
ಲೊಂದುವಿಲ್ಲದ ಬಯಲುಗನೊಳಿ
ನ್ನೊಂದು ಕಲ್ಪಿಸಲಾಗದೌ ಮುಕ್ತಾಯಿ ಕೇಳೆಂದ ॥ [೧೨೫]

[illegible]

[illegible]

ಹೀಗೆ ಅಲ್ಲಮ ಅವಳಿಗೆ ಲೌಕಿಕ-ಅಲೌಕಿಕ, ಸುಗುಣ-ನಿರ್ಗುಣ ಎಲ್ಲವನ್ನೂ ಅವಳು ಬಳಸುವ ಮಾತುಗಳಲ್ಲಿಯೇ ತಿಳಿಸುತ್ತಾನೆ. ಆಗ ಮುಕ್ತಾಯಕ್ಕ ಅವನು ವೇದ, ಶಾಸ್ತ್ರ, ಆಗಮಗಳಿಗೆ ಹೋಲಿಸಲಾಗದ ಹಿರಿಯನೆಂದು ತಿಳಿಸುತ್ತ ಅವನಿಗೆ ಶರಣು ಹೋಗುತ್ತಾಳೆ.[೧೨೬] ಅಲ್ಲಮ ಅವಳಿಗೆ ಲಿಂಗಾನುಸಂಧಾನದ ಮಾರ್ಗವನ್ನು ಉಪದೇಶಿಸಿ ಉದ್ಧರಿಸುತ್ತಾನೆ. ಅದಕ್ಕನುಗುಣವಾಗಿ ಮುಕ್ತಾಯಕ್ಕ ಬ್ರಹ್ಮರಂದ್ರವನ್ನು ಹೊಕ್ಕು ನಾದಗಳನ್ನು ಆಲಿಸುತ್ತ ಭವಸಾಗರವನ್ನು ದಾಟಿ ನಿಜದ ನಿರಾಳದಲ್ಲಿ ನಿಂತಿದ್ದಳೆಂದು ಚಾಮರಸ ತಿಳಿಸುತ್ತಾನೆ.[೧೨೭]

೧.೯ ಜಂಗಮ ಮಾಹಾತ್ಮ್ಯ ಸ್ಥಲ

'ಮಹದೇವಿಯಕ್ಕನ ಗತಿ'ಯಂತೆ 'ಸಿದ್ಧರಾಮನ ಗತಿ'ಯೂ ಕಥನರೂಪದಲ್ಲಿದೆ. ಆದರೂ ಅರ್ಧಭಾಗ ಮುಗಿದ ನಂತರ ವೀರಶೈವಾಚಾರದ ಚರ್ಚೆಯೊಂದಿಗೆ ಮುಂದುವರೆಯುತ್ತ ಸಾಗುತ್ತದೆ. ವಿವಿಧ ಶಕ್ತಿಗಳ ಆರಾಧನೆಯಿಂದ ಸಿದ್ಧಿಗಳನ್ನು ವಶಪಡಿಸಿಕೊಂಡವರ ಏರಾಟ ಶಿವಯೋಗಿಗಳ ಮುಂದೆ ತಟಸ್ಥವಾಗುತ್ತದೆಂಬ ವಿಚಾರ ಇಲ್ಲಿ ವಿದಿತವಾಗಿದೆ. ಅಹಂಕಾರದಿಂದ ಕೂಡಿದ ಸಿದ್ಧರಾಮ ಅಲ್ಲಮನನ್ನು ಸುಡಲು ಉರಿಗಣ್ಣು ತೆರೆದರೆ ಅದು ಅಲ್ಲಮನ ಅಡಿಯನ್ನು ಸೇರುತ್ತದೆ. ಸಮಚಿತ್ತದ ಶಿವಯೋಗಿಗಳ ಮುಂದೆ ಲೋಕಜೀವಿಗಳ ಅಹಂಕಾರಕ್ಕೆ ಅಸ್ತಿತ್ವ ಉಳಿಯುವುದಿಲ್ಲ. ಹೀಗೆ ಭಕ್ತನನ್ನು ಪರಿಶುದ್ಧ ಚಿತ್ತದವನನ್ನಾಗಿ ಮಾಡಿದ ನಂತರವೇ ಗುರು ಅವನಿಗೆ ಉಪದೇಶ ನೀಡಲು ಮನಸ್ಸು ಮಾಡುತ್ತಾನೆ. ಎಚ್ಚತ್ತ ಸಿದ್ಧರಾಮ ತನ್ನನ್ನು ಕಾಪಾಡಬೇಕೆಂದು ಮೊರೆಯಿಟ್ಟಾಗ ಅಲ್ಲಮ ಅವನ ವಿಮಲ ಮಸ್ತಕವನ್ನು ಎತ್ತಿದನೆಂದು ತಿಳಿಸುತ್ತಾನೆ ಚಾಮರಸ.[೧೨೮] ಚಿತ್ತಶುದ್ಧಿಯಲ್ಲಿ ಯೋಗಮಾರ್ಗವನ್ನು ಅರಿಯಬೇಕು, ಚಿತ್ತದಲ್ಲಿ ಪರಿಪಾಕವಾದವರಲ್ಲಿ ಮಾತ್ರ ತತ್ತ್ವಬೀಜವನ್ನು ಬಿತ್ತಬೇಕು'[೧೨೯] ಎನ್ನುತ್ತ ಖ್ಯಾತಿ-ಲಾಭದಾಶೆಗೆ ದಾನಧರ್ಮವನ್ನು ಮಾಡಿದರೆ ಬಿತ್ತಿದ ಬೆಳೆಯನ್ನೆಲ್ಲ ಉಂಡಂತಾಗುವುದೆಂಬುದು ಅಲ್ಲಮನ ಅಭಿಪ್ರಾಯ.[೧೩೦] ಅಂತರ್ಮಾರ್ಗದ ಸಾಧನೆಗಾಗಿ ಬಂದಿರುವ ತನು-ಮನಗಳನ್ನು ತುಚ್ಛವಾದ ಬಹಿರಂಗದ ಇಚ್ಛೆಗೆ ಬಳಸಬಾರದು. ಮುಕ್ತಿಯ ದಾರಿಯಲ್ಲಿ ಕಾಣಿಸಿಕೊಳ್ಳುವ ವಿಷಯಸುಖದ ತೊಂದರೆಗಳನ್ನು ನಿವಾರಿಸುತ್ತ ನಿರ್ಮೋಹದಲ್ಲಿ ನಿಲ್ಲುವವನು ಮಾತ್ರ ನಿತ್ಯನಾಗುತ್ತಾನೆ' ಎನ್ನುತ್ತಾನೆ.[೧೩೧] 'ಕರಣಗಳು ಕೈಗೂಡಿದಾಗ ಮರಣವನ್ನು ಗೆಲ್ಲುವುದನ್ನು ಕಲಿಯಬೇಕು, ಹರಿಯುವ ಮನವನ್ನು ನಿಲ್ಲಿಸಿ ಪ್ರಾಣಲಿಂಗವನ್ನು ಅರಿತು ಜ್ಯೋತಿರ್ಲಿಂಗದ ನೆಲೆಗೆ ಹೋಗುವುದನ್ನು ಕಲಿತುಕೊಳ್ಳಬೇಕು'[೧೩೨] ಎಂದು

ತಿಳಿಸುತ್ತ ಏಕಾಂತದಲ್ಲಿ ಕರೆದು, ಕಾಯಕರಣದ ಸಂದು ಸಂಬಂಧವನ್ನು ಸೂಚಿಸಿ, ಜೀವಪರಮರನ್ನು ಒಂದು ಮಾಡುವ ಲಿಂಗಾನುಸಂಧಾನವನ್ನು ಉಪದೇಶಿಸುತ್ತಾನೆ.[೧೩೩] ಹೀಗೆ ನವಚಕ್ರಗಳ ಕುಳವನ್ನು ಅರಿತ ಸಿದ್ಧರಾಮನಿಗೆ ಮನದ ಸಂಶಯ ಕಳೆಯುತ್ತದೆ. ಅವನು ಭವತಿಮಿರ ಹರಿಯುವ ದಿವ್ಯಜ್ಞಾನದೀಪವನ್ನು ಪಡೆಯುತ್ತಾನೆ.[೧೩೪]

೧.೧೦ ಕ್ರಿಯಾಗಮ ಸ್ಥಲ

ಗುರು ಹಾಗೂ ಭಕ್ತನ ನಡುವಿನ ಸಂಬಂಧ ತಾಯಿ–ಮಗುವಿನ ಸಂಬಂಧದಂತಿರುತ್ತದೆ. ಅಂತೆಯೇ ಬಸವಣ್ಣ ಚಾತಕ ಪಕ್ಷಿಯಾಗಿ, ಅಲ್ಲಮ ಸುರಿಯುವ ಮೋಡವಾಗಿ ಕಂಡಿದ್ದಾರೆ ಚಾಮರಸನಿಗೆ.[೧೩೫] ಇಂಥ ಗುರು, ಭಕ್ತನ ಮನೆಯ ಬಾಗಿಲಿಗೆ ಬಂದಾಗ ಭಕ್ತನ ಅಂತಃಕರಣಗಳು ಅರ್ಪಿತ ರೂಪದಲಿದ್ದು ಯೋಗಾಸಕ್ತಿ ಮೂಡಿ ಬರಬೇಕು. ಇಲ್ಲಿ ಹಾಗಾಗುವುದಿಲ್ಲ. ಲಿಂಗದ ಸುಳಿಯನ್ನು ಕರುಣಿಸುವ ಜಂಗಮ ಶಿವನಾಗಿ ಬಾಗಿಲಲ್ಲಿ ಬಂದುನಿಂತರೆ ಅವನನ್ನು ಒಳಗೆ ಕರೆತರಲು ಬಸವಣ್ಣ ಹಡಪದ ಅಪ್ಪಣ್ಣನಿಗೆ ತಿಳಿಸುತ್ತಾನೆ. ಸಿದ್ಧರಾಮನೊಂದಿಗೆ ಬಂದ ಅಲ್ಲಮ ಅದಕ್ಕೆ ಒಪ್ಪದಿದ್ದಾಗ ಸೂಕ್ಷ್ಮರೂಪದ ಅಹಂಕಾರದಲ್ಲಿ ಮೂಡಿ ಬಂದ ತನ್ನ ತಪ್ಪಿನ ಅರಿವಾಗಿ ತನ್ನನ್ನು ಕ್ಷಮಿಸಬೇಕೆಂದು ಬಸವಣ್ಣ ಅಲ್ಲಮನನ್ನು ಮೊರೆಯಿಡುತ್ತಾನೆ.[೧೩೬] ಅವನ ಈ ತಪ್ಪನ್ನು ಮನ್ನಿಸಬೇಕೆಂದು ಚೆನ್ನಬಸವಣ್ಣ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ ಇವರೆಲ್ಲ ಪ್ರಭುವಿನಲ್ಲಿ ಮೆಯ್ಯಿಕ್ಕಿ ಬೇಡಿಕೊಳ್ಳುತ್ತಾರೆ. ಸಾಧಕನನ್ನು ಸಂಕೇತಿಸುವ ಬಸವಣ್ಣನಲ್ಲಿ, ಸದಾಚಾರಗಳನ್ನು ಸಂಕೇತಿಸುವ ಇವರೆಲ್ಲ ಅವನು ಲಿಂಗಮಾರ್ಗದಲ್ಲಿ ಮುನ್ನಡೆಯುವಂತೆ ಮಾಡುವವರೆಂಬುದನ್ನು ನೋಡಿದ್ದೇವೆ. ಗುರುರೂಪದಲ್ಲಿ ಬಂದು ಭಕ್ತರನ್ನು ಉದ್ಧರಿಸುವಂಥವನು ಪರಶಿವನೇ ಆಗಿರುತ್ತಾನೆ. ಅಂತೆಯೇ ಪ್ರಭು ಅವರೆಲ್ಲರಿಗೂ ಏಕಾಂತದಲ್ಲಿ ಶಿವಲಿಂಗ ಭಕ್ತಿಯ ಬೆಡಗನ್ನು ಅರುಹುವುದಾಗಿ ಹೇಳುತ್ತಾನೆ.[೧೩೭] ಸದ್ಭಕ್ತನಲ್ಲಿ ಮೂಲಾಹಂಕಾರವು ಅಂಕುರಿಆ ರೂಪದಲ್ಲಿ ತೋರುತ್ತಿದ್ದರೂ ಸದ್ಗುಣಗಳುಳ್ಳವನಾದ ಅವನು ಬೇಗನೇ ಜಾಗ್ರತನಾಗಿ ಲಿಂಗಮಾರ್ಗದಲ್ಲಿ ಮುನ್ನಡೆಯುತ್ತಾನೆಂಬುದೆ ಇಲ್ಲಿಯ ತಾತ್ಪರ್ಯ.

[illegible]

೧.೧೧ ಭಾವಾಗಮ ಸ್ಥಲ

ಅಂತರಂಗದಲ್ಲಿ ಪರಿಪೂರ್ಣನಾಗಿ ಬದುಕುತ್ತಿದ್ದರೂ ಬಾಹ್ಯದಲ್ಲಿ ಅದರ ಸುಳುಹು ತೋರದಂತೆ ಇರುವುದು ಶರಣಮಾರ್ಗದ ನಿಜವಾದ ಅನುಯಾಯಿಯ ರೀತಿ. ಲಿಂಗಾನುಸಂಧಾನದ ಮಹಾಪ್ರಸಾದವನ್ನು ಹಗಲಿರುಳು ಸೇವಿಸುತ್ತಿದ್ದ ಮರುಳುಶಂಕರದೇವ ಬಸವಣ್ಣನ ಅರಮನೆಯೊಳಗಿದ್ದರೂ ಆಚರಣೆಯ ರಹಸ್ಯವನ್ನು ಕಾಪಾಡಿಕೊಂಡು ಬಂದಿದ್ದವನು[೧೩೮] ಗುರುರೂಪದ ಅಲ್ಲಮಪ್ರಭುವನ್ನು ಕಾಣುತ್ತಲೇ ಪುಳಕಿತಗೊಂಡ ಅವನು ಪ್ರಭುವಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾನೆ.[೧೩೯] ಆಗ ಅವನ ಸ್ಥಿತಿಯನ್ನು ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ ಮತ್ತಿತರ ಶರಣರ ಮುಂದೆ ಪ್ರಕಟಪಡಿಸುತ್ತ ಹಲವು ಯುಗಗಳಲ್ಲಿ ಹಾಗೂ ಹಲವು ಜನ್ಮಗಳಲ್ಲಿ ಸಾಧಿಸಿ ಭೇದಿಸುವ ಶಿವತತ್ತ್ವಾನುಭಾವನೆಯ ಫಲವನ್ನು ಅಲ್ಲಮ ಅವನಿಗೆ ಒಂದೇ ನಿಮಿಷದಲ್ಲಿ ಕರುಣಿಸಿ ನಿಜಪದವಿಯನ್ನು ಕೊಡುತ್ತಾನೆ.[೧೪೦] 'ಅಭಿಮಾನ ಸೋಡಾ ಮುಕ್ತಿ ರೋಖಡಾ'[೧೪೧] ಎಂಬ ಉಕ್ತಿಯಂತೆ ಶರೀರದ ಅಭಿಮಾನವನ್ನು ಬಿಟ್ಟವನು ಪಾವನಚಿತ್ತನಾಗಿರುವುದರಿಂದ ಸಹಜವಾಗಿ ಮೋಕ್ಷವನ್ನು ಪಡೆಯುತ್ತಾನೆನ್ನುವುದು ಇದರರ್ಥ. ಇದನ್ನು ಸಂಕೇತಿಸುವುದಕ್ಕಾಗಿ ಮರುಳುಶಂಕರದೇವನ ಪಾತ್ರವನ್ನು ಸೃಷ್ಟಿಸಿರುವ ಚಾಮರಸ ಅಹಂಕಾರವನ್ನು ಅಂಕುರದ ರೂಪದಲ್ಲಿ ಪಡೆದ ಸಾಧಕರಿಗೆ ಈ ಮೂಲಕ ಎಚ್ಚರಿಕೆ ಕೊಡಬಯಸುತ್ತಾನೆ.

೧.೧೨ ಜ್ಞಾನಾಗಮ ಸ್ಥಲ

ಪ್ರಭುಲಿಂಗಲೀಲೆ ಇಡಿಯಾಗಿ ಶಿವಯೋಗಾಚರಣೆಯ ಪ್ರತಿಮಾರೂಪದ ನಿರೂಪಣೆ ಎಂಬುದನ್ನು ನೋಡಿದ್ದೇವೆ. ಅದರ ವಿವಿಧ ಹಂತಗಳ ನಿರೂಪಣೆಗಾಗಿ ಚಾಮರಸ ಸಾಂಕೇತಿಕ ಪ್ರಸಂಗಗಳನ್ನು ನಿರ್ಮಿಸಿಕೊಂಡು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಲಿಂಗಾನುಸಂಧಾನವನ್ನು ಪ್ರಸ್ತಾಪಿಸಿದ್ದಾನೆ. ಆದರೂ ಅಲ್ಲಮಪ್ರಭುಮಾರ್ಗದ ತಾತ್ತ್ವಿಕ ಚರ್ಚೆಗಾಗಿಯೇ ಕೆಲವು ಗತಿಗಳನ್ನು ಇಡಿಯಾಗಿ ಮೀಸಲಿರಿಸಿದ್ದಾನೆ. ಅವುಗಳಲ್ಲಿ ಇಷ್ಟಲಿಂಗದ ಗತಿಯೂ ಒಂದು.

'ಸಾವನರಿದು ಲೋಕಪ್ರಪಂಚವ ಮರೆದು ಲಿಂಗದಲ್ಲಿಯೇ ನೆನಹು ನೆಲೆಗೊಂಡ ಮಹಾಮಹಿಮಂಗೆ ಮರಣವಿಲ್ಲ' ಎಂಬ ವಿಚಾರವನ್ನು ಒಳಗೊಂಡಿರುವ ಅಲ್ಲಮನ ಒಂದು ವಚನವನ್ನೂ

[illegible]

ಈ ಗತಿಗೆ ಆಧಾರವಾಗಿ ಬಳಸಿದ್ದಾನೆ ಚಾಮರಸ. ಕರದಿಷ್ಟಲಿಂಗವು ಶರೀರದ ಒಳಗಿದೆ.[೧೪೨] ಈ ಕರದಿಷ್ಟಲಿಂಗವನ್ನು ಪೂಜಿಸುತ್ತ ಸಾಗಿ ಪ್ರಾಣಲಿಂಗವನ್ನು ಹಾಗೂ ಭಾವಲಿಂಗವನ್ನು ಪೂಜಿಸುವವನು ಮರಣವನ್ನು ಗೆಲ್ಲುತ್ತಾನೆ. ಹೀಗೆ ಇಷ್ಟಲಿಂಗೋಪಾಸನೆಯ ತಾತ್ತ್ವಿಕ ನಿರೂಪಣೆಯನ್ನು ಕೈಗೆತ್ತಿಕೊಳ್ಳುವುದು ಈ ಗತಿಯ ಉದ್ದೇಶ. ಗುರುವನ್ನು ಸಂಕೇತಿಸುವ ಅಲ್ಲಮ ಸಾಧಕ ಭಕ್ತನನ್ನು ಸಂಕೇತಿಸುವ ಬಸವಣ್ಣನ ಸಂಶಯಗಳನ್ನು ನಿವಾರಿಸುವ ಕ್ರಮವಾಗಿ ಈ ಗತಿಯು ರೂಪುಗೊಂಡಿದೆ.

ಲಿಂಗಾನುಸಂಧಾನವು ಮರುಳು ಕಂಡ ಕನಸಿನಂತೆ ಇರುವುದು.[೧೪೩] ಮಾನವ ದೇಹವು ಪುಣ್ಯ-ಪಾಪಗಳನ್ನು ಗಳಿಸಿ ಕೊಡುವುದರಿಂದ ಅದನ್ನು ಸಾಧನ ಮಾಡಿಕೊಂಡು, ಎಚ್ಚತ್ತು ತನ್ನನ್ನು ತಾನು ತಿಳಿದುಕೊಳ್ಳಬೇಕು.[೧೪೪] ಶರೀರ ಸದೃಢವಾಗಿರುವಾಗಲೇ ಕಾಲನನ್ನು ನಿವಾರಿಸಿ ಮೇಲುಗತಿಯನ್ನು ಅರಸುವವನು ಜಾಣನೆನಿಸುತ್ತಾನೆ.[೧೪೫] ಅಂತರಂಗ-ಬಹಿರಂಗಗಳನ್ನು ಒಂದು ಮಾಡುತ್ತ ಲಿಂಗಕ್ಕೆ ಸ್ಥೂಲ-ಸೂಕ್ಷ್ಮ ಕಾರಣ ತನುಗಳನ್ನು ವಸ್ತ್ರಗಳನ್ನಾಗಿಸಬೇಕು.[೧೪೬] ಇಷ್ಟಲಿಂಗವೇ ಪ್ರಾಣಸ್ವರೂಪವಾಗಿ ಅವು ಪರಸ್ಪರ ಅಗಲದಂತಿರಬೇಕು.[೧೪೭] ಪಂಚೇದ್ರಿಯಗಳನ್ನು ಹಾಗೂ ಕರಣಾದಿಗಳನ್ನು ಲಿಂಗದ ತೃಪ್ತಿಗಾಗಿ ಮಾತ್ರ ಬಳಸಬೇಕು.[೧೪೮] ಹೀಗೆ ಗುರು ಕರುಣಿಸಿದ ಇಷ್ಟಲಿಂಗವು ಸಮಾಧಿಯಲ್ಲಿ ಫಲಿಸುತ್ತ ಹೋದಂತೆ ಬಾಹ್ಯದಲ್ಲಿ ತೋರುವ ಗುರುಲಿಂಗಜಂಗಮವು ಉತ್ಕೃಷ್ಟವಾಗಿ ಒಳಗೆ ತೋರತೊಡಗುತ್ತದೆ.[೧೪೯] ಇಷ್ಟಲಿಂಗವನ್ನು ನಿಮಿತ್ತ ಮಾಡಿಕೊಂಡು ಹೃದಯದೊಳಗೆ ಪ್ರಾಣಲಿಂಗದ ಹದನವನ್ನರಿತು ಸಚ್ಚಿದಾನಂದದಲ್ಲಿ ನಿಲ್ಲುವುದೇ ವೀರಶೈವಾಚಾರದ ಅಂತಿಮ ಗುರಿ.[೧೫೦] ಪಂಚೇಂದ್ರಿಯಗಳಲ್ಲಿ ಬದುಕುವ ಭವವಿಕಾರಿಗಳಿಗೆ, ಶೀಲಗಳ ಶೂಲಕ್ಕೆ ಸಿಕ್ಕು ಒದ್ದಾಡುತ್ತ ಸಂಕಲ್ಪ ವಿಕಲ್ಪಗಳ ಕಿಚ್ಚಿನಲ್ಲಿ ಉರಿಯುವವರಿಗೆ ಲಿಂಗಭಕ್ತಿ ಮೂಡುವುದು ಸಾಧ್ಯವಿಲ್ಲ.[೧೫೧] ಹಸಿವು, ತೃಷೆ, ನಿದ್ರೆ ಮುಂತಾದವುಗಳನ್ನು ಇಲ್ಲವಾಗಿಸಿ ಸದಾಕಾಲವೂ ಲಿಂಗಧ್ಯಾನದಲ್ಲಿರುವವರಿಗೆ ಮಾತ್ರ ಭಕ್ತಿ ಸಾಧಿಸುತ್ತದೆ.[೧೫೨] ಹೀಗೆ ಸಾಧನೆಯು ಮುಂದುವರೆದಂತೆ ತನು-ಮನಗಳ ಮೇಲಿನ ಆಸೆ ಹಿಂಗುತ್ತದೆ.[೧೫೩] ಬ್ರಹ್ಮಾಂಡದಲ್ಲಿರುವ ಪ್ರತಿಯೊಂದೂ ಲಿಂಗದ ಅಧೀನಕ್ಕೆ ಒಳಪಡುವಂಥವು[೧೫೪] ಹೀಗಿರುವಾಗ ತನು-ಮನ-ಧನಗಳನ್ನು ಗುರುವಿಗೆ ಕೊಟ್ಟೆನೆನ್ನುವುದೂ ಅಪರಾಧವಾಗುತ್ತದೆ.[೧೫೫] ಕೋಲು ಹಿಡಿದು ಅಭ್ಯಾಸವಾದ ನಂತರ ರಣರಂಗದಲ್ಲಿ ಆಯುಧ ಹಿಡಿದು ಹೋರಾಡುತ್ತ ಶತ್ರುಗಳನ್ನು ಸೋಲಿಸುವಂತೆ ಇಷ್ಟಲಿಂಗಾಚರಣೆಯ ರಹಸ್ಯವನ್ನು ತಿಳಿದು ಭಕ್ತಿಯನ್ನು ಮಾಡಬೇಕು.[೧೫೬] ಕಾರ್ಯಕಾರಣ ಸಂಬಂಧದಿಂದಾಗಿಯೇ ಭೂಮಿಯಲ್ಲಿ ಜನ್ಮ

[illegible]

[illegible]

ತಾಳಬೇಕಾಗುತ್ತದಾದ್ದರಿಂದ ಸುಳ್ಳು ಮಾಯೆಯನ್ನು ಸುಳ್ಳು ಮಾಡಿ ತೋರಿಸುವವನೇ ನಿಜವಾದ ವೀರಶೈವಾಚಾರಿ ಎನಿಸುತ್ತಾನೆ.[೧೫೭]

೧.೧೩ ಭಾವಾರ್ಪಿತ ಸ್ಥಲ

ಮಾಯಾರೂಪದ ತಮೋಗುಣದವರಿಗೆ ಲಿಂಗದೀಕ್ಷೆ ಸಾಧ್ಯವಿಲ್ಲವೆಂದೂ ಸಾತ್ವಿಕ ಗುಣದವರಿಗೆ ಮಾತ್ರ ಸಾಧ್ಯವೆಂದೂ ತಿಳಿಸುತ್ತ ಈ ದೀಕ್ಷೆಗೆ ಪಾತ್ರವಾದ ಜೀವಿಯನ್ನು ಅಕ್ಕಮಹಾದೇವಿ ಸಂಕೇತಿಸುತ್ತಾಳೆಂಬುದನ್ನು ನೋಡಿದ್ದೇವೆ. 'ಮಹಾದೇವಿಯಕ್ಕನಿಗೆ ಪ್ರಭು ಪ್ರಸನ್ನವಾದ ಗತಿ'ಯಲ್ಲಿ ದಟ್ಟೈಸಿಕೊಂಡಿರುವ ಸಂಕೇತಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಸಂಯೋಜಿಸುವ ಚಾಮರಸ ಚಾರಿತ್ರಿಕ ಸ್ಪರ್ಶ ಕೊಡುವುದರಿಂದಾಗಿ ಅದನ್ನು ಆಕರ್ಷಕವಾಗಿ ರೂಪುಗೊಳಿಸಿದ್ದಾನೆ.

ಸತಿಯ ರೂಪದಲ್ಲಿ ಜನಿಸುವ ಮಾನವಜೀವಿ ಕರ್ಮವೆಂಬ ಗಂಡನೊಂದಿಗೆ ಮರಣಪರ್ಯಂತ ಬದುಕಬೇಕಾಗುತ್ತದೆ.[೧೫೮] ಈ ಗಂಡನಿಂದ ದೂರವಾಗಬೇಕಾದರೆ ಸದ್ಗುರುವಿನಿಂದ ದೀಕ್ಷೆ ಪಡೆದು ಧ್ಯಾನಾವಸ್ಥೆಯಲ್ಲಿ ಕ್ರಮಿಸಿ ಶಿವನೊಡನೆ ಅನುಭಾವ ಕಲಿಯಬೇಕಾಗುತ್ತದೆ. ಹೀಗೆ ಕರ್ಮವೆಂಬ ಗಂಡನ ಬಾಯಿ ತಿವಿದು ಪರಮಾತ್ಮನನ್ನು ಶಾಶ್ವತ ಗಂಡನನ್ನಾಗಿ ಮಾಡಿಕೊಂಡಾಗ ಅದು ಪರಮೈಕ್ಯ. 'ನೀನು ನಾನೆಂಬುಭಯ ಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ಮೆಟ್ಟಿ ತುಟ್ಟ ತುದಿಯ ಬಯಲನ್ನು' ಕೂಡಿದಂತೆ.[೧೫೯] ವೀರಶೈವಾಚಾರದ ಈ ಹಂತವನ್ನು ನಿರೂಪಿಸಲು ಚಾಮರಸ ಪ್ರಸ್ತುತ ಗತಿಯನ್ನು ಆಯ್ದುಕೊಂಡಿದ್ದಾನೆ.

'ಮಹದೇವಿಯಕ್ಕನ ಗತಿ' ಯಲ್ಲಿ ಅಕ್ಕ ಕರ್ಮರೂಪದ ಗಂಡನನ್ನು ತೊರೆಯುವುದನ್ನು ನೋಡಿದ್ದೇವೆ. ಅಲ್ಲಮನು ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ ಇವರಿಗೆಲ್ಲ ಇಷ್ಟಲಿಂಗದ ಉಪದೇಶವನ್ನು ಮಾಡಿ ಅವರು ಸಾಧನೆಯ ದಾರಿಯಲ್ಲಿ ಕಾಲಿಡುವಂತೆ ಮಾಡಿದರೆ ಇಲ್ಲಿ ಅಕ್ಕಮಹಾದೇವಿಯು ಅನುಸಂಧಾನದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಿ ಐಕ್ಯಪದವಿಗಾಗಿರುವ ಭಾವಲಿಂಗದ ಉಪದೇಶವನ್ನು ಮಾಡುತ್ತಾನೆ. ಸ್ಥೂಲ, ಸೂಕ್ಷ್ಮ, ಕಾರಣ ತನುಗಳ ಬಂಧನ ಕ್ರಮವಾಗಿ ಕಳಚಬೇಕಾದ ಉಪದೇಶವು ಮೂರು ಹಂತದ್ದಾಗಿರುತ್ತದೆಂಬುದನ್ನು ನೋಡಿದ್ದೇವೆ. ಉಳಿದವರಲ್ಲಿ ಅಲ್ಲಮನ ಉಪದೇಶವು ಸ್ಥೂಲತನುವಿನ ಬಂಧನವನ್ನು ಕಳಚುವುದಾಗಿದ್ದರೆ ಅಕ್ಕಮಹಾದೇವಿಯಲ್ಲಿ ಅದು

ಕಾರಣ ತನುವಿನ ಬಂಧನವನ್ನು ಕಳಚಿ 'ಜೀವಪರಮರನು ಅನುಗೊಳಿಸಿ ನಿರ್ವಯಲ ಮಾಡುವ' ಉಪದೇಶವಾಗಿದೆ.

ಎನುತಲಾ ಮಹದೇವಿಯಕ್ಕನಿಗೆ
ತನುಮನೋವಾಯುಗಳ ಸಂಚವ
ನನಲನಲಿ ಸಲೆ ಸುಡುವ ಸುಮತಿಯ ಜೀವಪರಮರನು ।
ಅನುಗೊಳಿಸಿ ನಿರ್ವಯಲ ಮಾಡುವ
ನೆನಹಿಸುಪದೇಶವನು ಮಾಡಿದ
ನನುಪಮೋಪಮ ಸಗುಣ ನಿರ್ಗುಣ ಗುರು ಗುಹೇಶ್ವರನು ॥ [೧೬೦]

ಹೀಗೆ ಅಕ್ಕಮಹಾದೇವಿ ಸಾಧನೆಯ ಉನ್ನತ ಮಟ್ಟದಲ್ಲಿರುವುದನ್ನು ಪರೀಕ್ಷಿಸುವ ರೂಪದಲ್ಲಿ ಈ ಗತಿಯನ್ನು ನೋಡಬೇಕು.

ಉಳಿದವರಂತೆ ಅಕ್ಕಮಹದೇವಿ ಅಲ್ಲಮನನ್ನು ಗುರುತಿಸದೇ ಇರುವುದಾಗಲಿ, ಅಹಂಕಾರದಿಂದ ವರ್ತಿಸುವುದನ್ನಾಗಲಿ ಮಾಡದೆ 'ಮನವೆಂಬ ತುಂಬಿಯ ಭಾವ ತುಂಬಿ ಅದು ಸಂಪಿಗೆಯ ಬಳಿಗೆ ಬರುವಂತೆ' ಅಲ್ಲಮನಿದ್ದೆಡೆಗೆ ಬರುತ್ತಾಳೆ.[೧೬೧] ಅವಳು ಮೆಯ್ಯಿಕ್ಕಿ ನಮಸ್ಕರಿಸುವಾಗ 'ಭಕ್ತಿಯ ಗೂಡು ಎನ್ನುವಂತೆ' ಅವನಿಗೆ ಕಾಣಿಸುತ್ತಾಳೆ.[೧೬೨] ಜೀವಪರಮರ ಐಕ್ಯದ ಉಪದೇಶಕ್ಕಾಗಿ ಅವಳು ಭಾವಬೆತ್ತಲೆ ಮಾಡಿಕೊಂಡು ಬರುವುದನ್ನು ಅಲ್ಲಮ ಬಸವಣ್ಣನಿಗೆ ತೋರಿಸುತ್ತಾನೆ.[೧೬೩] ಅವಳು ಡಂಭಕರಂತೆ ವೈರಾಗ್ಯದ ವೇಷದಲ್ಲಿರುವಳೋ ಇಲ್ಲವೆ ನಿಜವಾಗಿಯೂ ಅನುಸಂಧಾನದ ಸಾಧನೆಯಲ್ಲಿ ತೊಡಗಿರುವಳೋ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಮಾರ್ಗಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಅವಳಿಗೆ ಹಾಕುತ್ತಾನೆ. ದೀಕ್ಷಾಗುರು ಭಕ್ತನನ್ನು ಪರೀಕ್ಷಿಸುವುದು ಇದೇ ಕ್ರಮದಲ್ಲಿ.

ಅಲ್ಲಮನ ಮೊದಲ ವಿಚಾರವೆಂದರೆ ಅವಳು ಬೆತ್ತಲೆಯಾಗಿರುವುದರಿಂದ ಶರಣರು ಚಿತ್ತದಲ್ಲಿ ಕೆರಳುವಂತಾಗಬಾರದೆಂಬುದು. ಅಂದರೆ ಬ್ರಹ್ಮವನ್ನು ತಿಳಿದವನು ಅದನ್ನು ಬಹಿರಂಗವಾಗಿ ಪ್ರಕಟಿಸಬೇಕಾಗಿಲ್ಲ, ಅದು ಆಚಾರದಲ್ಲಿ ತೋರಬೇಕು. ವಾಗದ್ವೈತವನ್ನು ಶರಣರು ಪುರಸ್ಕರಿಸುವುದಿಲ್ಲ ಎಂಬ ಧ್ವನಿ ಇಲ್ಲಿ ಹೊರಡುತ್ತದೆ.[೧೬೪] ಆದಕ್ಕೆ ಅಕ್ಕಮಹಾದೇವಿಯ ಉತ್ತರವೆಂದರೆ 'ಶಿವಕಾಮಿಯಾದ ತಾನು ಸತಿಕಾಮಿಯಲ್ಲ, ಅಂದರೆ ಪಂಚೇಂದ್ರಿಯಗಳಿಗಾಗಿ ಬದುಕುವವಳಲ್ಲ'ಎಂದು.[೧೬೫] ಬರಿಯ

[illegible]

[illegible]

[illegible]

[illegible]

[illegible]

[illegible]

ಮಾತಿನಿಂದ ಶಿವನನ್ನು ಒಲಿಸುವುದಕ್ಕಾಗುವುದಿಲ್ಲ ಎಂದು ಅಲ್ಲಮ ನುಡಿದರೆ ರೂಪು ಹಿಡಿದೇ ನಿರೂಪವನ್ನು ಬೆರೆಯುವ ಭೇದವನ್ನು ಅರಿಯಬೇಕು ಅಂದರೆ ವೀರಶೈವಾಚಾರಮಾರ್ಗವನ್ನು ಅರಿಯುವುದಕ್ಕೆ ಭೌತಿಕ ಶರೀರವನ್ನು ಸಾಧನ ಮಾಡಿಕೊಳ್ಳಬೇಕು ಎಂದು ತಿಳಿಸುತ್ತಾಳೆ.[೧೬೬] ತನ್ನನ್ನು ತಿಳಿಯುತ್ತೇನೆನ್ನುವವರಿಂದ ದೂರ ಸರಿಯುವುದಾಗಿಯೂ ದೂರವಿರುತ್ತೇನೆನ್ನುವವರಿಗೆ ತಾನು ಸಮೀಪದಲ್ಲಿರುವುದಾಗಿಯೂ ಅಲ್ಲಮ ತಿಳಿಸುತ್ತಾನೆ. ಇಷ್ಟೆಲ್ಲ ಶರಣ ಶರಣೆಯರ ಮಾರ್ಗದರ್ಶನವಿರುವಾಗ ತಾನು ಲಿಂಗಮಾರ್ಗದಲ್ಲಿ ಸಾಗುವುದು ಸಹಜವೆನ್ನುತ್ತಾಳೆ ಅಕ್ಕಮಹಾದೇವಿ.[೧೬೭] ಅವಳು ಶರೀರದಾಸೆಯನ್ನು ತೊರೆದಿರುವುದು ಗೊತ್ತಾಗುತ್ತದೆಂದು ಶರಣ ಬಳಗ ತಿಳಿಸಿದರೆ ಅವರಿಂದಲೇ ತಾನು ಶುಚಿಯಾಗಿರುವುದಾಗಿ ಅಕ್ಕ ತಿಳಿಸುತ್ತಾಳೆ.[೧೬೮] ಹೀಗೆ ಅವಳ ಚಿತ್ತ ನಿರ್ಮಲವಾಗಿರುವುದನ್ನು ಅರಿತ ಅಲ್ಲಮ ಆಯತ–ಸ್ವಾಯತ–ಸನ್ನಿಹಿತ ಕ್ರಮಕ್ಕೆ ಅವಳು ಸಿದ್ಧಳಾಗಿರುವಳೆಂದೂ ಅವಳದು ವಾಗದ್ವೈತ ಭಕ್ತಿಯಲ್ಲವೆಂದೂ ತಿಳಿಸುತ್ತಾನೆ. ಅವಳಲ್ಲಿ ಭಾವಲಿಂಗದ ಶಿವತತ್ತ್ವಬೀಜವನ್ನು ಹೂಳಿದರೆ ಫಲ ನಿಶ್ಚಿತವೆಂದು ಹೇಳುತ್ತಾನೆ.[೧೬೯] ಕಾಯದ ಕದಳಿಯನ್ನು ಗೆಲಿದು ಅವಳು ಮುಕ್ತಿಯನ್ನು ಅರಿಯಬೇಕೆಂದು ಹೇಳುತ್ತ ಪರುಷ ಮುಟ್ಟಿದ ಕಬ್ಬಿಣವು ತತ್ಷ್ಣವೇ ಹೊನ್ನಾಗುವಂತೆ ಒಂದೇ ನಿಮಿಷದಲ್ಲಿ ಅವಳು ನಿತ್ಯ ನಿರ್ಮಳ ಗಿರಿಯಾದ ಪರಶಿವನ ಸಾನ್ನಿಧ್ಯಕ್ಕೆ ಮನಸ್ಸಿನಲ್ಲಿಯೇ ಗಮಿಸಿದಳೆಂದು ತಿಳಿಸುತ್ತಾನೆ ಚಾಮರಸ.

ಪರುಷ ಮುಟ್ಟಲು ಮುಂದೆ ಕಬ್ಬುನ
ವರುಷದಲಿ ಹೊನ್ನಹುದೆ ನಿಮಿಷಕೆ
ಗುರುನಿರೂಪಜ್ಞಾನ ಜ್ಯೋತಿಪ್ರಭೆ ಪ್ರಕಾಶಿಸಲು ।
ಹರಿದುದಾಗಳೆ ಸಂದ ಸಂಶಯ
ನೆರವಿಗತ್ತಲೆ ನಿತ್ಯ ನಿರ್ಮಳ
ಗಿರಿಯ ಗಹನಕೆ ಗಮಿಸಿದಳು ಮಹದೇವಿ ಮನದೊಳಗೆ ॥ [೧೭೦]

ಹಡಪದ ಅಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ ವಚನವೊಂದು ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.[೧೭೧] ಹೀಗೆ ಅಂತಿಮ ಹಂತದಲ್ಲಿರುವ ಸಾಧಕನನ್ನು ಪರೀಕ್ಷಿಸುವ ದೀಕ್ಷಾಗುರು ಅವನನ್ನು ಪರಿಪೂರ್ಣಾವಸ್ಥೆಗೆ ಏರಿಸುವುದನ್ನು ನಿರೂಪಿಸುವ ಪ್ರತಿಮೆಯಾಗಿ ಈ ಗತಿಯು ಚಾಮರಸನ ಕಾವ್ಯಕುಲುಮೆಯಲ್ಲಿ ಎರಕ ಹೊಯ್ಯಲ್ಪಟ್ಟಿದೆ.

[illegible]

[illegible]

[illegible]

[illegible]

೧.೧೪ ಸೇವ್ಯಸ್ಥಲ

ವೀರಶೈವಾಚಾರಮಾರ್ಗದ ನೇರ ಚರ್ಚೆಗಾಗಿ ಚಾಮರಸ ಇಷ್ಟಲಿಂಗದ ಗತಿಯನ್ನು ಬಳಸಿ ಕೊಂಡಿದ್ದಾನೆಂಬುದನ್ನು ನೋಡಿದ್ದೇವೆ. ಸಾಧಕಾಂಗದ ಗತಿಯನ್ನೂ ಕವಿ ಆ ಉದ್ದೇಶಕ್ಕಾಗಿ ಬಳಸಿದ್ದಾನೆ. ಇದು 'ಪ್ರಾಣಲಿಂಗದ ಗತಿ'ಯೇ ಹೌದು. ಇಷ್ಟಲಿಂಗದ ಗತಿಯಲ್ಲಿ ಬಾಹ್ಯ ಪರಿಕರಗಳನ್ನು ಎತ್ತಿಕೊಂಡು ಯೋಗಾಚರಣೆಯ ಪ್ರಾರಂಭದ ಹಂತದ ತಾತ್ವಿಕ ಚರ್ಚೆಯನ್ನು ಮಾಡಿದ್ದರೆ ಪ್ರಸ್ತುತ ಗತಿಯಲ್ಲಿ ಪ್ರಾಣಲಿಂಗಾಚರಣೆಯ ವಿವಿಧ ಅಂಶಗಳನ್ನು ಚರ್ಚಿಸಿದ್ದಾನೆ ಹಾಗೂ ಅಲ್ಲಲ್ಲಿ ರಹಸ್ಯ ಅಂಶಗಳನ್ನು ಸ್ಪರ್ಶಿಸಿದ್ದಾನೆ.

ಇಷ್ಟಲಿಂಗದ ಗತಿಯಂತೆಯೇ ಇಲ್ಲಿಯೂ ಗುರುರೂಪದ ಅಲ್ಲಮ ಸಾಧಕ ರೂಪದ ಬಸವಣ್ಣನಿಗೆ 'ಕಾಯದ ಕೀಲನರಿಯುವ' ವಿಷಯವನ್ನು ಚರ್ಚಿಸುತ್ತಾನೆ. ಪ್ರಾಣಲಿಂಗದ ಕಡೆಗೆ ಮನವು ಹೆಚ್ಚೆಚ್ಚು ಆಕರ್ಷಿತವಾದರೆ ಮಾಯೆಯ ರಭಸವೆಲ್ಲ ನಿಂತು ಹೋಗುತ್ತದೆ.[೧೭೫] ಧ್ಯಾನಮಾರ್ಗದಿಂದ ಭಕ್ತಿಯ ದ್ವಾರವನ್ನು ಪ್ರವೇಶಿಸಿದರೆ ಪರಶಿವನನ್ನು ಅರಿಯಲು ಸಾಧ್ಯವಾಗುತ್ತದೆ ಬಹಿರಂಗದ ಆಚಾರಗಳನ್ನು ತಟಸ್ಥಗೊಳಿಸುತ್ತ ದಶನಾಡಿಗಳ ವ್ಯವಹಾರವನ್ನು ನೀಗಿದರೆ ಸಿದ್ಧಿಯನ್ನು ಪಡೆಯಬಹುದು.[೧೭೬] ಉಸಿರನ್ನೇ ಗರಗಸ ಮಾಡಿಕೊಂಡು ತನುವಿನ ಬೆಸುಗೆಯನ್ನು ಬಿಡಸಬೇಕು.[೧೭೭] ಸಾಧಕನು ಅಂತರಂಗದಲ್ಲಿ ಕಂಡುಂಡ ಅನುಭವವನ್ನು ವೇದಶಾಸ್ತ್ರಗಳ ಮುಖಾಂತರ ಅರಿಯುವುದು ಸಾಧ್ಯವಿಲ್ಲ[೧೭೮] ಸಾಧಕನ ಅಂತರಂಗಲ್ಲಿದರುವ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ ಮುಂತಾದವುಗಳನ್ನು ಅಂತರಂಗದ ಒಳಹೊಕ್ಕು ಅರಿಯಬೇಕು.[೧೭೯] ರೋಗರುಜಿನಗಳನ್ನು ಪರಿಹರಿಸಿಕೊಂಡು, ಸ್ತುತಿ–ನಿಂದೆಗಳನ್ನು ಸಮನಾಗಿ ಸ್ವೀಕರಿಸುತ್ತ ಪಂಚೇಂದ್ರಿಯಗಳ ಮುಖಾಂತರ ಹರಿಯುವ ಮನಸ್ಸನ್ನು ಕಟ್ಟುತ್ತ ಸಮಾಧಿಯಲ್ಲಿ ನಿಲ್ಲಬೇಕು.[೧೮೦] ಕುದುರೆ ಹತ್ತುವುದಕ್ಕೆ ಸುಲಭವಾಗಲು ಕಡಿವಾಣ ಹಿಡಿಯುವಂತೆ ಸಂಚರಿಸುತ್ತಿರುವ ಮನಸ್ಸನ್ನು ಲಯಿಸುವುದರಿಂದ ಮೋಕ್ಷದ ದಾರಿಯಲ್ಲಿ ಸಾಗುವುದು ಸುಲಭ.

ವಾರುವನನೇಱುವೊಡೆ ವಾಘೆಯ
ದಾರವನು ಹಿಡಿದಲ್ಲದಾಗದು
ದೀರತನದಲಿ ಸಂಚರಿಸುತಿಹ ಮನವ ನಿಲಿಸುವೊಡೆ ।

[illegible]

[illegible]

[illegible]

[illegible]

[illegible]

[illegible]

ಮಾರುತನ ಗತಿಗೆಡಿಸಿ ಕಾಯದ

ಕಾರಣವನಱಿದಲ್ಲದಾಗದು

ವೀರಶೈವದ ಬಟ್ಟೆಯಿದು ಬಸವಣ್ಣ ಕೇಳೆಂದ ॥ [೧೭೯]

ಇದನ್ನೇ ನಿಜಗುಣ ಶಿವಯೋಗಿ 'ಆಸನ ಸ್ಥಿರವಾಗಿ ಮನವಸುವೆರೆದಕ್ಷಿ ನಾಸಾಗ್ರದಲ್ಲಿ ನಿಂದೊಡೆ ಮುಕ್ತಿ' ಎಂದು ಹೇಳಿರುವುದು.[೧೮೦] ಮಾಯಾರೂಪದ ಮನಸ್ಸೇ ವಾಯುವಾಗಿರುವುದರಿಂದ ಪ್ರಾಣಾಯಾಮ ಕ್ರಿಯೆಯಿಂದ ಅದನ್ನು ನಿಗ್ರಹಿಸಬೇಕು.[೧೮೧] ಹೀಗೆ ಪ್ರಾಣವನ್ನು ನಿಗ್ರಹಿಸಿದರೆ ಪ್ರಪಂಚದ ಪ್ರತಿಯೊಂದು ಶಕ್ತಿ ಕೈವಶವಾಗುತ್ತದೆಂಬುದನ್ನು ಯೋಗ ದರ್ಶನದಲ್ಲಿ ನೋಡಿದ್ದನ್ನು ಕೆಳಗಿನ ಪದ್ಯವು ತಿಳಿಸುತ್ತದೆ.

ಹೇಳುವೊಡೆ ಮನವೆಂಬ ಹಕ್ಕಿಗೆ

ಕಾಲುಗಳೆಲ್ಕೆ ತೊಳಲುತಿಹ ಕ

ಣ್ಣಾಲಿಗಳು ದಿಟವದಕೆ ಪಕ್ಕಗಳೀಡೆ ಪಿಂಗಳದ ।

ಗಾಳಿಯಾಗಿಹುದಂತು ಕಾರಣ

ವಾಲಿಯೇ ಸಾಧನಕೆ ಸಾಧನ

ಮೂಲವನು ನಿಲಿಸುವನೆ ಭಕ್ತನು ಬಸವ ಕೇಳೆಂದ ॥ [೧೮೨]

ಇಲ್ಲಿ ಸಾಧನ ಶಬ್ದವು ಶ್ಲೇಷದಲ್ಲಿ ಬಳಕೆಯಾಗಿದ್ದು ಮೊದಲರ್ಥ 'ಯೋಗಾಸಾಧನೆ' ಎಂದಾಗುತ್ತಿದ್ದರೆ ಎರಡನೆಯ ಅರ್ಥ 'ಸಾಧನ' (means) ಎಂದಾಗುತ್ತದೆ.

ಸಂಚರಿಸುವ ಮನಸ್ಸನ್ನು ನಿಲ್ಲಿಸಿದಾಗ ಏನಾಗುತ್ತದೆ? ಇದೀಗ ನೋಡಿರುವಂತೆ ಉಸಿರು, ಮನಸ್ಸು, ದೃಷ್ಟಿ ಇವುಗಳನ್ನು ಯೋಗಮಾರ್ಗಕ್ಕೆ ಸಮನ್ವಯಗೊಳಿಸಿದಾಗ ಅಂಗುಷ್ಠ ಪರಿಮಾಣದ ಬಿಂದು ತೋರುತ್ತದೆ.

ನೇತ್ರಾಧಾರಂ ಷೋಡಶಂ ತು ತದೂರ್ಧ್ವಂ ಚಾಲಯೇದ್ಬುಧಃ

ಜ್ಯೋತಿಃ ಪುಂಜಮಪಾಂಗೇ ತತ್ಪಶ್ಯತಿ ಕ್ಷಿಪ್ರಕ್ಷಿಪ್ರಮೇವ ಹಿ ॥ [೧೮೩]

ಇದನ್ನು ಚಾಮರಸನ ಒಡಮೂಡಿಸಿರುವುದು ಹೀಗೆ –

ಆಲಿ ನಿಂದೊಡೆ ಸುಳಿದು ಸೂಸುವ

ಗಾಳಿ ನಿಲುವುದು ಗಾಳಿ ನಿಲೆ ಮನ

ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು ॥ [೧೮೪]

ಧ್ಯಾನದಲ್ಲಿ ಊರ್ಧ್ವಮುಖಿಯಾದರೆ ದೃಷ್ಟಿ ಸ್ಥಿರವಾಗುತ್ತದೆ. ಆಗ ಕುಂಭಕದಿಂದಾಗಿ ಉಸಿರಾಟ ತಟಸ್ಥವಾಗುತ್ತದೆ. ಇವುಗಳಿಂದಾಗಿ ಮನಸ್ಸು ತಟಸ್ಥಗೊಂಡು ಅಂಗುಷ್ಠ ಪರಿಮಾಣದ ಬಿಂದು ತೋರತೊಡಗುತ್ತದೆ. ಹೀಗೆ ಕಾಲಕರ್ಮಗಳನ್ನು ಗೆದ್ದು ನಿಂತಾಗ ಮಾತ್ರ ನಾಮ-ರೂಪು-ಕ್ರಿಯಾ ಗುಣಗಳ ಮಾಯೆ ಹೇಳಹೆಸರಿಲ್ಲದಂತಾಗುತ್ತದೆ.

ಲಯವಿಕ್ಷೇಪರಹಿತಂ ಮನಃ ಕೃತ್ವಾ ಸುನಿಶ್ಚಲಂ
ಯದಾ ಯಾತ್ಯುನ್ಮನೀಭಾವಂ ತದಾತತ್ಪರಮಂ ಪದಂ
ಏತಾದ್ಜ್ಞಾನಂ ಚ ಮೋಕ್ಷಕ್ಕೆ ಮೋಕ್ಷಶ್ಚ ಶೇಷಾಸ್ತು ಗ್ರಂಥವಿಸ್ತರಾಃ ॥ ೧೮೫

ಅಂಗವ್ಯಾಪಾರದಿಂದ ದೂರವಾಗಿ ಲಿಂಗವ್ಯಾಪಾರದಲ್ಲಿ ಮುಂದುವರೆಯಬೇಕು. ಪಂಚವಿಂಶತಿ ತತ್ತ್ವಗಳನ್ನೆಲ್ಲ ಆತ್ಮತತ್ತ್ವದಲ್ಲಿ ಇಳಿಸಬೇಕು. ಈ ರೀತಿಯಾಗಿ ನವಚಕ್ರಮಾರ್ಗದಲ್ಲಿ ಸಾಗಿದಾಗ ಅಜ-ಹರಿ-ರುದ್ರ-ಈಶ ಶಿವಾತ್ಮ ತತ್ತ್ವಗಳು ಕಲೆಗಳ ರೂಪದಲ್ಲಿ ತೋರುತ್ತವೆ.[೧೮೬] ಬ್ರಹ್ಮರಂಧ್ರದಲ್ಲಿ ದೃಷ್ಟಿ ಇಟ್ಟಾಗ ಶಿವಲಿಂಗವು ಕಾಣುತ್ತದೆ.[೧೮೭] ಜಂಗಮ ಮುಖದಿಂದ ಒಕ್ಕು ಮಿಕ್ಕ ಪ್ರಸಾದವನ್ನು ಮನಸ್ಸಿನಲ್ಲಿ ಉಂಡಾಗ ಪರಮಾನಂದ ಪದ ಪ್ರಾಪ್ತವಾಗುತ್ತದೆ.[೧೮೮] ಆಗ ಅವನು ಪರಕ್ಕೆ ಪರತನಾಗಿ ಪರಶಿವನಲ್ಲಿ ಬೆರೆಯುವಂತಾಗುತ್ತದೆ. ೧೮೯ ಹೀಗೆ ತನ್ನನ್ನು ತಾನೇ ಅರಿತು ತಾನೇ ತಾನಾಗಿ ನಿಲ್ಲುವವನು ಪರಶಿವನಿಗೆ ನೆಚ್ಚಿನ ಭಕ್ತನೆನಿಸುತ್ತಾನೆ.[೧೯೦] ಈ ಸ್ಥಿತಿಯನ್ನು ಸಾಧಕ ತಲುಪಿದರೆ ಪರಶಿವನು ತಾನಾಗಿಯೇ ಅವನನ್ನು ತನ್ನಲ್ಲಿ ಒಳಗೊಳ್ಳುತ್ತಾನೆ.[೧೯೧]

ಹೀಗೆ ಸಾಧಕ ತನ್ನಂತರಂಗದಲ್ಲಿ ಅನುಭವಿಸುವ ಪ್ರಾಣಲಿಂಗದ ಆಚರಣೆಯನ್ನು ಚಾಮರಸ ಇಲ್ಲಿ ನಿರೂಪಿಸಿದ್ದಾನೆ.

೧.೧೫ ಜ್ಞಾನನಿಷ್ಪತ್ತಿ ಸ್ಥಲ

ಗೋರಕ್ಷನ ಗತಿಯೂ ಕಥನರೂಪದಲ್ಲಿ ಸಾಗುತ್ತದೆ. ಹಠಯೋಗಿಯನ್ನು ಸಂಕೇತಿಸುವ ಗೋರಕ್ಷ ಶಾರೀರಿಕ ಸಾಧನೆಗೆ ಗರಿಷ್ಠ ಮಹತ್ವ ಕೊಟ್ಟವನು. ಹೀಗೆ 'ಶರೀರವೇ ಸ್ವಯವಾಗಿ ಸಿದ್ಧಿಯನ್ನು ಪಡೆಯುತ್ತೇನೆ' ಎನ್ನುವವರು ಮರುಳರೆಂದು ತಿಳಿಸುತ್ತಾನೆ ಚಾಮರಸ.[೧೯೨] ಸಾಧನೆಯಲ್ಲಿ ತೊಡಗಿದ

[illegible]

[illegible]

[illegible]

[illegible]

[illegible]

[illegible]

[illegible]

ಶರಣ ಬಳಗದವರು ಚಿತ್ತ ದಣಿಯುವಂತೆ ಶಿವಸಮಾಧಿಯಲ್ಲಿ ಮುಳುಗಿರುತ್ತಾರೆ. ಅವರವರ ಸಾಧನೆಗೆ ತಕ್ಕ ಫಲವನ್ನು ಪರಶಿವನು ಅವರಿಗೆ ಕೊಡುತ್ತಾನೆ.[೧೯೩] ಹೀಗೆ ಪ್ರಭು ಅವರಿಗೆ ಕರುಣೆಯ ಕಡಲಾಗಿ ಹರಸುತ್ತಾನೆ.[೧೯೪] ಸಾಧಕರ ತವನಿಧಿ ಎನಿಸುವ ಶ್ರೀಗಿರಿಗೆ ಅಲ್ಲಮ ಬರುತ್ತಾನೆ. ಆದರೆ ಅಲ್ಲಿ ಗೋರಕ್ಷನೊಡನೆ ಖಡ್ಗಪ್ರಸಂಗ ನಡೆದು ಗೋರಕ್ಷ ಅಲ್ಲಮನಿಗೆ ಶರಣಾಗುತ್ತಾನೆ.[೧೯೫] ಯೋಗಾಚರಣೆಗೆ ಶರೀರವನ್ನು ಸಾಧನ ಮಾಡಿಕೊಳ್ಳಬೇಕಾಗುತ್ತದೆಂಬುದನ್ನು ನೋಡಿದ್ದೇವೆ. ಶರೀರವನ್ನು ಇಷ್ಟೊಂದು ಕಾಳಜಿಯಿಂದ ಪೋಷಿಸಿಕೊಂಡು ಮುಕ್ತಿಗಾಗಿ ಹಂಬಲಿಸುವವನನ್ನು ಗುರು ಮೆಚ್ಚಿಕೊಂಡು ಬರುತ್ತಾನೆಂಬುದು ಈ ಗತಿಯಲ್ಲಿ ಮೂಡಿ ಬರುವ ಸಾಂಕೇತಿಕ ಅರ್ಥ. ಸ್ಥೂಲ ಶರೀರವು ರೂಪಕ್ಕೆ ಕಾರಣವಾಗುತ್ತದೆ. ಸ್ಥೂಲ ಶರೀರವನ್ನು ಬೆಳೆಸಿದರೆ ಮಾಯೆಯನ್ನು ಬೆಳೆಸಿದಂತೆಯೇ. ಈ ಕಾಯ ಮತ್ತು ಮಾಯೆ ಬೆಳೆದರೆ ಅಥವಾ ಸಾಧಕ ಪಂಚೇಂದ್ರಿಯಗಳಿಗಾಗಿ ಮಾತ್ರ ಬದುಕಿದರೆ ಕರ್ಮರೂಪದ ಛಾಯೆ ಬೆಳೆಯುತ್ತ ಹೋಗುತ್ತದೆ. ಆದರಿಂದ ಮರಳಿ ಮರಳಿ ಜನನ-ಮರಣಗಳಿಗೆ ಒಳಗಾಗಬೇಕಾಗುತ್ತದೆ. ಇದು ಯೋಗಕ್ಕೆ ನಿಷಿದ್ಧ. ಯೋಗಸಾಧನೆಯಿಂದ ಕಾಯ-ಮಾಯಾ-ಛಾಯೆ ರೂಪದ ಶಿವನ ಕೊಡುಗೆಯನ್ನು ತಟಸ್ಥಗೊಳಿಸಿ ತಾನೇ ತಾನಾಗಿ ಉಳಿದರೆ ಅವನು ಸಿದ್ಧರ ಸಿದ್ಧನಾಗುತ್ತಾನೆ.

ಕಾಯ ಬಲಿದರೆ ಮಾಯೆ ಬಲಿವುದು
ಮಾಯೆ ಬಲಿದರೆ ಛಾಯೆ ಬಲಿವುದು
ಕಾಯ ಮಾಯಾ ಛಾಯೆ ಬಲಿದರೆ ಸಿದ್ಧತನವಲ್ಲ ।
ಕಾಯ ಮಾಯಾ ಛಾಯದಾಗಿನ
ದಾಯವನು ಕಳೆದುಳಿದನಾದೊಡೆ
ರಾಯನಾತನು ಸಿದ್ಧರಲಿ ಗೋರಕ್ಷ ಕೇಳೆಂದ ॥ [೧೯೬]

ಆದಿನಾಥನೇ ಅಲ್ಲಮನ ರೂಪದಲ್ಲಿ ಬಂದಿರುವನೆಂದು ತಿಳಿದು ಗೋರಕ್ಷ ಅವನ ಅಡಿಗಳಿಗೆರಗುತ್ತಾನೆ.[೧೯೭] ಇಂಥ ಪರಿಪಕ್ವ ಮಾನಸಿಕ ಸ್ಥಿತಿಯನ್ನು ತಲುಪಿದವನಲ್ಲಿ ಉಪದೇಶವು ಗರಿಷ್ಠ ಪರಿಣಾಮವನ್ನುಂಟು ಮಾಡುತ್ತದೆ. ಅಂತೆಯೇ ಅಲ್ಲಮ ಸಂತೋಷದಿಂದ ಅವನ ಮಸ್ತಕವನ್ನು ಹಿಡಿದೆತ್ತುತ್ತಾನೆ.[೧೯೮] ಹೀಗೆ ಗುರುರೂಪದಿಂದ ಉದ್ಧರಿಸುವವನೇ ಶಿವನೆಂದು ನುಡಿಯುತ್ತ ತಾನು ಗುಹೇಶ್ವರನ ಹೆಸರಿನಲ್ಲಿ ನಟಿಸುವುದಾಗಿ ಗೋರಕ್ಷನಿಗೆ ತಿಳಿಸುತ್ತಾನೆ.[೧೯೯] ಹಾಗಿದ್ದರೆ ಅವನೇಕೆ ಲಿಂಗ

[illegible]

[illegible]

[illegible]

ಧಾರಿಯಾಗಿರುವುದು ಎಂದು ಪ್ರಶ್ನಿಸುವ ಗೋರಕ್ಷನಿಗೆ ಮನುಜಮಾತ್ರರಲ್ಲಿ ಲಿಂಗನಿಷ್ಠೆಯನ್ನು ಬೆಳೆಸುತ್ತ ಅವರಲ್ಲಿ ಶರಣಸತಿ–ಲಿಂಗಪತಿ ಭಾವವನ್ನು ಗಟ್ಟಿಗೊಳಿಸುವುದು ತನ್ನ ನಟನೆಯ ಹಿಂದಿನ ಉದ್ದೇಶವೆಂದು ಅಲ್ಲಮ ಉತ್ತರಿಸುತ್ತಾನೆ.[೨೦೦] ಶಿವಸ್ವರೂಪಿಯಾಗಿದ್ದರೂ ದೀಕ್ಷಾಗುರು ಸಾಮಾನ್ಯರಲ್ಲಿ ಸಾಮಾನ್ಯನಾಗಿ ತೋರುತ್ತಿರುತ್ತಾನೆಂಬುದು ಇಲ್ಲಿಯ ತಾತ್ಪರ್ಯ. ಹೀಗೆ ಸಕಲ ಜೀವಾತ್ಮರಿಗೆ ಉಪಕರಿಸುವ ಭಾವದಿಂದ ಅವರಲ್ಲಿ ಶಿವಭಕ್ತಿಯನ್ನು ಬೆಳೆಸುವುದಕ್ಕಾಗಿ ಶಿವಯೋಗಿಯು ಲೋಕಕ್ಕೆ ಸಗುಣನಂತೆ ತೋರುತ್ತಿರುತ್ತಾನೆ. ಶಿವನ ಅನೇಕ ನಾಮಗಳಲ್ಲಿ ನಟೇಶ ಎನ್ನುವುದೂ ಒಂದಲ್ಲವೆ?

ನಾನು ಮಾಡಿದೆನೆಂಬುದೊಂದನು
ಮಾನವನು ನಾ ನಟಿಸದಿದ್ದರೆ
ತಾನದೆಲ್ಲಿಯದೈ ಧರಿತ್ರಿಯ ಮೇಲೆ ಶಿವಭಕ್ತಿ ।
ಮಾನವರಿಗುಪಕಾರಿಯಾಗಿರ
ಲಾನು ತೋಱಿದೆನೀ ಪ್ರಕಾರವ
ನಾನು ನಿರ್ಲೇಪನು ಕಣಾ ಗೋರಕ್ಷ ಕೇಳೆಂದ ॥ [೨೦೧]

ಪ್ರಭುಲಿಂಗಲೀಲೆಯಲಿನ್ನು ರಚಿಸುವ ಹಿಂದಿನ ಉದ್ದೇಶವೂ ಇದೇ ಆಗಿರಬಹುದೆಂದು ತೋರುತ್ತದೆ. ಕಾವ್ಯದಲ್ಲಿ ಚಾಮರಸ ಎಲ್ಲಿಯೂ ತನ್ನ ಹೆಸರನ್ನು ನಮೂದಿಸಿಲ್ಲ. ನಿರ್ಗುಣನಾಗಿ ನಿಂತು ವೀರಶೈವಾಚರಣೆಯನ್ನು ಲೋಕಕ್ಕೆ ಪರಿಚಯಿಸಿದ್ದರೂ ಕೃತಿಕಾರ ಅವನೇ ಎಂಬುದು ಸರ್ವವಿದಿತವಾಗಿದೆ. ಹೀಗೆ ಈ ಪದ್ಯದ ಸಾಲುಗಳ ನಡುವೆ ಓದುತ್ತ ಹೋದಂತೆ ಚಾಮರಸನ ವೈಯಕ್ತಿಕ ಬದುಕಿನ ಎಳೆಯೊಂದು ಮಿಂಚಿ ಮಾಯವಾಗುತ್ತದೆ!

ಶಿವಯೋಗಿಯದು ಕೇವಲ ಮಾತಿನ ಜಾಣತನವಲ್ಲವೆಂದು ತಿಳಿಸುತ್ತ ಸಚ್ಚಿದಾನಂದ ಸ್ವರೂಪದ ಕುರುಹನ್ನು ಅಲ್ಲಮ ಗೋರಕ್ಷನಿಗೆ ಅರುಹುತ್ತಾನೆ. ಅದನ್ನು ಚಾಮರಸ ಹೀಗೆ ತಿಳಿಸುತ್ತಾನೆ.

ತೊಳಪ ತೇಜದ ಮುಗಿಲು ಮಿಂಚನು
ಝಳಪಿಸುವವೊಲು ಕೈಯ ಕುಱುಹಿನ
ಬೆಳಗ ಬೀರುತಲಂತರಂಗದಲೈಕ್ಯವಾಗಿರಲು
ಸೆಳೆದು ತುಡುಕಲು ಕೈಗೆ ಬೆಳಗಿನ

ಹೊಳಹದಾಗಿರೆ ಕಂಡು ಗುರುವಿನ

ನಿಲುಕಡೆಗೆ ಬೆಱಗಾಗುತಿರ್ದನು ಬಳಿಕ ಗೋರಕ್ಷ ॥ [೨೦೨]

ಹೀಗೆ ಗೋರಕ್ಷನಿಗೆ ರಾಜಯೋಗದ ಸಂಗವೇರ್ಪಟ್ಟು ನಿಮಿಷಮಾತ್ರದಲ್ಲಿ ಮನಸ್ಸಿನ ಮಾಯೆ ತೊಲಗಿ ಭವಿತನ ಬಿದ್ದು ಹೋಯಿತೆಂದೂ ಸಮ್ಯಕ್‌ಜ್ಞಾನವು ಅಳವಟ್ಟ ಅವನು ಸ್ಥೂಲ, ಸೂಕ್ಷ್ಮ ಕಾಯಗಳನ್ನು ಮೆದ್ದು ಕಾರಣ ಕಾಯದಲ್ಲಿದ್ದನೆಂದೂ ತಿಳಿಸುತ್ತಾನೆ ಚಾಮರಸ. [೨೦೩]

೧.೧೬ ಭಾವಪ್ರಕಾಶ ಸ್ಥಲ

ವಿಷಯಾದಿಗಳ ಬೇಟೆಯಲ್ಲಿ ತೊಡಗಿರುವವರನ್ನು ಕಿರಾತಕರು ಹಾಗೂ ಶಿವಯೋಗದ ಬಗ್ಗೆ ಸ್ಪಷ್ಟ ಕಲ್ಪನೆ ಹೊಂದಿರದ ಭಕ್ತರನ್ನು ಮುನಿಗಳು ಸಂಕೇತಿಸುತ್ತಾರೆಂಬುದನ್ನು ನೋಡಿದ್ದೇವೆ. 'ಮುನಿಗಳಿಗೆ ಬೋಧಿಸಿದ ಗತಿ'ಯ ಸೂಚನಾಪದ್ಯದಲ್ಲಿ ಗುರುಗುಹೇಶ್ವರನು ಸಾಧಕರಿಗೆ ಹಾಗೂ ವಿಷಯವ್ಯಾಧಿಗತರಿಗೆ ಕರುಣಾಮೋದ ಸುಧೆಯನ್ನು ಸುರಿದನೆಂದು ಚಾಮರಸ ತಿಳಿಸುತ್ತಾನೆ. ಈ ಗತಿಯ ವಿಶೇಷತೆಯೆಂದರೆ ಸಂಕೇತಗಳನ್ನು ಬಳಸುತ್ತ ಸಾಗುತ್ತಿರುವಾಗಲೇ ಕವಿ ಕೆಲವು ಅಂಶಗಳನ್ನು ನೇರವಾಗಿ ತಿಳಿಸಿ ಬಿಡುತ್ತಾನೆ. ಒಮ್ಮೊಮ್ಮೆ ಯಾವ ಅಂಶಗಳಿಗೆ ಯಾವ ಸಂಕೇತಗಳಿವೆ ಎಂಬುದನ್ನೂ ತಿಳಿಸುತ್ತಾನೆ.

'ಶಿವಸಾಣೆಯಲಿ ಸಲೆ ತೇದು ಮಿಗೆ ಸುಜ್ಞಾನ ಕಾಂತಿಯ ನೆಯ್ದಿಸುವುದನು' ಪ್ರಭು ತನ್ನ ಭಕ್ತರಿಗೆ ಹೇಳುತ್ತಾನೆ. [೨೦೪] ಮನೋಲಯ ಮಾರ್ಗದಲ್ಲಿ ಹೆಜ್ಜೆ ಇಡುತ್ತ ಊರ್ಧ್ವಗತಿಯಲ್ಲಿ ಸಾಗಿ ಪಶ್ಚಿಮ ಚಕ್ರದಲ್ಲಿ ಮಿಂದು ಮೂಲನಾದವನ್ನು ಮೀರಿ ಸುಪ್ರಭೆಯಲ್ಲಿರುವ ಸುಖವನ್ನು ಅವರಿಗೆ ಕೊಡುತ್ತಾನೆ. [೨೦೫] ಅವರಿಗೆಲ್ಲ ಪಂಚೇಂದ್ರಿಯಗಳಾಚೆಯ ನೆಲೆಯನ್ನು ಕರುಣಿಸಿ ಪಂಚೇಂದ್ರಿಯಗಳ ಕಲಕಲದಿಂದ ಕೂಡಿದ ಕಾನನದ ನಡುವೆ ಜೀವಿಸುವವರತ್ತ ನಡೆದು ಬರುತ್ತಾನೆ.[೨೦೬]

ಹೊಟ್ಟೆ ಹೊರೆಯಲು ದುರ್ಗತಿಗಿಳಿಯುವ ಬೇಡನನ್ನು ಕರುಣೆಯಿಂದ ಕಾಣುವ ಪ್ರಭು ಅವನಿಗೆ ಒಲಿದು ಕೃಪೆ ಮಾಡುತ್ತಾನೆ. ಸಿದ್ಧರಸವು ಕಬ್ಬಿಣವನ್ನು ಹೊನ್ನಾಗಿಸುವಂತೆ ಅವನ ಮೇಲೆ ದೃಷ್ಟಿ ಬೀರುತ್ತಾನೆ.[೨೦೭] ಸಂಕೇತಗಳನ್ನು ಕವಿ ನೇರವಾಗಿಯೇ ತಿಳಿಸುವುದನ್ನು ಈ ಪದ್ಯದಲ್ಲಿ ಕಾಣುತ್ತೇವೆ.

ಉಸುರುವಲೆ ಮೈಗಾಡು ಬುದ್ಧಿಯ

ಬೆಸುಗೆ ಕೈ ನಿಶ್ಚಲದ ಮನವೇ

[illegible]

[illegible]

[illegible]

[illegible]

[illegible]

[illegible]

[illegible]

ಮಿಸುಪ ಕಂಗಳು ತಿಳಿವೆ ಲುಬ್ಧಕನಾಗಿ ಹಮ್ಮೆಂಬ ।
ಅಸಮ ಖಗಮೃಗ ಜಲಚರವನೊಂ
ದಿಸುತ ಸುಜ್ಞಾನಾಗ್ನಿಯಲಿ ಪಚ
ನಿಸಿಯೆ ದಣಿಯುಣಕಲಿಸಿದನು ಪ್ರಭು ಬೇಂಟೆಕಾಱಂಗೆ ।।[೨೦೮]

ಇಂಥ ಬೇಡನಿಗೆ ಸುಜ್ಞಾನಾಗ್ನಿಯಲ್ಲಿ ಬೇಯಿಸಿ ತೃಪ್ತಿಯಿಂದ ಉಣ್ಣುವುದನ್ನು ಕಲಿಸುತ್ತಾನೆ ಗುರುರೂಪದ ಅಲ್ಲಮ. ಕಾಮನ ಸೀಮೆಯಲ್ಲಿ ಸತ್ತು ಹುಟ್ಟುವವರಿಗೆ ಕುಂಡಲಿನೀ ಶಕ್ತಿಯ ಮಹಾರತಿಯನ್ನು ಒದಗಿಸಿ ನಿತ್ಯಾನಂದ ಸುಖವನ್ನು ಕೊಡುತ್ತಾನೆ.[೨೦೯] ಅಧೋಮುಖವಾಗಿ ಹರಿಯುವ ಬಿಂದುವನ್ನು ಕಟ್ಟಿ ಮರಣಭಯವನ್ನು ತೊಡೆದು ಹಾಕುವ ರೀತಿಯನ್ನು ಕೆಲವರಿಗೆ ಬೋಧಿಸುತ್ತಾನೆ.[೨೧೦] ಬಿಂದು ಊರ್ಧ್ವಮುಖದಲ್ಲಿ ಹರಿಯುವಂತೆ ಮಾಡುವುದು ಶಿವಯೋಗಾಚರಣೆಯ ಆವಶ್ಯಕ ಅಂಶ.[೨೧೧] ಈ ಬಿಂದುವಿಗೆ ಒದಗಿಸುವ ಮುಕ್ತಿಯ ಔಷಧವೆಂದರೆ ಕುಂಭಕರೂಪದ ಉಸಿರಾಟ. ಮನವೆಂಬ ಮೂಸೆಗೆ ಮಣಿಪೂರಕ ಚಕ್ರದ ಕಿಚ್ಚು ತಗಲಿದರೆ ಉನ್ಮನಿಯ ಊರ್ಧ್ವಗಮನದಲ್ಲಿ ರುದ್ರ–ಈಶ್ವರ–ಸದಾಶಿವರನ್ನು ಮೀರಿದ ಸುಖವಿರುತ್ತದೆಂದು ತಿಳಿಸುತ್ತ ಕೆಲವರನ್ನು ಸಿದ್ಧರನ್ನಾಗಿಸುತ್ತಾನೆ. [೨೧೨]

ಪಂಚೇಂದ್ರಿಯಗಳನ್ನಾಶ್ರಯಿಸಿದವರ ಪರಿ ಇದಾದರೆ ಶಾಸ್ತ್ರಗಳನ್ನಾಶ್ರಯಿಸಿದವರದು ಇನ್ನೊಂದು ಪರಿ. ಗಳುಪುವ ಗಿಳಿಗಳಾಗಿರುವ ಅವರು ಪುಣ್ಯದ ಹಸಿವು ತೃಷೆಗಳನ್ನು ತಣಿಸಲು ವೇದಾಗಮಗಳ ಕೊಂಬೆಕೊಂಬೆಗಳಲ್ಲಿ ಕುಳಿತು ಯಾತ್ರಿಕರನ್ನು ಆಕರ್ಷಿಸುತ್ತಾರೆ. ಆರತಿ, ಅಭಿಷೇಕ, ಪೂಜೆ ಮುಂತಾದವುಗಳನ್ನು ಸಾಧನ ಮಾಡಿಕೊಂಡು ಅವರಿಗೆ ಸ್ವರ್ಗದ ವಾಸನೆ ತೋರಿಸುತ್ತಾರೆ. ೨೧೩ ಹೀಗೆಯೇ ಸಾಗುತ್ತದೆ ವಾಗದ್ವೈತಿಗಳ ವಿಡಂಬನೆ. ಈ ಮೊದಲು ಎಲ್ಲಿಯೂ ವಿಡಂಬನೆಗೆ ಮನಸ್ಸು ಮಾಡದ ಕವಿ ಇಲ್ಲಿ ಅದನ್ನು ಮನಃಪೂರ್ವಕವಾಗಿ ಆಶ್ರಯಿಸಿದ್ದಾನೆ.[೨೧೪] ಲೋಕಸಂಪರ್ಕದಿಂದ ದೂರವಾಗಿ ಅನ್ನ, ಬಟ್ಟೆ, ವಸತಿಗಳಿಗಾಗಿ ನೈಸರ್ಗಿಕ ಕೊಡುಗೆಗಳನ್ನು ಅವಲಂಬಿಸುತ್ತ ವನದೊಳಗಿದ್ದು ಘೋರತರ ಸಂಸಾರದಲ್ಲಿ ಸಿಲುಕಿದ್ದವರು ಮುನಿಗಳು[೨೧೫] ಸ್ನಾನ, ಜಪ, ತಪ, ನಿತ್ಯ ನಿಯಮ, ದ್ಯಾನ, ವೇದಾಧ್ಯಾಯನ, ಯಜ್ಞ ಇವುಗಳಲ್ಲಿಯೇ ತೊಡಗಿ ಬದುಕಿನ ರಹಸ್ಯವನ್ನು ಅರಿಯದಿದ್ದ ಅವರಿಗೆ ಭವಭಯಾಬ್ಧಿಯಿಂದ ದಾಟಿಸುವ ಕೈವಲ್ಯಪದವಿಯ ಮಾರ್ಗೋಪಾಯವನ್ನು ಉಪದೇಶಿಸುತ್ತಾನೆ ಅಲ್ಲಮ.[೨೧೬] ಅಹಂಕಾರವೇ ಪಶು, ಮನಸ್ಸು ಯಜ್ಞಪಶುವನ್ನು ಕಟ್ಟುವ ಹಗ್ಗ, ವಿವೇಕವು ಆಯುಧ, ಸುಜ್ಞಾನವು ಅಗ್ನಿ, ಆತ್ಮನು

[illegible]

[illegible]
[illegible]
[illegible]
[illegible]

[illegible]

[illegible]

ಯಜ್ಞವನ್ನು ನಡೆಸುವವನು ಎಂದು ಯೋಗಾಚರಣೆಯ ರಹಸ್ಯವನ್ನು ಬಿಚ್ಚಿಡುತ್ತ ಮಿಥ್ಯವನ್ನೆಲ್ಲ ಹೋಮಕ್ಕೆ ಆಹುತಿ ಮಾಡಬೇಕೆಂದು ಹೇಳುತ್ತಾನೆ.[೨೧೭] ಬಾಹ್ಯಾಚರಣೆಗಳನ್ನು ಬಿಟ್ಟು ಅಂತರ್ಮಾರ್ಗದಲ್ಲಿ ಸಾಗಬೇಕೆಂದು ತಿಳಿಸುತ್ತಾನೆ.[೨೧೮] ಹಿಂದೆ ಮಾಯೆ ಹುಟ್ಟಿದಾಗ ದೂರ್ವಾಸಮುನಿಯು ಕೊಟ್ಟ ಸೂಚನೆಯಂತೆ ಪ್ರಭು ತಮ್ಮನ್ನು ಉದ್ಧರಿಸಲು ಬಂದಿರುವನೆಂದು ಅವರು ತಿಳಿಯುತ್ತಾರೆ. ಹೀಗೆ ಪ್ರಭು ಅವರನ್ನು ಭವಬಂಧನದಿಂದ ದೂರ ಮಾಡಿ, ಅಂತರಾತ್ಮನ ಅನುಸಂಧಾನದ ಉಪಾಯವನ್ನು ಬೋಧಿಸಿ ಅವರನ್ನೆಲ್ಲ ಪಾವನಚಿತ್ತರನ್ನಾಗಿ ಮಾಡುತ್ತಾನೆ.[೨೧೯]

ಪೂರ್ವಜನ್ಮದ ಕರ್ಮಫಲಗಳಿಂದಾಗಿ ಸದಾಚಾರದಲ್ಲಿ ಬದುಕುವವರಿಗೆ ಲಿಂಗಾನುಸಂಧಾನದ ಮಾರ್ಗವನ್ನು ಕರುಣಿಸುವ ಗುರು ಸುಲಭವಾಗಿ ದೊರಕುತ್ತಾನೆಂಬುದು ಈ ಗತಿಯ ತಾತ್ಪರ್ಯ.

೧.೧೭ ಜ್ಞಾನ ಪ್ರಕಾಶ ಸ್ಥಲ

ವೀರಶೈವಾಚರಣೆಯನ್ನು ಕುರಿತಾಗಿ ವಚನಕಾರರು ಹಾಗೂ ಕೈವಲ್ಯಪದ್ಧತಿಯ ರಚನಾಕಾರರು ಹೇಳಿದ್ದಾರೆ. ಆದರೆ ಬಹಿರಂಗಾಚರಣೆಯವರಿಗೆ ಅವೆಲ್ಲ ಉಕ್ಕಿನ ಕಡಲೆಗಳಾಗಿ ಪರಿಣಮಿಸಿವೆ. ಪ್ರಭುಲಿಂಗಲೀಲೆಯಲ್ಲಿ ಈ ಮಾರ್ಗವನ್ನು ಪ್ರತಿಪಾದಿಸುತ್ತಿರುವ ಚಾಮರಸ ಲಿಂಗಾನುಸಂಧಾನವನ್ನು ನಿರೂಪಿಸುವುದಕ್ಕಾಗಿ 'ಬಸವೇಶ್ವರನು ಶೂನ್ಯಸಿಂಹಾಸನವನ್ನು ರಚಿಸಿದ ಗತಿ' ಆಯ್ದುಕೊಂಡಿದ್ದಾನೆ. ಸಾಧಕ ಅಂತರಂಗದಲ್ಲಿ ಕಂಡುಂಡುದನ್ನು ಹೇಳುವ ರೀತಿ ಇದಾಗಿದೆ. ಅಂದರೆ ಅದು ಮೊದಲು ನಡೆದುದು ಅಂತರಂಗದಲ್ಲಿ. ೨೨೦ ಹೀಗಾಗಿ ಸೂಕ್ಷ್ಮದ ಅನುಭವಕ್ಕೆ ಸ್ಥೂಲದ ರೂಪ ಆರೋಪಿಸಿರುವುದನ್ನು ಇಲ್ಲಿ ಕಾಣಬಹುದು.

ತನ್ನೊಳಗೆ ತಾ ಸಾಧಿಸಿದ ಸಂ
ಪನ್ನತೆಯನಿದಿರಿಟ್ಟು ರಚಿಸಿದ
ಶೂನ್ಯಸಿಂಹಾಸನವನೆಮ್ಮಯ ಬಸವ ದಂಡೇಶ || [೨೨೧]

ಶಿವಯೋಗಾಚರಣೆ ಪೂರ್ವಾಭ್ಯಾಸ ಹಾಗೂ ಪಶ್ಚಿಮಾಭ್ಯಾಸ ಎಂದು ಎರಡು ವಿಧವಾಗಿದೆ. ಪೂರ್ವವೆಂದರೆ ಧ್ಯಾನ ಮಾಡುತ್ತ ಮನೋಲಯ ಸಾಧಿಸುವುದು, ಪಶಿಮವೆಂದರೆ ಈ ಮನೋಲಯದೊಂದಿಗೆ ಪಶ್ಚಿಮಚಕ್ರದ ಕಡೆಗೆ ಸಾಗುವುದು.[೨೨೨] ಕುಂಡಲಿನೀ ಸರ್ಪವು

[illegible]

[illegible]

[illegible]

[illegible]

[illegible]

ಜಾಗ್ರತವಾಗುತ್ತಲೇ ಶಿವಧ್ಯಾನವು ಸಹಜವಾಗಿ ಪರಿಣಮಿಸುತ್ತದೆ.[೨೨೩] ಆಗ ಲೌಕಿಕಾಸಕ್ತಿ ಕಡಿಮೆಯಾಗುತ್ತ ಹೋಗಿ ಭವಬಂಧನ ಕಳಚುವುದರ ಅರಿವು ಭ್ರೂಮಧ್ಯದಲ್ಲಿ ತೋರುವ ಅಂಗುಷ್ಠಪರಿಮಾಣನ ಜೀವಾತ್ಮನಿಗೆ ಉಂಟಾಗುತ್ತದೆ.[೨೨೪] ಜೀವಾತ್ಮ ಪರಮಾತ್ಮರ ಐಕ್ಯವು ಇಲ್ಲಿಯ ಅಂತಿಮ ಗುರಿಯಾದ್ದರಿಂದ ಸಾಧಕ ಅದಕ್ಕಾಗಿ ತವಕಿಸುತ್ತಿರುತ್ತಾನೆ.[೨೨೫] ಹೀಗೆ ಸಾಧಕನನ್ನು ಸಂಕೇತಿಸುವ ಬಸವಣ್ಣ ಪಶ್ಚಿಮಚಕ್ರದ ಕಡೆಗೆ ಕ್ರಮಿಸುವಾಗ ಅಂತರಂಗದಲ್ಲಿ ಕಂಡಂತೆ ಬಹಿರಂಗದಲ್ಲಿ ಶೂನ್ಯಸಿಂಹಾಸನವನ್ನು ರಚಿಸುತ್ತಾನೆ.

ಅನುಗೊಳಿಸಿದನು ಶೂನ್ಯಸಿಂಹಾ
ಸನವಿದೆಂದದ ಕಿಟ್ಟುಹೆಸರನು
ವಿನುತ ಪಶ್ಚಿಮ ಮಾರ್ಗದಲಿ ತಾ ಕಂಡುದೆಲ್ಲವನು
ಕನಕಮರಕತ ಮುಖ್ಯಮಣಿಗಳ
ಘನತರದ ಕೇವಣದ ಲಹರಿಯ
ಮಿನುಗ ಮಿಸುಗುವ ವಿಮಲ ಪೀಠವ ಬಸವ ನಿರ್ಮಿಸಿದ ॥ [೨೨೬]

ಪ್ರಾಣಲಿಂಗಾರ್ಚನೆಯ ಅನುಭವವನ್ನು ನಿಜಗುಣ ಶಿವಯೋಗಿ ಹೇಳುವುದು ಹೀಗೆ

ಮೂಲಲಿಂಗ ನಾಭಿ ಹೃದಯ ಕಂಠಕೂರ್ಚಗೋತ್ರ ಮೊತ್ತ
ಜಾಲದಂಬುಜಾಕ್ಷರಾದಿ ದೈವ ಮಂತ್ರಶಕ್ತಿಯ
ಮೇಳದೊಡನೆ ಕೆಂಪು ಮಿಂಚು ರನ್ನ, ಚಿನ್ನ, ಸೊಡರು ಚಂಚ
ಲಾಲತಾಗ್ನಿ ದೀಪ್ತಿ ರೂಪದೋರ್ಪ ದಿವ್ಯ ಬಿಂದುವೆ [೨೨೭]

ಸರ್ಪಭೂಷಣ ಶಿವಯೋಗಿ ಇದನ್ನು ಇನ್ನೂ ಸ್ಪಷ್ಟವಾಗಿ ತಿಳಿಸುತ್ತಾನೆ.[೨೨೮] ಇದನ್ನು ಚಾಮರಸ ಸಪ್ತಾವರಣದ ಭಿತ್ತಿ ಎಂದು ಕರೆದಿದ್ದಾನೆ.[೨೨೯] ಹೀಗೆ ರಚಿಸಿದ ಶೂನ್ಯ ಸಿಂಹಾಸನಕ್ಕೆ ಆಧಾರಾದಿ ಪಶ್ಚಿಮ ಚಕ್ರದ ವರೆಗೆ ಒಂಬತ್ತು ಬಾಗಿಲುಗಳಾದರೆ ಅಗ್ನಿ, ಶಿಖಿ, ಬ್ರಹ್ಮ, ಪಶ್ಚಿಮ ಈ ನಾಲ್ಕು ಚಕ್ರಗಳು ಇಷ್ಟ, ಪ್ರಾಣ, ಭಾವಲಿಂಗಗಳಿಗೆ ಸಂಬಂಧಪಡುವಂಥವುಗಳು ಕೊನೆಯಲ್ಲಿ ಭಾವಲಿಂಗಕ್ಕೆ ಬ್ರಹ್ಮಚಕ್ರದಿಂದ ಪಶ್ಚಿಮ ಚಕ್ರದ ವರೆಗಿನ ಎರಡು ಬಾಗಿಲುಗಳ ನಡುವಿನ ದಾರಿ ಸಾಧನವಾಗುವಂಥದು.[೨೩೦] ಈ ಒಂಬತ್ತು

[illegible]

[illegible]

[illegible]

[illegible]

ಚಕ್ರಗಳ ನಡುವಿನ ಅನುಸಂಧಾನದಲ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯ ಸ್ಥಲಗಳ ಭೇದವನ್ನು ಸಾಧಕ ಅರಿಯುತ್ತಾನೆ.[೨೩೧]

ಲೌಕಿಕರು ದಶನಾಡಿಗಳಲ್ಲಿ[೨೩೨] ವ್ಯವಹರಿಸುವವರಾಗಿದ್ದರೆ ಶಿವಯೋಗಿಗಳು ಇಡಾ, ಪಿಂಗಳಾ ಹಾಗೂ ಸುಷಮ್ನಾ ನಾಡಿಗಳಲ್ಲಿ ವ್ಯವಹರಿಸುವವರಾಗಿರುತ್ತಾರೆ.[೨೩೩] ಇವುಗಳನ್ನು ಚಂದ್ರನಾಡಿ, ಸೂರ್ಯನಾಡಿ, ಅಗ್ನಿನಾಡಿ ಎಂದೂ ಗಂಗಾ, ಯಮುನಾ, ಸರಸ್ವತಿ ನದಿಗಳೆಂದೂ ಕರೆದು ಅವು ಕೂಡುವ ಸ್ಥಾನವನ್ನು ತ್ರಿವೇಣಿಸಂಗಮ ಎಂದು ತಿಳಿಸಲಾಗಿದೆ.[೨೩೪] ಇದನ್ನು ಚಾಮರಸ ತಿಳಿಸುವುದು ಹೀಗೆ –

ಈಡೆ ಪಿಂಗಳ ವರ ಸುಷುಮ್ನಾ
ನಾಡಿಗಳು ಬಲಿದೆಂಟು ದಿಕ್ಕಿನ
ಕೋಡ ಕೈಯಲಿ ಮದಗಜಂಗಳು ಮೇಲು ನೆಲೆಯೊಳಗೆ ।
ಕೂಡೆ ಬೆಳಗುವ ಸೋಮ ಸೂರಿಯ
ರಾಡುತಿಹ ವೀದಿಗಳು ಭುವನದ
ಬೀಡಿದೆನಲಾ ಬಸವನೊಡ್ಡಿದನಂಬರಾಸನವ ॥ [೨೩೫]

ರಹಸ್ಯವಾಗಿರುವ ಹಾಗೂ ಅನುಭಾವಿಗಳಿಗೆ ಯೋಗ್ಯವೂ ಸಹಜವೂ ಆಗಿರುವ ಈ ಮಾರ್ಗವನ್ನು ಲೋಕಜೀವಿಗಳು ತಿಳಿಯುವುದು ಸಾಧ್ಯವಿಲ್ಲ. ಏಕೆಂದರೆ ಅವರೆಲ್ಲ ಭಕ್ತರಲ್ಲದವರು. ಇದನ್ನು ಚಾಮರಸ ಶಬ್ದಗಳಲ್ಲಿ ಹೀಗೆ ಹಿಡಿದಿಟ್ಟಿದ್ದಾನೆ.

ಹುತ್ತಿನೊಳಗಣ ಹೊಳ್ಳ ಹಾವಿಂ
ಗೆತ್ತ ಹೋದೊಡೆ ಸುಸರವಲ್ಲದೆ
ಮತ್ತೆ ಮಿಕ್ಕಿನ ಜೀವಜಾಳಕ ಭೇದ್ಯವಾದಂತೆ ।
ಎತ್ತ ಬಲ್ಲರು ಭಕ್ತರಲ್ಲದ
ಮತ್ತ ಭವಿಗಳು ಶೂನ್ಯ ಪೀಠದ
ಬಿತ್ತರವನೆಂದೆನುತ ಬೆಱಗಾದುದು ಬುಧಸ್ತೋಮ ॥ [೨೩೬]

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರಿಗೆ ತೃಪ್ತಿಪಡಿಸುವ ಸಮಯಕ್ಕಾಗಿ ಕಾಯ್ದು ಕುಳಿತ ಬಸವಣ್ಣನ ಶೂನ್ಯಸಿಂಹಾಸನವನ್ನು ಆರೋಹಿಸುವ[೨೩೭] ಅಂತಹ ಗುರುರೂಪದ ಪರಶಿವನ

ಆಗಮನವಾಗುವುದಷ್ಟೇ ಈಗ ಉಳಿದಿರುವುದು. ಅಂತರಂಗದ ಅನುಸಂಧಾನದಲ್ಲಿ ಲಿಂಗಾಂಗಸಾಮರಸ್ಯ ಕ್ರಿಯೆ ಮಾತ್ರ ಉಳಿದಿದೆ ಎನ್ನುವುದು ಅದರರ್ಥ.

೧.೧೮ ಅಂತ್ಯಪ್ರಸಾದಿ ಸ್ಥಲ

ಶಿವಸ್ವರೂಪದ ಗುರುವಿನಿಂದ ದೀಕ್ಷೆಯ ರೂಪದಲ್ಲಿ ಪಡೆಯುವ ಅನುಗ್ರಹ ಪ್ರಸಾದವೆಂದು ನೋಡಿದ್ದೇವೆ. ಲಿಂಗಾಂನುಸಂಧಾನದಲ್ಲಿ ತೊಡಗುವ ಸಾಧಕ ಅಂತಿಮವಾಗಿ ಶಿವನೇ ಆಗುತ್ತಾನೆಂಬುದನ್ನೂ ನೋಡಿದ್ದೇವೆ. ಜೀವಾತ್ಮನಿಗೆ ಜೀವಭಾವದ ತತ್ತ್ವಗಳೆಲ್ಲವೂ ನಷ್ಟವಾದಾಗ ಮಾತ್ರ ಇದು ಸಾಧ್ಯ. ಸಾಧಕನ ಈ ಸ್ಥಿತಿಯನ್ನು ನಿರೂಪಿಸುವುದಕ್ಕಾಗಿ ಕವಿ 'ಪ್ರಭುದೇವರು ಶೂನ್ಯಸಿಂಹಾಸನವನೇರಿದ ಗತಿ'ಯನ್ನು ರೂಪಿಸಿದ್ದಾನೆ. ಅಂತಿಮ ಹಂತದಲ್ಲಿ ಸಾಧಕನ ಅಂತಃಕರಣಗಳು ಇಡಿಯಾಗಿ ಶುದ್ಧವಾಗಿರುತ್ತವೆ.[೨೬೮] ಅಂತರ್ಮುಖಿಯಾಗಿ ಅವನು ಇದನ್ನು ಕಾಣುತ್ತಾನೆ.[೨೬೯] ಇದರಲ್ಲಿ ಪರಿಪೂರ್ಣತೆ ಉಂಟಾಗುವ ವರೆಗೂ, ಅವನು ಕಾಯಬೇಕಾಗುತ್ತದೆ.[೨೭೦] ಕೊನೆಗೊಮ್ಮೆ 'ಆದಿಮದ್ಯಾಂತಂಗಳಿಲ್ಲದನಾದಿಸಿದ್ಧನು' ಸುಳಿಯುವುದು ನಿಶ್ಚಿತ.[೨೭೧] ಬ್ರಹ್ಮಾಂಡದ ಸರ್ವರೂಪಗಳನ್ನೂ ತನ್ನಲ್ಲಿ ಒಳಗೊಂಡಿರುವ ಅವನು ಯಾವ ರೂಪವನ್ನಾದರೂ ಧರಿಸಬಹುದು. ಹಾಗೂ ಎಲ್ಲೆಂದರಲ್ಲಿ ತೋರಬಹುದು.[೨೭೨] ಇದು ಅವರವರ ಭಾವಕ್ಕೆ ಅವರವರ ವೇಷದಲ್ಲಿ ಶಿವನು ತೋರುವ ಪರಿ. ಸಾಧನೆ ಪರಿಪೂರ್ಣತೆಯ ಹೊಸ್ತಿಲಲ್ಲಿದ್ದಾಗ ಅವನಿಗೆ ಶಿವನ ರೂಪು ಸ್ಪಷ್ಟವಾಗುತ್ತದೆ.[೨೭೩] ಹೀಗೆ ಶಿವನು ಸಾಧಕನ ಯೋಗ ಸಮಾಧಿ ಎನ್ನುವ ಮಂದಿರಕ್ಕೆ ಅಥವಾ ಶೂನ್ಯಪೀಠಕ್ಕೆ ಬಂದು ಅಲ್ಲಿ ವಿರಾಜಮಾನನಾಗುತ್ತಾನೆ.[೨೭೪] ಸಾಧಕ ಕುಂಡಲಿನಿಯನ್ನು ಬಂಧಿಸಿ ಸೂರ್ಯ–ಚಂದ್ರ ಮಂಡಲಗಳನ್ನು ಮೀರಿ, ಕಾಮದ ರಂಧ್ರಗಳನ್ನು ಮುಚ್ಚಿ, ಸುಷುಮ್ನಾನಾಳದೊಳಗೆ ಏರಿ ನಿರ್ಗುಣ ಪರಶಿವನಲ್ಲಿ ಒಂದಾಗಬೇಕಾಗುತ್ತದೆ. ಚಾಮರಸ ಈ ಗುಣಗಳೆಲ್ಲವನ್ನೂ ಅಲ್ಲಮನಿಗೆ ಆರೋಪಿಸುತ್ತ ಕೋಟಿಸೂರ್ಯಪ್ರಭೆಯ ರೂಪದ ಅವನು ಶೂನ್ಯ ಪೀಠದಲ್ಲಿ ಮಂಡಿಸಿದನೆಂದು ತಿಳಿಸುತ್ತಾನೆ.

ಕುಂಡಲಿಯನಂಡಲೆದು ರವಿಶಶಿ
ಮಂಡಲಂಗಳ ಮೀಱಿ ಕಾಮದ
ಕಂಡಿಗಳ ಕೀಲಿಸಿ ಸುಷುಮ್ನಾನಾಳದೊಳಗಡಱಿ ।

[illegible]

[illegible]

[illegible]

[illegible]

[illegible]

[illegible]

[illegible]

[illegible]

ಮಂಡಿಸಿದನಾ ಶೂನ್ಯಪೀಠದ

ಮಂಡೆಯೊಳು ತೊಳತೊಳಗಿ ಬೆಳಗಿಯ

ಖಂಡ ತೇಜೋಮೂರ್ತಿಯಲ್ಲಮಲಿಂಗ ಲೀಲೆಯಲಿ ॥ [೨೪೫]

ಈಗ ಕವಿ ಮತ್ತೊಮ್ಮೆ ಮಾರ್ಗದ ನೇರ ನಿರೂಪಣೆಯಲ್ಲಿ ತೊಡಗುತ್ತಾನೆ.[೨೪೬] ಹೀಗೆ ಸಾಧಕನಿಗೆ ತಾನು ಪರಬ್ರಹ್ಮಸ್ವರೂಪನೊಂದಿಗೆ ಸಮರಸವಾಗುವುದೊಂದೇ ಉಳಿದಿರುತ್ತದೆ. ಆಗ ಅವನ ಸಂತೋಷಕ್ಕೆ ಪಾರವೇ ಇರುವುದಿಲ್ಲ.[೨೪೭] ಹೀಗೆ ಪರಶಿವನು 'ತೊಳಗಿ ಬೆಳಗುವ ಶೂನ್ಯಪೀಠದ ನೆಲೆಯನೆಲ್ಲವ ಮೀರಿ ಬಯಲಲಿ ನೆಲಸಿ ನಿಂದನು' ಎಂದು ತಿಳಿಸುತ್ತ ಕವಿ ಪ್ರಸ್ತುತ ಗತಿಯನ್ನು ಮುಕ್ತಾಯ ಮಾಡುತ್ತಾನೆ. [೨೪೮]

೧.೧೯ ಸೇವ್ಯ ಪ್ರಸಾದಿ ಸ್ಥಲ

ತತ್ತ್ವಗೂಡದೆ ವಿಲಕ್ಷಣನಾಗಿ ನಿಂತ ಜೀವಾತ್ಮ ಮಾತ್ರ ಪರಮಾತ್ಮನಲ್ಲಿ ಐಕ್ಯವಾಗುತ್ತಾನೆ ಎಂಬುದನ್ನು ನಿರೂಪಿಸುವುದಕ್ಕಾಗಿ ಕವಿ 'ಪ್ರಭುದೇವರು ಆರೋಗಣೆ ಮಾಡಿದ ಗತಿ'ಯನ್ನು ಆಯ್ದುಕೊಂಡಿದ್ದಾನೆ. ದೀಕ್ಷೆಯನ್ನು ಪಡೆಯುವಾಗ ಗುರುವಿಗೆ ತನು, ಮನ, ಧನಗಳನ್ನು ಅರ್ಪಿಸಿರುವ ಸಾಧಕ ಇಲ್ಲಿ ತನ್ನ ಅರ್ಪಣೆಯನ್ನು ಒರೆಗೆ ಹಚ್ಚುವ ಪ್ರಸಂಗ ಉಂಟಾಗುತ್ತದೆ. ಪರಮಾತ್ಮನ ವ್ಯವಹಾರವೇ ಅಂಥದು, ಕಾಣೆಯನ್ನು ಗೆಲ್ಲುವವನೂ ಅಲ್ಲ ಅರ್ಧಕಾಣೆಯನ್ನು ಸೋಲುವವನೂ ಅಲ್ಲ. ಸಾಧಕನೂ ಇದನ್ನು ಇಡಿಯಾಗಿ ಪಾಲಿಸಿದರೆ ಹಾಲಿಗೆ ಹಾಲು ಬೆರೆತಂತೆ. ನೀರಿಗೆ ನೀರು ಬೆರೆತಂತೆ ಶಿವಜೀವರ ಬೆರೆಯುವಿಕೆ ಸಾಧ್ಯವಾಗಬಹುದು. ಈ ವಿಚಾರದ ಹಿನ್ನಲೆಯಲ್ಲಿ ಪ್ರಸ್ತುತ ಗತಿಯನ್ನು ನೋಡಬೇಕು.

ಬಯಲೇ ಸಿಂಹಾಸನವಾಗಿ ಅದರ ಮೇಲಿನ ಬಯಲಿನಲ್ಲಿ ಬಯಲಾಗಿ ಹೊಳೆದು ಬೆಳಗುವ ಬಯಲರೂಪದ ಪರಶಿವ ಮೂರ್ತಿಗೊಳ್ಳುತ್ತಾನೆ.

ಬಯಲು ಸಿಂಹಾಸನದ ಮೇಲಣ

ಬಯಲು ಬಯಲಲಿ ತೊಳಗಿ ಬೆಳಗುತ

ಬಯಲ ತನುವಿಡಿದಲ್ಲಮಪ್ರಭು ಮೂರ್ತಿಗೊಂಡಿರಲು ॥ [೨೪೯]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಇದನ್ನು ಶಿವಶರಣರೂ ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾರೆ.[೨೫೦] ಹೀಗೆ ಬ್ರಹ್ಮಾಂಡವೇ ಆಗಿರುವ ಅವನು ಎಲ್ಲವನ್ನೂ ಭುಂಜಿಸಿ ಬ್ರಹ್ಮಾಂಡವೆಲ್ಲವೂ ಸಂತುಷ್ಟಿ ಪಡುವಂತೆ ಮಾಡುವವನು.[೨೫೧] ಅವನಿಗೆ ಉಣಬಡಿಸಿ ತೃಪ್ತಿಪಡಿಸಬೇಕೆಂಬ ಭಾವದಿಂದ ಬಸವಣ್ಣ ಏನೆಲ್ಲವನ್ನು ಬಡಿಸಿದರೂ ಆ ಬ್ರಹ್ಮಾಂಡದ ಅಧಿಪತಿಯ ಹಸಿವು ಹಿಂಗುವುದಿಲ್ಲ. ಕಾರಣವೆಂದರೆ 'ನಾನು ಉಣಬಡಿಸುತ್ತೇನೆ' ಎಂಬ ಸೂಕ್ಷ್ಮ ಅಹಂಕಾರವು ಗಂಧರೂಪದಲ್ಲಿ ಭಕ್ತನ ಮನಸ್ಸನ್ನು ಆವರಿಸಿರುತ್ತದೆ. ಆಗ ಅವನ ಸಹಾಯಕ್ಕೆ ಬರುವವರು ಅರಿವು ಮತ್ತು ವಿವೇಕ ಇವುಗಳನ್ನು ಸಂಕೇತಿಸುವ ಚೆನ್ನಬಸವಣ್ಣ ಮತ್ತು ಮಡಿವಾಳ ಮಾಚಯ್ಯ.[೨೫೨] ಇಂಥ ಸಾಧಕ ತತ್ತ್ವಗೂಡದೆ ವಿಲಕ್ಷಣವಾಗಿ ನಿಂತರೆ ಅಥವಾ ಹೊತ್ತು ಹೋಗದ ಮುನ್ನ ತನುವಿನ ತುತ್ತ ನೀಡಿದರೆ[೨೫೩] ಅವನನ್ನು ಶಿವನು ತನ್ನಲ್ಲಿ ಒಳಗೊಳ್ಳುತ್ತಾನೆ. 'ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲಸಂಗಮ ದೇವನ'[೨೫೪] ಎನ್ನುವುದರ ತಾತ್ಪರ್ಯ ಇದೇ ಆಗಿದೆ.

ಪರಶಿವತತ್ತ್ವವು ತನ್ನಷ್ಟಕ್ಕೆ ತಾನು ಪರಿಪೂರ್ಣವಾಗಿದೆ.[೨೫೫] ಈ ಮಾತನ್ನು ಚಾಮರಸ ಅಲ್ಲಮನಿಂದ ಹೇಳಿಸುತ್ತಾನೆ.[೨೫೬] ಸಾಧಕನ ಮನದಿಂದ ಅಹಂಭಾವ ದೂರಾದರೆ ಅವನು ಪರಿಪೂರ್ಣನಾದಂತೆಯೇ.[೨೫೭] ಹೀಗೆ ಸಮರಸವಾದ ಸ್ಥಿತಿಯಲ್ಲಿ ಜೀವಾತ್ಮನೂ ಪರಿಪೂರ್ಣನೆನಿಸುವುದರಿಂದ ಅವನು 'ಕಾರಣಕಳಾತ್ಮಕನಾಗಿರುತ್ತಾನೆ.'[೨೫೮] ಬ್ರಹ್ಮಾಂಡವೇ ಬಾಯ್ದೆರೆದು ನಿಂತುದನ್ನು ನಿರೂಪಿಸುವಲ್ಲಿ ಇದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಪ್ರತಿಮೆ ಸಾಧ್ಯವಾಗಲಿಕ್ಕಿಲ್ಲ. ಪ್ರಭುದೇವರು ಶೂನ್ಯ ಸಿಂಹಾಸನವನೇರಿದ ಗತಿ ಹಾಗೂ ಪ್ರಸ್ತುತ ಗತಿ ಈ ಎರಡರಲ್ಲಿಯ ಪ್ರತಿಮಾವಿಧಾನವು ಕಾವ್ಯಕ್ಕೆ ವಿಶೇಷ ಕಳೆಯನ್ನು ತಂದು ಕೊಟ್ಟಿದೆ.

ಈ ಪ್ರಸಂಗದಲ್ಲಿ ಚಾಮರಸ ಮತ್ತೊಮ್ಮೆ ವಿಡಂಬನೆಯಲ್ಲಿ ತೊಡಗುತ್ತಾನೆ. ಅಲ್ಲಮ ನಿಜಜಂಗಮನಾಗಿ ಶೂನ್ಯ ಸಿಂಹಾಸನದ ಮೇಲೆ ವಿರಾಜಿಸಿದ್ದರೆ ಊಟದ ಕ್ರಿಯೆಗಾಗಿ ರೂಪುಗೊಂಡು ಜಂಗಮರ ಬೃಹತ್ ಗುಂಪೊಂದು ಶೂನ್ಯಸಿಂಹಾಸನದ ಪರಿಸರದಲ್ಲಿರುತ್ತದೆ.[೨೫೯] 'ಶಿವಯೋಗಿಗಳು ಸರ್ವಸಿದ್ಧಿಗಳನ್ನು ಹೊಂದಿ ಸಿದ್ಧರೆನಿಸಿದರೆ ವಾಗದ್ವೈತಿಗಳು ಸಿದ್ಧರ ವಿವಿಧ ವೇಷಗಳಲ್ಲಿ, ನಾಮಗಳಲ್ಲಿ ತೋರುತ್ತಿರುತ್ತಾರೆ' ಎನ್ನುವುದು ಇದರ ತಾತ್ಪರ್ಯ. ಇಂಥವರ ಗುಂಪೊಂದು ಬಸವಣ್ಣ ಅಲ್ಲಮನನ್ನು ಮಾತ್ರ ಲಕ್ಷಿಸುತ್ತ ತಮ್ಮನ್ನು ಮರೆತನೆಂದು ಸಿಟ್ಟಿನಿಂದ ಹೊರಟು ಹೋಗುತ್ತದೆ.[೨೬೦] ಶಿವಯೋಗಿಯಾದವನೊಂದಿಗೆ ಲೌಕಿಕರು ವರ್ತಿಸುವುದು ಹೀಗೆಯೇ.

[illegible]

[illegible]

[illegible]

ತಮೋಗುಣದ ಮಾಯಾದೇವಿ ಅರ್ಪಿಸುವ ನೈವೇದ್ಯ ಹಾಗೂ ಸತ್ವ ಗುಣದ ಬಸವಣ್ಣ ಅರ್ಪಿಸುವ ನೈವೇದ್ಯ ಇವುಗಳನ್ನು ಹೋಲಿಸಿ ನೋಡಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಮಾಯಾದೇವಿ ಅಷ್ಟಮದಗಳು, ಸಪ್ತ ವ್ಯಸನಗಳು ಹಾಗೂ ಅರಿಷಡ್ವರ್ಗ ರೂಪದ ಹುಳಿ, ಖಾರ, ಮಸಾಲೆ, ಅಪಕ್ವ ಕಾಯಿ ಮುಂತಾದವುಗಳಿಂದ ಕೂಡಿದ ನವರಸ ಪದಾರ್ಥಗಳನ್ನು ಮಧುಕೇಶ್ವರನಿಗೆ ಅರ್ಪಿಸುತ್ತಾಳೆ. ಆದರೆ ಬಸವಣ್ಣ ಎಲ್ಲ ಆಹಾರ ಪದಾರ್ಥಗಳನ್ನೂ ಅಂದರೆ ತನುಗುಣಗಳೆಲ್ಲವನ್ನೂ ಸಾಧನೆಯ ಅಗ್ನಿಯಲ್ಲಿ ಬೇಯಿಸಿ ರುಚಿರುಚಿಯಾಗಿಸಿ ಅರ್ಪಿಸುತ್ತಾನೆ. ಅಂತೆಯೇ ಅವನ ಅರ್ಪಣೆ ಪರಶಿವನಿಗೆ ಗ್ರಾಹ್ಯವಾಗುತ್ತದೆ.

ತಮೋಗುಣಕ್ಕೆ ಲೋಕದಲ್ಲಿ ಮಾತ್ರ ಅವಕಾಶ ಉಂಟಾಗುತ್ತಿದ್ದರೆ ಶಿವಧ್ಯಾನದಲ್ಲಿ ಪರಿಪಕ್ವವಾದ ಸತ್ವಗುಣವನ್ನು ನಿರ್ಗುಣ ಪರಶಿವನು ತನ್ನಲ್ಲಿ ಸಮರಸಗೊಳಿಸುತ್ತಾನೆ ಎನ್ನುವುದು ವೀರಶೈವತ್ವದ ತಿರುಳು.

೧.೨೦ ಭಾವಾಭಾವನಷ್ಟ ಸ್ಥಲ

ತತ್ತ್ವಗೂಡದೆ ವಿಲಕ್ಷಣವಾಗಿ ನಿಂತವನ ಚಿತ್ತವು ಸಮಗ್ರವಾಗಿ ಶಿವತತ್ತ್ವದಿಂದ ತುಂಬಿಕೊಂಡಿರುತ್ತದೆ. ಹೀಗೆ ಭಾವಬೆತ್ತಲೆಯಾದವನು ಶಿವನೇ ಆಗಿ ಶಿವನಲ್ಲಿ ಸಮರಸವಾಗುತ್ತಾನೆಂಬುದನ್ನು ನೋಡಿದೆವು. ಇಂಥ ಭಾವನಷ್ಟವಾದ ಸ್ಥಿತಿಯನ್ನು ನಿರೂಪಿಸುವುದಕ್ಕಾಗಿ ಕವಿ 'ಮನೋಲಯದ ಗತಿ'ಯನ್ನು ರೂಪಿಸಿದ್ದಾನೆ. ಇದನ್ನು 'ಭಾವಲಿಂಗದ ಗತಿ' ಎಂದು ಹೆಸರಿಸಬಹುದಾಗಿತ್ತು. 'ಕೈವಲ್ಯ ಪದ್ಧತಿ'ಯ ರಚನಾಕಾರರು ಇದನ್ನು ಜ್ಞಾನಪ್ರತಿಪಾದನ ಸ್ಥಲ ಎಂದು ಕರೆದಿದ್ದಾರೆ. ಲಿಂಗಾನುಸಂಧಾನವನ್ನು ನೇರವಾಗಿ ನಿರೂಪಿಸುವುದಕ್ಕೆ ಆಯ್ದುಕೊಂಡ ಗತಿಗಳಲ್ಲಿ ಇದು ಪ್ರಮುಖವಾದುದಾಗಿದೆ.

ಸಾಧಕನು ಇಷ್ಟಲಿಂಗೋಪಾಸನೆಯನ್ನು ಮಾಡುತ್ತ ಶಿವಸಮಾಧಿಯಲ್ಲಿ ನಿರ್ಮಲತೆಯನ್ನು ಸಾಧಿಸಬೇಕು.[೨೧] ಆದರ ಫಲವು ಪುಣ್ಯರೂಪದಲ್ಲಿ ಸಂಗ್ರಹವಾಗುತ್ತದೆ. ಆದರಿಂದ ಬೇಡವೆಂದರೂ ಉತ್ತಮ ಜನ್ಮಗಳನ್ನು ತಾಳಬೇಕು.[೨೨] ಇದು ವಾಸನಾಮಯ ನಿಲುವಾಗುವುದರಿಂದ ವೀರಶೈವತ್ವಕ್ಕೆ ಸಮ್ಮತವಾಗುವುದಿಲ್ಲ. ಪಾಪ ಪುಣ್ಯಗಳಿಂದ ಮುಕ್ತನಾಗಿ ಚಿತ್ತದಲ್ಲಿ ಇಡಿಯಾಗಿ ಶಿವತ್ವವನ್ನು ತುಂಬಿಕೊಳ್ಳುವುದಕ್ಕಾದರೂ ಮಾನವ ಜನ್ಮಕ್ಕೆ ಬರಬೇಕು.[೨೩] ನಾಮ–ರೂಪು–ಕ್ರಿಯೆಗಳಲ್ಲಿ ತೋರುವ, ಪಂಚೇದ್ರಿಯಗಳನ್ನು ಸಾಧನ ಮಾಡಿಕೊಂಡು ವಿಷಯದ ಮೋಹದಲ್ಲಿ ಮೆರೆಯುವ ಮಾಯಾವಿಲಾಸಕ್ಕೆ

ಮನಸ್ಸು ಕಾರಣವಾಗುವುದರಿಂದ ಅದನ್ನು ಅಳಿಯುವುದು ವೀರಶೈವಾಚರಣೆಯ ಪ್ರಥಮ ಆದ್ಯತೆ.[೨೬೪] ನಿಜಗುಣ ಶಿವಯೋಗಿ ಈ ಮಾತನ್ನು ಬಹಳ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾನೆ.[೨೬೫] ಸ್ಥೂಲ ತನುವಿನ ಕ್ರಿಯೆಗಳು ಸೂಕ್ಷ್ಮ ತನುವಿನಲ್ಲಿ ತಟಸ್ಥವಾಗುತ್ತವೆ, ಸ್ಥೂಲ-ಸೂಕ್ಷ್ಮ ತನುಗಳ ಕ್ರಿಯೆಗಳು ಕಾರಣ ತನುವಿನಲ್ಲಿ ತಟಸ್ಥವಾಗುತ್ತವೆ. ಇವೆಲ್ಲ ಜಾಗ್ರ, ಸ್ವಪ್ನ, ಸುಪ್ತಿಗಳಿಗೆ ಸಂಬಂಧಪಡುವಂಥವು[೨೬೬] ಈ ಮೂರು ಅವಸ್ಥೆಗಳನ್ನು ಮೀರಿ ತೋರುವ ತೂರ್ಯ ಹಾಗೂ ತೂರ್ಯಾತೀತ ಅವಸ್ಥೆಗಳಲ್ಲಿ ನಿಲ್ಲುವುದು ಮನೋಲಯದಿಂದ ಸಾಧ್ಯ.[೨೬೭] ಯೋಗಪ್ರತಿಪಾದನ ಸ್ಥಲದ ಕೊನೆಯಲ್ಲಿ ನಿಜಗುಣಶಿವಯೋಗಿ ಇದನ್ನು ಅತ್ಯಂತ ಸ್ಪಷ್ಟವಾಗಿ ತಿಳಿಸುತ್ತಾನೆ.[೨೬೮] ಭವಬಂಧನಕ್ಕೆ ಕಾರಣವಾಗುವ ಮನವನ್ನು ಅಳಿದವನು ನಿತ್ಯನೆನಿಸುತ್ತಾನೆ.[೨೬೯] ಮನಸ್ಸನ್ನು ತಿಂದವನಿಗೆ ನಾಮ-ರೂಪು-ಕ್ರಿಯೆಗಳಿಂದಾಗಿ ತೋರುವ ಮಾಯೆ ಇರುವುದಿಲ್ಲ.[೨೭೦] ಹೀಗೆ ಅಲ್ಲಮ ತಿಳಿಸಿದಾಗ ಆ ಕ್ರಮವನ್ನು ತಮ್ಮೆಲ್ಲರಿಗೂ ಕರುಣಿಸಬೇಕೆಂದು ಚೆನ್ನಬಸವಣ್ಣ ಅವನಲ್ಲಿ ಪ್ರಾರ್ಥಿಸುತ್ತಾನೆ.

ವೀರಶೈವತ್ವದ ಲಕ್ಷ್ಯವು ವಾಗದ್ವೈತದಿಂದಾಗಲಿ ಮಹಾನುಭವದಿಂದಾಗಲಿ, ಅಷ್ಟಾಂಗ ಯೋಗದಿಂದಾಗಲಿ ಸಾಧ್ಯವಿಲ್ಲ. ಲಕ್ಷ್ಯವನ್ನು ಹೊಂದಿರುತ್ತೇನೆನ್ನುವುದೂ ಮನದಲ್ಲಿ ಸುಳಿಯದೆ ಆ ಲಕ್ಷ್ಯವನ್ನು ಸಾಧಿಸಬೇಕು.[೨೭೧] ಭಗವದ್ಗೀತೆಯಲ್ಲಿ ಕರ್ಮಾಚರಣೆಯನ್ನು ಕುರಿತು ಇರುವ ಅತೀ ಚರ್ಚಿತ ಶ್ಲೋಕವು ಅಂತರಂಗಾಚರಣೆಯ ಈ ಕರ್ಮವನ್ನೇ ಸೂಚಿಸುತ್ತಿರಬಹುದು.[೨೭೨] ಅರಿವನ್ನು ಅರಿಯಬೇಕೆನ್ನುವವನು ದೇಹ ಮನಸ್ಸುಗಳೆರಡನ್ನೂ ತಟಸ್ಥಗೊಳಿಸಿ ವರಸಮಾದಿಯಲ್ಲಿ ಜಾಗ್ರತನಾಗಬೇಕು.[೨೭೩] ಆನೆಯು ತೆಂಗನ್ನು ಒಡೆಯದೆ ಮೆಲ್ಲನೆ ನುಂಗಿ ಅಗಿದಗಿದು ಅದರ ತಿರಳನ್ನು ಜೀರ್ಣಿಸಿಕೊಳ್ಳುವಂತೆ ತನು ಮನಗಳು ಮಾಯೆ ಎನಿಸುತ್ತಿದ್ದರೂ ಅವುಗಳನ್ನು ನಾಶ ಮಾಡದೆ ಮಾಯೆಯನ್ನು ಹಿಮ್ಮೆಟ್ಟಿಸಿ ಸಚ್ಚಿದಾನಂದವನ್ನು ಅನುಭವಿಸಬೇಕು.[೨೭೪] ಹೀಗೆ ಸಾಧಕನಾದ ಬಸವಣ್ಣನು ಸಮಾಧಿಯಲ್ಲಿ ಚಿತ್ತವನ್ನು ಹಸನುಗೊಳಿಸಿಕೊಂಡು ಅಧ್ಯಾತ್ಮಭಾವದ ಬೆಸುಗೆಯನ್ನು ಸಾಧಿಸಿದನೆಂದು ಅಲ್ಲಮ ಮೆಚ್ಚುಗೆ ವ್ಯಕ್ತಪಡಿಸುತ್ತಾನೆ.[೨೭೫] ಶಿಷ್ಯನ ಸಾಧನೆಯನ್ನು ಕಂಡು ಗುರು ಹರ್ಷ ವ್ಯಕ್ತಪಡಿಸುವ ಪರಿ ಇದು. ಪಿಂಡಾಂಡಗತವಾದ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಇವುಗಳನ್ನು ಪರಾಕಾಶದಲ್ಲಿ ಲೀನಗೊಳಿಸುವುದು ಶರಣತ್ವದಲಕ್ಷಣ.[೨೭೬] ಹಲವಾರು ಜನ್ಮಗಳಲ್ಲಿ ವೀರಶೈವತ್ವದ ಸ್ಪರ್ಶವಿಲ್ಲದೆ ನಿದ್ರೆಯ ಬಲೆಯಲ್ಲಿಯೇ ಬಂದವರಿಗೆ ನಿಜಪದವಿಯನ್ನು ಕೊಡುವುದರ ಮೂಲಕ ತಾನು ಅವರನ್ನು

ಎಚ್ಚರಿಸುವುದಾಗಿ ಅಲ್ಲಮ ತಿಳಿಸುತ್ತಾನೆ.[೨೭೮] ಸಮ್ಯಕ್‌ಜ್ಞಾನ ಶಿರದಲ್ಲಿಂದ ಮೀರಿದ ಸುಖದ ಪರಮಾನಂದವನ್ನು ಕರುಣಿಸುತ್ತ ನಿರುಪಮವಾದ, ನಿಶ್ಚಿಂತ, ನಿಶ್ಚಲ, ಪರಮ ಪದವಿಯನ್ನು ಅವನು ಬಸವಣ್ಣನಿಗೆ ಕರುಣಿಸುತ್ತಾನೆ.[೨೭೯] ಸಾಧಕ ಪರಿಪೂರ್ಣಾವಸ್ಥೆಯನ್ನು ತಲುಪಿದಾಗ ಈ ಲಕ್ಷಣಗಳನ್ನು ಹೊಂದುತ್ತಾನೆಂಬುದು ಇದರ ತಾತ್ಪರ್ಯ.

ಹೀಗೆ ಸಕಲ ಶರಣರಿಗೆ ನಿತ್ಯಪದವಿಯನ್ನಿತ್ತು 'ತತ್ವಮಸಿ' ಮಹಾವಾಕ್ಯದಿಂದತ್ತತ್ತ ಅನುಪಮನಾಗಿ ಉಳಿದ ಗುರುಗುಹೇಶ್ವರ ಅಥವಾ ಪರಶಿವ ಸತ್ಯ ಶರಣರನ್ನು ಕಾಪಾಡುತ್ತಿದ್ದನೆಂದು ಚಾಮರಸ ತಿಳಿಸುತ್ತಾನೆ. ೨೮೦ ಚೆನ್ನಬಸವಣ್ಣನ ವಚನವೊಂದರಲ್ಲಿ ಇದನ್ನು ಹೀಗೆ ನಿರೂಪಿಸಲಾಗಿದೆ.

ಆದಿಶೂನ್ಯಂ ಮಧ್ಯಶೂನ್ಯಮಂತ್ಯಶೂನ್ಯಂ ನಿರಾಮಯಂ
ಸರ್ವಶೂನ್ಯಂ ನಿರಾಕಾರಂ ನಿಶ್ಶಬ್ದಂ ಬ್ರಹ್ಮ ಉಚ್ಯತೇ ಎಂದುದಾಗಿ,
ಆ ನಿರವಯ ಸ್ಥಲವು ಉರಿಯುಂಡಕರ್ಪುರದಂತಿದ್ದಿತ್ತು;
ಇಂತಿದು ನಿರವಯಸ್ಥಲವಯ್ಯ, ಕೂಡಲಚೆನ್ನಸಂಗಮದೇವಾ [೨೮೧]

೧. ೨೧ ಜ್ಞಾನ ಶೂನ್ಯ ಸ್ಥಲ

ಕಾವ್ಯದಲ್ಲಿ ಚಾಮರಸ ವೀರಶೈವಾಚರಣೆಯನ್ನು ನಿರುಪಿಸುವುದಾಗಿ ತಿಳಿಸುತ್ತ ಅದನ್ನು ಅಲ್ಲಮಪ್ರಭುಸಂಪ್ರದಾಯವೆಂದು ಕರೆದಿದ್ದಾನೆ. ಕಲ್ಪನೆಗೆ ಮಾತ್ರ ಸೀಮಿತಗೊಳ್ಳದೆ, ವಾಗದ್ವೈತದಿಂದ ದೂರಾಗಿ, ಬಹಿರಂಗದ ಆಚರಣೆಗಳನ್ನು ಅಂತರಂಗದ ಆಚರಣೆಗಳೊಂದಿಗೆ ಸಮೀಕರಿಸುತ್ತ ಏಕಮೇವಾದ್ವಿತೀಯವಾದ ಬ್ರಹ್ಮವನ್ನು ಸಾಧಿಸುವ ಕ್ರಿಯೆ ಈ ವೀರಶೈವಾಚರಣೆ. ಇದಕ್ಕನುಗುಣವಾಗಿ ಶೂನ್ಯದಿಂದ ಹೊರ ಬಂದ ಶಕ್ತಿ ಶೂನ್ಯಕ್ಕೆ ಮರಳುವ ಪ್ರಕ್ರಿಯೆಯನ್ನು ಕವಿ ತನ್ನ ಕಾವ್ಯದ ವಸ್ತುವಾಗಿಸಿದ್ದಾನೆ. ಅದರ ನಿರೂಪಣೆಗಾಗಿ ಕಥಾನಕವೊಂದನ್ನು ನಿರ್ಮಿಸಿಕೊಂಡು ತನ್ನ ಉದ್ದೇಶವನ್ನು ಸಾಧಿಸಿದ್ದಾನೆ. ತತ್ವ ಹಾಗೂ ಸಿದ್ಧಾಂತಗಳನ್ನು ಸಮನ್ವಯಗೊಳಿಸುತ್ತ ಕೊನೆಯಲ್ಲಿ ಆದಿಶೂನ್ಯ ಹಾಗೂ ಅಂತ್ಯಶೂನ್ಯ ಎರಡೂ ಒಂದೇ ಎಂಬುದನ್ನು ನಿರೂಪಿಸುವುದಕ್ಕಾಗಿ 'ಪರಮೇಶ್ವರನು ಗಿರಿಜೆಗೆ ಬೋಧಿಸಿದ ಗತಿ'ಯನ್ನು ಆಯ್ದುಕೊಂಡಿದ್ದಾನೆ. ಕಾವ್ಯದಲ್ಲಿ ಹತ್ತು ಪದ್ಯಗಳಲ್ಲಿ 'ವೀರಶೈವ' ಪದ ಪ್ರಯೋಗವಾಗಿದ್ದು ಈ ಕೊನೆಯ ಗತಿಯೊಂದೇ ಆರು ಪದ್ಯಗಳನ್ನು ಒಳಗೊಂಡಿದೆ.

[illegible]

[illegible]

> [illegible]

[illegible]

ಶೂನ್ಯದಿಂದ ಹೊರಬಂದ ಜೀವಾತ್ಮರು ಮರಳಿ ಶೂನ್ಯವನ್ನು ತಲುಪಿ ನಿತ್ಯಾನಂದ ಪದವಿಯಲ್ಲಿ ಇರುತ್ತಾರೆ.[೨೮೨] ಇದು ಸತ್ಯ ಸದ್ಭಕ್ತರ ವಿಷಯದಲ್ಲಿ ಮಾತ್ರ ಸತ್ಯ.[೨೮೩] ಶಕ್ತಿಯಲ್ಲಿರುವ ಸಾತ್ವಿಕ ಗುಣಕ್ಕೆ ಮಾತ್ರ ಶಿವನಲ್ಲಿ ಒಂದಾಗಲು ಅವಕಾಶವಾಗಿದ್ದರಿಂದ ಅಕ್ಕಮಹಾದೇವಿ, ಬಸವಣ್ಣ ಹಾಗೂ ಇನ್ನುಳಿದ ಶರಣ-ಶರಣೆಯರು ಅದಕ್ಕೆ ಪಾತ್ರರಾಗಿದ್ದಾರೆ.[೨೮೪] ಪರಶಿವರೂಪದ ಅಲ್ಲಮನಲ್ಲಿ ಸಮರಸವಾಗುವುದೆಂದರೆ ಶಿವತ್ವವನ್ನು ಇಡಿಯಾಗಿ ಸಾಧಿಸುವುದು, ನಾದ-ಬಿಂದು-ಕಳಾರೂಪದ ಯಾವ ಸ್ಪರ್ಶವನ್ನೂ ಪಡೆಯದೆ ಅತೀತನಾಗುವುದು. ಸಾಧಕ ಒಂದು ವೇಳೆ ಇವುಗಳಲ್ಲಿ ತಡೆಯಲ್ಪಟ್ಟವನಾದರೆ ಶಿವತ್ವವು ಅಪೂರ್ಣವಾಗುತ್ತದೆ. ಇಂಥ ಅಪೂರ್ಣ ಸಾಧನೆಯನ್ನು ಪರಶಿವ ಮೆಚ್ಚಿಕೊಳ್ಳುವುದಿಲ್ಲ. ಶೈವದಲ್ಲಿ ಭವವು ಗಂಧರೂಪದಲ್ಲಿ ಉಳಿಯಬಹುದು, ವೀರಶೈವತ್ವವು ಭಾವಬೆತ್ತಲೆಯಾಗಿಸಿ ಪರಿಪೂರ್ಣ ಮೋಕ್ಷಕ್ಕೆ ದಾರಿಯಾಗಿಸುತ್ತದೆ.

ಆತನಲ್ಲಮ ಸಕಲ ಸಮಯ
ಪ್ರೀತನಲ್ಲಿಯು ಶೈವದಲಿ ಸಂ
ಪ್ರೀತನದಱೊಳು ವೀರಶೈವದಲತಿಮಹಾಪ್ರೀತ ।
ಈ ತೆಱನನಱಿದಖಿಳ ಭಕ್ತ ಸ
ಮೇತವಂತಾ ವೀರಶೈವದ
ನೀತಿಯನೆ ನಿರ್ಣಯಿಸುತಿರ್ದರು ಕಾಂತೆ ಕೇಳೆಂದ ॥ [೨೮೫]

ಅಪರಿಪೂರ್ಣತೆಯಿಂದ ಪರಿಪೂರ್ಣತೆಯೆಡೆಗೆ ಕ್ರಮಿಸುವುದು ಧರ್ಮ. ಈ ಸಾಧನದಲ್ಲಿ ಪುಣ್ಯರೂಪದ ಸಂಪತ್ತು ಪ್ರಾಪ್ತವಾಗುತ್ತದೆ. ಆದರೆ ಪರಮ ಮೋಕ್ಷಕ್ಕಾಗಿ ಕಾಮನೆಯನ್ನು ಹೊಂದಿ ಧರ್ಮ-ಅರ್ಥ-ಕಾಮ-ಮೋಕ್ಷಗಳನ್ನು ಸಮನ್ವಯಗೊಳಿಸುವುದೇ ವೀರಶೈವದ ಹಾದಿ[೨೮೬] ಹೀಗೆ ಪಾಪ-ಪುಣ್ಯಗಳ ಯಾವ ಅಂಶವೂ ಇಲ್ಲದೆ ಪರಶಿವನಲ್ಲಿ ಒಂದಾಗುವ ವೀರಶೈವರು ನಿಷ್ಕರ್ಮರೆನಿಸುತ್ತಾರೆ.[೨೮೭] ಕರ್ಮದಲ್ಲಿ ಜೀವದ್ರೋಹದ, ಭವಬಾಧೆಯ ಸಾಧ್ಯತೆ ಇರುತ್ತದೆ. ಆದರೆ ನಿಷ್ಕರ್ಮದ ವೀರಶೈವರು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತ ಪರಮಸುಖಿಗಳಾಗಿರುತ್ತಾರೆ.[೨೮೮] ಈ ಆಚರಣೆಯಲ್ಲಿ ತೊಡಗದವರು ಭುವಿಯಲ್ಲಿ ತಮ್ಮ ತಮ್ಮ ಕರ್ಮಕ್ಕನುಗುಣವಾಗಿ ಜನ್ಮವೆತ್ತಿ ಬರುವಂತೆ ಶಿವ ಅವರಿಗೆ ಕೃಪೆ ತೋರುತ್ತಾನೆ.[೨೮೯] ಇವರಲ್ಲಿ ಗುರುಕೃಪೆಗೆ ಒಳಗಾಗುವವರು ನಿರುಪಮಸ್ಥಾನವನ್ನು ಪಡೆಯುತ್ತಾರೆ.[೨೯೦]

[illegible]

[illegible]

[illegible]

ಅವರೆಲ್ಲ ನಾಮ-ರೂಪು-ಕ್ರಿಯೆಗಳ ಮಾಯಾಬಂಧನವನ್ನು ಇಳುಹಿ ನಿತ್ಯ ನಿರಾವಲಂಬದ ಸುಖಿಗಳಾಗುತ್ತಾರೆ.[೬೧] ಈ ದೃಷ್ಟಿಯ ಹಿನ್ನೆಲೆಯಲ್ಲಿ ಪ್ರಭುಲಿಂಗಲೀಲೆಯನ್ನು ಓದಿದರೆ, ಅದರರ್ಥ ಮನಸ್ಸಿನಲ್ಲಿ ನಿಂತರೆ ವೀರಶೈವತ್ವಕ್ಕೆ ದಾರಿ ಸಿಗುತ್ತದೆ.[೬೨]

ಆಗಮೋಕ್ತ ವೀರಶೈವತ್ವಕ್ಕೂ ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಬಸವಾದಿ ಪ್ರಮಥರ ಕ್ರಾಂತಿಯ ಘಟನೆಗಳಿಗೂ ಸಮಾನಾಂತರವಾದ ಸಂಬಂಧಗಳನ್ನು ಚಾಮರಸ ಕಲ್ಪಿಸಿಕೊಂಡಿದ್ದಾನೆ. ವೀರಶೈವಾಚಾರದ ವಿವಿಧ ಹಂತಗಳಿಗೆ ಅದನ್ನು ಮೈಗೂಡಿಸಿಕೊಂಡಿದ್ದ ಶಿವಶರಣ-ಶಿವಶರಣೆಯರಲ್ಲಿ ಸೂಕ್ತ ಸಂಕೇತ ಅಥವಾ ಪ್ರತಿಮೆಗಳನ್ನು ರೂಪಿಸುತ್ತ, ತತ್ತ್ವಗಳನ್ನು ಸಾದ್ಯವಾದಷ್ಟು ಮಟ್ಟಿಗೆ ರಂಜನೀಯವಾಗಿ ನಿರೂಪಿಸಲು ಪ್ರಯತ್ನಿಸಿದ್ದಾನೆ.

೨. ನಾಮ-ರೂಪು-ಕ್ರಿಯೆಗಳು

ಪ್ರಭುಲಿಂಗಲೀಲೆಯಲ್ಲಿ ನಾಮರೂಪುಕ್ರಿಯೆಗಳು ಕಾವ್ಯದ ಪ್ರಮುಖ ಅಂಗಗಳಾಗಿ ಮೂಡಿ ಬಂದಿವೆ. ಕಾವ್ಯದ ಮೊದಲ ಪದ್ಯದಲ್ಲಿಯೇ ಕಾಣಿಸಿಕೊಳ್ಳುವ ಇವುಗಳನ್ನು ಕೊನೆಯ ಗತಿಯ ಹದಿನೇಳನೆಯ ಪದ್ಯದಲ್ಲಿ ತರುವುದರೊಂದಿಗೆ ಕವಿ ವಸ್ತುವನ್ನು ಮುಕ್ತಾಯಗೊಳಿಸುತ್ತಾನೆ. ಆ ಗತಿಯ ಉಳಿದ ಎಂಟು ಪದ್ಯಗಳು ಕಾವ್ಯದ ರಚನಾಂಗಕ್ಕೆ ಮಾತ್ರ ಸಂಬಂಧಿಸಿದಂಥವುಗಳು.

ನಿಷ್ಕಲಲಿಂಗಸ್ತುತಿ ಮಾಡುತ್ತ ಕವಿ ಮೊದಲ ಗತಿಯ ಮೊದಲ ಪದ್ಯದಲ್ಲಿ ಆ ರೂಪದ ಪರಶಿವನು ನಾಮರೂಪಕ್ರಿಯಾಕಳಾಪವಿರಾಮನೆಂದು ತಿಳಿಸುತ್ತಾನೆ. ಅಲ್ಲಮ ಪ್ರಭುವಿಗೂ ಪರಶಿವನಿಗೂ ಅವಿನಾಭಾವ ಸಂಬಂಧವಿಟ್ಟುಕೊಂಡು ಕಾವ್ಯ ರಚಿಸಿರುವ ಕವಿಗೆ 'ಅಲ್ಲಮ ಇವುಗಳಿಂದ ದೂರಾದವನು ಎಂಬ ಭಾವ ಅಳವಟ್ಟಿದೆ. ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿಯಲ್ಲಿ ಮಾಯೆ ತಾನು ಹರಿಹರಬ್ರಹ್ಮಾದಿಗಳೆಲ್ಲರನ್ನು ತನ್ನ ಅಧೀನರನ್ನಾಗಿ ಮಾಡಿಕೊಂಡು ಕಾಡಿರುವುದಾಗಿ ಅಲ್ಲಮನಿಗೆ ತಿಳಿಸುತ್ತಾಳೆ.[೬೩] ನಿಷ್ಕಲ ಪರಶಿವನಿಗೂ ಸಕಲ ಮಾಯೆಗೂ ಇರುವ ಭೇದ ತೋರುವುದು ಈ ನಾಮರೂಪುಕ್ರಿಯೆಗಳಿಂದಾಗಿ ಎನ್ನುವುದು ಇದರಿಂದ ತಿಳಿದು ಬರುತ್ತದೆ. ಅಂತೆಯೇ ನಿರ್ಗುಣದಿಂದ ಸಗುಣಕ್ಕೆ ಬಂದು ಇವುಗಳಿಂದ ಕೂಡಿರುವ ಮಾಯೆಯನ್ನು ತಾನು ಆಡಿಸುತ್ತಿರುವುದಾಗಿ ಅಲ್ಲಮ ಅವಳಿಗೆ

[illegible]

[illegible]

[illegible]

[illegible]

[illegible]

ತಿಳಿಸುತ್ತಾನೆ.[೨೯೪] ಹೀಗೆ ನಾಮರೂಪಕ್ರಿಯೆಗಳಿಂದ್ಯುಕ್ತವಾಗಿ ಸಗುಣಕ್ಕೆ ಸಂಕೇತವಾಗಿರುವ ಮಾಯೆ ಹಾಗೂ ನಾಮರೂಪಕ್ರಿಯೆಗಳಾಪವಿರಾಮನಾದ ಪರಶಿವನಿಗೆ ಸಂಕೇತವಾಗಿರುವ ಅಲ್ಲಮ ಇವರ ನಡುವಿನ ಹೋರಾಟದ ರೂಪದಲ್ಲಿ ಮಾಯಾಸಂಪುಟ ಮೂಡಿ ಬಂದಿದೆ.

ಪಾರ್ವತಿ ಶಿವನನ್ನು ಕುರಿತು, 'ದೇವಾ ನಿನ್ನೊಡ್ಡೋಲಗದಲ್ಲಿದ್ದ ಘನಮಹಿಮರೆಲ್ಲರು ಭವಕೆ ಬಾರದೆ ನಿತ್ಯಸುಖದಿಂದಿರುವರೋ ಇಲ್ಲವೆ ಅವರಿಗೆ ನೆಲೆಯೇ ಇಲ್ಲವೋ?' ಎಂದು ಕೇಳುತ್ತಾಳೆ.[೨೯೫] ಇದು ವೀರಶೈವಾಚರಣೆಯ ಐಕ್ಯ ಸ್ಥಿತಿಗೆ ಸಂಬಂಧಿಸಿದ ಪ್ರಶ್ನೆ. ನಿತ್ಯಸುಖವೆಂದರೆ ನಾದಬಿಂದು ಕಲಾತೀತ ಸ್ಥಿತಿ, ಐಕ್ಯಸ್ಥಿತಿ.[೨೯೬] ಇದಕ್ಕೆ ಶಿವನು ಕೊಡುವ ಉತ್ತರ ಪ್ರಭುಲಿಂಗಲೀಲೆ ಕಾವ್ಯದ ವಸ್ತುವಿಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿದೆ. ನಾಮರೂಪಕ್ರಿಯೆಗಳನ್ನು ಗೆಲಬಲ್ಲವರ ಹೊರತು ಉಳಿದವರಾರಿಗೂ ನಿತ್ಯ ಸುಖ ದೊರೆಯಲಾರದೆಂಬ ತತ್ತ್ವವನ್ನು ಅದು ಒಳಗೊಂಡಿದೆ.[೨೯೭] ಈ ನಾಮರೂಪುಕ್ರಿಯೆಗಳನ್ನು ಗೆಲ್ಲುವ ಕ್ರಮವನ್ನು ತಿಳಿಸಬೇಕೆಂದು ಪಾರ್ವತಿ ಕೇಳಿದಾಗ ಅದು 'ಯೋಗಯೋಗ್ಯರು' ಮಾತ್ರ ಸಾಧಿಸುವ ಕ್ರಮವೆಂದು ಶಿವ ತಿಳಿಸುತ್ತಾನೆ.[೨೯೮] ಅಂದರೆ ನಾಮರೂಪುಕ್ರಿಯೆಗಳೇ ಭವಬಂಧನಕ್ಕೆ ಕಾರಣವೆಂದೂ ಅವುಗಳಿಂದ ದೂರಾಗಿ ನಿರ್ಗುಣತ್ವದಲ್ಲಿ ಒಂದಾಗುವುದು ವೀರಶೈವತ್ವದ ಗುರಿಯೆಂದೂ ಶಿವನ ಉತ್ತರ ಸೂಚಿಸುತ್ತದೆ. ಈ ಸಂವಾದದಲ್ಲಿ 'ಮಾಯೆ ಎಂದರೇನು? ಅದಕ್ಕೆ ಪರಿಹಾರವೇನು?' ಎಂಬ ಪ್ರಶ್ನೆಗೆ 'ನಾಮರೂಪುಕ್ರಿಯೆಗಳಲ್ಲಿ ಒಂದಾಗುವುದು ಭವಬಂಧನ ಅಥವಾ ಮಾಯೆ ಎಂದೂ ಅವುಗಳಿಂದ ದೂರಾಗುವುದು ಮೋಕ್ಷವೆಂದೂ' ಉತ್ತರ ಮೂಡಿ ಬರುತ್ತದೆ. ಹೀಗೆ ಕವಿ ಶಿವಯೋಗಾಚರಣೆಯ ನಿರೂಪಣೆಗಾಗಿ ಅಡಿಪಾಯವೊಂದನ್ನು ಈ ಸಂವಾದದ ರೂಪದಲ್ಲಿ ಸಿದ್ಧಪಡಿಸುತ್ತಾನೆ.

ಶಿವ ಯೋಗಾಚರಣೆಯ ವಿವಿಧ ಹಂತಗಳ ನಿರೂಪಣೆಗಾಗಿ ಶಬ್ದ ಚಿತ್ರಗಳನ್ನು ಹೆಣೆದಿರುವ ಕವಿ ನಾಮರೂಪುಕ್ರಿಯೆಗಳನ್ನು ಗೆಲ್ಲುವ ಕ್ರಮವಾಗಿ ಅವು ಮೂಡಿ ಬಂದಿರುವುದನ್ನು ನಿರೂಪಿಸುತ್ತ ಮುಂದೆ ಸಾಗುತ್ತಾನಾದರೂ ಪುನಃ ಪುನಃ ಈ ಪದ ಪ್ರಯೋಗ ಮಾಡುವುದಿಲ್ಲ. ಅದೆಲ್ಲ ಅಂತರಂಗಾಚರಣೆಯ ಸಾಂಕೇತಿಕ ನಿರೂಪಣೆಯಾಗಿರುವುದರಿಂದ ಶಿವಯೋಗಾಚರಣೆಯ ವಿವಿಧ ಹಂತಗಳನ್ನು ಆಯ್ದುಕೊಂಡು ಅಜ್ಞಾನಕ್ಕೆ ವಶವಾಗಿರುವವರ ಪ್ರಸಂಗಗಳನ್ನು ಸಾಂದರ್ಭಿಕವಾಗಿ ಎತ್ತಿ ತೋರಿಸುತ್ತಾನೆ. ಉತ್ತರಾರ್ಧದಲ್ಲಿ ಬರುವ ಮನೋಲಯದ ಗತಿಯಲ್ಲಿ ಬಸವಣ್ಣ'ಮನವನಳಿದ ನಿರಾವಲಂಬಿಯ ಕುರುಹೇನು?'[೨೯೯] ಎಂದು ಕೇಳಿದಾಗ, ಅಲ್ಲಮ 'ಮನವನ್ನು ತಿಂದ ಮಹಾ ನಿರುಪಮ ನಿರಾಳನಿಗೆ ನಾಮರೂಪಕ್ರಿಯೆಗಳಿರುವುದಿಲ್ಲ'

[illegible]

[illegible]

[illegible]

ಎಂದು ಉತ್ತರಿಸುತ್ತಾನೆ.[೩೦೦] ಹೀಗೆ ಮನೋಲಯದ ಕ್ರಮವೇ ನಾಮರೂಪುಕ್ರಿಯೆಗಳನ್ನಳಿಯುವುದು. ಮಾತಿನ ಅದ್ವೈತದಿಂದ ಮಾಯಾರೂಪದ ಮಾರಿಯನ್ನು ಕೊಲ್ಲಲಾಗದೆಂದೂ ದೃಢಸಂಕಲ್ಪದಿಂದ ಮುಂದುವರೆಯುವ ಉಪಮಾತೀತನಿಗೆ ನಾಮರೂಪಕ್ರಿಯೆಗಳನ್ನು ನಿವಾರಿಸುವುದು ಸಾಧ್ಯವೆಂದೂ ಅಲ್ಲಮ ಅವನಿಗೆ ತಿಳಿಸುತ್ತಾನೆ.[೩೦೧] ಕೊನೆಯಲ್ಲಿ 'ಪರಮೇಶ್ವರನು ಗಿರಿಜೆಗೆ ಬೋಧಿಸಿದ ಗತಿಯಲ್ಲಿ ಪ್ರಾಕೃತಿಕ ಅಂಶಗಳಿಂದ ಮುಕ್ತರಾದ ಶಿವಯೋಗಿಗಳು ತಮ್ಮ ನಾಮರೂಪಕ್ರಿಯಾವಿಳಾಸವನ್ನು ಇಳುಹಿ ಶಿವತ್ವದಲ್ಲಿ ಒಂದಾಗಿ ನಿರಾವಲಂಬದ ಸುಖಿಗಳಾದರು' ಎಂದು ಪರಮೇಶ್ವರನು ಗಿರಿಜೆಗೆ ತಿಳಿಸುತ್ತಾನೆ.[೩೦೨]

ಚಾಮರಸ ಕಾವ್ಯದಲ್ಲಿ 'ನಾಮರೂಪಕ್ರಿಯಾ', 'ನಾಮರೂಪುಕ್ರಿಯಾ' ಹಾಗೂ 'ನಾಮರೂಪಕ್ರೀ' ಎಂದು ಅಲ್ಲಲ್ಲಿ ಪದಪ್ರಯೋಗ ಮಾಡಿದ್ದಾನೆ. 'ರೂಪು' ಇದು 'ರೂಪ' ಇದರ ತದ್ಭವ.[೩೦೩] 'ಕ್ರೀ' ಎಂಬ ಮೂಲಧಾತು ರೂಪವನ್ನೇ 'ಕ್ರಿಯೆ' ಎಂಬ ಅರ್ಥದಲ್ಲಿ ಕವಿ ಪದಪ್ರಯೋಗ ಮಾಡಿದ್ದಾನೆ.[೩೦೪]

ಟಿಪ್ಪಣಿಗಳು

೧. ಸಂ. ಡಾ. ಎಂ. ಎಸ್. ಸುಂಕಾಪುರ , ಲಿಂಗಚಿದಮೃತ ಬೋಧೆ , ಪಿಂಡಪ್ರಕಾಶಸ್ಥಲ, ವಚನ ಸಂ. ೨೦
೨. ಪ್ರ. ಲೀ. ಗತಿ ೨, ಪದ್ಯ ೧೦
೩. ಪ್ರ. ಲೀ. ಗತಿ ೧೧, ಪದ್ಯ ೮
೪. ಪ್ರ. ಲೀ. ಗತಿ ೧೨, ಪದ್ಯ ೨
೫. ಪ್ರ. ಲೀ. ಗತಿ ೧೨, ಪದ್ಯ ೧೭
೬. ಪ್ರ. ಲೀ. ಗತಿ ೧೩, ಪದ್ಯ ೨
೭. ಪ್ರ. ಲೀ. ಗತಿ ೧೩, ಪದ್ಯ ೫೭
೮. ಪ್ರ. ಲೀ. ಗತಿ ೧೭, ಪದ್ಯ ೩
೯. ಪ್ರ. ಲೀ. ಗತಿ ೧೭, ಪದ್ಯ ೪
೧೦. ಪ್ರ. ಲೀ. ಗತಿ ೧೯, ಪದ್ಯ ೧೭
೧೧. ಪ್ರ. ಲೀ. ಗತಿ ೧೯, ಪದ್ಯ ೪೯
೧೨. ಸಂ. ಎಂ. ಆರ್. ಶ್ರೀನಿವಾಸಮೂರ್ತಿ, ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ, ಪುಟ ೧೬
೧೩. ಅದೇ ಪುಟ ೧೫ ಮತ್ತು ೧೬
೧೪. ಪ್ರ. ಲೀ. ಗತಿ ೫, ಪದ್ಯ ೧೩
೧೫. ಪ್ರ. ಲೀ. ಗತಿ ೮, ಪದ್ಯ ೨೦

೧೬. ಪ್ರ. ಲೀ. ಗತಿ ೧೯, ಪದ್ಯ ೩೫

೧೭. ಪ್ರ. ಲೀ. ಗತಿ ೧೯, ಪದ್ಯ ೪೫

೧೮. ಸಂ. ಜಿ. ಎಂ. ಉಮಾಪತಿಶಾಸ್ತ್ರಿಗಳು, ವಿವೇಕ ಚಿಂತಾಮಣಿ, ಜಂಗಮಲಿಂಗ ತ್ರೈವಿಧ್ಯ, ಪುಟ ೧೧೨

೧೯. ಪ್ರ. ಲೀ. ಗತಿ ೬, ಪದ್ಯ ೨೩

೨೦. ಪ್ರ. ಲೀ. ಗತಿ ೬, ಪದ್ಯ ೨೪

೨೧. ಪ್ರ. ಲೀ. ಗತಿ ೬, ಪದ್ಯ ೨೬

೨೨. ಪ್ರ. ಲೀ. ಗತಿ ೭, ಪದ್ಯ ೨೦

೨೩. ಪ್ರ. ಲೀ. ಗತಿ ೭, ಪದ್ಯ ೪೭

೨೪. ಪ್ರ. ಲೀ. ಗತಿ ೭, ಪದ್ಯ ೮೫,೮೬

೨೫. ಪ್ರ. ಲೀ. ಗತಿ ೧೩, ಪದ್ಯ ೨೭

೨೬. ಚಿದ್ರೂಪಂ ಪರಂ ತತ್ತ್ವಂ ಶಿವಾಖ್ಯಂ ವಿಶ್ವಕಾರಣಂ
ನಿರಸ್ತವಿಶ್ವಕಾಲುಷ್ಯಂ ನಿಷ್ಕಲಂ ನಿರ್ವಿಕಲ್ಪಕಂ ॥ ೧೧ ॥
ಸತ್ತಾನಂದ ಪರಿಸ್ಫೂರ್ತಿ ಸಮುಲ್ಲಾಸಕಲಾಮಯಮ್
ಅಪ್ರಮೇಯಮನಿರ್ದೇಶ್ಯಂ ಮುಮುಕ್ಷುಭಿರುಪಾಸಿತಮ್ ॥ ೧೨ ॥
ಸಂ. ಶ್ರೀ ಸಿದ್ಧೇಶ್ವರ ಸ್ವಾಮಿಗಳು , ಸಿದ್ಧಾಂತ ಶಿಖಾಮಣಿ, ಭಕ್ತ ಸ್ಥಲಲಿಂಗಧಾರಣ ಸ್ಥಲ, ಪುಟ ೧೦೫

೨೭. ಪ್ರ. ಲೀ. ಗತಿ ೩, ಪದ್ಯ ೨೧

೨೮. ಪ್ರ. ಲೀ. ಗತಿ ೬, ಪದ್ಯ ೨೧

೨೯. ಪ್ರ. ಲೀ. ಗತಿ ೬, ಪದ್ಯ ೩೫

೩೦. ಪ್ರ. ಲೀ. ಗತಿ ೭, ಪದ್ಯ ೬೧

೩೧. ಪ್ರ. ಲೀ. ಗತಿ ೧೨, ಪದ್ಯ ೨೪

೩೨. ಪ್ರ. ಲೀ. ಗತಿ ೧೪, ಪದ್ಯ ೨೧

೩೩. ಪ್ರ. ಲೀ. ಗತಿ ೧೯, ಪದ್ಯ ೨೮

೩೪. ಪ್ರ. ಲೀ. ಗತಿ ೨೦, ಪದ್ಯ ೧೨

೩೫. ಪ್ರ. ಲೀ. ಗತಿ ೨೨, ಪದ್ಯ ೯

೩೬. ಪ್ರ. ಲೀ. ಗತಿ ೨೨, ಪದ್ಯಗಳು ೫೩, ೫೭

೩೭. ಪ್ರ. ಲೀ. ಗತಿ ೨೩, ಪದ್ಯ ೪೨

೩೮. ಪ್ರ. ಲೀ. ಗತಿ ೨೩, ಪದ್ಯ ೫೦

೩೯. ಪ್ರ. ಲೀ. ಗತಿ ೨೪, ಪದ್ಯ ೪೧

೪೦. ಪ್ರ. ಲೀ. ಗತಿ ೨, ಪದ್ಯ ೧೦

೪೧. ಪ್ರ. ಲೀ. ಗತಿ ೨, ಪದ್ಯ ೧೧

೪೨. ಪ್ರ. ಲೀ. ಗತಿ ೨, ಪದ್ಯ ೧೩

೪೩. ಪ್ರ. ಲೀ. ಗತಿ ೨, ಪದ್ಯ ೩೪

೪೪. ಡಾ. ಜಿ. ಎಸ್. ಘಿವಾರಿ, ಸಂಶೋಧನ ಮಹಾಪ್ರಬಂಧ, ಮಾಯಾತತ್ತ್ವ–ಪ್ರಬುತತ್ತ್ವ, ಪುಟ ೯೪

೪೫. ಡಾ. ಆರ್. ಸಿ. ಹಿರೇಮಠ , ಮಹಾಯಾತ್ರೆ , ಪುಟ ೨೬೧

೪೬. ಡಾ. ಆರ್. ಸಿ. ಹಿರೇಮಠ , ಮಹಾಯಾತ್ರೆ ಪುಟ ೨೬೫

೪೭. ಸಂ. ಡಾ. ಆರ್. ಸಿ. ಹಿರೇಮಠ , ಚೆನ್ನ ಬಸವಣ್ಣನವರ ವಚನಗಳು, ಕರಣಹಸಿಗೆ, ಪುಟ ೬೫೫

೪೮. ತಿರುಗಳ ಮುಱಿದು ಗಗನಕ್ಕೆ ಈಡಾಡುವ
ಅನಿಲ ರೂಪೊ ನಿರೂಪೊ? ಬಲ್ಲಡೆ ನೀವು ಹೇಳಿರೆ !
ಇಂತಿ ಆಳಿನಾಳಿನ ಕೀಲಾಳಿನ ಅಂತುವನಾರಿಗೆಯು ಅಱಿಯಬಾರದು
ಅನಾದಿ ಮೂದೊಡೆಯನ ಬಲ್ಲೆನೆಂಬವನ ಪರಿಯ ನೋಡಾ !
ರೂಪೆಂದಡೆ ಬದ್ಧ ನಿರೂಪೆಂದಡೆ ಶೂನ್ಯ,
ರೂಪಾದಿರೂಪನೆನ್ನ ಕಪಿಲಸಿದ್ಧಮಲ್ಲಿಕಾರ್ಜುನದೇವರು
ಗುರುಕಾರುಣ್ಯವುಳ್ಳವರಿಗಲ್ಲದೆ ಅಱುಯಬಾರದು
ಸಂ. ಡಾ. ಎಂ. ಎಸ್. ಸುಂಕಾಪುರ, ಲಿಂಗಚಿದಮೃತ ಬೋಧೆ, ಮಾಯಾ ವಿಡಂಬನ ಸ್ಥಲ, ಪುಟ ೩೧

೪೯. ಸುರರಿಗೆ ನಿರಂತರ ಜಾಗರಣೆ
ಮರುಳುಗಳಿಗೆ ನಿರಂತರ ಸ್ವಪ್ನ
ಅಚರಜೀವಿಗಳಿಗೆ ನಿರಂತರ ಸುಷುಪ್ತಿ
ವರಯೋಗಿಗಳಿಗೆ ನಿರಂತರ ತುರಿಯ
ಸ್ಥೂಲತನು ಸೂಕ್ಷ್ಮತನು ಕಾರಣ ತನುವ
ಪ್ರಾಪ್ತಿಸುತ್ತೀ ತನುತ್ಪನ್ನ ಮಾಯೆ
ತನುವಾಗಿ ಮಾಯ ತೋರುತಿಪ್ಪುದು
ಸಕಲ ತನುರಹಿತ ನೀನೆಂದು
ಸಕಲ ಮಾಯೆ ಹುಟ್ಟಿಸಿಯೆಂದು
ತನ್ನಥ ತನ್ನಿಂದಱಿದು ಪರಮಾರ್ಥ ನೀನೆ
ಸಿಮ್ಮಲಿಗೆಯ ಚೆನ್ನರಾಮಾ
ಸಂ. ಡಾ. ಎಂ. ಎಸ್. ಸುಂಕಾಪುರ , ಲಿಂಗಚಿದಮೃತ ಬೋಧೆ, ಮಾಯಾವಿಡಂಬನ ಸ್ಥಲ, ಪುಟ ೨೬

೫೦. ದೇವರೆಲ್ಲರ ಹೊಡತಂದು ದೇವಿಯರೊಳಗೆ ಕೂಡಿತ್ತು ಮಾಯೆ
ಹರಹರಾ ಮಾಯೆ ಇದ್ದೆಡೆಯ ನೋಡಾ
ಶಿವಶಿವಾ ಮಾಯೆ ಇದ್ದೆಡೆಯ ನೋಡಾ
ಎರಡೆಂಬತ್ತುಕೋಟಿ ಪ್ರಮಥಗಣಂಗಳು, ಅಂಗಾಲ ಕಣ್ಣವರು
ಮೈಯೆಲ್ಲಾ ಕಣ್ಣವರು, ನಂದಿವಾಹನ ರುದ್ರರು–
ಇವರೆಲ್ಲರು, ಮಾಯೆಯ ಕಾಲಗಾಹಿನ ಸರಮಾಲೆ ಕಾಣಾಗುಹೇಶ್ವರಾ
ಚಾಮರಸ ಈ ವಚನವನ್ನು ಮಾಯೆ ಹುಟ್ಟಿದ ಗತಿಯ ವಸ್ತುವಿಗೆ ಸಾಕ್ಷಿಯ ರೂಪದಲ್ಲಿ ಬಳಸಿದ್ದಾನೆ.

ಸ. ವ. ಸಂ. , ಅಲ್ಲಮಪ್ರಭು ದೇವರ ವಚನ ಸಂಪುಟ, ಮಾಯಾವಿಲಾಸ ವಿಡಂಬನ ಸ್ಥಲ, ವ. ೨೩, ಪುಟ ೯.

೫೧. ಡಾ. ಆರ್. ಸಿ. ಹಿರೇಮಠ , ಮಹಾಯಾತ್ರೆ ಪರಶಿವ- ಪರಾಶಕ್ತಿ, ಪುಟ ೨೬೨

೫೨. ಕೇವಲಂ ಸಚ್ಚಿದಾನಂದ ಪ್ರಕಾಶಾದ್ವಯಲಕ್ಷಣಮ್
ಶೂನ್ಯಕಲ್ಪ ಪರಾಕಾಶಂ ಪರಬ್ರಹ್ಮ ಪ್ರಕಾಶತೆ
ಸಂ. ಶ್ರೀ ಸಿದ್ದೇಶ್ವರ ಸ್ವಾಮಿಗಳು , ಸಿದ್ಧಾಂತ ಶಿಖಾಮಣಿ, ಐಕ್ಯಸ್ಥಲ
ಜ್ಞಾನಶೂನ್ಯಸ್ಥಲಂ, ಪದ್ಯ ೯, ಪುಟ ೮೦೬

೫೩. ಸಂ. ಡಾ. ಆರ್. ಸಿ. ಹಿರೇಮಠ , ಚೆನ್ನಬಸವಣ್ಣನವರ ವಚನಗಳು, ಕರಣ ಹಸಿಗೆ, ಅಷ್ಟತನುಗಳು, ಪುಟ ೬೬೫

೫೪. ಡಾ. ಆರ್. ಸಿ. ಹಿರೇಮಠ , ಚೆನ್ನಬಸವಣ್ಣನವರ ವಚನಗಳು, ಕರಣ ಹಸಿಗೆ, ಅಂತರಂಗದಷ್ಟಮದಂಗಳು, ಪುಟ ೬೬೬

೫೫. ಹುಜನ್ಮಕೃತ್ಯೆ , ಪುಣ್ಯೈ , ಪ್ರಕ್ಷೀಣೆ ಪಾಪಪಂಜರೇ
ಶುದ್ಧಾಂತ , ಕರಣೋ ದೇಹೀ ಪಿಂಡಶಬ್ದೇನ ಗೀಯತೆ
ಸಂ. ಶ್ರೀ ಸಿದ್ಧೇಶ್ವರ ಸ್ವಾಮಿಗಳು , ಸಿದ್ಧಾಂತ ಶಿಖಾಮಣಿ , ಭಕ್ತಸ್ಥಲ/ಪಿಂಡಸ್ಥಲ, ಪದ್ಯ೧, ಪುಟ ೫೫

೫೬. ಸಂ. ಡಾ. ಬಿ. ಬಿ ಹೆಂಡಿ , ಕೆರೆಯ ಪದ್ಮರಸವಿರಚಿತ ದೀಕ್ಷಾ ಬೋಧೆ, ಪ್ರಥಮಸ್ಥಲ ಪುಟ ೪೧

೫೭. ಎನ್. ಬಿ. ಕೊಂಗವಾಡ , ಶೈಕ್ಷಣಿಕ ಮನೋವಿಜ್ಞಾನ , ಕಿಶೋರಾವಸ್ಥೆ

೫೮. Adolescence is a period of srong sexual desires. Girls are much more interested in members of the opposite sex. Boys likewise develop new sex interests which lead to concern with personal appearance. Adolescence is the period when initial criminal activity reaches its peak.
Blair– Jones –Simpson , Educational Psychology ,
The Adolescent years.

೫೮. ಗುಡಿಯ ನೋಡಿರಣ್ಣಾ ದೇಹದ
ಗುಡಿಯ ನೋಡಿರಣ್ಣಾ ॥ ಪಲ್ಲ ॥
ಗುಡಿಯ ನೋಡಿರಿದು
ಪೊಡವಿಗೆ ಒಡೆಯನು
ಅಡಗಿಕೊಂಡು ಕಡುಬೆಡಗಿನೊಳಿರುತಿಹ
ಗುಡಿಯ ನೋಡಿರಣ್ಣಾ ॥ ಅನುಪಲ್ಲ ॥
ಸಂ. ಡಾ. ಶಿವಾನಂದ ಗುಬ್ಬಣ್ಣವರ , ಬರಕೋ ಪದಾ ಬರಕೋ, ಶಿಶುನಾಳ ಶರೀಫರ ಪದಗಳ ಸಂಗ್ರಹ ಬೋಧ, ಪುಟ ೫೭

೬೦. ಸಂ. ಹೊಸಕೆರೆ ಚಿದಂಬರಯ್ಯ , ಶ್ರೀ ಮಹಲಿಂಗರಂಗಕವಿಯ ಅನುಭವಾಮೃತ , ತಂಪದಾರ್ಥಶೋಧನೆ, ಪದ್ಯ ೪೯, ಪುಟ ೬೭

೬೧. ಪ್ರ. ಲೀ. ಗತಿ ೩ ಪದ್ಯ ೧೨

೬೨. ಪ್ರ. ಲೀ. ಗತಿ ೩ ಪದ್ಯ ೧೩
೬೩. ಪ್ರ. ಲೀ. ಗತಿ ೩ ಪದ್ಯ ೨೪
೬೪. ಪ್ರ. ಲೀ. ಗತಿ ೩ ಪದ್ಯ ೪೨
೬೫. ಪ್ರ. ಲೀ. ಗತಿ ೩ ಪದ್ಯ ೪೫
೬೬. ಪ್ರ. ಲೀ. ಗತಿ ೪ ಪದ್ಯಗಳು ೨೫-೩೧
೬೭. ಪ್ರ. ಲೀ. ಗತಿ ೪ ಪದ್ಯ ೪೧
೬೮. ಪ್ರ. ಲೀ. ಗತಿ ೪ ಪದ್ಯಗಳು ೪೪,೪೫
೬೯. ಪ್ರ. ಲೀ. ಗತಿ ೪ ಪದ್ಯ ೪೭
೭೦. ಪ್ರ. ಲೀ. ಗತಿ ೪ ಪದ್ಯ ೫೦
೭೧. ಪ್ರ. ಲೀ. ಗತಿ ೫ ಪದ್ಯಗಳು ೪ ರಿಂದ ೮ ಮತ್ತು ೧೬
೭೨. ಪ್ರ. ಲೀ. ಗತಿ ೫ ಪದ್ಯ ೯
೭೩. ಪ್ರ. ಲೀ. ಗತಿ ೫ ಪದ್ಯ ೫೦ ರಿಂದ ೫೨
೭೪. ಪ್ರ. ಲೀ. ಗತಿ ೬ ಪದ್ಯ ೪
೭೫. ಪ್ರ. ಲೀ. ಗತಿ ೭ ಪದ್ಯಗಳು ೩೫, ೩೬
೭೬. ಪ್ರ. ಲೀ. ಗತಿ ೭ ಪದ್ಯ ೩೭
೭೭. ಡಾ. ಆರ್. ಸಿ. ಹಿರೇಮಠ , ಚೆನ್ನಬಸವಣ್ಣನವರ ವಚನಗಳು,ಕರಣ ಹಸಿಗೆ, ಪುಟ ೬೭೩
೭೮. ವಾಸನಾ ದೇಹದಲಿ ಈ ಜಗ । ದೀಶ ಹೊಳೆಯಲು ಮುಚ್ಚಿ ವಾಸನ ।
ಸೂಸೆ ಜೀವನು ಯೆಂದು ಕರೆಸಿದವಾಗ ಪರಮಾತ್ಮಾ ॥
ವಾಸನೆಯು ತಾನಡಗೆ ಜೀವವು । ನಾಶವಾಹುದು ಶುದ್ಧವಿಹ ಬಹು ।
ವಾಸನಿಂದಲಿ ತಿರುಗುತಿಹುದಾ ಲಿಂಗ ದೇಹೆಂದ ॥
ಗುರುಕರುಣ ತನ್ನೊಳಗೆ ತಾಳಿಯೆ । ಹರಿಯ ವೋಲೆಗರ್‍ಯಾಡುತೀಹುದು ।
ತಿರುಗುವುದು ಸುಖ ದುಃಖದೊಡನೆಯು ಕರ್ಮಫಲಗಳಲೀ ॥
ಚರಿಸುವದು ಸ್ವರ್ಗಕ್ಕೆ ನರಕಕೆ । ಪರಮ ಉದಕದಿ ಹೊಳೆವ ಚಂದ್ರನ ।
ತೆರದಲಿದ್ದಗೆ ಲಿಂಗ ತನುವಿನ ಸಂಗವೇನೆಂದಾ ॥
ಚಿದಾನಂದಾವಧೂತ , ಶ್ರೀ ದೇವಿ ಮಹಾತ್ಮೆ, ಅಧ್ಯಾಯ ೧೮, ಪದ್ಯಗಳು ೫೪, ೫೫
೭೯. ಡಾ. ವ್ಹಿ. ಎಸ್. ಕಂಬಿ , ಚಾಮರಸ ಅಮನಸ್ಕ ಕಾವ್ಯ, ಪುಟ ೨೩,೨೪
೮೦. ಪ್ರ. ಲೀ. ಗತಿ ೭, ಪದಗಳು ೪೩, ೪೪
೮೧. ಡಾ. ವ್ಹಿ. ಎಸ್. ಕಂಬಿ , ಚಾಮರಸನ ಅಮನಸ್ಕ ಕಾವ್ಯ, ಪುಟ ೨೪
೮೨. ಪ್ರ. ಲೀ. ಗತಿ ೭, ಪದ್ಯ ೫೩
೮೩. ಪ್ರ. ಲೀ. ಗತಿ ೭, ಪದ್ಯಗಳು ೫೬, ೫೭
೮೪. ಪ್ರ. ಲೀ. ಗತಿ ೭, ಪದ್ಯ ೬೧
೮೫. ಪ್ರ. ಲೀ. ಗತಿ ೮, ಪದ್ಯ ೫
೮೬. ಪ್ರ. ಲೀ. ಗತಿ ೮, ಪದ್ಯ ೧೦
೮೭. ಪ್ರ. ಲೀ. ಗತಿ ೮, ಪದ್ಯ ೨೦
೮೮. ಪ್ರ. ಲೀ. ಗತಿ ೮, ಪದ್ಯಗಳು ೨೫,೨೬

೮೯. ಪ್ರ. ಲೀ. ಗತಿ ೮, ಪದ್ಯ ೨೮
೯೦. ಆರ್. ಎಫ್. ಕಿಟೆಲ್ , ಕನ್ನಡ–ಇಂಗ್ಲೀಷ ಡಿಕ್ಷನರಿ , ಪುಟ ೧೦೪೮
೯೧. ಡಾ ಆರ್. ಸಿ. ಹಿರೇಮಠ , ಮಹಾಯಾತ್ರೆ, ಪುಟ ೩೨೯
೯೨. ಪ್ರ. ಲೀ. ಗತಿ ೯, ಪದ್ಯ ೩
೯೩. ಪ್ರ. ಲೀ. ಗತಿ ೯, ಪದ್ಯ ೪
೯೪. ಪ್ರ. ಲೀ. ಗತಿ ೯, ಪದ್ಯ ೫
೯೫. ಪ್ರ. ಲೀ. ಗತಿ ೯, ಪದ್ಯ ೧೨
೯೬. ಪ್ರ. ಲೀ. ಗತಿ ೯, ಪದ್ಯ ೧೪
೯೭. ಪ್ರ. ಲೀ. ಗತಿ ೯, ಪದ್ಯಗಳು ೧೯ ರಿಂದ ೨೭
೯೮. ಪ್ರ. ಲೀ. ಗತಿ ೯, ಪದ್ಯ ೩೧
೯೯. ಪ್ರಥಮೇ ಹತರುಕ್ಚ ಸರ್ವಲೋಕಪ್ರಿಯ ಏವಾಥ ಸವತ್ಸರೇ ದ್ವಿತೀಯೇ ।
ಕವಿತಾಂ ಕುರುತೇ ಸುಪರ್ವವ್ಯಾಣ್ಯಾ ಭುಜಗಾದ್ಯೈರ್ನ ಚ ಬಾಧ್ಯತೇ ತೃತೀಯೆ ॥
ಚತುರ್ಥಕೇನಾತುರಹಾ ಪಿಪಾಸಾನಿದ್ರಾದಿಶೀತಾತಪವರ್ಜಿತಸ್ಸ್ಯಾತ್ ।
ದೂರಶ್ರವಃ ಪಂಚಮವತ್ಸರೇ ವಾಕ್ಸಿದ್ಧಿ , ಪರೇಷಾಂ ತನುಷು ಪ್ರವೇಶಃ ॥
ಷಷ್ಠೇ ಸ ವಜ್ರೈರಪಿ ನೈವ ಭಿದ್ಯತೇ ತತೋ ತಿವೇಗೀ ऽ ಚ ಸುದೂರದರ್ಶನಃ ।
ತ್ಯಜೇದ್ಭುವಂ ಸಪ್ತಮವತ್ಸರೇऽಷ್ಟಧಾ ವಿಭೂತಯ ಶ್ಚಾಥ ಭವೇಯರಷ್ಟಮೇ ॥
ಸಂ. ಡಾ. ಎಂ. ಎಂ. ಕಲಬುರ್ಗಿ, ಪರಿ ನಾಗಭೂಷಣ ಶಾಸ್ತ್ರಿಗಳು , ಚೆನ್ನಸದಾಶಿವ
ಯೋಗಿವಿರಚಿತಾ ಶಿವಯೋಗ ಪ್ರದೀಪಿಕಾ , ಪಟಲ ೩, ಪದ್ಯಗಳು ೫೨, ೫೩, ೫೪
೧೦೦. ಮಗ ಹುಟ್ಟಿದವ್ವಾ ಎನಗೊಬ್ಬ ಮಗ ಹುಟ್ಟಿದವ್ವಾ
ಮಗ ಹುಟ್ಟಿ ಎನ್ನ ಮಾಯವನಿಳಿಸಿ, ಜಗ ಬಿಡಿಸಿ ಎನ್ನ ಜನ್ಮವ ಕೆಡಿಸಿದ ॥ ಪ ॥
ನೌವ್ವ ತಿಂಗಳವ್ವ ಮೈಯೆಲ್ಲ ನೋವ ತಿಂದೆನವ್ವ
ದೇಹಕೆ ಹತ್ತದ ಮಾಯಕೆ ನಿಲುಕದ ಮಾಯಗಾರನವ್ವಾ ॥
–ಭಜನಾಪದ ಹಾಡುವವರಿಂದ ಕೇಳಿದ್ದು –
ಇಂದು ಸಾವ ಹೆಂಡತಿಗೆ, ನಾಳೆ ಸಾವ ಗಂಡನವ್ವಾ !
ಗಳಿಗೆಗಳಿಗೆಗೆ ಮಗು ಹುಟ್ಟಿ ಕೈ ಬಾಯ್ಗೆ ಬಂದಿತ್ತವ್ವಾ !
ಅರಿವು ಕುರುಹನು ಮರವೆ ನುಂಗಿತ್ತು,
ಗುಹೇಶ್ವರನುಳಿದನವ್ವಾ !
ಸ. ವ. ಸಂ II , ಅಲ್ಲಮ ಪ್ರಭುದೇವರ ವಚನ ಸಂಪುಟ , ಶರಣಸ್ಥಲ, ವ. ಸಂ. ೪೪೧,
ಪುಟ ೧೨೩
೧೦೧. ಹಸಿವನಳಿವರು ಜೀವಕಾಯದ । ಬೆಸುಗೆಯನು ಕಾಂಬುವರು ಬಿಂದುವ ।
ನೊಸರಲೀಯದೆಯೂರ್ಧ್ವಮುಖದಲಿ ಬಿತ್ತಿ ಬೆಳೆವವರು ॥
ಉಸುರು ಪ್ರಾಣಾವಾಯುವಂ ಕೀ । ಲಿಸುವವರು ಸುಜ್ಞಾನಯೋಗ್ಯರು ।
ಸಸಿನೆ ಕೇಳುವು ದೀ ಮಹಾಪ್ರಭುಲಿಂಗಲೀಲೆಯಲಿ ॥ ಅ ॥
ನಿದ್ರೆಯನು ನೀಗುವರು ರೋಗದು । ಪದ್ರವನು ನಿಲಿಸುವರು ಮಿಕ್ಕಿನ ।
ಕ್ಷುದ್ರವ್ಯಾಧಿಯ ಭಂಗಿಸುವರು ಗುರೂಪದೇಶದಲಿ ॥

ಮುದ್ರೆಯನು ಮುಟ್ಟುವರು ಸೌಖ್ಯ ಸ । ಮೃದ್ಧಿಯೊಳಗೋಲಾಡುವರು ಶಿವ
ಸಿದ್ಧರಪ್ಪರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥ ಬ ॥
ಪ್ರ. ಲೀ. ಗತಿ ೧೧, ಪದ್ಯಗಳು ಅ ಮತ್ತು ಬ

೧೦೨. ಪ್ರ. ಲೀ. ಗತಿ ೧೧, ಪದ್ಯ ಬ

೧೦೩. ಪ್ರ. ಲೀ. ಗತಿ ೧೧, ಪದ್ಯ ೩

೧೦೪. ಪ್ರ. ಲೀ. ಗತಿ ೧೧, ಪದ್ಯ ೪

೧೦೫. ಕದಳಿಯ ಬನವ ಹೊಕ್ಕು ಹೊಲಬ ತಿಳಿಯದನ್ನಕ್ಕ
ಬಯಲ ಗಾಳಿಯ ಹಿಡಿದು ಗಟ್ಟಿಮಾಡದನ್ನಕ್ಕ
ಬರಿದೆ ಬಹುದೆ ಶಿವ ಜ್ಞಾನ ? ಷಡುವರ್ಣವಳಿಯದನ್ನಕ್ಕ
ಬರಿದೆ ಬಹುದೆ ಅಷ್ಟಮದವಳಿಯದನ್ನಕ್ಕ
ಮದಮತ್ಸರವ ಮಾಡಲಿಲ್ಲ, ಹೊದಕುಳಿಗೊಳಲಿಲ್ಲ,
ಗುಹೇಶ್ವರಲಿಂಗವು ಕಲ್ಪಿತದೊಳಗಲ್ಲ.
ಸಂ. ಇಮ್ಮಡಿ ಶಿವಬಸವ ಸ್ವಾಮಿಗಳು , ಅಲ್ಲಮ ಪ್ರಭುವಿನ ಟೀಕಿನ ವಚನಗಳು,
ವ. ಸಂ. ೧೭೪

೧೦೬. ಪ್ರ. ಲೀ. ಗತಿ ೧೧, ಪದ್ಯ ೭

೧೦೭. ಪ್ರ. ಲೀ. ಗತಿ ೧೧, ಪದ್ಯ ೮

೧೦೮. ಪ್ರ. ಲೀ. ಗತಿ ೧೧, ಪದ್ಯ ೧೧

೧೦೯. ಪ್ರ. ಲೀ. ಗತಿ ೧೧, ಪದ್ಯ ೧೭

೧೧೦. ಪ್ರ. ಲೀ. ಗತಿ ೧೧, ಪದ್ಯ ೧೮

೧೧೧. ಸಂ. ಡಾ. ಎಂ. ಎಂ. ಕಲಬುರ್ಗಿ ಮತ್ತು ಪಂ. ನಾಗಭೂಷಣ ಶಾಸ್ತ್ರಿಗಳು , ಚೆನ್ನಸದಾಯೋಗಿ
ವಿರಚಿತಾ ಶಿವಯೋಗಪ್ರದೀಪಿಕಾ , ಪಟಲ ೪, ಪದ್ಯ ೧೨

೧೧೨. ಎನ್ನ ಮನದ ಕೊನೆಯ ಮೊನೆಯ ಮೇಲೆ
ಅಂಗವಿಲ್ಲದ ರೂಪ ಕಂಡು, ಆನು ಮರುಳಾದೆನವ್ವ,
ಆನು ಕಂಡು ಆನು ಬೆಱಗಾದೆನವ್ವ,
ಎನ್ನಂತರಂಗದ ಆತುಮನೊಳಗೆ ಅನುಮಿಷ ನಿಜೈಕ್ಯ ಗುಹೇಶ್ವರನ ಕಂಡು.
ಸಂ: ಡಾ. ಎಂ. ಎಸ್. ಸುಂಕಾಪುರ, ಲಿಂಗಚಿದಮೃತ ಭೋಧೆ, ಲಿಂಗಾವಸ್ಥೆಯ ಸ್ಥಲ, ವ. ಸಂ ೪

೧೧೩. ದೃಷ್ಟಿಸ್ತು ಪೂರ್ಣಿಮಾ ಜ್ಞೇಯಾ ದೃಶ್ಯಮಾದೌ ತಮೋಮಯಂ
ತನ್ಮಧ್ಯೇ ಮನಸಾ ಪಶ್ಯೇ ಜ್ಯೋತಿರ್ಲಿಂಗಂ ಸುನಿಶ್ಚಲಂ ॥
ಸಂ: ಡಾ. ಎಂ. ಎಂ. ಕಲಬುರ್ಗಿ. ಮತ್ತು ಪಂ. ನಾಗಭೂಷಣಶಾಸ್ತ್ರಿಗಳು , ಚೆನ್ನಸದಾಶಿವಯೋಗಿ
ವಿರಚಿತಾ ಶಿವಯೋಗ ಪ್ರದೀಪಿಕಾ , ಪಟಲ ೫, ಪದ್ಯ ೬

೧೧೪. ಬ. ಗಿ. ಯಲ್ಲಟ್ಟಿ , ಉರಿಯುಂಡ ಕರ್ಪುರ, ಯೋಗಸ್ಥಲ, ಪುಟ ೪೮

೧೧೫. ಪ್ರ. ಲೀ. ಗತಿ ೧೧, ಪದ್ಯ ೨೦

೧೧೬. ಪ್ರ. ಲೀ. ಗತಿ ೧೧, ಪದ್ಯ ೨೬

೧೧೭. ಪ್ರ. ಲೀ. ಗತಿ ೧೧, ಪದ್ಯಗಳು ೨೭,೨೮

೧೧೮. ಕಾಯಪಲ್ಲಟದ ಹೆಸರಲ್ಲದೆ ಅನುಮಿಷನಲ್ಲಮನಾಗಿ

ತನ್ನ ಲಿಂಗವ ತಾನೆ ಮರ್ತ್ಯಕ್ಕೆ ತಂದ
ಸಂ. ಆರ್. ಸಿ. ಹಿರೇಮಠ , ಚನ್ನಬಸವಣ್ಣನವರ ವಚನಗಳು , ಚ. ಬ. ಹೆಚ್ಚಿನ ವಚನಗಳು , ವ. ಸಂ. ೫, ಪುಟ ೭೫೯

೧೧೯. ಪ್ರ. ಲೀ. ಗತಿ ೧೧, ಪದ್ಯ ೩೦

೧೨೦. ಪ್ರ. ಲೀ. ಗತಿ ೧೧, ಪದ್ಯ ೩೧

೧೨೧. ನೆಟ್ಟನಱಿವೊಡೆ ಗುಪ್ತಭಕ್ತಿಯ ಬಟ್ಟೆಯನು । ಬಯಸುವವರು ಭಾವಿಸಿ ।
ಮುಟ್ಟಿ ಮೋಹಿಸಿ ಬಾಹಿರಂಗದ ಭ್ರಮೆಯ ಭರಗೆಡಿಸಿ ॥
ಕೆಟ್ಟ ಕಾಯದ ಕಳವಳಂಗಳ । ಕಟ್ಟಿ ಕಳೆದಾ ಪ್ರಳಯಕಾಲನ ।
ಮೆಟ್ಟಿ ನಡೆವರು ತಿಳಿವುದೀ ಪ್ರಭುಲಿಂಗಲೀಲೆಯಲಿ ॥
ಪ್ರ. ಲೀ. ಗತಿ ೧೨, ಪದ್ಯ ೧

೧೨೨. ಪ್ರ. ಲೀ. ಗತಿ ೧೨, ಪದ್ಯ ೯

೧೨೩. ಹಱುಗೊಲನ ಜೋಗೈಸಿಕೊಳುತಲಿ । ತೊಱೆಯ ದಾಂಟುವರಂತೆ ಲಿಂಗವ ।
ನಱಿವವರು ಕರ್ಮೇಂದ್ರಿಯಂಗಳನೊಯ್ಯನೋಸರಿಸಿ ॥
ಹೊಱುಗೆ ಮಾಡುವ ಮಾಟವೆಲ್ಲವ । ತೊಱೆವುದಂತರ್ಮಾರ್ಗವೊಂದನೆ ।
ಹೊಱುವುದಿದು ಶಿವಭಕ್ತಿಯೌ ಮುಕ್ತಾಯಿ ಕೇಳೆಂದ ॥
ಪ್ರ. ಲೀ. ಗತಿ ೧೨, ಪದ್ಯ ೧೪

೧೨೪. ಪ್ರ. ಲೀ. ಗತಿ ೧೨, ಪದ್ಯ ೧೬

೧೨೫. ಪ್ರ. ಲೀ. ಗತಿ ೧೨, ಪದ್ಯ ೧೯
ಕಿಚ್ಚಿನೊಳಗೆ ಹುರಿದ ಹುಳ್ಳಿಯಂತಾದೆನಯ್ಯ,
ಬೆಂದ ನುಲಿಯ ಸಂದಿಕ್ಕಿ ಮತ್ತೊಂದು ಮಾಡಬಾರದಯ್ಯ ,
ಗುಹೇಶ್ವರ ನಿಮ್ಮ ನಿಲವಿನ ಪರಿಯಿಂತುಂಟಯ್ಯ .
ಟೀಕು , ಜ್ಞಾನಾಗ್ನಿಯಲ್ಲಿ ಸರ್ವಾಂಗವು ದಗ್ಧವಾದ ಶರಣನ ತನುಗುಣಾದಿಗಳೆಲ್ಲವು ಅಳಿದು ದಗ್ಧ ಪಟನ್ಯಾಯದಂತಿರ್ಪನೆಂಬುದೀ ವಚನದ ತಾತ್ಪರ್ಯಾರ್ಥ.
ಸಂ. ಇಮ್ಮಡಿ ಶಿವಬಸವಸ್ವಾಮಿಗಳು , ಅಲ್ಲಮಪ್ರಭುವಿನ ಟೀಕಿನ ವಚನಗಳು , ವ. ಸಂ ೪೩೮

೧೨೬. ಪ್ರ. ಲೀ. ಗತಿ ೧೨, ಪದ್ಯ ೨೪

೧೨೭. ಪ್ರ. ಲೀ. ಗತಿ ೧೨, ಪದ್ಯ ೨೬

೧೨೮. ಪ್ರ. ಲೀ. ಗತಿ ೧೩, ಪದ್ಯ ೩೯

೧೨೯. ಪ್ರ. ಲೀ. ಗತಿ ೧೩, ಪದ್ಯ ೪೭

೧೩೦. ಪ್ರ. ಲೀ. ಗತಿ ೧೩, ಪದ್ಯ ೫೪

೧೩೧. ಪ್ರ. ಲೀ. ಗತಿ ೧೩, ಪದ್ಯ ೬೦ ರಿಂದ ೬೨

೧೩೨. ಪ್ರ. ಲೀ. ಗತಿ ೧೩, ಪದ್ಯ ೬೯

೧೩೩. ಪ್ರ. ಲೀ. ಗತಿ ೧೩, ಪದ್ಯ ೭೧

೧೩೪. ಪ್ರ. ಲೀ. ಗತಿ ೧೩, ಪದ್ಯ ೭೩

೧೩೫. ಪ್ರ. ಲೀ. ಗತಿ ೧೪, ಪದ್ಯ ೧೧

೧೩೬. ಪ್ರ. ಲೀ. ಗತಿ ೧೪, ಪದ್ಯ ೨೧

೧೩೭. ಪ್ರ. ಲೀ. ಗತಿ ೧೪, ಪದ್ಯ ೩೨
೧೩೮. ಪ್ರ. ಲೀ. ಗತಿ ೧೫, ಪದ್ಯ ೩
೧೩೯. ಪ್ರ. ಲೀ. ಗತಿ ೧೫, ಪದ್ಯ ೪
೧೪೦. ಹಲವು ಯುಗಯುಗ ಜನ್ಮ ಜನ್ಮಂ । ಗಳಲಿ ಸಾಧಿಸಿ ಭೇದಿಸುವ ನಿ ।
ರ್ಮಳ ನಿರಾಕುಳ ಸಿದ್ಧ ಶಿವತತ್ವಾನುಭಾವನೆಯ ॥
ಫಲವನೊಂದೇ ನಿಮಿಷದಲಿ ನೆಱೆ । ನಿಲಿಸಿ ನಿಜಪದವಿಯನು ಕೊಟ್ಟನು ।
ಸುಲಭದಲಿ ಶಂಕರಗೆ ನಮ್ಮಯ ಗುರು ಗುಹೇಶ್ವರನು ॥
ಪ್ರ. ಲೀ. ಗತಿ ೧೫, ಪದ್ಯ ೨೬
೧೪೧. ಸಂತ ತುಕಾರಾಮನ ಹೇಳಿಕೆ
೧೪೨. ಕರಿದಿಷ್ಟವಾವುದೆಂದರಿದು ಅದು
ಶರೀರದೊಳಿರ್ಪ ಸ್ಥಾನವ ಹೊಕ್ಕು ಮೆರೆದು
ಉರಿಕರ್ಪುರಗಳಂತೆ ಬೆರೆದು ನಾನು
ಬೆರೆದೇಕವಾದೆನೆಂಬರಿವನೆ ಮರೆದು
ತನ್ನ ತಾನರಿದೊಡೆ ಮುಕ್ತ ತಾನೆ
ತನ್ನ ನರಿಯದಿರ್ದೊಡೆ ಹೇಗೆ ವಿರಕ್ತ
ಕೈವಲ್ಯ ಕಲ್ಪವಲ್ಲರಿ, ಯೋಗ ಪ್ರತಿಪಾದನ ಸ್ಥಲ, ಪದ್ಯ ೨೫
೧೪೩. ಪ್ರ. ಲೀ. ಗತಿ ೧೬, ಪದ್ಯ ೪
೧೪೪. ಪ್ರ. ಲೀ. ಗತಿ ೧೬, ಪದ್ಯ ೧೦,೧೧
೧೪೫. ಪ್ರ. ಲೀ. ಗತಿ ೧೬, ಪದ್ಯ ೧೨
೧೪೬. ಪ್ರ. ಲೀ. ಗತಿ ೧೬, ಪದ್ಯ ೧೫
೧೪೭. ಪ್ರ. ಲೀ. ಗತಿ ೧೬, ಪದ್ಯ ೨೭
೧೪೮. ಪ್ರ. ಲೀ. ಗತಿ ೧೬, ಪದ್ಯ ೨೮
೧೪೯. ಇಷ್ಟ ಗುರುವಿಗೆ ತನುವ ಸಲಿಸುತ । ಲಿಷ್ಟ ಲಿಂಗಕೆ ಮನವ ಸಲಿಸುತ ।
ಲಿಷ್ಟಜಂಗಮಕರ್ಥವನು ಸಲೆ ಸಲಿಸ ಕಲಿತಂಗೆ ॥
ದೃಷ್ಟವಹ ಗುರುಲಿಂಗಜಂಗಮ । ಶ್ರೇಷ್ಠವಾಗಿಯೆ ತನ್ನೊಳಗೆಯು ।
ತ್ಕೃಷ್ಟವಾಗಿಯೆ ಕಾಣಿಸುವುದೈ ಬಸವ ಕೇಳೆಂದ ॥
ಪ್ರ. ಲೀ. ಗತಿ ೧೬, ಪದ್ಯ ೩೦
೧೫೦. ಅದು ನಿಮಿತ್ತದಲಿಷ್ಟಲಿಂಗವೆ । ಮೊದಲು ಬೇಹುದು ನಿತ್ಯ ನಿರ್ಮಲ ।
ಪದವ ಪಡೆದಹೆನೆಂಬ ಪಾವನ ಬುದ್ಧಿವಂತಂಗೆ ॥
ಹೃದಯದೊಳಗಾ ಪ್ರಾಣಲಿಂಗದ । ಹದನನಱೆವೊಡೆ ಸಚ್ಚಿದಾನಂ ।
ದದಲಿ ನಿಲುವೊಡೆ ಮುಖ್ಯವಿದು ಬಸವಣ್ಣ ಕೇಳೆಂದ ॥
ಪ್ರ. ಲೀ. ಗತಿ ೧೬, ಪದ್ಯ ೩೩
೧೫೧. ಪ್ರ. ಲೀ. ಗತಿ ೧೬, ಪದ್ಯ ೩೫,೩೬
೧೫೨. ಹುಟ್ಟಿದೆಡೆಯನು ಹೂಳಿ ಹೊಂದುವ । ಬಟ್ಟೆಯನು ನೆಱೆ ಕೆಡಿಸಿ ಕರ್ಮದ ।
ಕಟ್ಟಳೆಯನೊಡಮೆಟ್ಟಿ ಸಂತತ ಲಿಂಗಸೇವೆಯಲಿ ॥

ಮುಟ್ಟಿ ಹಸು ತೃಷೆ ನಿದ್ರೆಯೆಂಬಿವ । ನಿಟ್ಟೊರಸಿದಾ ಧೀರಗಲ್ಲದೆ ।
ಹೊಟ್ಟೆ ಹೊರಕಗೆ ಭಕ್ತಿಯಹುದೇ ಬಸವ ಕೇಳೆಂದ ॥
ಪ್ರ. ಲೀ. ಗತಿ ೧೬, ಪದ್ಯ ೪೧

೧೫೩. ಪ್ರ. ಲೀ. ಗತಿ ೧೬, ಪದ್ಯ ೪೫

೧೫೪. ಪ್ರ. ಲೀ. ಗತಿ ೧೬, ಪದ್ಯ ೪೭

೧೫೫. ಪ್ರ. ಲೀ. ಗತಿ ೧೬, ಪದ್ಯ ೪೯

೧೫೬. ಕೇಳಿದ್ಯೆ ಬಸವಣ್ಣ ಮೊದಲಲಿ । ಕೋಲುವಿಡಿದಭ್ಯಾಸ ಮಾಡಿಯೆ ।
ಮೇಲೆ ರಣರಂಗದಲಿ ಕೈದುವ ಹಿಡಿದು ।ಹಗೆಗಳನು ॥
ಸೋಲಿಸುವನಂತಿಷ್ಟಲಿಂಗದ । ಕೀಲಣೆಯನಱುದಲ್ಲದಾಗದು ।
ಹೇಳುವೊಡೆ ಶಿವಭಕ್ತಿಯದು ಸಾಮಾನ್ಯವಲ್ಲೆಂದ ॥
ಪ್ರ. ಲೀ. ಗತಿ ೧೬, ಪದ್ಯ ೫೩

೧೫೭. ಹುಸಿವುದೇ ಕೈ ನೆಲನ ಹೊಯ್ದರೆ । ಹುಸಿವುದೇ ಕಣೆ ಗಿರಿಯನೆಚ್ಚೊಡೆ ।
ಹುಸಿವುದೇ ಕೇಳೆನ್ನನಱುದಿಹೆನೆಂಬ ನಿನ್ನಱುವು ॥
ಹುಸಿಯಲಱುವುದೆ ನನ್ನ ಕಾರಣ । ವಸುಮತಿಗೆ ನೀ ಬಂದೆಯದಱಂ ।
ಹುಸಿಯ ಮಾಯೆಯ ಹುಸಿಸಿ ತೋಱುವೆ ಬಸವ ಕೇಳೆಂದ ॥
ಪ್ರ. ಲೀ. ಗತಿ ೧೬, ಪದ್ಯ ೫೭

೧೫೮. ಅತ್ತೆ ಮಾಯೆ, ಮಾವ ಸಂಸಾರಿ! । ಮುವ್ವರು ಮೈದುನರು ಹುಲಿಯಂಥಾ ಅವದಿರು ! ।
ನಾಲುವರು ನಗೆವೆಣ್ಣು ಕೇಳು ಕೆಳದಿ! । ಐವರು ಭಾವದಿರನೊಯ್ವ ದೈವವಿಲ್ಲ ! ।
ಆರು ಪ್ರಜೆಯತ್ತಿಗೆಯರ ಮೀರಲಾರೆನುತಾಯೆ! । ಹೇಳುವಡೆ ಏಳು ಪ್ರಜೆ ತೊತ್ತರ ಕಾವಲು! ।
ಕರ್ಮವೆಂಬ ಗಂಡನ ಬಾಯ ಟೊಣೆದು । ಹಾದರವನಾಡುವೆನು ಹರನ ಕೂಡೆ! ।
ಮನವೆಂಬ ಸಖಿಯ ಪ್ರಸಾದದಿಂದ । ಅನುಭಾವವ ಕಲಿತೆನು ಶಿವನೊಡನೆ ।
ಕರಚೆಲುವ ಶ್ರೀ ಶೈಲ ಚೆನ್ನಮಲ್ಲಿಕಾರ್ಜುನನ । ಸಜ್ಜನದ ಗಂಡನ ಮಾಡಿಕೊಂಬೆನು. ॥
ಸಂ. ಡಾ. ಎಲ್. ಬಸವರಾಜು , ಅಕ್ಕನ ವಚನಗಳು, ವ. ಸಂ. ೩೨೮, ಪುಟ ೧೮೯

೧೫೯. ನೀನು ನಾನೆಂಬುಭಯಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ
ಮೆಟ್ಟಿ ತುಟ್ಟ ತುದಿಯಲಿ ನೋಡಲು ಬಟ್ಟ ಬಯಲು ಕಾಣಬಹುದು ನೋಡಾ ।
ಆ ಬಟ್ಟ ಬಯಲ ಬೆರೆಸುವರೆ ಶ್ರೀ ಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ ।
ಆ ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಾಗುವ ಜ್ಯೋತಿಯುಂಟು ನೋಡಾ
ನಡೆಯಲ್ಲಿಗೆ ತಾಯೇ ಗುಹೇಶ್ವರಲಿಂಗದಲ್ಲಿ ಪರಮಪದವು ನಿನಗೆ ಸಮವಪ್ಪುದು ನೋಡಾ ॥
ಈ ವಚನವನ್ನು ಚಾಮರಸ ಸಂಬಂಧಿಸಿದ ಗತಿಯ ವಸ್ತುವಿಗೆ ಸಾಕ್ಷಿರೂಪದಲ್ಲಿ ಬಳಸಿದ್ದಾನೆ.

೧೬೦. ಪ್ರ. ಲೀ. ಗತಿ ೧೭, ಪದ್ಯ ೨೩

೧೬೧. ಪ್ರ. ಲೀ. ಗತಿ ೧೭, ಪದ್ಯ ೩

೧೬೨. ಪ್ರ. ಲೀ. ಗತಿ ೧೭, ಪದ್ಯ ೫

೧೬೩. ಪ್ರ. ಲೀ. ಗತಿ ೧೭, ಪದ್ಯ ೬

೧೬೪. ದ್ವೈತಭಾವವಳಿಯಿತೆಂದು । ಮಾತಿನಿಂದೆ ತಿಳಿಸಲೇಕೆ ।
ದ್ವೈತಭಾವವಳಿದ ಕುರುಹು ಮೇಲೆ ತೋರ್ಪುದು ॥

ಸಂ. ಶಿ. ಶಿ. ಬಸವನಾಳ , ಶ್ರೀ ಸರ್ಪಭೂಷಣ ಶಿವಯೋಗಿಕೃತ ಕೈವಲ್ಯ ಕಲ್ಪವಲ್ಲರಿ ,
ನೀತಿಕ್ರಿಯಾಚರ್ಯಸ್ಥಲ, ಪದ್ಯ ೯

೧೬೫. ಪ್ರ. ಲೀ. ಗತಿ ೧೭, ಪದ್ಯ ೮

೧೬೬. ರೂಪಿವಿಡಿದಿರ್ದಲ್ಲದೆಂತು ನಿ । ರೂಪ ಬೆರಸುವ ಭೇದವಱುವೊಡೆ ।
ರೂಪನೊಳಗೆ ನಿರೂಪು ತಿಳಿಯೆ ನಿರೂಪನೊಳು ರೂಪು ॥
ಈ ಪರಿಯನೊಂದೊಂದನಗಲದೆ । ವ್ಯಾಪಿಸಿಹವೆಂದಱ್ದು ನಾನಾ ।
ರೂಪನನು ನೆಲೆಗೊಂಡೆನೆಂದಳು ಮತ್ತೆ ಮಹದೇವಿ ।ದಿ
ಪ್ರ. ಲೀ. ಗತಿ ೧೭, ಪದ್ಯ ೧೦

೧೬೭. ಪ್ರ. ಲೀ. ಗತಿ ೧೭, ಪದ್ಯ ೧೪

೧೬೮. ಪ್ರ. ಲೀ. ಗತಿ ೧೭, ಪದ್ಯ ೧೬

೧೬೯. ಪ್ರ. ಲೀ. ಗತಿ ೧೭, ಪದ್ಯ ೧೯ರಿಂದ ೨೧

೧೭೦. ಪ್ರ. ಲೀ. ಗತಿ ೧೭, ಪದ್ಯ ೨೪

೧೭೧. ಕಾಯವೆಂಬ ಕದಳಿಯನೆ ಹೊಕ್ಕು, ನೂನ ಕದಳಿಯ ದಾಂಟಿ,
ಜೀವಪರಮರ ನೆಲೆಯನರಿದು, ಜನನಮರಣವ ಗೆದ್ದು,
ಭವವ ದಾಂಟಿದಲ್ಲದೆ, ಘನವ ಕಾಣಬಾರದೆಂದರು
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.
ಸ. ವ. ಸಂ, ಶಿವಶರಣೆಯರ ವಚನ ಸಂಪುಟ ೫, ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ
ಬೋಧೆಯ ವಚನಗಳು,
ವ. ಸಂ. ೫೦, ಪುಟ ೩೩೭

೧೭೨. ಪ್ರ. ಲೀ. ಗತಿ ೧೮, ಪದ್ಯ ೩

೧೭೩. ಪ್ರ. ಲೀ. ಗತಿ ೧೮, ಪದ್ಯ ೫

೧೭೪. ಪ್ರ. ಲೀ. ಗತಿ ೧೮, ಪದ್ಯ ೬,೭

೧೭೫. ಉಸುರು ಗರಗಸದಲ್ಲಿ ತನುವಿನ । ಬೆಸುಗೆಯನು ಬಿಡುಮಾಡಿ ಬಿಸುಡದೆ ।
ಹಸುತೃಷೆಯ ಹರಿಹುಗಿಲಿನುಪಟಳಕಂಜಿ ಮುಖಗೊಡದೆ ॥
ದಶವಿಧೇಂದ್ರಿಯ ದಾಳಿಯಲಿ ಶಂ । ಕಿಸದೆ ನಿಲುವೊಡೆ ಸದ್ಧರಾಮನ ।
ದೆಸೆಯ ನೆನೆಯಲು ಭಕ್ತರಹರೈ ಬಸವ ಕೇಳೆಂದ ॥
ಪ್ರ. ಲೀ. ಗತಿ ೧೮, ಪದ್ಯ ೮

೧೭೬. ಆದಿಪುರುಷನು ಬಸವರಾಜನ । ನಾದಿ ಪುರುಷನು ಬಸವರಾಜನು ।
ನಾದಪುರುಷನು ಬಸವರಾಜನು ಬಸವರಾಜನನು ॥
ವೇದಶಾಸ್ತ್ರಗಳುಱುಸಲುಱುಯದೆ । ಹೋದುವೆನುತಲಿ ಬಸವರಾಜನ ।
ನೆಯ್ದೆ ಹೊಗಳುತಲಲ್ಲಮಪ್ರಭುರಾಯನಿಂತೆಂದ ॥
ಪ್ರ. ಲೀ. ಗತಿ ೧೮, ಪದ್ಯ ೧೨

೧೭೭. ಪ್ರ. ಲೀ. ಗತಿ ೧೮, ಪದ್ಯ ೧೫,೧೬

೧೭೮. ಪ್ರ. ಲೀ. ಗತಿ ೧೮, ಪದ್ಯ ೧೭

೧೭೯. ಪ್ರ. ಲೀ. ಗತಿ ೧೮, ಪದ್ಯ ೧೯

೧೮೦. ಸಂ. ಬ.ಕ ಪಾಟೀಲ , ಶ್ರೀಮನ್ನಿಜಗುಣಶಿವಯೋಗಿ ವಿರಚಿತ ವೇದಾಂತ ರತ್ನಾಕರ, ಕೈವಲ್ಯ ಪದ್ಧತಿ, ಯೋಗಪ್ರತಿಪಾದನ ಸ್ಥಲ, ಪದ್ಯ ೧೪

೧೮೧. ಪ್ರ. ಲೀ. ಗತಿ ೧೮, ಪದ್ಯ ೨೦

೧೮೨. ಪ್ರ. ಲೀ. ಗತಿ ೧೮, ಪದ್ಯ ೨೧

೧೮೩. ಸಂ. ಡಾ. ಎಂ. ಎಂ. ಕಲಬುರ್ಗಿ ಮತ್ತು ಪಂ. ನಾಗಭೂಷಣಶಾಸ್ತ್ರಗಳು , ಚೆನ್ನಸದಾಶಿವಯೋಗಿವಿರಚಿತಾ ಶಿವಯೋಗ ಪ್ರದೀಪಿಕಾ, ಪಟಲ ೩, ಪದ್ಯ ೩೨

೧೮೪. ಸಂ. ಶಿ.ಶಿ.ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಗತಿ ೧೮, ಪದ್ಯ ೨೨

೧೮೫. ಸಂ. ಡಾ. ಎಂ. ಎಂ. ಕಲಬುರ್ಗಿ ಮತ್ತು ಪಂ. ನಾಗಭೂಷಣಶಾಸ್ತ್ರಿಗಳು, ಚೆನ್ನಸದಾಶಿವಯೋಗಿ ವಿರಚಿತಾ ಶಿವಯೋಗ ಪ್ರದೀಪಿಕಾ, ಪಟಲ ೫ರ ಹದಿನೈದನೆಯ ಪದ್ಯದ ತಾತ್ಪರ್ಯಕ್ಕೆ ಬಳಸಿಕೊಂಡದ್ದು, ಪುಟ ೧೫೩

೧೮೬. ಪ್ರ. ಲೀ. ಗತಿ ೧೮, ಪದ್ಯಗಳು ೨೩ ರಿಂದ ೨೫

೧೮೭. ಪ್ರ. ಲೀ. ಗತಿ ೧೮, ಪದ್ಯ ೨೬

೧೮೮. ಪ್ರ. ಲೀ. ಗತಿ ೧೮, ಪದ್ಯ ೨೭

೧೮೯. ಪ್ರ. ಲೀ. ಗತಿ ೧೮, ಪದ್ಯ ೨೯

೧೯೦. ತನ್ನನೊಲಿವೊಡೆ ಶಕ್ತಿಯಿದಲಾ । ತನ್ನನುಱುವೊಡೆ ಭಕ್ತಿಯಿದಲಾ ।
ತನ್ನನಳಿವೊಡೆ ಮುಕ್ತಿಯಿದಲಾ ಲಿಂಗವಂತಂಗೆ ॥
ತನ್ನ ತಾನಿಂತಡುಱು ತನ್ನೊಳು । ತನ್ನ ತಾನಾಗಿದ್ದನಾದೊಡೆ ।
ನನ್ನ ನಚ್ಚಿನ ಭಕ್ತನಾತನು ಬಸವ ಕೇಳೆಂದ ॥
ಪ್ರ. ಲೀ. ಗತಿ ೧೮, ಪದ್ಯ ೩೧

೧೯೧. ಪ್ರ. ಲೀ. ಗತಿ ೧೮, ಪದ್ಯ ೩೪

೧೯೨. ಪ್ರ. ಲೀ. ಗತಿ ೧೯, ಪದ್ಯ ೨

೧೯೩. ಪ್ರ. ಲೀ. ಗತಿ ೧೯, ಪದ್ಯ ೬

೧೯೪. ಪ್ರ. ಲೀ. ಗತಿ ೧೯, ಪದ್ಯ ೮

೧೯೫. ಪ್ರ. ಲೀ. ಗತಿ ೧೯, ಪದ್ಯ ೩೬

೧೯೬. ಪ್ರ. ಲೀ. ಗತಿ ೧೯, ಪದ್ಯ ೩೭

೧೯೭. ಪ್ರ. ಲೀ. ಗತಿ ೧೯, ಪದ್ಯಗಳು ೩೮,೩೯

೧೯೮. ಬಿಸಿಯ ಹದನನು ತಿಳಿದು ಲೋಹವ । ಬೆಸುವವೊಲು ಪರಿಪಾಕ ಭಾವದ ।
ಹಸನನುಱುದಿನ್ನೀತಗುಪದೇಶಿಸುವೆನೆಂದೆನುತ ॥
ಒಸೆದು ಹಣೆವಿಡಿದೆತ್ತಿ ಕರುಣವ । ಪಸರಿಸುತ ಗೋರಕ್ಷನನು ಮ ।
ನ್ನಿಸಿದನೆಮ್ಮಯ ಗುರು ಗುಹೇಶ್ವರಲಿಂಗ ಲಿಂಗಲೀಲೆಯಲಿ ॥
ಪ್ರ. ಲೀ. ಗತಿ ೧೯, ಪದ್ಯ ೪೦

೧೯೯. ಪ್ರ. ಲೀ. ಗತಿ ೧೯, ಪದ್ಯಗಳು ೪೩ ರಿಂದ ೪೬

೨೦೦. ಪ್ರ. ಲೀ. ಗತಿ ೧೯, ಪದ್ಯಗಳು ೪೭,೪೮

೨೦೧. ಪ್ರ. ಲೀ. ಗತಿ ೧೯, ಪದ್ಯ ೫೦

೨೦೨. ಪ್ರ. ಲೀ. ಗತಿ ೧೯, ಪದ್ಯ ೫೩

೨೦೩. ಪ್ರ. ಲೀ. ಗತಿ ೧೯, ಪದ್ಯಗಳು ೫೭,೫೮
೨೦೪. ಪ್ರ. ಲೀ. ಗತಿ ೨೦, ಪದ್ಯ ೪
೨೦೫. ಪ್ರ. ಲೀ. ಗತಿ ೨೦, ಪದ್ಯಗಳು ೫,೬
೨೦೬. ಪ್ರ. ಲೀ. ಗತಿ ೨೦, ಪದ್ಯ ೭
೨೦೭. ಪ್ರ. ಲೀ. ಗತಿ ೨೦, ಪದ್ಯ ೯
೨೦೮. ಪ್ರ. ಲೀ. ಗತಿ ೨೦, ಪದ್ಯ ೧೧
೨೦೯. ಪ್ರ. ಲೀ. ಗತಿ ೨೦, ಪದ್ಯ ೧೩
೨೧೦. ಪ್ರ. ಲೀ. ಗತಿ ೨೦, ಪದ್ಯ ೧೪
೨೧೧. ಇಂದ್ರಿಯವು ಮೂತ್ರವು ಒಂದೆ ನಾಳದಿ ಬಕ್ಕು
ಒಂದು ಬಿಟ್ಟೊಂದು ತಡೆದರೆ ಪರಬೊಮ್ಮ
ವಂದೆ ತಾನಕ್ಕು ಸರ್ವಜ್ಞ.
ಸಂ. ರೆ ಚೆನ್ನಪ್ಪ ಉತ್ತಂಗಿ , ಸರ್ವಜ್ಞನ ವಚನಗಳು
ಸಹಜ ಕ್ರಿಯೆಯಾಗಿ ಮೂತ್ರವು ಅಧೋಮುಖವಾಗಬೇಕು ಹಾಗೂ ದೃಡವಾದ
ಮಾನಸಿಕ ಕ್ರಿಯೆಯಾಗಿ ಬಿಂದು ಊರ್ಧ್ವಮುಖವಾಗಬೇಕು.
೨೧೨. ಬಿಂದುವೇ ರಸವೌಷಧಿಯೆ ನಿ । ಷ್ಪಂದವಾಯು ಮನಸ್ಸು ಮೂಷಿಕೆ ।
ಸಂದ ಮಣಿಪೂರಕವೆ ಕಿಚ್ಚುನ್ಮನಿಯೆ ರಸಘುಟಿಕೆ ॥
ಮುಂದೆ ರುದ್ರೇಶ್ವರ ಸದಾಶಿವ । ರಿಂದ ಮೀಱುದ ಸುಖವೆ ಸಿದ್ದಿಗ ।
ಳೆಂದು ನಿಯಮಿಸಿ ಕೆಲರನಾ ಪ್ರಭು ಸಿದ್ಧರೆನಿಸಿದನು ॥
ಸಂ ಪ್ರ. ಲೀ. ಗತಿ ೨೦, ಪದ್ಯ ೧೫
೨೧೩. ಪ್ರ. ಲೀ. ಗತಿ ೨೦, ಪದ್ಯಗಳು ೧೯ ರಿದ ೨೧
೨೧೪. ಪ್ರ. ಲೀ. ಗತಿ ೨೦, ಪದ್ಯಗಳು ೨೨ ಇಂದ ೨೯
೨೧೫. ಪ್ರ. ಲೀ. ಗತಿ ೨೦, ಪದ್ಯಗಳು ೩೦,೩೧
೨೧೬. ಪ್ರ. ಲೀ. ಗತಿ ೨೦, ಪದ್ಯಗಳು ೩೨ ರಿಂದ ೩೭
೨೧೭. ಪ್ರ. ಲೀ. ಗತಿ ೨೦, ಪದ್ಯಗಳು ೩೮,೩೯
೨೧೮. ಪ್ರ. ಲೀ. ಗತಿ ೨೦, ಪದ್ಯಗಳು ೪೦,೪೧
೨೧೯. ಪ್ರ. ಲೀ. ಗತಿ ೨೦, ಪದ್ಯಗಳು ೪೨,೪೩
೨೨೦. ಬಸವೇಶ್ವರನು ಶೂನ್ಯಸಿಂಹಾಸನವನ್ನು ಸ್ಥಾಪಿಸಿ ಅಲ್ಲಮನನ್ನು ಮೂರ್ತಿಗೊಳಿಸಿ ಮೈ ಮರೆತಿದ್ದು
ಬಾಹ್ಯದಲ್ಲಿ ಮಾತ್ರವಲ್ಲ, ಅದು ಅಂತರಂಗದಲ್ಲಿ ಮೊದಲು ನಡೆಯಿತು.
ಸಂ. ಎಮ್. ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ,
ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ, ಪುಟ ೫೯
೨೨೧. ಪ್ರ. ಲೀ. ಗತಿ ೨೧, ಸೂಚನೆ
೨೨೨. ಪ್ರ. ಲೀ. ಗತಿ ೨೧, ಪದ್ಯ ೨
೨೨೩. ಪ್ರ. ಲೀ. ಗತಿ ೨೧, ಪದ್ಯ ೪
೨೨೪. ಪ್ರ. ಲೀ. ಗತಿ ೨೧, ಪದ್ಯ ೫
೨೨೫. ಪ್ರ. ಲೀ. ಗತಿ ೨೧, ಪದ್ಯಗಳು ೬ ರಿಂದ ೮

೨೨೬. ಪ್ರ. ಲೀ. ಗತಿ ೨೧, ಪದ್ಯ ೯

೨೨೭. ಸಂ. ಬ. ಕ. ಶ್ರೀಮನ್ನಿಜಗುಣಶಿವಯೋಗಿ ವಿರಚಿತ ವೇದಾಂತ ರತ್ನಾಕರ, ಕೈವಲ್ಯ ಪದ್ಧತಿ, ಯೋಗ ಪ್ರತಿಪಾದನ ಸ್ಥಲ, ಪದ್ಯ ೩೨

೨೨೮. ಎಳಮುತ್ತಿನಂತೆ ದೀಪದುರಿಯಂತೆ । ಸೆಳೆಮಿಂಚಿನಂತೆ ರತ್ನದಂತೆ ।
ತೊಳಪ ವಿದ್ರುಮದ ಬಳ್ಳಿಯಂತೆ ಥಳ । ಥಳಿಪ ಶಶಿಸೂರ್ಯಕೋಟಿಯಂತೆ ।
ಕಾಣುತಿದೆ ಪರಬಿಂದು ಶಾಂಭವಿಯ । ಕೋಣೆಯೊಳು ಲಕ್ಷವಿಟ್ಟಾಕ್ಷಣದಿ ।
ಸಂ, ಶಿ. ಶಿ. ಬಸವನಾಳ , ಶ್ರೀ ಸರ್ಪಭೂಷಣ ಶಿವಯೋಗಿ ಕೃತ ಕೈವಲ್ಯಕಲ್ಪ ವಲ್ಲರಿ, ಯೋಗ ಪ್ರತಿಪಾದನ ಸ್ಥಲ, ಪದ್ಯ ೧೭

೨೨೯. ಪ್ರ. ಲೀ. ಗತಿ ೨೧, ಪದ್ಯ ೧೦

೨೩೦. ಹೊಱವಳಯದೊಂಬತ್ತು ಬಾಗಿಲು । ಮೆಱೆವ ಮಧ್ಯಕೆ ನಾಲ್ಕು ಬಾಗಿಲು ।
ನೆಱೆವಿರಾಜಿಸುವೆರಡು ಬಾಗಿಲು ಗರ್ಭವಳಯದಲಿ ॥
ಮಿಱುಪ ಮೇಲಣ ಕೆಲಸಗತಿ ಕಣ್ । ದೆಱೆದ ಬಾಗಿಲು ಶಿಖರದಲಿ ಮಹ ।
ದಱುವಿನಂಬರಪೀಠವೆಸೆದುದು ಬಸವನಾಜ್ಞೆಯಲಿ ॥
ಪ್ರ. ಲೀ. ಗತಿ ೨೧, ಪದ್ಯ ೧೨

೨೩೧. ಪ್ರ. ಲೀ. ಗತಿ ೨೧, ಪದ್ಯ ೧೪

೨೩೨. ಇಡಾ ಚಂದ್ರನಾಳ, ಪಿಂಗಳಾ ಸೂರ್ಯನಾಳ, ಸುಷಮ್ನಾ ಮಧ್ಯನಾಳ, ಗಾಂಧಾರಿ ಬಲದ ನೇತ್ರ ಹಸ್ತಿಜಿಹಾ ಎಡದ ನೇತ್ರ, ಪೂಷ ಬಲದ ಕರ್ಣ, ಪಯಸ್ವಿನೀ ಎಡದ ಕರ್ಣ, ಅಲಂಬು ಮೇಢ್ರನಾಳ, ಲಕುಹ ಗುದನಾಳ, ಶಂಖಿನೀ ನಾಭಿನಾಳ ಇಂತಿವು ದಶನಾಡಿಗಳು.
ಸಂ. ಡಾ ಆರ್. ಸಿ ಹಿರೇಮಠ, ಚೆನ್ನಬಸವಣ್ಣನವರ ವಚನಗಳು,ಕರಣ ಹಸಿಗೆ, ಪುಟ ೬೬೪

೨೩೩. ಇಡಾ ಪಿಂಗಳಯೋರ್ಮಧ್ಯೇ ಸುಷಮ್ನಾಂ ಸುಸ್ಥಿರಾಂ ಸ್ಮರೇತ್
ಸಂ. ಡಾ. ಎಂ. ಎಂ. ಕಲಬುರ್ಗಿ ಮತ್ತು ಪಂ. ನಾಗಭೂಷಣ ಶಾಸ್ತ್ರಿಗಳು, ಚೆನ್ನಸದಾಶಿವಯೋಗಿ ವಿರಚಿತಾ ಶಿವಯೋಗ ಪ್ರದೀಪಿಕಾ, ಪಟಲ ೩, ಪದ್ಯ ೧೨

೨೩೪. ಇಡಾ ಸ್ಮೃತೇಂದುರಿತಿ ಸೂರ್ಯಸುತೇತಿ ಯೊಗಾತ್
ಸಾ ಪಿಂಗಲೇನ ಇತಿ ವಿಷ್ಣು ಪದೀತಿ ತಾಸಾಂ
ಸಾ ಮಧ್ಯಮಾಗ್ನಿರಿತಿ, ಯೋನಿರಿತಿ ತ್ರಿವೇಣೀ
ಯೋಗಸ್ಥಲಂ ತದಿದಮೇವ ಭವೇತ್ತ್ರಿಕೂಟಂ ॥
ಅದೇ ಪಟಲ ೨, ಪದ್ಯ ೩೫

೨೩೫. ಪ್ರ. ಲೀ. ಗತಿ ೨೧, ಪದ್ಯ ೧೬

೨೩೬. ಪ್ರ. ಲೀ. ಗತಿ ೨೧, ಪದ್ಯ ೨೮

೨೩೭. ಪ್ರ. ಲೀ. ಗತಿ ೨೧, ಪದ್ಯ ೩೦

೨೩೮. ಪ್ರ. ಲೀ. ಗತಿ ೨೨, ಪದ್ಯ ೫

೨೩೯. ಪ್ರ. ಲೀ. ಗತಿ ೨೨, ಪದ್ಯ ೬

೨೪೦. ಪ್ರ. ಲೀ. ಗತಿ ೨೨, ಪದ್ಯ ೨೮

೨೪೧. ಪ್ರ. ಲೀ. ಗತಿ ೨೨, ಪದ್ಯ ೩೧

೨೪೨. ಪ್ರ. ಲೀ. ಗತಿ ೨೨, ಪದ್ಯಗಳು ೩೨ ರಿಂದ ೩೭

೨೪೩. ಪ್ರ. ಲೀ. ಗತಿ ೨೨, ಪದ್ಯ ೩೮

೨೪೪. ಪ್ರ. ಲೀ. ಗತಿ ೨೨, ಪದ್ಯಗಳು ೪೬ ರಿಂದ ೪೯

೨೪೫. ಪ್ರ. ಲೀ. ಗತಿ ೨೨, ಪದ್ಯ ೫೦

೨೪೬. ಆದಿಮಧ್ಯಾಂತಂಗಳಿಲ್ಲದ । ವೇದಶಾಸ್ತ್ರಂಗಳಿಗೆ ನಿಲುಕಿದ ।
ನಾದಬಿಂದುಗಳೆಂಬ ಸಂಪುಟದೊಳಗೆ ಸಮನಿಸದ ॥
ಆದರಿಸುವಾತ್ಮತ್ರಯಂಗಳ । ಹಾದಿಯಲಿ ಹಂಗಿಲ್ಲದನುಪಮ ।
ವಾದ ಘನಗುರು ಮೂರ್ತಿಗೊಂಡನು ಶೂನ್ಯಪೀಠದಲಿ ॥
ಪ್ರ. ಲೀ. ಗತಿ ೨೨, ಪದ್ಯ ೫೩

೨೪೭. ಪ್ರ. ಲೀ. ಗತಿ ೨೨, ಪದ್ಯ ೫೫

೨೪೮. ಪ್ರ. ಲೀ. ಗತಿ ೨೨, ಪದ್ಯ ೫೭

೨೪೯. ಪ್ರ. ಲೀ. ಗತಿ ೨೩, ಪದ್ಯ ೨

೨೫೦. ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು,
ಬಯಲು ಬಯಲಾಗಿ ಬಯಲಾಯಿತ್ತಯ್ಯ ,
ಬಯಲ ಜೀವನ, ಬಯಲ ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು.
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರ.
ಸಂ. ಇಮ್ಮಡಿ ಶಿವಬಸವಸ್ವಾಮಿಗಳು , ಅಲ್ಲಮ ಪ್ರಭುವಿನ ಟೀಕಿನ ವಚನಗಳು, ವ. ಸಂ. ೬೩೯

೨೫೧. ಪ್ರ. ಲೀ. ಗತಿ ೨೩, ಪದ್ಯ ೧೨

೨೫೨. ಪ್ರ. ಲೀ. ಗತಿ ೨೩, ಪದ್ಯ ೪೬

೨೫೩. ಪ್ರ. ಲೀ. ಗತಿ ೨೩, ಪದ್ಯ ೪೭

೨೫೪. ಸಂ. ಬಸವನಾಳ ಶಿವಲಿಂಗಪ್ಪನವರು, ಬಸವಣ್ಣನವರ ಷಟ್‌ಸ್ಥಳದ ವಚನಗಳು,ಭಕ್ತ ಜ್ಞಾನಿ ಸ್ಥಳ,
ವ. ಸಂ. ೧೬೪

೨೫೫. ಪೂರ್ಣಮದಃ ಪೂರ್ಣಮಿದಂ । ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ । ಪೂರ್ಣಮೇವಾವಶಿಷ್ಯತೇ ॥
ಸಂ. ಡಿ.ವಿ.ಜಿ. ಈಶೋಪನಿಷತ್ತು , ಈಶಾವಾಸ್ಯೋಪನಿಷತ್ತಿನ ಶಾಂತಿಪಾಠ

೨೫೬. ಹಸಿದು ಬಂದವನಲ್ಲವರ್ಥದ । ದೆಸೆಗೆ ಬಂದವನಲ್ಲ ಕಾಮದ ।
ಮಸೆಗೆ ಮನದಲಿ ನೊಂದು ಬಂದವನಲ್ಲ ನಾ ನಿನ್ನ ॥
ಹಸರಿಸಿದ ದಾಸೋಹತನವನು । ಸಸಿನೆ ನೋಡಲು ಬಂದೆನಲ್ಲದೆ ।
ವ್ಯಸನದಾಸೆಗಳೆನ್ನಲುಂಟೇ ಬಸವ ಕೇಳೆಂದ ॥
ಸಂ ಪ್ರ. ಲೀ. ಗತಿ ೨೩, ಪದ್ಯ ೪೯

೨೫೭. ಪ್ರ. ಲೀ. ಗತಿ ೨೩, ಪದ್ಯ ೫೨

೨೫೮. ಉಣಿಸುಉಣಿಸೆಂದೆಂಬರೆಲ್ಲರು । ವುಣಿಸನುಂಬುದನಿಂದು ಕಂಡೆವು ।
ದಣಿಸಿದಿರಿ ನೀವಾದೊಡೆಮ್ಮನು ಭಕ್ತ ನಿಮ್ಮಾಣೆ ॥
ಅಣಕವಲ್ಲಿದು ನರಸುರೋರಗ । ರೆಣಿಕೆಯೊಳು ನಿನಗಾರು ಸರಿ ಕಾ ।
ರಣಕಲಾತ್ಮಕ ನೀನೆಲೈ ಬಸವಣ್ಣ ಕೇಳೆಂದ ॥

ಪ್ರ. ಲೀ. ಗತಿ ೨೩, ಪದ್ಯ ೫೩

೨೫೯. ಪ್ರ. ಲೀ. ಗತಿ ೨೩, ಪದ್ಯಗಳು ೫ ರಿಂದ ೮

೨೬೦. ಪ್ರ. ಲೀ. ಗತಿ ೨೩, ಪದ್ಯಗಳು ೯, ೧೦

೨೬೧. ಪ್ರ. ಲೀ. ಗತಿ ೨೪, ಪದ್ಯ ೩

೨೬೨. ಪ್ರ. ಲೀ. ಗತಿ ೨೪, ಪದ್ಯ ೪

೨೬೩. ಪ್ರ. ಲೀ. ಗತಿ ೨೪, ಪದ್ಯ ೬

೨೬೪. ಪ್ರ. ಲೀ. ಗತಿ ೨೪, ಪದ್ಯ ೭

೨೬೫. ಮನವೆಂಬ ಗಿಳಿಯನೊಯ್ಯಾರದೊಳೋವಿ ಮೆ । ಲ್ಲನೆ ಮುದ್ದು ನುಡಿಗಲಿಸೆಲೆ ಮಾನಿನಿ ॥ ಪ ॥
ಆರು ಜಾಳಂದರ ವೆಸೆವಾಗ್ನೇಯ ಮಿಂ । ಚೇರಿದ ರನ್ನ ಪಂಜರದೊಳಗೆ ।
ಮೂರು ವರ್ನದ ಕೋಲಿನ ಮೇಲೇರಿಸಿ ಕಾಲ್ಗೆ । ಪಾರದಂತಸುಸರಪಣಿ ಹೂಡಿ ॥ ೧ ॥
ನಯನವಟ್ಟಲೊಳು ಚಿನ್ಮಯದಿನಿಗೆನೆಯೂಡಿ । ಸ್ವಯಸುನಾದದ ತನಿವಣ್ಣನಿತ್ತು ।
ಭಯವೀವ ರಿಪುವೆಂಬ ಬೇಲಿಯನೆಬ್ಬಟ್ಟಿ । ಪ್ರಿಯದಿ ಮೈದಡವಿ ಭಾವದ ಕೈಯೊಳು ॥ ೨ ॥
ನಾಮವಿದೂರ ನಿಸ್ಸೀಮ ನಿತ್ಯಾನಂದ । ಧಾಮ ಬೋಧಾದ್ವಯಾನಂತರೂಪ ॥
ನೇಮರಹಿತ ಶಂಭುಲಿಂಗವೆನಿಸುವಾತ್ಮಾ । ರಾಮನೆ ಶಿವಶಿವಯೆಂದೋದಿಸಿ ॥ ೩ ॥
ಸಂ. ಬ. ಕ. ಪಾಟೀಲ , ಶ್ರೀ ಮನೀಜಗುಣಶಿವಯೋಗಿ ವಿರಚಿತ ವೇದಾಂತ ರತ್ನಾಕರ ,
ಕೈವಲ್ಯ ಪದ್ಧತಿ, ಯೋಗ ಪ್ರತಿಪಾದನ ಸ್ಥಲ, ಪದ್ಯ ೮

೨೬೬. ಪ್ರ. ಲೀ. ಗತಿ ೨೪, ಪದ್ಯ ೮

೨೬೭. ಪ್ರ. ಲೀ. ಗತಿ ೨೪, ಪದ್ಯ ೯

೨೬೮. ಯೋಗಿಗೆ ಪಂಚಾವಸ್ಥೆಗಳುಂಟು ಬೇರಂತವನರಿದಾಗಳೆ
ಕೈಗೂಡುವಳೊಲಿದಾ ಮುಕುತಿ ವನಿತೆ ॥ ಪ ॥
ಇಹಪರಲೋಕದ ಭೋಗವನೆಳಸದೆ ನಿಜಮೋಕ್ಷವೆಂ
ತಹದು ತನಗೆಂದು ಶೃತಿ ಗುರುಗಳನಾರೈದು
ಸಹಜ ಶಮೆ ಸತ್ಯ ಬುಧಜನ ಸಂಗತಿ ಮೊದಲಾದ
ಬಹು ಸುಗುಣದೊಳೆಚ್ಚರುದಳೆದುದೆ ಜಾಗರಾವಸ್ಥೆ ॥ ೧ ॥
ಬಿಸಿಲು ದೊರೆ ಸುರಪನಧನು ಶರದಭ್ರದಂತೆ ಮೋ
ಹಿಸಿ ತೋರುವ ಭೂತ ಭುವನಾದಿ ವಸ್ತುಗಳು
ಪುಸಿಯೆಂದು ತಿಳಿದಾತ್ಮನುಳುಮೆಯನೆಡೆವಿಡದೆ ಭಾ
ವಿಸುತಿರಲದು ತಾನೆ ಕನಸೆಂದೆನಿಸುವವಸ್ಥೆ ॥ ೨ ॥
ಭೇದವಳಿದು ವಿರಳ ಸುಖ ಬೋಧವಳವಲಟ್ಟು ಬಳಿ
ಕಾದ ಪ್ರಾರಬ್ಧ ಭೋಗದೊಳು ವಿಕೃತಿಗಳ
ಹೋದ ಹೊಲಬಿಲ್ಲದಚಲಿತ ಚಿತ್ತದಿರವೆ ತನ
ಗಾದೊಡದು ಸುಪ್ತಿಯೆನಿಸುತಿಹವಸ್ಥೆ ॥ ೩ ॥
ಬಯಲ ಬರಿಗೊಡದಂತೊಳ ಹೊರಗಣ ಭಾವನೆಯ ಸಂ
ಶಯವಿಲ್ಲದಂಬುಧಿಯೊಳು ಮುಳುಗಿದ ಘಟದಂತೆ
ಸ್ವಯಮೆನಿಸುವ ಪರಿಪೂರ್ಣತೆ ಕರಿಗೊಂಡಚ್ಚಳಿಯದೆ ನಿ

ಶ್ಚಯವಾಗಲದೀಗಳೆ ನಿರ್ಮಲ ತುರಿಯಾವಸ್ಥೆ ॥ ೪ ॥
ಶರಿರವಿಡಿದಾವುದರೊಡನಭಿಮಾನತೆ ಯಣುವಿಲ್ಲದೆ
ನಿರುಪಮ ಸಾಕ್ಷಿಕ ಶಂಭುಲಿಂಗವಾಗುಳಿದು
ದರುಶನ ಮತವಾದಿಗಳೆಲ್ಲರು ತಮತಮಗೊಂದೊಂದು
ಪರಿಯೊಳು ಪೊಗಳ್ದಿರವದು ತುರಿಯಾತೀತಾವಸ್ಥೆ ॥ ೫ ॥
ಸಂ. ಬ. ಕ. ಪಾಟೀಲ , ಶ್ರೀ ಮನ್ನಿಜಗುಣ ಶಿವಯೋಗಿ ವಿರಚಿತ ವೇದಾಂತ ರತ್ನಾಕರ ,
ಕೈವಲ್ಯ ಪದ್ಧತಿ , ಯೋಗಪ್ರತಿಪಾದನ ಸ್ಥಲ, ಪದ್ಯ ೩೯

೨೬೯. ಪ್ರ. ಲೀ. ಗತಿ ೨೪, ಪದ್ಯಗಳು ೧೦ ರಿಂದ ೧೩
೨೭೦. ಪ್ರ. ಲೀ. ಗತಿ ೨೪, ಪದ್ಯ ೧೮
೨೭೧. ಪ್ರ. ಲೀ. ಗತಿ ೨೪, ಪದ್ಯ ೧೯
೨೭೨. ಪ್ರ. ಲೀ. ಗತಿ ೨೪, ಪದ್ಯ ೨೦
೨೭೩. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾತೇ ಸಂಗೋಸ್ತ್ವ ಕರ್ಮಣಿ ॥
ಸಂ. ಘನಶ್ಯಾಮದಾಸ ಜಾಲಾನ , ಶ್ರೀಮದ್ಭಗವದ್ಗೀತಾ , ಅಧ್ಯಾಯ ೨, ಶ್ಲೋಕ ೪೭
೨೭೪. ಪ್ರ. ಲೀ. ಗತಿ ೨೪, ಪದ್ಯ ೨೨
೨೭೫. ಪ್ರ. ಲೀ. ಗತಿ ೨೪, ಪದ್ಯ ೨೬
೨೭೬. ಪ್ರ. ಲೀ. ಗತಿ ೨೪, ಪದ್ಯ ೨೭
೨೭೭. ಪ್ರ. ಲೀ. ಗತಿ ೨೪, ಪದ್ಯ ೨೮
೨೭೮. ಪ್ರ. ಲೀ. ಗತಿ ೨೪, ಪದ್ಯ ೩೩
೨೭೯. ಪ್ರ. ಲೀ. ಗತಿ ೨೪, ಪದ್ಯ ೩೬
೨೮೦. ಪ್ರ. ಲೀ. ಗತಿ ೨೪, ಪದ್ಯ ೪೧
೨೮೧. ಸಂ. ಡಾ. ಆರ್. ಸಿ. ಹಿರೇಮಠ , ಚೆನ್ನಬಸವಣ್ಣನವರ ವಚನಗಳು , ವ. ಸಂ. ೧೪೭೧
೨೮೨. ಪ್ರ. ಲೀ. ಗತಿ ೨೫, ಪದ್ಯ ೨
೨೮೩. ಪ್ರ. ಲೀ. ಗತಿ ೨೫, ಪದ್ಯ ೩
೨೮೪. ಪ್ರ. ಲೀ. ಗತಿ ೨೫, ಪದ್ಯ ೭,೮
೨೮೫. ಪ್ರ. ಲೀ. ಗತಿ ೨೫, ಪದ್ಯ ೯
೨೮೬. ಆದೊಡಾಲಿಸಿ ಕೇಳು ಧರ್ಮಾ। ರ್ಥಾದಿಯಾಗಿಹ ಕಾಮ ಮೋಕ್ಷಾ ।
ಮೋದವಾಗಿಹವಖಿಳ ಸಮಯಗಳಾಗಮೋಕ್ತಿಯಲಿ ॥
ವೇದವಱಿಯಲು ವೀರಶೈವದ । ಹಾದಿಯೆಂಬುದು ನಿಸ್ಪೃಹದ ಸಂ ।
ಬೋಧೆಯಾಗಿಹುದೇನನೆಂಬೆನು ಗಿರಿಜೆ ಕೇಳೆಂದ ॥
ಪ್ರ. ಲೀ. ಗತಿ ೨೫, ಪದ್ಯ ೧೧
೨೮೭. ಪ್ರ. ಲೀ. ಗತಿ ೨೫, ಪದ್ಯ ೧೨
೨೮೮. ಪ್ರ. ಲೀ. ಗತಿ ೨೫, ಪದ್ಯ ೧೩
೨೮೯. ಪ್ರ. ಲೀ. ಗತಿ ೨೫, ಪದ್ಯ ೧೪
೨೯೦. ಪ್ರ. ಲೀ. ಗತಿ ೨೫, ಪದ್ಯ ೧೬

೨೯೧. ಪ್ರ. ಲೀ. ಗತಿ ೨೫, ಪದ್ಯ ೧೭

೨೯೨. ಪ್ರ. ಲೀ. ಗತಿ ೨೫, ಪದ್ಯ ೨೩

೨೯೩. ಪ್ರ. ಲೀ. ಗತಿ ೭, ಪದ್ಯ ೫೬

೨೯೪. ಪ್ರ. ಲೀ. ಗತಿ ೭, ಪದ್ಯ ೬೧

೨೯೫. ಪ್ರ. ಲೀ. ಗತಿ ೨, ಪದ್ಯ ೩೧

೨೯೬. ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಮಾಡಿ,
ಬಲಿದು ಷಡ್ವಿಧಭಕ್ತಿಯೆಂಬ ಸೋಪಾನದಿಂದ ಪರಮಾನಂದ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ !
ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರ ನಿಮ್ಮಾಣೆ !
ಟೀಕು, ಶಿವಜ್ಞಾನಿ ಶರಣನು ತನ್ನ ತನುವನೆ ಏರಿಯ ಮಾಡಿ, ಮನವನೆ ಕಲ್ಲ ಕಟ್ಟೆಯ ಮಾಡಿ, ಬಲಿದು ಷಡ್ವಿಧ ಭಕ್ತಿಯೆಂಬ ಸೋಪಾನವಿಡಿದು, ಶಿವಸುಖಾನಂದ ಜಲವ ತಮ್ಮಾತ್ಮಾಂಗದೊಳು ತುಂಬಿ, ಭಿನ್ನವಳಿದು ಏಕರಸವಾಗಿ ನಿತ್ಯವಪ್ಪ ಶಿವಪದವ ಪಡೆದರು ಶರಣರು. ಅಂತು ಶಿವ ಪದವ ಪಡೆದು ಸುಖಿಸಬಲ್ಲರು ಶರಣರಲ್ಲದೆ ಉಳಿದ ಮತಾದಿಗಳಾರೂ ಅರಿಯರೆಂಬುದೀಗ ಈ ವಚನದ ತಾತ್ಪರ್ಯಾರ್ಥ
ಸಂ ಇಮ್ಮಡಿ ಶಿವಬಸವಸ್ವಾಮಿಗಳು , ಅಲ್ಲಮಪ್ರಭುವಿನ ಟೀಕಿನ ವಚನಗಳು , ಐಕ್ಯ ಸ್ಥಲ, ವ. ಸಂ. ೭೨೯

೨೯೭. ಪ್ರ. ಲೀ. ಗತಿ ೨, ಪದ್ಯ ೩೨

೨೯೮. ಪ್ರ. ಲೀ. ಗತಿ ೨, ಪದ್ಯ ೩೪

೨೯೯. ಪ್ರ. ಲೀ. ಗತಿ ೨೪, ಪದ್ಯ ೧೭

೩೦೦. ಪ್ರ. ಲೀ. ಗತಿ ೨೪, ಪದ್ಯ ೧೮

೩೦೧. ಮಾತಿನ ದ್ವೈತದಲಿ ಮಾರಿಯ । ಘಾತಿ ಮಾಣದು ಮನದ ಸಂಕ ।
ಲ್ಪಾತಿಶಯದಲಿ ನಾಮ ರೂಪುಕ್ರಿಯೆ ನಿವಾರಿಸಲು ॥
ಪ್ರೀತಿ ನೀತಿಯ ನುಂಗಿದುಪಮಾ । ತೀತನಾದಂಗಲ್ಲದಾಗದು ।
ಕೌತಕವ ನಾನೇನ ಹೇಳುವೆ ಬಸವ ಕೇಳೆಂದ ॥
ಪ್ರ. ಲೀ. ಗತಿ ೨೪, ಪದ್ಯ ೨೫

೩೦೨. ದೇವಿ ಕೇಳ್ ನಿನ್ನಂಶದಾ ಮಹ । ದೇವಿ ನನ್ನಂಶದ ಗಣಂಗಳು ।
ದೇವಕನ್ಯೆಯರೆಲ್ಲರಲ್ಲಮನಿಂದೆ ಜಗವಱಿಯೆ ॥
ತೀವಿ ತಮ್ಮಯ ನಾಮ ರೂಪು । ಕ್ರೀವಿಳಾಸವನಿಳುಹಿ ನಿತ್ಯ ನಿ ।
ರಾವಲಂಬದ ಸುಖಿಗಳಾದರು ಗಿರಿಜೆ ಕೇಳೆಂದ ॥
ಪ್ರ. ಲೀ. ಗತಿ ೨೫, ಪದ್ಯ ೧೭

೩೦೩. ರೆ.ಎಫ್. ಕಿಟೆಲ್ , ಕನ್ನಡ – ಇಂಗ್ಲಿಷ ಡಿಕ್ಷನರಿ , ಪುಟ ೧೩೪೫

೩೦೪. ಸಂ. ಎಮ್.ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ , ಪ್ರಭುಲಿಂಗಲೀಲೆಯ ಸಂಗ್ರಹ , ಟಿಪ್ಪಣಿ, ಪುಟ ೧೩೩

✼ ✼ ✼ ✼ ✼

ಭಾಗ ೩ : ಕಾವ್ಯ ಸಾಮಗ್ರಿ

೧ ಪಾತ್ರ ಚಿತ್ರಣ

೧.೧ ಚಾರಿತ್ರಿಕ ವ್ಯಕ್ತಿಗಳು ಹಾಗೂ ಕಾಲ್ಪನಿಕ ಪಾತ್ರಗಳು

ಪ್ರಭುಲಿಂಗಲೀಲೆ ವಿಶ್ವಂಭರನಾದ ಪರಶಿವನ ಲೀಲೆ ಎಂಬುದನ್ನು ಗಮನಿಸಿದ್ದೇವೆ. ಇದನ್ನು ನಿರೂಪಿಸುವಲ್ಲಿ ಕವಿ ಚಾರಿತ್ರಿಕ ವ್ಯಕ್ತಿಗಳನ್ನು ಆಯ್ದುಕೊಳ್ಳುವುದರೊಂದಿಗೆ ಕಾಲ್ಪನಿಕ ಪಾತ್ರಗಳಿಗೂ ಅವಕಾಶ ಒದಗಿಸಿ ವಸ್ತುವನ್ನು ಸಾಧ್ಯವಾದಷ್ಟು ಮಟ್ಟಿಗೆ ರಂಜನೀಯವಾಗಿಸಿದ್ದಾನೆ.

ಕಾವ್ಯದಲ್ಲಿ ಚಾಮರಸನದು ಚಾರಿತ್ರಿಕ ದೃಷ್ಟಿಯಲ್ಲವಾದರೂ ಹನ್ನೆರಡನೆಯ ಶತಮಾನದಲ್ಲಿ ಬದುಕಿದ್ದ ಬಸವಾದಿ ಶರಣರ ಎಷ್ಟೋ ಹೆಸರುಗಳು ಅಲ್ಲಿ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಪರಶಿವನನ್ನು ಸಂಕೇತಿಸಲು ಆಯ್ದುಕೊಂಡಿರುವ ಅಲ್ಲಮ ಕಾವ್ಯದುದ್ದಕ್ಕೂ ಸುಳಿಯುತ್ತಾನೆ. ಶಿವಯೋಗದ ಕಾರ್ಯವೆಂಥದು ಎಂಬದು ಇದರಿಂದ ತಿಳಿದು ಬರುತ್ತದೆ. ತಾನು ಪರೋಕ್ಷವಾಗುಳಿದು ಮನಸ್ಸಿನ ಅಧೀನಕ್ಕೆ ಕರಣಾದಿಗಳ ವ್ಯವಹಾರವನ್ನು ಒಪ್ಪಿಸಿ ಮಾನವನ ಹುಟ್ಟುಸಾವುಗಳಿಗೆ ಕಾರಣವಾಗುವ ಹಾಗೂ ಪುಣ್ಯಪಾಪಗಳಿಗೆ ಗೂಡಾಗುವ ಜೀವಾತ್ಮನನ್ನು ಭವಬಂಧನದಿಂದ ಮುಕ್ತಗೊಳಿಸಿ ನಿತ್ಯತ್ವದೆಡೆಗೆ ಕರೆದೊಯ್ಯುವ ಕ್ರಿಯೆ ಶಿವಯೋಗದ್ದು. ಹೀಗಾಗಿ ಈ ಕ್ರಿಯೆಯ ವಿವಿಧ ಪ್ರಸಂಗಗಳಿಗೆ ಆಯ್ದುಕೊಳ್ಳಲ್ಪಟ್ಟಿರುವ ಸಾಂಕೇತಿಕ ವ್ಯಕ್ತಿಗಳು ಕಾವ್ಯದಲ್ಲಿ ತಮ್ಮ ತಮ್ಮ ಸಂದರ್ಭಗಳಿಗೆ ಮಾತ್ರ ಸೀಮಿತರಾಗಿ ಉಳಿಯುತ್ತಾರೆ. ಈ ಕಾರಣದಿಂದಾಗಿ ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ ಮೊದಲಾದವರ ಪಾತ್ರಗಳು ನಿಮಿತ್ತ ಮಾತ್ರವಾಗಿ ಸುಳಿದಿರುವಂಥವುಗಳು. ಇವುಗಳಲ್ಲಿ ಸಿದ್ಧರಾಮ ಮತ್ತು ಬಸವಣ್ಣ ಇವರಿಬ್ಬರ ಪಾತ್ರಗಳು ಸ್ವಲ್ಪ ಮೇಲ್ಮಟ್ಟದಲ್ಲಿ ತೋರುತ್ತವೆ. ಕವಿ ಸಿದ್ಧರಾಮವನ್ನು ಆಗಾಗ ಗುರುವಿನ ಜೊತೆಗಾರನಂತೆ ಬಳಸಿಕೊಂಡು ಕಥಾನಕವನ್ನು ಮುಂದುವರೆಸಲು

[illegible]

[illegible]

[illegible]

[illegible]

[illegible]

ಯೋಜಿಸಿರುವಂತೆ ತೋರುತ್ತದೆ. ಸಾಧಕನಿಗೆ ಸಂಕೇತವಾಗಿರುವ ಬಸವಣ್ಣನ ಪಾತ್ರವು ಅಂತರಂಗಾಚರಣೆಯ ಬಹಿರಂಗದ ನಿರೂಪಣೆಗೆ ಪೂರಕವಾಗಿರುವಂತೆ ತೋರುತ್ತದೆ.[1]

ಷಟ್ಸ್ಥಲಾಚಾರಣೆಯನ್ನು ನಿರೂಪಿಸಲು ಕೃತಿ ರಚಿಸಬಯಸುವ ಪ್ರತಿಯೊಬ್ಬನೂ ಅದನ್ನು ಹಾಸುಹೊಕ್ಕಾಗಿಸಿಕೊಂಡಿರುವ ಬಸವಾದಿ ಪ್ರಮಥರ ಬದುಕಿನ ಘಟನೆಗಳೊಂದಿಗೆ ಆ ಕೃತಿಯ ವಸ್ತುವನ್ನು ಸಮನ್ವಯಗೊಳಿಸಬೇಕಾಗುತ್ತದೆ. ಈ ಆಚರಣೆಯ ಬೇರುಗಳು ಶಿವಾಗಮಗಳಲ್ಲಿ ಗೋಚರಿಸುತ್ತಿದ್ದರೂ ಅದಕ್ಕೆ ಸ್ಪಷ್ಟವಾದ ಅರ್ಥವನ್ನು ಕಲ್ಪಿಸಿದವರು ಬಸವಾದಿ ಶರಣರು. ಅವರದು ಸಾಂಪ್ರದಾಯಕ ಕೊಳೆಯೆಲ್ಲವೂ ಕೊಚ್ಚಿಕೊಂಡು ಹೋಗುವಂತೆ ಮಾಡಿ ಜನಮನದ ಬದುಕಿನಲ್ಲಿ ಸ್ವಚ್ಛ ನೀರು ಹರಿಯುವಂತೆ ಮಾಡಿರುವ ಮಹಾಕ್ರಾಂತಿಯ ಯುಗ! 'ಆಗ ಕರ್ಮ ಕ್ರಿಯೆಯಾಯಿತು; ಧರ್ಮ ದಯೆಯಾಯಿತು; ಸೃಷ್ಟಿ ಸತ್ಯವಾಯಿತು; ದೃಷ್ಟಿ ಲಿಂಗವಾಯಿತು; ವ್ಯಷ್ಟಿ ಸಮಷ್ಟಿಯಾಯಿತು.'[2] ಎಂಟು ನೂರು ವರ್ಷಗಳು ಕಳೆದಿದ್ದರೂ ಇಂದಿಗೂ ಅದರ ಪರಿಣಾಮ ಅಗಾಧವಾಗಿದೆ. ಜನಮನದ ಬದುಕಿನಲ್ಲಿ ಒಂದಾಗಿರುವ, ಶಿವನ ಅವತಾರಿಗಳೆಂದು ತಿಳಿಯಲ್ಪಡುತ್ತಿರುವ ಆ ಶಿವಶರಣರ ಹೆಸರುಗಳೊಂದಿಗೆ ಸಮನ್ವಯಗೊಳಿಸಿ ವಸ್ತುವನ್ನು ನಿರೂಪಿಸಿರುವ ಚಾಮರಸನ ಕಲ್ಪನಾಶಕ್ತಿ ಅಗಾಧವಾಗಿದೆ! ಅಲ್ಲಮ ಪ್ರಭು ಜನಮನದಲ್ಲಿ ಮಾತ್ರ ಆರಾಧ್ಯನಾಗಿರದೆ ಬಸವಾದಿ ಶರಣರಿಗೇ ಆರಾಧ್ಯನಾಗಿರುವುದರಿಂದ ಅವನ ಬದುಕಿನ ಎಳೆಗಳನ್ನು ಕಲ್ಪಿಸುತ್ತ ವಸ್ತುವನ್ನು ಅವುಗಳೊಂದಿಗೆ ಸಮನ್ವಯಗೊಳಿಸಿರುವುದು ಕಾವ್ಯದ ಸಫಲತೆಗೆ ಕಾರಣವಾಗಿದೆ.

ತಾತ್ವಿಕ ವಿಷಯವೊಂದಕ್ಕೆ ಕಾವ್ಯದ ಸ್ಪರ್ಶ ಕೊಡುವಲ್ಲಿ ಕವಿ ಕಾಲ್ಪನಿಕ ಪಾತ್ರಗಳನ್ನೂ ಸೃಷ್ಟಿಸಿದ್ದಾನೆ. ಆದರೆ ಅವೆಲ್ಲವೂ ಚಾಮರಸನ ಕಲ್ಪನೆಯಿಂದಲೇ ರೂಪುಗೊಂಡವುಗಳಲ್ಲ. ಕೆಲವು ಪಾತ್ರಗಳು ಭಾರತೀಯ ಸಂಸ್ಕೃತಿಯ ಪೌರಾಣಿಕ ನೆಲೆಯಿಂದ ಎದ್ದು ಬಂದಿವೆ. ಪರಮೇಶ್ವರ, ಪಾರ್ವತಿ, ದೂರ್ವಾಸ ಇವರು ಈ ಗುಂಪಿಗೆ ಸೇರುತ್ತಾರೆ. ಮಮಕಾರ, ಮೋಹಿನಿ, ಮಾಯೆ, ಅಹಂಕಾರಾಚಾರ್ಯ, ವಿಮಳೆ, ಸುಜ್ಞಾನಿ, ನಿರಹಂಕಾರ, ಸುಮತಿ, ನಿರ್ಮಳ ಇವರೆಲ್ಲ ವಿವಿಧ ತಾತ್ವಿಕ ಅಂಶಗಳನ್ನು ಸಂಕೇತಿಸಲು ರೂಪುಗೊಂಡವರೆಂಬುದನ್ನು ಅವರ ಹೆಸರುಗಳನ್ನು ನೋಡಿಯೇ ಗ್ರಹಿಸಬಹುದು. ಹರಿಹರನ 'ಪ್ರಭುದೇವರ ರಗಳೆ'ಯಲ್ಲಿ ಮೂಡಿ ಬಂದಿರುವ ಅನಿಮಿಷಯ್ಯನ ಪ್ರಸಂಗದ ಪ್ರತಿಮೆಗೆ ತನ್ನದೇ ಆದ

ಪ್ರತಿಭಾ ಸ್ಪರ್ಶ ಕೊಟ್ಟಿರುವ ಚಾಮರಸ ಗೊಗ್ಗಯ್ಯನನ್ನು ಸೃಷ್ಟಿಸಿ ದೀಕ್ಷಾರ್ಥಿಗೆ ಸಂಕೇತವಾಗಿಸಿದ್ದಾನೆ. ಚಾಮರಸನ ಕಲ್ಪನೆಯಿಂದಲೇ ಮೂಡಿ ಬಂದಿರುವ ಪಾತ್ರ ಗೊಗ್ಗಯ್ಯನದು.

ವೀರಶೈವತ್ವದ ಗಮನದಲ್ಲಿ ಸುಳ್ಳು ಮಾಯೆಯನ್ನು ಸುಳ್ಳಾಗಿಸುವುದೆಂದರೆ ಪ್ರಾಕೃತಿಕ ಅಂಶಗಳನ್ನು ಶಿವಯೋಗಾಚರಣೆಗಾಗಿ ಮಾತ್ರ ಬಳಸುವುದು; ಪಂಚೇಂದ್ರಿಯಗಳಿಗೆ ವಶವಾಗದೆ, ಅವು ವಿಷಯಗಳೊಂದಿಗೆ ನಡೆಸುವ ಜಗ್ಗಾಟದಲ್ಲಿ ಸಿಕ್ಕಿಕೊಳ್ಳದೆ ಅವುಗಳನ್ನು ಮೀರಿ ನಿಲ್ಲುವುದು. ವಸ್ತುವನ್ನು ರಂಜನೀಯವಾಗಿಸಲು ಈ ತತ್ವದ ನಿರೂಪಣೆಯಲ್ಲಿ, ಕವಿಗೆ ಸಮೃದ್ಧವಾಗಿರುವ ಗಣಿಯೇ ದೊರಕಿದಂತಾಗಿದೆ. ಅಂತೆಯೇ ಇದನ್ನು ಸಂಕೇತಿಸಲು ಮಾಯಾದೇವಿಯ ಪಾತ್ರವನ್ನು ಸೃಷ್ಟಿಸಿರುವ ಕವಿ ಅದರ ನಿರೂಪಣೆಯಲ್ಲಿ ಕಾಮಶಾಸ್ತ್ರ ಹಾಗೂ ನಾಟ್ಯಶಾಸ್ತ್ರ ಇವೆರಡರ ಅಂಶಗಳನ್ನೂ ಸಮರ್ಪಕವಾಗಿ ಬಳಸಿಕೊಂಡಿದ್ದಾನೆ. ತತ್ವಕ್ಕೆ ಕಾವ್ಯದ ಸ್ಪರ್ಶ ಕೊಡುವಲ್ಲಿ ಕವಿಗೆ ಈ ಪ್ರಸಂಗ ತುಂಬ ಸಹಕಾರಿಯಾಗಿದೆ. ಹರಿಹರನ ಕಾಮಲತೆಯ ಪ್ರಸಂಗದಿಂದ ಪ್ರೇರಣೆ ಪಡೆದಿದ್ದರೂ ಮಾಯಾದೇವಿಯ ಪಾತ್ರ ಚಾಮರಸನ ಅತ್ಯುನ್ನತ ಮಟ್ಟದ ಕಲ್ಪನಾಶಕ್ತಿಯ ಫಲ. ಮಾಯಾದೇವಿಯ ಸಖಿಯರ ಪಾತ್ರಗಳಿಗೂ ಈ ಮಾತು ಅನ್ವಯಿಸುತ್ತದೆ.

ಕವಿ ಅನುಸರಿಸಿರುವ ಇನ್ನೊಂದು ತಂತ್ರವೆಂದರೆ ಚಾರಿತ್ರಿಕ ಪಾತ್ರಗಳೊಂದಿಗೆ ಕಾಲ್ಪನಿಕ ಪಾತ್ರಗಳನ್ನು ತಳಕು ಹಾಕಿರುವುದು. ಯಾವ ಹಂತದಲ್ಲಿಯೂ ವಸ್ತುವಿನ ಚಾರಿತ್ರಿಕ ನಿರೂಪಣೆಯ ಪ್ರತಿಬಂಧವನ್ನು ಇಟ್ಟುಕೊಂಡಿರದ ಕವಿ ಯಾವ ಸಂಕೋಚವೂ ಇಲ್ಲದೆ ಈ ಕ್ರಮಕ್ಕೆ ಮುಂದಾಗಿದ್ದಾನೆ. ಅಲ್ಲಮ ಚಾರಿತ್ರಿಕ ವ್ಯಕ್ತಿಯಾಗಿದ್ದರೆ ಆತನ ತಂದೆ ತಾಯಿಗಳಾದ ನಿರಹಂಕಾರ-ಸುಜ್ಞಾನಿಗಳ ಹೆಸರುಗಳು ಕಲ್ಪನೆಯಿಂದ ಮೂಡಿ ಬಂದಿವೆ. ಅದೇ ರೀತಿ ಅಕ್ಕಮಹಾದೇವಿ ಚಾರಿತ್ರಿಕ ವ್ಯಕ್ತಿ ಹಾಗೂ ಅವಳ ತಂದೆತಾಯಿಗಳಾದ ನಿರ್ಮಳ-ಸುಮತಿಯರು ಚಾಮರಸನಿಂದ ಕಾಲ್ಪನಿಕವಾಗಿ ಹೆಸರು ಪಡೆದಿದ್ದಾರೆ. ಕಾವ್ಯದ ವಸ್ತುವಿನ ಲಕ್ಷ್ಯದಲ್ಲಿ ಸದಾ ಜಾಗ್ರುತನಾಗಿರುವ ಕವಿ ಅದಕ್ಕೆ ಪೂರಕವಾಗಿರುವಂಥ ಹಲವಾರು ಪಾತ್ರಗಳನ್ನು ಸೃಷ್ಟಿಸಿಕೊಂಡಿದ್ದಾನೆ; ಅರ್ಥಪೂರ್ಣವಾದ ಸಂಕೇತಗಳ ರೂಪದಲ್ಲಿ ಅವುಗಳನ್ನು ಹೊಂದಿಸುತ್ತ ಮುಂದುವರೆದಿದ್ದಾನೆ. ಇದೀಗ ಆ ಪಾತ್ರಗಳನ್ನು ಕುರಿತು ಪ್ರತ್ಯೇಕವಾಗಿ ಗಮನಿಸಲಾಗುವುದು.

[illegible]

[illegible]

(ಅ) ಅಲ್ಲಮಪ್ರಭು

'ಅಲ್ಲಮನ ವ್ಯಕ್ತಿಚಿತ್ರಣದಲ್ಲಿ ಚಾಮರಸ ಬೆಳೆಯುತ್ತಿರುವ ಇಲ್ಲವೆ ಬಿದ್ದು ಎದ್ದ ವ್ಯಕ್ತಿಯನ್ನಲ್ಲ, ಬೆಳೆದ ಮತ್ತು ಸಿದ್ಧನಾದ ವ್ಯಕ್ತಿಯನ್ನು ಚಿತ್ರಿಸುವ ಉದ್ದೇಶವನ್ನಿಟ್ಟುಕೊಂಡಿದ್ದನೆಂಬುದು ಸ್ಪಷ್ಟವಾಗಿದೆ.'[೩] ಗುರು, ಲಿಂಗ, ಜಂಗಮ, ಮಹಾಲಿಂಗ ಇವುಗಳಿಗೆ ಜಂಟಿಯಾಗಿ ಅವನನ್ನು ಸಂಕೇತವಾಗಿಟ್ಟುಕೊಂಡಿರುವ ಕವಿ ಮನುಷ್ಯಸಹಜವಾದ ದೌರ್ಬಲ್ಯಗಳಿಂದ ಅವನು ಇಡಿಯಾಗಿ ಮೇಲೆದ್ದು ಸಿದ್ದನಾಗಿರುವಂತೆ ರೂಪಿಸಿದ್ದಾನೆ. ಯಾವುದೇ ಪ್ರಸಂಗದಲ್ಲಿ ಈ ಮಟ್ಟದಿಂದ ಆತನ ವ್ಯಕ್ತಿತ್ವವು ಕೆಳಗಿಳಿಯುವುದೆಂದರೆ ಕವಿ ತನ್ನ ಆಶಯಕ್ಕೆ ವಿರುದ್ಧವಾಗಿ ವರ್ತಿಸಿದಂತೆ! ಬಿದ್ದ, ಏಳುವ ಹಾಗೂ ಎದ್ದ ವ್ಯಕ್ತಿಗಳ ಚಿತ್ರಣಕ್ಕಾಗಿ ಕವಿಗೆ ಕೃತಿಯಲ್ಲಿ ಸಾಕಷ್ಟು ಅವಕಾಶವಿರುವುದರಿಂದ ಈ ಗುಣಗಳನ್ನು ಅಲ್ಲಮನಿಗೆ ಆರೋಪಿಸದಿರುವುದು ಸಹಜವಾಗಿದೆ. ಈ ವಿಚಾರದ ಹಿನ್ನೆಲೆಯಲ್ಲಿ ಅಲ್ಲಮ ಎದುರಿಸಿದ ವಿವಿಧ ಪ್ರಸಂಗಗಳನ್ನು ವಿಶ್ಲೇಷಿಸಬೇಕು.

ಕವಿ ಕಾವ್ಯದುದ್ದಕ್ಕೂ ಅವನನ್ನು ಗುರು, ಲಿಂಗ, ಜಂಗಮ, ಮಹಾಲಿಂಗ ಇವುಗಳ ರೂಪದಲ್ಲಿಯೇ ಚಿತ್ರಿಸಿದ್ದಾನೆ. 'ಪರಮನು, ಅಂತರ್ಯಾಮಿ, ಕರುಣಾಕರ, ಸದಮಲ, ಸಗುಣನಿರ್ಗುಣಭರಿತ ಅಲ್ಲಮಲಿಂಗ'[೪] ಇದು ಅಲ್ಲಮನ ವಿಷಯದಲ್ಲಿ ಕವಿ ಹೊಂದಿರುವ ಸಾದ್ಯಂತ ದೃಷ್ಟಿ. ಇದನ್ನು ಸ್ಥಿರೀಕರಿಸುತ್ತ 'ಶಿವನ ಸಾತ್ವಿಕ ರೂಪಾದ ಅಲ್ಲಮಪ್ರಭುವಿನ ಸಂಗವನ್ನು ಹೃದಯದಲ್ಲಿ ತೀವ್ರಗೊಳಿಸುವವರಿಗೆ ಅವನ ನಿಜರೂಪು ತಿಳಿಯುತ್ತದೆ' ಎಂದು ಋಷಿಗಳಿಗೆ ದೂರ್ವಾಸಮುನಿ ಹೇಳುತ್ತಾನೆ.[೫] 'ನನ್ನ ಸ್ವರೂಪವು ಸುಜ್ಞಾನಿ-ನಿರಹಂಕಾರರೆಂಬವರ ಮಗನೆನ್ನುವ ರೀತಿಯಲ್ಲಿ ಅಲ್ಲಮನೆಂಬ ಹೆಸರಿನಲ್ಲಿ ತಾನೆ ಸುಳಿಯಿತು' ಎಂದು ಸಾಕ್ಷಾತ್ ಶಿವನೇ ತಿಳಿಸುತ್ತಾನೆ.[೬]

ಶರಣರು ಪಂಚೇಂದ್ರಿಯಗಳಲ್ಲಿ ಜೀವಿಸುವವರಂತೆ ಲೋಕಕ್ಕೆ ತೋರುತ್ತಾರೆ, ಅದು ತೋರಿಕೆ ಮಾತ್ರ. ಆತ್ಮಸ್ವರೂಪಿ ಪ್ರಭು ಅಲ್ಲಿ 'ಸಂಗಿಯಂತಿರೆ ನಟಿಸಿ ನಿಸ್ಸಂಗಿಯಾಗಿರುತ್ತಾನೆ.'[೭] ಮಾಯಾರೂಪದ ಶರೀರದೊಂದಿಗೆ ಆತ್ಮಸ್ವರೂಪಿಯಾಗಿರುವ ಶಿವಯೋಗಿ ವರ್ತಿಸುವುದು ಹೀಗೆಯೇ. ಈ ಅಂಶವನ್ನು ಮಾಯಾಸಂಪುಟದುದ್ದಕ್ಕೂ ಗಮನಿಸಬಹುದು. ಲೌಕಿಕರಂತಲ್ಲದ ಬದುಕು ಶಿವಯೋಗಿಗಳದೆನ್ನುವುದನ್ನು ಅಲ್ಲಮ ಇಲ್ಲಿ ಸಂಕೇತಿಸುತ್ತಾನೆ. ಲೋಕಜೀವಿ ಯಾವುದೇ ಕಾಮನೆಯಿಂದ ಆರಾಧಿಸಿದರೂ ಅದಕ್ಕೆ

[illegible]

[illegible]

[illegible]

ತಕ್ಕಷ್ಟು ಫಲ ಕೊಡುವವನು ಪರಶಿವ. ಅಂತೆಯೇ ಸಕಾಮಪೂಜೆಯ ಮಾಯೆಗೆ ಪ್ರಭು ಕಷ್ಟದಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಮನುಷ್ಯಜೀವಿ ಅದನ್ನು ಪಾರಮಾರ್ಥಿಕತೆಗೆ ಬಳಸಿಕೊಳ್ಳದೆ ಪಂಚೇಂದ್ರಿಯಗಳ ತೃಪ್ತಿಗಾಗಿ ಬಳಸಿಕೊಂಡರೆ ಮಾಯಾದೇವಿಗೆ ಆದ ಗತಿಯೇ ಆ ಜೀವಿಗೆ ಆಗುತ್ತದೆ. ಇದು ಮಾಯಾಸಂಪುಟದಲ್ಲಿ ಪ್ರಭುವಿನ ನಡೆಯ ಮುಖಾಂತರ ಚಾಮರಸ ಕೊಡುವ ಸಂದೇಶ.

ಮಾಯಾರೂಪದ ಪಂಚೇಂದ್ರಿಯಗಳನ್ನು ತಟಸ್ಥಗೊಳಿಸಿ ನಿಷ್ಕಾಮಭಕ್ತಿಯಿಂದ ಯೋಗ ಸಾಧನೆಯಲ್ಲಿ ಮುಂದುವರೆದರೆ ಚಿನ್ಮಯ ಪ್ರಭು ಒಳಗಣ್ಣಿಗೆ ತೋರುತ್ತಾನೆ.ಲ ಇದು ಯೋಗಿಗಳು ಬದುಕುವ ಪರಿ. ಈ ರೂಪದಲ್ಲಿ ಪ್ರಭು ಸಂಚಾರಿಯಾಗುತ್ತಾನೆ. ಅವರವರಿಗೆ ಸಲ್ಲುವಷ್ಟು ಫಲವನ್ನು ಅವರಿಗೆ ಕರುಣಿಸುತ್ತಾನೆ. ಗೊಗ್ಗಯ್ಯನ ಪ್ರಸಂಗದೊಂದಿಗೆ ಪ್ರಾರಂಭವಾಗುವ ಅರಿವಿನ ಸಂಪುಟದುದ್ದಕ್ಕೂ ಪ್ರಭು ಶಿವಧ್ಯಾನದಲ್ಲಿ ಆಯಾ ಸಾಧಕರು ಹೊಂದಿರುವ ತ್ರುಟಿಗಳನ್ನು ಭರತಿ ಮಾಡುತ್ತ ಸಾಗುತ್ತಾನೆ. ಆತ್ಮಜ್ಞಾನದ ವಿಷಯದಲ್ಲಿ ಅಲ್ಪಸ್ವಲ್ಪ ಗೊತ್ತಿದ್ದರೂ ಅದನ್ನು ಪಡೆಯಲಾಗದ ವ್ಯಕ್ತಿಯನ್ನು ಸಂಕೇತಿಸುವ ಮುಕ್ತಾಯಕ್ಕನ ಸ್ಥಿಯಲ್ಲಿರುವವರಿಗೆ ಸದ್ಗುರು ಅವಿರಳವಾದ ಆತ್ಮವಿದ್ಯೆಯನ್ನು ಕರುಣಿಸುತ್ತಾನೆ. ಸಾಧನೆಯಲ್ಲಿದ್ದುಕೊಂಡು ಲೌಕಿಕರ ಮುಂದೆ ಅದನ್ನು ಪ್ರದರ್ಶಿಸುತ್ತ ಅಹಂಭಾವದಿಂದ ಮುಕ್ತಿಗೆ ಎರವಾಗುವವರನ್ನು ಸಂಕೇತಿಸುವ ಸಿದ್ಧರಾಮನಂಥವರ ಅಹಂಕಾರವನ್ನು ಚಿವುಟಿ ಹಾಕಿ ಸನ್ಮಾರ್ಗಕ್ಕೆ ಹಚ್ಚುತ್ತಾನೆ. ಅಂತರಂಗ ಬಹಿರಂಗಗಳನ್ನು ಏಕಮುಖವಾಗಿಸಿ ಶರಣರಾಗಿ ಬದುಕುವವರನ್ನು ಸಂಕೇತಿಸುವ ಮರುಳುಶಂಕರದೇವನಂಥವರ ಸಾಧನೆಯನ್ನು, ಬಹಿರಂಗದಲ್ಲಿ ಆಚರಿಸುವವರನ್ನು ಸಂಕೇತಿಸುವ ಬಸವಣ್ಣನಂಥವರಿಗೆ ತೋರಿಸಿ ಸೂಕ್ಷ್ಮರೂಪದ ಅಹಂಕಾರವನ್ನು ಗುರು ಅಳಿಸಿ ಹಾಕುತ್ತಾನೆ. ದೃಢಮನಸ್ಸಿನಂದ ಮುಕ್ತಿಮಂದಿರದ ಕಡೆಗೆ ಹೆಜ್ಜೆ ಹಾಕುವವರನ್ನು ಸಂಕೇತಿಸುವ ಅಕ್ಕಮಹಾದೇವಿಯಂಥ ಸಾಧಕರನ್ನು ಕೈ ಹಿಡಿದು ಆ ಮಂದಿರದ ಒಳಗೆ ಕರೆದೊಯ್ಯುತ್ತಾನೆ. ಪಂಚೇಂದ್ರಿಯಗಳಿಗೆ ಶರಣಾಗದೆ ಬದುಕುತ್ತಿದ್ದರೂ ಆತ್ಮವಿದ್ಯೆಯಿಂದ ದೂರಾಗುವ ಗೋರಕ್ಷನಂಥವರಿಗೆ ಶಿವಧ್ಯಾನ ಮಾಡುವುದರಲ್ಲಿ ಗಟ್ಟಿಮುಟ್ಟಾದ ಶರೀರದ ಮಹತ್ವವನ್ನು ತಿಳಿಸುತ್ತ ಆ ದಿಕ್ಕಿನಲ್ಲಿ ಅಂಥವರನ್ನು ಪ್ರಭು ಕರೆದೊಯ್ಯುತ್ತಾನೆ. ಗುರಿಯ ಬಗ್ಗೆ ಸ್ಪಷ್ಟ ಕಲ್ಪನೆ ಇರದ ಸಾಧು ಸಜ್ಜನರನ್ನು ಸಂಕೇತಿಸುವ ಋಷಿಗಳಿಗೆ 'ಶಿವಸಾಣೆಯಲಿ ಸಲೆ ತೇದು ಮಿಗೆ ಸುಜ್ಞಾನಕಾಂತಿಯನೆಯ್ದಿಸುವುದನು' ಪ್ರಭು ತಿಳಿಸಿಕೊಡುತ್ತಾನೆ.

ಅಲ್ಲಮ ಸಂಕೇತಿಸುವ ವಿಶ್ವಂಭರನ ರೂಪು ಮೂಡಿ ಬಂದಿರುವುದು ಆರೋಗಣೆಯ ಗತಿಯಲ್ಲಿ. ಜೀವಭಾವವಳಿಯದೆ ಶಿವಭಾವ ಅಳವಡದೆಂಬುದಕ್ಕೆ ಪ್ರತಿಮೆಯಾಗಿ ಮೂಡಿ ಬಂದಿರುವ ಈ ಪ್ರಸಂಗದಲ್ಲಿ 'ಬಯಲ ತನುವಿಡಿದಲ್ಲಮಪ್ರಭು'[೯] 'ಅಂಬರವೆ ಬಾಯ್ದೆರೆದು ಜೀರ್ಣಿಸಿಕೊಂಡಂತೆ'[೧೦] ವರ್ತಿಸುತ್ತಾನೆ.

ಹೀಗೆ ಸದಾಚಾರದ ಕಡೆಗೆ ಮುಖಮಾಡಿದವರೆಲ್ಲರ ಯೋಗಕ್ಷೇಮದ ಜವಾಬ್ದಾರಿ ಹೊತ್ತು, ಅರಿವಿನ ಗರ್ಭಗುಡಿಯ ಬಾಗಿಲನ್ನು ತೆರೆದು ಅವರಿಗೆ ಜ್ಯೋತಿರ್ಲಿಂಗದರ್ಶನ ಮಾಡಿಸುತ್ತಾನೆ ಪ್ರಭು. ಇದು ಚಾಮರಸನ ಒಳಗಣ್ಣಿನಿಂದ ಮೂಡಿ ಬಂದ ಅಲ್ಲಮಪ್ರಭುವಿನ ಚಿತ್ರಣ.

(ಆ) ಮಾಯಾದೇವಿ

ಆಣವ, ಮಾಯಾ ಹಾಗೂ ಕಾರ್ಮಿಕ ಮಲಗಳಿಂದ ಜೀವಾತ್ಮ ಪಡೆದ ರೂಪವನ್ನು ನಿರೂಪ ಮಾಡಿಕೊಳ್ಳುವ ಹೋರಾಟದಲ್ಲಿ ಪಂಚೇಂದ್ರಿಯಗಳ ಜೊತೆಗೆ ಸತತ ಸಂಘರ್ಷ ಮಾಡುತ್ತ ಭವವನ್ನು ನೀಗಿ ಅಭವನಾಗುವವನು ಪರಮಪುರುಷನಲ್ಲಿ ಒಂದಾಗುತ್ತಾನೆ. ಇದುವೇ ಪರಮ ಪುರುಷಾರ್ಥ. ಭವವನ್ನು ಸಂಕೇತಿಸುವ ಮಾಯೆ ಹಾಗೂ ಅಭವನನ್ನು ಸಂಕೇತಿಸುವ ಅಲ್ಲಮ ಇವರ ನಡುವಿನ ಹೋರಾಟದಲ್ಲಿ ವೀರಶೈವಾಚರಣೆಯ ನಿರೂಪಣೆಗೆ ಅನುಗುಣವಾಗಿ ಮಾಯಾದೇವಿಯ ಪಾತ್ರ ಮೂಡಿ ಬಂದಿದೆ. 'ಪ್ರಭುದೇವರ ರಗಳೆ'ಯಲ್ಲಿ ಕಾಮಲತೆ ಒಂದು ವ್ಯಕ್ತಿಯಾಗಿ ಹುಟ್ಟಿ ಬಂದು ಸತ್ತು ಹೋಗುತ್ತಾಳೆ. ಅದು ಹರಿಹರನ ಸೀಮಿತ ದರ್ಶನದಲ್ಲಿ ಮೂಡಿ ಬಂದಿರುವ ಚಿತ್ರಣ 'ಪ್ರಭುಲಿಂಗಲೀಲೆ'ಯಲ್ಲಿ ಮಾಯಾದೇವಿ ಮಾನವ ಕುಲದ ಸಮಗ್ರ ಚಟುವಟಿಕೆಗಳ ಸಂಕೇತವಾಗಿ ಮೂಡಿ ಬಂದವಳು. ಕಾಮನೆ ಮಾತ್ರ ಬಂಧನಕ್ಕೆ ಕಾರಣವಾಗುವುದಿಲ್ಲ, ರೂಪದಿಂದ ಹೊರಡುವ ಕ್ರಿಯೆಗಳೂ ಅದಕ್ಕೆ ಕಾರಣವೆನ್ನುವ ವ್ಯಾಪಕ ಅರ್ಥದಲ್ಲಿ ಚಾಮರಸ ಮಾಯಾದೇವಿಯನ್ನು ಪ್ರಸ್ತುತ ಪಡಿಸಿದ್ದಾನೆ; ಇಂಥ 'ನವರಸಭರಿತ ಪಾತ್ರ'ಯನ್ನು ಚಿತ್ರಿಸಲು ಕಾಮಶಾಸ್ತ್ರ ಹಾಗೂ ನಾಟ್ಯಶಾಸ್ತ್ರ ಎರಡನ್ನೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ಸಫಲನಾಗಿದ್ದಾನೆ.

ಮಾಯಾಸಂಪುಟದುದ್ದಕ್ಕೂ ಕವಿ ಮಾಯೆಯನ್ನು ಪಂಚೇಂದ್ರಿಯಗಳ ತುಡಿತದ ರೂಪದಲ್ಲಿಯೇ ಚಿತ್ರಿಸಿದ್ದಾನೆ. ಭವಬಂಧನದ ಕಟ್ಟುಗಳನ್ನು ಬಿಗಿಗೊಳಿಸುವಲ್ಲಿ ಶೈಶವಾವಸ್ಥೆ ಹಾಗೂ ಬಾಲ್ಯಾವಸ್ಥೆಗಳಿಗಿಂತ

[illegible]

[illegible]

[illegible]

[illegible]

ಕಿಶೋರಾವಸ್ಥೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆಂಬುದಕ್ಕೆ ಅವಳು ಸಾಕ್ಷಿಯಾಗಿ ನಿಲ್ಲುತ್ತಾಳೆ. ಲೋಕಜೀವಿಗಳ ಸಮಸ್ತ ಕಾಮನೆಗಳಿಗೆ ಪ್ರತಿಬಿಂಬವಾಗುವ ಅವಳು ಹಂಸಗಳಿಗೆ ನಡೆಯನ್ನು, ಗಿಳಿಗಳಿಗೆ ನುಡಿಯನ್ನು ಹಾಗೂ ಕೋಗಿಲೆಗೆ ಸ್ವರವಿಡುವುದನ್ನು ಕಲಿಸುವ ಪರಿಣಿತಿಯೊಂದಿಗೆ ಯೌವನವತಿಯಾಗುತ್ತಾಳೆ[೧೧]; ಕುಶಲ ಶಾಸ್ತ್ರಗಳಲ್ಲಿ, ಸಕಲ ವಿದ್ಯೆಗಳಲ್ಲಿ ಪರಿಣಿತಿ ಪಡೆಯುತ್ತಾಳೆ.[೧೨] ಫಲಾಪೇಕ್ಷೆಯಿಂದ ಪೂಜೆಗೆ ತೊಡಗಿ, ಅಲ್ಲಮನನ್ನು ನೋಡುತ್ತಲೇ ಕಾಮನ ಬಲೆಯಲ್ಲಿ ಬಿದ್ದು 'ಭರತವಿದ್ಯಾದ್ಯಖಿಲ ಕಳೆಗಳ ಪರಿಚಯದ ನೆವದಿಂದ' ಅವನನ್ನು ಮಾತನಾಡಿಸುತ್ತಾಳೆ.[೧೩] 'ಉಬ್ಬರದ ಮದನಾಗ್ನಿ ಮೈಯನು ಹಬ್ಬಲು'[೧೪] 'ಲೋಕದೊಳು ನರದಿವಿಜದನುಜರನೇಕರನು ಬಗೆಗೊಂಡು ಲೆಕ್ಕಿಸದಾಕೆ'[೧೫] ಕಾಮೋದ್ರೇಕದಲ್ಲಿ ಅಲ್ಲಮನಿಗೆ ಮನಸೋಲುತ್ತಾಳೆ.

ವಿಚಾರಶಕ್ತಿಯನ್ನು ಸಂಕೇತಿಸುವ ವಿಮಳೆ ಹತ್ತಿರ ಸುಳಿದಾಗ ಮಾಯೆ ಅವಳ ಹೆಸರೇನೆಂದು ಕೇಳುತ್ತಾಳೆ.[೧೬] ಹುಟ್ಟು, ಬದುಕು, ಸಾವುಗಳ ಬಗ್ಗೆ ಯಾವ ತಿಳುವಳಿಕೆಯೂ ಇಲ್ಲದ ಅವಳಿಗೆ ವಿಮಳೆಯಿಂದ ಪೂರ್ವವೃತ್ತಾಂತ ಸ್ಪಷ್ಟವಾಗುತ್ತದೆ. ಪಾರ್ವತಿಯ ಆಣೆಗೆ ಅಂಜಿ, ಕಾಮಜ್ವರದಲ್ಲಿ ಬಳಲಿ. ಅಲ್ಲಮನನ್ನು ಕಾಣುತ್ತಲೇ ಕಂಗೆಟ್ಟು ಕರಗುತ್ತಾಳೆ.[೧೭] ಜಗತ್ತನ್ನೇ ಆಡಿಸುತ್ತಿದ್ದರೂ ಅಲ್ಲಮನ ಮದ್ದಳೆಯ ತಾಳಕ್ಕೆ ಕುಣಿಯುತ್ತಾಳೆ.[೧೮] ಮನ, ಭಾವ, ಬುದ್ಧಿ, ಪಂಚೇಂದ್ರಿಯಗಳಲ್ಲಿ ಯಾವ ಸಾಮರಸ್ಯವೂ ಇಲ್ಲದೆ ಅವಳ ನೋಟವು ಲಿಂಗಭಕ್ತಿ ಮತ್ತು ಅಲ್ಲಮನಲ್ಲಿ ಮೂಡುವ ಕಾಮಾಸಕ್ತಿ ಇವುಗಳಲ್ಲಿ ಕವಲೊಡೆದು ದಾರಿ ತಪ್ಪುತ್ತದೆ.[೧೯] 'ತಾಳಮೇಳದ ಗತಿಯ ಗಮಕದ ಕೀಲಣೆಯ ಕಾಲಾಟ' ವಿಘಟಿಸಿ ತಬ್ಬಿಬ್ಬಾಗುತ್ತಾಳೆ.[೨೦] ವಿಮಳೆಯಿಂದ ಪ್ರತಿಜ್ಞೆಯ ನೆನಪು ಕಾಣಿಸಿಕೊಂಡು ಎಚ್ಚರ ಮೂಡುತ್ತದೆ. ಅಲ್ಲಮನ ಶಕ್ತಿ ತಿಳಿಯುವ ಆಶೆಯಾಗುತ್ತದೆ.[೨೧] ಆದರೇನು ಮಾಡುವುದು, ಈ ಜ್ಞಾನವನ್ನು ಅವಳ ಕಾಮಾಸಕ್ತಿ ಮೀರಿ ನಿಲ್ಲುತ್ತದೆ! ಅವಳ ಭಾವ ಕಲುಷಿತಗೊಂಡು ಶಿವತ್ವವನ್ನು ತಿಳಿಯಬೇಕೆಂಬ ವಿಚಾರದಲ್ಲಿ ಅವನನ್ನೇ ವಶಪಡಿಸಿಕೊಳ್ಳುವ ಭಾವ ಅವಳಲ್ಲಿ ಉಂಟಾಗುತ್ತದೆ.[೨೨]

ವಿಮಳೆಯ ಸೂಚನೆಯಂತೆ ಅಲ್ಲಮನನ್ನು ಹದಿನಾಲ್ಕು ಲೋಕಗಳಲ್ಲಿ ಹುಡುಕುವ ಅವಳು ಕಾಲು ಒಡೆಯುವಂತೆ ನಡೆಯುತ್ತಾಳೆ.[೨೩] ಅಲ್ಲಮನನ್ನು ಕಳ್ಳನೆಂದು ಬಯ್ಯುತ್ತಾಳೆ. ಬ್ರಹ್ಮ, ವಿಷ್ಣು ಮತ್ತಿತರ ದೇವತೆಗಳು ತನ್ನಾಧೀನರೆಂದು ತಿಳಿಸುತ್ತ ಅವನನ್ನು ಗೆದ್ದೇ ತೀರುವುದಾಗಿ ಬಡಾಯಿ ಕೊಚ್ಚುತ್ತಾಳೆ.[೨೪] ವೇದ, ಶಾಸ್ತ್ರ, ಪುರಾಣ, ಆಗಮಗಳ ಶಬ್ದಗಳ ರಾಶಿ ತನ್ನ ಪಾದಗಳ ಬಡಿತದ ಧ್ವನಿ ಎಂದು ತಿಳಿಸುತ್ತ

[illegible]

[illegible]

[illegible]

[illegible]

ಅಲ್ಲಮನ ನಿಯಾಮಕತನ ಇಷ್ಟಕ್ಕೆ ಮಾತ್ರ ಸೀಮಿತವೆಂದು ನುಡಿಯುತ್ತಾಳೆ.[೨೫] ಹರಿಹರ ಬ್ರಹ್ಮಾದಿಗಳನ್ನು ಮಾಯೆ ಆಡಿಸುತ್ತಿದ್ದರೆ ತಾನು ಮಾಯೆಯನ್ನೇ ಆಡಿಸುತ್ತಿರುವುದಾಗಿ ಅಲ್ಲಮ ತಿಳಿಸಿದರೆ ವ್ಯರ್ಥ ಮಾತುಗಳನ್ನು ಬಿಟ್ಟು ತನ್ನ ಮನೋರಥಗಳು ನೆರವೇರುವಂತೆ ಕೃಪೆ ಮಾಡಬೇಕೆಂದು ಅವಳು ಕೇಳುತ್ತಾಳೆ.[೨೬] ಅವನಿಂದ ಸುಖವನ್ನು ಲೂಟಿಮಾಡಿ ಶಿವನಿಂದ ಸೈ ಎನಿಸಿಕೊಳ್ಳಬಯಸುತ್ತಾಳೆ.[೨೭] ಹೆಣ್ಣಾದ ಮಾಯೆಗೆ ಪರಮತತ್ತ್ವಜ್ಞಾನವಿಲ್ಲವೆಂದು ಅಲ್ಲಮ ನುಡಿದರೆ ನಿರ್ದೇಹಿಯಾಗಿದ್ದರೂ ಅವನನ್ನು ಹಿಡಿದುಕೊಳ್ಳುವುದಾಗಿ ಅವಳು ತಿಳಿಸುತ್ತಾಳೆ.[೨೮] ಕೊನೆಯಲ್ಲಿ ವಿಮಳೆಯೊಂದಿಗೆ ಕೈಲಾಸಪರ್ವತಕ್ಕೆ ಹೋಗುತ್ತಾಳೆ.[೨೯]

ಹೀಗೆ ಚಾಮರಸ ಕಾಮನೆಗಳಿಂದ ತುಂಬಿದ ಲೋಕಜೀವಿಗಳನ್ನು ಸಂಕೇತಿಸುವ ಮಾಯೆಯನ್ನು ಚಿತ್ರಿಸುವಲ್ಲಿ ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ವ್ಯಕ್ತಪಡಿಸುವ ಚಟುವಟಿಕೆಗಳನ್ನು ಮಾಯೆಯ ಚಟುವಟಿಕೆಗಳನ್ನಾಗಿಸಿದ್ದಾನೆ. ಈ ದೃಷ್ಟಿಕೋನದಿಂದ ನೋಡಿದರೆ ಅವಳ ಎಲ್ಲ ಚಟುವಟಿಕೆಗಳಿಗೂ ಸ್ಪಷ್ಟವಾದ ಅರ್ಥಮೂಡುತ್ತದೆ.

(೯) ಪ್ರಭು–ಮಾಯೆ–ವಿಮಳೆ–ಅಹಂಕಾರಾಚಾರ್ಯ

ಚಾಮರಸ ತನ್ನ ಕಾವ್ಯದಲ್ಲಿ ಆತ್ಮಸ್ವರೂಪಿಯನ್ನು ಅಲ್ಲಮಪ್ರಭುವಾಗಿ, ದೇಹಿಯ ಉನ್ಮತ್ತ ಮನಸ್ಸನ್ನು ಮಾಯಾದೇವಿಯಾಗಿ, ಸ್ನೇಹಾಕಾಂಕ್ಷಿ ಬುದ್ಧಿಯನ್ನು ವಿಮಳೆಯಾಗಿ ಸಂಕೇತಿಸಿದ್ದಾನೆಂಬುದನ್ನು ನೋಡಿದ್ದೇವೆ. ಈ ಗುಂಪಿಗೆ ಇನ್ನೊಂದನ್ನು ಸೇರಿಸಬಹುದು, ಅದೆಂದರೆ ಅಹಂಕಾರ. ಇದರ ಸಂಕೇತವನ್ನು ಕವಿ ನೇರವಾಗಿಟ್ಟು ಅದಕ್ಕೆ ಆಚಾರ್ಯಪಟ್ಟ ಕಟ್ಟಿದ್ದಾನೆ. ಬೇರಾವ ಹೆಸರನ್ನೂ ಸೂಚಿಸದೆ ಅಹಂಕಾರಾಚಾರ್ಯ ಎಂದೇ ಕರೆದಿದ್ದಾನೆ. ಆತ್ಮನು ಚಿದ್ರೂಪದಲ್ಲಿದ್ದುಕೊಂಡು ಜೀವನ ಆಗುಹೋಗುಗಳಿಗೆ ಕಾರಣನಾಗಿರುತ್ತಾನೆ. ಮನಸ್ಸು ಪಂಚೇಂದ್ರಿಯಗಳನ್ನು ಸಾಧನ ಮಾಡಿಕೊಂಡು ಬದುಕನ್ನು ಸಾಗಿಸುತ್ತಿರುತ್ತದೆ, ಮನಸ್ಸು ದಾರಿ ತಪ್ಪಿದಾಗ ಬುದ್ಧಿ ವಿವೇಕಪೂರ್ಣ ಸಲಹೆಯನ್ನು ಒದಗಿಸುತ್ತದೆ ಹಾಗೂ ಪ್ರಕೃತಿಯ ತಮೋಗುಣದಿಂದ ಹುಟ್ಟಿದ ಅಹಂಕಾರತತ್ತ್ವ ಮಮಕಾರ ಭಾವಕ್ಕೆ ಮೂಲವಾಗುತ್ತದೆ. ಮಾಯಾಸಂಪುಟದುದ್ದಕ್ಕೂ ನಾವು ಕಾಣುವುದು ಇವುಗಳ ನಡುವಿನ ತಾಕಲಾಟವನ್ನು!

[illegible]

[illegible]

[illegible]

[illegible]

ಮನಸ್ಸು, ಅಹಂಕಾರ, ಬುದ್ಧಿ, ಚಿತ್ತು ಇವುಗಳನ್ನು ಕರಣಚತುಷ್ಟಯಗಳು ಎಂದು ಕರೆಯಲಾಗಿದೆ.[೩೦] 'ಭೂತಪಂಚಕ, ವಾಯುಪಂಚಕ, ಇಂದ್ರಿಯದಶಕ, ಕರಣಚತುಷ್ಟಯಗಳು ಎನಿಸುವ ಚತುರ್ವಿಂಶತಿ ತತ್ತ್ವಗಳನ್ನು ಹೊಂದಿರುವಂತಹದು ದೇಹ ಹಾಗೂ ಆತ್ಮನು ಅದರಲ್ಲಿ ಕೂಡಿಕೊಂಡು ಪಂಚವಿಂಶತಿ ತತ್ತ್ವಗಳನ್ನು ಹೊಂದಿರುವ ದೇಹಿಯಾಗುತ್ತಾನೆ'[೩೧] ಚಾಮರಸ ಚಿತ್ರಿಸಿರುವ ಮಾಯಾಸಂಪುಟವು ಈ ನಾಲ್ಕು ಅಂತಃಕರಣಗಳು ಒಂದು ಮತ್ತೊಂದರ ಜೊತೆಗೆ ನಡೆಸುವ ಹೋರಾಟದ ಚಿತ್ರಣವಾಗಿದೆ ಎನ್ನಬಹುದು. ಅಂತೆಯೇ ಕವಿ ಅದನ್ನು 'ಕಾಳಗವು ಕರಣದಲಿ ಸುರತದ ಕೀಲು ಕುಂಡಲಿಯಲ್ಲಿ'[೩೨] ಎಂದು ತಿಳಿಸುತ್ತಾನೆ.

ತಾತ್ತ್ವಿಕ ವಿಚಾರವೊಂದನ್ನು ಕಾವ್ಯರೂಪಕ್ಕಿಳಿಸುವಾಗ ಅದಕ್ಕೆ ಕಲಾತ್ಮಕ ಸ್ಪರ್ಶ ಒದಗಿಸುವಲ್ಲಿ ಕವಿ ತೋರಿಸುವ ಜಾಣ್ಮೆಯಿಂದಾಗಿ ಆ ಕಾವ್ಯ ಹೆಚ್ಚೆಚ್ಚು ಅರ್ಥಪೂರ್ಣವಾಗುತ್ತ ಹೋಗುತ್ತದೆ. ನಾವೀ ಅಂಶವನ್ನು ಮಾಯಾಸಂಪುಟದುದ್ದಕ್ಕೂ ಕಾಣುತ್ತೇವೆ. ಪ್ರತಿ ಹೆಜ್ಜೆಗೂ ಕವಿ ಅದಕ್ಕೆ ಸಾಕ್ಷಿ ಒದಗಿಸುತ್ತಾನೆ. ಮಮಕಾರ ಹಾಗೂ ಮೋಹಗಳ ನಡುವೆ ರೂಪ ತಾಳುವ ತಾಮಸ ಗುಣವು ತಿಳಿದವರಲ್ಲಿಯೂ ಚಿತ್ತ ಪಲ್ಲಟವಾಗುವಂತೆ ಮಾಡುತ್ತದೆ. ಕಾಮಗ್ರಹದ ರೂಪದಲ್ಲಿ ಅವರನ್ನು ಸುತ್ತತೊಡಗುತ್ತದೆ.[೩೩] ಗಂಗಾತೀರದಲ್ಲಿರಲಿ, ಗಿರಿಗಹ್ವರಗಳಲ್ಲಿರಲಿ ಇಲ್ಲವೆ ಜಲಪಂಚಾಂಗ್ನಿ ಮಧ್ಯದೊಳಿರಲಿ ಕಾಮಗ್ರಹದ ಸುತ್ತುವಿಕೆಯಿಂದ ಅವರು ಎದೆಗುಂದುವುದು ಸಹಜ.[೩೪] ರುದ್ರಾಣಿಯು ತನ್ನ ಪ್ರಾಕೃತಿಕ ಅಂಶವನ್ನು ಶರೀರರ ರೂಪದಲ್ಲಿ ಕೊಡುತ್ತಾಳೆ.[೩೫] ಆದರೆ ಶರೀರಸುಖಕ್ಕೇ ಜೋತು ಬೀಳದೆ ಅಲ್ಲಮಪ್ರಭುಸಂಗವನ್ನು ಹೃದಯದಲ್ಲಿಹುರಿಗೊಳಿಸಿ ಆತ್ಮಸ್ವರೂಪಿಗಳಾದರೆ ಅಂಥವರು ಸದಮಳಸ್ವಾತಂತ್ರ್ಯನಿಜವಹರಾಗುತ್ತಾರೆ.[೩೬] ವೀರಶೈವಾಚಾರದಲ್ಲಿ ಸಾಗುತ್ತ ಸದಾಶಿವನಿಗೆ ಶರೀರವನ್ನು ಮೀಸಲಾಗಿರಿಸುವುದು ಬದುಕಿನ ಗುರಿ. ಅಹಂಕಾರಚಾರ್ಯ ಮಮಕಾರ ಮೋಹಿನಿಯರಿಗೆ ಕಾರಣಕನ್ಯೆಯಾದ ಮಾಯೆ ಸದಾಶಿವನಿಗೆ ಸಲ್ಲುವವಳೆಂದು ತಿಳಿಸುವಲ್ಲಿ ಈ ಅರ್ಥ ಧ್ವನಿಸುತ್ತದೆ.[೩೭] ಆದರೇನಂತೆ, ಮಾಯೆ ಮಧುಕನಾಥನನ್ನು ಪೂಜಿಸುತ್ತ ಇನಿಯನನ್ನು ಬಯಸುತ್ತಾಳೆ, ಪಂಚೇಂದ್ರಿಯಗಳಲ್ಲಿ ಸುಖ ಕಾಣಬಯಸುತ್ತಾಳೆ.[೩೮] ಇದು ಜೀವಗುಣ.

ಮಾಯೆ ಮಧುಕನಾಥನನ್ನು ಪೂಜಿಸುವುದು ಪಂಚೇಂದ್ರಿಯಗಳಲ್ಲಿ ಬದುಕುವ ಜೀವಿಯು ಅಂತಃ ಚೈತನ್ಯಕ್ಕೆ ತೋರುವ ಪ್ರತಿಕ್ರಿಯೆಗಳ ಸಂಕೇತ. ಮಾಯೆಯ ಈ ವಯೋಮಾನದವರಲ್ಲಿಯೇ

ಆತ್ಮಚೈತನ್ಯವು ಪಂಚೇಂದ್ರಿಯಗಳ ರೂಪದಲ್ಲಿರುವ ಚರ್ಮಾವರಣವನ್ನು ತಟ್ಟತೊಡಗುತ್ತದೆ. ಪ್ರಭು ಮದ್ದಳೆಯನ್ನು ಬಾರಿಸುವುದು ಈ ತಟ್ಟುವಿಕೆಯ ಸಂಕೇತ. ಅವರವರ ಕರ್ಮಗಳಿಗೆ ತಕ್ಕ ಫಲವನ್ನು ಕೊಡುವ ಶಿವನು ಅಭಿನವ ಕಾಮರೂಪಿನ ಪರಿಯನ್ನು ನಟಿಸುತ್ತಾನೆ.[೩೯] ಇಲ್ಲಿ ಕವಿ ಅಲ್ಲಮನನ್ನು ತಾರುಣ್ಯದ ಹೊಸ್ತಿಲಲ್ಲಿ ನಿಲ್ಲಿಸಿದ್ದಾನೆ. ಚಾಮರಸನ ಕಾಲದ ಕಿಶೋರಿಯರು ತಮ್ಮ ವಯಸ್ಸಿನ ಸಂಗಾತಿಗಳಲ್ಲಿ ಬಯಸುವ ಲಕ್ಷಣಗಳನ್ನು ಅಲ್ಲಮನಲ್ಲಿ ಆರೋಪಿಸುತ್ತ ಅವನನ್ನು ಪ್ರಸ್ತುತಪಡಿಸಿರುವುದು ಇಲ್ಲಿಯ ವಿಶೇಷತೆ. ಪಂಚೇಂದ್ರಿಯಗಳನ್ನು ಸಂಕೇತಿಸುವ ಮಾಯೆಯ ಕೆಳದಿಯರು ಅಲ್ಲಮನನ್ನು ಅರಿತುಕೊಂಡು ಬಂದು ಮಾಯೆಗೆ ತಿಳಿಸಿದಾಗ ಅವಳು ಅವನನ್ನು ತನ್ನ ನಿವಾಸಕ್ಕೆ ಕರೆಯಿಸಿಕೊಳ್ಳುತ್ತಾಳೆ. ಅವನನ್ನು ಕಂಡಕೂಡಲೇ 'ಮೊಳೆತುವಾಕ್ಷಣ ಕಾಮಬಾಣದ ಹಿಳುಕುಗಳು ಹಿರಿದಾಗಿ ಚಿತ್ತಜನಳವಿಯಲಿ ಸಿಲ್ಕಿದಳು' ಎಂದು ತಿಳಿಸುತ್ತಾನೆ ಚಾಮರಸ. ಇದು ಲೋಕಜೀವಿಗಳೆಲ್ಲರೂ ಕಿಶೋರಾವಸ್ಥೆಯನ್ನು ದಾಟುವಾಗಿನ ಅನುಭವ.

ಏರು ಜವ್ವನದಲ್ಲಿ ಪಂಚೇಂದ್ರಿಯಗಳಿಗೆ ವಶವಾಗದೆ ಯೋಗಾಸಕ್ತನಾಗಿ ಲಿಂಗಾಂಗಸಾಮರಸ್ಯವನ್ನು ಸಾಧಿಸಬೇಕು. ಬದಲಾಗಿ ಹಸಿವು. ತೃಷೆ, ಮೈಥುನ ಇವುಗಳ ಧ್ಯಾನದಲ್ಲಿಯೇ ಕುದಿಕುದಿದು ಹೋದವರ ಚಟುವಟಿಕೆಗಳನ್ನು ಮಾಯಾದೇವಿಯಲ್ಲಿ ಕಾಣುತ್ತೇವೆ.[೪೦] ಇಂಥ ಹಗಲುಗನಸುಗಳಲ್ಲಿ ಲೀನವಾದವರು ತಮ್ಮ ಆಂತರ್ಯದಲ್ಲಿ ಅನುಭವಿಸುವುದನ್ನು ಮಾಯೆ ಹಾಗೂ ಅಲ್ಲಮರ ಕೂಡುವಿಕೆ ಸಂಕೇತಿಸುತ್ತದೆ.[೪೧] 'ಉದಕದಲ್ಲಿ ಮುಳುಗಿದ ಸುಣ್ಣಕಲ್ಲಂತಾಗಿ ಕುದಿಯುತ ಬಣ್ಣವಳಿದಳು ಮಾಯೆ'ಎಂದು ಸಕಳೆಯು ಅಲ್ಲಮನಿಗೆ ತಿಳಿಸುವಂತೆ ಇದನ್ನು ಚಾಮರಸ ರೂಪಿಸಿದ್ದಾನೆ.[೪೨] ಇದಕ್ಕೆ ಪ್ರತಿಯಾಗಿ ಶರಣರು ಪಂಚೇಂದ್ರಿಯಗಳ ತುಡಿಯುವಿಕೆಗೆ ತೋರುವ ಪ್ರತಿಕ್ರಿಯೆಗಳನ್ನು ಅಲ್ಲಮ ಮದ್ದಳೆಯನ್ನು ಬಾರಿಸುತ್ತ ಮಾಯೆಯನ್ನು ಕುಣಿಸುವ ರೂಪದಲ್ಲಿ ಸಂಕೇತಿಸಲಾಗಿದೆ.

ತಾಮಸಗುಣವು ತ್ರಿಮಲಗಳ ಸಂಯೋಜನೆಯಲ್ಲಿ ರೂಪು ಪಡೆಯುತ್ತದೆ, ಪಂಚೇಂದ್ರಿಯಗಳನ್ನು ತುಂಬಿಕೊಂಡು ಸ್ಥೂಲಶರೀರವಾಗುತ್ತದೆ, ಅದನ್ನು ಉನ್ಮತ್ತ ಮನಸ್ಸು ಸವಾರಿ ಮಾಡುತ್ತದೆ. ಸ್ನೇಹಾಕಾಂಕ್ಷಿ ಬುದ್ಧಿಗೆ ಈ ಪ್ರಮೇಯವಿಲ್ಲ. ಆಕಸ್ಮಿಕವಾಗಿ ಮಿಂಚಿನಂತೆ ತೋರುವ ಬುದ್ಧಿಯನ್ನು ಸಂಕೇತಿಸುವ ದಿವ್ಯಾಂಗತೇಜದ ವಿಮಳೆ ಭೋಂಕನೆ ಭೂಮಿಗಿಳಿದು ಬಂದು ಮಾಯೆಯ ಮುಂದೆ ನಿಲ್ಲುತ್ತಾಳೆ.

ಪಂಚೇಂದ್ರಿಯಗಳಲ್ಲಿ ಬದುಕುತ್ತ ಆಶೆ–ಆಮಿಷಗಳಿಗಾಗಿಯೇ ದೇವರನ್ನು ಪ್ರಾರ್ಥಿಸುವಲ್ಲಿ ಜೀವಿಯ ಆಯುಷ್ಯದ ಬಹುಭಾಗವು ಕಳೆದು ಹೋಗುತ್ತದೆ. ಆಗ ಆ ಜೀವಿಗೆ ಬಂದ ಮೂಲಕ್ಕೆ ವಾಪಸಾಗಲು ಸೂಚನೆ ಬರುತ್ತದೆ.[೪೩] ಬಹುತೇಕ ಲೋಕಜೀವಿಗಳಲ್ಲಿ ಜನನ–ಮರಣಗಳ ವಿಷಯವಾಗಿ ಚಿಂತನೆ ಮೂಡುವ ಸಾಧ್ಯತೆ ಇದ್ದೇ ಇರುತ್ತದೆ. ಇಂದ್ರಿಯಗಳ ಮೇಲಿನ ಮನಸ್ಸಿನ ಹಿಡಿತ ಸಡಿಲಗೊಳ್ಳತೊಡಗಿದಂತೆ ಸಾರಾಸಾರ ವಿಚಾರ ಮಾಡುವ ಶಕ್ತಿ ಮನಸ್ಸನ್ನು ಮೀರಿ ನಿಲ್ಲತೊಡಗುತ್ತದೆ. ಮನಸ್ಸು ಇಂಥ ಸ್ನೇಹಾಕಾಂಕ್ಷಿ ಬುದ್ಧಿಗೆ ಒಳಗಾದರೆ ಸೃಷ್ಟಿ– ಸ್ಥಿತಿ ಲಯಗಳ ರೂಪದ ಜನನ–ಬದುಕು–ಮರಣ ಇವುಗಳ ವಿಷಯದಲ್ಲಿ ತಿಳುವಳಿಕೆ ಮೂಡಬಹುದು. ಆಗ ಜಗನ್ನಿಯಾಮಕನ ಸಾನ್ನಿಧ್ಯ ಸ್ಪಷ್ಟವಾಗಬಹುದು. ಬದುಕಿನ ಈ ಅವಧಿಯುದ್ದಕ್ಕೂ ನಡೆಯುವ ಮನಸ್ಸು, ಬುದ್ಧಿ ಹಾಗೂ ಆತ್ಮಚೈತನ್ಯ ಇವುಗಳ ನಡುವಿನ ತಾಕಲಾಟವೇ ಚಾಮರಸ ಚಿತ್ರಿಸಿರುವ ಮಾಯದೇವಿ, ವಿಮಳೆ ಹಾಗೂ ಅಲ್ಲಮ ಇವರ ನಡುವಿನ ಸಂಘಟ್ಟನೆ.

ವಿಮಳೆಯ ಆಗಮನದೊಂದಿಗೆ ಮಾಯೆಯಲ್ಲಿ ತನ್ನ ಜನನದ ವಿಷಯವಾಗಿ ಕುತೂಹಲ ಉಂಟಾಗುತ್ತದೆ.[೪೪] ಮಾಯಾರೂಪದ ಶರೀರಕ್ಕೆ ಅಂತ್ಯವೆಂಬುದೊಂದಿದೆ.[೪೫] ಇದರ ರಹಸ್ಯವನ್ನು ತಿಳಿಸುವಂತೆ ಮಾಯೆ ವಿಮಳೆ ಯನ್ನು ಕೇಳುತ್ತಾಳೆ.[೪೬] ಲೋಕಜೀವಿಯ ಸ್ವಭಾವ ಇಂಥ ಮೃದುತ್ವವನ್ನು ಪಡೆಯುವ ಪ್ರಸಂಗದಲ್ಲಿಯೇ ಸದಾಚಾರದಿಂದ ಬದುಕುವವರ ನಡತೆ ಆ ಜೀವಿಯ ಮೇಲೆ ಪರಿಣಾಮ ತೋರುತ್ತದೆ, ಅನುಸಂಧಾನದಿಂದ ಕೂಡಿದ ಯೋಗದ ಅಭ್ಯಾಸವೇ ಸುಖವೆಂದು ಸ್ಪಷ್ಟವಾಗುತ್ತದೆ.[೪೭] ಇದನ್ನು ವಿಮಳೆ ಅಲ್ಲಮನ ವೃತ್ತಾಂತವನ್ನು ಮಾಯೆಯ ಮುಂದೆ ನಿರೂಪಿಸುವುದರ ರೂಪದಲ್ಲಿ ಕವಿ ಹೆಣೆದಿದ್ದಾನೆ. ವಿಮಳೆಯ ಹೇಳಿಕೆಯುದ್ದಕ್ಕೂ ನಾವು ಕಾಣುವುದು ಸಚ್ಚಿದಾನಂದ ಶಿವಯೋಗಿಯ ಇರುವಿಕೆ ಮತ್ತು ಅವನು ದೀಕ್ಷಾರ್ಥಿಯಲ್ಲಿ ಉಂಟು ಮಾಡುವ ದರ್ಶನ. ಆ ಶಿವಯೋಗಿ ಪರಶಿವನ ಪ್ರತಿರೂಪ.[೪೮] ಪ್ರಕೃತಿಯನ್ನೇ ತನ್ನಾಧೀನದಲ್ಲಿಟ್ಟುಕೊಂಡಿರುವ ಅವನು ಎಲ್ಲದರಲ್ಲಿಯೂ ಪ್ರಕ್ರಿಯಾತ್ಮಕವಾಗಿ ಬೆರೆತಿದ್ದರೂ ತನ್ನ ಮೂಲದಲ್ಲಿ ಪ್ರತ್ಯೇಕವಾಗಿಯೇ ಇರುತ್ತಾನೆ. ಅಂತೆಯೇ ಅವನು ಅಸ್ತಿತ್ವದಲ್ಲಿದ್ದೂ ಇಲ್ಲದಂತಿರುತ್ತಾನೆ.

ಬಲ್ಲೊಡೀ ಶಿಶುವೇತಱೊಳಗಿಹ

ನಲ್ಲ ಹೊರಗಹನಲ್ಲ ಭಾವಿಸ

[illegible]

[illegible]

[illegible]

ಲಿಲ್ಲದಿರುತಿಹನಲ್ಲವೆನುತಾ ತಂದೆ ತಾಯಿಗಳು ।
ಎಲ್ಲ ಜಾಡ್ಯದ ಜಂಜಡಂಗಳ
ನಲ್ಲವೆನಿಸುವ ಬಾಲಕಗೆ ಬಳಿ
ಕಲ್ಲಮಪ್ರಭುವೆಂದು ಹೆಸರನು ಕೊಟ್ಟಿರರ್ತಿಯಲಿ ॥ [೪೯]

ಪೂರ್ಣನೇ ಆಗಿರುವ ಅವನ ಜ್ಞಾನಕ್ಕೆ ಮಿತಿ ಇರುವುದು ಸಾಧ್ಯವಿಲ್ಲ.[೫೦] ಅವನು ಭವವನ್ನು ಚೆಂಡಿನ ರೂಪದಲ್ಲಿ ಆಡುತ್ತಿರುತ್ತಾನೆ.[೫೧] 'ದ್ಯುಮಣಿಶಿಖಿಶಶಿಕೋಟಿ ತೇಜೋಮೂರ್ತಿಮಯ'ನಾದ ಅವನು ವಿಮಲಮುನಿಗಳ ವರಸಮಾಧಿಗೆ ಸಮಯವಿಲ್ಲದೆ ನಿಲುಕುತ್ತಾನೆ.[೫೨] ಸ್ವಯಂಭೂ ಆಗಿರುವ ಅವನು ತನಗೆ ತಾನೇ ಗುರು, ಅಂತೆಯೇ ಅವನು ತಂದೆತಾಯಿಗಳಿಗೇ ಮಾರ್ಗದರ್ಶಿಯಾಗುತ್ತಾನೆ.[೫೩] ಹೀಗೆ ಸಚ್ಚಿದಾನಂದ ನಿತ್ಯ ಪರಿಪೂರ್ಣ ಪರಶಿವನ ಸಂಕೇತವಾಗಿ ಅಲ್ಲಮ ನಿರೂಪಿಸಲ್ಪಟ್ಟಿದ್ದಾನೆ.[೫೪] ಇಂಥ ಅಲ್ಲಮ ಮಾಯೆಯನ್ನು ಸ್ವೀಕರಿಸಬೇಕಾದರೆ ಅವಳು ವಿಮಳೆಯ ಅಧೀನಕ್ಕೆ ಒಳಪಡಬೇಕು. ಇದಕ್ಕೆ ಬದಲಾಗಿ ಮನಸ್ಸು ಬುದ್ಧಿಯನ್ನು ಅನುಸರಿಸದಿದ್ದರೆ ಆತ್ಮಸ್ವರೂಪಿ ಪ್ರಭು ಮಾಯಾರೂಪದ ಶರೀರವನ್ನು ತಿರಸ್ಕರಿಸಿ ಹೊರಟು ಹೋಗಬೇಕಾಗುತ್ತದೆ.

ವಿಭೂತಿ ಪೂಸಿ, ಬಿಲ್ವವನೇರಿಸಿ, ಕಾಯಿ ಒಡೆದು ನೈವೇಧ್ಯ ತೋರಿಸಿಯಾದ ಮೇಲೆ ಲಿಂಗದೇವನಿಂದ ಹೊರಲಾಗದಷ್ಟು ಹೊನ್ನ ಬಯಸುವ ಲೋಕಜೀವಿಯಂತೆ ಮಾಯೆ ಮಾತನಾಡುತ್ತಾಳೆ. ಅಲ್ಲಮನನ್ನು ಒಲಿಸುವ ಕುರಿತು ವಿಮಳೆಯ ವಿವರಣೆಯನ್ನು ಆಲಿಸಿದ ನಂತರ ಅಲ್ಲಮ ಅವಳ ಇಷ್ಟಾರ್ಥವನ್ನು ಸಲ್ಲಿಸಲು ಗೋಚರಿಸುತ್ತಾನೆಯೋ ಹೇಗೆಂದು ಕೇಳುತ್ತಾಳೆ.[೫೫] ತಾಮಸಭಕ್ತಿಗೆ ಒಲಿಯದ ಪ್ರಭು ಸಾತ್ವಿಕ ಭಕ್ತಿಗೆ ಒಲಿಯುತ್ತಾನೆಂದು ವಿಮಳೆ ತಿಳಿಸುತ್ತಾಳೆ.[೫೬] ಶ್ರೀ ಗುರುವಿನುಪದೇಶವಿಲ್ಲದೆ ಎಲ್ಲವೂ ನಿಷ್ಫಲವೆಂದು ಅವಳು ಅರ್ಥಗರ್ಭಿತವಾಗಿ ನುಡಿಯುತ್ತಾಳೆ.[೫೭] ಕಾಟಾಚಾರದ ಡಾಂಭಿಕ ಭಕ್ತಿ 'ಕೊಬ್ಬಿ ಕೋಮಲವಾದ ನಿಗುರಿದ ನಿಬ್ಬರದ ನಿಡುಗಣ್ಣುಗಳ ಕಾಗಬ್ಬನರಿಯದೆ ಕಬ್ಬಿನಿಚ್ಛೆಗೆ ಮೆಲುವ ಮರುಳಂತೆ'ಎಂದು ಹೇಳುತ್ತಾಳೆ.[೫೮] ಮುಂದುವರೆಯುತ್ತ ಹರಗಿ ಹಸನಾದ ಭೂಮಿಯಲ್ಲಿ ಬೆದೆಗೆ ಹೊಂದದ ಹುಳುಕು ಹುಳುಕರಿಯಾದ ಬೀಜ ಬಿತ್ತಿ ಯಾವ ಬೆಳೆಯನ್ನೂ ಪಡೆಯದವನ ಪ್ರಾಪ್ತಿಯಂತೆ ಮೀಸಲುಗೆಟ್ಟ ಸಾಧನಗಳಲ್ಲಿ ಮಾಯೆ ಮಾಡುವ ಪೂಜೆ ನಿಷ್ಫಲವೆನ್ನುತ್ತಾಳೆ.[೫೯] ಶಿವನ ಒಲುಮೆಗೆ ಪಂಚೇಂದ್ರಿಯಗಳು ಹಾಗೂ ಕರಣಾದಿಗಳು ಶುದ್ಧವಾಗಿರಬೇಕೆಂಬುದು ಧ್ವನ್ಯಾರ್ಥ.

ವಿಷಯಸ್ಥಾನಗಳನ್ನಪ್ಪಿದ ಬಾಹ್ಯಪೂಜೆ ನಿಷ್ಫಲವೆಂದು ತಿಳಿಸುತ್ತ ಹರನ ಭಕ್ತಿ ನಿಷ್ಫಲವೆಂದು ನುಡಿಯುವುದು ಮರುಳುತನವೆಂದು ಹೇಳುತ್ತಾಳೆ.[೬೦] ವಿಮಳೆ ಮಾಯೆಯ ನೋವಿಗೆ ಕಾರಣವನ್ನು ತಿಳಿಸಬೇಕೆಂದು ಆವಳಿಗೆ ಪಾರ್ವತಿಯ ಆಣೆ ಇಡುತ್ತಾಳೆ.[೬೧] ಪಾರ್ವತಿಯ ಆಜ್ಞೆಗನುಗುಣವಾಗಿ ಬಂದಿದ್ದ ಮಾಯೆ ಆಣೆಗೆ ತಾನು ಅಂಜುವುದಾಗಿ ತಿಳಿಸುತ್ತಾಳೆ ಹಾಗೂ ಅಲ್ಲಮನನ್ನು ಕಾಣುತ್ತಲೇ ದಶಾವಸ್ಥೆಯಲ್ಲಿ ನೊಂದುದಾಗಿಯೂ ಹೇಳುತ್ತಾಳೆ.

> **ಆಣೆಗಂಜುವೆನವ್ವ ಕಾಮನ**
> **ಬಾಣದಲಿ ಭಯಬಟ್ಟು ಬಳಿಕಾ**
> **ಪ್ರಾಣಪರಿಯಂತರ ದಶಾವಸ್ಥೆಯಲಿ ನೆಱೆನೊಂದು ।**
> **ಮಾಣದುತ್ತಮವಾದ್ಯವಿದ್ಯಾ**
> **ಜಾಣನಲ್ಲಮನೆಂಬ ಚಲುವನ**
> **ಕಾಣುತವೆ ಕಂಗೆಟ್ಟು ಕರಗಿದೆನೆಂದಳಾ ಮಾಯೆ ॥** [೬೨]

ಲೋಕಜೀವಿಗಳಲ್ಲಿ ಇಂಥ ಗುಣಗಳಿರುವುದು ಸಹಜ. ಹೀಗಾಗಿ ಇಂಥ ಅವಸ್ಥೆಯವರಿಗೆ ಯೋಗವೆಂದಿಗೂ ಸಿದ್ಧಿಸುವುದಿಲ್ಲ. ಅಂತೆಯೇ 'ವಿಷಯದ ವಿಕಳತನವನು ಬಿಟ್ಟು ಸಲೆ ಸಾತ್ವಿಕದ ಬುದ್ಧಿಯಲೀಕ್ಷಿಸು' ಎಂದು ವಿಮಳೆ ಮಾಯೆಗೆ ನುಡಿಯುತ್ತಾಳೆ.[೬೩] ಈಗ ಮಾಯೆ ವಿಮಳೆಯೊಂದಿಗೆ ದೇವಾರ್ಚನೆಗೆ ದೇವಾಲಯಕ್ಕೆ ಹೋದಳೆಂದು ಚಾಮರಸ ತಿಳಿಸುತ್ತಾನೆ.[೬೪] ಅಂದರೆ ಮನಸ್ಸು ಬುದ್ಧಿಯೊಂದಿಗೆ ಸಹಕರಿಸುವ ಪ್ರಯತ್ನ ಮಾಡಿತು. ಆದರೇನು ಮಾಡುವುದು? ಸಂಕಲ್ಪ–ವಿಕಲ್ಪಗಳಿಂದ ಕೂಡಿದ ಸಾಧಕನ ಧ್ಯಾನ ನಿಷ್ಫಲವಾಗುವಂತೆಯೇ ಕಾಮನ ದಾಳಿಯಲ್ಲಿ ಮಾಯೆಯ ಬದುಕಿನ ತಾಳ ತಪ್ಪುತ್ತದೆ.[೬೫] ಇದು ಅಸ್ಥಿರ ಮನಸ್ಸಿನ ಪರಿಣಾಮಕಾರಿಯಾದ ಚಿತ್ರಣ. ಅಲ್ಲಿಗೆ ಬಂದ ಅಲ್ಲಮನನ್ನು ವಿಮಳೆ ಅನಿಮಿಷತೆಯಿಂದ ನೋಡಿದಳೆಂದು ಕವಿ ತಿಳಿಸುತ್ತಾನೆ.[೬೬] ಬುದ್ಧಿವಂತರಾದವರು ಶಿವಧ್ಯಾನಕ್ಕೆ ಒಲಿಯುತ್ತಾರೆನ್ನುವುದು ಇಲ್ಲಿಯ ಧ್ವನ್ಯಾರ್ಥ. ಪಂಚೇಂದ್ರಿಯಗಳ ಮುಖಾಂತರವೇ ಪರಮಸುಖ ಸಾಧಿಸುತ್ತೇನೆನ್ನುವವರಂತೆ ಮಾಯೆ ಸಂಚಿನಿಂದ ಅಲ್ಲಮನತ್ತ ಕೈ ಚಾಚುತ್ತಾಳೆ.[೬೭]

ತಾಮಸಗುಣದ ಮಾಯೆಯಲ್ಲಿ ಸಾತ್ವಿಕಾಂಶ ಜಾಗೃತವಾಗುವುದು ಸಾಧ್ಯವಿಲ್ಲ. ಇದನ್ನು ಮಾಯೆಯ ಚಟುವಟಿಕೆಗಳಿಂದ ಅರಿತು 'ನಟ್ಟುವಿಗತನವನು ನೂಕುತಲಿ ಮದ್ದಳೆಯ ತಾನೊಡಹಾಕಿ

ನಗುತಲಿ ಹೋದನಲ್ಲಮನಖಿಳ ಜಗವಜಿಮೆ' ಎಂದು ತಿಳಿಸುತ್ತಾನೆ ಚಾಮರಸ. ನಟ್ಟುವಿಗತನವನ್ನು ನೂಕುವುದು ಹಾಗೂ ಮದ್ದಳೆ ಒಡೆಯುವುದು ಜೊತೆಜೊತೆಯಾಗಿಯೇ ನಡೆಯುತ್ತವೆ. ಚಿದಾತ್ಮರೂಪದ ಪರಶಿವ ಶರೀರವನ್ನು ಸಾಧನ ಮಾಡಿಕೊಂಡು ಜೀವಿಯಾಗುತ್ತಾನೆ. ಪ್ರತಿಯೊಬ್ಬನೂ ಪಡೆಯುವ ರೂಪು ಪರಶಿವನದೇ. ವ್ಯಕ್ತಿವ್ಯಕ್ತಿಗಳಲ್ಲಿ ವ್ಯತ್ಯಾಸ ತೋರುವುದು ಮುಖದಲ್ಲಿಯೇ. ಅವನ ಅಸ್ತಿತ್ವ ಹಾಗೂ ಪರಿಚಯ ಇವುಗಳಿಗೆ ಕಾರಣವಾಗುವ ಈ 'ನಟ್ಟುವಿಗತನ' ನೂಕಲ್ಪಡುವುದು ಸ್ಥೂಲಶರೀರವು ಇಲ್ಲವಾಗುವುದರೊಂದಿಗೆ. ಅಲ್ಲಮ ಮದ್ದಳೆಯನ್ನು ಒಡೆದು ಹಾಕಿ ಹೋದನೆಂದು ತಿಳಿಸುವಲ್ಲಿ ಈ ಅರ್ಥ ಮೂಡಿ ಬರುತ್ತದೆ. ಮಾಯೆಗೆ ಇದು ಕಡೆಯಾಟ. ಈ ಕಡೆಯಾಟದ ನಂತರ ಅವಳು ಮೂರ್ಛೆ ಹೋಗುತ್ತಾಳೆಂದೂ ಬಾಯಿಬಿಟ್ಟು ಪ್ರಲಾಪಿಸುತ್ತ ದುಃಖಿಸುತ್ತಾಳೆಂದೂ ತಿಳಿಸುತ್ತಾನೆ ಚಾಮರಸ.[೬೮] ಮದ್ದಳೆ ಒಡೆದಿದೆ ಎಂದು ಹೇಳುವಲ್ಲಿ ಸ್ಥೂಲಶರೀರವು ಸ್ಥಗಿತವಾಗಿದೆ. ಪ್ರಲಾಪ ಇನ್ನೂ ಮುಂದುವರೆದಿದೆ ಎಂದರೆ ಚಟುವಟಿಕೆಗಳು ಸೂಕ್ಷ್ಮಶರೀರಕ್ಕೆ ವರ್ಗಾವಣೆಯಾಗಿವೆ ಎಂಬುದನ್ನು ಸೂಚಿಸುವಂತಿದೆ. ಸೂಕ್ಷ್ಮಶರೀರ ಹದಿನಾಲ್ಕು ಲೋಕಗಳಲ್ಲಿ ಸುಳಿಯುವ ಸಾಧ್ಯತೆ ಇರುತ್ತದೆ. ಈ ರೂಪದ ಮಾಯೆಯನ್ನು ಜೊತೆಯಾಗಿಸಿಕೊಂಡು ಬುದ್ಧಿಯನ್ನು ಸಂಕೇತಿಸುವ ವಿಮಳೆ ಹದಿನಾಲ್ಕು ಲೋಕಗಳಲ್ಲಿ ಅಲ್ಲಮನನ್ನು ಅರಸುತ್ತಾಳೆ. ಸೂಕ್ಷ್ಮಕ್ಕೆ ಇನ್ನೂ ಕಾಲದ ವ್ಯಾಪ್ತಿ ಇರುತ್ತದೆ. ಅಲ್ಲಿಯೂ ಇಂದ್ರಿಯಗಳ ಜೊತೆ ತಪ್ಪುವುದಿಲ್ಲ ಎಂಬುದನ್ನು 'ಕಾಲು ನಡೆಯಲಿ ಮಾಯೆ ನಡೆದಳು ಕೆಳದಿಯರು ಸಹಿತ' ಎಂದು ಹೇಳುವ ಮೂಲಕ ಕವಿ ಸೂಚಿಸುತ್ತಾನೆ.[೬೯] ಆಸೆ ಜೀವಿಯನ್ನು ಹದಿನಾಲ್ಕು ಲೋಕಗಳಲ್ಲಿ ಸುಳಿಯುವ ಸೂಕ್ಷ್ಮಶರೀರಕ್ಕೆ ತೆಗೆದುಕೊಂಡು ಹೋಗುತ್ತದೆ. ತಮಗೆ ಸಹಕಾರಿಯಾಗದ ದೈವವನ್ನು ಲೋಕಜೀವಿಗಳು ಶಪಿಸುವ ತೆರದಲ್ಲಿ ಮಾಯೆ ಅಲ್ಲಮನನ್ನು ಕುಟಿಲ, ಕುತ್ಸಿತ, ಕುಮಂತ್ರದವನೆಂದು ಬಯ್ಯುತ್ತಾಳೆ.[೭೦] ತಾನು ಹರಿಹರಬ್ರಹ್ಮಾದಿಗಳನ್ನು ತನ್ನಾಧೀನವಿರಿಸಿಕೊಂಡಿರುವುದಾಗಿ ಅವಳು ತಿಳಿಸಿದರೆ 'ಬಲ್ಲೆಯಾದೊಡೆ ನೀನು ನಿನ್ನಯ ಖುಲ್ಲತನವನು ಬಿಟ್ಟು ನಿರ್ಮಳದಲ್ಲಿ ಮಾತಾಡು' ಎಂದು ಅಲ್ಲಮ ನುಡಿಯುತ್ತಾನೆ.[೭೧] ತನಗೆ ತಿಳಿದ ವಿಧಾನದಲ್ಲಿ ಪೂಜೆಮಾಡಿದುದಾಗಿ ಅವಳು ತಿಳಿಸುತ್ತಾಳೆ.[೭೨] ಹೀಗೆ ಮಾಡಿ ಪಂಚೇಂದ್ರಿಯಗಳ ಮುಖಾಂತರ ಸುಖವನ್ನು ಸುರಿದುಕೊಳ್ಳಬಯಸುತ್ತಾಳೆ.[೭೩] ಆದರೆ ಪಂಚೇಂದ್ರಿಯಗಳನ್ನು ಸವಾರಿ ಮಾಡುವ ಮನವನ್ನು ಲಯಗೊಳಿಸುವುದರಿಂದ ಹೀಗೆ ಮಾಡುವುದು ಸಾಧ್ಯ. ಈ ಪ್ರಸಂಗದಲ್ಲಿ ಮಾಯೆ 'ಮರುಗುತ್ತ, ಹಮ್ಮವಿಸಿ ಒರಗುತ್ತ' ವಿಮಳೆಯನ್ನು ಆಶ್ರಯಿಸುತ್ತಾಳೆ.[೭೪] ಆಗ ವಿಮಳೆ ಅವಳ ಪರವಾಗಿ

ಅಲ್ಲಮನನ್ನು ಬೇಡಿಕೊಳ್ಳುತ್ತಾಳೆ. ಲೋಕಜೀವಿಗಳು ಬುದ್ಧಿಯನ್ನು ಲೌಕಿಕ ಬದುಕಿನ ಅನುಕೂಲಕ್ಕಾಗಿ ಬಳಸಿಕೊಳ್ಳುವುದು ಹೀಗೆಯೇ!

ಹಾಲಿಗೆ ಹೆಪ್ಪು ಹಾಕಿದರೆ ಮೊಸರಾಗುತ್ತದೆ. ಅದರಿಂದ ಮಜ್ಜಿಗೆ, ಬೆಣ್ಣೆ, ತುಪ್ಪ ಮಾಡಬಹುದು. ನೀರಿಗೆ ಹೆಪ್ಪು ಹಾಕಿ ಈ ಕ್ರಿಯೆಯ ಫಲವನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಕರಣಾದಿಗಳಿಗೆ ಹೆಪ್ಪು ಹಾಕಿ ಮನವನ್ನು ತಟಸ್ಥಗೊಳಿಸಿದರೆ ಲಿಂಗಾಂಗಸಾಮರಸ್ಯದ ತುಪ್ಪಕ್ಕೆ ದಾರಿಯಾಗುತ್ತದೆ. ಇದಕ್ಕೆ ಬದಲಾಗಿ ಆ ಮನಸ್ಸನ್ನು ಪಂಚೇಂದ್ರಿಯಗಳಲ್ಲಿ ಹರಿಬಿಟ್ಟರೆ ಹೆಪ್ಪು ಆಗುವುದು ಸಾಧ್ಯವಿಲ್ಲ. ಮಾಯೆ ನೀರಿದ್ದಂತೆಂದು ಅಲ್ಲಮ ವಿಮಳೆಗೆ ತಿಳಿಸುತ್ತಾನೆ.[೭೫]

ಶಿವಯೋಗದ ದೀಕ್ಷೆ ಕೊಡುವ ಗುರುವನ್ನು ಪರುಷಮಣಿಗೆ ಹೋಲಿಸುತ್ತಾರೆ. ಪರುಷಮಣಿ ಮುಟ್ಟಿದ ಕಬ್ಬಿಣ ಹೊನ್ನಾಗುವಂತೆ ಗುರುವಿನಿಂದ ದೀಕ್ಷಿತನಾದ ಶಿಷ್ಯ ಶಿವರೂಪಿಯಾಗುತ್ತಾನೆ ಎಂಬುದು ಇದರ ತಾತ್ಪರ್ಯ. 'ಶರಣ ಸತಿ ಲಿಂಗಪತಿ' ಭಾವದಂತೆ ಲಿಂಗಪತಿಯಾಗಿರುವ ಅಲ್ಲಮ ಮಾಯೆಯನ್ನು ಕೀಳು ಕಬ್ಬಿಣವೆಂದು ಕಾಲಿನಿಂದ ಒದೆದರೂ ಅಷ್ಟೇ, ತೋಳುಗಳಿಂದ ಅಪ್ಪಿದರೂ ಅಷ್ಟೇ. ಸ್ಪರ್ಶಮಾತ್ರದಿಂದ ಅವಳು ಪಾವನಳಾಗುತ್ತಾಳೆಂದು ವಿಮಳೆ ಅಲ್ಲಮನಿಗೆ ತಿಳಿಸುತ್ತಾಳೆ.

ಕೀಳುಗಬ್ಬುನವೆಣ್ಣ ಕೋಪಿಸಿ
ಕಾಲಲೊದೆದೊಡೆ ಮೇಣು ಕರುಣಿಸಿ
ತೋಳಲಪ್ಪಿದೊಡೇನು ಪರುಷದ ಗಂಡನದಱಿಂತೆ ।
ಬಾಲೆಗೆಂತಾದೊಡೆಯು ನಿನ್ನ ಸ
ಮೇಳ ಘಟಿಸಿದ ಬಳಿಕ ಮಾಯೆಯ
ಪಾಲಿಸಲು ಬೇಕೆನುತ ನುಡಿದಳು ವಿಮಳೆಯಲ್ಲಮಗೆ ॥ [೭೬]

ಅವನು ವಿಮಳೆಯನ್ನು 'ವನಿತೆ' ಅಂದರೆ ಶರಣಸತಿಯಾಗಲು ಅರ್ಹಳು' ಎಂದು ಸಂಬೋಧಿಸುತ್ತಾನೆ. ಪರುಷಮಣಿ-ಕಬ್ಬಿಣ ಇವುಗಳ ವಿಷಯದಲ್ಲಿ ಅವಳ ಮಾತು ಸರಿಯೆಂದು ಅಲ್ಲಮ ಒಪ್ಪಿಕೊಳ್ಳುತ್ತಾನೆ. ಆದರೆ ಮಾಯೆ ಲೋಹವೇ ಅಲ್ಲದ ಹಳೆಯ ಹಂಚೆಂದು ತಿಳಿಸುತ್ತ ಮಾಯೆಯಂಥವರು ವೀರಶೈವಾಚರಣೆಗೆ ಎಳ್ಳಷ್ಟೂ ಅರ್ಹರಲ್ಲವೆನ್ನುವಂತೆ ಅವಳನ್ನು ತಿರಸ್ಕರಿಸುತ್ತಾನೆ.[೭೭] ಆಗ ವಿಮಳೆ ಅಲ್ಲಮನನ್ನು ಪ್ರಾರ್ಥಿಸುತ್ತ ಮಾಯೆಯನ್ನು ಕರುಣೆಯಿಂದ ಕಾಯಬೇಕೆಂದು ಕೇಳುತ್ತಾಳೆ. ಅದಕ್ಕೆ ಅವನು

[illegible]

[illegible]

[illegible]

[illegible]

[illegible]

ತಾಮಸಗುಣವನ್ನು ಬಿತ್ತಿ ಸಾತ್ವಿಕ ಗುಣವನ್ನು ಬೆಳೆಯುವುದು ಸಾಧ್ಯವಿಲ್ಲವೆಂದು ತಿಳಿಸುತ್ತ 'ಒಂದು ಬೀಜವ ಬಿತ್ತಿ ಮೇಲ್ ಮತ್ತೊಂದು ಫಲವನು ಬಯಸಿ ಬಾತೊಡೆ ಬಂದುದಹುದೇ?' ಎಂದು ಕೇಳುತ್ತಾನೆ. ಆದರೂ ಅಲ್ಲಮ ತನಗೆ ಕರುಣೆ ತೋರಿ ರಕ್ಷಿಸಿದಂತೆ ಮಾಯೆಯನ್ನೂ ರಕ್ಷಿಸಬೇಕೆಂದು ಪ್ರಾರ್ಥಿಸುತ್ತಾಳೆ.[೭೮] ತಾಮಸಗುಣದ ಪಿಂಡಕ್ಕೆ ಅಂತಿಮ ಸತ್ಯ 'ಪುನರಪಿ ಜನನಂ ಪುನರಪಿ ಮರಣಂ' ರೂಪದಲ್ಲಿ ಮಾತ್ರ. ಅದಕ್ಕೂ ಚಿದಾತ್ಮನಿಗೂ ಸಂಬಂಧವೇರ್ಪಡುವುದು ಸಾಧ್ಯವಿಲ್ಲವೆಂದು ಅವನು ತಿಳಿಸುತ್ತಾನೆ.[೭೯] ಈ ಅಂತಿಮ ಸತ್ಯವನ್ನೇ ಆಶ್ರಯಿಸುತ್ತಿರುವಂತೆ ಮಾಯೆ ಕನಸುಮನಸಿನಲ್ಲಿ, ತನುವಿನಲ್ಲಿ ಸುಳಿದು ಆಯಾಸಗೊಳಿಸಿದರೆ ಸಾವು ಬಂದರೂ ಅವನನ್ನು ಬಿಡುವುದಿಲ್ಲವೆಂದು ತಿಳಿಸುತ್ತಾಳೆ. ತನುಗುಣಗಳು ತನುವಿಗೆ ಮಾತ್ರ ಸೀಮಿತವಾಗುತ್ತವೆ, ಅವುಗಳನ್ನು ಆತ್ಮಕ್ಕೆ ಆರೋಪಿಸಲಾಗದೆಂದು ಅಲ್ಲಮ ತಿಳಿಸುತ್ತಾನೆ. ಇದನ್ನು ಕವಿ ಪರಿಣಾಮಕಾರಿಯಾದ ದೃಷ್ಟಾಂತವೊಂದರ ಮೂಲಕ ವರ್ಣಿಸಿದ್ದಾನೆ.[೮೦] ಪಾರ್ವತಿಯ ಮುಂದೆ ತಾನು ಮಾಡಿದ ಪ್ರತಿಜ್ಞೆಯನ್ನು ಕೊನೆಗೊಳಿಸುವುದಕ್ಕಾದರೂ ಭಾಷೆ ಉಳಿದು ಹಾಗೇ ಹಿಂತಿರುಗಲು ಸಾಧ್ಯವಿಲ್ಲವೆಂದು ತಿಳಿಸುತ್ತಾಳೆ ಮಾಯೆ.[೮೧] ತಾಮಸಗುಣಕ್ಕೆ ಮುಕ್ತಿಯ ಅವಕಾಶವಿಲ್ಲವೆಂದು ತಿಳಿಸುವುದಕ್ಕಾಗಿ ಕವಿ ಇನ್ನೊಂದು ದೃಷ್ಟಾಂತವನ್ನು ಹೆಣೆದಿದ್ದಾನೆ. ಕಡಲ ನೀರೆಲ್ಲ ಅಮೃತವಾಗಬಹುದಾದ, ಮೇರುಗಿರಿ ಕುಡಿವಿಡಿದು ಹಬ್ಬಬಹುದಾದ ಹಾಗೂ ಭೂಮಿಯ ಮೇಲಿನ ಪ್ರತಿಗಿಡವೂ ಕಲ್ಪತರುವಾಗಬಹುದಾದ ಅಸಾಧ್ಯಗಳಲ್ಲಿ ಅಸಾಧ್ಯವೆನ್ನುವಂಥವು ಕೂಡ ಸಾಧ್ಯವಾಗಬಹುದು. ಆದರೆ ಪಂಚೇಂದ್ರಿಯಗಳಲ್ಲಿ ಬದುಕುವ ಶರೀರತತ್ತ್ವದ 'ಮಡದಿ ಮಾಯೆ' ಯಂಥವರಿಗೆ ಪರಮತತ್ತ್ವಜ್ಞಾನ ಸಾಧ್ಯವಿಲ್ಲ ಎಂದು ವೀರಶೈವತ್ವದ ರಹಸ್ಯವನ್ನೇ ಬಿಚ್ಚಿಟ್ಟಿದ್ದಾನೆ ಅಲ್ಲಮನ ಮಾತಿನಲ್ಲಿ![೮೨] ಏನು ಮಾಡಿದರೂ ಅವನನ್ನು ಹಿಡಿದಲ್ಲದೆ ಬಿಡೆನೆಂದು ಮಾಯೆ ನುಡಿಯುತ್ತಾಳೆ. ಲೋಕಜೀವಿಗಳು ಬಹಿರಂಗಾಚರಣೆಯಿಂದ ಶಿವನ ಕೃಪೆ ಪಡೆದೇ ತೀರುತ್ತೇವೆಂದು ತಿಳಿದುಕೊಳ್ಳುವುದು ಹೀಗೆಯೇ. ಆಗ ಅಲ್ಲಮ ಮಾಯೆಗೆ ನಿರ್ವಯಲ ಜಾಲವನ್ನು ಬೀಸಿ ಹೋಗುತ್ತಾನೆ.[೮೩] ಸ್ಥೂಲಶರೀರ ಲಿಂಗದೊಂದಿಗೆ ಬೆರೆಯುವುದು ಸಾಧ್ಯವಿಲ್ಲ, ಮಣ್ಣಿನೊಂದಿಗೆ ಬೆರೆಯುವುದೇ ಅದರ ಲಕ್ಷಣ. ಪರಶಿವನಲ್ಲಿ ಒಂದಾಗಬೇಕಾದರೆ ಅಂತರಂಗಾಚರಣೆಯಲ್ಲಿ ಊರ್ಧ್ವಮುಖಿಯಾಗಿ ಸಾಗಬೇಕಾಗುತ್ತದೆ ಎನ್ನುವುದು ಇಲ್ಲಿಯ ಧ್ವನ್ಯಾರ್ಥ.

[illegible]

ಸ್ಥೂಲಶರೀರರೂಪದ ಮಾಯೆ ಪ್ರಾಕೃತಿಕ ಗುಣದ ಪಾರ್ವತಿಯಲ್ಲಿಗೆ ಮರಳುತ್ತಾಳೆ. ಅಹಂಕಾರಾಚಾರ್ಯ ಮಾಯೆಯ ಅಸ್ತಿತ್ವಕ್ಕೆ ಕಾರಣವಾಗಿರುವ ಮಮಕಾರ-ಮೋಹಿನಿಯರಿಗೆ ಕಾರಣಕನ್ಯೆಯ ರೀತಿಯನ್ನು ತಿಳಿಸುತ್ತಾನೆ.[೮೪] ಹೀಗೆ ಮುಂದುವರೆಯುತ್ತದೆ ಪ್ರಭು-ಮಾಯೆ-ವಿಮಳೆ-ಅಹಂಕಾರ ಇವರೆಲ್ಲರ ಅಂಶಗಳ ಸಂಕೀರ್ಣ ಕ್ರಿಯೆ. ಭೂತ-ವರ್ತಮಾನ-ಭವಿಷ್ಯ ಎಲ್ಲ ಕಾಲಗಳಲ್ಲಿಯೂ ಆ ಕ್ರಿಯೆಯದು ಒಂದೇ ಕ್ರಮ.

(ಈ) ಅಕ್ಕಮಹಾದೇವಿ

ಕಾಮ ಮೊದಲಾದ ವಿಷಯಗಳು ಗೋಮುಖವ್ಯಾಘ್ರಗಳಂತೆ ತೋರುತ್ತವೆಂದು ತಿಳಿಸುತ್ತ ಅವುಗಳನ್ನು ಮುರಿದಿಕ್ಕಿ ಅಂತರಂಗದಲ್ಲಿ ಮಹಾಶಿವಲಿಂಗಸಂಗಪ್ರೇಮಿಯಾಗಿ ಶಿವೈಕ್ಯಪದವನ್ನು ಪಡೆದ ಅಕ್ಕಮಹಾದೇವಿಗೆ ಕವಿ ಮಂಗಲಾಚರಣದ ಗತಿಯಲ್ಲಿ ಶರಣಾರ್ಥಿಗಳನ್ನು ಸಲ್ಲಿಸುತ್ತಾನೆ. ೮೫ ಹೀಗೆ ದೀಕ್ಷಾರ್ಹಜೀವಿಯೊಂದು ವೀರಶೈವಾಚರಣೆಗೆ ಅನುಗುಣವಾಗಿ ಆಯಾ ಪರಿಸ್ಥಿತಿಗಳಲ್ಲಿ ಧನಾತ್ಮಕವಾಗಿ ಪ್ರತಿಕ್ರಿಯಿಸುವುದಕ್ಕೆ ಸಾಕ್ಷಿಯಾಗಿ ಅಕ್ಕಮಹಾದೇವಿಯ ಪಾತ್ರವು ಮೂಡಿ ಬಂದಿರುವುದನ್ನು ಕಾಣುತ್ತೇವೆ.

ಷಟ್ಸ್ಥಲಾಚರಣೆಯನ್ನು ನಿರೂಪಿಸಹೊರಟಿರುವ ಕವಿಗೆ ಪಂಚೇಂದ್ರಿಯಗಳನ್ನು ಶುದ್ಧವಾಗಿಟ್ಟುಕೊಳ್ಳುವ ಅವಶ್ಯಕತೆಯನ್ನು ತಿಳಿಸಬೇಕಾಗಿದೆ ಹಾಗೂ ಅಂತರಂಗಾಚರಣೆಯಲ್ಲಿ ಮುನ್ನಡೆದು ಪರಿಪೂರ್ಣ ಸಾಧನೆ ಕೈಗೊಳ್ಳುವುದನ್ನು ನಿರೂಪಿಸಬೇಕಾಗಿದೆ. ಪಾರ್ವತೀ ಪರಮೇಶ್ವರ ಸಂವಾದದ ಗತಿಯಲ್ಲಿ ಇದಕ್ಕೆ ಅಂಕುರವಾಗುತ್ತದೆ. ಶಿವನಲ್ಲಿ ಲೀನವಾಗುವ ಶಕ್ತಿ ತಾಮಸದಿಂದ ಸಾತ್ವಿಕತೆಯ ಕಡೆಗೆ ಮುನ್ನಡೆಯಬೇಕು ಎಂಬ ತತ್ತ್ವದಂತೆ ವ್ಯತಿರಿಕ್ತ ಕ್ರಮಗಳಲ್ಲಿ ಸಾಗುವ ಮಾಯೆ ಸೋಲುತ್ತಾಳೆ. ಅನುಗುಣ ಕ್ರಿಯೆಗಳಲ್ಲಿ ಸಾಗುವ ಅಕ್ಕಮಹಾದೇವಿ ತನ್ನ ಗುರಿ ತಲುಪುತ್ತಾಳೆ. ಇದಕ್ಕೆ ಪೂರಕವಾಗಿ ವೀರಶಿವಾಗಮಿಕ ನಿರ್ಮಳನ ವಲ್ಲಭೆಯಾದ ಸುಮತಿಯ ಗರ್ಭಶುಕ್ತಿಯಲ್ಲಿ ಪಾರ್ವತಿಯ ಸಾತ್ವಿಕಗುಣವೇ ರೂಪಾಗಿ ಅಕ್ಕಮಹಾದೇವಿ ಎಂಬ ಶ್ರೇಷ್ಠ ಮುತ್ತು ಉದಯಿಸುತ್ತದೆ.[೮೬] ಇಂಥ ಸ್ತ್ರೀಗೆ ಶಿವಯೋಗರಾಜ್ಯದ ಪಟ್ಟಕಟ್ಟುವವರಂತೆ ತಂದೆತಾಯಿಗಳು ನೊಸಲಿನಲ್ಲಿ ವಿಭೂತಿ ಇಡುತ್ತಾರೆ, ಕಂಠದಲ್ಲಿ ಲಿಂಗವನ್ನು ಕಟ್ಟುತ್ತಾರೆ.[೮೭] ನಿರ್ಮಳನು ಶಿರದ ಮೇಲೆ ಹಸ್ತವನ್ನಿಟ್ಟು ಕಿವಿಯಲ್ಲಿ ಪಂಚಾಕ್ಷರಿಯನ್ನು ಉಣಬಡಿಸುತ್ತಾನೆ.[೮೮] ಮುಂದೆ ಮಹಾದೇವಿ ಕಲ್ಪಲತೆಯಂತೆ ಬೆಳೆಯತೊಡಗುತ್ತಾಳೆ.[೮೯] ಪುಟಕ್ಕಿಟ್ಟ ಚಿನ್ನದಂತೆ ಬೆಳೆಯುವ ಅವಳ

ಸೌಂದರ್ಯರಾಶಿಗೆ ಮನಸೋತ ಕೌಶಿಕರಾಜ ಅವಳನ್ನು ವರಿಸಬಯಸುತ್ತಾನೆ. ತನ್ನ ಮನೋನುರಾಗವನ್ನು ಸಲ್ಲಿಸಲು ಅವನು ಒಪ್ಪಿದ್ದರಿಂದಾಗಿ ಅವಳು ರಾಜನ ಅರಮನೆಗೆ ಹೋಗುತ್ತಾಳೆ. ಲೋಕಜೀವಿಗೂ ಶಿವಭಕ್ತೆಗೂ ಪರಸ್ಪರ ಉತ್ತರಾಯಿಗಳಾಗುವ ಪ್ರಮೇಯ ಉಂಟಾಗಿ ಅವನ ವಸ್ತ್ರಭೂಷಣಗಳನ್ನು ತೆಗೆದೊಗೆದು ಬಂಧಮುಕ್ತಳಾಗಿ ಹೊರಡುತ್ತಾಳೆ.[೯೦] ಮುಕ್ತಿಗಾಗಿ ಉಪದೇಶ ಪಡೆಯಬಯಸುವ ಅವಳು ಭಕ್ತ್ಯೋಪಾಯದಲ್ಲಿ ಸುಳಿದಾಡುತ್ತಿದ್ದಳೆಂದು ಚಾಮರಸ ತಿಳಿಸುತ್ತಾನೆ.[೯೧]

ಪ್ರಾಣಲಿಂಗಾಚರಣೆಯಲ್ಲಿದ್ದುಕೊಂಡು ಮಹಾದೇವಿಯಕ್ಕ ಅಲ್ಲಮನೆಡೆಗೆ ಬರುತ್ತಾಳೆ.[೯೨] ಅಮಲಜ್ಞಾನವನ್ನು ಕಣ್ದೆರೆಸುವ ಪ್ರಭುರಾಯನಿಗೆ ಅವಳು ಭಕ್ತಿಯ ಗೂಡಿನಂತೆ ತೋರುತ್ತಾಳೆ.[೯೩] ಈಗಾಗಲೇ ಇಷ್ಟಲಿಂಗ ಹಾಗೂ ಪ್ರಾಣಲಿಂಗಗಳ ಆಚರಣೆಯಲ್ಲಿದ್ದ ಅವಳಿಗೆ ಭಾವಲಿಂಗಾಚರಣೆಯ ಕ್ರಮವನ್ನು ತಿಳಿಸಲು ಅವನು ಪರೀಕ್ಷೆಯ ನಾಟಕವಾಡುತ್ತಾನೆ, ತನಗೆ ಖಚಿತವಾಗಿರುವುದನ್ನು ಉಳಿದವರಿಗೂ ಮನದಟ್ಟು ಮಾಡುತ್ತಾನೆ. ಪತಿಯಿಲ್ಲದೆ ಅವಳು ಬಂದಳೆಂದೂ ದಿಗಂಬರಳಾಗಿ ಸಮೀಪದಲ್ಲಿದ್ದರೆ ಶರಣರು ಮನದಲ್ಲಿ ಕೋಪಗೊಳ್ಳುತ್ತಾರೆಂದೂ ತಿಳಿಸುತ್ತಾನೆ. ಅವುಗಳಲ್ಲಿ ಸಮರ್ಪಕವಾದ ಉತ್ತರ ದೊರೆತಾಗಲೂ ಕೇವಲ ವಾಗದ್ವೈತ ಭಕ್ತಿಯಲ್ಲಿ ಜಾಣತನ ತೋರಿಸಲಾಗದೆನ್ನುತ್ತಾನೆ. ತನ್ನ ಸಂಶಯಗಳಿಗೆಲ್ಲ ಪರಿಹಾರ ಪಡೆದು, ಪ್ರಸನ್ನನಾಗಿ ಅವಳಿಗೆ ಜೀವಪರಮರನ್ನು ಅನುಗೊಳಿಸಿ ನಿರ್ವಯಲ ಮಾಡುವ ಉಪದೇಶ ನೀಡುತ್ತಾನೆ.[೯೪] ಆದರಿಂದ ಅವಳಲ್ಲಿ ಜ್ಞಾನಜ್ಯೋತಿಪ್ರಭೆ ಪ್ರಕಾಶಿಸತೊಡಗುತ್ತದೆ. ಆಗ ಅವಳು ಮನದೊಳಗೆ ನಿರ್ಮಳಗಿರಿಯ ಗಹನಕ್ಕೆ ಹೋಗುತ್ತಾಳೆ,[೯೫] ಎಲ್ಲ ಶರಣರ ಹರಕೆಯನ್ನು ಹೊತ್ತು ಏಕಾಂತದವಾಸದಲ್ಲಿ ಕಾಯದ ಕದಳಿಯನ್ನು ಹೊಕ್ಕು ಅಚಲ ಪದವಿಯನ್ನು ಪಡೆಯುತ್ತಾಳೆ. ಲಿಂಗಾಂಗ ಸಾಮರಸ್ಯದ ಅಂತಿಮ ಗುರಿಯನ್ನು ತಲುಪುತ್ತಾಳೆ.[೯೬]

ಶಿವಯೋಗಾನುಸಂಧಾನದ ದೀಕ್ಷೆಗೆ ಅರ್ಹವಾದ ವ್ಯಕ್ತಿ ಅದನ್ನು ಪಡೆದು ಪಂಚೇಂದ್ರಿಯಗಳ ಮುಖಾಂತರ ತೋರುವ ತನುಗುಣಗಳನ್ನು ಕಳೆದುಕೊಳ್ಳಬೇಕು. ಇಷ್ಟ–ಪ್ರಾಣ–ಭಾವಲಿಂಗಾಚರಣೆಗಳಲ್ಲಿ ಕ್ರಮಿಸಿ ಭಾವಬೆತ್ತಲೆ ಮಾಡಿಕೊಳ್ಳಬೇಕು. ಇದನ್ನು ಅಕ್ಕಮಹಾದೇವಿಯ ಬದುಕಿನ ಪ್ರಸಂಗಗಳಲ್ಲಿ ಸಂಕೇತಿಸುತ್ತ ಸಾಧಕ ಪರಿಪೂರ್ಣಾವಸ್ಥೆಯನ್ನು ತಲುಪುವುದನ್ನು ಕವಿ ಅವಳ ಪಾತ್ರದ ಮುಖಾಂತರ ನಿರೂಪಿಸಿದ್ದಾನೆ.

(ಉ) ಬಸವಣ್ಣ

ಪ್ರಭುಲಿಂಗಲೀಲೆಯಲ್ಲಿ ಊರ್ಧ್ವಗತಿಯಲ್ಲಿ ಸಾಗುವ ಪಾತ್ರಗಳಲ್ಲಿ ಬಸವಣ್ಣನಿಗೇ ಹೆಚ್ಚಿನ ಪ್ರಾಶಸ್ತ್ಯವಿದೆ. ಸಾಧನೆಯ ಮಾರ್ಗಕ್ಕೆ ಬರಬೇಕಾದವರನ್ನು ಗುರು ಸಂದರ್ಶಿಸಿ, ಅಜ್ಞಾನವನ್ನು ನಿವಾರಿಸಿ ಅವರನ್ನು ಲಿಂಗಮಾರ್ಗದಲ್ಲಿ ಮುನ್ನಡೆಸುತ್ತಾನೆ. ಸಾಧಕನನ್ನು ಸಂಕೇತಿಸುತ್ತಿರುವ ಬಸವಣ್ಣನನ್ನು ಅಲ್ಲಮ ಷಟ್ಸ್ಥಲಮಾರ್ಗಕ್ಕೆ ತರುವ ಪ್ರಮೇಯವಿಲ್ಲ, ಬದಲಾಗಿ ಅವನಲ್ಲಿ ಮೊಳಕೆಯೊಡೆದ ಅಹಂಕಾರವನ್ನು ಚಿವುಟಿಹಾಕಿ ಪರಿಪೂರ್ಣತೆಯೆಡೆಗೆ ಮುನ್ನಡೆಸಬೇಕಾಗಿದೆ. ಈ ರೂಪದಲ್ಲಿ ಬಸವಣ್ಣನ ಪಾತ್ರವನ್ನು ಪರಿಶೀಲಿಸಬೇಕು.

ಬಸವಣ್ಣನಾಗಿ ಕೈಲಾಸದಿಂದ ಭೂಮಿಗೆ ಬರುವ ವೃಷಭೇಂದ್ರನು ಅಲ್ಲಮನ ಸಮ್ಮೇಳದಲ್ಲಿ ಸುಖಿಯಾಗಲು ಬಂದವನು.[೯೭] ಅವನನ್ನು ನಿಮಿತ್ತ ಮಾಡಿಕೊಂಡು ಸರ್ವರೂ ಸ್ವಾನುಭಾವಸುಖಸ್ವರೂಪ ನಿಧಾನವನ್ನು ಸಾಧಿಸಬೇಕಾಗಿದೆ.[೯೮] ಭುವಿಗೆ ಬಂದು ಶಿವಯೋಗದಲ್ಲಿಯೇ ಹೆಜ್ಜೆ ಇಡಬೇಕಾದವನು ಕೈಲಾಸದಲ್ಲೂ ಪರಿಪೂರ್ಣನಾಗಿ ಮೂಡಿ ಬಂದಿದ್ದಾನೆ.[೯೯] ಇಂಗಳೇಶ್ವರ ಬಾಗೇವಾಡಿಯ ಮಾದರಸ-ಮಾದಲಾಂಬಿಕೆಯರಿಗೆ ಜನಿಸುವ ಕೂಸು ಆಗಲೇ ಶಿವಧ್ಯಾನದಲ್ಲಿದ್ದಂತೆ ವರ್ತಿಸುತ್ತದೆ. ಸಾಕ್ಷಾತ್ ಸದಾಶಿವನೇ ಗುರುವಾಗಿ ಬಂದು ಲಿಂಗ ವಿಭೂತಿಗಳನ್ನು ಧರಿಸಲು ಹಚ್ಚಿ ಕಿವಿಯೊಳಗೆ ಪಂಚಾಕ್ಷರಿ ಮಂತ್ರವನ್ನು ತುಂಬಿ ಬಸವನೆಂದು ಹೆಸರಿಸಿ ಹೋಗುತ್ತಾನೆ.[೧೦೦] ಇದು ಗುರು ದೀಕ್ಷಾಪ್ರಸಂಗದಲ್ಲಿ ಮಾಡುವ ಕ್ರಿಯೆ. ಯೋಗದೀಕ್ಷಾರೂಪದ ಉಪನಯನವಾಗುವುದರಿಂದ ಅವನಿಗೆ ವೇದ, ಶಾಸ್ತ್ರ, ಪುರಾಣ, ಆಗಮ ಎಲ್ಲವೂ ವೇದಿಸುತ್ತವೆ. ಬಿಜ್ಜಳನಲ್ಲಿ ಪ್ರಧಾನಿಯಾಗುವ ಅವನಿಗೆ ಕಾಯಕದಲ್ಲಿ ದಿನಗಳನ್ನು ನೂಕುತ್ತ ಶಿವಧ್ಯಾನಾಸಕ್ತನಾಗಿ ಮುನ್ನಡೆದಂತೆ ಅಂತರಂಗದಲ್ಲಿ ಮಹಾಲಿಂಗರೂಪದ ಮಗ ಜನಿಸುತ್ತಾನೆ. ಅಂತೆಯೇ ಅವನಿಗೆ ಕೂಡಲಸಂಗಮೇಶನೆಂದು ಹೆಸರಿಡುತ್ತಾನೆ.[೧೦೧] ಅಂತರಂಗ-ಬಹಿರಂಗಗಳಲ್ಲಿ ಶುದ್ಧವಾಗುವುದರಿಂದ ಅವನ ಕೈ ಕಲ್ಪವೃಕ್ಷವಾಗುತ್ತದೆ, ಮನವು ಚಿಂತಾಮಣಿಯಾಗುತ್ತದೆ, ಶಬ್ದವು ಕಾಮಧೇನು ಆಗುತ್ತದೆ.[೧೦೨] ಇದರಿಂದಾಗಿ ಅವನು ಲೋಕವನ್ನೇ ಪಾವನಗೈಯುತ್ತ ಸಾಗುತ್ತಾನೆ.[೧೦೩]

ಅಂತರಂಗಶುದ್ಧಿಯಿಂದಾಗಿ ಚಾರುಚರಿತೆಯವನಾದ ಅವನೆಡೆಗೆ ಗುರು ತಾನಾಗಿಯೇ ನಡೆದು ಬರುತ್ತಾನೆ. ಚಾತಕಪಕ್ಷಿಯಂತೆ ಕಾಯುವ ಭಕ್ತ ಬಸವಣ್ಣನಲ್ಲಿಗೆ ಬರುವ ಅಲ್ಲಮ ಮೋಡರೂಪದ

[illegible]

[illegible]

[illegible]

[illegible]

ಗುರುವೆಂದು ತಿಳಿಸುತ್ತಾನೆ ಚಾಮರಸ.[೧೦೪] ಸಾಧಕನಲ್ಲಿ ಅಂಕುರಿಸಬಹುದಾದ ಅಹಂಕಾರದಿಂದ ಅವನನ್ನು ಮುಕ್ತಗೊಳಿಸಿ ಪರಿಪೂರ್ಣಾವಸ್ಥೆಯಲ್ಲಿ ಮುನ್ನಡೆಸುವಂತೆ ಆ ಗುರು ವರ್ತಿಸುತ್ತಾನೆ. ಬಾಗಿಲ ಬಳಿ ನಿಂತು ಅವನಿಗೆ ಅರಿವಿನ ತಿರುಳು ಮೂಡುವಂತೆ ಮಾಡುತ್ತಾನೆ.[೧೦೫] ನಡೆನುಡಿಗಳನ್ನು ಒಂದುಮಾಡುವ ಶಿವಲಿಂಗಭಕ್ತಿಯ ಬೆಡಗನ್ನು ಅರುಹುತ್ತಾನೆ.[೧೦೬] ಸೂಕ್ಷ್ಮರೂಪದ ಅಹಂಕಾರದ ಬೇರನ್ನೇ ಕಿತ್ತು ಹಾಕಿದ್ದ ಪರಿಪೂರ್ಣ ಶರಣನನ್ನು ಗುಪ್ತಭಕ್ತಿಯಲ್ಲಿ ಸಾಗುತ್ತಿದ್ದ ಮರುಳಶಂಕರದೇವನ ರೂಪದಲ್ಲಿ ತೋರಿಸಿ ಅಂಥ ಅಹಂಕಾರವನ್ನೂ ಅಳಿಸಿ ಹಾಕುವ ಸೂಚನೆ ಕೊಡುತ್ತಾನೆ. ಆಗ ಬಸವಣ್ಣ ತನ್ನ ಸ್ಥಿತಿಯನ್ನು ಅರಿತು ಅಲ್ಲಮನ ಕರುಣೆಗಾಗಿ ಬಿನ್ನೈಸುತ್ತಾನೆ. ಆದೆಲ್ಲ ಗುರು ಸಾಧಕನನ್ನು ಪರೀಕ್ಷಿಸುವ ಆಟವಷ್ಟೇ! ಈ ಮಾತನ್ನು ಬಸವಣ್ಣನಿಗೆ ತಿಳಿಸುವ ಅಲ್ಲಮ ಶಿಷ್ಯನನ್ನು ಮನಃಪೂರ್ವಕವಾಗಿ ಮೆಚ್ಚಿಕೊಳ್ಳುತ್ತಾನೆ.[೧೦೭] ಇಂಥ ಸಾಧಕನನ್ನು ಸದಾ ಅರಿವಿನಲ್ಲಿ ಮುನ್ನಡೆಸುವ ಕ್ರಮವಾಗಿ ಗುರು ಅವನಿಗೆ ಇಷ್ಟ–ಪ್ರಾಣ–ಭಾವ–ಲಿಂಗಗಳ ಅರಿವನ್ನು ಅಂತರಂಗದಲ್ಲಿ ಒಡಮೂಡಿಸುತ್ತಾನೆ.

ಬಸವಣ್ಣ ಅಂತರಂಗಾಚರಣೆಯಲ್ಲಿ ಸಾಧಿಸಿದುದನ್ನು ಬಹಿರಂಗದಲ್ಲಿ ತೋರಿಸಲು ಶೂನ್ಯಸಿಂಹಾಸನವನ್ನು ರಚಿಸುತ್ತಾನೆ, ಅದನ್ನಲಂಕರಿಸುವ ಗುರು ಅಲ್ಲಮನಿಗಾಗಿ ಕಾಯುತ್ತಾನೆ. ನಿರ್ಗುಣಯೋಗಮಾರ್ಗಾನುಸರಣೆಯಲ್ಲಿರುವ ಅವನನ್ನು ಪರೀಕ್ಷಿಸಲು ಪ್ರಭು ವೇಷ ಮರೆಯಿಸಿಕೊಂಡು ಬಂದರೂ ಬಸವಣ್ಣ ಅದನ್ನು ಗ್ರಹಿಸುತ್ತ ಭಕ್ತಿಯಿಂದ ತನ್ನರಮನೆಗೆ ಕರೆದುಕೊಂಡು ಬಂದು ಶೂನ್ಯ ಸಿಂಹಾಸನದಲ್ಲಿ ಕುಳ್ಳಿರಿಸುತ್ತಾನೆ. ಭಕ್ತಿ ಪರವಶತೆಯಲ್ಲಿದ್ದ ಅವನು ಆರೋಗಣೆಗೆ ಬಂದ ಜಂಗಮಸಮೂಹಕ್ಕೆ ಅನ್ನ ಹಾಕುವುದನ್ನು ಮರೆಯುತ್ತಾನೆ. ಅಲ್ಲಮನು ತನ್ನ ತೃಪ್ತಿಯಲ್ಲಿ ಅವರೆಲ್ಲರ ತೃಪ್ತಿ ಅಡಗಿದೆಯೆಂದು ತಿಳಿಸಿದಾಗ ಅದರಲ್ಲಿಯೇ ಅವರೆಲ್ಲರ ತೃಪ್ತಿಯನ್ನು ಕಾಣಬಯಸುತ್ತಾನೆ. ಗುರುವಿಗೆ ಅನ್ನ ಹಾಕಿ ತೃಪ್ತಿಪಡಿಸಬೇಕೆಂಬ ಭರದಲ್ಲಿ ಏನೆಲ್ಲವನ್ನು ಎಡೆ ಮಾಡಿದರೂ ಅವನ ಹಸಿವು ಹಿಂಗದೆ ಹೋದಾಗ ತನ್ನನ್ನೇ ಅರ್ಪಿಸುವುದರ ಮೂಲಕ ಬಸವಣ್ಣ ಸರ್ವಾರ್ಪಣಭಾವಕ್ಕೆ ನಿಜವಾದ ಅರ್ಥ ಕೊಡುತ್ತಾನೆ ಹಾಗೂ ಪ್ರಭುವಿನ ಪ್ರೀತಿಗೆ ಪಾತ್ರನಾಗುತ್ತಾನೆ. ಅವನಿಂದ ಜ್ಞಾನೋಪದೇಶವನ್ನು ಪಡೆದು ಕೃತಾರ್ಥನಾಗುತ್ತಾನೆ.

ಪ್ರಭುಲಿಂಗಲೀಲೆಯಲ್ಲಿ ಲಿಂಗಾಂಗಸಾಮರಸ್ಯದ ನಿರೂಪಣೆಗೆ ಬಸವಣ್ಣನ ಪಾತ್ರ ತುಂಬ ಸಹಕಾರಿಯಾಗಿದೆ. ಅಂತರಂಗಾಚರಣೆಯಲ್ಲಿ ಗುರು–ಲಿಂಗ–ಜಂಗಮದ ಆಯತವನ್ನು ಅರಿತು ಅದನ್ನು

[illegible]

[illegible]

[illegible]

[illegible]

[illegible]

ಬಾಹ್ಯಸ್ಥಲಕ್ಕೆ ಕುರುಹಾಗಿಟ್ಟು ಅಂತರಂಗ-ಬಹಿರಂಗಗಳನ್ನು ಸಮನ್ವಯಗೊಳಿಸುವ ಕ್ರಿಯೆಯನ್ನು ನಿರೂಪಿಸುವಲ್ಲಿ ಅದು ಪೂರಕವಾಗಿದೆ.

(ಊ) ಇತರ ಪಾತ್ರಗಳು

ಶಿವಯೋಗಾಚರಣೆಯ ನಿರೂಪಣೆಗಾಗಿ ಕಾವ್ಯವನ್ನು ರೂಪಿಸಿರುವ ಚಾಮರಸ ಅದರ ಪ್ರಮುಖ ಅಂಶಗಳನ್ನು ಸಂಕೇತಿಸಿ ನಿರೂಪಿಸುವುದಕ್ಕೆ ಮಾತ್ರ ಹೆಚ್ಚಿನ ಗಮನ ಹರಿಸಿದ್ದಾನೆ. ಗುರುಸ್ಥಾನದಲ್ಲಿರುವ ಅಲ್ಲಮ, ದೀಕ್ಷಾರ್ಹವ್ಯಕ್ತಿ ಅಕ್ಕಮಹಾದೇವಿ, ಸಾಧಕ ಬಸವಣ್ಣ ಇವರ ಪಾತ್ರಗಳು ವಿಶೇಷ ಪ್ರಾಮುಖ್ಯ ಪಡೆದಿವೆ. ಭವವನ್ನು ನೀಗಿ ಭಕ್ತನಾಗುವುದು ಈ ಆಚರಣೆಯ ಪ್ರಥಮ ಆದ್ಯತೆ. ಭವಿಗಳನ್ನು ಸಂಕೇತಿಸಲು ಮಾಯಾದೇವಿ ಹಾಗೂ ಕೌಶಿಕರ ಪಾತ್ರಗಳು ಸೃಷ್ಟಿಯಾಗಿದ್ದರೂ ಕವಿ ಮಾಯಾದೇವಿಯ ಪಾತ್ರಚಿತ್ರಣದಲ್ಲಿ ಹೆಚ್ಚು ಮುತುವರ್ಜಿ ವಹಿಸಿದ್ದಾನೆ. ಉಳಿದಂತೆ ಆಚರಣೆಯ ಪೂರಕ ಹಂತಗಳನ್ನು ಸಂಕೇತಿಸಲು ಆಯಾ ಸಂದರ್ಭಗಳಿಗೆ ತಕ್ಕ ಪಾತ್ರಗಳು ಸೃಷ್ಟಿಯಾಗಿವೆ. ‘ಮಾಯೆ ಮಹಾದೇವಿಯಕ್ಕ, ಮುಕ್ತಾಯಕ್ಕ, ಗೊಗ್ಗಯ್ಯ, ಸಿದ್ಧರಾಮ, ಬಸವಣ್ಣ, ಗೋರಕ್ಷ ಈ ಭೂಮಿಕೆಗಳು ಪ್ರಭುವನ್ನು ಕಂಡಾಗ ಯಾವುದೋ ಒಂದು ತತ್ತ್ವದ ಹಿನ್ನೆಲೆಯಲ್ಲಿ ಚಿತ್ರಿತವಾಗಿರುವುದನ್ನು ಕವಿಯ ವರ್ಣನೆಯಲ್ಲಿ ಸ್ಪಷ್ಟವಾಗಿ ಅರಿಯುತ್ತೇವೆ.’[೧೦೮] ಇವುಗಳಲ್ಲಿ ಹೆಚ್ಚಿನ ಪಾತ್ರಗಳು ತಮ್ಮ ತಮ್ಮ ಸಂದರ್ಭಗಳಲ್ಲಿ ಮಾತ್ರ ಕೋಲ್ಮಿಂಚಿನಂತೆ ಹೊಳೆದು ಮಾಯಾವಾಗುತ್ತವೆ. ಮಾರ್ಗದ ಒಂದೊಂದು ತತ್ತ್ವಗಳಿಗೆ ಸೀಮಿತವಾಗಿರುವ ಪಾತ್ರಗಳು ಆ ತತ್ತ್ವದ ಪ್ರತಿಪಾದನೆಗಾಗಿ ಅವಶ್ಯವೆನಿಸುವ ಎಲ್ಲ ಅಂಶಗಳನ್ನೂ ಪರಿಣಾಮಕಾರಿಯಾಗಿ ಚಿತ್ರಿಸಲು ಸಹಕಾರಿಯಾಗುತ್ತವೆ. ಈ ಗುಂಪಿಗೆ ವಿಮಳೆ, ಋಷಿಮುನಿಗಳು ಮತ್ತು ಕಿರಾತಕರು ಕೂಡ ಸೇರ್ಪಡೆಯಾಗುತ್ತಾರೆ. ರಚಿಸಬೇಕಾದ ವೃತ್ತವೊಂದು ಅದು ಪ್ರಾರಂಭವಾಗುವ ಬಿಂದುವಿನಲ್ಲಿಯೇ ಮುಕ್ತಾಯಗೊಳ್ಳುವಂತೆ ಕಾವ್ಯವು ಪರಮೇಶ್ವರ ಪಾರ್ವತಿಯರಿಂದಲೇ ಪ್ರಾರಂಭವಾಗಿ ಅವರೊಂದಿಗೇ ಮುಕ್ತಾಯವಾಗುವಂತೆ ಆ ಪಾತ್ರಗಳನ್ನು ರೂಪಿಸಲಾಗಿದೆ.

ಪಂಚೇಂದ್ರಿಯಗಳ ಮುಖಾಂತರ ತೋರುವ ತಾಮಸ ಗುಣಗಳನ್ನು ಸಂಕೇತಿಸುವ ಮಾಯೆಯ ಸಖಿಯರು, ಆವಳ ಜನನಕ್ಕೆ ಕಾರಣವಾಗುವ ಮಮಕಾರ-ಮೋಹಿನಿಯರು, ಗುರು ಅಹಂಕಾರಾಚಾರ್ಯ ಇವರು ತತ್ತ್ವವನ್ನು ಕಾವ್ಯವಾಗಿಸುವಲ್ಲಿ ನೇಯ್ದ ಎಳೆಗಳು ಮಾತ್ರ; ಅದೇ ರೀತಿ ಸಾತ್ವಿಕ ಗುಣಗಳನ್ನು

[illegible]

[illegible]

[illegible]

ಸಂಕೇತಿಸುವ ಬಸವಣ್ಣನ ಸಂಗಾತಿಗಳು ಕೂಡ. ಇವರೆಲ್ಲ ಮಿಂಚುವುದಿಲ್ಲ ಬದಲಾಗಿ ತೋರಿ ಅಡಗುತ್ತಾರೆ. ಈ ಕಾರಣದಿಂದಾಗಿಯೇ ಶಿವಶರಣರಲ್ಲಿ ಉನ್ನತ ಸ್ಥಾನದಲ್ಲಿ ಗಣಿಸಲ್ಪಡುವ ಚೆನ್ನಬಸವಣ್ಣ ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ ಮೊದಲಾದವರಿಗೆ ಕಥಾಹಂದರದಲ್ಲಿ ಯಾವ ಪ್ರಾಮುಖ್ಯತೆಯೂ ದೊರೆತಿಲ್ಲ.

ಕಾವ್ಯವೊಂದರಲ್ಲಿ ಪ್ರತಿಯೊಂದು ಘಟನೆಯೂ ಆ ಸರಪಳಿಯ ಕೊಂಡಿಯಾಗಿ ಮೂಡಿ ಬರಬೇಕು. ಅಲ್ಲಿಯ ಪಾತ್ರಗಳಿಗೂ ಈ ಮಾತು ಅನ್ವಯಿಸುತ್ತದೆ. ಆದರೆ ಮಾದರಸ, ಮಾದಲಾಂಬಿಕೆ, ಬಿಜ್ಜಳ, ಅಕ್ಕನಾಗಮ್ಮ ಇವರೆಲ್ಲರ ಪಾತ್ರಗಳಿಗೆ ಇಂಥ ಯಾವ ಪ್ರಮೇಯವೂ ಇಲ್ಲದೆ ಅವರು ಕಂಡೂ ಕಾಣದವರಂತೆ ಸರಿದು ಹೋಗುತ್ತಾರೆ. ತತ್ವವನ್ನು ಕಾವ್ಯವಾಗಿಸುವಾಗ ವಿವಿಧ ಪ್ರಸಂಗಗಳಿಗೆ ಚಾರಿತ್ರಿಕ ವ್ಯಕ್ತಿಗಳನ್ನು ಆರಿಸಿಕೊಂಡಿರುವ ಚಾಮರಸ ಸಾಂದರ್ಭಿಕವಾಗಿ ಆಯಾ ಚಾರಿತ್ರಿಕ ಘಟನೆಗಳನ್ನು ಹಾಗೂ ವ್ಯಕ್ತಿಗಳನ್ನು ನಮೂದಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿಕೊಂಡು ಈ ಗೊಂದಲದಲ್ಲಿ ಸಿಲುಕಿಕೊಂಡಿದ್ದಾನೆ.

'ಪಾತ್ರಗಳು ಸಣ್ಣವೇ ಇರಲಿ, ದೊಡ್ಡವೇ ಇರಲಿ; ಸಹಜ ಸ್ವಭಾವವನ್ನು ಹೊಂದಿ ನಮ್ಮ ಕಣ್ಣಿಗೆ, ಮನಕ್ಕೆ ಆನಂದವುಟಾಗುವಂತೆ ಚರಿಸುತ್ತವೆ. ಅವುಗಳ ನರನಾಡಿಗಳಲ್ಲಿ ಚೈತನ್ಯ ಚಿಮ್ಮುತ್ತದೆ.' [೧೦೯]

೨. ಕಾವ್ಯದ ಪರಿಕರಗಳು

೨.೧ ಪ್ರಾರ್ಥನೆ

ಕಾವ್ಯರಚನೆಯ ಹಿಂದಿನ ಉದ್ದೇಶ ತಮ್ಮ ವಿಚಾರವನ್ನು ಕಾವ್ಯಾಸಕ್ತರಲ್ಲಿ ಸಾರ್ವತ್ರೀಕರಣ ಗೊಳಿಸುವುದಾಗಿದ್ದರೂ ಕವಿಗಳು ಕಾವ್ಯದೇವತೆಯ ಸೇವೆಯ ರೂಪದಲ್ಲಿ ಅದನ್ನು ಮಾಡುತ್ತಿರುವಂತೆ ಭಾವಿಸುತ್ತ ಬಂದಿದ್ದಾರೆ. ಜ್ಞಾನದೇವತೆಯ ಕೃಪೆಯಿಂದ ತಾವು ಸರಿಯಾದ ಮಾರ್ಗದಲ್ಲಿ ಹೆಜ್ಜೆ ಇಡುವಂತಾಗಲೆಂದು ಆ ಜ್ಞಾನದೇವತೆಯನ್ನು ಪ್ರಾರ್ಥಿಸುತ್ತ ಬಂದಿರುವುದನ್ನು ಜಗತ್ತಿನಾದ್ಯಂತ ಬಹುತೇಕ ಕವಿಗಳಲ್ಲಿ ಕಾಣುತ್ತೇವೆ. ಗ್ರೀಕ್, ಲ್ಯಾಟಿನ್, ಇಂಗ್ಲಿಷ ಮತ್ತಿತರ ಐರೋಪ್ಯ ಭಾಷೆಗಳಲ್ಲಿ ಕಾವ್ಯ ರಚಿಸಿರುವ ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ ಮೊದಲಾದವರು ತಮ್ಮಲ್ಲಿ ಸದ್ಭಾವ ತುಂಬಿ ಹರಿಯಲೆಂದು

[illegible]

[illegible]

[illegible]

[illegible]

[illegible]

[illegible]

ಜ್ಞಾನದೇವತೆಯನ್ನು ಪ್ರಾರ್ಥಿಸಿದ್ದಾರೆ. ಅದೇ ರೀತಿ ಸಂಸ್ಕೃತದಲ್ಲಿ ಕಾವ್ಯ ರಚಿಸಿರುವ ವೇದವ್ಯಾಸ, ವಾಲ್ಮೀಕಿ, ಕಾಳಿದಾಸ, ಭವಭೂತಿ ಮೊದಲಾದವರೂ ಜ್ಞಾನದೇವತೆಯನ್ನು ಪ್ರಾರ್ಥಿಸಿರುವುದನ್ನು ಕಾಣುತ್ತೇವೆ. ಇದಕ್ಕೆ ಕನ್ನಡದ ಕವಿಗಳು ಹೊರತಾಗಿಲ್ಲ.

ಭಾರತೀಯ ಕಾವ್ಯಗಳಲ್ಲಿ ಶಿವಶಕ್ತಿಯರು ಕಾವ್ಯಕ್ಕೆ ಪ್ರೇರಣೆ ನೀಡುವವರೆಂದು ಭಾವಿಸುತ್ತ ಬರಲಾಗಿದೆ.[೧೧೦] ಅದರ ಜೊತೆಗೆ ಸರಸ್ವತಿ, ಗಣಪತಿ, ಬ್ರಹ್ಮ, ವಿಷ್ಣು, ಮಹೇಶ್ವರ ಮೊಲಾದವರೂ ಸ್ಥಾನ ಪಡೆಯುತ್ತ ಬಂದಿರುವುದನ್ನು ಕಾಣುತ್ತೇವೆ. ಇಷ್ಟಕ್ಕೇ ನಿಲ್ಲದೆ ಹಿಂದಿನ ಕವಿಗಳಿಂದಲೂ ತಮಗೆ ಪ್ರೇರಣೆ ಸಿಗಲೆಂದು ಆಶಯ ವ್ಯಕ್ತಪಡಿಸಿದವರಿದ್ದಾರೆ. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ರಚಿಸಿರುವ ಶ್ರೀ ಕುವೆಂಪು ಜ್ಞಾನದೇವತೆಯನ್ನು ಸ್ತುತಿಸುತ್ತ ಹಿಂದಿನ ಕವಿಗಳು ತಮಗೆ ಸ್ಫೂರ್ತಿಯನ್ನು ಕೊಡಲೆಂದು ಕೇಳಿಕೊಂಡಿದ್ದಾರೆ.[೧೧೧]

ಲಿಂಗಾನುಸಂಧಾನದ ಅಂತಿಮ ಹಂತದಲ್ಲಿ ನಿರ್ಗುಣ ಪರಶಿವನಲ್ಲಿ ಸಮರಸವಾಗುವ ವೀರಶೈವರಿಗೆ ಆ ಪರಶಿವನೇ ಸರ್ವಸ್ವ. ಇನ್ನುಳಿದ ದೇವಾಧಿದೇವತೆಗಳು ಅವನ ಅಧೀನವೆಂದು ತಿಳಿಯುವ ಅವರು ಅವನನ್ನು ಮಾತ್ರ ಆರಾಧಿಸುತ್ತಾರೆ.[೧೧೨] ಶಿವಶರಣರ ಕಾರ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಾವ್ಯರಚಿಸಿರುವ ಹರಿಹರ ಇದನ್ನು ಚಾಚೂ ತಪ್ಪದಂತೆ ತನ್ನ ಕೃತಿಗಳಲ್ಲಿ ಅನುಸರಿಸಿದ್ದಾನೆ. ಮೊದಲಿನಿಂದ ಕೊನೆಯವರೆಗೆ ಅವನ ಸ್ತುತಿಗೆ ಪರಶಿವರೂಪದ ಹಂಪೆಯ ವಿರೂಪಾಕ್ಷ ಪಾತ್ರನಾಗುತ್ತಾನೆ ಇಲ್ಲವೆ ಪರಶಿವನಲ್ಲಿ ಐಕ್ಯಸಾಧಿಸಿರುವ ಶಿವಶರಣರು ಪಾತ್ರರಾಗುತ್ತಾರೆ. ಚಾಮರಸನೂ ಈ ಪಂಕ್ತಿಗೆ ಸೇರಿದ್ದಾನೆ. ಮೊದಲ ಪದ್ಯದಲ್ಲಿ ಅವನು ಅಲ್ಲಮನನ್ನು ಪರಶಿವನ ರೂಪದಲ್ಲಿ ಸ್ತುತಿಸುತ್ತಾನೆ.[೧೧೩] ಈ ಪದ್ಯವು ಕನ್ನಡ ಸಾಹಿತ್ಯದಲ್ಲಿ ಉತ್ಕೃಷ್ಟ ರಚನೆಗಳಲ್ಲೊಂದಾಗಿದೆ.

ಪ್ರಭುಲಿಂಗಲೀಲೆಯ ಸಮಗ್ರ ನಿರೂಪಣೆಯನ್ನು ಹಿಡಿದಿಟ್ಟಿರುವ ಪ್ರಥಮ ಪದ್ಯದಲ್ಲಿ ವಿವಿಧ ಲಕ್ಷಣಗಳನ್ನು ತಿಳಿಸುತ್ತ ಕವಿ ಅವನಿಗೆ ಶರಣಾರ್ಥಿಗಳನ್ನು ಸಲ್ಲಿಸುತ್ತಾನೆ. ಜ್ಞಾನ ಎಂದರೆ ಬ್ರಹ್ಮ [೧೧೪] ಪುಣ್ಯದ ಸಂಪತ್ತಿನಿಂದ ಕೂಡಿರುವ ಮಲರೂಪವಲ್ಲದ ಬ್ರಹ್ಮ ಎನ್ನುವುದಕ್ಕೆ ಕವಿ 'ಶ್ರೀಮದಮಲಜ್ಞಾನ' ಎಂದು ಪದಪ್ರಯೋಗ ಮಾಡಿದ್ದಾನೆ. ಇದನ್ನು ಒಂದು ವಿಶೇಷಣದಂತೆ ಬಳಸುವ ಅವನು ಪದ್ಯದಲ್ಲಿ ಇಂಥ ವಿಶೇಷಣಗಳ ಮಾಲೆಯನ್ನೇ ಹೆಣೆದಿದ್ದಾನೆ ಗುಹೇಶ್ವರಲಿಂಗ ರೂಪದ ಪರಶಿವನಿಗೆ!

[illegible]

[illegible]

[illegible]

[illegible]

ಬ್ರಹ್ಮಾಂಡದ ಎಲ್ಲ ಜೀವಾತ್ಮರುಗಳಿಗೆ ಮೂಲವಾಗಿರುವ ಪರಮಾತ್ಮನನ್ನು ಅನೇಕಾತ್ಮನೆಂದು ಸ್ತುತಿಸುತ್ತಾರೆ. ಇಂಥ ಪರಮಾತ್ಮನ ಸೀಮಿತ ಲಕ್ಷಣಗಳನ್ನು ಆಯ್ದುಕೊಳ್ಳುವಲ್ಲಿ ಚಾಮರಸ ಉದ್ದೇಶವೊಂದನ್ನು ಹೊಂದಿರುವಂತೆ ತೋರುತ್ತದೆ. ಅದೆಂದರೆ ಕಾವ್ಯದಲ್ಲಿ ಇಟ್ಟುಕೊಂಡಿರುವ ಲಕ್ಷ್ಯಗಳಿಗೆ ಈ ಲಕ್ಷಣಗಳನ್ನು ಸಮಾನಾಂತರವಾಗಿಟ್ಟು ನೋಡುವುದು. ಜೀವಾತ್ಮ ಮಲರಹಿತನಾದ ಪರಶಿವನಿಂದ ಮೂಡಿ ಬಂದು ಭವಕ್ಕೆ ಒಳಗಾಗುತ್ತಾನೆ. ಭವದ ಸೆಳೆತದಿಂದ ದೂರವಾಗುವ ವಿಚಾರದಿಂದ ಶಿವನಲ್ಲಿ ನಿಷ್ಠೆಯನ್ನು ಹೊಂದುತ್ತಾನೆ. ವೇದಾಗಮಗಳ ಸಾಕ್ಷಿಯಂತೆ ಗುರುವಿನ ಸಾನ್ನಿಧ್ಯದಲ್ಲಿ ಭವವನ್ನು ದೂರ ಮಾಡಿಕೊಳ್ಳುತ್ತಾನೆ. ಅಂತರಂಗಾಚರಣೆಯಲ್ಲಿ ಮುಂದುವರೆದು ಪರಶಿವನಲ್ಲಿ ಸಮರಸವಾಗುತ್ತಾನೆ. ಇದು ಶಿವಯೋಗಾಚರಣೆಯ ಒಂದು ಸುತ್ತು. ಇದಕ್ಕೆ ಸಾಕ್ಷಿಯೆಂಬಂತೆ ಕವಿ ಪರಶಿವವನ್ನು ಅಮಲಜ್ಞಾನ, ಭಕ್ತಿಪ್ರೇಮ, ವೇದಪುರಾಣಶಾಸ್ತ್ರಸ್ತೋಮನುತನತ, ಚಾರುಚರಣಾಂಭೋಜ, ನಾಮರೂಪ ಕ್ರೀಕಳಾಪವಿರಾಮ, ಅನುಪಮ, ದಿವ್ಯತೇಜೋವ್ಯೋಮಮೂರುತಿ ಎಂಬ ವಿಶೇಷಣಗಳೊಂದಿಗೆ ಸ್ತುತಿಸುತ್ತ ಶರಣಾರ್ಥಿಗಳನ್ನು ಸಲ್ಲಿಸುತ್ತಾನೆ.

ಹರಿಶ್ಚಂದ್ರ ಕಾವ್ಯ ಮತ್ತು ಕರ್ನಾಟ ಭಾರತ ಕಥಾಮಂಜರಿ ಇವುಗಳಲ್ಲಿಯ ಮೊದಲ ಪದ್ಯಗಳೊಂದಿಗೆ ಪ್ರಭುಲಿಂಗಲೀಲೆಯ ಮೊದಲ ಪದ್ಯವನ್ನು ಹೋಲಿಸಿ ನೋಡಬೇಕು. ರಾಘವಾಂಕ ತನಗೆ ಇಷ್ಟಸಿದ್ಧಿಯನ್ನು ಕರುಣಿಸಲು ಪಂಪಾಪತಿ ಹಂಪೆಯ ವಿರೂಪಾಕ್ಷನನ್ನು ಪ್ರಾರ್ಥಿಸುತ್ತಾನೆ.[೧೧೫] ಕುಮಾರವ್ಯಾಸ ತನ್ನ ಆರಾಧ್ಯದೈವ ವಿಷ್ಣುವನ್ನು ಮನಃಪೂರ್ವಕವಾಗಿ ಸ್ತುತಿಸುತ್ತ ಶರಣು ಬಂದ ತನ್ನನ್ನು ಕಾಯಬೇಕೆಂದು ಕೇಳಿಕೊಳ್ಳುತ್ತಾನೆ.[೧೧೬] ಇದಕ್ಕೆ ಪ್ರತಿಯಾಗಿ ಚಾಮರಸ ಅಲ್ಲಮನನ್ನೂ, ಕಾವ್ಯದಲ್ಲಿ ಅವನು ಸಂಕೇತಿಸುವ ಪರಶಿವನನ್ನೂ ಸಮಾನಾಂತರವಾಗಿಟ್ಟು ಸ್ತುತಿಸುತ್ತ ಪರಶಿವನಲ್ಲಿ ಆಯ್ದುಕೊಂಡಿರುವ ಗುಣಗಳಲ್ಲಿ ತನ್ನ ಕಾವ್ಯದ ಮೂಲ ಉದ್ದೇಶಗಳನ್ನು ಆರೋಪಿಸುತ್ತಾನೆ. ಈ ಎಲ್ಲ ಸಂಕೀರ್ಣ ಲಕ್ಷಣಗಳನ್ನು ಒಳಗೊಂಡಿರುವುದರಿಂದಾಗಿ ಕಾವ್ಯದ ಮೊದಲ ಪದ್ಯವೇ ವಾಚಕನನ್ನು ಇಡಿಯಾಗಿ ಸೆರೆ ಹಿಡಿಯುತ್ತದೆ.

ಎರಡನೆಯ ಪದ್ಯದಿಂದ ಏಳನೆಯ ಪದ್ಯದ ವರೆಗೆ ಶಿವಶರಣರಲ್ಲಿ ತಮ್ಮ ಕಾರ್ಯಕ್ಷೇತ್ರಗಳಿಂದಾಗಿ ಮೇಲ್ಮಟ್ಟದ ಸ್ಥಾನಗಳನ್ನು ಅಲಂಕರಿಸಿರುವ ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮಯ್ಯ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ, ಮರುಳುಶಂಕರದೇವ, ಕಿನ್ನರಿಯ ಬೊಮ್ಮಯ್ಯ, ಏಲೇಶ್ವರದ ಕೇತಯ್ಯ ಹಾಗೂ ಗಾಣದ ಕನ್ನಪಯ್ಯ ಇವರುಗಳನ್ನು ಹೆಸರಿಸುತ್ತ ಕಾಲನನ್ನು

[illegible]

[illegible]

[illegible]

ನಿವಾರಿಸಿ, ಹರನಲ್ಲಿ ಒಂದಾದ ಆ ಶಿವಶರಣರಿಗೆಲ್ಲ ಶರಣಾರ್ಥಿಗಳನ್ನು ಸಲ್ಲಿಸುತ್ತಾನೆ, ಹೀಗೆ ಮಾಡುವಾಗ ಬಸವಣ್ಣ, ಸಿದ್ಧರಾಮಯ್ಯ ಮತ್ತು ಅಕ್ಕಮಹಾದೇವಿ ಇವರು ಶಿವಯೋಗಾಚರಣೆಯಲ್ಲಿ ಸಂಕೇತಿಸುವ ವಿವಿಧ ಅಂಶಗಳನ್ನು ಅವರವರಿಗೆ ಸಂಬಂಧಿಸಿದ ಪದ್ಯಗಳಲ್ಲಿ ಅಂತರ್ಗತವಾಗಿಸುತ್ತ ಅವರೆಲ್ಲರಿಗೆ ಶರಣಾರ್ಥಿಗಳನ್ನು ಸಲ್ಲಿಸಿರುವುದು ನಿರೂಪಣೆಯ ವಿಶೇಷತೆಯಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಪ್ರಭುಲಿಂಗಲೀಲೆಯಲ್ಲಿ ಚಾಮರಸ ಕೊಡಮಾಡಿರುವ ಪ್ರಾರ್ಥನೆ ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟವಾಗಿ ನಿಲ್ಲುತ್ತದೆ.

೨.೨ ವಚನಗಳು ಮತ್ತು ಪ್ರಭುಲಿಂಗಲೀಲೆ

ಶಿವಶರಣರ ವಚನಗಳು ಷಟ್ಸ್ಥಲಗಳ ಚೌಕಟ್ಟನ್ನು ಹೊಂದಿದ್ದು ಷಟ್ಸ್ಥಲಾಚರಣೆ ಎಂದರೆ ಶಿವಯೋಗಾಚರಣೆ ಎಂಬುದನ್ನು ನೋಡಿದ್ದೇವೆ. ಸುಸಂಬದ್ಧ ಸಂಕೇತಗಳ ಮಾಲೆಯಲ್ಲಿ ಕಥಾನಕವೊಂದನ್ನು ರೂಪಿಸಿಕೊಂಡು ಕಾವ್ಯದಲ್ಲಿ ಶಿವಯೋಗಾಚರಣೆಯನ್ನು ನಿರೂಪಿಸಿರುವ ಚಾಮರಸ ಅದಕ್ಕೆ ಸ್ವಾನುಭವವನ್ನೆಲ್ಲ ಧಾರೆಯೆರೆದಿದ್ದಾನೆ. ಅಷ್ಟಕ್ಕೇ ನಿಲ್ಲದ ಆತ ಪ್ರತಿ ಗತಿಗೂ ಶಿವಶರಣರ ವಚನಗಳನ್ನು ಸಾಕ್ಷಿಯಾಗಿಸಿದ್ದಾನೆ. ಕಾವ್ಯದಲ್ಲಿ ಬಹಳಷ್ಟು ಕಡೆಗೆ ವಿಷಯವನ್ನು ಷಟ್ಪದಿಗಳಲ್ಲಿ ಪರಿವರ್ತಿಸಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಗತಿಗೆ ಮೊದಲು ಕೊಟ್ಟ ವಚನಗಳಲ್ಲಿ ಅರ್ಧಕ್ಕಿಂತ ಹೆಚ್ಚು ಅಲ್ಲಮನ ವಚನಗಳಾಗಿರುವುದು ಒಂದು ವಿಶೇಷತೆ.

ಗತಿಯನ್ನು ಪ್ರಾರಂಭ ಮಾಡುವ ಸಂದರ್ಭದ ವಚನಗಳನ್ನು ಗಮನಿಸಿದರೆ ಆ ಗತಿಯಲ್ಲಿ ಕವಿ ಪ್ರಸ್ತುತಪಡಿಸಬಯಸುವ ವಿಷಯ ಸ್ಪಷ್ಟವಾಗುತ್ತದೆ. ಅಷ್ಟೊಂದು ಸಮಾನಾಂತರ ವಸ್ತುವನ್ನು ಅವು ಹೊಂದಿವೆ. ಶಿವಶರಣರ ವಚನಗಳಲ್ಲಿ ಊರ್ಧ್ವಗಮನವನ್ನು ಭಕ್ತಸ್ಥಳದಿಂದ ಪ್ರಾರಂಭಿಸುವ ಸಾಧಕ ಐಕ್ಯಸ್ಥಲದ ಕೊನೆಯ ವರೆಗೆ ನಿರ್ದಿಷ್ಟ ಗತಿಯಲ್ಲಿ ಕ್ರಮಿಸುವುದನ್ನು ಕಾಣಬಹುದು. ಭಕ್ತಸ್ಥಲದ ಪ್ರಥಮಾರ್ಧದಲ್ಲಿ ಮೂಡಿ ಬಂದಿರುವ ವಿಶ್ವೋತ್ಪತ್ತಿ ಮತ್ತು ಮಾಯಾವಿಲಾಸವಿಡಂಬನೆ ಇವುಗಳಿಗೆ ವಚನಕಾರರಲ್ಲಿ ಕಡಿಮೆ ಪ್ರಮಾಣದ ವ್ಯಾಪ್ತಿ ಗೋಚರಿಸುತ್ತದೆ. ಆದರೆ ಚಾಮರಸ ಅವುಗಳಿಗಾಗಿ ಕಾವ್ಯದ ಒಂದು ಮೂರಾಂಶದಷ್ಟು ಸುದೀರ್ಘವಾದ ಕ್ಷೇತ್ರವನ್ನು ಮೀಸಲಿರಿಸಿದ್ದಾನೆ.

ಮಂಗಲಾಚರಣ ಗತಿಯ ಮೊದಲ ಹದಿನಾರು ಪದ್ಯಗಳಲ್ಲಿ ಕವಿ ಪ್ರಾರ್ಥನೆ ಮತ್ತು ನಿವೇದನೆಗಳನ್ನು ಮುಗಿಸುತ್ತಾನೆ. ಮುಂದೆ ಗತಿಯ ವಸ್ತುವಿಗೆ ಸಾಕ್ಷಿಯಾಗಿರಿಸಿದ ಅಲ್ಲಮಪ್ರಭು ಮತ್ತು ಚೆನ್ನಬಸವಣ್ಣ ಇವರೀರ್ವರ ವಚನಗಳಲ್ಲಿರುವ ವಿಷಯವನ್ನೇ ಹದಿನೇಳನೆಯ ಪದ್ಯದಿಂದ ಗತಿಯ ಮುಕ್ತಾಯದ ವರೆಗೆ ನಿರೂಪಿಸುತ್ತಾನೆ. 'ಪಾರ್ವತೀ ಪರಮೇಶ್ವರ ಸಂವಾದದ ಗತಿ'ಯಲ್ಲಿ ವಸ್ತುವನ್ನು ಪ್ರತಿಪಾದಿಸುವುದಕ್ಕೆ ಮೊದಲು ಅವರ ಸಂವಾದವನ್ನು ಸೃಷ್ಟಿಸಿಕೊಂಡಿದ್ದಾನೆ. ನಂತರ ನಾಮ-ರೂಪು-ಕ್ರಿಯೆಗಳಿಗೆ ಒಳಗಾಗಿರುವ ದೇವಾಧಿದೇವಾತೆಗಳು, ರುದ್ರಗಣ, ಪ್ರಮಥಗಣ, ದೇವದಾನವರು, ಋಷಿಮುನಿಗಳು ಮುಂದಲಾದವರ ಉಪಸ್ಥಿತಿಯು ಶಿವನ ಒಡ್ಡೋಲಗದಲ್ಲಿರುವುದನ್ನು ತಿಳಿಸುತ್ತಾನೆ. ಈ ವಿಷಯವನ್ನು ಗತಿಗೆ ಆಯ್ದುಕೊಂಡಿರುವ ಅಲ್ಲಮಪ್ರಭುವಿನ ವಚನದಲ್ಲಿ ಕಾಣುತೇವೆ. ನಾಮ-ರೂಪು-ಕ್ರಿಯೆಗಳಿಗೆ ಕಾರಣವಾಗುವುದೇ ಪುರುಷ ಮತ್ತು ಪ್ರಕೃತಿಯರ ಸಂಮಿಳನ. ಇದನ್ನು ಕವಿ ವಿಷಯದ ಪ್ರಸ್ತಾವನೆಗೆ ಬಳಸುವುದರ ಜೊತೆಯಲ್ಲೇ ಕಾವ್ಯವನ್ನು ಮುನ್ನಡೆಸುವುದಕ್ಕೂ ಬಳಸಿದ್ದಾನೆ. ಸ್ಥೂಲಶರೀರದ ರೂಪದಲ್ಲಿ ಜನನವೆತ್ತಿ ಬರುವುದನ್ನು 'ಮಾಯೆ ಹುಟ್ಟಿದ ಗತಿ'ಯಲ್ಲಿ ಕಾಣುತ್ತೇವೆ. ಜೀವಾತ್ಮ ರೂಪು ಪಡೆದು, ಭುವಿಗೆ ಬಂದು ಬೆಳೆಯುತ್ತ ಹೋದಂತೆ ಅಂತಃಚೈತನ್ಯ ಸ್ಫುರಣಗೊಳ್ಳುವುದನ್ನು ಅಲ್ಲಿ ರೂಪಿಸಲಾಗಿದೆ. ಇದಕ್ಕೆ ಅಲ್ಲಮಪ್ರಭುವಿನ ಎರಡು ಅರ್ಥಪೂರ್ಣ ವಚನಗಳನ್ನು ಬಳಸಿಕೊಳ್ಳಲಾಗಿದೆ. ಬ್ರಹ್ಮನಿಂದ ಮೊದಲುಗೊಂಡು ಜೀವಿಗಳ ವರೆಗೆ ನಾಮ-ರೂಪು-ಕ್ರಿಯೆಗಳಿಗೆ ಕಾರಣವಾಗುವ ಮಾಯೆಯ ಉಪಕ್ರಮಗಳನ್ನು ಆ ವಚನಗಳಲ್ಲಿ ಕಾಣುತ್ತೇವೆ. ಎರಡನೆಯ ವಚನ ನಿರ್ಗುಣ ಪರಶಿವನು ನಾಮ-ರೂಪ-ಕ್ರಿಯೆಗಳಿಗಳಿಂದ ಅತೀತನಾಗಿದ್ದಾನೆಂದು ತಿಳಿಸುತ್ತ ಮುಕ್ತಾಯವಾಗುತ್ತದೆ.[೧೧೭] ಜೀವಿಯ ಗುರಿ ಮೋಕ್ಷ ಪಡೆಯುವುದಾಗಿದ್ದರೂ ಮಾಯೆಯ ಸೆಳವಿನಲ್ಲಿ ಸಿಲುಕಿ ಬಾಹ್ಯಾಚರಣೆಗಳಲ್ಲಿ ಮಾತ್ರ ತೊಡಗುವುದನ್ನು 'ಮಾಯೆ ಮಧುಕನಾಥನ ಪೂಜಿಸಿದ ಗತಿ'ಯಲ್ಲಿ ಕಾಣುತ್ತೇವೆ. ಇದಕ್ಕೆ ಸಾಕ್ಷಿಯಾಗಿ ಬಸವಣ್ಣನ ಮೂರು ವಚನಗಳನ್ನು ಬಳಸಿಕೊಳ್ಳಲಾಗಿದೆ. ಅವೆಲ್ಲ ಭಕ್ತಸ್ಥಲದ ವಚನಗಳು. 'ಪ್ರಭು ಮದ್ದಳೆಯ ಬಾರಿಸಿದ ಗತಿ' ಗೆ ಅಲ್ಲಮಪ್ರಭುವಿನ ಒಂದೇ ಒಂದು ವಚನವನ್ನು ಬಳಸಿಕೊಳ್ಳಲಾಗಿದ್ದು ಅದು ಅತ್ಯಂತ ಅರ್ಥಪೂರ್ಣವಾಗಿದೆ. ಜೀವಾತ್ಮನನ್ನು ತನ್ನಾಧೀನಕ್ಕೆ ತಂದುಕೊಂಡು ತಾರುಣ್ಯದಲ್ಲಿ ಸ್ಫುರಣಗೊಳ್ಳುವ ಮನಸ್ಸಿನ ಅಂತಃಚೇತನದ ಪ್ರತಿಕ್ರಿಯೆಗಳನ್ನು ಅದರಲ್ಲಿ ಕಾಣುತ್ತೇವೆ.[೧೧೮] ಈ ವಚನ 'ಮಾಯಾವಿಲಾಸವಿಡಂಬನಸ್ಥಲ'ದಲ್ಲಿದೆ. 'ವಿಮಳೆ ಬಂದ ಗತಿ'ಗೆ ಅಲ್ಲಮನ ಮೂರು ವಚನಗಳನ್ನು ಬಳಸಿಕೊಳ್ಳಲಾಗಿದ್ದು ಜೀವಿಯು ಭಕ್ತಿಗೆ ಎಳಸುವ ಬೌದ್ಧಿಕ ಒಲವನ್ನು ಅವುಗಳಲ್ಲಿ ಕಾಣುತ್ತೇವೆ.

[illegible]

ವೊದಲನೆಯ ವಚನ ಚಾಮರಸನ ಕಾವ್ಯದಲ್ಲಿ ಮಾತ್ರ ನೋಡಸಿಗುತ್ತದೆ. ಎರಡನೆಯ ವಚನ ಪಿಂಡಜ್ಞಾನ ಸ್ಥಲದಲ್ಲಿ ಸ್ಥಾನ ಪಡೆದಿದೆ. ಪಿಂಡಕ್ಕೆ ಜ್ಞಾನವಾಗುವುದನ್ನು ಕವಿ ವಿಮಳೆಯ ಸಂಕೇತದಲ್ಲಿ ಬಳಸಿಕೊಂಡಿರುವುದನ್ನು ನಾವೀಗಾಗಲೇ ನೋಡಿದ್ದೇವೆ, 'ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿ'ಗೆ ಅಲ್ಲಮನ ಮೂರು ವಚನಗಳನ್ನು ಬಳಸಿಕೊಳ್ಳಲಾಗಿದೆ. ವೊದಲ ವಚನದಲ್ಲಿ ಜೀವಾತ್ಮನ ಜನನಕ್ಕೆ ಕಾರಣವಾಗುವ ಅಂಶವಿದೆ, ಎರಡನೆಯದರಲ್ಲಿ ಪಿಂಡಕ್ಕೂ ಜೀವಾತ್ಮನಿಗೂ ತಾತ್ಪೂರ್ತಿಕ ಸಂಬಂಧ-ವೇರ್ಪಡುವುದರ ಸೂಚನೆ ಇದ್ದು ಕೊನೆಗೊಮ್ಮೆ ಆತ್ಮನು ಹುಟ್ಟು ಮುರಿದು ಮಡಿಕೆಯನೊಡೆದು ಹೋಗುವುದನ್ನು ಸೂಚಿಸಲಾಗಿದೆ.[119] ಮೂರನೆಯದರಲ್ಲಿ ಪರಶಿವ ನಾಮ-ರೂಪು-ಕ್ರಿಯೆಗಳಿಂದ ಅತೀತನೆಂದು ತಿಳಿಸಲಾಗಿದೆ. ವೊದಲ ವಚನ ಮಾಯಾವಿಲಾಸವಿಡಂಬನದಲ್ಲಿದೆ. ಉಳಿದೆರಡು ವಚನಗಳನ್ನು ಕಾವ್ಯದಲ್ಲಿ ಮಾತ್ರ ಕಾಣುತ್ತೇವೆ ಏಳನೆಯ ಗತಿಯಲ್ಲಿ ಇದಕ್ಕೆ ಸಮಾನಾಂತರವಾದ ವಿಷಯವನ್ನು ಚರ್ಚಿಸಿರುವುದನ್ನು ಈ ವೊದಲು ನೋಡಲಾಗಿದೆ. ಜನನದೊಂದಿಗೆ ಬೆನ್ನಿಗೆ ಬೀಳುವ ಮರೆವಿನ ಸಂಪುಟವನ್ನು ತೊಡೆದು ಹಾಕಲು ಹಾಗೂ ಗುರುವಿನ ಹಸ್ತಮಸ್ತಕಸಂಯೋಗದಲ್ಲಿ ಸಾಧಕವಾಗುವ ಅರಿವಿನ ಸಂಪುಟದ ಪ್ರಾರಂಭವನ್ನು ತಿಳಿಸಲು 'ಬಸವಾದಿ ಪ್ರಮಥರು ಧರೆಗಿಳಿದ ಗತಿ' ಮೀಸಲಾಗಿದೆ. ಇದಕ್ಕಾಗಿ ಮಡಿವಾಳ ಮಾಚಯ್ಯನ ಎರಡು ವಚನಗಳು ಬಳಕೆಯಾಗಿವೆ. ಬಸವಣ್ಣ ಭಕ್ತಿಯ ಪಥವನ್ನು, ಮುಕ್ತಿಯ ಭೇದವನ್ನು ಶರಣರಿಗೆ ಉಪದೇಶಿಸಿದನೆಂದು ಎರಡನೆಯ ವಚನದಲ್ಲಿ ತಿಳಿಸಲಾಗಿದೆ.[120] ಕಾವ್ಯದಲ್ಲಿ ಬಸವಣ್ಣ ಭವವನ್ನು ನೀಗಿ ಭಕ್ತನಾಗುವ ಸಾಧಕನನ್ನು ಸಂಕೇತಿಸುವವನಲ್ಲವೆ?

'ಪ್ರಮಥರು ಕಲ್ಯಾಣಕ್ಕೆ ಬಂದ ಗತಿ'ಯಲ್ಲಿ ಪೂರ್ವಾಶ್ರಯವನ್ನು ಕಳೆದ ಸಾಧಕರು ಲಿಂಗಾನುಸಂಧಾನದಲ್ಲಿ ತೊಡಗುವುದರ ನಿರೂಪಣೆ ಇದೆ. ಇದಕ್ಕೆ ಸರಿಸಮವಾಗಿರುವ ಅಲ್ಲಮನ ವಚನವೊಂದನ್ನು ಅಲ್ಲಿ ಕಾಣುತ್ತೇವೆ[121] 'ಮಹಾದೇವಿಯಕ್ಕನ ಗತಿ'ಯಲ್ಲಿ ಶರಣಸತಿಯನ್ನು ಸಂಕೇತಿಸುವ ಅಕ್ಕಮಹಾದೇವಿ ಭಕ್ತಿಗೆಳಸುವುದನ್ನು ನಿರೂಪಿಸಬೇಕಾಗಿದೆ. ಭಕ್ತ ಭವವನ್ನು ನೀಗುವ ಸಂಕೇತಕ್ಕನುಗುಣವಾಗಿ ಮಹಾದೇವಿಯಕ್ಕ ಕೌಶಿಕನನ್ನು ದೂರ ಮಾಡುತ್ತಾಳೆ. ಇದಕ್ಕೆ ಸಾಕ್ಷಿಯಾಗಿ ಅಕ್ಕಮಹಾದೇವಿಯ ನಾಲ್ಕು ವಚನಗಳು ಅಲ್ಲಿವೆ. ವೊದಲ ವಚನ ಭವವನ್ನು ನೀಗುವುದಕ್ಕೆ ಸಾಕ್ಷಿಯಾಗುತ್ತಿದ್ದರೆ ಎರಡನೆಯ ವಚನ ಲಿಂಗಪತಿಯನ್ನು ನಂಬುವುದಾಗಿದೆ. ಮೂರನೆಯ ವಚನದಲ್ಲಿ

[illegible]

[illegible]

ಅಂತರಂಗ ಶುದ್ಧಿಯನ್ನು ಮಾಡಿಕೊಂಡ ಸಾಧಕ ದೇಹಭಾವವನ್ನು ನಿಕೃಷ್ಟವಾಗಿ ಕಾಣುವುದಿದೆ. ನಾಲ್ಕನೆಯ ವಚನದಲ್ಲಿ ಸಾಧಕನಿಂದ ಲಿಂಗಾನುಸಂಧಾನಕ್ಕೆ ಎಳಸುವ ಉತ್ಕಟೇಚ್ಛೆ ವ್ಯಕ್ತವಾಗುತ್ತದೆ. 'ಗೊಗ್ಗಯ್ಯನ ಗತಿ'ಯಲ್ಲಿ ಕವಿ ಲಿಂಗಾನುಸಂಧಾನದ ದೀಕ್ಷಾಕ್ರಮವನ್ನು ತಿಳಿಸಬೇಕಾಗಿರುವುದರಿಂದ ಸಮಾನಾಂತರವಾದ ಎರಡು ವಚನಗಳನ್ನು ಬಳಸಲಾಗಿದೆ. ಮೊದಲನೆಯ ವಚನ ಪರವಸ್ತು ಲೋಕದಲ್ಲಿ ವಿವಿಧ ವಸ್ತುಗಳ ಅಸ್ತಿತ್ವಕ್ಕೆ ಕಾರಣವಾಗುವುದನ್ನು ತಿಳಿಸುತ್ತದೆ ಹಾಗೂ ಅದು ಅಗೋಚರವಾಗಿರುತ್ತದೆಂದು ತಿಳಿಸುತ್ತ ಕರಸ್ಥಲಕ್ಕೆ ಬಂದಾಗ ನಿರ್ವಿಕಾರಭಾವ ಒಡಮೂಡುತ್ತದೆಂದು ಸೂಚಿಸುತ್ತದೆ. ಎರಡನೆಯ ವಚನ ಗುರು ದೀಕ್ಷಾಸಮಯದಲ್ಲಿ ಅನುಸರಿಸುವ ಸಮಗ್ರ ಕ್ರಿಯೆಯನ್ನು ತೆರೆದಿಡುತ್ತದೆ. 'ಮುಕ್ತಾಯಿಯಕ್ಕನ ಗತಿ'ಯಲ್ಲಿ ಅಮನಸ್ಕ ಸ್ಥಿತಿಗೂ ಸಾಮಾನ್ಯ ಜೀವಭಾವಕ್ಕೂ ಇರುವ ವ್ಯತ್ಯಾಸವನ್ನು ನಿರೂಪಿಸಬೇಕಾಗಿರುವ ಕವಿ ಮೊದಲನೆಯ ಸ್ಥಿತಿಗೆ ಅಜಗಣ್ಣನನ್ನು ಹಾಗೂ ಎರಡನೆಯ ಸ್ಥಿತಿಗೆ ಮುಕ್ತಾಯಿಯಕ್ಕನನ್ನು ಸಂಕೇತಿವಾಗಿಟ್ಟು ಕೊಂಡಿರುವುದನ್ನು ನೋಡಿದ್ದೇವೆ. ಅಲ್ಲಿಯ ವಚನಗಳು ಇದಕ್ಕೆ ಸಮಾನಾಂತರವಾಗಿ ಮೂಡಿ ಬಂದಿವೆ. ಮೊದಲನೆಯ ವಚನ ಎರಡೂ ಅವಸ್ಥೆಗಳ ವ್ಯತ್ಯಾಸ ತಿಳಿಸುತ್ತದೆ ಹಾಗೂ ಎರಡನೆಯ ವಚನ ಆ ಅವಸ್ಥೆಗಳ ಅರಿವು ಮೂಡಿದಾಗ ಉಂಟಾಗುವ ಧನ್ಯತೆಯನ್ನು ಮೂಡಿಸುತ್ತದೆ. ವಿವಿಧ ಶಕ್ತಿಗಳನ್ನು ಆರಾಧಿಸಿದ ವ್ಯಕ್ತಿ ಪಡೆದುಕೊಂಡ ಸಿದ್ಧಿಗಳನ್ನು ತನ್ನ ಪ್ರತಿಷ್ಠೆಯ ರೂಪದಲ್ಲಿ ಕಾಣುವವನನ್ನು ಸಿದ್ಧರಾಮ ಸಂಕೇತಿಸುತ್ತಾನೆಂಬುದನ್ನು ನೋಡಿದ್ದೇವೆ. ಗುರು ಅವನ ಅಹಂಕಾರವನ್ನು ತೆಗೆದು ಹಾಕಿ ಸುಜ್ಞಾನೋದಯವಾಗುವಂತೆ ಮಾಡುವುದು 'ಸಿದ್ಧರಾಮನ ಗತಿ'ಯ ವಸ್ತು. ಈ ಗತಿಯ ನಿರೂಪಣೆಗೆ ಸರಿಜೋಡಿಯಾಗಿರುವ ಐದು ವಚನಗಳು ಅಲ್ಲಿ ಬಳಕೆಯಾಗಿವೆ. ಮೊದಲನೆಯ ವಚನದಲ್ಲಿ ಅಷ್ಟಮದಗಳು ಮೃತ್ಯುವಿಗೆ ದಾರಿ ಮಾಡುತ್ತವೆಂದು ತಿಳಿಸಲಾಗಿದೆ. ಎರಡನೆಯ ವಚನದಲ್ಲಿ ಲಿಂಗಾನುಸಂಧಾನದ ಪರಿಣಾಮ ಗೋಚರಿಸುತ್ತದೆ. ಅರಿವು ತೋರಿದಾಗ ನಾಮ–ರೂಪು–ಕ್ರಿಯೆಗಳಿಂದಾದ ಮಾಯೆಯ ಕುರುಹು ನಷ್ಟವಾಗುತ್ತದೆಂದು ತಿಳಿಸುವ ಮೂರನೆಯ ವಚನದಿಂದ ಕಾಯ ಜೀವದ ಹೊಲಿಗೆಯನ್ನು ಬಿಚ್ಚುವುದು ಶರಣರಿಗೆ ಸಾಧ್ಯವೆನ್ನುವ ಮಾತು ತಿಳಿದು ಬರುತ್ತದೆ. ನಾಲ್ಕನೆಯ ವಚನ ಕಾಯ–ಜೀವದ ಹೊಲಿಗೆಯನ್ನು ಬಿಚ್ಚುವ ದಾರಿ ತೋರಿಸುವುದು ಗುರುವಿನ ಕೆಲಸವೆಂದು ತಿಳಿಸುತ್ತದೆ. ಐದನೆಯ ವಚನದಲ್ಲಿ ಅಂತರಂಗಾಚರಣೆಯ ವಿಧಿವಿಧಾನದ ವಿವರಣೆ ಇದೆ. ಈ ಎಲ್ಲದರ ಒಟ್ಟು ಸಾಂಕೇತಿಕ ನಿರೂಪಣೆಯನ್ನು 'ಸಿದ್ಧರಾಮನ ಗತಿ'ಯಲ್ಲಿ ಕಾಣುತ್ತೇವೆ.

[illegible]

'ಇಷ್ಟಲಿಂಗದ ಗತಿ'ಯಲ್ಲಿ ಮೊದಲ ಹಂತದ ಅಂತರಂಗಾಚರಣೆಯನ್ನು ನಿರೂಪಿಸಿರುವ ಕವಿ ಅದಕ್ಕೆ ಪೂರಕವಾಗಿರುವ ನಾಲ್ಕು ವಚನಗಳನ್ನು ಬಳಸಿಕೊಂಡಿದ್ದಾನೆ. ಈ ಆಚರಣೆಯ ಯಾವುದೇ ರೀತಿಯ ಸ್ಪರ್ಶವನ್ನು ಹೊಂದಿರದ ಲೋಕಜೀವಿಗಳ ಮುಂದೆ ಅದು ಹೇಳಲಾಗದ ಅನುಭವವೆಂದು ಮೊದಲ ವಚನ ತಿಳಿಸುತ್ತದೆ. ಶಿವಶರಣರು ಸಾವನರಿದು ಲೋಕಪ್ರಪಂಚವನ್ನು ಮರೆದು ಲಿಂಗದಲ್ಲಿಯೇ ನೆಲೆಗೊಂಡಿರುತ್ತಾರೆಂಬುದನ್ನು ಎರಡನೆಯ ವಚನದಲ್ಲಿ ಕಾಣುತ್ತೇವೆ. ಅಹಂಕಾರವಿರುವಲ್ಲಿ ಅಂತಾರಂಗಾಚರಣೆ ಸಾಧಿಸುವುದಿಲ್ಲವೆಂದು ತಿಳಿಸುವ ಮೂರನೆಯ ವಚನದ ಶಬ್ದ ಜೋಡಣೆಯೂ ಸಾಂಕೇತಿಕತೆಯನ್ನು ಮರೆಯುತ್ತದೆ.[೧೨೨] ಮನಕ್ಕೆ ಮನ ಸಾಕ್ಷಿಯಾಗಿ ಬದುಕುವ ಶರಣರಲ್ಲಿ ಪರಶಿವನಿರುತ್ತಾನೆಂದು ನಾಲ್ಕನೆಯ ವಚನ ತಿಳಿಸುತ್ತದೆ. ಇದಕ್ಕೆ ಸರಿಜೋಡಿಯಾಗಿ ಇಷ್ಟಲಿಂಗದ ಗತಿ ರೂಪುಗೊಂಡಿದೆ.

ಕೇವಲ ಇಪ್ಪತ್ತಾರು ಪದ್ಯಗಳನ್ನು ಒಳಗೊಂಡಿರುವ 'ಮಹಾದೇವಿಯಕ್ಕನಿಗೆ ಪ್ರಭು ಪ್ರಸನ್ನವಾದ ಗತಿ'ಗೆ ಬಳಸಿಕೊಳ್ಳಲಾದ ವಚನಗಳ ಸಂಖ್ಯೆ ಹದಿನೈದು! ತಾನು ನಿರೂಪಿಸಬಯಸುವ ವಸ್ತುವಿಗೆ ಕವಿ ಗರಿಷ್ಠ ಮಟ್ಟದ ಸಾಕ್ಷಿ ಒದಗಿಸುವ ಪ್ರಯತ್ನದಲ್ಲಿ ಇಷ್ಟೆಲ್ಲ ವಚನಗಳು ಬಳಕೆಯಾಗಿವೆ. ದೀಕ್ಷಾರ್ಹ ಜೀವಿಯನ್ನು ಸಂಕೇತಿಸುವ ಅಕ್ಕಮಹಾದೇವಿ ಈಗಾಗಲೇ ಭವವನ್ನು ನೀಗಿ ಭಕ್ತೆಯಾಗಿದ್ದಾಳೆ. ಇಷ್ಟಲಿಂಗೋಪಾಸನೆಯ ನಂತರ ಅವಳು ಭಾವಬೆತ್ತಲೆ ಮಾಡಿಕೊಂಡಿರುವುದನ್ನು ಸಾಧಕ ಬಳಗಕ್ಕೆ ಪ್ರಕಟಪಡಿಸುವುದರ ಜೊತೆಗೆ ಆ ವ್ಯಕ್ತಿ ಭಾವಲಿಂಗೋಪಾಸನೆ ಮಾಡುತ್ತ ಲಿಂಗಾಂಗಸಾಮರಸ್ಯ ಸಾಧಿಸಿದುದನ್ನು ನಿರೂಪಿಸಬೇಕಾಗಿದೆ. ಇದಕ್ಕೆ ಸಾಕ್ಷಿಯಾಗಿ ಬಳಸಿದ ವಚನಗಳನ್ನು ಪರಿಶೀಲಿಸಬಹುದು.[೧೨೩] ಅಕ್ಕಮಹಾದೇವಿಯವೇ ಮೊದಲ ಐದು ವಚನಗಳಿವೆ. ಪಂಚೇಂದ್ರಿಯಗಳ ಬದುಕನ್ನು ತಿರಸ್ಕರಿಸಿ ಅನುಸಂಧಾನದಲ್ಲಿ ಸಾಗುತ್ತ ಆಸೆ ಆಮಿಷಗಳನ್ನುಳಿದು ಅಂತರಂಗದ ಕಲ್ಯಾಣವ ಹೊಕ್ಕು ಬೆರಸಬೇಕು, ಶಿವಾನುಭಾವಿಗಳ ಸಂಗದಲ್ಲಿ ಶಿವನೊಲುಮೆಯನ್ನು ಪಡೆದುಕೊಳ್ಳಬೇಕು ಹಾಗೂ ಲೋಕಜೀವಿಗಳಿಗೆ ಎರವಾಗುವ ಹಣೆಯ ಲಿಖಿತವನ್ನು ತೊಡೆದು ಹಾಕಬೇಕು ಎಂಬ ಧ್ವನಿ ಆ ವಚನಗಳಲ್ಲಿದೆ. ಇವುಗಳ ನಂತರ ಬರುವ ಬಸವಣ್ಣನ ಎರಡು ವಚನಗಳಲ್ಲಿ ಸರ್ವಸಂಗಪರಿತ್ಯಾಗಿಯಾಗಿ ಅಂತರಂಗ ಬಹಿರಂಗಗಳನ್ನು ಸಮನ್ವಯಗೊಳಿಸಿ ಪರಶಿವನಲ್ಲಿ ಸಮರಸವಾಗುವ ಶರಣಸತಿಗೆ ಗುರುವಿನ ಮಾರ್ಗದರ್ಶನ ಅವಶ್ಯವೆಂಬ ಧ್ವನಿ ವ್ಯಕ್ತವಾಗುತ್ತದೆ. ಇನ್ನು ಮುಂದೆ ಬರುವ ವಚನಗಳೆಲ್ಲ ಶರಣಸತಿಯ

[illegible]

ಅಂತರಂಗಾಚರಣೆಯನ್ನು ಗರಗಸದಿಂದ ಕೊಯ್ದು ನೋಡುವಂಥವುಗಳು.[೧೨೪] ಈ ಪರೀಕ್ಷೆಯಲ್ಲಿ ಪುಟಕ್ಕಿಟ್ಟ ಚಿನ್ನದಂತೆ ಹೊಳೆಯುವ ಸಾಧನೆಯನ್ನು ಕಾಣುವ ಗುರು 'ಉಭಯಸಂಗವಳಿದು, ತಾನು ತಾನಾಗಿ ಕದಳಿಯ ತಳದಲ್ಲಿ ತೊಳಗಿ ಬೆಳಗುವ ಜ್ಯೋತಿಯಲ್ಲಿಗೆ ನಡೆದು ಪರಶಿವನಲ್ಲಿ ಒಂದಾಗುವುದನ್ನು ಸಾಧಕನಿಗೆ ಕರುಣಿಸುತ್ತಾನೆ' ಎಂದು ಕೊನೆಯ ವಚನ ತಿಳಿಸುತ್ತದೆ. ಈ ರೂಪದ ಸಾಂಕೇತಿಕ ನಿರೂಪಣೆಯಿಂದ ಸ್ವಲ್ಪವೂ ದೂರ ಸರಿಯದೆ ಸಂಬಂಧಿಸಿದ ಗತಿ ರೂಪಿತವಾಗಿದೆ.

ಪ್ರಾಣಲಿಂಗಾಚರಣೆಯನ್ನು ನೇರವಾಗಿ ನಿರೂಪಿಸಲು ರಚಿಸಲ್ಪಟ್ಟಿರುವ 'ಸಾಧಕಾಂಗದ ಗತಿ'ಗೆ ಪೂರಕವಾಗುವ ಹದಿಮೂರು ವಚನಗಳು ಅಲ್ಲಿವೆ. ವಚನಗಳ ಒಟ್ಟಭಿಪ್ರಾಯ ಹಾಗೂ 'ಗತಿ'ಯ ವಸ್ತು ಒಂದೇ ಆಗಿರುವುದನ್ನು ಅಲ್ಲಿ ಕಾಣಬಹುದು. ಕಾಯ-ಜೀವ-ಪ್ರಾಣ ಈ ತ್ರಿವಿಧ ಸಂಬಂಧವನ್ನು ಅರಿತು ಒಳಗೇ ತೊಳೆಯುತ್ತ ನವಚಕ್ರಗಳಲ್ಲಿ ಕ್ರಮಿಸುವುದು ಬಯಲು ಬಯಲನ್ನು ಕೂಡಿದಂತೆಂದು ಮೊದಲ ಮೂರು ವಚನಗಳು ತಿಳಿಸುತ್ತವೆ. ತನುವೇ ಲಿಂಗವಾಗಿ, ಮನವೇ ಪುಷ್ಪವಾಗಿ ಭಾವಲಿಂಗಾಚರಣೆ ನಡೆಯಬೇಕೆಂದು ಮುಂದಿನ ಮೂರು ವಚನಗಳ ಇಂಗಿತವಾಗಿದೆ. ಶರಣನಾದವನು ಪ್ರಾಣಲಿಂಗಸಂಬಂಧಿಯೆಂದು ತಿಳಿಸುತ್ತ ಸುತ್ತಿ ಸುಳಿವ ಮನವನ್ನು ಚಿತ್ತದಲ್ಲಿ ನಿಲ್ಲಿಸುವಾತನಿಗೇ ಲಿಂಗೈಕ್ಯ ಸಾಧಿಸುತ್ತದೆಂಬುದು ಏಳು ಮತ್ತು ಎಂಟನೆಯ ವಚನಗಳಿಂದ ತಿಳಿದು ಬರುತ್ತದೆ. ಒಕ್ಕು-ಮಿಕ್ಕ ಪ್ರಸಾದವನ್ನು ಸೇವಿಸಿ, ಕಾಲವನ್ನು ಕೊಂದು, ಕಾಮನನ್ನು ತಿಂದು ಸ್ಥೂಲ-ಸೂಕ್ಷ್ಮ-ಕಾರಣಗಳನ್ನು ಸುಟ್ಟಾತನಿಗೇ ಪರಶಿವನಲ್ಲಿ ಒಂದಾಗುವುದು ಸಾಧ್ಯವೆಂದು ಮುಂದಿನ ಎರಡು ವಚನಗಳು ತಿಳಿಸುತ್ತವೆ. ಹೀಗೆ ತನು-ಮನ-ಪ್ರಾಣಗಳನ್ನು ಏಕೀಭವಿಸಿ ಒಲೆಯಲ್ಲಿ ಅಟ್ಟು ಉಣ್ಣದೆ ತಲೆಯಲ್ಲಿಯೇ ಅಟ್ಟುಣಬೇಕೆಂದು ಕೊನೆಯ ಎರಡು ವಚನಗಳು ತಿಳಿಸುತ್ತವೆ. ಈ ಅಭಿಪ್ರಾಯವನ್ನೇ ಕವಿ ಪದ್ಯಗಳಲ್ಲಿ ರೂಪಾಂತರಿಸಿದ್ದಾನೆ. ಸಿದ್ಧರಾಮನನ್ನು ಸಂಕೇತಿಸುವವರಂತೆ ಗೋರಕ್ಷನನ್ನು ಸಂಕೇತಿಸುವವರೂ ಲಿಂಗಾನುಸಂಧಾನದ ಮಾರ್ಗದಲ್ಲಿರದೆ ಕಾಕು-ಪೋಕು ವಿದ್ಯೆಗಳನ್ನು ನಂಬಿ ಅವುಗಳನ್ನೇ ಸರ್ವಸ್ವ ಮಾಡಿಕೊಂಡಿರುತ್ತಾರೆ. ಅವರು ಪಂಚೇಂದ್ರಿಯಗಳಿಗೆ ಬಲಿಯಾಗುವವರೆಂದೂ ಮೃತ್ಯುವಿನ ಬಾಯ ತುತ್ತಾಗುವವರೆಂದೂ ಕವಿಯ ಅಭಿಪ್ರಾಯ. ಅಂತೆಯೇ 'ಸಿದ್ಧರಾಮನ ಗತಿ'ಗೆ ಸಾಕ್ಷಿಯಾಗಿರಿಸಿದ ವಚನವನ್ನೇ 'ಗೋರಕ್ಷನ ಗತಿ'ಗೂ ಸಾಕ್ಷಿಯಾಗಿಸಿದ್ದಾನೆ. ಅಂಥವರ ಸಾಧನೆ ಯೋಗವಲ್ಲವೆಂದು ಸೂಚಿಸುತ್ತ ಶಿವಶರಣರು ಹೊಂದುವ ನಿಜಸಹಜಸಮಾಧಿಯೇ ನಿಜವಾದ ನಿಧಿಯೆಂದು ಪ್ರಸ್ತುತ ಗತಿಗೆ

ಬಳಸಿದ ಎರಡನೆಯ ವಚನದಲ್ಲಿ ತಿಳಿಸಲಾಗದೆ. ಈ ಅಭಿಪ್ರಾಯವನ್ನೇ ಕಥಾನಕದಲ್ಲಿ ರೂಪಾಂತರಿಸುತ್ತ ಕವಿ ಗೋರಕ್ಷನ ಗತಿಯನ್ನು ರೂಪಿಸಿದ್ದಾನೆ. 'ಮುನಿಗಳಿಗೆ ಬೋಧಿಸಿದ ಗತಿ'ಗೆ ಬಳಸಿದ ಮೂರೂ ವಚನಗಳು ಮಹೇಶ್ವರ ಸ್ಥಲಕ್ಕೆ ಸಂಬಂಧಿಸಿದವುಗಳಾಗಿದ್ದು ಅವು ನೀತಿಯನ್ನೇ ಬಿಂಬಿಸುತ್ತವೆ. ಲೋಕದ ಕಣ್ಣಿಗೆ ಸರ್ವಸಂಗಪರಿತ್ಯಾಗಿಗಳಂತೆ ತೋರುತ್ತ ಆಂತರ್ಯದಲ್ಲಿ ಪಂಚೇಂದ್ರಿಯಗಳಿಗೆ ಶರಣಾಗುವವರಿಗೆ ಇರುವ ಪ್ರಭುವಿನ ಬೋಧನೆ ಪ್ರಸ್ತುತ ಬಳಸಿದ ವಚನಗಳಲ್ಲಿ ತಿಳಿಸಿದ ನೀತಿಯೇ ಆಗಿದೆ. 'ಬಸವೇಶ್ವರನು ಶೂನ್ಯಸಿಂಹಾಸನವನ್ನು ರಚಿಸಿದ ಗತಿ'ಗೆ ಬಳಸಿದ ಎರಡು ವಚನಗಳು, 'ಪ್ರಭುದೇವರು ಶೂನ್ಯಸಿಂಹಾಸನ ವೇಱಿದ ಗತಿ'ಗೆ ಬಳಸಿದ ಏಳು ವಚನಗಳು ಹಾಗೂ 'ಪ್ರಭುದೇವರು ಆರೋಗಣೆ ಮಾಡಿದ ಗತಿ'ಗೆ ಬಳಸಿದ ಏಳು ವಚನಗಳು ಇವುಗಳಲ್ಲಿ ಯಾವುದೂ ಷಟ್ಸ್ಥಲ ವಚನ ಸಂಕಲನಗಳಲ್ಲಿ ಕಂಡು ಬರುವುದಿಲ್ಲ. ಆಯಾಗತಿಗೆ ವಚನಗಳನ್ನು ಸಾಕ್ಷಿಯಾಗಿಸುತ್ತ ಬಂದ ಕಾರಣದಿಂದಾಗಿ ಅವೆಲ್ಲವುಗಳಲ್ಲಿ ವಚನಗಳ ಬಳಕೆಯೇನೋ ಆಗಿದೆ. ಅವು ಕಾಣಬರುವುದು ಶೂನ್ಯಸಂಪಾದನೆಗಳಲ್ಲಿ ಮಾತ್ರ . ಆದರೆ ಆಯಾ ಗತಿಗೆ ಬಳಸಿದ ವಚನಗಳ ಒಟ್ಟಾಭಿಪ್ರಾಯವೇ ಆಯಾ ಗತಿಯ ವಸ್ತುವಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. 'ಮನೋಲಯದ ಗತಿ'ಗೆ ಬಳಸಿದ ನಾಲ್ಕು ವಚನಗಳಲ್ಲಿ ಮೂರು ಐಕ್ಯ ಸ್ಥಲದಲ್ಲಿವೆ. ಉಪದೇಶರೂಪದ ಇನ್ನೊಂದು ವಚನ ಮಹೇಶ್ವರಸ್ಥಲದಲ್ಲಿದೆ. ಅವುಗಳಲ್ಲಿರುವುದು 'ನಿಶ್ಯಬ್ದಂ ಬ್ರಹ್ಮ ಉಚ್ಯತೇ' ಎಂಬ ಪರಶಿವನ ಸ್ಥಿತಿ ಮಾತ್ರ. ಭಾವಲಿಂಗಾಚರಣೆಯ ಈ ಅಂತಿಮ ಹಂತವನ್ನು ನಿರೂಪಿಸಲು ಕವಿ 'ಮನೋಲಯದ ಗತಿ'ಯನ್ನು ಆಯ್ದುಕೊಂಡಿದ್ದಾನೆ. 'ಪರಮೇಶ್ವರನು ಗಿರಿಜೆಗೆ ಬೋಧಿಸಿದ ಗತಿ'ಗೆ ಬಳಸಿದ ಎರಡು ವಚನಗಳಲ್ಲಿ ಮೊದಲನೆಯದು ವಚನ ಸಂಗ್ರಹಗಳಲ್ಲಿ ದೊರೆಯುವುದಿಲ್ಲ. ಸ್ವಲ್ಪ ಮಾರ್ಪಾಟು ಹೊಂದಿದ ಎರಡನೆಯ ವಚನದ ತಾತ್ಪರ್ಯ ಐಕ್ಯನ ಐಕ್ಯಸ್ಥಲಕ್ಕೆ ಹೊಂದುತ್ತದೆ. ಆದರೆ ಯಾವುದೇ ಮಾರ್ಪಾಟು ಇಲ್ಲದ ರೂಪದಲ್ಲಿ ಅದು ವಚನಸಂಗ್ರಹಗಳಲ್ಲಿ ಶರಣಸ್ಥಲದಲ್ಲಿ ಸ್ಥಾನ ಪಡೆದುಕೊಂಡಿದೆ. ಭವವನ್ನು ಗೆದ್ದ ವೀರನು ಶರಣನಾಗಿ, ಶಿವತ್ವದಲ್ಲಿ ಒಂದಾಗಿ ವೀರಶೈವನಾಗುವ ಕ್ರಿಯೆ ವಚನಗಳಲ್ಲಿದ್ದಂತೆ ಕಾವ್ಯದ ಕೊನೆಯ ಗತಿಯಲ್ಲಿಯೂ ನಿರೂಪಿತವಾಗಿದೆ.

ಅಲ್ಲಮಪ್ರಭುಸಂಪ್ರದಾಯವನ್ನು ಕವಿ ನಿರೂಪಿಸಲು ಹೊರಟಿದ್ದಾನೆ. ಅಂತರಂಗ–ಬಹಿರಂಗಗಳನ್ನು ಸಮನ್ವಯಗೊಳಿಸುವ ಈ ಸಂಪ್ರದಾಯ ಷಟ್ಸ್ಥಲಾಚರಣೆಯಾಗಿದೆ.

[illegible]

[illegible]

ಗುಹೇಶ್ವರಲಿಂಗದಲ್ಲಿ ಒಂದಾಗುವ ಈ ಕ್ರಿಯೆಯನ್ನು ಕಾವ್ಯರೂಪಕ್ಕಿಳಿಸಿರುವ ಕವಿ ಅದರ ಸಮರ್ಥನೆಗಾಗಿ ಶಿವಶರಣರ ವಚನಗಳನ್ನು ಬಳಸಿದ್ದಾನೆ.

ಈಗಲೂ ಕವನಗಳನ್ನು ಬರೆಯುವ ಮೊದಲು ಕವಿಗಳು ಆಯಾ ಕವನಗಳಲ್ಲಿರುವ ವಸ್ತುವನ್ನು ಸಮರ್ಥಿಸಲು ಇನ್ನಿತರ ಉಕ್ತಿಗಳನ್ನು ಬಳಸುವುದನ್ನು ನೋಡುತ್ತೇವೆ. ನವ್ಯ ಕವಿಗಳಲ್ಲಿ ಇದು ಆಗಾಗ ಕಂಡು ಬರುತ್ತದೆ. ಆಂಗ್ಲ ಕವಿ ಟಿ. ಎಸ್. ಎಲಿಯೆಟ್ ತನ್ನ ಕವನಸಂಗ್ರಹವೊಂದರಲ್ಲಿ 'ದಿ ವೇಸ್ಟಲ್ಯಾಂಡ' ಮತ್ತು ಇತರ ಕವನಗಳನ್ನು ಪ್ರಾರಂಭಿಸುವುದಕ್ಕೆ ಮೊದಲು ಇಂಥ ಆಧಾರಗಳನ್ನು ಬಳಸಿಕೊಂಡಿದ್ದಾನೆ. ದಿ ವೇಸ್ಟಲ್ಯಾಂಡ ಕವನದ ಪ್ರತಿಯೊಂದು ಭಾಗವನ್ನು ಪ್ರಾರಂಭಿಸುವ ಮೊದಲೂ ಅವನು ಆ ಪದ್ಧತಿಯನ್ನು ಅನುಸರಿಸಿದ್ದಾನೆ. [೧೨೫]

೨. ಶಿವಯೋಗದ ಹೆಜ್ಜೆಗಳು

ಪ್ರಭುಲಿಂಗಲೀಲೆಯಲ್ಲಿ ವಸ್ತುವನ್ನು ನಿರೂಪಿಸುವ ಘಟ್ಟಗಳು ಹೀಗಿವೆ. ನಿರ್ಗುಣನಿರಾವಲಂಬದಿಂದ ಹೊರಬಂದು ನಾಮ-ಕ್ರಿಯೆಗಳನ್ನು ಹೊತ್ತುಕೊಂಡ ಜೀವನು ಪರಶಿವನಲ್ಲಿ ಒಂದಾಗಲು ಒಲವು ತೋರುವುದು; ದೀಕ್ಷೆಯ ಸಿದ್ಧತೆಗೆ ಪೂರ್ವಭಾವಿಯಾಗಿ ಪಂಚೇಂದ್ರಿಯಗಳನ್ನು ತಟಸ್ಥಗೊಳಿಸುವುದು; ಶಿವಸ್ವರೂಪಿ ಗುರುವಿನಿಂದ ದೀಕ್ಷೆಯನ್ನು ಪಡೆದುಕೊಳ್ಳುವುದು; ಲಿಂಗಾನುಸಂಧಾನದಲ್ಲಿ ಕ್ರಮಿಸುವುದು; ಇಷ್ಟ-ಪ್ರಾಣ-ಭಾವಲಿಂಗಾಚರಣೆಗಳ ರೂಪದಲ್ಲಿ ಆಯತ, ಸ್ವಾಯತ, ಸನ್ನಿಹಿತಗಳನ್ನು ಸಾಧಿಸುವುದು ಹಾಗೂ ಜೀವಾತ್ಮನು ಪರಮಾತ್ಮನಲ್ಲಿ ಒಂದಾಗುವುದು. ಈ ಎಲ್ಲ ಕ್ರಿಯೆಗಳಲ್ಲಿ ದೀಕ್ಷಿತನಾಗುವುದು ಅತ್ಯಂತ ಪ್ರಮುಖವಾಗಿದ್ದು ಅದು ಲೌಕಿಕಕ್ಕೂ ಅಧ್ಯಾತ್ಮಕ್ಕೂ ಕವಲುದಾರಿಯನ್ನು ಕಲ್ಪಿಸುವಂಥದ್ದಾಗಿದೆ. ದೀಕ್ಷಾಕ್ರಿಯೆಯಲ್ಲಿ ಭಾಗಿಯಾಗುವ ಗುರುಶಿಷ್ಯರನ್ನು ಪರುಷಮಣಿ ಹಾಗೂ ಕಬ್ಬಿಣಕ್ಕೆ ಹೋಲಿಸುತ್ತಾರೆಂಬುದನ್ನು ನೋಡಿದ್ದೇವೆ. ಅತ್ಯಂತ ಅಚ್ಚು ಮೆಚ್ಚಿನದಾಗಿರುವ ಈ ದೃಷ್ಟಾಂತವನ್ನು ಎಷ್ಟು ಬಳಸಿದರೂ ಕವಿಗೆ ತೃಪ್ತಿಯಿಲ್ಲ. ಯಾವ ಸಂಕೋಚವೂ ಇಲ್ಲದೆ ಚಾಮರಸ ಅದನ್ನಿಲ್ಲಿ ಪುನಃ ಪುನಃ ಬಳಸಿದ್ದಾನೆ. ವಿವಿಧ ಗತಿಗಳಲ್ಲಿ ಅದು ಏಳು ಬಾರಿ ಬಳಕೆಯಾಗಿದೆ[೧೨೬] ಹಾಗೂ ಮೂರು ಬಾರಿ ಗತಿಗಳಿಗೆ ಬಳಸಿದ ವಚನಗಳಲ್ಲಿ ಅಂತರ್ಗತವಾಗಿದೆ.[೧೨೭] ಗುರುರೂಪದ ಅಲ್ಲಮಪ್ರಭು ಗೊಗ್ಗಯ್ಯನಿಗೆ, ಮುಕ್ತಾಯಿಗೆ, ಸಿದ್ಧರಾಮನಿಗೆ, ಮಹಾದೇವಿಯಕ್ಕನಿಗೆ,

[illegible]

[illegible]

[illegible]

[illegible]

ಗೋರಕ್ಷನಿಗೆ ಹಾಗೂ ಮುನಿಗಳಿಗೆ ಬೋಧಿಸುವ ನೇರ ಕ್ರಿಯೆ ಕಾವ್ಯದಲ್ಲಿದೆ. ಸಾಧಕ ಯಾವ ಸ್ಥಲದಲ್ಲಿದ್ದಾನೆಂಬುದನ್ನು ಲಕ್ಷಿಸುತ್ತ ಅಲ್ಲಿಂದ ಮುಂದಿನ ದಾರಿಗೆ ಅಲ್ಲಮ ಮಾರ್ಗದರ್ಶಿಯಾಗುವುದನ್ನು ಕಾಣುತ್ತೇವೆ. ಹೀಗಾಗಿ ಎಲ್ಲರ ಪ್ರಸಂಗಗಳಲ್ಲಿಯೂ ಒಂದೇ ವಿಧದ ದೀಕ್ಷಾಕ್ರಿಯೆ ಹಾಗೂ ಅದರ ಪರಿಣಾಮ ಇರುವುದಿಲ್ಲ.

ಕವಿಸಮಯದ ರೂಪದಲ್ಲಿ ಉಪಯೋಗಿಸಲ್ಪಡುತ್ತ ಬಂದಿರುವ ಇದಕ್ಕೆ ಚಾಮರಸನಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ಕಾವ್ಯನಿರೂಪಣೆಯಲ್ಲಿ ಮಹತ್ವದ ಅಂಗದಂತೆ ಬಳಕೆಯಾಗಿರುವ ಈ ಅಲಂಕಾರವು ಗುರುವಿನ ಅತ್ಯುನ್ನತ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಲೋಹಗಳೆಲ್ಲ ಪರುಷಮಣಿಯ ಸ್ಪರ್ಶಮಾತ್ರದಿಂದ ಚಿನ್ನವಾಗಿ ಬಿಡುತ್ತವೆ. ಆಯಾ ಲೋಹಗಳ ನಡುವೆ ಮೇಲುಕೀಳು ಇರಬಹುದಾದರೂ ಅಂತಿಮವಾಗಿ ಚಿನ್ನವಾಗಿ ಪರಿವರ್ತಿತವಾದಾಗ ಯಾವ ವ್ಯತ್ಯಾಸವೂ ಉಳಿದಿರುವುದಿಲ್ಲ. ಲೋಕಜೀವಿಗಳಲ್ಲಿ ಅವರವರ ಮಾನಸಿಕ ನಿರ್ಧಾರಕ್ಕೆ ಅನುಗುಣವಾಗಿ ಅವರು ಗುರುವಿನ ಸಂಪರ್ಕದಲ್ಲಿ ಬರುವ ಸಾಧ್ಯತೆ ಇರುತ್ತದೆ. ಸಮರ್ಥ ಗುರುವಿನಿಂದ ಶಿವಯೋಗದ ದೀಕ್ಷೆ ಪಡೆದವರು ತನುಗುಣಗಳಿಂದ ದೂರವಾಗಿ ಲಿಂಗಾನುಸಂಧಾನದಲ್ಲಿ ಮುಂದುವರೆದು ಜೀವಾತ್ಮ-ಪರಮಾತ್ಮರ ಐಕ್ಯವಾಗುವಲ್ಲಿ ಪೂರ್ವಾಶ್ರಮಕ್ಕೆ ಯಾವ ಅರ್ಥವೂ ಇರುವುದಿಲ್ಲ. ಅಂತೆಯೇ ಗುರುವನ್ನು ಪರುಷಮಣಿಗೆ ಹೋಲಿಸುತ್ತಿದ್ದರೆ ದೀಕ್ಷೆಗೆ ಪಾತ್ರನಾಗುವ ವ್ಯಕ್ತಿಯನ್ನು ಒಂದು ಲೋಹಕ್ಕೆ ಹೋಲಿಸುತ್ತಾರೆ. ಕಾವ್ಯದಲ್ಲಿ ಅಲ್ಲಮನ ಇಂಥ ದೀಕ್ಷೆಗೆ ಪಾತ್ರರಾದವರು ಕ್ಷಣಾರ್ದದಲ್ಲಿ ತಮ್ಮ ಪೂರ್ವಾಶ್ರಮವನ್ನು ಕಳಚಿ ಮುಂದಿನ ಕ್ರಿಯೆಗೆ ಸಿದ್ಧರಾಗಿರುತ್ತಾರೆ.

ಪರುಷ ಮುಟ್ಟಲು ಮುಂದೆ ಕಬ್ಬುನ
ವರುಷದಲಿ ಹೊನ್ನಹುದೆ ನಿಮಿಷಕೆ
ಗುರುನಿರೂಪಜ್ಞಾನಜ್ಯೋತಿಪ್ರಭೆ ಪ್ರಕಾಶಿಸಲು ।
ಹರಿದುದಾಗಳೆ ಸಂದ ಸಂಶಯ
ನೆರವಿಗತ್ತಲೆ ನಿತ್ಯ ನಿರ್ಮಳ
ಗಿರಿಯ ಗಹನಕೆ ಗಮಿಸಿದಳು ಮಹದೇವಿ ಮನದೊಳಗೆ ॥ [೨೮]

[illegible]

[illegible]

[illegible]

[illegible]

ಇದೆಲ್ಲ ಪಂಚೇಂದ್ರಿಯಗಳನ್ನು ತಟಸ್ಥಗೊಳಿಸಿ ದೀಕ್ಷಿತನಾಗುವ ವ್ಯಕ್ತಿಯನ್ನು ಕುರಿತಾಗಿ ವ್ಯಕ್ತಪಡಿಸಿದ ಅಭಿಪ್ರಾಯ. ಆದರೆ ಪಂಚೇಂದ್ರಿಯಗಳ ಮುಖಾಂತರವೇ ಪರಮಸುಖ ಸೂರೆಗೊಳ್ಳಬಯಸುವವರಿಗೆ ಈ ಮಾತು ಅನ್ವಯವಾಗುವುದಿಲ್ಲ. 'ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿ'ಯಲ್ಲಿ ಇಂಥ ಸ್ಥಿತಿಯಲ್ಲಿರುವ ಮಾಯೆಯನ್ನು ಉದ್ಧರಿಸಬೇಕೆಂದು ವಿಮಳೆ ಅಲ್ಲಮನನ್ನು ಕೇಳಿಕೊಳ್ಳುತ್ತಾಳೆ. ಆದಕ್ಕೆ ಮಾಯೆ ಅನರ್ಹಳೆಂದು ತಿಳಿಸುತ್ತಾನೆ ಪ್ರಭು. ಅವಳನ್ನು ತೋಳದಲ್ಲಿ ಅಪ್ಪಿದರೂ ಒಂದೇ ಕಾಲಿನಿಂದ ಒದೆದರೂ ಒಂದೇ, ಸ್ಪರ್ಶಮಾತ್ರದಿಂದ ಅವಳ ಉದ್ಧಾರವಾಗುತ್ತದೆಂದು ತಿಳಿಸುತ್ತಾಳೆ ವಿಮಳೆ.

ಕೀಳುಗಬ್ಬುನವೆಣ್ಣ ಕೋಪಿಸಿ
ಕಾಲಲೊದೆದೊಡೆ ಮೇಣು ಕರುಣಿಸಿ
ತೋಳಲಪ್ಪಿದೊಡೇನು ಪರುಷದ ಗಂಡನದಱಂತೆ ।
ಬಾಲೆಗೆಂತಾದೊಡೆಯು ನಿನ್ನ ಸ
ಮೇಳ ಘಟಿಸಿದ ಬಳಿಕ ಮಾಯೆಯ
ಪಾಲಿಸಲುಬೇಕೆನುತ ನುಡಿದಳು ವಿಮಳೆಯಲ್ಲಮಗೆ ॥ [೧೫]

ಅವಳು ಲೋಹವಾಗಿದ್ದರೆ ತಾನೆ ಹೊನ್ನಾಗುವುದು! ಸ್ಪರ್ಶದಿಂದ ಹೊನ್ನಾಗದಿದ್ದರೆ ಪರುಷಮಣಿಯಲ್ಲಿ ಕೊರತೆಯನ್ನು ಕಾಣಲಾಗುವುದಿಲ್ಲ. ಅದರಲ್ಲಿ ಲೋಹಗುಣವಿದ್ದರೆ ಸಾಕು ಹೊನ್ನಾಗೇ ಆಗುತ್ತದೆ. ಆ ಗುಣವೇ ಇಲ್ಲದ ಮಾಯೆ ಕೀಳುಲೋಹವೂ ಅಲ್ಲದ ಹಳೆಯ ಹಂಚೆಂದು ತಿಳಿಸುತ್ತಾನೆ ಅಲ್ಲಮಪ್ರಭು. ಆದುದರಿಂದ ಪರುಷಮಣಿಯನ್ನು ಸ್ಪರ್ಶಿಸುವ ಅರ್ಹತೆಯೇ ಆ ಹಂಚಿನಲ್ಲಿಲ್ಲದಿರುವಾಗ ಉದ್ಧರಿಸುವ ಪ್ರಸಂಗವೇ ಉಂಟಾಗುವುದಿಲ್ಲವೆಂದು ತಿಳಿಸುತ್ತ ಅವಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾನೆ.

ವನಿತೆ ನಿನ್ನಯ ಮಾತಹುದು ಕ
ಬ್ಬುನವದಾದೊಡೆ ಪರುಷ ಮುಟ್ಟಲು
ಕನಕವಹುದಲ್ಲದೆ ವೃಥಾ ಹಳೆ ಹಂಚು ಹೊನ್ನಹುದೆ ।
ಮನಸು ಸಂಚಲವಾದ ಮಾಯಾಂ
ಗನೆಯದೇನನು ಮುಟ್ಟಿ ಮಾಡಿದೊ
ಡನಿತು ಸಂಘಲವಾಗಲಱಿಯದು ವಿಮಳೆ ಕೇಳೆಂದ ॥ [೧೬]

[illegible]

[illegible]

[illegible]

[illegible]

ಹೀಗೆ ಪಂಚೇಂದ್ರಿಯಗಳ ಮುಖಾಂತರವೇ ಪರಮಸುಖವನ್ನು ಸೂರೆ ಮಾಡಬೇಕೆನ್ನುವವರಿಗೆ ಸತ್ಯ ತೋರುವುದು ಮರಣದ ರೂಪದಲ್ಲಿ ಮಾತ್ರ. ಮರಣವನ್ನು ಗೆದ್ದು ಮಹಾನವಮಿಯನ್ನು ಆಚರಿಸಲು ಅವರು ಅನರ್ಹರು !

ಹೀಗೆ ಕಾವ್ಯದ ತುಂಬೆಲ್ಲ ಶಿವಯೋಗದ ಲಕ್ಷಣಗಳೇ ಗೋಚರಿಸುತ್ತವೆ. ಗುರುವನ್ನು ಪರುಷಕ್ಕೆ ಹೋಲಿಸುವಲ್ಲಿ ಒಂದು ಪ್ರಮುಖ ವ್ಯತ್ಯಾಸವಿದೆ. ಪರುಷ ಕಬ್ಬಿಣವನ್ನು ಹೊನ್ನಾಗಿಸುವ ಮಟ್ಟಿಗೆ ಸಾಮರ್ಥ್ಯ ಹೊಂದಿದೆ. ಅದನ್ನು ಪರುಷಮಣಿಯನ್ನಾಗಿ ಮಾಡುವುದಂತೂ ಅಸಾಧ್ಯದ ಮಾತು. ಪರಶಿವರೂಪದ ಗುರು ಮಾತ್ರ ಹಾಗಲ್ಲ. ಶಿಷ್ಯ ಭವದಿಂದ ದೂರಾಗುವುದಲ್ಲದೆ ಪರಿಪೂರ್ಣ ಸಾಧನೆಯ ನಂತರ ಗುರುವಾಗಿಯೂ ರೂಪುಗೊಳ್ಳುತ್ತಾನೆ. ಈ ಕಾರಣದಿಂದಾಗಿಯೇ ಶಿವಯೋಗಾಚರಣೆ ನಿರಂತರವಾಗಿ ಮುಂದುವರೆದಿದೆ.

೪. ತತ್ತ್ವಕ್ಕೆ ಕಾವ್ಯದ ರೂಪ

ನೋಡು ನೋಡು ನೀನೆ ಪರವೆಂದು ತತ್ತ್ವ
ಗೂಡದೆ ವಿಲಕ್ಷಣನಾಗಿ ನಿಂದು ॥ [೨೦]

ನಿಜಗುಣಶಿವಯೋಗಿಯ ತತ್ತ್ವಪದವೊಂದರ ಈ ಪಲ್ಲ 'ತತ್ತ್ವ'ವನ್ನು ಕುರಿತು ಬಹಳಷ್ಟು ಮಾಹಿತಿಯನ್ನು ಒದಗಿಸುತ್ತದೆ, ಐಕ್ಯನ ಐಕ್ಯಸ್ಥಲದ ಲಕ್ಷಣಗಳನ್ನು ತಿಳಿಸುವ ಈ ಸಾಲುಗಳಲ್ಲಿ ಪರಶಿವನಿಗೆ ತತ್ತ್ವದ ಲೇಪನವಿಲ್ಲವೆಂಬ ಅರ್ಥ ಮೂಡುತ್ತದೆ ಹಾಗೂ ತತ್ತ್ವಗಳ ಕೂಡುವಿಕೆ ಜೀವಿಯ ಅಸ್ತಿತ್ವಕ್ಕೆ ಕಾರಣವಾಗುತ್ತದೆ ಎಂಬ ವಿಚಾರ ತಿಳಿದು ಬರುತ್ತದೆ. ಹಾಗಾದರೆ ತತ್ತ್ವವೆಂದರೇನು?

ತತ್ತ್ವವೆಂದರೆ ಹೊಸ ಸ್ವಭಾವವುಳ್ಳ ವಸ್ತು.[೨೧] ಮೇಲೆ ಉಲ್ಲೇಖಿತವಾದ ಪದ್ಯದ ಸಾಲುಗಳನ್ನು ಈ ಹೇಳಿಕೆಯೊಂದಿಗೆ ಸಮೀಕರಿಸಿದರೆ ತತ್ತ್ವದ ಅರ್ಥ ಮೂಡಿ ಬರುವುದು ಸಾಧ್ಯ. ಪರಶಿವನಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಹಾಗೂ ಈಶಾನ ಎಂಬ ಐದು ಮುಖಗಳಿವೆ. ಆ ಐದು ಮುಖಗಳಿಂದ ಕ್ರಮವಾಗಿ ಭೂಮಿ, ಜಲ, ಅಗ್ನಿ, ಹಾಗೂ ಗಗನ ಹುಟ್ಟಿದವು. ಅಂದರೆ ಪಂಚಬ್ರಹ್ಮದಿಂದ ಪಂಚಮಹಾಭೂತಗಳು ಹುಟ್ಟಿದವು. ಇವುಗಳ ಪಂಚೀಕರಣದಿಂದ ಇಪ್ಪತ್ತೈದು ತತ್ತ್ವಗಳಾದವು. ಈ ಇಪ್ಪತ್ತೈದು ತತ್ತ್ವಗಳು ಬ್ರಹ್ಮಾಂಡ ಹಾಗೂ ಪಿಂಡಾಂಡಗಳೆರಡರ ಅಸ್ತಿತ್ವಕ್ಕೆ

[illegible]

[illegible]

[illegible]

[illegible]

[illegible]

[illegible]

ಕಾರಣವಾದವು. ೧೩೩ ಇಪ್ಪತ್ನಾಲ್ಕು ತತ್ತ್ವಗಳಿಂದ ಕೂಡಿದ ದೇಹವೆಂಬ ಪಟ್ಟಣದಲ್ಲಿ ಪರಾಪರ ವಸ್ತುವಾದ ಪುರುಷನು ಜೀವನೆಂಬ ಹೆಸರಿನಿಂದ ವಾಸಮಾಡಿಕೊಂಡಿರುವನು.[೧೩೪] ಹೀಗೆ ತತ್ತ್ವದ ಯಾವ ಲೇಪನವೂ ಇಲ್ಲದ್ದು ನಿರ್ಗುಣ ಪರಶಿವ ಹಾಗೂ ಅವನಿಂದ ಹೊಸ ಸ್ವಭಾವಗಳನ್ನು ಪಡೆದು ತತ್ತ್ವಗಳಲ್ಲಿ ಮೂಡಿ ಬಂದವುಗಳು ಬ್ರಹ್ಮಾಂಡ ಮತ್ತು ಪಿಂಡಾಂಡ. ಈ ತತ್ತ್ವಗಳಲ್ಲಿದ್ದುಕೊಂಡು ಪರಶಿವನನ್ನು ನೋಡಲಾಗದೆಂದೂ ತಾತ್ವಿಕ ಲಕ್ಷಣಗಳಿಂದ ದೂರಾಗಿ ವಿಲಕ್ಷಣನಾಗಿ ನಿಂತಾಗ ತಾನೇ ಅವನಾಗಿ ನೋಡುವುದು ಸಾಧ್ಯವೆಂದೂ ಮೇಲಿನ ಪದ ತಿಳಿಸುತ್ತದೆ. ಹೀಗೆ ಪರಶಿವ ಮತ್ತು ಪಂಚವಿಂಶತಿ ತತ್ತ್ವಗಳ ನಡುವಿನ ಸಂಬಂಧ ಕುರಿತು ರಚಿಸಲ್ಪಟ್ಟ ಸಾಹಿತ್ಯ ತತ್ತ್ವಜ್ಞಾನ ಎನಿಸಿಕೊಳ್ಳುತ್ತದೆ.

ಲೌಕಿಕ ಬದುಕಿಗೂ ಆಧ್ಯಾತ್ಮಿಕ ಬದುಕಿಗೂ ತುಂಬ ವ್ಯತ್ಯಾಸವಿದೆ. ಲೋಕಜೀವಿಗಳಲ್ಲಿ ಬಹಿರಂಗದ ಸಾಧನಗಳು ಪರಮೋಚ್ಚ ಪ್ರಾಧಾನ್ಯ ಪಡೆದುಕೊಳ್ಳುತ್ತವೆ. ಇದಕ್ಕೆ ಪ್ರತಿಯಾಗಿ ಆಧ್ಯಾತ್ಮಿಕ ಸಾಧನೆಯಲ್ಲಿರುವವರಿಗೆ ಲೌಕಿಕ ಸಾಧನೆಗಳು ತೃಣಕ್ಕೆ ಸಮಾನವೆನಿಸುತ್ತವೆ. ಇಂಥ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಸಾಗಿರುವವರಿಗೆ ಅವರವರ ಮಾರ್ಗಾನುಸರಣೆಯೇ ಅತ್ಯುನ್ನತವಾಗಿರುತ್ತದೆ. ಹೀಗಿರುವಾಗ ಲೋಕಜೀವಿಗಳಲ್ಲಿ ತತ್ತ್ವವನ್ನು ನೇರವಾಗಿ ಬಿಂಬಿಸುವವರ ಪ್ರಯತ್ನಕ್ಕೆ ಯಶಸ್ಸು ಕಷ್ಟಸಾಧ್ಯ. ಸಾಮಾಜಿಕ ಬದುಕು ಸುಗಮಗೊಳ್ಳಬೇಕಾದರೆ ಬಹಿರಂಗದ ಆಚರಣೆಗಳನ್ನು ಬಿಂಬಿಸಬೇಕಾಗುತ್ತದೆ. ಕೇವಲ ಬಹಿರಂಗಾಚರಣೆಯ ಲೌಕಿಕರಿಗೆ ಅಂತರಂಗಾಚರಣೆಯನ್ನು ಬಿಂಬಿಸಬೇಕಾದರೆ ಅದನ್ನು ರೂಪ ಪರಿವರ್ತನೆ ಮಾಡಿ ಬಿಂಬಿಸಬೇಕಾಗುತ್ತದೆ. ಈ ಕಾರ್ಯದಲ್ಲಿ ಲೌಕಿಕರ ಅಭಿರುಚಿಗಳಿಗೆ ತಕ್ಕಂತೆ ಸ್ಪಂದನದ ಪ್ರಮಾಣ ಹೆಚ್ಚುತ್ತ ಹೋದರೆ ಅದರ ಪರಿಣಾಮವೂ ಹೆಚ್ಚುತ್ತ ಹೋಗುತ್ತದೆ. ಇದನ್ನು ಕಾವ್ಯಗಳು ಮಾಡುತ್ತ ಬಂದಿವೆ.

ಅಂತರಂಗದ ಅರಿವು ಜ್ಞಾನ, ಅದನ್ನು ಶಬ್ದರೂಪಕ್ಕಿಳಿಸುವುದು ಶಾಸ್ತ್ರ ಹಾಗೂ ಶಾಸ್ತ್ರವನ್ನು ಕಥಾನಕವಾಗಿ ನಿರೂಪಿಸುವುದು ಪುರಾಣ ಎಂಬುದನ್ನು ನೋಡಿದ್ದೇವೆ. ಕಾವ್ಯಗಳು ಅದರಲ್ಲಿಯೂ ಭಾರತೀಯ ಕಾವ್ಯಗಳು, ಈ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡುತ್ತ ಬಂದಿರುವುದರಿಂದ ಪ್ರಾಚೀನ ಲಾಕ್ಷಣಿಕರು ಕಾವ್ಯವನ್ನು ಒಂದು ಶಾಸ್ತ್ರವೆಂದು ಕರೆದಿರುವುದು ಸಮಂಜಸವಾಗಿದೆ. ಮುಮುಕ್ಷುವನ್ನು ಲೌಕಿಕ ಸೆಳೆತದಿಂದ ದೂರಮಾಡುತ್ತ ಅಂತರಂಗದ ಅರಿವಿನ ಬಗೆಗೆ ಅವನಲ್ಲಿ ಉತ್ಕಟೇಚ್ಛೆಯನ್ನು ಉಂಟು ಮಾಡುವುದು ಶಾಸ್ತ್ರದ ಗುರಿ ಹಾಗೂ ಸಹೃದಯನಿಗೆ ರಸಾನುಭೂತಿಯನ್ನುಂಟು ಮಾಡುವುದು ಕಾವ್ಯದ

[illegible]

ಗುರಿ. ಶಾಸ್ತ್ರಕಾವ್ಯಗಳು ಅಥವಾ ಪುರಾಣಗಳು ಈ ಎರಡನ್ನೂ ಒಟ್ಟಿಗೆ ಸಾಧಿಸುವುದರಿಂದ ಅವು ಹೆಚ್ಚಿನ ಮೆಚ್ಚುಗೆಗೆ ಪಾತ್ರವಾಗುತ್ತವೆ. ಕಾವ್ಯವನ್ನಾಗಲೀ ಶಾಸ್ತ್ರವನ್ನಾಗಲೀ ಓದುವುದರಿಂದ ಅಂತರಂಗದ ಅನುಭವ ಸಾಧ್ಯವಿಲ್ಲವೆಂಬುದನ್ನು ನೋಡಿದ್ದೇವೆ. ಆದರೂ ರಾಮಾಯಣ–ಮಹಾಭಾರತಗಳು ಸಹೃದಯರನ್ನು ಅರಿವಿನ ಹೊಸ್ತಿಲಲ್ಲಿ ಒಯ್ದು ನಿಲ್ಲಿಸುತ್ತವೆ. ಪ್ರಭುಲಿಂಗಲೀಲೆ ಕೂಡ ಆ ಕೆಲಸವನ್ನು ಮಾಡುತ್ತದೆ. ವಸ್ತು ಮತ್ತು ನಿರೂಪಣೆಯ ದೃಷ್ಟಿಯಿಂದ ಚಾಮರಸನ ಕೃತಿಯು ರಾಮಾಯಣ–ಮಹಾಭಾರತಗಳಿಗಿಂತ ಇನ್ನೂ ಒಂದು ಹೆಜ್ಜೆ ಮುಂದಿದೆಯೆಂದು ಹೇಳಬಹುದು.

ಪ್ರಭುಲಿಂಗಲೀಲೆಯ ವಸ್ತು ಮತ್ತು ನಿರೂಪಣೆಯನ್ನು ಬೇರೆ ಕಾವ್ಯಗಳ ವಸ್ತು ಮತ್ತು ನಿರೂಪಣೆಗಳೊಂದಿಗೆ ಹೋಲಿಸಿ ತೂಗಿ ನೋಡಿದರೆ ಅದರ ಮೇಲ್ಮೆ ಗೊತ್ತಾಗುತ್ತದೆ. ಸಾಂದರ್ಭಿಕವಾಗಿ ರಾಮಾಯಣ, ಮಹಾಭಾರತ ಹಾಗೂ ಹರಿಶ್ಚಂದ್ರಕಾವ್ಯ ಇವುಗಳನ್ನು ಪರಿಶೀಲಿಸೋಣ. ವಿಷ್ಣುವಿನ ದಶಾವತಾರಗಳಲ್ಲಿ ರಾಮಾವತಾರ ಮತ್ತು ಕೃಷ್ಣಾವತಾರ ಸೇರಿವೆ. ನಾಮ–ರೂಪು–ಕ್ರಿಯೆಗಳನ್ನು ಹೊತ್ತಿರುವ ವಿಷ್ಣು ಸಗುಣನಾಗಿದ್ದು ನಿರ್ಗುಣ ಪರಶಿವನಿಂದ ಮೂಡಿ ಬಂದವನು.[೧೩೫] ಬ್ರಹ್ಮ ಸೃಷ್ಟಿಕರ್ತನಾದರೆ, ವಿಷ್ಣು ಅದರ ರಕ್ಷಕ ಹಾಗೂ ರುದ್ರ ಸಂಹಾರಕ.[೧೩೬] ವಿಷ್ಣುವಿನ ರಕ್ಷಿಸುವ ಗುಣವನ್ನು ನಿರೂಪಿಸುವುದಕ್ಕಾಗಿ ರಾಮನನ್ನು ಸಂಕೇತವಾಗಿಟ್ಟುಕೊಂಡು ರಾಮಾಯಣ ಸೃಷ್ಟಿಯಾಗಿದ್ದರೆ ಕೃಷ್ಣನನ್ನು ಸಂಕೇತವಾಗಿಟ್ಟುಕೊಂಡು ಮಹಾಭಾರತ ಸೃಷ್ಟಿಯಾಗಿದೆ. ಪ್ರಭುಲಿಂಗಲೀಲೆಯಲ್ಲಾದರೋ ಅಲ್ಲಮನನ್ನು ಸಂಕೇತವಾಗಿಟ್ಟುಕೊಂಡು ಪರಶಿವನ ಕಾರ್ಯವನ್ನು ನಿರೂಪಿಸಲಾಗಿದೆ. ವಸ್ತುವಿನ ಆಯ್ಕೆಯಲ್ಲಿಯೇ ಚಾಮರಸನ ಕಾವ್ಯ ರಾಮಾಯಣ ಹಾಗೂ ಮಹಾಭಾರತಗಳಿಗಿಂತ ಮೇಲ್ಮಟ್ಟದಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ.

ನಿರೂಪಣೆಯಲ್ಲಿ ಕೂಡ ಪ್ರಭುಲಿಂಗಲೀಲೆ ಮೇಲ್ಮೆ ಕಾಯ್ದುಕೊಂಡಿದೆ. ರಾಮಾಯಣದಲ್ಲಿ ಉನ್ನತಮಟ್ಟದ ತತ್ತ್ವಪ್ರತಿಪಾದನೆಯೊಂದಿಗೆ ಕಥಾನಕವು ಲೋಕಜೀವಿಗಳಿಗೆ ಆಕರ್ಷಕವಾಗುವಂತೆ ಮಾಡುವುದಕ್ಕಾಗಿ ವನವಾಸ ಪ್ರಸಂಗ, ಸೀತಾಪಹರಣ, ರಾವಣಸಂಹಾರ ಇವುಗಳನ್ನು ಪ್ರಮುಖವಾಗಿಟ್ಟುಕೊಂಡು ಪೂರಕ ಪಾತ್ರಗಳಲ್ಲಿ ಲೋಕ ಜೀವಿಗಳ ನಡುವೆ ತೋರುವ ಗುಣಗಳನ್ನು ಸಂಕೇತಿಸಲಾಗಿದೆ. ಒಟ್ಟಿನಲ್ಲಿ ಅಸತ್ಯದ ಮೇಲಿನ ಸತ್ಯದ ವಿಜಯದ ಸಂಕೇತದ ರೂಪದಲ್ಲಿ ಮೂಡಿ ಬಂದಿರುವ ರಾಮಾಯಣ ಪ್ರಮುಖವಾಗಿ ಕರುಣರಸದ ನಿರೂಪಣೆಯಿಂದ ಜಗದ್ವಂದ್ಯ ಕಾವ್ಯವಾಗಿ

[illegible]

[illegible]

[illegible]

ಪರಿಣಮಿಸಿದೆ. ಕೃಷ್ಣನನ್ನು ಸಂಕೇತವಾಗಿಟ್ಟುಕೊಂಡು ವಿಷ್ಣುವಿನ ರಕ್ಷಿಸುವ ಗುಣವನ್ನು ನಿರೂಪಿಸಲು ರೂಪುಗೊಂಡಿರುವ ಮಹಾಭಾರತವೂ ರಾಮಾಯಣದ ನಿರೂಪಣೆಗಿಂತ ತೀರಾ ಭಿನ್ನವಾಗೇನೂ ಮೂಡಿ ಬಂದಿಲ್ಲ. ರಾಮಾಯಣದಲ್ಲಿ ರಾಮ ಲೋಕವ್ಯವಹಾರಗಳಿಂದ ಲೇಪಿತನೂ ನಿರ್ಲೇಪಿತನೂ ಆಗಿ ಸಾಗುತ್ತಾನೆ. ಮಹಾಭಾರತದಲ್ಲಿ ಜಗದ ಜಂತ್ರವನಾಡಿಸುವ ಕೃಷ್ಣ ಸದಾಚಾರಿ ಹಾಗೂ ದುರಾಚಾರಿಗಳ ನಡುವೆ ಪ್ರೇಕ್ಷಕನಾಗಿ ನಿಂತು ಸದಾಚಾರಿಗಳ ಕೈ ಮೇಲಾಗುವಂತೆ ನೋಡಿಕೊಳ್ಳುತ್ತಾನೆ. ಮಹಾಭಾರತದ ಗಣನೀಯ ಭಾಗ ತತ್ತ್ವವಿವೇಚನೆಗೆ, ಧರ್ಮಾಚರಣೆಯ ನಿರೂಪಣೆಗೆ ಮೀಸಲಾಗಿದೆ. [೧೩೭]

ವೈದಿಕ ಗ್ರಂಥಗಳ ಒಂದು ಭಾಗವಾಗಿರುವ ಹರಿಶ್ಚಂದ್ರನ ಕತೆಯಲ್ಲಿ ಅವನನ್ನು ಸಂಕೇತವಾಗಿಟ್ಟುಕೊಂಡು ಸತ್ಯವನ್ನು ಪ್ರತಿಪಾದಿಸಲಾಗಿದೆ. ಅಲ್ಲಿ ಹರಿಶ್ಚಂದ್ರ ಸಂಕೇತಿಸುವ ಸತ್ಯ ವ್ಯವಹಾರಿಕ ಸತ್ಯವಾಗಲಿ, ಇನ್ನಾವುದೇ ರೂಪದ ಸತ್ಯವಾಗಲಿ ಆಗಿರದೆ ರಾಘವಾಂಕ ತಿಳಿಸುವಂತೆ ಪಾರಲೌಕಿಕ ಸತ್ಯವಾಗಿದೆ. ಅವನು ' ಹರನೆಂಬುದೇ ಸತ್ಯ ಸತ್ಯವೆಂಬುದು ಹರನು'[೧೩೮] ಎಂದು ತಿಳಿಸುವ ಶ್ರುತಿವಾಕ್ಯದ ಸಾರವನ್ನು 'ಸತ್ಯಂ ಶಿವಂ ಸುಂದರಮ್' ಉಕ್ತಿಗೆ ಸರಿದೊರೆಯಾಗುವಂತೆ ಪ್ರತಿಪಾದಿಸಿದ್ದಾನೆ. ಆದರೆ ಅದು ಶರಣಮಾರ್ಗದ ಸಪ್ತಾಚರಣೆಗಳಲ್ಲಿ ಒಂದು ಮಾತ್ರ.[೧೩೯] ಹೀಗೆ ರಾಮಾಯಣ, ಮಹಾಭಾರತ ಹರಿಶ್ಚಂದ್ರ ಕಾವ್ಯ ಇವುಗಳಲ್ಲಿ ದರ್ಶನವು ಉನ್ನತ ಮಟ್ಟದಲ್ಲಿದ್ದರೂ ಅದು ಅಂತರಂಗಾನುಭವದ ಕ್ಷೇತ್ರವನ್ನು ಪ್ರವೇಶಿಸಿ ಪ್ರಸ್ತುತಪಡಿಸಿದ ದರ್ಶನದಂತೆ ತೋರುವುದಿಲ್ಲ ಪುಟಕ್ಕಿಟ್ಟ ಚಿನ್ನದಂತೆ ಸಪ್ತಾಚರಣೆಗಳಲ್ಲಿ ಪರಿಶುದ್ಧನಾಗುವ ದೀಕ್ಷಾರ್ಥಿಯ ಯೋಗದೀಕ್ಷೆ ಹಾಗೂ ಅಂತರಂಗಾನುಭವವನ್ನು ನಿರೂಪಿಸುವ ಕ್ರಿಯೆಯನ್ನು ಚಾಮರಸ ಆಯ್ದುಕೊಂಡಿರುವುದು ಹಾಗೂ ಅದನ್ನು ನಿರೂಪಿಸುವಲ್ಲಿ ಶಿವಶರಣರ ಬದುಕಿನ ಪ್ರಸಂಗಗಳನ್ನು ಸಾಕ್ಷಿಯಾಗಿರಿಸಿರುವುದು ಬೇರೆಲ್ಲೂ ಕಂಡು ಬರದ ಕಾವ್ಯತಂತ್ರವಾಗಿದೆ.

ಶರಣಮಾರ್ಗಕ್ಕೆ ಕೊಲ್ಲುವ ಕ್ರಿಯೆ ಎಳ್ಳಷ್ಟೂ ಸಮ್ಮತವಲ್ಲ. ತಮ್ಮ ಸಂಪರ್ಕದಲ್ಲಿ ಬಂದವರಿಗೆ ಅಭಯವೀಯುವುದು ಮಾತ್ರವಲ್ಲದೆ ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸುವುದು ಅವರ ಧರ್ಮ. ಅಂತೆಯೇ ಪ್ರಭುಲಿಂಗಲೀಲೆಯಲ್ಲಿ ಕೊಲ್ಲುವ ಯಾವ ಪ್ರಸಂಗವನ್ನೂ ಚಾಮರಸ ಅಳವಡಿಸಿಲ್ಲ. ಇದಕ್ಕೆ ವಿರುದ್ಧವಾಗಿ ರಾಮಾಯಣ–ಮಹಾಭಾರತಗಳಲ್ಲಿ ಕೊಲ್ಲುವ ಕ್ರಿಯೆ ಮರುಕಳಿಸುವುದಕ್ಕೆ ಲೆಕ್ಕವಿಲ್ಲ. ಕಾರಣವೆಂದರೆ ಆ ಕಾವ್ಯಗಳು ಹೊಂದಿರುವ ವಸ್ತುವೇ ಅಂಥದು. ಅಪರಿಪೂರ್ಣತೆಯಿಂದ

ಪರಿಪೂರ್ಣತೆಯೆಡೆಗೆ ಸಾಗುವುದು ಧರ್ಮ ಹಾಗೂ ಜಗತ್ತಿನ ವಿವಿಧ ವಸ್ತುಗಳ ಧರ್ಮಾಂಶದ ತತ್ತ್ವವನ್ನು ಕಾಣುವುದು ದರ್ಶನ ಎಂಬ ವ್ಯಾಪಕ ಅರ್ಥದ ಹಿನ್ನೆಲೆಯಲ್ಲಿ ಪ್ರಭುಲಿಂಗಲೀಲೆಯನ್ನು ಅವಲೋಕಿಸಿದರೆ ಅದರ ಉದಾತ್ತವಾದ ವಸ್ತು, ನಿರೂಪಣೆ ಹಾಗೂ ವ್ಯಾಪ್ತಿ ಸ್ಪಷ್ಟವಾಗುತ್ತ ಹೋಗುತ್ತವೆ.

ತತ್ತ್ವವಿಲ್ಲದ ಕಾವ್ಯವಿಲ್ಲ. ಆದರೆ ಈ ತತ್ತ್ವದ ವ್ಯಾಪ್ತಿ ಎಷ್ಟು ಮತ್ತು ಅದನ್ನು ನಿರೂಪಿಸುವ ತಂತ್ರ ಯಾವುದು ಎನ್ನುವುದರ ಮೇಲೆ ಒಂದು ಕೃತಿಯ ಮಟ್ಟವನ್ನು ನಿರ್ಧರಿಸಬಹುದು. ಸಮಾಜವ್ಯವಸ್ಥೆಯ ತತ್ತ್ವಗಳನ್ನು ಕಾವ್ಯವಾಗಿಸುವಲ್ಲಿ ಸಂಕೀರ್ಣತೆ, ಆಳ, ವೈಶಾಲ್ಯ ಇವುಗಳನ್ನು ಬದುಕಿಗೆ ಸಮೀಪವಾಗಿಟ್ಟು ನಿರೂಪಿಸಿದಾಗ ತಮ್ಮ ಅನುಭವಗಳೊಂದಿಗೆ ಅವುಗಳನ್ನು ಸಮೀಕರಿಸುವ ಲೋಕಜೀವಿಗಳ ದೃಷ್ಟಿಯಲ್ಲಿ ಆ ಸಾಹಿತ್ಯ ಕೃತಿ ಮೇಲ್ಮಟ್ಟವನ್ನು ಪಡೆಯುತ್ತ ಹೋಗುತ್ತದೆ. ಆದರೆ ಲೌಕಿಕ ಆಚರಣೆಗಳ ಗಡಿಯನ್ನು ದಾಟಿ ಪಾರಲೌಕಿಕ ಅಂಶಗಳನ್ನು ನಿರೂಪಿಸುವಾಗ ಅದರ ನೈಜತೆ ಮೂಡಿ ತೋರುವಂತೆ ಮಾಡುವಲ್ಲಿ ಬಹಳಷ್ಟು ಶ್ರಮಿಸಬೇಕಾಗುತ್ತದೆ. ಇಂಥ ನಿರೂಪಣೆಯಲ್ಲಿ ರಾಮಾಯಣ, ಮಹಾಭಾರತ ಹಾಗೂ ಹರಿಶ್ಚಂದ್ರಕಾವ್ಯ ಸಫಲವಾಗಿರುವುದನ್ನು ನೋಡಿದ್ದೇವೆ. ಆದರೆ ಪ್ರಭುಲಿಂಗಲೀಲೆಯಲ್ಲಿ ಕವಿ ಆಯ್ದುಕೊಂಡಿರುವ ತತ್ತ್ವದ ವ್ಯಾಪ್ತಿ ಬ್ರಹ್ಮಾಂಡದ ವ್ಯಾಪ್ತಿಗೆ ಸಮನಾಗಿದೆ. ನಿರ್ಗುಣ ಪರಶಿವನಿಂದ ಹೊರಬಂದ ಜೀವಾತ್ಮ ಪುನಃ ನಿರ್ಗುಣತ್ವದಲ್ಲಿಯೇ ಒಂದಾಗುವ, ಕ್ರಿಯೆಯನ್ನು ನಿರೂಪಿಸಲು ಚಾಮರಸ ಪ್ರಭುಲಿಂಗಲೀಲೆಯನ್ನು ಆಯ್ದುಕೊಂಡಿದ್ದಾನೆ ಹಾಗೂ ಅದನ್ನು ಕೇವಲ ಒಂದು ಸಾವಿರದ ಒಂದುನೂರಾ ಹನ್ನೊಂದು ಪದ್ಯಗಳಿಗೆ ಸೀಮಿತಗೊಳಿಸಿದ್ದಾನೆ. ಅತ್ಯಂತ ಗೌಪ್ಯವಾಗಿ ನಡೆದುಕೊಂಡು ಬಂದಿರುವ ಈ ಮಾರ್ಗವನ್ನು ಅದರ ಸ್ಪರ್ಶವೇ ಇಲ್ಲದ ಲೋಕ ಜೀವಿಗಳ ಮುಂದೆ ಪ್ರತಿಪಾದಿಸುವಲ್ಲಿ ಅವನು ಎರಡು ಪ್ರಬಲ ಅಂಶಗಳನ್ನು ಆಶ್ರಯಿಸಿದ್ದಾನೆ. ಮೊದಲನೆಯದು ತತ್ತ್ವಕ್ಕೆ ಅತ್ಯಾಕರ್ಷಕವಾದ ಕಾವ್ಯದ ಸ್ಪರ್ಶವನ್ನು ನೀಡುವುದು; ಎರಡನೆಯದಾಗಿ ಜನಮನದಲ್ಲಿ ಪರಶಿವನಂತೆ ಪೂಜ್ಯಸ್ಥಾನ ಪಡೆದುಕೊಂಡಿದ್ದ ಶಿವಶರಣರ ಬದುಕಿನ ಪ್ರಸಂಗಗಳನ್ನು ಕಥಾನಕದಲ್ಲಿ ಒಡಮೂಡಿಸುವುದು.

'ಜ್ಞಾನ ವೈರಾಗ್ಯಗಳ ಮೂರ್ತಿಯೂ ಸ್ವತಂತ್ರ ಸಿದ್ಧಪುರುಷನೂ ಆದ ಅಲ್ಲಮನ ಜೀವಾಳವನ್ನು ಅರಿತು ಬಿತ್ತರಿಸುವುದಕ್ಕೆ ಬೇಕಾದ ವಿರಕ್ತಿ-ಸ್ವತಂತ್ರ ದೃಷ್ಟಿಗಳು ಚಾಮರಸನಲ್ಲಿದ್ದವು.'[೧೪೦] ಅಂತೆಯೇ ಷಟ್ಸ್ಥಲ ಮರ್ಮವನ್ನು ಅವನು ಈ ಕಾವ್ಯದಲ್ಲಿ ತೋರಿಸಿದ್ದಾನೆ.[೧೪೧] ದೀಕ್ಷಾಬೋಧೆಗೆ ಸಂಬಂಧಿಸಿದ ಪ್ರಸಂಗಗಳು ಕೆರೆಯ ಪದ್ಮರಸನ 'ದೀಕ್ಷಾಭೋಧೆ'ಯಲ್ಲಿ ನಿರೂಪಿತವಾದಂತೆ ಮೂಡಿ ಬಂದಿರುವುದರಿಂದ

ಚಾಮರಸ ಈ ಮಾರ್ಗದ ಸ್ಪಷ್ಟ ಅರಿವನ್ನು ಪಡೆದವನಾಗಿದ್ದನೆಂದು ಹೇಳಬಹುದು. ಲಿಂಗದೀಕ್ಷೆಗೆ ಸಂಬಂಧಿಸಿದ 'ಗೊಗ್ಗಯ್ಯನ ಗತಿ' ಕವಿ ಅಂತರಂಗಾನುಭವಿಯಾಗಿದ್ದನೆಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಅಂತರಂಗಾನುಭವದ ನಿರೂಪಣೆಗಾಗಿ ಬಳಸಿಕೊಂಡಿರುವ 'ಬಸವೇಶ್ವರನು ಶೂನ್ಯಸಿಂಹಾಸನವನ್ನು ರಚಿಸಿದ ಗತಿ' ಹಾಗೂ 'ಪ್ರಭುದೇವರು ಆರೋಗಣೆ ಮಾಡಿದ ಗತಿ' ಇವುಗಳಲ್ಲಿ ಚಾಮರಸನ ಅನುಭವ ನಿಖರವಾಗಿ ಅರಳಿ ನಿಂತಿದೆ. ಇದಕ್ಕಾಗಿ ಕವಿ ಇಷ್ಟಲಿಂಗದ ಗತಿ, ಸಾಧಕಾಂಗದ ಗತಿ ಹಾಗೂ ಮನೋಲಯದ ಗತಿ ಇವುಗಳನ್ನು ಪ್ರತ್ಯೇಕವಾಗಿ ಬಳಸಿಕೊಂಡಿದ್ದು ಅವುಗಳಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯ ವೀರಶೈವಾಚರಣೆಯನ್ನು ಶಾಸ್ತ್ರರೂಪದಲ್ಲಿ ನಿರೂಪಿಸುವ ಯಾವುದೇ ತಾತ್ತ್ವಿಕ ಕೃತಿಯಲ್ಲಿರುವ ವಿಷಯದ ಜೊತೆಗೆ ಸ್ವಲ್ಪವೂ ವ್ಯತ್ಯಾಸ ತೋರುವುದಿಲ್ಲ. ಅಷ್ಟೇ ನಿಖರವಾಗಿ ವಿವಿಧ ಗತಿಗಳಲ್ಲಿ ಮೂಡಿ ಬಂದಿರುವ ವೀರಶೈವಾಚರಣೆಯ ಅಂಶಗಳು ಕಥಾಹಂದರಕ್ಕೆ ಉತ್ತಮ ಸಾಧನಗಳಾಗಿ ರೂಪುಗೊಂಡಿವೆ.

ಕಾವ್ಯವು ಕವಿಯ ಸ್ವಭಾವಕ್ಕೆ ಅನುರೂಪವಾಗಿರುತ್ತದೆ.[೧೪೨] ಪ್ರಾಣವನ್ನು ನಿಗ್ರಹಿಸುವುದನ್ನು ಕಲಿತರೆ ಬ್ರಹ್ಮಾಂಡದ ಯಾವುದೇ ಕ್ರಿಯೆಯನ್ನು ನಿರ್ದೇಶಿಸಲು ಸಾಧ್ಯ. ಚಾಮರಸ ಪ್ರಾಣಾಯಾಮವನ್ನು ತಿಳಿದವನಾಗಿದ್ದ. ಆತ ತನ್ನ ದರ್ಶನದ ವ್ಯಾಪ್ತಿಯನ್ನು ಅನಂತದ ವರೆಗೂ ತೆಗೆದುಕೊಂಡು ಹೋಗಲು ಸಮರ್ಥನಾಗಿದ್ದ. ಇಂಥ ಅಸದೃಶ ದರ್ಶನವನ್ನು ನಿರೂಪಿಸುವಲ್ಲಿ ಆತನ ಉನ್ನತ ಮಟ್ಟದ ಪ್ರತಿಭೆ ಸಹಕಾರಿಯಾಗಿದೆ. ಒಬ್ಬ ಕವಿ ಅನುಭಾವಿಯಾಗಿರಬಹುದು ಹಾಗೂ ದರ್ಶನವನ್ನೂ ಪಡೆದಿರಬಹುದು. ಆದರೆ ಅದಕ್ಕೆ ಪ್ರತಿಭೆಯ ಸಂಯೋಜನೆ ಇರದಿದ್ದರೆ ಪರಿಪೂರ್ಣಕಾವ್ಯ ಮೂಡಿ ಬರುವುದು ಅಸಾಧ್ಯ. ಕಾವ್ಯಕ್ಕೆ ಕಾರಣವಾಗುವ ವಿಲಕ್ಷಣವಾದ ತಿಳುವಳಿಕೆ ಹಾಗೂ ಕಾವ್ಯರಚನಾಭ್ಯಾಸಗಳಲ್ಲಿ ಚಾಮರಸ ಪರಿಣತಿ ಹೊಂದಿದ್ದನೆಂಬುದನ್ನು ಕಾವ್ಯನಿರೂಪಣೆಯ ಮುಖಾಂತರ ಸ್ಪಷ್ಟಪಡಿಸಿದ್ದಾನೆ. ಇಂಥ ಮಹತ್ಸಾಧನೆಯನ್ನು ಮೆರೆದಿದ್ದರೂ ಕಾವ್ಯದಲ್ಲಿ ಎಲ್ಲಿಯೂ ತನ್ನ ಹೆಸರು, ವಂಶ ಯಾವುದರ ಸುಳುಹನ್ನೂ ತೋರದೆ ಶರಣತತ್ತ್ವದಂತೆ ಅನಾಮಕತ್ವ (Anonymity)ದಲ್ಲಿ ಕರಗಿಬಿಟ್ಟಿದ್ದಾನೆ.

ಚಾಮರಸನ ಲಕ್ಷ್ಯ ಶಿವಯೋಗಾಚರಣೆಯ ಪ್ರತಿಮಾವಿಧಾನಕ್ಕೆ ಸೀಮಿತವಾಗಿದೆ. ಈ ಅಂತರಂಗಾಚರಣೆಗೆ ಹೊರತಾದ ಅಂಶಗಳನ್ನು ಹೊರಗಿಡುವ ನಿರ್ಧಾರದಿಂದಾಗಿ ಅನೇಕ ವೀರಶೈವ ಕಾವ್ಯಗಳಲ್ಲಿ ಗೋಚರವಾಗುವ ವಿಷಯಗಳು ಪ್ರಭುಲಿಂಗಲೀಲೆಯಲ್ಲಿ ಸ್ಥಾನ ಪಡೆಯುವುದು

[illegible]

[illegible]

[illegible]

[illegible]

ಸಾಧ್ಯವಾಗಿಲ್ಲ. ಪಂಚಭೂತಗಳ, ಸೂರ್ಯ-ಚಂದ್ರರ ಹಾಗೂ ಆತ್ಮದ ಅಷ್ಟಾವರಣಗಳು ಜೀವಾತ್ಮನಿಗೆ ಇರುವುದನ್ನು ತಿಳಿಸುತ್ತ ದೀಕ್ಷಾಪ್ರಸಂಗದಲ್ಲಿ ಅವುಗಳನ್ನು ನಿವಾರಣೆ ಮಾಡಿಕೊಳ್ಳುವುದನ್ನು ತಿಳಿಸುತ್ತಾನೆಯೇ ಹೊರತು ಬಾಹ್ಯ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಹಾಗೂ ಮಂತ್ರ ಇವುಗಳನ್ನು ಎತ್ತಿಕೊಂಡು ಚರ್ಚಿಸುವುದಿಲ್ಲ. ಪಂಚಾಚಾರಗಳ ವಿಷಯಕ್ಕೂ ಈ ಮಾತು ಅನ್ವಯವಾಗುತ್ತದೆ. ಆಜ್ಞಾಚಕ್ರದಿಂದ ಪಶ್ಚಿಮಚಕ್ರದ ವರೆಗಿನ ಶಿವಯೋಗಿಗಳ ಅಂತರಂಗಾನುಭವವನ್ನು ಯಾವುದಾದರೂ ಲೌಕಿಕ ಅನುಭವಕ್ಕೆ ಹೋಲಿಸಿ ನಿರೂಪಿಸುವುದು ಅಸಾಧ್ಯದ ಮಾತು. ಸಾಧಕನನ್ನು ಸಂಕೇತಿಸುವ ಬಸವಣ್ಣ ಮಹಾಲಿಂಗವನ್ನು ಸಂಕೇತಿಸುವ ಅಲ್ಲಮನಿಗಾಗಿ ರಚಿಸುವ ಶೂನ್ಯಸಿಂಹಾಸನದ ವರ್ಣನೆಯಲ್ಲಿ ಕವಿ ಅದನ್ನು ಕೊಡುವಲ್ಲಿ ಸಫಲನಾಗಿದ್ದಾನೆ. ಆ ಭಾಗವನ್ನು ಓದುತ್ತ ಹೋದಂತೆ ನಿಜಗುಣಶಿವಯೋಗಿ, ಸರ್ಪಭೂಷಣಶಿವಯೋಗಿ, ಮಹಲಿಂಗರಂಗ ಇವರು ನಿರೂಪಿಸಿರುವ ಯೋಗಪ್ರತಿಪಾದನಸ್ಥಲವನ್ನು ಕ್ರಮಿಸುತ್ತ ಹೋಗುತ್ತಿರುವಂತೆ ಭಾಸವಾಗುತ್ತದೆ. ಪ್ರಭುಲಿಂಗಲೀಲೆ ಸಮಗ್ರ ವೀರಶೈವಾಚರಣೆಯನ್ನು ನಿರೂಪಿಸುವ ಏಕೈಕ ಧ್ವನಿಪೂರ್ಣ ಕಾವ್ಯವಾಗಿದೆ.

ಚಾಮರಸ ಹೊಂದಿರುವ ಈ ಅನನ್ಯ ದೃಷ್ಟಿಯ ಕೊರತೆಯಿಂದಾಗಿ ಹರಿಹರ ಮೊದಲುಗೊಂಡು ಉಳಿದೆಲ್ಲ ವೀರಶೈವ ಕವಿಗಳು ಪ್ರಭುಲಿಂಗಲೀಲೆಯಲ್ಲಿ ಅಳವಡಿಸಿದ ದರ್ಶನದ ಮಟ್ಟಕ್ಕೆ ಏರಲು ಅಸಮರ್ಥರಾಗಿದ್ದಾರೆ. ಕಾವ್ಯದಲ್ಲಿ ಊರ್ಧ್ವಗತಿಯಲ್ಲಿ ಸಾಗುವ ಎರಡು ಸ್ತ್ರೀ ಪಾತ್ರಗಳಲ್ಲಿ ಒಂದಾದ ಮಹಾದೇವಿಯಕ್ಕನ ಪ್ರಸಂಗಗಳನ್ನು ಸಾಧಕ ಭಾವಬೆತ್ತಲೆಗೊಳ್ಳುವ ಅಂಶಕ್ಕೆ ಸಮೀಕರಿಸಲಾಗಿದೆ. ಚಾಮರಸ ಬಳಸಿರುವ ಈ ಉನ್ನತ ಮಟ್ಟದ ಕಾವ್ಯತಂತ್ರದಿಂದಾಗಿ ಈ ರೂಪದ ನಿರೂಪಣೆ ಕೇವಲ ಅವನಿಗೆ ಮಾತ್ರ ಸಾಧ್ಯವೆನ್ನುವಂತೆ ಆ ಪ್ರಸಂಗ ಮೂಡಿ ಬಂದಿದೆ. ತನು, ಮನ, ಧನಗಳನ್ನು ಇಡಿಯಾಗಿ ಅರ್ಪಿಸಿದಾಗಲೇ ಸಾಧಕನ ಅರ್ಪಣೆ ಪೂರ್ಣಗೊಳ್ಳುತ್ತದೆ ಎನ್ನುವುದನ್ನು ಸೂಚಿಸುವುದಕ್ಕಾಗಿ ಪ್ರಭುದೇವರು ಆರೋಗಣೆ ಮಾಡಿದ ಪ್ರಸಂಗವನ್ನು ನಿರೂಪಿಸಿರುವುದಕ್ಕೂ ಈ ಮಾತು ಅನ್ವಯವಾಗುತ್ತದೆ. ಇಷ್ಟಾಗಿಯೂ ಅವನು ಪ್ರತಿಮಾವಿಧಾನಕ್ಕೆ ಅಳವಡಿಸಿರುವ ಪವಾಡರೂಪದ ಪ್ರಸಂಗಗಳು ಪವಾಡದ ಸ್ಪರ್ಶವಿಲ್ಲದೆ ನಿರೂಪಿತವಾಗಬಹುದಿತ್ತು. ಅಲ್ಲಮನನ್ನು ನೆಲದಿಂದ ಅಂತರದಲ್ಲಿ ಸಂಚರಿಸುವಂತೆ ಮಾಡದೆ ನೆಲದ ಮೇಲೆಯೇ ನಡೆದಾಡಲು ಹಚ್ಚಿದರೆ ನಮಗೆಲ್ಲ ಸಂತೋಷವಾಗುವಂತೆ ಅಲ್ಲಮಪ್ರಭುವಿಗೂ ಆಗಬಹುದಾಗಿತ್ತು! ಈ ಯಾವುದನ್ನೂ ಗ್ರಹಿಸದ ಹಾಗೂ ಶಿವಯೋಗಾಚರಣೆಯ

[illegible]

[illegible]

ಸ್ಪರ್ಶವನ್ನೇ ಹೊಂದಿರದ ತೆಲುಗು, ತಮಿಳು, ಸಂಸ್ಕೃತ ಭಾಷಾಂತರಕಾರರು ತಮಗೆ ಹೊಳೆದಂತೆ ಪಾತ್ರಗಳನ್ನು ಹಾಗೂ ಪ್ರಸಂಗಗಳನ್ನು ತಿರುಚಿದ್ದಾರೆ. ಇದ್ದುದರಲ್ಲಿ ಮರಾಠಿ ಭಾಷಾಂತರಕಾರ ಇಂಥ ಯಾವ ಪ್ರಮುಖ ಬದಲಾವಣೆಗೆ ಪ್ರಯತ್ನಿಸಿಲ್ಲ.

ವೀರಶೈವಾಚರಣೆಯನ್ನು ಪ್ರತಿಪಾದಿಸಲು ಯೋಜಿಸಿರುವ ಕವಿ ಅದಕ್ಕೆ ಕಾವ್ಯದ ಮೆರುಗನ್ನು ಹೆಚ್ಚಿಸಲು ಮಾಯಾದೇವಿಯ ಪ್ರಸಂಗವನ್ನು ಜೋಡಿಸಿದ್ದಾನೆಂಬುದನ್ನು ನೋಡಿದ್ದೇವೆ. ಇದು ಶೃಂಗಾರರಸದ ಕೊಡುಗೆಗೆ ತುಂಬಾ ಸಹಕಾರಿಯಾಗಿದೆ. ಆದರೆ ಈ ಪ್ರಸಂಗದಲ್ಲಿ ಕವಿ ಇಡಿಯಾಗಿ ಆಧ್ಯಾತ್ಮಿಕ ದೃಷ್ಟಿಕೋನವನ್ನು ಹೊಂದದೆ ಲೋಕಜೀವಿಯಾಗಿ ವರ್ತಿಸಿದ್ದಾನೆಂಬ ಟೀಕೆಗೆ ಪಾತ್ರನಾಗಿದ್ದಾನೆ. ಪ್ರಭು–ಮಾಯೆ–ವಿಮಳೆ–ಅಹಂಕಾರಾಚಾರ್ಯ ಈ ಪಾತ್ರಗಳ ನಡುವಿನ ತಾಕಲಾಟವನ್ನು ಸೃಷ್ಟಿಸುತ್ತ 'ಯಾವುದೇ ಪ್ರಸಂಗದಲ್ಲಿ ಪ್ರಭು ಮಾಯೆಯ ಸೆಳವಿಗೆ ಒಳಗಾಗದೆ ದೂರ ಉಳಿದಿದ್ದಾನೆ'ಎಂದು ಚಿತ್ರಿಸಿರುವುದರಲ್ಲಿ 'ಲಿಂಗಾನುಸಂಧಾನದ ಮಾರ್ಗದಲ್ಲಿ ಕ್ರಮಿಸಬಯಸುವವನು ಪಂಚೇಂದ್ರಿಯಗಳನ್ನು ಇಡಿಯಾಗಿ ಶುದ್ಧವಾಗಿಡಬೇಕಾಗುತ್ತದೆ' ಎಂಬುದನ್ನು ಸೂಚಿಸಿದ್ದಾನೆ. ಆದರೆ ಮಾಯಾದೇವಿಯ ಅವಸ್ಥೆಯನ್ನು ವರ್ಣಿಸುವಾಗ ಔಚಿತ್ಯದ ಗಡಿ ದಾಟಿದ್ದಾನೆ.[೧೪೩] 'ಮಾಯೆ ಮಧುಕನಾಥನನ್ನು ಪೂಜಿಸಿದ ಗತಿ'ಯಲ್ಲಿ ಇನ್ನೂ ಮೇಲ್ಮಟ್ಟದಲ್ಲಿ ನಿಂತು ವರ್ಣನೆಗೆ ತೊಡಗಿದ್ದರೆ ಉಚಿತವೆನಿಸುತ್ತಿದ್ದಿತು.

ಮಿಸುಪ ಧೂಪದ ಧೂಮದಲಿ ಕೆಂ
ಪೆಸೆವ ಲೋಚನವಾನತೆಯ ಭರ
ವಸಕೆ ಸೂಸಿದ ಸುಳಿಗುರುಳು ದೀಪಂಗಳುಬ್ಬೆಯಲಿ ।
ಕುಸರಿ ಬೆಮರಿಡುವಂಗ ಮಿಗೆ ರಂ
ಜಿಸಲು ಮಧುಕೇಶ್ವರನ ಸಂಭೋ
ಗಿಸಿಯೆ ಬಂದಳೊ ಪೇಳೆನಲ್ಮೆಱೆದಿರ್ದಳಾ ಮಾಯೆ ॥ [೧೪೪]

ಈ ಪದ್ಯದಲ್ಲಿ ಚಾಮರಸ ಬಳಸಿರುವ ಪದಪ್ರಯೋಗ ತಕ್ಕುದೆನಿಸುವುದಿಲ್ಲ. ಹಾಗೆಯೇ 'ಪ್ರಭುದೇವರು ಶೂನ್ಯಸಿಂಹಾಸವನೇರಿದಗತಿ'ಯಲ್ಲಿ ಅಲ್ಲಮನನ್ನು ಸ್ವಾಗತಿಸಲು ಹೊರಟ ವಾರವನಿತೆಯರ ವರ್ಣನೆಯೂ ಅಗ್ರಾಹ್ಯವಾಗುತ್ತದೆ. ಏಕೆಂದರೆ ಅದು ಅಲ್ಲಮಪ್ರಭುಸಂಪ್ರದಾಯಕ್ಕೆ ವಿಪರೀತವಾಗಿರುವಂಥದು.

[illegible]

[illegible]

[illegible]

[illegible]

ಆಂಗ್ಲಸಾಹಿತ್ಯದಲ್ಲಿ ಜೋನಾಥನ್ ಸ್ವಿಫ್ಟನ Gulliver's Travels (ಗಲಿವರ್ಸ್ ಟ್ರಾವೆಲ್ಸ್) ಒಂದು ಜನಪ್ರಿಯ ಕೃತಿ. ಮಕ್ಕಳಂತೂ ಅದನ್ನು ಓದಲು ಮುಗಿಬೀಳುತ್ತಾರೆ. ವಿಡಂಬನೆಗಾಗಿ ರಚಿತವಾದ ಅದರ ವಸ್ತು ಸಮಕಾಲೀನ ರಾಜಕೀಯವಾದರೂ ಅದು ಹಿಂದೆ ಬಿದ್ದು ವಾಚಕರಿಗೆ ಅದರಲ್ಲಿರುವ ವಾಚ್ಯಾರ್ಥವೇ ಹೆಚ್ಚು ಆಕರ್ಷಕವಾಗುತ್ತ ಬಂದಿದೆ. ಪ್ರಭುಲಿಂಗಲೀಲೆಯ ವಸ್ತುವನ್ನು ಗ್ರಹಿಸುವುದು ಸಾಮಾನ್ಯ ಓದುಗರಿಗೆ ಸುಲಭದ ಮಾತಲ್ಲ. ಆದರೂ ವಾಚ್ಯಾರ್ಥ–ವ್ಯಂಗ್ಯಾರ್ಥಗಳ ರೂಪದ ನಿರೂಪಣೆಯೇ ಶತಮಾನಗಳಿಂದ ಕಾವ್ಯಪ್ರಿಯರನ್ನು ಆಕರ್ಷಿಸುತ್ತ ಬಂದಿದೆ. ಇದಕ್ಕೆ ಚಾಮರಸನ ನಿರೂಪಣಾತಂತ್ರ ಎಷ್ಟು ಮಹತ್ವದ್ದೊ ವಿವಿಧ ಅಂಶಗಳನ್ನು ಸಂಕೇತಿಸಲು ವ್ಯಕ್ತಿಗಳನ್ನು ಆರಿಸಿಕೊಂಡದ್ದೂ ಅಷ್ಟೇ ಮಹತ್ವದ್ದು. ಶತಮಾನಗಳಿಂದ ಜನಮನದಲ್ಲಿ ಆರಾಧ್ಯಮೂರ್ತಿಗಳಾಗಿ ಮೂಡಿ ಬಂದವರು ಬಸವಾದಿ ಶರಣರು. ಶೂನ್ಯಸಿಂಹಾಸನದ ಪ್ರಥಮಾಧಿಕಾರಿಯಾಗಿದ್ದ ಅಲ್ಲಮಪ್ರಭು ಪರಶಿವನ ರೂಪದಲ್ಲಿಯೇ ಪೂಜೆಗೊಳ್ಳುತ್ತ ಬಂದವನು. ಕಾವ್ಯದಲ್ಲಿ ಅವರ ಬದುಕಿನ ಪ್ರಸಂಗಗಳನ್ನು ಸಾಂಕೇತಿಕವಾಗಿ ಬಳಸಿರುವುದರಿಂದ ಸ್ವಾಭಾವಿಕವಾಗಿಯೇ ಅದು ಆದರಪೂರ್ವಕವಾಗಿ ಸ್ವಿಕೃತವಾಗಿದೆ. ಬಸವಾದಿ ಪ್ರಮಥರ ನಡೆನುಡಿಗಳೊಂದಿಗೆ ಹಾಸುಹೊಕ್ಕಾಗಿರುವ ಪ್ರಭುಲಿಂಗಲೀಲೆ ನಿರಂತರ ಸ್ವಾಗತಾರ್ಹ ಕೃತಿಯಾಗಿರುತ್ತದೆ. ಅದರ ಜೊತೆಗೆ ಧ್ವನ್ಯಾರ್ಥರೂಪದ ಶಿವಯೋಗಾಚರಣೆಯನ್ನು ಕುರಿತು ಚಿಂತನೆ ಪ್ರಾರಂಭವಾದರೆ ವೀರಶೈವ ಸಾಹಿತ್ಯದಲ್ಲಿ ಮಾತ್ರವಲ್ಲ ಕನ್ನಡ ಸಾಹಿತ್ಯದಲ್ಲಿಯೇ ಪ್ರಭುಲಿಂಗಲೀಲೆ ತುಂಬ ತೂಕದ ಕಾವ್ಯ ಎಂದು ನಿರ್ಧಾರವಾಗುತ್ತದೆ. ಅದರ ಕರ್ತೃ ಚಾಮರಸನ ಸ್ಥಾನಮಾನಗಳೂ ನಿರ್ಧಾರವಾಗುತ್ತವೆ.

೫. ಕಾವ್ಯದ ಶರೀರ

೫.೧ ಶೈಲಿ

ರೀತಿ ಕಾವ್ಯದ ಆತ್ಮ, ಧ್ವನಿ ಕಾವ್ಯದ ಆತ್ಮ, ರಸ ಕಾವ್ಯದ ಆತ್ಮ ಎಂದೆಲ್ಲ ವಿವಿಧ ಪ್ರಸ್ಥಾನದವರು ವಿವರಣೆ ನೀಡಿರುವುದಕ್ಕೆ ಜಗನ್ನಾಥ ಪಂಡಿತ 'ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದ ಕಾವ್ಯ' ಎಂದು ವ್ಯಾಪಕಾರ್ಥ ನೀಡಿರುವುದನ್ನು ನೋಡಿದ್ದೇವೆ. ಅವನ ಹೇಳಿಕೆಗೆ

[illegible]

[illegible]

[illegible]

[illegible]

[illegible]

ಪ್ರಭುಲಿಂಗಲೀಲೆ ಹೇಗೆ ಸ್ಪಂದಿಸುತ್ತದೆ ಎಂಬುದನ್ನು ಗಮನಿಸುತ್ತ ಹೋದಂತೆ ಭಟ್ಟತೌತನ 'ಪ್ರಜ್ಞಾನವನವೋಲ್ಲೇಖಶಾಲಿನೀ ಪ್ರತಿಭಾ ಮತಾ' ಎಂಬ ಉಕ್ತಿ ಹೆಜ್ಜೆಹೆಜ್ಜೆಗೆ ನೆನಪಾಗುತ್ತದೆ.

'ವರ್ಣನೆಗಾಗಿಯೇ ವರ್ಣನೆ ಮಾಡುವುದನ್ನು ಈ ಕೃತಿಯಲ್ಲಿ ನಾವೆಲ್ಲಿಯೂ ಕಾಣುವುದಿಲ್ಲ.'[೧೪೫] ಪ್ರಭುಲಿಂಗಲೀಲೆಯ ವಸ್ತುವಿಗೂ ಬೇರಾವುದೇ ಕಾವ್ಯದ ವಸ್ತುವಿಗೂ ಇರುವ ವ್ಯತ್ಯಾಸವನ್ನು ಪರೀಶಿಲಿಸುತ್ತ ಹೋದರೆ ಅಷ್ಟಾದಶ ವರ್ಣನೆಗಳು ಪ್ರಭುಲಿಂಗಲೀಲೆಗೆ ಅವಶ್ಯಕವೆಂದು ತೋರುವುದಿಲ್ಲ. ಲೋಕವ್ಯವಹಾರದೊಂದಿಗೆ ಸಮನ್ವಯತೆ ಹೊಂದುವ ಈ ವರ್ಣನೆಗಳು ಆ ವ್ಯವಹಾರವನ್ನು ತಟಸ್ಥಗೊಳಿಸಿ ಪಾರಲೌಕಿಕ ವಿಚಾರವನ್ನು ನಿರೂಪಿಸುವ ಕಾವ್ಯಕ್ಕೆ ಹೊಂದುವುದಾದರೂ ಹೇಗೆ ಸಾಧ್ಯ? ಮಾಯಾಸಂಪುಟದ ನಿರೂಪಣೆಯನ್ನು ನೋಡಿದರೆ ಆತ ಯಾವುದೇ ವರ್ಣನೆಯನ್ನು ಸಮರ್ಥವಾಗಿ ಮಾಡಬಲ್ಲವನಾಗಿದ್ದನೆಂಬುದು ವಿದಿತವಾಗುತ್ತದೆ. ಲೋಕಾನುಭವವಿಲ್ಲದೆ ಕೇವಲ ಓದಿನಿಂದ ಅಷ್ಟಾದಶ ವರ್ಣನೆಗಳಿಗೆ ತೊಡಗುವುದರಿಂದ ಕಾವ್ಯದ ಪರಿಪೂರ್ಣತೆಗೆ ಎಂಥ ನ್ಯಾಯ ದೊರಕೀತು?[೧೪೬] ಲೋಕಾನುಭವವಿದ್ದೂ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಪ್ರತಿಭೆಯ ಕೊರತೆ ಇರುವವರದು ಇನ್ನೊಂದು ಗುಂಪು. ಇದರಿಂದಾಗಿ ಅಂಥವರು ಕಾವ್ಯರಚನೆಯಲ್ಲಿ ಸೋಲು ಅನುಭವಿಸಬೇಕಾಗುತ್ತದೆ. ಎಳಂದೂರು ಹರೀಶ್ವರನ 'ಪ್ರಭುದೇವರ ಪುರಾಣ'ವನ್ನು ಅವಲೋಕಿಸಿದರೆ ಆತ ತನ್ನ ಕೃತಿಗೆ ಮಹಾಕಾವ್ಯದ ಸ್ಪರ್ಶ ಕೊಡುವ ಪ್ರಯತ್ನದಲ್ಲಿ ದರ್ಶನ ಹಾಗೂ ಕಲಾಭಿಜ್ಞತೆಗಳ ಕೊರತೆಯಿಂದ ಸೋತು ಹೋಗಿದ್ದಾನೆಂಬುದು ಗೊತ್ತಾಗುತ್ತದೆ.[೧೪೭] ಈ ವಿಷಯದಲ್ಲಿ ಔಚಿತ್ಯ ತೋರಿರುವುದರಿಂದಾಗಿಯೇ ಚಾಮರಸ ಗೆದ್ದಿರುವುದು!

ತತ್ತ್ವಕ್ಕೆ ಕಾವ್ಯದ ರೂಪು ಕೊಡುವಲ್ಲಿ ಕವಿ ಮೈಯೆಲ್ಲ ಕಣ್ಣಾಗಿ ವರ್ತಿಸಿದ್ದಾನೆಂಬುದನ್ನು ನೋಡಿದ್ದೇವೆ. ಯಾವುದೇ ಪ್ರಸಂಗವನ್ನು ಅನವಶ್ಯಕ ವರ್ಣನೆಗಾಗಿ ಬಳಸಿಕೊಳ್ಳದಿರುವುದು ಆತನ ಪ್ರಜ್ಞಾವಿಶೇಷತೆಯಾಗಿದೆ. ಕಥಾಸರಣಿಗನುರೂಪವಾದಂಥ ಅಲ್ಪವರ್ಣನೆಗಳು ಸಮಯೋಚಿತವಾಗಿ ಮಿತವಾಗಿ ಅಲ್ಲಲ್ಲಿ ಬಂದಿವೆ. 'ಮಾಯಾದೇವಿಯ ಪ್ರಸಂಗದಲ್ಲಿ ವರ್ಣನಾಂಶಗಳು ಸ್ವಲ್ಪ ಹೆಚ್ಚಾಗಿ ಬರುವುವಾದರೂ ಮಾಯೆಯ ಸಹಜ ಮೋಹಕತ್ವವನ್ನು ಪ್ರಕಟಿಸುವುದಕ್ಕೂ ಅಂತಹ ಮಾಯೆಯನ್ನು ತಿರಸ್ಕಾರ ಮಾಡಿದ ಪ್ರಭುವಿನ ಘನತೆಯನ್ನು ಪ್ರದರ್ಶಿಸುವುದಕ್ಕೂ ಅನುಕೂಲವಾಗಿವೆ.'೧೪೮

[illegible]

[illegible]

[illegible]

[illegible]

ನೇರ ನಿರೂಪಣೆಯಲ್ಲಿ ತೊಡಗುವವನಿಗೆ ನಾಟಕಕಾರನಂತೆ ವಸ್ತುನಿಷ್ಠತೆ ಸಾಧಿಸುವುದಿಲ್ಲ. ಆಯಾ ಪಾತ್ರಗಳು ಆಯಾ ಸಂದರ್ಭಗಳಲ್ಲಿ ತಮ್ಮ ತಮ್ಮ ಗತಿಗಳಲ್ಲಿ ಸಾಗುವಂತೆ ಮಾತ್ರ ನೋಡಿಕೊಳ್ಳುವ ಹಾಗೂ ವೈಯಕ್ತಿಕತೆಯಿಂದ ಇಡಿಯಾಗಿ ದೂರ ಉಳಿಯುವ ನಾಟಕಕಾರರು ಉನ್ನತ ಮಟ್ಟದ ಕೃತಿಗಳನ್ನು ಸೃಷ್ಟಿಸುವಲ್ಲಿ ಸಫಲರಾಗಿದ್ದಾರೆ. ಆಂಗ್ಲ ನಾಟಕಕಾರ ಷೇಕ್ಸ್‌ಪಿಯರ್ ಇದಕ್ಕೆ ಉತ್ತಮ ಉದಾಹರಣೆ. ಕಾವ್ಯರಚನೆಯಲ್ಲಿ ತೊಡಗುವ ಕವಿ ವೈಯಕ್ತಿಕತೆಯಿಂದ ದೂರ ನಿಲ್ಲಲು ನಾಟಕೀಯ ತಂತ್ರ ಹೆಚ್ಚು ಸಹಕಾರಿಯಾಗುತ್ತದೆ. ವಸ್ತುನಿಷ್ಠತೆಗೆ ಸಮೀಪವಾಗುವ ಈ ವಿಧದ ನಿರೂಪಣೆಯನ್ನು ಚಾಮರಸ ಕಾವ್ಯದುದ್ದಕ್ಕೂ ಬಳಸಿರುವುದನ್ನು ಕಾಣುತ್ತೇವೆ, 'ಮಂಗಲಾಚರಣದ ಗತಿ' ಹಾಗೂ 'ಪ್ರಮಥರು ಕಲ್ಯಾಣಕ್ಕೆ ಬಂದ ಗತಿ' ಇವುಗಳಲ್ಲಿ ಮಾತ್ರ ಇಡಿಯಾಗಿ ನೇರ ನಿರೂಪಣೆ ಇದೆ. ಇನ್ನುಳಿದ ಗತಿಗಳಲ್ಲಿ ನೇರ ನಿರೂಪಣೆಯ ಜೊತೆಗೆ ನಾಟಕೀಯ ತಂತ್ರವೂ ಮೇಳೈಸಿದೆ. ವೈಶಿಷ್ಟ್ಯವೆಂದರೆ ತತ್ತ್ವದ ನಿರೂಪಣೆಗೆ ರಚಿಸಲಾಗಿರುವ ಇಷ್ಟಲಿಂಗದ ಗತಿ, ಸಾಧಕಾಂಗದ ಗತಿ, ಮುನಿಗಳಿಗೆ ಬೋಧಿಸಿದ ಗತಿ ಹಾಗೂ ಮನೋಲಯದ ಗತಿ ಇವುಗಳಲ್ಲಿ ಪ್ರಭುವಿಗೆ ಬಸವಣ್ಣ ಜೊತೆಗಾರನಾಗಿದ್ದಾನೆ ಇಲ್ಲವೆ ಮುನಿಗಳು, ಕಿರಾತಕರು ಜೊತೆಗಾರರಾಗಿದ್ದಾರೆ. ಪಾರ್ವತೀ-ಪರಮೇಶ್ವರ; ಪ್ರಭು-ಮಾಯೆ-ವಿಮಳೆ; ಪ್ರಭು-ಅಕ್ಕಮಹಾದೇವಿ ಇವರ ನಡುವಿನ ಸಂವಾದಗಳು ಪರಿಣಾಮಕಾರಿಯಾದ ನಾಟಕೀಯ ಪ್ರಸಂಗಗಳಾಗಿ ಮೂಡಿ ಬಂದಿವೆ. ಅದೇ ರೀತಿ ಪ್ರಭುದೇವರು ಕಲ್ಯಾಣಕ್ಕೆ ಬಂದಾಗಿನ ಪ್ರಸಂಗ ಹಾಗೂ ಆರೋಗಣೆ ಮಾಡುವಾಗಿನ ಪ್ರಸಂಗ ಇವುಗಳಲ್ಲಿ ಮೂಡಿ ಬಂದಿರುವ ನಾಟಕೀಯ ತಂತ್ರವೂ ಅಷ್ಟೇ ಪರಿಣಾಮಕಾರಿಯಾಗಿದೆ. ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ ಹಾಗೂ ಗೋರಕ್ಷ ಇವರುಗಳೊಂದಿಗಿನ ಪ್ರಭುವಿನ ಸಂವಾದಗಳು ಕೂಡ ಈ ತಂತ್ರಕ್ಕೆ ಉದಾಹರಣೆಗಳು.

ಒಂದೊಂದು ಗತಿಗೆ ಆಯ್ದುಕೊಂಡಿರುವ ವಸ್ತುವಿಗೆ ಸಮೀಪದ ಸಾಕ್ಷಿಯಾಗಿ ವಚನಗಳನ್ನು ಬಳಸಿಕೊಂಡಿರುವ ಕವಿ ಪ್ರತಿಯೊಂದು ಗತಿಗೆ ಕೊಟ್ಟಿರುವ ಸೂಚನಾಪದ್ಯ ಹಾಗೂ ಆ ನಂತರದ ಮೊದಲ ಪದ್ಯ ಇವುಗಳಲ್ಲಿ ನೇರ ನಿರೂಪಣೆ ಬಳಸಿಕೊಳ್ಳುವುದರ ಜೊತೆಗೆ ವಸ್ತುವಿನ ತಾತ್ವಿಕ ವಿವರಣೆಯನ್ನು ಕೊಡುವ ತಂತ್ರವನ್ನೂ ಅನುಸರಿಸಿದ್ದಾನೆ. ಮೂರು ಮತ್ತು ನಾಲ್ಕನೆಯ ಗತಿಗಳಿಗೆ ಮಾತ್ರ ಈ ರೂಪದ ಪದ್ಯಗಳಿಲ್ಲ. ಆ ಎಲ್ಲ ಗತಿಗಳ ಮೊದಲ ಪದ್ಯಗಳನ್ನು ಕ್ರಮವಾಗಿ ಹೊಂದಿಸುತ್ತ ಹೋದಂತೆ

[illegible]

ಶಿವಯೋಗಾಚರಣೆಯೇ ಸಂಕ್ಷಿಪ್ತವಾಗಿ ಮೂಡಿ ಬರುವುದನ್ನು ಕಾಣುತ್ತೇವೆ. ಕವಿ ತಾನು ನಿರೂಪಿಸಬಯಸುವ ತತ್ತ್ವದ ವಿಚಾರದಲ್ಲಿ ಪೂರ್ಣ ಅರಿವನ್ನು ಹೊಂದಿದ್ದನೆಂಬುದನ್ನು ಈ ಪದ್ಯಗಳು ಸಾಬೀತುಪಡಿಸುತ್ತವೆ.

ಹಿನ್ನೋಟ (flash back) ಕವಿ ಬಳಸಿರುವ ಇನ್ನೊಂದು ತಂತ್ರ. ಮಾಯೆಗೆ ಅವಳ ಕಾರ್ಯವನ್ನು ನೆನಪಿಸುವುದಕ್ಕಾಗಿ ಬರುವ ವಿಮಳೆ ಅವಳ ಮುಂದೆ ಅಲ್ಲಮನ ಜನ್ಮವೃತ್ತಾಂತವನ್ನು ಬಿಚ್ಚಿಡುತ್ತಾಳೆ. ನಿರೂಪಣೆಯ ಆಳಕ್ಕಿಳಿದು ನೋಡಿದರೆ ಚಾಮರಸ ಆಯ್ದುಕೊಂಡಿರುವ ವಸ್ತುವಿಗೂ ಈ ತಂತ್ರಕ್ಕೂ ಅವಿನಾಭಾವ ಸಂಬಂಧದಂತೆ ಅದು ಬಳಕೆಯಾಗಿದೆ. ಲೋಕಜೀವಿಯನ್ನು ಸಂಕೇತಿಸುವ ಮಾಯೆ ಪರಮಾತ್ಮನನ್ನು ಸಂಕೇತಿಸುವ ಅಲ್ಲಮನೊಂದಿಗೆ ಭಕ್ತಿಯ ನೆಲೆಯಲ್ಲಿ ನಿಂತು ಒಂದಾಗಬೇಕಾಗುತ್ತದೆಂಬುದು ತಿಳಿದು ಬರುವುದು ಬುದ್ಧಿಯ ಕೈ ಮೇಲಾದಾಗ ತಾನೇ! ಇದನ್ನು ವಿಮಳೆಯ ಪ್ರಸಂಗದಲ್ಲಿ ಕವಿ ಅತ್ಯಂತ ಪರಿಣಾಮಕಾರಿಯಾಗಿ ಬಳಸಿದ್ದಾನೆ.

ಪ್ರಭುಲಿಂಗಲೀಲೆ ಒಂದು ಪ್ರತಿಮಾಕಾವ್ಯವಾಗಿದೆಯೆಂಬುದನ್ನು ನೋಡಿದ್ದೇವೆ. ಅದನ್ನು ಅವಲೋಕಿಸುತ್ತ ಹೋದಂತೆ ವಿವಿಧ ಪಾತ್ರಗಳನ್ನು ಒಳಗೊಂಡ ನಾಟಕದ ದೃಶ್ಯಗಳು ನಮ್ಮ ಮುಂದೆ ಹಾಯ್ದು ಹೋದಂತೆನಿಸುತ್ತದೆ. ಮಾಯಾದೇವಿಯ ನಾಟ್ಯದ ವರ್ಣನೆ ಎಷ್ಟೊಂದು ಪರಿಪೂರ್ಣವಾಗಿದೆಯೆಂದರೆ ಅವಳು ನಮ್ಮ ಮುಂದೆಯೇ ವಿವಿಧ ಭಂಗಿಗಳನ್ನು ಒಳಗೊಂಡ ಭರತನಾಟ್ಯವನ್ನು ಪ್ರದರ್ಶಿಸುತ್ತಿದ್ದಾಳೆಂಬಂತೆ ಭಾಸವಾಗುತ್ತದೆ.

ಪ್ರಭುಲಿಂಗಲೀಲೆಯಲ್ಲಿ ವರ್ಣನೆಗಳು ಸೂಜಿಗೆ ಮುದ್ದು ಕೊಟ್ಟಂತೆ ಬಂದಿವೆ.[೧೪] ಕಾವ್ಯದ ಉದ್ದೇಶ ಶಿವಯೋಗಾಚರಣೆಯ ನಿರೂಪಣೆಯಾಗಿರುವುದರಿಂದ ವಸ್ತು ಮತ್ತು ರೀತಿಗಳು ಅದಕ್ಕೆ ಪೂರಕವಾಗಿ ನಿಲ್ಲುವುದು ಆವಶ್ಯಕ. ಲೌಕಿಕ ಬದುಕನ್ನು ಆಧ್ಯಾತ್ಮಿಕ ಬದುಕಿಗೆ ಸೋಪಾನ ಮಾಡಿಕೊಳ್ಳಬೇಕೆಂದು ತಿಳಿಸುವಾಗಲೆಲ್ಲ ಕವಿ ಲೋಕಜೀವಿಗಳನ್ನು ಪ್ರಾಸಂಗಿಕವಾಗಿ ಚುಚ್ಚುತ್ತಾನೆ. ಸಹೃದಯರು ವರ್ಣನಾತ್ಮಕ ನಿರೂಪಣೆಯಿಂದ ಆಕರ್ಷಿತರಾದರೂ ಅವುಗಳಲ್ಲಿ ತೋರುವ ವ್ಯಂಗ್ಯದಿಂದ ಚುಚ್ಚಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಗುತ್ತದೆ.

ತಾರುಣ್ಯದಲ್ಲಿರುವ ಲೋಕಜೀವಿ ಸುಖಕ್ಕಾಗಿ ಹಾತೊರೆಯುವುದು ಸಹಜ. ಪಂಚೇಂದ್ರಿಯಗಳನ್ನು ತಟಸ್ಥಗೊಳಿಸಿ ಪರಮಸುಖಕ್ಕೆ ಎಳಸುವ ಬದಲಾಗಿ ಆ ಪಂಚೇಂದ್ರಿಯಗಳ ಮುಖಾಂತರವೇ ಅದನ್ನು ಅನುಭವಿಸಬಯಸುವುದು ಅಜ್ಞಾನ. ಮದೋನ್ಮತ್ತನಾಗಿ ಸಾಗುವವನಿಗೆ ಆತ್ಮಜ್ಞಾನವೆಂಬ ಅತ್ಯಂತ ಬಿರುಸಾದ ಕಬ್ಬನ್ನು ಮೆಲ್ಲುವುದು ಸಾಧ್ಯವಿಲ್ಲ.

ಕೊಬ್ಬಿ ಕೋಮಲವಾದ ನಿಗುರಿದ
ನಿಬ್ಬರದ ನಿಡುಗಣ್ಣುಗಳ ಕಾ
ಗಬ್ಬನಱಿಯದೆ ಕಬ್ಬನಿಚ್ಛೆಗೆ ಮೆಲುವ ಮರುಳಂತೆ ।
ಮಬ್ಬುದೋಱುವ ಮದದ ಡಂಬಿನ
ಹಬ್ಬುಗೆಯಲಿಹ ಗುರು ನಿರೂಪದ
ಲುಬ್ಬಿ ಮಾಡುವ ಮಾಟ ನಿಷ್ಫಲವೆಂದಳಾ ವಿಮಳೆ ॥ [೧೫೦]

ಆದಕ್ಕಾಗಿ ಅಹಂಕಾರವೆಂಬ ಪಶುವನ್ನು ಮನಸ್ಸೆಂಬ ಕಂಭಕ್ಕೆ ಬಿಗಿದು ಕಟ್ಟಿ ವಿವೇಕವೆಂಬ ಶಸ್ತ್ರವನ್ನು ಹಿಡಿದು ಸಾಗಬೇಕಾಗುತ್ತದೆ.

ಲೇಪಿಸಿದಹಂಕಾರವೇ ಪಶು
ಯೂಪಕಂಭವೆ ಮನಸು ಪವನ
ಸ್ಥಾಪಿತವೆ ಬಂಧಿಸುವ ಪಾಶ ವಿವೇಕವೇ ಶಸ್ತ್ರ ।
ವ್ಯಾಪಿಸಿದ ಸುಜ್ಞಾನವಹ್ನಿ ಸ
ದಾ ಪುನೀತಮಯಾತ್ಮನಧ್ವರಿ
ಯೀಪರಿಯನಱುಹಿಸಿದನಾ ಪ್ರಭು ಪರಮ ಮುನಿಗಳಿಗೆ ॥ [೧೫೧]

ಆದೇ ರೀತಿ ವಿಷಯಸುಖಗಳಿಗೆ ಹೇಸಿ ನಿರ್ವಿಷಯದಿಂದ ಯೋಗಾಚರಣೆಗೆ ತೊಡಗಿದವರು ಮಾತ್ರ ಪ್ರಭುಲಿಂಗಲೀಲೆಯ ಕತೆಯನ್ನು ಕೇಳಬೇಕು.[೧೫೨] ಲಿಂಗಾಂಗಸಾಮರಸ್ಯಕ್ಕೆ ತೊಡಗದವನ ಪಾಡು ಹೇಗಾದೀತು? ಡಂಭಕಯೋಗಿಗೆ ಅನುಭವ ಸಹನೆಯಾಗುವುದಿಲ್ಲ, ಕೋಪಿಗೆ ಶಾಂತಿ ಸಹನೆಯಾಗುವುದಿಲ್ಲ ಎನ್ನುವಂಥ ಮಾತುಗಳು ಅಂಥವರನ್ನು ಜೋರಾಗಿ ತಿವಿಯುತ್ತವೆ.[೧೫೩] ಕಾವ್ಯದುದ್ದಕ್ಕೂ ಇಂಥ ವರ್ಣನೆಗಳನ್ನು ನೋಡಬಹುದು.

[illegible]

[illegible]

[illegible]

[illegible]

[illegible]

ಅಲ್ಲಮಪ್ರಭುಸಂಪ್ರದಾಯಕ್ಕೆ ತನ್ನನ್ನು ಇಡಿಯಾಗಿ ಅರ್ಪಿಸಿಕೊಂಡಿರುವುದಕ್ಕೆ ಕವಿ ಮೇಲಿಂದ ಮೇಲೆ ಸಾಕ್ಷಿಯಾಗಿ ನಿಲ್ಲುತ್ತಾನೆ. ಇದರೊಂದಿಗೆ ವಸ್ತು ಮತ್ತು ನಿರೂಪಣೆಗಳನ್ನು ಒಂದರಿಂದ ಇನ್ನೊಂದನ್ನು ಬೇರ್ಪಡಿಸಲಾಗದಂತೆ ಕಾವ್ಯವನ್ನು ಮುನ್ನಡೆಸುತ್ತಾನೆ. ಯಾವುದೇ ರೀತಿಯ ಚ್ಯುತಿ ಬಾರದಂತೆ ಶಿವಯೋಗಾಚರಣೆಯನ್ನು ನಿರೂಪಿಸುತ್ತ ತಾನೊಬ್ಬ ಉನ್ನತಮಟ್ಟದ ಅನುಭಾವಿ ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ಅಲ್ಲೆಲ್ಲ ತನ್ನ ವ್ಯಕ್ತಿತ್ವ ನಿರಪೇಕ್ಷತೆಯನ್ನು ಕಾಯ್ದುಕೊಂಡು ದೃಷ್ಟಿಯಂತೆ ಸೃಷ್ಟಿ ಎಂಬ ಮಾತನ್ನು ಸಾಕ್ಷಾತ್ಕರಿಸುತ್ತಾನೆ. ಒಟ್ಟಿನಲ್ಲಿ ಚಾಮರಸನ ಮಾತು ಹೊರಗೆ ಕಾಣುವಷ್ಟು ಸುಲಭವಾಗಿಲ್ಲ ಕಾವ್ಯದಲ್ಲಿ ಧ್ವನಿ ಮಾತುಮಾತಿಗೆ ಮೈದುಂಬಿ ನಿಲ್ಲುತ್ತದೆ. ಅಲ್ಲಿ ಶಬ್ದ ಸ್ವಲ್ಪ; ಅರ್ಥ ಅನಂತ. ಅರ್ಥದ ಭಾರದಿಂದ ಅವನ ಕಾವ್ಯ ಬಾಗಿ ಬಳಕುತ್ತಿದೆ, ತೂಗಿ ತೊನೆಯುತ್ತಿದೆ. ತತ್ತ್ವದ ತಳಹದಿಯ ಮೇಲೆ ಕಾವ್ಯದ ಮಹೋನ್ನತ ಮಂದಿರ ನಿಂತಿದೆ.' [೧೫೪]

೫.೨ ಭಾಷೆ ಮತ್ತು ಛಂದಸ್ಸು

ಕಾವ್ಯ ಗದ್ಯ ಅಥವಾ ಪದ್ಯದಲ್ಲಿರಬಹುದು ಅದು ಪದ್ಯರೂಪದಲ್ಲಿದ್ದರೆ ಬಂಧದಲ್ಲಿ ವ್ಯವಸ್ಥೆಗೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ವಿಷಯದಲ್ಲಿ ಚಾಮರಸ ಷಟ್ಪದಿಯನ್ನು ಪುರಸ್ಕರಿಸಿದ್ದಾನೆ. ಹದಿನೈದನೆಯ ಶತಮಾನದಲ್ಲಿ ಬದುಕಿದ್ದ ಅವನ ಮುಂದೆ ಕವಿವ್ಯಾಪಾರದ ಅಭಿವ್ಯಕ್ತಿಗೆ ಮೂರು ಆಯ್ಕೆಗಳಿದ್ದವು. ಅವುಗಳೆಂದರೆ ಸಂಸ್ಕೃತ ಮೂಲದ ಚಂಪೂ, ಹರಿಹರನಿಂದ ಸಮೃದ್ಧವಾಗಿ ಬಳಸಲ್ಪಟ್ಟ ರಗಳೆ ಹಾಗೂ ರಾಘವಾಂಕನಿಂದ ರೂಪು ಪಡೆದಿದ್ದ ಷಟ್ಪದಿ ಈ ಮೊದಲು ಕೇವಲ ಪಂಡಿತರ ಸೊತ್ತಾಗಿದ್ದ ಕಾವ್ಯ ಚಾಮರಸನ ಕಾಲಕ್ಕಾಗಲೇ ಜನಪದರ ಸಮೀಪ ಹೆಜ್ಜೆ ಇಡತೊಡಗಿದ್ದರಿಂದ ಚಂಪೂ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳತೊಡಗಿತ್ತು. ಓಘದ ರಗಳೆಗೆ ಹರಿಹರನೇ ಆದಿ, ಹರಿಹರನೇ ಅಂತ್ಯ ಎಂಬ ಸ್ಥಿತಿ ಉಂಟಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಚಾಮರಸ ತನ್ನದೇ ಆದ ಅಭಿವ್ಯಕ್ತಿ ಪ್ರಕಾರವನ್ನು ರೂಪಿಸಲು ಪ್ರಯತ್ನಿಸದೆ ಭಾಮಿನಿಷಟ್ಪದಿಯನ್ನು ಅಪ್ಪಿಕೊಂಡಿದ್ದಾನೆ.

ಪಂಪ, ರನ್ನ ಮತ್ತು ಅವರ ಸಮಕಾಲೀನ ಕವಿಗಳು ಬಳಸುತ್ತಿದ್ದ ಚಂಪೂ ಪ್ರಕಾರದಲ್ಲಿ ಱ ಮತ್ತು ೞ ಕಾರಗಳ ಬಳಕೆ ಸಾಮಾನ್ಯವಾಗಿತ್ತು. ಬಸವಾದಿ ಶರಣರ ವಚನಗಳಲ್ಲಿ ಱ ಕಾರದ ಬಳಕೆಯನ್ನು ಮಾತ್ರ ಕಾಣುತ್ತೇವೆ. ಹರಿಹರನಂತೂ ತನ್ನ ರಗಳೆಗಳಲ್ಲಿ ಈ ಎರಡರ ಬಳಕೆಯನ್ನೂ ತಿರಸ್ಕರಿಸಿ

[illegible]

[illegible]

[illegible]

ಬಿಟ್ಟಿದ್ದಾನೆ. ಶಿವಶರಣರಂತೆ ಚಾಮರಸ ಱ ಕಾರವನ್ನು ಮಾತ್ರ ಬಳಸುತ್ತಾನೆ, ಅಲ್ಲದೆ ಅದನ್ನು ರ ಕಾರದೊಡನೆ ಅಲ್ಲಲ್ಲಿ ಪ್ರಾಸಸ್ಥಾನದಲ್ಲಿ ಮಿಶ್ರವಾಗಿಸುತ್ತಾನೆ.[೧೫೫] ವ್ಯಾಕರಣದ ನಿಯಮಗಳು ಶಿಥಿಲಗೊಂಡು ನವೀನ ಶಬ್ದಗಳನ್ನು ಸಾಧಿಸುವ ಕ್ರಮ, ಸಂಸ್ಕೃತ ಶಬ್ದಗಳನ್ನು ತಮ್ಮ ಅನುಕೂಲಕ್ಕೆ ಅನುವಾಗುವಂತೆ ಅನಿಯಮಿತ ರೀತಿಯಲ್ಲಿ 'ಅಪಭ್ರಂಶ' ಮಾಡಿಕೊಳ್ಳುವ ಸ್ವಾತಂತ್ರ್ಯ, ಷಟ್ಪದಿಕಾರರಲ್ಲಿ ಸಹಜವಾಗಿರುವಂತೆ ಚಾಮರಸನಲ್ಲಿಯೂ ಕಾಣಿಸಿಕೊಳ್ಳುತ್ತವೆ.[೧೫೬] ಹಳಗನ್ನಡನಲ್ಲಿ ಬಳಕೆಯಲ್ಲಿರದ ಹಾಗೂ ನಡುಗನ್ನಡದಲ್ಲಿ ಪ್ರಯೋಗಿಸಲಾದ ಕೆಲವು ವಿಶಿಷ್ಟ ಪದಪ್ರಯೋಗಗಳು ಚಾಮರಸನಲ್ಲಿಯೂ ನೋಡಲು ಸಿಗುತ್ತವೆ.[೧೫೭] ಎಷ್ಟೋ ಬಳಕೆ ತಪ್ಪಿದ ಹಳಗನ್ನಡ ರೂಪಗಳೂ ಶಬ್ದಗಳೂ ಈ ಕಾವ್ಯದಲ್ಲಿ ದೊರೆಯುತ್ತವೆ. [೧೫೮]

೫.೩ ಅಲಂಕಾರ

ಕಾವ್ಯಕ್ಕೆ ಸೊಗಸು ಕೊಡತಕ್ಕದ್ದೆಂದು ತೋರಿದ ಎಲ್ಲವೂ ಅಲಂಕಾರವೆಂದು ಲಕ್ಷಿಸುತ್ತ ಕಾವ್ಯಧರ್ಮವನ್ನು ಚಾಮರಸ ಪ್ರಭುಲಿಂಗಲೀಲೆಯಲ್ಲಿ ಹೇಗೆ ಪೂರೈಸಿದ್ದಾನೆಂಬುದನ್ನು ನೋಡಿದ್ದೇವೆ. ಅದರಲ್ಲಿ ತೋರುವ ಸೌಂದರ್ಯವನ್ನು ಸತ್ಯ ಮತ್ತು ಶಿವತ್ವಕ್ಕೆ ಸಮನಾಗಿಟ್ಟು ಕಾವ್ಯಗುಣವನ್ನು ಪರಿಶೀಲಿಸಿದ್ದೇವೆ. ಅದೆಲ್ಲ ಕಾವ್ಯದ ಆತ್ಮಕ್ಕೆ ಸಂಬಂಧಿಸಿದ ವಿಚಾರ. ಆತ್ಮ ಹಾಗೂ ಶರೀರ ಇವುಗಳ ಅವಿನಾಭಾವ ಸಂಬಂಧದಲ್ಲಿ ಮಾತ್ರ ಕಾವ್ಯಾರ್ಥಕ್ಕೆ ದಾರಿಯಾಗುತ್ತದೆ. ಅಂತೆಯೇ ಇದೀಗ ಕಾವ್ಯ ಶರೀರದ ಒಂದು ಭಾಗವಾಗಿರುವ ಅಲಂಕಾರವನ್ನು ಶಬ್ದಾಲಂಕಾರ ಹಾಗೂ ಅರ್ಥಾಲಂಕಾರ ಇವುಗಳ ರೂಪದಲ್ಲಿ ಪರಿಶೀಲಿಸಲಾಗುವುದು

ಚಾಮರಸನ ಕಾವ್ಯದಲ್ಲಿ ಹೆಚ್ಚಾಗಿ ಮೃದುವರ್ಣಗಳೇ ತುಂಬಿಕೊಂಡಿವೆ. ಪರುಷವರ್ಣಗಳಿಗಾಗಿ ಶ್ರಮವಹಿಸಿ ಹುಡುಕಬೇಕಾಗುತ್ತದೆ. ಜಾಗರೂಕತೆಯಿಂದ ಕ್ರಮಿಸುವಾಗ ಮಾತ್ರ ಒಮ್ಮೊಮ್ಮೆ ಮಹಾಪ್ರಾಣಗಳು ಗೋಚರಿಸುತ್ತವೆ. 'ಟ' ವರ್ಗದ ವರ್ಣಗಳು ಹಾಗೂ ರೇಫ ಪ್ರಾಸಸ್ಥಾನದಲ್ಲಿ ಬಂದಿವೆಯಾದರೂ ಅವುಗಳ ಪುನರಾವರ್ತನೆ ಬಹಳ ಕಡಿಮೆ. ರೌದ್ರ ರಸಕ್ಕೆ ಅವಕಾಶವಿರುವ ಸಿದ್ಧರಾಮನ ಗತಿಯಲ್ಲಿ ಮಾತ್ರ ಈ ರೀತಿಯ ವರ್ಣಗಳನ್ನು ಹೆಚ್ಚಾಗಿ ಕಾಣುತ್ತೇವೆ. ಅಲ್ಲಿ ಅವು

[illegible]

[illegible]

[illegible]

ಪ್ರಾಸಸ್ಥಾನದಲ್ಲಿ ಗೋಚರಿಸುವುದರ ಜೊತೆಗೆ ಮಧ್ಯವರ್ಣಗಳ ರೂಪದಲ್ಲಿಯೂ ಬಂದಿರುವುದನ್ನು ಕಾಣಬಹುದು.

ಜಡಿದು ನುಡಿವುದನೀತನಾದೊಡೆ
ಬಿಡನೆನುತ್ತಲಿ ಸಿದ್ಧರಾಮನು
ಘುಡಿಘುಡಿಸಿ ಘೂರ್ಮಿಸುತ ಕೋಪಿಸಿ ನೊಸಲ ಕಣ್ದೆರೆಯೆ ।
ಸಿಡಿಲುಗಿಡಿಗಳು ಸೂಸೆಯಲ್ಲಮ
ನಡಿಗಳೆಡೆಯನು ಹೊದ್ದಲಮ್ಮದೆ
ಸಿಡಿದು ಸೀಕರಿಗರಿಸುತಿರ್ದುವು ಸಕಲ ಜೀವರನು ॥ [೧೯]

ಒತ್ತಕ್ಷರಗಳೇ ಇಲ್ಲದ ಪದ್ಯಗಳನ್ನು ರಚಿಸುವುದರಿಂದ ಕಾವ್ಯಗಂಗೆ ಎಷ್ಟೊಂದು ಶಾಂತಳಾಗಿ ಕ್ರಮಿಸುತ್ತಾಳೆಂಬುದನ್ನು ಕಾಣಬಹುದು.

ಆ ನಟನೆಯಾ ರೀತಿಯಾ ನಿಲ
ವಾ ನಡೆವ ಗತಿ ಗಮಕವಾ ತೊಡೆ
ಯಾ ನಿತಂಬಗಳಾ ನಡುವಿನಸಿದಾ ಮೊಲೆಯ ಚೆಲುವು ।
ಆ ನಯದ ತೋಳಾ ಮುಖಾಂಬುಜ
ವಾ ನಯನವಾ ನೋಟವಾ ತುರು
ಬಾ ನವೀನತೆಯುಡಿಗೆಯೇಂ ನೆಲೆಸಿದವೊ ಮಾಯೆಯಲಿ ॥ [೨೦]

ಒಂದು ಅಥವಾ ಎರಡು ಒತ್ತಕ್ಷರಗಳನ್ನು ಮಾತ್ರ ಒಳಗೊಂಡಿರುವ ಪದ್ಯಗಳೂ ಅಲ್ಲಲ್ಲಿ ಕಾಣ ಬರುತ್ತವೆ. ಪ್ರಾಸಸ್ಥಾನದಲ್ಲಿ ಮೃದು ವರ್ಣಗಳನ್ನು ಬಳಸುವುದರ ಜೊತೆಗೆ ಆರು ಪಾದಗಳಲ್ಲಿಯೂ ಒಂದೇ ಶಬ್ದವನ್ನು ಬಳಸಿರುವುದು ಒಂದು ವಿಶೇಷತೆ.

ಪರಿಪರಿಯ ಸೌಕರಿಯದೋಗರ ।
ಪರಿಪರಿಯ ಪಾಯಸ ಘೃತಂಗಳು ।
ಪರಿಪರಿಯ ನವನೀತ ಸಕ್ಕರೆ ತೋವೆ ಪಳದೆಗಳು ॥
ಪರಿಪರಿಯ ಭಕ್ಷಗಳು ನಾನಾ ।
ಪರಿಪರಿಯ ವನರುಹ ಫಲಂಗಳು ।

ಪರಿಪರಿಯ ಶಾಖದ ಸಮೂಹಗಳಿತ್ತರಲ್ಲಮಗೆ ॥ [೧೬೧]

ಇದರಿಂದ ಗಮಕಿಗಳಿಗೆ ಅನುಕೂಲವಾಗುವುದಲ್ಲದೆ ಪದ್ಯಗಳು ಕಾವ್ಯಸೌಂದರ್ಯದಿಂದ ತುಂಬಿ ತುಳುಕಲು ಸಹಾಯವಾಗುತ್ತದೆ. ಶಬ್ದಾಲಂಕಾರವು ತತ್ತ್ವದೊಡನೆ ಪರಿಣಾಮಕಾರಿಯಾಗಿ ಸಮ್ಮಿಳಿತವಾಗಿರುವುದನ್ನು ಕೆಳಗಿನ ಪದ್ಯದಲ್ಲಿ ನೋಡಬಹುದು.

ಲಕ್ಷ್ಯವನು ಪೇಳುವೊಡೆ ಮಾತಿನ
ಲಕ್ಷವಲ್ಲ ಮಹಾನುಭಾವದ
ಲಕ್ಷವಲ್ಲಷ್ಟಾಂಗಯೋಗದ ಲಕ್ಷ ಮುನ್ನಲ್ಲ ।
ಲಕ್ಷವದು ನಿರ್ಲಕ್ಷವೇ ತಾ
ಲಕ್ಷವಾಗಿಹುದೆಂದು ಘನಗುರು
ಲಕ್ಷಣವ ಲಕ್ಷಿಸಿಯೆ ನುಡಿದನು ಚೆನ್ನಬಸವಂಗೆ ॥ [೧೬೨]

ಕಾವ್ಯದುದ್ದಕ್ಕೂ ಶಬ್ದಜೋಡಣೆ ಅಸಾಧಾರಣವಾಗಿ ಮೂಡಿ ಬಂದಿದೆ. ಸಂಬಂಧಿಸಿದ ಪದ್ಯದ ಸಮಗ್ರತೆಗೆ ನಿರ್ಧಿಷ್ಟ ಪದಪ್ರಯೋಗವೇ ಅತ್ಯಂತ ಅವಶ್ಯ ಎನ್ನುವಷ್ಟರ ಮಟ್ಟಿಗೆ ಹಲವೆಡೆ ಇಂಥ ಪ್ರಯೋಗಗಳಿವೆ.

ಹೆಟ್ಟುಗೆಗೆ ಶಿವಯೋಗರಾಜ್ಯದ
ಪಟ್ಟಗಟ್ಟುವರಂತೆ ನೊಸಲಿನೊ
ಳಿಟ್ಟರಮಲ ವಿಭೂತಿಯನು ಭವಭಯದ ಸೋಂಕುಗಳು ।
ಮುಟ್ಟದಂತಿರೆ ರಕ್ಷೆಯೆಂದೆನೆ/ಕಟ್ಟಿದರು ಕಂಠದಲಿ ಲಿಂಗವ
ನೊಟ್ಟಜೆಯಲಾ ಸುಮತಿ ನಿರ್ಮಳರಾ ಕುಮಾರಿತಿಗೆ ॥ [೧೬೩]

ಇಲ್ಲಿ 'ಹೆಟ್ಟುಗೆ' ಎನ್ನುವುದು ಕೇವಲ ಪ್ರಾಸಕ್ಕಾಗಿ ಬಳಸಿರುವ ಶಬ್ದವಾಗಿರದೆ ಕಾವ್ಯದ ವಸ್ತುವಿಗೆ ಪೂರಕವಾಗಿ ನಿಂತಿರುವುದನ್ನು ಕಾಣಬಹುದು. ಶಿವಯೋಗಾಚರಣೆಯನ್ನು ನಿರೂಪಿಸಬಯಸುವ ಕವಿಗೆ 'ಶರಣಸತಿ– ಲಿಂಗಪತಿ' ಭಾವವನ್ನು ಅಳವಡಿಸಬೇಕಾಗಿದೆ. ಭವವನ್ನು ನೀಗಿ ಭಕ್ತನಾಗುವುದು ಆಚರಣೆಯ ಮೊದಲ ಕ್ರಿಯೆ. ಆ ಭಕ್ತ ಲಿಂಗಾನುಸಂಧಾನದಲ್ಲಿ ಕ್ರಮಿಸಿ ಅಭವನಲ್ಲಿ ಒಂದಾಗುವುದು ಅಂತಿಮ ಕ್ರಿಯೆ. 'ಶರಣಸತಿ'ಯನ್ನು ಪುರುಷ ಪಾತ್ರದಲ್ಲಿ ತೋರಿಸುವ ಬದಲಾಗಿ ಸ್ತ್ರೀ ಪಾತ್ರವನ್ನು ಆಯ್ದುಕೊಂಡಿರುವ ಕವಿ ಆ ಪದವನ್ನು ಸೂಚಿಸುವುದಕ್ಕಾಗಿ 'ಹೆಟ್ಟುಗೆ' ಶಬ್ದಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದಾನೆ. ಅಕ್ಕಮಹಾದೇವಿ ದೀಕ್ಷಾರ್ಹ

ಜೀವಿಗೆ ಸಂಕೇತವಾಗಿರುವುದರಿಂದ ಅವಳು 'ಶರಣಸತಿ'. ದೀಕ್ಷಾಪ್ರಸಂಗದಲ್ಲಿ ಭವಿಭಕ್ತನಾಗಿ ಪುನರ್ಜಾತನಾಗುತ್ತಾನೆಂಬುದರ ಸಂಕೇತವಾಗಿ ಅವಳ ತಂದೆ-ತಾಯಿಗಳು ಲಿಂಗಧಾರಣ ಮಾಡುತ್ತಾರೆ. ಸಮಗ್ರ ಕಾವ್ಯವೇ ಶಿವಯೋಗಾಚರಣೆಯನ್ನು ನಿರೂಪಿಸುವ ಪ್ರತಿಮಾಕಾವ್ಯವಾಗಿರುವುದರಿಂದ ಉದ್ದಕ್ಕೂ ಇಂಥ ಅನೇಕ ಪ್ರಯೋಗಗಳು ಇವೆ.

ಅರ್ಥಾಲಂಕಾರಗಳನ್ನು ಬಳಸುವಲ್ಲಿ ಚಾಮರಸನದೊಂದು ವಿಶಿಷ್ಟ ಗುಣ. ಪ್ರತಿಮಾ ವ್ಯಾಪಾರದ ಹಿನ್ನಲೆಯಲ್ಲಿ ಕಾವ್ಯದಲ್ಲಿ ಮೂಡಿ ಬಂದಿರುವ ಅಲಂಕಾರಗಳನ್ನು ಆ ದೃಷ್ಟಿಯಿಂದ ಲಕ್ಷಿಸಿದರೆ ಮಾತ್ರ ಅವುಗಳ ಅರ್ಥ ಸ್ಫುಟವಾಗಿ ಮೂಡುತ್ತದೆ. 'ಪ್ರತಿಮಾಕಾವ್ಯ-ನಿರೂಪಣೆ' ಹಾಗೂ 'ಪಾತ್ರಚಿತ್ರಣ' ಸಂದರ್ಭದಲ್ಲಿ ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ. ಅದೇ ರೀತಿ ಉಪಮಾ, ರೂಪಕ, ಶ್ಲೇಷ, ಅತಿಶಯೋಕ್ತಿ ಇವುಗಳಿಗೂ ಅದೇ ನೆಲೆಯಲ್ಲಿ ಅರ್ಥ ಹುಡುಕಲಾಗುವುದು.

ಲಲಿತ ನಿರ್ಮಲ ಚಂದ್ರಕಾಂತದ
ಶಿಲೆಯ ಹತ್ತಿರೆ ಲತೆಯ ದಾವಾ
ನಳನು ಕೊಳಲಾ ಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ ।
ತಿಳಿಯಲಱಿಯದ ಜನಕೆ ಮಾಯೆಯ
ತಳಿತ ಕಾಮಜ್ವಾಲೆಯಲ್ಲಮ
ನೊಳಗೆ ಪ್ರತಿಬಿಂಬಿಸಿದುದಾತನೆ ಕಾಮಿಯೆಂಬಂತೆ ॥ [೧೬೪]

ಮಾಯೆ ತಾರುಣ್ಯದ ಲೋಕಜೀವಿಯ ಸಂಕೇತ ಹಾಗೂ ಅಲ್ಲಮ ಆತ್ಮನ ಸಂಕೇತ ಎಂಬ ವಿಚಾರದ ಹಿನ್ನೆಲೆಯಲ್ಲಿ ಇಲ್ಲಿಯ ಉಪಮೆಯನ್ನು ಲಕ್ಷಿಸಬೇಕು. ಮಾನವನಲ್ಲಿ ಆತ್ಮನು ಜೀವಿಯ ಆಗುಹೋಗುಗಳಿಗೆ ಕೇವಲ ಸಾಕ್ಷಿಯಾಗಿರುತ್ತಾನೆ. ಮನಸ್ಸನ್ನು ಸಾಧನ ಮಾಡಿಕೊಂಡು ಪಂಚೇಂದ್ರಿಯಗಳ ಮುಖಾಂತರ ಪರಮಸುಖ ಪಡೆಯುತ್ತೇನೆನ್ನುವುದು ಜೀವನ ನಂಬಿಕೆ. ಆದರೆ ಕಾಮಜ್ವಾಲೆಯಲ್ಲಿ ಸಿಕ್ಕು ಲತೆಯಂತೆ ಉರಿದು ಹೋಗುವ ಈ ಜೀವನ ಚಟುವಟಿಕೆಗಳು ಆತ್ಮನಿಗೆ ಆರೋಪಿತವಾಗುತ್ತವೆ. ಇದು ಲೋಕಜೀವಿಗಳ ಮರುಳುತನ. [೧೬೫]

ದೂರದಲಿ ಪತಿಯಿರಲು ಸತ್ಕುಲ
ನಾರಿ ಪುಷ್ಪಿತೆಯಾಗಿ ಸಲೆ ಸುಕು

[illegible]

[illegible]

[illegible]

[illegible]

[illegible]

ಮಾರನಾಪೇಕ್ಷೆಯಲಿ ತನ್ನಯ ವಲ್ಲಭನ ಬರವ ।
ಹಾರುವಂತೆ ಶಿವಾನುಭಾವವಿ
ಚಾರದಿಂದಲಿ ನಿತ್ಯಸುಖಮಯ
ಕಾರಣಕೆ ಬಸವಣ್ಣ ಬಯಸಿದನಲ್ಲಮನ ಬರವ ॥ [೧೬೬]

ಬಸವಣ್ಣ ಸಾಧಕನ ಸಂಕೇತ, ಅಲ್ಲಮ ಪರಶಿವನ ಸಂಕೇತ, ದೀಕ್ಷಿತನಾಗಿ ಲಿಂಗಾನುಸಂಧಾನದಲ್ಲಿ ಕ್ರಮಿಸಿ ಶರಣಸತಿ–ಲಿಂಗಪತಿ ತತ್ತ್ವದಂತೆ ಸತಿಯಾಗಿರುವ ಬಸವಣ್ಣ ಪತಿಯಾಗಿರುವ ಅಲ್ಲಮನಿಗಾಗಿ ಪುಷ್ಪಿತೆಯಾಗಿರುವ ಸ್ತ್ರೀಯಂತೆ ಕಾತರಿಸುತ್ತಿದ್ದಾನೆ. ಶಿವಾನುಭಾವವೆಂಬ ರತಿಯಲ್ಲಿ ಲಿಂಗಾಂಗಸಾಮರಸ್ಯ ಹೊಂದುವುದು ಮಾತ್ರ ಉಳಿದಿದೆ ಎಂಬುದನ್ನು ಕವಿ ಈ ಉಪಮೆಯ ಮುಖಾಂತರ ತಿಳಿಸಬಯಸುತ್ತಾನೆ.[೧೬೭]

ಮೃತ್ತಿಕೆಯ ಮಾಟಕದ ರೂಹಿನ
ಪುತ್ತಳಿಗಳನು ದೇಗುಲಕೆ ನೆಱೆ
ತೆತ್ತಿಸಿದರೆಂಬಂತೆ ಮಾಯೆಯ ನೋಡುವರ್ತಿಯಲಿ ।
ಸುತ್ತಿಮುತ್ತಿ ಗವಾಕ್ಷರಂಧ್ರದ
ಭಿತ್ತಿಯಲಿ ನೆಱೆ ಕೀಲಿಸಿರ್ದರು
ಚಿತ್ತಜಗ್ರಹ ಸೋಂಕಿದಂತಿರೆ ಕೂಡೆನೋಟಕರು ॥ [೧೬೮]

ಲೋಕಜೀವಿಗಳು ಎಲ್ಲವನ್ನೂ ಮರೆತು ಕಾಮದ ಮುದ್ರೆಗಳ ಕಡೆಗೆ ಮುಖ ಮಾಡಲು ಪಂಚೇಂದ್ರಿಯಗಳಲ್ಲಿ ಒಂದಾದ ಕಣ್ಣನ್ನು ಸಾಧನ ಮಾಡಿಕೊಂಡಿರುತ್ತಾರೆಂಬ ಅರ್ಥ ಈ ಪದ್ಯದಿಂದ ಹೊರಹೊಮ್ಮುತ್ತದೆ.

ಪರಿಮಳವನಾರಿಕ್ಕಿದರು ಕ
ರ್ಪುರಕೆ ಕೋಗಿಲೆಗಾರು ಸೊಗಸಿನ
ಸ್ವರವ ಕಲಿಸಿದರಂಚೆಗಾರಡಿಯಿಡಲು ಕಲಿಸಿದರು ।
ಪರಿಕಿಸುವೊಡವಕಾ ಗುಣಂಗಳ
ನೆರವು ತಂದರೆ ಮನದಲಂತಾ

ಪರಿಯಲಾ ಮಹದೇವಿ ತಾನೇ ನೆನೆದಳೊಂದನುವ ॥ [೧೯]

ಮಹಾದೇವಿಯಕ್ಕ ಕೌಶಿಕನನ್ನು ದೂರ ಮಾಡುವ ವಿಚಾರವನ್ನು ತಾನೇ ಯೋಚಿಸಿ ಪಡೆದುಕೊಂಡಳು ಎಂಬ ವಾಚ್ಯಾರ್ಥ ಇಲ್ಲಿದೆ. ಕರ್ಪುರಕ್ಕೆ ಪರಿಮಳ, ಕೋಗಿಲೆಗೆ ಸ್ವರ, ಹಂಸಕ್ಕೆ ನಡಿಗೆ ಸಹಜವಾಗಿರುವಂತೆ ಅಕ್ಕಮಹಾದೇವಿ ಸಂಕೇತಿಸುವ ದೀಕ್ಷಾರ್ಹ ಜೀವಿಗೆ ಲೌಕಿಕ ಬದುಕನ್ನು ದೂರವಿಡುವ ಗುಣ ಸಹಜವಾಗಿರುತ್ತದೆ ಎಂಬ ಧ್ವನ್ಯಾರ್ಥ ಇಲ್ಲಿದೆ.

ಆತನಂತಃಕರಣವಾತನ

ಮಾತ ಕೇಳುವವಾಗಿ ದಿಟ ಬಳಿ

ಕಾತನಾಜ್ಞಾಮಾತ್ರದಿಂದಾ ಸ್ಥೂಲ ತನುವಿನಲಿ ।

ಓತಿರಲು ಬೇಡೆಂದೊಡಾಗಳೆ

ಭೀತಿಯಿಂದೊಳವೊಕ್ಕು ತಮ್ಮಯ

ಧಾತುಗೆಟ್ಟಿಹವೇನನೆಂಬೆನು ಬಸವನನುಭವವ ॥ [೧೨೦]

ಪ್ರಭುದೇವರು ಶೂನ್ಯ ಸಿಂಹಾಸನವನೇಱಿದ ಗತಿಯಲ್ಲಿ ಇರುವ ಈ ಪದ್ಯದಲ್ಲಿ ಬಸವಣ್ಣ ಸಂಕೇತಿಸುವ ಸಾಧಕ ಅನುಭಾವದಲ್ಲಿ ತನುಗುಣಗಳನ್ನು ಕಳೆದುಳಿದು ಪಂಚೇಂದ್ರಿಯಗಳನ್ನು ತನ್ನ ವಶದಲ್ಲಿಟ್ಟು ಕೊಂಡಿರುತ್ತಾನೆ ಎಂಬ ಅರ್ಥವನ್ನು ಕಾಣಬಹುದು. 'ಬಸವಚಾದಗೆವಕ್ಕಿಗಲ್ಲಮ ವೆಸರ ಘನ' ೧೨೧ ಎಂಬ ಕವಿಸಮಯದ ಉಕ್ತಿಯಲ್ಲಿ ಸಾಧಕ ಪರಶಿವನ ಕೃಪೆಗಾಗಿ ಕಾತರಿಸುತ್ತಿರುತ್ತಾನೆ ಎಂಬ ಅರ್ಥ ಮೂಡಿ ಬರುತ್ತದೆ. ಅಲಂಕಾರಗಳ ಗಣಿಯಾಗಿರುವ ಮಾಯಾಸಂಪುಟದಲ್ಲಂತೂ ಅಗೆದಂತೆಲ್ಲ ಚಿನ್ನ ಮಾತ್ರ ಹೊರಡುತ್ತದೆ. ಚಾಮರಸ ತನ್ನ ಸಾಮರ್ಥ್ಯವನ್ನೆಲ್ಲ ಬಳಸಿರುವ ಅಲ್ಲಿಯ ನಿರೂಪಣೆಯನ್ನು ಪ್ರತಿಮಾ ವ್ಯವಹಾರದ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ ಆತನೊಬ್ಬ ಅಸಾಧಾರಣ ಕವಿ ಎನ್ನುವುದು ಸಾಬೀತಾಗುತ್ತದೆ. ಹೀಗೆ ಪ್ರಭುಲಿಂಗಲೀಲೆಯಲ್ಲಿ ಸಮಯೋಚಿತವಾದ ಉಪಮಾನ, ದೃಷ್ಟಾಂತ ಮತ್ತು ರೂಪಕಗಳ ಮೂಲಕ ಕವಿ ಭಾವವ್ಯಂಜನ ಮಾಡಿಸಿದ್ದಾನೆ.[೧೨೨] ಅಂತೆಯೇ ಅದು ವರಮನೋಹರಕಾವ್ಯ. [೧೨೩]

೫.೪ ರಸ

ಕಾವ್ಯದಲ್ಲಿ ವಸ್ತು, ಪಾತ್ರಚಿತ್ರಣ, ಶೈಲಿ, ನಿರೂಪಣೆ ಮುಂತಾದವುಗಳ ಸಮ್ಯಕ್ ಸಂಬಂಧದಿಂದಾಗಿ ಕಾವ್ಯದ ಪರಿಪೂರ್ಣತೆಗೆ ದಾರಿಯಾಗುತ್ತದೆ. ಬದುಕಿಗೆ ಜೀವದ್ರವವು

[illegible]

[illegible]

[illegible]

[illegible]

[illegible]

ಪೋಷಕವಾಗಿರುವಂತೆ 'ಕಾವ್ಯದ ಅಂಗಗಳಿಗೆ ರಸವು ನಿಯಾಮಕ ತತ್ತ್ವವಾಗಿದೆ.'[೧೭೪] ಹಾಗಾದರೆ ರಸ ಎಂದರೇನು?

ಸಹೃದಯರಿಂದ ಆಸ್ವಾದ್ಯವಾಗುವ ಅನುಭವವಿಶೇಷವೇ ರಸ.[೧೭೫] ಕವಿ ತನ್ನ ಅನುಭವವನ್ನು ವಿಶೇಷವಾಗಿ ವ್ಯಂಜಿಸುವ ನೆಲೆಯೊಂದರಲ್ಲಿ ನಿಲ್ಲಿಸುತ್ತಾನೆ. ಸಹೃದಯನಿಗೆ ಅದರ ವಿಶೇಷಾನುಭವ ಪ್ರಾಪ್ತವಾಗುತ್ತದೆ. ಆದಕ್ಕಾಗಿ ಇಬ್ಬರೂ ಕಾವ್ಯಾನುಭವದ ರಸತ್ವಕ್ಕೇರುವಂತೆ ನಿಲ್ಲಿಸಿಕೊಳ್ಳುವ ಕೌಶಲವನ್ನು ಸಾಧಿಸಿಕೊಳ್ಳಬೇಕು.[೧೭೬] ಭಾರತೀಯ ಆಲಂಕಾರಿಕ ಭಟ್ಟನಾಯಕ ತಿಳಿಸುವಂತೆ ವೈಯಕ್ತಿಕವಾದ ಮತ್ತು ಕ್ರಿಯಾಪೇಕ್ಷಿಯಾದ ಭಾವಾನುಭವದ ಪರಿಧಿಯ ಆಚೆ ಅವರು ನಿಲ್ಲುವ ಕೌಶಲವನ್ನು ಸಾಧಿಸಿಕೊಂಡಾಗ ಮಾತ್ರ ಇದಕ್ಕೆ ದಾರಿಯಾಗುತ್ತದೆ.[೧೭೭] ಇಂಥ ನಿಸ್ಸಂಗ ಪರಿಭಾವಕತ್ವವನ್ನು ಸಾಧಿಸಿ ಮಾನಸಿಕ ದೂರ (psychical distance) ಕಾಯ್ದುಕೊಳ್ಳುವಲ್ಲಿ ಹಾಗೂ ರಸವಿಘ್ನಗಳನ್ನು ನಿವಾರಿಸುವಲ್ಲಿ ಚಾಮರಸ ಯಶಸ್ವಿಯಾಗಿದ್ದಾನೆಂಬುದನ್ನು ನೋಡಬಹುದು.

ಪ್ರಭುಲಿಂಗಲೀಲೆಯನ್ನು ಕೇವಲ ವಾಚ್ಯಾರ್ಥ ಹಾಗೂ ವ್ಯಂಗ್ಯಾರ್ಥಗಳ ನೆಲೆಯಲ್ಲಿ ನಿಂತು ನೋಡುವಾಗ ದೂರಭಂಗದ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಧ್ವನ್ಯಾರ್ಥರೂಪದಲ್ಲಿರುವ ಶಿವಯೋಗಾಚರಣೆಯನ್ನು ವಾಚ್ಯಾರ್ಥರೂಪದ ಚರಿತ್ರೆ ಹಾಗೂ ವ್ಯಂಗ್ಯಾರ್ಥದ ಲೀಲೆ ಇವುಗಳೊಂದಿಗೆ ಅಸದೃಶವಾಗಿ ಮೇಳೈಸಿರುವ ಚಾಮರಸನ ಕಾವ್ಯವನ್ನು ಮೂರೂ ನೆಲೆಗಳ ಗುರುತ್ವ ಬಿಂದುವಿನಲ್ಲಿ ನಿಂತು ನೋಡಿದಾಗ ಆ ದೂರಭಂಗ ಸರಿದು ಹೋಗುತ್ತದೆ.

ಕಾವ್ಯದಲ್ಲಿ ಒಂದೇ ಒಂದು ರಸ ಪ್ರಧಾನವಾಗಿ ಹಾಗೂ ವ್ಯಾಪಕವಾಗಿ ಬರಬೇಕು. ಪ್ರಾಸಂಗಿಕವಾಗಿ ಎಷ್ಟು ರಸಗಳಾದರೂ ಬರಬಹುದು. ಆದರೆ ಅವು ಪ್ರಧಾನರಸಕ್ಕೆ ಪೋಷಕವಾಗಿರಬೇಕೇ ಹೊರತು ಮರೆಗೊಳಿಸುವಂತಿರಬಾರದು.[೧೭೮] ಪ್ರಭುಲಿಂಗಲೀಲೆಯಲ್ಲಿ ಶಾಂತವು ನಿರ್ವಿವಾದವಾಗಿ ಪ್ರಧಾನ ರಸ. ಕಾವ್ಯದುದ್ದಕ್ಕೂ ಇದಕ್ಕೆ ಪೂರಕವಾಗಿ ತೋರಿ ಅಡಗುವ ರಸಗಳು ಪೋಷಕವಾಗಿ ಬಂದಿರುವುದನ್ನು ನೋಡಬಹುದು.

ಭರತನ 'ನಾಟ್ಯಶಾಸ್ತ್ರ'ದಲ್ಲಿ ಪ್ರತಿಪಾದಿತವಾಗದೆ ಪ್ರಕ್ಷಿಪ್ತವೆಂದು ಹೇಳಲಾಗುತ್ತಿರುವ, ಒಂಬತ್ತನೆಯ ಸ್ಥಾನ ಪಡೆದಿರುವ ಶಾಂತವು ಇನ್ನುಳಿದ ಎಂಟು ರಸಗಳಿಂದ ಭಿನ್ನವೆನಿಸುತ್ತದೆ. ಮೋಕ್ಷಕ್ಕೆ

[illegible]

[illegible]

[illegible]

[illegible]

[illegible]

ಹೊಂದಿಕೆಯಾಗುವ ಚಿತ್ತವೃತ್ತಿಯೇ ಶಾಂತರಸದ ಸ್ಥಾಯಿಭಾವ. ಅದನ್ನು ನಿರ್ವೇದ ಎಂದೂ ಹೇಳುತ್ತಾರೆ.[೧೭೯] ನಾವೀಗಾಗಲೇ ನೋಡಿರುವಂತೆ ಪ್ರಭುಲಿಂಗಲೀಲೆಯ ಅಂತಿಮ ಹಂತ ಚಿತ್ತವೃತ್ತಿನಿರೋಧ. ಭಾವ, ವಿಭಾವ, ಅನುಭಾವ, ಸಂಚಾರಿಭಾವಗಳಿಗೆ ಚಿತ್ತವೃತ್ತಿ ಕಾರಣವಾಗುತ್ತಿದ್ದರೆ ನಿರ್ವೇದಕ್ಕೆ ಚಿತ್ತವೃತ್ತಿನಿರೋಧ ಕಾರಣವಾಗುತ್ತದೆ. ಜನ್ಮಜನ್ಮಾಂತರಗಳಿಂದ ಶರೀರಗಳನ್ನು ಬದಲಾಯಿಸುತ್ತ ಬರುವ ಆತ್ಮವು ಚಿತ್ತ ರೂಪದಲಿ ಜೀವನಲ್ಲಿದ್ದು ಮನಸ್ಸನ್ನು ಸಾಧನ ಮಾಡಿಕೊಂಡು ಬಾಹ್ಯಕ್ರಿಯೆಗಳಿಗೆ ಕಾರಣವಾಗುತ್ತದೆ. ಹೀಗೆ ಮನಸ್ಸನ್ನು ಸಾಧನ ಮಾಡಿಕೊಳ್ಳುವ ಲೋಕವ್ಯವಹಾರಗಳು ಮೊದಲಿನ ಎಂಟು ರಸಗಳಿಗೆ ಕಾರಣವಾಗುತ್ತಿದ್ದರೆ ಮನೋಲಯದಲ್ಲಿ ಸಾಗುವ ನಿರ್ವೇದವು ಆ ಎಂಟು ರಸಗಳಿಂದ ದೂರವಾಗಿ ನಿಲ್ಲುತ್ತದೆ. ಲೋಕಜೀವನವನ್ನು ಪಾರಮಾರ್ಥದೊಡನೆ ಸಮನ್ವಯಗೊಳಿಸುತ್ತ ಸಾಗುವ ಯೋಗಿಯಲ್ಲಿ ಇನ್ನುಳಿದ ಎಂಟು ರಸಗಳು ತೋರಿ ಅಡಗಬಹುದಾಗಿದೆ. ಇದನ್ನು ನಾವು ಕಾವ್ಯದುದ್ದಕ್ಕೂ ಕಾಣುತ್ತೇವೆ. ಅಲ್ಲಮಪ್ರಭುವಿನ ಚರಿತ್ರೆ ಅಥವಾ ಲೀಲೆ ಎಂದು ತೋರುವ ಪ್ರಭುಲಿಂಗಲೀಲೆಯಲ್ಲಿ ಲೋಕವ್ಯವಹಾರವು ತೋರಿಕೆಗೆ ಮಾತ್ರವಿದ್ದು ಅದು ಯೋಗಾಚರಣೆಯಲ್ಲಿ ಆಳವಡುವಂಥದು. ಅಂತೆಯೇ ಅಲ್ಲಲ್ಲಿ ಬರುವ ವಿವಿಧ ರಸಗಳು ಪ್ರಧಾನ ರಸವಾದ ಶಾಂತದೊಂದಿಗೆ ಸಮ್ಮಿಳಿತವಾಗುತ್ತವೆ.

ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ ಮತ್ತು ಅದ್ಭುತ ಇವು ಭರತಮುನಿ ಸೂಚಿಸುವ ಎಂಟು ರಸಗಳು.[೧೮೦] ಇವುಗಳಲ್ಲಿ ಶೃಂಗಾರವು ವಿಪುಲವಾಗಿಯೂ ಕರುಣ, ರೌದ್ರ, ವೀರ ಹಾಗೂ ಅದ್ಭುತ ಇವು ಸಾಂದರ್ಭಿಕವಾಗಿಯೂ ಕಾವ್ಯದಲ್ಲಿ ಗೋಚರಿಸುತ್ತವೆ. ಭವದ ಭಯವನ್ನು ನಿವಾರಿಸಿ ಅಭಯವನ್ನು ಕರುಣಿಸುವ ವಸ್ತುವನ್ನು ಹೊಂದಿರುವ ಪ್ರಭುಲಿಂಗಲೀಲೆಯಲ್ಲಿ ಭಯಾನಕ ಹಾಗೂ ಭೀಭತ್ಸ ಸ್ಥಾನ ಪಡೆಯದಿರುವುದು ಸಹಜವಾಗಿದೆ.

ಶೃಂಗಾರಕ್ಕೆ ಸ್ಥಾಯಿಭಾವ ರತಿ.೧೮೧ ಈ ಹಿನ್ನೆಲೆಯಲ್ಲಿ ನೋಡಿದರೆ ಮಾಯಾದೇವಿ ಹಾಗೂ ಕೌಶಿಕರ ಪ್ರಸಂಗಗಳಲ್ಲಿ ಅದನ್ನು ಕಾಣಬಹುದು. ಆದರೆ ಇದರ ಪ್ರಕಾರಗಳಾದ ಸಂಭೋಗಶೃಂಗಾರ ಮತ್ತು ವಿಪ್ರಲಂಭಶೃಂಗಾರಗಳ ಹಿನ್ನಲೆಯಲ್ಲಿ ಅವಲೋಕಿಸಿದರೆ ಆ ರಸಕ್ಕೆ ಅಸ್ತಿತ್ವವಿಲ್ಲವೆನಿಸುತ್ತದೆ. ಏಕೆಂದರೆ ಈ ಎರಡರಲ್ಲಿ ಯಾವುದರ ನಿರೂಪಣೆಯೂ ಕಾವ್ಯದಲ್ಲಿಲ್ಲ. ಎರಡೂ ಪ್ರಸಂಗಗಳಲ್ಲಿ ರತಿಭಾವವು ಪರಸ್ಪರವಾಗಿರದೆ ಏಕಮುಖವಾಗಿದೆ. ಮಾಯಾದೇವಿಯಲ್ಲಿ ಅಲ್ಲಮನೊಂದಿಗೆ ಸೇರುವ

[illegible]

[illegible]

[illegible]

[illegible]

ಪ್ರತ್ಯಾಶೆ ಇರುವುದಾದರೂ ಅವನು ಅವಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾನೆ. ಮಾಯೆಯ ಸಖಿಯರು ಇಬ್ಬರನ್ನೂ ಮಲಗುವ ಮನೆಯಲ್ಲಿ ಇರಿಸಿದಾಗ ಅವನು ಅವಳ ಅಪ್ಪುಗೆಗಾಗಲಿ, ಚುಂಬನಕ್ಕಾಗಲಿ, ಸಂಭೋಗಕ್ಕಾಗಲಿ ಸಿಕ್ಕದೆ ಮಿಂಚಿನಂತೆ ಗೋಚರಿಸುತ್ತಾನೆ. ಅವರ ಅಗಲುವಿಕೆಯಲ್ಲಿಯೂ ಮುಂದೊಮ್ಮೆ ಕೂಡುವ ಸೂಚನೆ ಇಲ್ಲ. ಕೌಶಿಕನ ಪ್ರಸಂಗದಲ್ಲಿಯೂ ಇದು ಏಕಮುಖವಾಗಿ ಬಂದಿದೆ. ಮಹಾದೇವಿಯಕ್ಕನ ಕರಾರುಗಳನ್ನು ಅವನು ಮುರಿದಾಗ 'ನಿಮಗೆ ನಾವಿನ್ನುತ್ತರಾಯಿಗಳೆಮಗೆ ಬಂಧನ ಬಿಟ್ಟುದು' ೧೮೨ ಎಂದು ತಿಳಿಸುತ್ತ ಅವಳು ಅವನಿಂದ ಶಾಶ್ವತವಾಗಿ ಬೇರೆಯಾಗುತ್ತಾಳೆ. ಆದರೆ ಲೋಕದರ್ಶನದಲ್ಲಿ ನೋಡಿರುವಂತೆ ಮಾಯಾದೇವಿಯ ಮೇಲೆ ಚಾಮರಸನ ರತಿಭಾವ ಓತಪ್ರೋತವಾಗಿ ಹರಿದಿರುವುದಕ್ಕಷ್ಟೇ ಶೃಂಗಾರ ತನ್ನ ಮಿತಿಯನ್ನು ಪಡೆದುಕೊಳ್ಳುತ್ತದೆ.

ಮುಕ್ತಾಯಕ್ಕನ ಗತಿಯಲ್ಲಿ ಕರುಣರಸವನ್ನು ಕಾಣುತ್ತೇವೆ. ಅಣ್ಣ ಅಜಗಣ್ಣ ತನ್ನನ್ನು ಅಗಲಿರುವುದಕ್ಕಾಗಿ ಶೋಕಿಸುತ್ತಿದ್ದ ಮುಕ್ತಾಯಕ್ಕನನ್ನು ಪ್ರಭು ಅಕ್ಕ, ತಂಗಿ, ಮಗಳು ಎಂದು ಸಂಬೋಧಿಸುತ್ತ ಅವಳ ಶೋಕವನ್ನು ಪರಿಹರಿಸಿ ಅವಳನ್ನು ಮುಕ್ತಿಯ ಮಾರ್ಗದಲ್ಲಿ ಮುನ್ನಡೆಸುತ್ತಾನೆ. ಸಿದ್ಧರಾಮನ ಗತಿಯಲ್ಲಿ ರೌದ್ರಕ್ಕೆ ಸ್ಥಾನ ಕಲ್ಪಿಸಿರುವ ಕವಿ ಅದನ್ನು ಪರಿಣಾಮಕಾರಿಯಾಗಿ ತೋರಿಸುವಲ್ಲಿ ಸಫಲನಾಗಿದ್ದಾನೆ.

ಆರು ನಮ್ಮನು ಜಱೆದವರು ಜಂ
ಭಾರಿಯೋ ದನುಜಾರಿಯೋ ಕಾ
ಮಾರಿಯೋ ತೋಱವನ ಹೆಡೆತಲೆಗುಗಿವೆ ನಾಲಗೆಯ ।
ಬೇರು ಸಹಿತವೆ ಕೀಳುವೆನು ಕೈ
ವಾರವೇಕೆನುತೆದ್ದು ಬಂದನು
ಧೀರತನದಲಿ ಸಿದ್ಧರಾಮನು ಗಜಱಿ ಗರ್ಜಿಸುತ ॥ [೧೮೩]

ರೌದ್ರಕ್ಕೆ ಸ್ಥಾಯಿಯಾಗುವ ಕ್ರೋಧ ಸಿದ್ಧರಾಮನ ಆರ್ಭಟದಲ್ಲಿ ಸಹಜವಾಗಿ ಮೂಡಿ ಬಂದಿದೆ. ಪಾರ್ವತೀ ಪರಮೇಶ್ವರರ ಸಂವಾದದ ಗತಿಯಲ್ಲಿ ಕವಿ ವೀರಭದ್ರನ ವರ್ಣನೆ ಮಾಡುವಲ್ಲಿ ವೀರರಸವನ್ನು ಕಾಣುತ್ತೇವೆ.

ಜವನ ಜವಗೆಡಿಸುವ ಮಹಾ ಮೃ

[illegible]

[illegible]

[illegible]

[illegible]

ತ್ಕುವಿನ ಮಿತ್ತುವ ಮಿಡಿವ ಕಾಲನ
ಕವಣೆಯನು ಕಕ್ಕಿಸುವ ಕರ್ಮಭ್ರಮೆಯ ಭಂಗಿಸುವ ।
ಶಿವಪದದ್ರೋಹಿಗಳ ಸಜ್ಜನೆ
ಸವರಿ ಸೀಳಪ್ಪಳಿಸುವಧಟನ
ತವಕತಕ್ಕೆಯ ವೀರಭದ್ರನು ಮುಂದೆ ಮೋಹಿಸಿದ ॥ [೧೮೪]

ಗೊಗ್ಗಯ್ಯ ಹಾಗೂ ಗೋರಕ್ಷ ಇವರ ಪ್ರಸಂಗಗಳಲ್ಲಿ ಮತ್ತು ಪ್ರಭುದೇವರು ಆರೋಗಣೆ ಮಾಡಿದ ಗತಿಯಲ್ಲಿ ವಿಸ್ಮಯವನ್ನು ಸ್ಥಾಯಿಯಾಗಿ ಹೊಂದಿರುವ ಅದ್ಭುತರಸವನ್ನು ಕಾಣುತ್ತೇವೆ ಗೊಗ್ಗಯ್ಯ ಉಳುತ್ತ ಹೋದಂತೆ ಕಿತ್ತ ಹೆಂಟೆಯ ಕೆಳಗೆ ಹೊಂಗಳಸವೊಂದನ್ನು ಅಲ್ಲಮ ತೋರಿಸುತ್ತಾನೆ, ಅನಿಮಿಷಯ್ಯನ ಜೀವಕಳೆ ಬಂದು ಅಲ್ಲಮನ ದಿವ್ಯದೇಹದ ಪೊಟ್ಟರೆಯಲ್ಲಿ ಸೇರುವುದನ್ನು ಕಂಡ ಗೊಗ್ಗಯ್ಯ ಬೆರೆಗಾಗುತ್ತಾನೆ.

ನೋಟವೇ ಪ್ರಾಣಸ್ವರೂಪಿನ
ಮಾಟವಾದ ನಿಮಿತ್ತ ಲಿಂಗದ
ಕೂಟದೊಡನಾದನಿಮಿಷಯ್ಯನ ಜೀವಕಳೆ ಬಂದು
ನಾಟಿತೀತನ ದಿವ್ಯದೇಹದ
ಕೋಟರದೊಳೇನೆಂಬೆನೈಕ್ಯದ
ಮಾಟದಲಿ ಮಮಕರಿಸಿ ಮಕರಿಸಿ ಮೆಱೆದನಲ್ಲಮನು [೧೮೫]

ಗೋರಕ್ಷನ ಪ್ರಸಂಗದಲ್ಲಿ ಅಲ್ಲಮ ಅವನನ್ನು ಖಡ್ಗದಿಂದ ಹೊಡೆದಾಗ ನೆಲ ನಡುಗುತ್ತದೆ, ಪರ್ವತ ಕಲ್ಲುಗಳನ್ನು ಹೊರಚೆಲ್ಲುತ್ತದೆ.

ಹಿಡಿದು ಹಿಂಗದೆ ಬಲಿದು ಝಳಪಿಸಿ
ಜಡಿದು ಹೊಱಕೈಯಿಂದೆ ಖಣಿಖಟಿ
ಲಿಡಲಿಕಾ ಪ್ರಭುವಬ್ಬರಿಸಿ ಬಿಱು ಹೊಯಿಲನೆಱಗಿದರೆ ।
ನಡುಗಿದುದು ನೆಲೆ ಶಿಲೆಗಳನು ಮೈ
ಗೊಡಹಿದುದು ಗಿರಿಯೊಂದು ಕೂದಲು
ಕಡಿಯದಾ ಗೋರಕ್ಷನಲಿಯೇನೆಂಬೆನಚ್ಚರಿಯ ॥ [೧೮೬]

[illegible]
[illegible]
[illegible]
[illegible]
[illegible]

[illegible]

[illegible]
[illegible]
[illegible]
[illegible]
[illegible]
[illegible]

[illegible]

[illegible]
[illegible]
[illegible]
[illegible]
[illegible]
[illegible]

ಇಂಥ ಗೋರಕ್ಷ ಅದೇ ಖಡ್ಗದಿಂದ ಅಲ್ಲಮನನ್ನು ಹೊಡೆದಾಗ ಅದು ಶೂನ್ಯದಲ್ಲಿ ಈಸಾಡುತ್ತದೆ. ಇದು ಗೋರಕ್ಷನ ಆಶ್ಚರ್ಯಕ್ಕೆ ಕಾರಣವಾಗುತ್ತದೆ.[೧೮೭] ಆಕಾಶವೇ ಬಾಯ್ದೆರೆದು ಜೀರ್ಣಿಸಿಕೊಂಡಂತೆ ಪ್ರಭು ಆರೋಗಣೆ ಮಾಡುತ್ತಾನೆ. ಪುರದ ಸಮಗ್ರ ಆಹಾರ ಸಾಮಗ್ರಿಯನ್ನು ಅವನು ತನ್ನ ದೇಹದೊಳಗೆ ಅಡಗಿಸಿಕೊಳ್ಳುತ್ತಾನೆ. [೧೮೮]

ತತ್ತ್ವಜ್ಞಾನವು ಮೋಕ್ಷಸಾಧನವಾದ ಕಾರಣ ಅದೇ ಶಾಂತರಸದ ಸ್ಥಾಯಿಯೆಂದು ಅಭಿನವಗುಪ್ತ ನಿರೂಪಿಸುತ್ತಾನೆ. 'ತತ್ತ್ವಜ್ಞಾನವೆಂದರೆ ಆತ್ಮಜ್ಞಾನ; ಮಿಕ್ಕದ್ದೆಲ್ಲ ವಿಷಯ ಜ್ಞಾನ;[೧೮೯] ಪ್ರಭುಲಿಂಗಲೀಲೆಯಲ್ಲಿ ಪ್ರತಿಪಾದಿತವಾಗಿರುವುದು ಶುದ್ಧ ಆತ್ಮಜ್ಞಾನ. ಅಲ್ಲಮನನ್ನು ಗುರು–ಲಿಂಗ–ಜಂಗಮ–ಮಹಾಲಿಂಗ ಇವುಗಳ ಸಂಕೇತದಲ್ಲಿ ಚಿತ್ರಿಸಲು ಕಾವ್ಯದ ವಸ್ತುವನ್ನು ಹೆಣೆದಿರುವ ಕವಿ ಸಾದ್ಯಂತವಾಗಿ ಶಾಂತರಸವನ್ನು ಆಶ್ರಯಿಸಿದ್ದಾನೆ. ಲೋಕವ್ಯವಹಾರದ ಮುಖವನ್ನು ಪಾರಮಾರ್ಥದ ಕಡೆಗೆ ತಿರುಗಿಸಬೇಕಾಗಿರುವ ಕೃತಿಯಲ್ಲಿ 'ಬಂಧಕರ್ಮಗುಹೇಶ್ವರಲಿಂಗಮತವಲ್ಲ.'[೧೯೦] ಆದ್ದರಿಂದ ಅಲ್ಲೆಲ್ಲ ಪರಶಿವರೂಪದ ಶಾಂತಮೂರ್ತಿ ಮಾತ್ರ ರಾರಾಜಿಸುವುದನ್ನು ಕಾಣಬಹುದು.

ಪ್ರಭುಲಿಂಗಲೀಲೆಯ ಸಾರವಾದ ಶಾಂತರಸವು ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಿದೆಯೆಂಬುದಕ್ಕೆ ಆಯಾ ಗತಿಗಳಲ್ಲಿ ಚಾಮರಸ ಅಲ್ಲಮಪ್ರಭುವನ್ನು ಕಂಡರಿಸಿರುವುದು ಸಾಕ್ಷಿಯಾಗಿದೆ. ಹರಿಹರನಲ್ಲಿ ಚಿತ್ರಿತವಾಗಿರುವಂತೆ ಪ್ರಭು ಇಲ್ಲಿಯೂ ಮಾಯಾದೇವಿಗೆ ವಶವಾಗಿರುತ್ತಿದ್ದರೆ ರಸಭಂಗಕ್ಕೆ ಕಾರಣವಾಗಿ ಕಾವ್ಯದ ಉದ್ದೇಶಕ್ಕೇ ಪೆಟ್ಟು ಬೀಳುತ್ತಿತ್ತು. ಕಾವ್ಯದಲ್ಲಿ ಪ್ರತಿ ಹೆಜ್ಜೆಗೂ ಕವಿ ಮೈಯೆಲ್ಲ ಕಣ್ಣಾಗಿ ವರ್ತಿಸುತ್ತ ರಸದ ಏಕಾಗ್ರತೆಯನ್ನು ಅಚ್ಚುಕಟ್ಟಾಗಿ ಸಾಧಿಸಿದ್ದಾನೆ. ವಸ್ತು, ಪಾತ್ರ, ರೀತಿಗಳು ಅಂಗಗಳಾಗುತ್ತ ಅಂಗಿರಸವಾದ ಶಾಂತವನ್ನು ಪರಿಪುಷ್ಟಗೊಳಿಸಿವೆ. ಈ ಶಾಂತಕ್ಕೆ ಶೃಂಗಾರ, ಕರುಣೆ, ರೌದ್ರ, ವೀರ ಹಾಗೂ ಅದ್ಭುತ ರಸಗಳು ಅಂಗರಸಗಳಾಗಿ ಬಂದಿವೆ. ಗಂಗೋತ್ರಿಯಲ್ಲಿ ಕಾರಂಜಿಯಾಗಿ ಪುಟಿಯುತ್ತ ಪರ್ವತಗಳಲ್ಲಿ ಹಾಯ್ದು ಬಯಲು ಸೀಮೆಗೆ ಬಂದು ವಿಸ್ತೃತವಾಗುವ ಗಂಗಾನದಿ ಸಮುದ್ರವನ್ನು ಕೂಡುವಲ್ಲಿ ಗಂಗಾಸಾಗರವಾಗಿ ಮಾರ್ಪಡುತ್ತದೆ. ಅದೇ ರೀತಿ ಚಾಮರಸನ ಕಾವ್ಯಗಂಗೆ ಪಾರ್ವತೀ ಪರಮೇಶ್ವರರ ಸಂವಾದದ ಗತಿಯಲ್ಲಿ ಕಾರಂಜಿಯಾಗಿ ಚಿಮ್ಮುತ್ತದೆ, ಮಾಯಾಸಂಪುಟದ ಪರ್ವತಗಳಲ್ಲಿ ಜಲಪಾತಗಳನ್ನು ನಿರ್ಮಿಸಿಕೊಳ್ಳುತ್ತದೆ, ಬಸವಾದಿ ಪ್ರಮಥರು ಧರೆಗಿಳಿಯುವ ಪ್ರಸಂಗದೊಂದಿಗೆ ಬಯಲು ಸೀಮೆಯ ಶಾಂತ ಜಲರಾಶಿಯಾಗಿ ಬದಲಾಯಿಸುತ್ತದೆ

[illegible]

[illegible]

[illegible]

ಮುಕ್ತಾಯದ ಹಂತದಲ್ಲಿ ಸಮುದ್ರವನ್ನು ಸೇರುವ ಗಂಗಾಸಾಗರದ ಗತಿ ಪಡೆದುಕೊಳ್ಳುತ್ತದೆ. ಹೀಗೆ ಕಾವ್ಯದ 'ಅಂಗಿ'ಗೂ 'ಅಂಗ'ಕ್ಕೂ ಇರುವ ಪರಿಪೂರ್ಣ ಹೊಂದಿಕೆಯಿಂದಾಗಿ ಹಿಂದಿನಂತೆ ಇಂದೂ ಪ್ರಭುಲಿಂಗಲೀಲೆ ಅಸದೃಶ ಕಾವ್ಯವಾಗಿದೆ.

ಶಾಂತರಸವನ್ನು ಪ್ರಬಲವಾಗಿ ಸಮರ್ಥಿಸುತ್ತ ಅದರ ಸ್ವರೂಪವನ್ನು ವಿವರಿಸಿರುವ ಅಭಿನವ ಗುಪ್ತನಿಗೆ ಪ್ರಭುಲಿಂಗಲೀಲೆ ಕಾವ್ಯವನ್ನು ಅವಲೋಕಿಸುವ ಅವಕಾಶವಿರುತ್ತಿದ್ದರೆ! ಅದನ್ನವನು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಅಧ್ಯಾತ್ಮಕ್ಕೆ ಮಾತ್ರ ಅನ್ವಯಿಸಿ ಪ್ರತಿಪಾದಿಸಿರುವ ಶಾಂತರಸದ ಪ್ರಾತಿನಿಧಿಕ ಕೃತಿಯೆಂದು ಮನಃಪೂರ್ವಕವಾಗಿ ಸ್ವೀಕರಿಸುತ್ತಿದ್ದನು. ಅಂತೆಯೇ ಪ್ರಭುಲಿಂಗಲೀಲೆ ಚಾಮರಸನ ಸಿದ್ಧಿ!!

ಟಿಪ್ಪಣಿಗಳು

೧. ಬಸವಣ್ಣವರು ಶಿವಯೋಗಸಾಧನೆಯನ್ನು ಮಾಡಿದವರಾದ್ದರಿಂದ ಆಯಾ ಲಿಂಗದ ಸ್ವರೂಪವನ್ನು ತಿಳಿದವರಾಗಿದ್ದರು. ತಮ್ಮ ಅನುಭವವನ್ನು ಬಾಹ್ಯದಲ್ಲಿ ತೋರಿಸಿ ಕೊಟ್ಟು ಪಶ್ಚಿಮ ಹೃದಯಸ್ಥಾನದಲ್ಲಿ ತಾವು ಕಂಡ ಶಿವಪ್ರಕಾಶದ ವ್ಯಕ್ತರೂಪನಾದ ಅಲ್ಲಮಪ್ರಭುವನ್ನು ಆ ಶೂನ್ಯಸಿಂಹಾಸನದಲ್ಲಿ ಕುಳ್ಳಿರಿಸಲು ಏರ್ಪಾಟು ಮಾಡಿದರು.
ಎಂ. ಆರ್. ಶ್ರೀ. , ಪ್ರಭುಲಿಂಗಲೀಲೆಯ ಸಂಗ್ರಹ , ಟಿಪ್ಪಣಿ, ಪುಟ ೧೫೫

೨. ಡಾ. ಆರ್. ಸಿ. ಹಿರೇಮಠ , ಮಹಾಯಾತ್ರೆ ಪುಟ ೧೫೧

೩. ರಂ. ಶ್ರೀ. ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ , ಪುಟಗಳು ೩೩೧, ೩೩೨

೪. ಪ್ರ. ಲೀ. ಗತಿ ೫, ಪದ್ಯ ೨

೫. ಪ್ರ. ಲೀ. ಗತಿ ೨, ಪದ್ಯ ೨೧

೬. ಪ್ರ. ಲೀ. ಗತಿ ೨, ಪದ್ಯ ೩೬

೭. ಪ್ರ. ಲೀ. ಗತಿ ೫, ಪದ್ಯ ೧

೮. ಪ್ರ. ಲೀ. ಗತಿ ೮, ಪದ್ಯ ೨೦

೯. ಪ್ರ. ಲೀ. ಗತಿ ೨೩, ಪದ್ಯ ೨

೧೦. ಪ್ರ. ಲೀ. ಗತಿ ೨೩, ಪದ್ಯ ೩೪

೧೧. ಪ್ರ. ಲೀ. ಗತಿ ೩, ಪದ್ಯ ೩೨

೧೨. ಪ್ರ. ಲೀ. ಗತಿ ೩, ಪದ್ಯ ೩೬

೧೩. ಪ್ರ. ಲೀ. ಗತಿ ೫, ಪದ್ಯ ೧೮

೧೪. ಪ್ರ. ಲೀ. ಗತಿ ೫, ಪದ್ಯ ೨೧

೧೫. ಪ್ರ. ಲೀ. ಗತಿ ೫, ಪದ್ಯ ೩೭

೧೬. ಪ್ರ. ಲೀ. ಗತಿ ೬, ಪದ್ಯ ೪

[illegible]

೧೭. ಪ್ರ. ಲೀ. ಗತಿ ೭, ಪದ್ಯ ೧೬, ೧೭
೧೮. ಪ್ರ. ಲೀ. ಗತಿ ೭, ಪದ್ಯ ೨೩
೧೯. ಪ್ರ. ಲೀ. ಗತಿ ೭, ಪದ್ಯ ೨೪
೨೦. ಪ್ರ. ಲೀ. ಗತಿ ೭, ಪದ್ಯ ೨೬
೨೧. ಪ್ರ. ಲೀ. ಗತಿ ೭, ಪದ್ಯ ೩೪
೨೨. ಪ್ರ. ಲೀ. ಗತಿ ೭, ಪದ್ಯ ೩೬
೨೩. ಪ್ರ. ಲೀ. ಗತಿ ೭, ಪದ್ಯ ೪೪
೨೪. ಪ್ರ. ಲೀ. ಗತಿ ೭, ಪದ್ಯ ೫೫, ೫೬
೨೫. ಪ್ರ. ಲೀ. ಗತಿ ೭, ಪದ್ಯ ೫೯
೨೬. ಪ್ರ. ಲೀ. ಗತಿ ೭, ಪದ್ಯ ೬೧, ೬೨
೨೭. ಪ್ರ. ಲೀ. ಗತಿ ೭, ಪದ್ಯ ೬೮
೨೮. ಪ್ರ. ಲೀ. ಗತಿ ೭, ಪದ್ಯ ೮೪, ೮೫
೨೯. ಪ್ರ. ಲೀ. ಗತಿ ೮, ಪದ್ಯ ೭
೩೦. ಡಾ. ಆರ್. ಸಿ. ಹಿರೇಮಠ , ಚನ್ನಬಸವಣ್ಣನವರ ವಚನಗಳು , ಕರಣಹಸಿಗೆ, ಪುಟ ೬೬೩
೩೧. ಡಾ. ಆರ್. ಸಿ. ಹಿರೇಮಠ , ಚನ್ನಬಸವಣ್ಣನವರ ವಚನಗಳು , ಕರಣಹಸಿಗೆ, ಪುಟ ೬೬೪
೩೨. ಪ್ರ. ಲೀ. ಗತಿ ೧, ಪದ್ಯ ೧೨
೩೩. ಪ್ರ. ಲೀ. ಗತಿ ೩, ಪದ್ಯ ೧೩
೩೪. ಪ್ರ. ಲೀ. ಗತಿ ೩, ಪದ್ಯ ೧೪
೩೫. ಪ್ರ. ಲೀ. ಗತಿ ೩, ಪದ್ಯ ೧೭
೩೬. ಪ್ರ. ಲೀ. ಗತಿ ೩, ಪದ್ಯ ೨೧
೩೭. ಪ್ರ. ಲೀ. ಗತಿ ೩, ಪದ್ಯ ೪೨
೩೮. ಪ್ರ. ಲೀ. ಗತಿ ೩, ಪದ್ಯ ೪೫
೩೯. ಪ್ರ. ಲೀ. ಗತಿ ೫, ಪದ್ಯ ೩
೪೦. ಸುಧೆಯ ಸೋನೆಯ ಸುರಿಯುತಿಹ ಕಾ । ಲದಲಿ ತೃಪ್ತಿಯನೆಯ್ದಲಱಿಯದೆ ।
ಕ್ಷುಧೆಗೆ ತೃಷೆಗಳ ಮಾಡಿ ಕೋಟಲೆಗೊಂಬ ಮರುಳಂತೆ ॥
ಮುದವನಲ್ಲಮ ಕರುಣಿಸಿದ ಕಾ । ಲದಲಿ ನಿತ್ಯವನಱಿಯಲಱಿಯದೆ ।
ಕುದಿದು ಕೋಟಲೆಗೊಳುತಲಿರ್ದಳು ಮಾಯೆ ಬೇಟದಲಿ ॥
ಪ್ರ. ಲೀ. ಗತಿ ೫, ಪದ್ಯ ೨೦
೪೧. ನೆಲಸಿ ಮಿಂಚಿನ ಮಿಡುಕಿನೊಲು ಕಂ । ಗಳಿಗೆ ತೋಱುವನಲ್ಲದಪ್ಪಿಗೆ ।
ನಿಲುಕನಂಬರದಂತೆ ಸೋಂಕಿಹನಲ್ಲದನುರತಿಗೆ ॥
ಉಲುಕನಕ್ಷರದಂತೆ ಬಾಯೊಳು । ನಲಿವನಲ್ಲದೆ ಚುಂಬನಕೆ ತಾ ।
ಸಿಲುಕನಲ್ಲಮನೀ ಪರಿಯ ನಟಿಸಿದನು ಮಾಯೆಯಲಿ ॥
ಬಯಲ ಚಪ್ಪಿಱುವಂತೆ ಚುಂಬನ । ಬಯಲನಪ್ಪುವವೊಲು ಸಮಪ್ಪಿಕೆ ।
ಬಯಲನೀಕ್ಷಿಸುವಂತೆ ನೋಟದ ಕೂಟದನುಭವಣೆ ॥
ಬಯಲುಗೊಂಡುವು ಭಾವಿಸಲು ನಿ । ರ್ವಯಲಿನಲ್ಲಮಗೋತ ಕಾರಣ ।

ಬಯಲ ಬಿಹ್ವದ ಬಲೆಗೆ ಬಿದ್ದಳು ಮಾಯೆ ಸುರತದಲಿ ॥
ಪ್ರ. ಲೀ. ಗತಿ ೫, ಪದ್ಯ ೪೫,೪೬

೪೨. ಪ್ರ. ಲೀ. ಗತಿ ೫, ಪದ್ಯ ೬೮

೪೩. ಧರಣಿತಳದೊಳು ನಿಚ್ಚ ಮಧುಕೇ । ಶ್ವರನನಭಿವಂದಿಸುತ ಕಾಮಾ ।
ತುರದಲಲ್ಲಮಗೋತು ಮಾಯಾದೇವಿಯಿರುತಿರಲು ॥
ಹಿರಿದು ದಿನಗಳು ಹೋದುವೆನುತಲಿ । ಗಿರಿಜೆ ಮಾಯೆಯ ಹದನನಾಲಿಸಿ ।
ಕರೆದು ತರಲಿಕೆ ಕಳುಹಿದಳು ಬೆಸನಿತ್ತು ವಿಮಳೆಯನು ॥
ಪ್ರ. ಲೀ. ಗತಿ ೬, ಪದ್ಯ ೨

೪೪. ಏನು ಕಾರಣ ನಾನು ಹುಟ್ಟಿದೆ । ನೇನು ಕಾರಣ ನೀನು ಬಂದೆ ಯಿ ।
ದೇನು ಕಾರಣ ಗಿರಿಜೆ ಮಾಡಿದಳೆನಗೆ ಕರುಣವನು ॥
ತಾನು ದೇವತೆಯಾನುಮಾನಿಸಿ । ಯೇನು ಸಂಭಾವನೆಗೆ ಕಾರಣ ।
ಮಾನಿನಿಯೆ ಹೇಳೆನುತಲಿದ್ದಳು ವಿಮಳೆಗಾ ಮಾಯೆ ॥
ಪ್ರ. ಲೀ. ಗತಿ ೬, ಪದ್ಯ ೬

೪೫. ಪ್ರ. ಲೀ. ಗತಿ ೬, ಪದ್ಯ ೭

೪೬. ಪ್ರ. ಲೀ. ಗತಿ ೬, ಪದ್ಯ ೯

೪೭. ಪ್ರ. ಲೀ. ಗತಿ ೬, ಪದ್ಯ ೧೨

೪೮. ಈತನಾರೆಂಬೊಡೆ ಸದಾ ಸಾ । ಕ್ಷಾತವವನಿಜಲಾಲಲಾನಿಲ ।
ಭೂತತತ್ತ್ವವಿದೂರ ಪರಮಾನಂದ ರಸಭರಿತ ॥
ಜಾತದಲ್ಲಿ ವಿಚಾರಿಸುವೊಡೆಯ । ಜಾತನಲ್ಲೆಂದೆನುತಲುಪಮಾ ।
ತೀತ ನೀ ಶಿಶುವೆಂದ ನಿರಹಂಕಾರ ನಿಜಸತಿಗೆ ॥
ಪ್ರ. ಲೀ. ಗತಿ ೬, ಪದ್ಯ ೨೮

೪೯. ಪ್ರ. ಲೀ. ಗತಿ ೬, ಪದ್ಯ ೨೯

೫೦. ಪ್ರ. ಲೀ. ಗತಿ ೬, ಪದ್ಯ ೩೦

೫೧. ಪ್ರ. ಲೀ. ಗತಿ ೬, ಪದ್ಯ ೩೧

೫೨. ವಿಮಲ ಮುನಿಗಳ ವರಸಮಾಧಿಗೆ । ಸಮಯವಿಲ್ಲದ ದೇವ ಬಾರೈ ।
ದ್ಯುಮಣಿಶಿಖಿಶಶಿಕೋಟಿ ತೇಜೋಮೂರ್ತಿಮಯ ಬಾರೈ ॥
ಕಮಲಸಂಭವ ವಿಷ್ಣು ಮೊದಲಾ । ದಮರಜಾವಿಗೆ ನಿಲುಕದಿಹ ನಿರು ।
ಪಮನೆ ಬಾರೆನುತವರು ಬಣ್ಣಿಸಿ ಕರೆದರಲ್ಲಮನ ॥
ಪ್ರ. ಲೀ. ಗತಿ ೬, ಪದ್ಯ ೩೫

೫೩. ಪ್ರ. ಲೀ. ಗತಿ ೬, ಪದ್ಯ ೪೦

೫೪. ಪ್ರ. ಲೀ. ಗತಿ ೬, ಪದ್ಯ ೪೨

೫೫. ಪ್ರ. ಲೀ. ಗತಿ ೬, ಪದ್ಯ ೨

೫೬. ಪ್ರ. ಲೀ. ಗತಿ ೭, ಪದ್ಯ ೩

೫೭. ಪ್ರ. ಲೀ. ಗತಿ ೭, ಪದ್ಯ ೬

೫೮. ಪ್ರ. ಲೀ. ಗತಿ ೭, ಪದ್ಯ ೭

[illegible]

೫೯. ಪ್ರ. ಲೀ. ಗತಿ ೭, ಪದ್ಯ ೧೦
೬೦. ಪ್ರ. ಲೀ. ಗತಿ ೭, ಪದ್ಯ ೧೧ ರಿಂದ ೧೩
೬೧. ಪ್ರ. ಲೀ. ಗತಿ ೭, ಪದ್ಯ ೧೬
೬೨. ಪ್ರ. ಲೀ. ಗತಿ ೭, ಪದ್ಯ ೧೭
೬೩. ಪ್ರ. ಲೀ. ಗತಿ ೭, ಪದ್ಯ ೨೦
೬೪. ಪ್ರ. ಲೀ. ಗತಿ ೭, ಪದ್ಯ ೨೨
೬೫. ಪ್ರ. ಲೀ. ಗತಿ ೭, ಪದ್ಯ ೨೬
೬೬. ಪ್ರ. ಲೀ. ಗತಿ ೭, ಪದ್ಯ ೨೯
೬೭. ಪ್ರ. ಲೀ. ಗತಿ ೭, ಪದ್ಯ ೩೬
೬೮. ಆಯಿತೇ ಕಡೆಯಾಟ ಹೂಣಿಕೆ । ಹೋಯಿತೇ ಹುಸಿಯಾಗಿ ಕಾಮನ ।
ಬಾಯ ಬಾರಿಗೆ ಬಿದ್ದೆನೇ ನಗುವವರಿಗೆಡೆಯಾಗಿ ॥
ಹಾಯೆನುತ ಹಮ್ಮೈಸಿ ಹಲುಬುತ । ಬಾಯ ಬಿಡುತಲಿ ಮಱುಗುತಿರ್ದಳು ।
ಮಾಯೆ ಮಾಣದೆಯಲ್ಲಮಪ್ರಭುರಾಯನಗಲಿದರೆ ॥
ಪ್ರ. ಲೀ. ಗತಿ ೭, ಪದ್ಯ ೩೯
೬೯. ಪ್ರ. ಲೀ. ಗತಿ ೭, ಪದ್ಯ ೪೦
೭೦. ಪ್ರ. ಲೀ. ಗತಿ ೭, ಪದ್ಯ ೫೩
೭೧. ಪ್ರ. ಲೀ. ಗತಿ ೭, ಪದ್ಯ ೬೦
೭೨. ಪ್ರ. ಲೀ. ಗತಿ ೭, ಪದ್ಯ ೬೬
೭೩. ಪ್ರ. ಲೀ. ಗತಿ ೭, ಪದ್ಯ ೬೮
೭೪. ಪ್ರ. ಲೀ. ಗತಿ ೭, ಪದ್ಯ ೭೦
೭೫. ಪ್ರ. ಲೀ. ಗತಿ ೭, ಪದ್ಯ ೭೩
೭೬. ಪ್ರ. ಲೀ. ಗತಿ ೭, ಪದ್ಯ ೭೪
೭೭. ಪ್ರ. ಲೀ. ಗತಿ ೭, ಪದ್ಯ ೭೫
೭೮. ಪ್ರ. ಲೀ. ಗತಿ ೭, ಪದ್ಯ ೭೮
೭೯. ಕಾಮವೆತ್ತಲು ಪರಮತತ್ವದ । ಸೀಮೆಯೆತ್ತಲು ತಿಮಿರವೆತ್ತಲು ।
ತಾಮಿರಸಸಖನೆತ್ತಲರಿಸಿನವೆತ್ತ ಬಿಸಿಲೆತ್ತ ॥
ಭ್ರಾಮಕದ ನುಡಿ ಸಾಕು ನೀನೆ । ತ್ತಾಮಹಾ ಘನವೆತ್ತ ಮರುಳೇ ।
ಕ್ಷೇಮದಲಿ ನೀ ಬಂದ ಬಟ್ಟೆಯಲಬಲೆ ಹೋಗೆಂದ ॥
೮೦. ಪ್ರ. ಲೀ. ಗತಿ ೭, ಪದ್ಯ ೮೦
ಕನಸಿನಲಿ ಚೇಳೂರಿದೊಡೆ ವೇ । ದನಿಸಿತೆಂದಿರದೆದ್ದು ನರಳುವ ।
ಮನುಜರುಂಟೇ ಮರುಳೆ ನಿನ್ನ ಮನೋವಿಕಾರಗಳು ॥
ನಿನಗೆ ತೋಱುದೊಡೆವ್ಮೊಳೇತಕೆ । ಮನಕತವ ನೀ ಮಾಡುತಿಹೆ ನಾ ।
ವಿನಿತು ಗಸಣೆಯ ಗೊಡವೆಗಾಱೆವು ಮಾಯೆ ಕೇಳೆಂದ ॥
ಪ್ರ. ಲೀ. ಗತಿ ೭, ಪದ್ಯ ೮೨

[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]

[illegible]

[illegible]

[illegible]

[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]

[illegible]

[illegible]

[illegible]

೮೧. ವಾಸಿ ಹುಟ್ಟಿದ ಬಳಿಕ ನಾನಿ । ನ್ನೇಸುದಿನವಿದ್ದಾದೊಡೆನ್ನಯ ।
ಭಾಷೆಯನು ನಾನುತ್ತರಿಸಬೇಕಲ್ಲದುಳಿದಂತೆ ॥
ಆಸೆಯಿಲ್ಲದೆ ತಿರುಗಿದೊಡೆ ಹೆಂ । ಗೂಸುತನಕದು ಹಾನಿಯಾ ಕೈ ।
ಲಾಸಕಾನೆಂತೆಯ್ದುವೆನು ಕೇಳೆಂದಳಾ ಮಯೆ ॥
ಪ್ರ. ಲೀ. ಗತಿ ೭, ಪದ್ಯ ೮೩
೮೨. ಪ್ರ. ಲೀ. ಗತಿ ೭, ಪದ್ಯ ೮೪
೮೩. ಪ್ರ. ಲೀ. ಗತಿ ೭, ಪದ್ಯ ೮೫
೮೪. ಪ್ರ. ಲೀ. ಗತಿ ೮, ಪದ್ಯ ೯
೮೫. ಗೋಮುಖವ್ಯಾಘ್ರಂಗಳಂದದ । ಕಾಮ ಮೊದಲಾದಖಿಳ ವಿಷಯ ।
ಸ್ತೋಮವನು ಮುರಿದಿಕ್ಕಿ ಮುಂಬರಿದಂತರಂಗದಲಿ ॥
ಆ ಮಹಾಶಿವಲಿಂಗಸಂಗ । ಪ್ರೇಮಿಯಾಗಿ ಶಿವೈಕ್ಯಪದವನು ।
ನೇಮಿಸಿದ ಮಹದೇವಿಯಕ್ಕಗೆ ಶರಣು ಶರಣಾರ್ಥಿ॥
ಪ್ರ. ಲೀ. ಗತಿ ೧, ಪದ್ಯ ೫
೮೬. ಪ್ರ. ಲೀ. ಗತಿ ೯, ಪದ್ಯ ೨
೮೭. ಪ್ರ. ಲೀ. ಗತಿ ೯, ಪದ್ಯ ೩
೮೮. ಪ್ರ. ಲೀ. ಗತಿ ೯, ಪದ್ಯ ೪
೮೯. ಪ್ರ. ಲೀ. ಗತಿ ೯, ಪದ್ಯ ೫
೯೦. ಪ್ರ. ಲೀ. ಗತಿ ೧೦, ಪದ್ಯ ೨೪
೯೧. ಪ್ರ. ಲೀ. ಗತಿ ೧೦, ಪದ್ಯ ೩೦
೯೨. ಪ್ರ. ಲೀ. ಗತಿ ೧೭, ಸೂಚನೆ
೯೩. ಪ್ರ. ಲೀ. ಗತಿ ೧೭, ಪದ್ಯಗಳು ೪,೫
೯೪. ಪ್ರ. ಲೀ. ಗತಿ ೧೭, ಪದ್ಯ ೨೩
೯೫. ಪ್ರ. ಲೀ. ಗತಿ ೧೭, ಪದ್ಯ ೨೪
೯೬. ಪ್ರ. ಲೀ. ಗತಿ ೧೭, ಪದ್ಯ ೨೬
೯೭. ಪ್ರ. ಲೀ. ಗತಿ ೮, ಪದ್ಯ ೨೫
೯೮. ಪ್ರ. ಲೀ. ಗತಿ ೮, ಪದ್ಯ ೨೬
೯೯. ದೂಷಕರ ನುಡಿಗೇಳಿ ಮನದಲಿ । ರೋಷವನು ತಾಳಿದನೆ ಮದದಲಿ ।
ವಾಸಿಯನು ಮಾಡಿದೊಡೆ ಮಾಱುತ್ತರವನುಸುರಿದನೆ ॥
ಈಸು ಶಮೆದಮೆ ಸಮತೆಯುಳ್ಳ ಸ । ದಾ ಶುಚಿಗಳಾರೆನುತ ವೃಷಭನ ।
ನಾ ಸದಾಶಿವ ಪೊಗಳುತಿರ್ದನು ಪಂಚವದನದಲಿ ॥
ಪ್ರ. ಲೀ. ಗತಿ ೮, ಪದ್ಯ ೨೮
೧೦೦. ಪ್ರ. ಲೀ. ಗತಿ ೯, ಪದ್ಯ ೧೨, ೧೩
೧೦೧. ಪ್ರ. ಲೀ. ಗತಿ ೯, ಪದ್ಯ ೨೫
೧೦೨. ಮರ ಶಿಲಾ ಪಶು ದೇಹಗೇಹದೊ । ಳಿರಲು ನಾವಿನ್ನಾಜಿವೆನುತಲಿ
ಸುರತರುವೆ ಕೆಯ್ಯಾಗಿ ಚಿಂತಾಮಣಿಯೆ ಮನವಾಗಿ ॥

ಸುರರ ಧೇನುವೆ ಶಬುದವಾಗಿಯೆ । ನೆರೆದು ನೆಲಸಿದುವೆನಲು ಬಸವನ ।
ಕರ ಮನೋ ವಚನಂಗಳಿತ್ತವು ಸುಖವನಖಿಳರಿಗೆ ॥
ಪ್ರ. ಲೀ. ಗತಿ ೯, ಪದ್ಯ ೨೮

೧೦೩. ಪ್ರ. ಲೀ. ಗತಿ ೯, ಪದ್ಯ ೨೯

೧೦೪. ಪ್ರ. ಲೀ. ಗತಿ ೧೪, ಪದ್ಯ ೧೧

೧೦೫. ಪ್ರ. ಲೀ. ಗತಿ ೧೪, ಪದ್ಯ ೨೧

೧೦೬. ಪ್ರ. ಲೀ. ಗತಿ ೧೪, ಪದ್ಯ ೩೨

೧೦೭. ಪ್ರ. ಲೀ. ಗತಿ ೧೫, ಪದ್ಯ ೨೧

೧೦೮. ಸಂ ಡಾ. ಎಂ. ಎಸ್. ಸುಂಕಾಪುರ , ಕವಿ ಚಾಮರಸ ವಿರಚಿತ ಪ್ರಭುಲಿಂಗಲೀಲೆ,
ಪ್ರಸ್ತಾವನೆ, ಪುಟ XXIV

೧೦೯. ಅದೇ, ಪುಟ XXV

೧೧೦. ವಾಗರ್ಥವಿವ ಸಂಪ್ರಕ್ತೌ ವಾಗರ್ಥ ಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥
'ರಘುವಂಶ'ದ ಆದಿಯಲ್ಲಿ ಕಾಳಿದಾಸನ ಮಂಗಳಾಚರಣೆ ರೂಪದ ಶ್ಲೋಕ
ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ , ಪುಟ ೧೭೯

೧೧೧. ಕುವೆಂಪು , ರಾಮಾಯಣ ದರ್ಶನಂ , ಪುಟ ೧೮
ಸಹಜದಿಂದ ನಿರಾಲಂಬವಾಯಿತ್ತು, ನಿರಾಲಂಬದಿಂದ ನಿರಾಳವಾಯಿತ್ತು.
ನಿರಾಳದಿಂದ ನಿರವಯುವಾಯಿತ್ತು, ನಿರವಯದಿಂದ ಅನಾದಿಯಾಯಿತ್ತು.
ಅನಾದಿಯಲ್ಲಿ ಮೂರ್ತಿಯಾದನೊಬ್ಬ ಶರಣ.
ಆ ಶರಣನ ಮೂರ್ತಿಯಿಂದ ಸದಾಶಿವನಾದ,
ಆ ಸದಾಶಿವನ ಮೂರ್ತಿಯಿಂದ ಶಿವನಾದ.
ಆ ಶಿವನ ಮೂರ್ತಿಯಿಂದ ರುದ್ರನಾದ, ಆ ರುದ್ರನ ಮೂರ್ತಿಯಿಂದ ವಿಷ್ಣುವಾದ.
ಆ ವಿಷ್ಣುವಿನ ಮೂರ್ತಿಯಿಂದ ಬ್ರಹ್ಮನಾದ.
ಆ ಬ್ರಹ್ಮನ ಮೂರ್ತಿಯಿಂದಾದವು ಸಕಲ ಜಗತ್ತುಗಳೆಲ್ಲಾ
ಇವರೆಲ್ಲ ನಮ್ಮ ಗುಹೇಶ್ವರನ ಕರಸ್ಥಲದ ಹಂಗಿನಲ್ಲಿ ಹುಟ್ಟಿ ಬೆಳೆದರು.
ಸಂ. ಡಾ. ಬಿ. ವ್ಹಿ. ಮಲ್ಲಾಪುರ , ಸಮಗ್ರ ವಚನ ಸಂಪುಟ , ಸಂಪುಟ ೨, ವ. ಸಂ. ೧೫೮೪

೧೧೩. ಗುರು ಗುಹೇಶ್ವರಲಿಂಗ ಇದು ಅಲ್ಲಮಪ್ರಭುವಿನ ಪರವಾಗಿಯೂ, ಪರಶಿವನ
ಪರವಾಗಿಯೂ ಇದೆ.
ಸಂ. ಎಂ. ಆರ್. ಶ್ರೀನಿವಾಸ ಮೂರ್ತಿ, ಪ್ರಭುಲಿಂಗಲೀಲೆಯ ಸಂಗ್ರಹ , ಟಿಪ್ಪಣಿ, ಪುಟ ೧೩೪

೧೧೪. ರೆ. ಎಫ್. ಟಿ. ಕಿಟೆಲ್ , ಕನ್ನಡ– ಇಂಗಿಷ ಡಿಕ್ಷನರಿ , ಪುಟ ೬೬೨
ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ । ಣೀಪತಿಗೆ ಚಾತುರ್ಯಮಂ ದಿವಸ್ಪತಿಗೆ ಪ್ರ
ತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ ಮೂಲೋಕವಾವರಿಸುವ ॥
ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾ । ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ ।
ಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಪೆ ಸಂತೋಷದಿಂದ ॥

೧೧೫. ಸಂ. ಟಿ. ಎಸ್. ವೆಂಕಣ್ಣಯ್ಯ ಮತ್ತು ಎ. ಆರ್. ಕೃಷ್ಣ ಶಾಸ್ತ್ರಿ , ಹರಿಶ್ಚಂದ್ರ ಕಾವ್ಯ ಸಂಗ್ರಹ, ಕಥಾರಂಭ, ಪದ್ಯ ೧

೧೧೬. ಶ್ರೀವನಿತೆಯರಸನೆ ವಿಮಲ ರಾ । ಜೀವ ಪೀಠದ ಜನಕ ಜಗಕತಿ ।
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರ ॥
ರಾವಣಾಸುರ ಮಥನ ಶ್ರವಣ ಸು । ಧಾ ವಿನೂತನು ಕಥನ ಕಾರಣ ।
ಕಾವುದಾನತ ಜಗವ ಗದುಗಿನ ವೀರನಾರಯಣ ॥
ಪ್ರ. ಸಂ. ಕುವೆಂಪು , ಕರ್ನಾಟ ಭಾರತಕಥಾಮಂಜರಿ , ಪದ್ಯ ೧

೧೧೭. ಬ್ರಹ್ಮನ ಘನವೆಂಬೆನೆ ಬ್ರಹ್ಮನ ನುಂಗಿತ್ತು ಮಾಯೆ
ವಿಷ್ಣುವ ಘನವೆಂಬೆನೆ ವಿಷ್ಣುವ ನುಂಗಿತ್ತು ಮಾಯೆ
ರುದ್ರನ ಘನವೆಂಬೆನೆ ರುದ್ರನ ನುಂಗಿತ್ತು ಮಾಯೆ
ತಾ ಘನವೆಂಬೆನೆ ತನ್ನ ನುಂಗಿತ್ತು ಮಾಯೆ
ಸರ್ವವು ನಿನ್ನ ಮಾಯೆ ಒಬ್ಬರನೊಳಕೊಂಡಿತ್ತೆ ಹೇಳಾ ಗುಹೇಶ್ವರಾ
ಪ್ರ. ಲೀ. ಗತಿ ೩, ವಚನ ಸಂ. ೨

೧೧೮. ಕಡಲ ನುಂಗಿದ ಕಪ್ಪಿನ ಪರಿ ನವಸಾಸಿರ ನವಸಾಸಿರ, ಸಿಡಿಲು ಹೊಯ್ದು ಬಯಲಿಂಗೆ ಬಣ್ಣವುಂಟೆ
ಕಂಗಳ ಮುಂದಣ ಕನಸು, ಹಿಂಗದ ತುಂಬಿಯ ಪರಿಮಳ, ಅಂಗವಿಲ್ಲದ ರೂಹಿಂಗೆ ಸಂಗವುಂಟೆ ॥
ಇದೇನೋ ಗಗನದ ಹಣ್ಣನೆ ಕೊಯ್ದು ಮುಗುದೆ ರುಚಿಯನಱಿಯಳು ।
ಹಗರಣದ ಹಮ್ಮಾವಿನ ಹಯನು ಸಯವಪ್ಪುದೆ ಗುಹೇಶ್ವರಾ ॥
ಪ್ರ. ಲೀ. ಗತಿ ೫, ವಚನ ಸಂ. ೧

೧೧೯. ಭಾವಗೆಟ್ಟನು ಭವಗೆಟ್ಟನು ಒಡಹುಟ್ಟಿದರೈವರ ಕೈ ಬಿಟ್ಟನು
ಭಂಡನು ಲಜ್ಜಭಂಡನು ಕಂಡರೆ ನುಡಿಸದಿರಾ ಮಾಯಾದೇವಿ
ಅರುವೆಯನುಟ್ಟನು ನೆರೆ ಮರುಳಾದನು,
ಹುಟ್ಟು ಮುರಿದನು ಮಡಕೆಯನೊಡೆದನು
ಆದಿ ಪುರಾತನು ಅಚಲಲಿಂಗೈಕ್ಯನು
ಗುಹೇಶ್ವರಲ್ಲಯ್ಯಂಗೆ ಮೂಗಿಲ್ಲ ಮಗಳೇ
ಪ್ರ. ಲೀ. ಗತಿ ೭, ವಚನ ಸಂ. ೨

೧೨೦. ಮಾರಾರಿಯ ಬೆಸನದಿಂದ ಧಾರುಣಿಗೆ ಬಸವನವತರಿಸಿ
ಸಾರಾಯ ಸದ್ಭಕ್ತಿಯನು ತೋಱುದನು ಶಿವಶರಣರಿಗೆಲ್ಲ
ಭಕ್ತಿಯ ಪಥವ ಮುಕ್ತಿಯ ಭೇದವ ಸತ್ಯ ಶರಣರಿಗೆ ಉಪದೇಶವ ಮಾಡಿ
ನಿತ್ಯಲಿಂಗಾರ್ಚನೆಯೊಳಗೆನ್ನನಿರಿಸಿ ರಕ್ಷಿಸಿದಾತ ಬಸವಣ್ಣ ಕಾಣಾ ಕಲಿದೇವರದೇವಾ
ಪ್ರ. ಲೀ. ಗತಿ ೮, ವಚನ ಸಂ. ೨

೧೨೧. ಪ್ರಾಣಲಿಂಗದ ಪೂರ್ವಾಶ್ರಯವ ಕಳೆಯಲೆಂದು ಲಿಂಗಪ್ರಾಣಿಯಾದ
ಲಾಂಛನದ ಪೂರ್ವಾಶ್ರಯವ ಕಳೆಯಲೆಂದು ಜಂಗಮಪ್ರಾಣಿಯಾದ
ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು ಮಹಾಪ್ರಸಾದಿಯಾದಿ
ಈ ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು ಬಸವಣ್ಣನು
ಮರ್ತ್ಯಕ್ಕೆ ಬಂದನು ಕಾಣಾ ಗುಹೇಶ್ವರಾ

ಪ್ರ. ಲೀ. ಗತಿ ೯, ವಚನ ಸಂ. ೧

೧೨೨. ವಚನದಲ್ಲಿ ಪದೇ ಪದೇ ಬಳಕೆಯಾಗಿರುವ 'ನಾನು' ಪುರುಷವಾಚಕವಾಗಿರದೆ ಅಹಂಕಾರದ ಸಾಂಕೇತಿಕ ನಿರೂಪಣೆಯಾಗಿದೆ. ಸಾಂಕೇತಿಕ ಪ್ರಜ್ಞೆಯ ಹಿನ್ನೆಲೆಯ ವಚನವನ್ನು ಆಯ್ದುಕೊಳ್ಳುವಲ್ಲಿಯೂ
ಚಾಮರಸ ಜಾಣತನ ಮೆರೆದಿದ್ದಾನೆ.

೧೨೩. ಇಲ್ಲಿ ಬಳಸಿದ ಬಹಳಷ್ಟು ವಚನಗಳನ್ನು ಸಮಗ್ರ ವಚನಸಂಪುಟದಲ್ಲಿ ಕಾಣುತ್ತೇವೆ.

೧೨೪. ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾಱುವೋದೆನೆಂದರೆ
ತನುವನಲ್ಲಾಡಿಸಿ ನೋಡುವೆ ನೀನು,
ಮನವನಲ್ಲಾಡಿಸಿ ನೋಡುವೆ ನೀನು,
ಧನವನಲ್ಲಾಡಿಸಿ ನೋಡುವೆ ನೀನು.
ಇದಕೆಲ್ಲ ಅಂಜದಿದ್ದರೆ ಭಕ್ತಿಕಂಪಿತ ನಮ್ಮ ಕೂಡಲಸಂಗಮ ದೇವಾ !
ಸಂ. ಪ್ರೊ. ಬಸವನಾಳ ಶಿವಲಿಂಗಪ್ಪನವರು, ಬಸವಣ್ಣನವರ ಷಟ್ಸ್ಥಳದ ವಚನಗಳು,
ವ. ಸಂ. ೨೧೭

೧೨೫. Faber & Faber , T.S.Eliot , Selected Poems.

೧೨೬. ಗತಿ ೧, ಪದ್ಯ ೧೫, ಗತಿ೭, ಪದ್ಯ ೭೪ ಮತ್ತು ೭೫, ಗತಿ ೧೭, ಪದ್ಯ ೨೪, ಗತಿ ೧೯,
ಪದ್ಯ ೭ ಮತ್ತು ೧೦, ಗತಿ ೨೦, ಪದ್ಯ ೯

೧೨೭. ಗತಿ ೧೪, ವಚನ ೯, ಗತಿ ೧೫, ವಚನ ೧, ಗತಿ ೨೫, ವಚನ ೨

೧೨೮. ಪ್ರ. ಲೀ. ಗತಿ ೧೭, ಪದ್ಯ ೨೪

೧೨೯. ಪ್ರ. ಲೀ. ಗತಿ ೭, ಪದ್ಯ ೭೪

೧೩೦. ಪ್ರ. ಲೀ. ಗತಿ ೭, ಪದ್ಯ ೭೫

೧೩೧. ಕೈವಲ್ಯ ಪದ್ಧತಿ, ಜ್ಞಾನ ಪ್ರತಿಪಾದನ ಸ್ಥಲ, ಪದ ೧೨

೧೩೨. ಡಾ. ಆರ್. ಸಿ ಹಿರೇಮಠ , ಮಹಾಯಾತ್ರೆ, ಪುಟ ೩

೧೩೩. ಡಾ. ಆರ್. ಸಿ. ಹಿರೆಮಠ , ಚೆನ್ನಬಸವಣ್ಣನವರ ವಚನಗಳು,ಕರಣ ಹಸಿಗೆ ,
ಪುಟ ೬೫೭ ಮತ್ತು ೬೫೮

೧೩೪. ತತ್ವವಿಂಶತಿನಾಲ್ಕು ಕೂಡಿಹ । ತತ್ವದೇಹಾಪುರದಿ ಇರುತಿಹ ।
ನಿತ್ಯಮಂಗಳ ವಸ್ತು ಜೀವಾನೆನಿಪ ಪುರುಷರರ ॥
ಸತ್ಯದಿಂ ನೀನೆಂದು ತಾನಿದು ಸತ್ಯವೈ ಸಟಿಯಲ್ಲ ನೀನಿ ।
ತ್ಯತ್ವ ವಸ್ತುವು ಸಿದ್ಧಿ ಸಚ್ಚಿನ್ಮಾತ್ರ ನೀನೆಂದ ॥
ಸಂ. ಡಾ. ಜಿ. ಎಸ್. ಕಾಪಸೆ ಮತ್ತು ಪ್ರೊ. ಆರ್. ಬಿ. ಕಂಠಿ, ಶ್ರೀ ಚಿದಾನಂದಾವಧೂತ ವಿರಚಿತ
ಜ್ಞಾನಸಿಂಧು , ಪುರುಷ ಲಕ್ಷಣ, ಪದ್ಯ ೩೭

೧೩೫. ಬ್ರಹ್ಮತಲೆದೋರದಂದು, ವಿಷ್ಣು ಉದಯಿಸದಂದು,
ರುದ್ರನವತರಿಸದಂದು, ಈರೇಳು ಭುವನ ನೆಲೆಗೊಳ್ಳದಂದು,
ಸಪ್ತಸಾಗರಂಗಳುಕ್ಕಿ ಹರಿಯದಂದು, ಅಮೃತಮಥನವಿಲ್ಲದಂದು,
ಮೂವತ್ತು ಮೂಱು ಕೋಟಿ ದೇವರ್ಕಳಿಲ್ಲದಂದು,
ಮುನ್ನಾರು ಬಲ್ಲರು? ಮುನ್ನಾರು ಬಲ್ಲರು ಬಲ್ಲರು?

ಆದಿಮೂಲ ಸ್ವಾಮಿ ಕೂಡಲಚೆನ್ನಸಂಗಯ್ಯ ಹಮ್ಮಿಲ್ಲದಿರ್ದನಂದು.
ಸಂ. ಡಾ. ಆರ್. ಸಿ. ಹಿರೇಮಠ , ಚೆನ್ನಬಸವಣ್ಣನವರ ವಚನಗಳು , ಭಕ್ತಸ್ಥಲ, ವ. ಸಂ. ೯

೧೩೬. ಗಗನದ ಮೇಲೊಂದಭಿನವ ಗಿಳಿಹುಟ್ಟಿ,
ಸಯಸಂಭ್ರಮದಲ್ಲಿ ಮನೆಯ ಮಾಡಿತ್ತು,
ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತು,
ಬ್ರಹ್ಮನಾಗಿಳಿಗೆ ಹಂಜರವಾದ, ವಿಷ್ಣುವಾಗಿಳಿಗೆ ಕೊರೆಕೂಳಾದ,
ರುದ್ರನಾಗಿಳಿಗೆ ತಾ ಕೋಳುವಾದ
ಇಂತಿ ಮೂವರ ಮುಂದಣ ಕಂದನ ನುಂಗಿ,
ದೃಷ್ಟನಾಮ ನಷ್ಟವಾಯಿತ್ತದೆಂತೋ ಗುಹೇಶ್ವರ.
ಸಂ. ಇಮ್ಮಡಿ ಶಿವಬಸವಸ್ವಾಮಿಗಳು ,ಅಲ್ಲಮಪ್ರಭುವಿನ ಟೀಕಿನ ವಚನಗಳು,
ಮಾಯಾವಿಲಾಸವಿಡಂಬನ ಸ್ಥಲ, ವ.ಸಂ. ೧೫

೧೩೭. ಪ್ರ.ಸಂ. ನಿರಂಜನ , ಜ್ಞಾನಗಂಗೋತ್ರಿ, ಕಲೆಸಾಹಿತ್ಯ, ಮಹಾಭಾರತ, ಪುಟ ೪೭೬

೧೩೮. ಸಂ.ಟಿ.ಎಸ್.ವೆಂಕಣ್ಣಯ್ಯ ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಹರಿಶ್ಚಂದ್ರ ಕಾವ್ಯ ಸಂಗ್ರಹ ,
ವಿಶ್ವೇಶ್ವರ ಸಾಕ್ಷಾತ್ಕಾರ, ಪದ್ಯ ೨೨

೧೩೯. ಸಂ. ಬಸವನಾಳ ಶಿವಲಿಂಗಪ್ಪನವರು , ಬಸವಣ್ಣನವರ ಷಟ್ಸ್ಥಳದ ವಚನಗಳು , ವ.ಸಂ. ೨೩೮

೧೪೦. ರಂ, ಶ್ರೀ. ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ , ಪುಟ ೩೩೧

೧೪೧. ಎಂ. ಆರ್. ಶ್ರೀನಿವಾಸಮೂರ್ತಿ , ಪ್ರಭುಲಿಂಗಲೀಲೆಯ ಸಂಗ್ರಹ , ಪೀಠಿಕೆ, ಪುಟ ೫೬

೧೪೨. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯ ಮೀಮಾಂಸೆ , ಪುಟ ೧೩೮

೧೪೩. ಚಾಮರಸನ ಈ ಶೃಂಗಾರವರ್ಣನೆಯನ್ನು ಒಪ್ಪದ ಕುವೆಂಪು ಮೊದಲಾದವರು ಇದು ವಿಕಾರ
ಶೃಂಗಾರವೆಂದು, ಶುಚಿರುಚಿಯದಲ್ಲವೆಂದು ಟೀಕಿಸುತ್ತಾರೆ.
ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ , ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ,
ಅಡಿಟಿಪ್ಪಣಿ ಪುಟ ೧೬೬

೧೪೪. ಪ್ರ. ಲೀ. ಗತಿ ೪, ಪದ್ಯ ೫೦

೧೪೫. ಸಂ. ಡಾ. ಎಂ. ಎಸ್. ಸುಂಕಾಪುರ , ಕವಿಚಾಮರಸ ವಿರಚಿತ ಪ್ರಭುಲಿಂಗಲೀಲೆ, ಪ್ರಸ್ತಾವನೆ,
ಪುಟ XXVI

೧೪೬. ಅಷ್ಟಾದಶ ವರ್ಣನೆಗೆ ಕಟ್ಟು ಬಿದ್ದು
ಸಮುದ್ರದ ವರ್ಣನೆಗೆ ಕುಳಿತ ಒಬ್ಬ.
ಯಾಕೆಂದರೆ,
ಅವನ ಕಾವ್ಯ ಮಹಾಕಾವ್ಯವಾಗಬೇಕಿತ್ತು.
ಅದಕ್ಕಾಗಿ ಮಾಡಿಯೇ ಬಿಟ್ಟ
ಸಮುದ್ರದ ವರ್ಣನೆ ಹೀಗೆ,
'ಸಮುದ್ರ ಜುಳುಜುಳು ಹರಿಯುತ್ತಿತ್ತು!'
ಜಿ. ಎಸ್. ವಡಗಾಂವಿ , ಸಮುದ್ರ ಹರಿಯುತ್ತಿದೆ, ಪ್ರಜಾಭಿಮಾನಿ ವಾರ ಪತ್ರಿಕೆ, ಬನಹಟ್ಟಿ

೧೪೭. ಡಾ. ಎಸ್. ಎಂ. ವೃಷಬೇಂದ್ರಸ್ವಾಮಿ , ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ, ಪುಟ ೨೦೯

೧೪೮. ಸಂ. ಎಸ್. ಎಸ್. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ, ಪ್ರಸ್ತಾವನೆ, ಪುಟ ೧೬

೧೪೯. ಸಂ. ಡಾ. ಎಂ. ಎಸ್. ಸುಂಕಾಪುರ , ಕವಿಚಾಮರಸ ವಿರಚಿತ ಪ್ರಭುಲಿಂಗಲೀಲೆ, ಪ್ರಸ್ತಾವನೆ, ಪುಟ XXVI

೧೫೦. ಪ್ರ. ಲೀ. ಗತಿ ೭, ಪದ್ಯ ೭

೧೫೧. ಪ್ರ. ಲೀ. ಗತಿ ೨೦, ಪದ್ಯ ೩೮

೧೫೨. ಭಂಗವೇ ಬಸುಱಾದ ವಿಷಯ ಸು । ಖಂಗಳಿಗೆ ಮಿಗೆ ಹೇಸಿ ನಿರ್ವಿಷ ।
ಯಾಂಗದಿಂದಲಿ ಗುರುಗುಹೇಶ್ವರ ಪಾದಪಂಕಜದ ॥
ಸಂಗವನು ಮಾಡುವರೆ ಕೇಳುವು । ದಂಗವಿಸಿ ಮಹದೇವಿಯಕ್ಕನ ।
ಸಂಗತಿಯ ಸಂಭ್ರಮದ ಸಂಧಿಯ ಪದದ ಪದ್ಧತಿಯ ॥
ಪ್ರ. ಲೀ. ಗತಿ ೧೦, ಪದ್ಯ ೧

೧೫೩. ಗೂಗೆಗಾದಿತ್ಯನ ಕರಂಗಳು । ಮೂಗರಿಗೆ ಮಾತುಗಳು ಡಂಭಕ ।
ಯೋಗಿಗನುಭವ ಕೋಪಿಗುಪಶಮೆ ನಾಯ್ಗೆ ನಾರಂಗ ॥
ಮೂಗುಹೀನಗೆ ಮುಕುರವುಱುಸಿಕೆ । ಯಾಗಬಲ್ಲವೆ ಭಕ್ತಿಗೆಳಸದೆ ।
ರೋಗಿಗೌಷಧಿಯರುಚಿಯಾದಂತಾಯಿತವನಿಪಗೆ ॥
ಪ್ರ. ಲೀ. ಗತಿ ೧೦, ಪದ್ಯ ೨೩

೧೫೪. ಸಂ. ಡಾ. ಎಂ. ಎಸ್. ಸುಂಕಾಪುರ , ಕವಿಚಾಮರಸ ವಿರಚಿತ ಪ್ರಭುಲಿಂಗಲೀಲೆ, ಪ್ರಸ್ತಾವನೆ, ಪುಟ XXVII ಮತ್ತು XXVIII

೧೫೫. ಪ್ರ. ಲೀ. ಗತಿ ೫, ಪದ್ಯ ೬೬ , ಗತಿ ೧೯, ಪದ್ಯ ೧೫, ಗತಿ ೨೧, ಪದ್ಯ ೨೭

೧೫೬. ಡಾ. ಜಿ. ಎಸ್. ಛಿವಾರಿ , ಸಂಶೋಧನ ಮಹಾಪ್ರಬಂಧ, ಪುಟ ೩೧೭
(ಡಾ. ಛಿವಾರಿಯವರು ಇಂಥ ಶಬ್ದಗಳ ಒಂದು ಉದ್ದ ಪಟ್ಟಿಯನ್ನೇ ಕೊಟ್ಟಿದ್ದಾರೆ.)

೧೫೭. ಅದೇ ಪುಟ ೩೧೭ ಮತ್ತು ೩೧೮
(ಡಾ. ಛಿವಾರಿಯವರು ಇಲ್ಲಿಯೂ ಇಂಥ ಅನೇಕ ಪದಪ್ರಯೋಗಗಳನ್ನು ಸೂಚಿಸಿದ್ದಾರೆ.)

೧೫೮. ಸಂ. ಎಸ್ .ಎಸ್. ಬಸವನಾಳ , ಚಾಮರಸಕೃತ ಪ್ರಭುಲಿಂಗಲೀಲೆ , ಪ್ರಸ್ತಾವನೆ, ಪುಟ ೧೮

೧೫೯. ಪ್ರ. ಲೀ. ಗತಿ ೧೩, ಪದ್ಯ ೩೦

೧೬೦. ಪ್ರ. ಲೀ. ಗತಿ ೩, ಪದ್ಯ ೩೪

೧೬೧. ಪ್ರ. ಲೀ. ಗತಿ ೨೩, ಪದ್ಯ ೩೨

೧೬೨. ಪ್ರ. ಲೀ. ಗತಿ ೨೪, ಪದ್ಯ ೨೦

೧೬೩. ಪ್ರ. ಲೀ. ಗತಿ ೯, ಪದ್ಯ ೩

೧೬೪. ಪ್ರ. ಲೀ. ಗತಿ ೭, ಪದ್ಯ ೨೫

೧೬೫. ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ
ತಯೋರನ್ಯ , ಪಿಪ್ಪಲಂ ಸ್ವಾದ್ವತ್ತ್ಯ
ನಶ್ನನ್ನನ್ಯೋ ಅಭಿಚಾಕ ಶೀತಿ
ಯಾವಗಲೂ ಜೊತೆಯಲ್ಲಿರುವ ಸಮಾನವಾದ ಹೆಸರುಳ್ಳ ಅವಿದ್ಯಾ–ಕಾಮ–ಕರ್ಮ ವಾಸನೆಗಳಿಗೆ ಆಶ್ರಯವಾಗಿರುವ ಲಿಂಗಶರೀರವನ್ನೇ ಉಪಾಧಿಯಾಗಿ ಉಳ್ಳ ಜೀವಾತ್ಮ ಮತ್ತು ನಿತ್ಯ–ಶುದ್ಧ–ಬುದ್ಧ–ಮುಕ್ತ ಸ್ವರೂಪನಾದ ಪರಮಾತ್ಮ ಶರೀರವೆಂಬ ಒಂದೇ ವೃಕ್ಷವನ್ನು ಆಶ್ರಯಿಸಿಕೊಂಡಿವೆ.

ಅವೆರಡರಲ್ಲಿ ಜೀವಾತ್ಮ ತನ್ನ ಕರ್ಮದಿಂದ ಉಂಟಾದ ಸುಖದುಃಖರೂಪವಾದ ಫಲವನ್ನು ತಿನ್ನುತ್ತಿದೆ. ಸರ್ವಜ್ಞನೂ ಸರ್ವಸತ್ತ್ವೋಪಾಧಿಯೂ ಆದ ಈಶ್ವರ ಭೋಜ್ಯ. ಭೋಕ್ತೃಗಳನ್ನು ನಿತ್ಯಸಾಕ್ಷಿತ್ವ ಸತ್ತಾಮಾತ್ರದಿಂದ ಪ್ರೇರಿಪಿಸುತ್ತಾನೆ.

ಸಂ. ಸ್ವಾಮಿ ಆದಿದೇವಾನಂದ , ಶ್ವೇತಾಶ್ವತರೋಪನಿಷತ್ , ಅಧ್ಯಾಯ ೪, ಪದ್ಯ ೬

ಪ್ರ. ಲೀ. ಗತಿ ೨೨, ಪದ್ಯ ೨

೧೬೬. ಸತಿಪತಿಗಳಿವರ ಸಮರತಿ ಸುಖದ ಬಾಳುವೆಗೆ
ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ ॥ ಪಲ್ಲ ॥
ಕಂಗಳೂರಿನ ಸೋಮ ಸೂರ್ಯ ವೀಥಿಯ ನಡುವೆ
ಶಿಂಗರದ ನೀಲದರಮನೆಯ ಮಧ್ಯದೊಳು ॥
ರಂಗುವೆಳಗೆಸೆವ ಸಜ್ಜೆಯ ಶಕುನಿಮಂಚದೆಡೆ
ಗಂಗವಿಸಿ ಬಂದು ಭರದೊಳು ಜವಳಿಗೊಂಡು ॥ ೧ ॥
ನಿರಿ ಸಡಿಲುತಿರೆ ತಾನೆ ತೊಟ್ಟ ಕಂಚುಕಗಳೆಯೆ
ನೆರೆ ತವಕವದರಿಂದೆ ಮುಂದುವರಿಯೆ ॥
ಮುರಿದೋಡೆ ಲಜ್ಜೆ ಗಾಢಾಲಿಂಗನದ ಸೊಗಸು
ಧರೆಯೊಳಾಳುತ್ತ ಸವಿಗಲೆಯೋಳೇಳುತ್ತೆ ॥ ೨ ॥
ಬೆರಸಿ ಬೇರೆನಿಸದೆರಡಾಲಿಕಲ್ಲುಗಳೇಕ
ಸುರಸವಾದಂತೆ ಈ ಪತಿಶಂಭುಲಿಂಗ
ಶರಣಸತಿಯನು ಕೂಡಿ ಪರತರಾನಂದದೊಳು
ಪರವಶವನೈದಿಹುದನುಪಮಿಸಲು ಬಹುದೆ ॥ ೩ ॥

ನಿಜಗುಣ ಶಿವಯೋಗಿ,ಕೈವಲ್ಯ ಪದ್ಧತಿ, ಯೋಗಪ್ರತಿಪಾದನ ಸ್ಥಲ, ಪದ್ಯ ೩೮

೧೬೮. ಪ್ರ. ಲೀ. ಗತಿ ೪, ಪದ್ಯ ೬೦

೧೬೯. ಪ್ರ. ಲೀ. ಗತಿ ೧೦, ಪದ್ಯ ೧೧

೧೭೦. ಪ್ರ. ಲೀ. ಗತಿ ೨೨, ಪದ್ಯ ೫

೧೭೧. ಪ್ರ. ಲೀ. ಗತಿ ೧೪, ಪದ್ಯ ೧೧

೧೭೨. ಸಂ. ಎಂ. ಆರ್. ಶ್ರೀನಿವಾಸಮೂರ್ತಿ, ಪ್ರಭುಲಿಂಗಲೀಲೆಯ ಸಂಗ್ರಹ , ಪೀಠಿಕೆ, ಪುಟ ೪೯

೧೭೩. ಪ್ರ. ಲೀ. ಗತಿ ೧೪, ಪದ್ಯ ೧

೧೭೪. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೩೩೨

೧೭೫. ಮಲ್ಲೇಪುರಂ ಜಿ. ವೆಂಕಟೇಶ , ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ , ಪುಟ ೨೯೦

೧೭೬. ಡಾ. ಜಿ. ಎಸ್. ಶಿವರುದ್ರಪ್ಪ , ಕಾವ್ಯಾರ್ಥ ಚಿಂತನ , ಪುಟ ೧೫೬

೧೭೭. ಅದೇ, ಪುಟ ೧೫೬

೧೭೮. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೩೪೧

೧೭೯. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೩೨೩

೧೮೦. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೨೯೭

೧೮೧. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೨೯೭

೧೮೨. ಪ್ರ. ಲೀ. ಗತಿ ೧೦, ಪದ್ಯ ೨೪

೧೮೩. ಪ್ರ. ಲೀ. ಗತಿ ೧೩, ಪದ್ಯ ೨೩

೧೮೪. ಪ್ರ. ಲೀ. ಗತಿ ೨, ಪದ್ಯ ೨೨

೧೮೫. ಪ್ರ. ಲೀ. ಗತಿ ೧೧, ಪದ್ಯ ೨೮

೧೮೬. ಪ್ರ. ಲೀ. ಗತಿ ೧೯, ಪದ್ಯ ೨೯

೧೮೭. ಸೊಪ್ಪುಳಾಗದು ಕೈ ದುವಾನದು । ವೊಪ್ಪವಳಿಯದು ಜಂತ್ರಜೋಕೆಗೆ ।
ತಪ್ಪುದೋಱದು ಹೊಡೆಯೆ ಹಾಱುವ ಹದ್ದಿನಂದದಲಿ ॥
ನಿಪ್ಪಸರದಸಿ ಬಯಲ ದೇಹಿಯ । ನಪ್ಪಲಱಯದಿದೇನು ಚೋದ್ಯವೊ ।
ತಪ್ಪದೀತನೆ ಗುರುವೆನುತ ಗೋರಕ್ಷನಿಂತೆಂದ ॥
ಪ್ರ. ಲೀ. ಗತಿ ೧೯, ಪದ್ಯ ೩೫

೧೮೮. ಬಡಬನಣಲಿಗೆಯಾಲಿಕಲ್ಲಿನ । ಕಡಿಗಳಾನಲು ಬಲ್ಲುವೇ ಜಗ ।
ದೊಡೆಯನುಂಡಿಹೆನೆಂದೊಡಕ ಟಿಂತೊಂದು ಪಟ್ಟಣದ ॥
ಒಡೆವೆ ನೆಱ್‌ವುದೆ ಬಂದ ಭಂಡವ । ನೊಡಲೊಳಡಗಿಸಿಕೊಂಡನಾತನ ।
ಬೆಡಗ ಬಲ್ಲವರಿಲ್ಲವೇನೆಂದೆಂಬೆನಚ್ಚರಿಯ ॥
ಪ್ರ. ಲೀ. ಗತಿ ೨೩, ಪದ್ಯ ೪೧

೧೮೯. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೩೨೪ ಮತ್ತು ೩೨೫

೧೯೦. ತೀ. ನಂ. ಶ್ರೀಕಂಠಯ್ಯ , ಭಾರತೀಯ ಕಾವ್ಯಮೀಮಾಂಸೆ, ಪುಟ ೩೨೪ ಮತ್ತು ೩೨೫
ಕೊಂದು ನೋಡವುದಿದು ಪರೀಕ್ಷಿಸು । ವಂದವೇ ನಾವಱಯೆವಾಸುರ ।
ಬಂಧಕರ್ಮವನಿದು ಗುಹೇಶ್ವರಲಿಂಗಮತವಲ್ಲ ॥
ಇಂದು ನಿನ್ನ ಶರೀರವಳಿದೊಡೆ । ಮುಂದೆ ಸಿದ್ಧಿಯ ಹಡೆವರಾರೈ ।
ಮಂದಮತಿಗಾನಂಜುವೆನು ಗೋರಕ್ಷ ಕೇಳೆಂದ ॥
ಪ್ರ. ಲೀ. ಗತಿ ೧೯, ಪದ್ಯ ೨೬

❊ ❊ ❊ ❊ ❊

ಅಧ್ಯಾಯ - ಆರು

ಸಮಾರೋಪ

ಅಧ್ಯಾಯ ೬

ಸಮಾರೋಪ

ಇದುವರೆಗೆ ಪ್ರಭುಲಿಂಗಲೀಲೆಯಲ್ಲಿ ಚಾಮರಸ ಹೊಂದಿರುವ ದರ್ಶನವನ್ನು ಹಾಗೂ ಅದರ ನಿರೂಪಣೆಯಲ್ಲಿ ತೋರಿದ ಅಸಾಧಾರಣ ಪ್ರತಿಭೆಯನ್ನು ನೋಡಿದ್ದಾಯಿತು. ಕಾವ್ಯದ ವಿವೇಚನೆಯನ್ನು ವಿವಿಧ ಅಧ್ಯಾಯಗಳಲ್ಲಿ ವಿಂಗಡಿಸಿದಾಗ ತೋರುವ ಅಂಶಗಳನ್ನು ಗಮನಿಸಲಾಯಿತು. ಯೋಗದರ್ಶನದಲ್ಲಿ ಯೋಗದ ಅರ್ಥವನ್ನು ಗ್ರಹಿಸಿ ಕಾವ್ಯವನ್ನು ಪರಿಶೀಲಿಸುತ್ತ ಹೋದಂತೆ ಯಾವ ಯಾವ ಯೌಗಿಕ ಅಂಶಗಳು ಅದರಲ್ಲಿ ಸ್ಥಾನ ಪಡೆದುಕೊಂಡಿವೆಯೆಂಬುದು ತಿಳಿದು ಬರುತ್ತದೆ. ಲೋಕದರ್ಶನದಲ್ಲಿ ಆಯಾ ಪಾತ್ರಗಳು ಲೌಕಿಕಾಚರಣೆಗೆ ಯಾವ ಪ್ರಮಾಣದಲ್ಲಿ ಸಮೀಪವಾಗಿವೆಯೆಂಬುದು ವಿದಿತವಾಗುತ್ತದೆ. ಈ ಎರಡು ದರ್ಶನಗಳ ಸಮನ್ವಯವು ಕಾವ್ಯದ ಉದ್ದೇಶವನ್ನು ಸಾಧಿಸುವಲ್ಲಿ ಎಷ್ಟರ ಮಟ್ಟಿಗೆ ಸಹಾಯಕಾರಿಯಾಗಿದೆಯೆಂಬುದು ಕಾವ್ಯದರ್ಶನದಲ್ಲಿ ಸ್ಪಷ್ಟವಾಗುತ್ತದೆ. ಹೀಗೆ ಅಲ್ಲಮಪ್ರಭು ಸಂಪ್ರದಾಯವನ್ನು ಪ್ರತಿಪಾದಿಸಲು ಹಾಗೂ ಸಹೃದಯರಿಗೆ ಆನಂದಾನುಭೂತಿಯನ್ನುಂಟು ಮಾಡಲು ಚಾಮರಸ ತತ್ತ್ವಕ್ಕೆ ಕಾವ್ಯದ ಸ್ಪರ್ಶ ಒದಗಿಸುತ್ತ ಹೋದಂತೆ ಪ್ರಭುಲಿಂಗಲೀಲೆಯ ಚೌಕಟ್ಟು ರೂಪುಗೊಳ್ಳುತ್ತ ಸಾಗಿದುದರ ಕಲ್ಪನೆ ಮೂಡುತ್ತದೆ.

ಪ್ರಭುಲಿಂಗಲೀಲೆಯಲ್ಲಿ ಅಲ್ಲಮಪ್ರಭುಸಂಪ್ರದಾಯವನ್ನು ಪ್ರತಿಪಾದಿಸುವುದು ಕವಿಯ ಮೂಲ ಉದ್ದೇಶ. ಜೊತೆಗೆ ಸಹೃದಯರಿಗೆ ಆನಂದಾನುಭೂತಿಯನ್ನುಂಟು ಮಾಡುವುದು ಕಾವ್ಯದ ಉದ್ದೇಶ. ಕವಿ ಇವೆರಡನ್ನೂ ಈಡೇರಿಸಲು ಕಾವ್ಯದಲ್ಲಿ ಉಚಿತ ಪದಪ್ರಯೋಗ ಮಾಡಲು ಇಷ್ಟಪಡುತ್ತಾನೆ[೧]. ತತ್ತ್ವಕ್ಕೆ ಕಾವ್ಯದ ರೂಪು ಕೊಡುವುದರಿಂದ ಇದನ್ನು ಸಾಧಿಸಿದ್ದಾನೆ. ಹೀಗೆ ವೀರಶೈವಾಚರಣೆಯ ಪ್ರತಿಪಾದನೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಪುರುಷಾರ್ಥಗಳನ್ನು ಸಾಧಿಸಲು ಪ್ರೇರೇಪಿಸುವುದು ಕಾವ್ಯದ ಉದ್ದೇಶವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಧರ್ಮಾಚರಣೆಯಿಂದ ಮಾತ್ರ ಇದು ಸಾಧ್ಯ. ಅಂತೆಯೇ ಕಾವ್ಯದ ಕೊನೆಯ ಗತಿಯಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಸಾಧಿಸುತ್ತ ಪರಮಪುರುಷಾರ್ಥವನ್ನು ಹೊಂದುವುದು ವೀರಶೈವದ ಹಾದಿಯೆಂದು ಶಿವನು ಪಾರ್ವತಿಗೆ ತಿಳಿಸುತ್ತಾನೆ.[೨] ಕಾವ್ಯದುದ್ದಕ್ಕೂ ಚಾಮರಸ ಈ ಧ್ವನಿಯನ್ನು

[illegible]

[illegible]

[illegible]

[illegible]

ಉಳಿಸಿಕೊಂಡು ಬಂದಿದ್ದಾನೆ. ಇದೇ ಅವನು ಕಾವ್ಯದಲ್ಲಿ ಅಳವಡಿಸಿರುವ ದರ್ಶನ, ಈ ದರ್ಶನಕ್ಕೆ ಅನುಗುಣವಾಗಿ ಕಾವ್ಯದ ಬಟ್ಟೆಯನ್ನು ನೆಯ್ದಿದ್ದಾನೆ. ಸೂಕ್ಷ್ಮವಾಗಿ ಗಮನಿಸಿದಾಗ ಕಾವ್ಯದಲ್ಲಿ 'ಧರ್ಮ' ಪದವು ಅತ್ಯಂತ ವಿರಳವಾಗಿ ಬಳಕೆಯಾಗಿರುವುದು ಕಂಡು ಬರುತ್ತದೆ. ಪುರುಷಾರ್ಥಗಳ ಗುಂಪಿನಲ್ಲಿ ಸಾಂದರ್ಭಿಕವಾಗಿ ಬಳಕೆಯಾಗಿದ್ದರೂ 'ವೀರಶೈವಧರ್ಮ' ಪದಪ್ರಯೋಗ ಎಲ್ಲಿಯೂ ನೋಡಸಿಗುವುದಿಲ್ಲ. ಪರಿಪೂರ್ಣತೆಯೆಡೆಗೆ ಸಾಗುವ ಕ್ರಿಯೆಯೇ ಧರ್ಮ ಎಂಬುದನ್ನು ಚಾಮರಸ ಸ್ಪಷ್ಟವಾಗಿ ಅರ್ಥೈಸಿಕೊಂಡಿದ್ದಾನೆಂಬುದು ಇದರಿಂದ ತಿಳಿದು ಬರುತ್ತದೆ.

ಸಾಹಿತ್ಯಿಕ ಕೃತಿಯೊಂದನ್ನು ವಿವೇಚಿಸುವಾಗ ಬೇರೆಬೇರೆ ಜನರು ಬೇರೆಬೇರೆ ದೃಷ್ಟಿಕೋನಗಳನ್ನು ಹೊಂದಿರುವುದು ಸಹಜ. ಕಾರಣವೆಂದರೆ ಅವರು ಬಳಸುವ ಮಾಪದಂಡಗಳು ಬೇರೆಬೇರೆಯಾಗಿರುತ್ತವೆ. ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸಕರಿಗೆ ಕಾವ್ಯವನ್ನು ವಿಶ್ಲೇಷಿಸುವಲ್ಲಿ ಅವರವರ ಗ್ರಹಿಕೆಗಳಲ್ಲಿರುವ ಪಾಪಪುಣ್ಯಗಳು ಕಾರಣವಾಗಿರುವುದನ್ನು ನೋಡಿದ್ದೇವೆ. ಗ್ರೀಕ್ ಮೂಲದ ರುದ್ರನಾಟಕಗಳನ್ನು ಪರಿಶೀಲಿಸುವ ದೃಷ್ಟಿಕೋನದಿಂದ ಪ್ರಾಚೀನ ಭಾರತದ ನಾಟಕಗಳನ್ನು, ಕಾವ್ಯಗಳನ್ನು ಪರಿಶೀಲಿಸುವುದು ಸಮಂಜಸವೆನಿಸುವುದಿಲ್ಲ. ಲೋಕವ್ಯವಹಾರದ ವಸ್ತುವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿತವಾದ ಸಾಹಿತ್ಯ ಕೃತಿಯೊಂದನ್ನು ಹೀಗೆ ಅವಲೋಕಿಸಿದಾಗ ಸಂಭವಿಸಬಹುದಾದ ದೋಷಗಳು ಕಡಿಮೆ. ಆದರೆ ಆಧ್ಯಾತ್ಮಿಕ ವಸ್ತುವಿನ ಹಿನ್ನೆಲೆಯಲ್ಲಿ ರಚಿತವಾದ ಕಾವ್ಯವನ್ನು ಈ ವಿಚಾರದಿಂದ ಪರಿಶೀಲಿಸತೊಡಗಿದರೆ ಕಾವ್ಯವೊಂದು ದಾರಿಯಲ್ಲಿ ಸಾಗುವುದು, ವಿಮರ್ಶೆ ಇನ್ನೊಂದು ದಾರಿಯಲ್ಲಿ ಸಾಗುವುದು ಅನಿವಾರ್ಯವಾಗುತ್ತದೆ.

ಪ್ರಭುಲಿಂಗಲೀಲೆ ಇಡಿಯಾಗಿ ಆಧ್ಯಾತ್ಮಿಕ ವಸ್ತುವಿನ ಹಿನ್ನೆಲೆಯಲ್ಲಿ ರಚಿತವಾದ ಕಾವ್ಯ. ಅದರಲ್ಲಿ ಅಳವಡಿಸಿರುವ ವೀರಶೈವಾಚಾರದ ನಿರೂಪಣೆಯನ್ನು ಪರಿಶೀಲಿಸುವಾಗ ಒಂದು ಅಂಶವನ್ನು ಲಕ್ಷಿಸಬೇಕು. ಅದೆಂದರೆ ಕಾವ್ಯದ ಕ್ರಿಯೆ ಒಳಗೊಂಡಿರುವ ಮಾನಸಿಕ ಚಟುವಟಿಕೆಗಳನ್ನು ವಿಜ್ಞಾನ (Science)ದ ಅಧೀನಕ್ಕೆ ಒಪ್ಪಿಸದೆ ಆತ್ಮಜ್ಞಾನದ ಅಧೀನಕ್ಕೆ ಒಪ್ಪಿಸಬೇಕೆಬುಂದು. ಆಧುನಿಕ ಮನಶ್ಶಾಸ್ತ್ರವು ವಿಜ್ಞಾನದ ನೆಲೆಯಲ್ಲಿ ನಿಂತು ಸಾಹಿತ್ಯಿಕ ಕೃತಿಗಳ ಅಭ್ಯಾಸಕ್ಕೆ ಸಹಾಯಕವಾಗುವುದು ಲೌಕಿಕ ಚಟುವಟಿಕೆಗಳನ್ನು ವಿಶ್ಲೇಸುವುದರಲ್ಲಿ ಮಾತ್ರ. ಮನೋಲಯ ಮಾರ್ಗದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಚಾಮರಸನ ಕಾವ್ಯದಲ್ಲಿ ಇಲ್ಲದ ಲೌಕಿಕ ಮನೋವ್ಯಾಪಾರಗಳನ್ನು ವಿಜ್ಞಾನ ಅಥವಾ ಮನಶ್ಶಾಸ್ತ್ರಕ್ಕೆ ಒಪ್ಪಿಸುವುದು ಸಮಂಜಸವಾಗುವುದಿಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಸಾಧಿಸುವುದೆಂದರೆ ನೀತಿವಿದನಾಗಿ

[illegible]

[illegible]

[illegible]

ಹಣವನ್ನು ಗಳಿಸುವುದಲ್ಲ, ಅದರಿಂದ ವೈವಾಹಿಕ ಜೀವನ ಪ್ರವೇಶಿಸಿ ಲೈಂಗಿಕ ಸುಖ ಅನುಭವಿಸುವುದಲ್ಲ. ಹೀಗೆ ಮಾಡುವುದರಿಂದ ಪುರುಷಾರ್ಥಗಳ ಸಾಧನೆಯಾಗುವುದಿಲ್ಲ. ಏಕೆಂದರೆ ಭಾರತೀಯ ತತ್ತ್ವಶಾಸ್ತ್ರದ ಅಭಿಮತದಂತೆ ಪುರುಷಾರ್ಥಗಳು ಬ್ರಹ್ಮಚಾರಿಗಳಿಗೂ ಅನ್ವಯವಾಗುತ್ತವೆ. ಅಂತೆಯೇ 'ಪರಿಪೂರ್ಣತೆಯೆಡೆಗೆ ಸಾಗುವುದು ಧರ್ಮ, ಅದರಿಂದಾಗುವ ಪುಣ್ಯಾರ್ಜನೆ ಅರ್ಥ, ಪುಣ್ಯದ ಆಧಿಕ್ಯದಿಂದ ಮೋಕ್ಷವನ್ನು ಬಯಸುವುದು ಕಾಮ ಹಾಗೂ ಲಿಂಗಾಂಗಸಾಮರಸ್ಯ ಮೋಕ್ಷ' ಎಂಬ ವಿವರಣೆಯು ಶರಣಮಾರ್ಗಕ್ಕೆ ಹೊಂದಿಕೊಳ್ಳುತ್ತದೆ. ಇವುಗಳ ಸಾಧನೆ ಪರಮ ಪುರುಷಾರ್ಥವನ್ನು ಹೊಂದುವುದಕ್ಕೆ ಪೂರಕವಾಗುತ್ತದೆ. ಇದು ಮನೋಲಯ ಮಾರ್ಗವನ್ನು ಅವಲಂಬಿಸಿದಾಗ ಸಾಧ್ಯವಾಗುವಂಥದು. ಅಂತರಂಗ-ಬಹಿರಂಗಗಳನ್ನು ಸಮನ್ವಯಗೊಳಿಸಿ ಆಚರಿಸುವ ವೀರಶೈವಾಚಾರವನ್ನು ವಿಶ್ಲೇಷಿಸುವ ಮಾಪನಗಳಿಂದ ಪುರುಷಾರ್ಥಗಳ ಸಾಧನೆಯನ್ನೂ ಪರಿಶೀಲಿಸುವುದು ಉಚಿತ. ಆಗ ಮಾತ್ರ ಪ್ರಭುಲಿಂಗಲೀಲೆಯಲ್ಲಿ ನಿಜವಾದ ದರ್ಶನ ಹೊರಸೂಸ ತೊಡಗುತ್ತದೆ.

ಅಲ್ಲಮಪ್ರಭುಸಂಪ್ರದಾಯವನ್ನು ಪ್ರತಿಪಾದಿಸುವುದೆಂದರೆ ಶರಣತತ್ತ್ವವನ್ನು ಪ್ರತಿಪಾದಿಸುವುದು. ಷಟ್‌ಸ್ಥಲಾಚರಣೆಯು ಅನುಭಾವದ ತುಣುಕುಗಳ ರೂಪದಲ್ಲಿ ಹೊರ ಬಂದು ವಚನಗಳ ರೂಪು ಪಡೆದಿದೆ. ಇಂಥ ಅನುಭಾವವನ್ನು ಪ್ರತಿಫಲಿಸುವ ವಚನಗಳನ್ನು ಚಾಮರಸ ತತ್ತ್ವನಿರೂಪಣೆಗೆ ಆದರ್ಶವೆಂದು ಸ್ವೀಕರಿಸಿದ್ದಾನೆ. ಆಯಾ ಗತಿಗೆ ಬಳಸಿಕೊಂಡ ವಚನಗಳ ವಸ್ತುವನ್ನು ಆ ಗತಿಯ ವಸ್ತುವಿಗೆ ಸಮೀಕರಿಸುತ್ತ ತಾನು ಯೋಜಿಸಿದ ಷಟ್‌ಸ್ಥಲಾಚರಣೆಯ ನಿರೂಪಣೆಯು ಶಿವಶರಣರ ನಿರೂಪಣೆಯಿಂದ ಎಳ್ಳಷ್ಟೂ ವ್ಯತ್ಯಾಸ ತೋರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾನೆ. ಪುರುಷಾರ್ಥಗಳನ್ನು ಕುರಿತಾಗಿ ಶರಣ-ಶರಣೆಯರ ವಚನಗಳಲ್ಲಿ ಉಲ್ಲೇಖಗಳನ್ನು ಕಾಣುತ್ತೇವೆ. ಕಾವ್ಯದಲ್ಲಿ ಸಾಕ್ಷಿಯಾಗಿರಿಸಿದ ವಚನಗಳ ವಿಶ್ಲೇಷಣೆಗೆ ತೊಡಗಿದರೆ ಮಹಾಪ್ರಬಂಧದ ಬಹುಭಾಗವನ್ನು ಅದಕ್ಕಾಗಿ ಮೀಸಲಿರಿಸಬೇಕಾಗುತ್ತದೆ. ಇದರ ಜೊತೆಗೆ ಕವಿ ಅನೇಕ ವಚನಗಳಿಗೆ ಷಟ್ಪದಿಯ ರೂಪು ಕೊಟ್ಟು ಕಾವ್ಯದ ಭಾಗವಾಗಿಸಿದ್ದಾನೆ. ವೇದ, ಆಗಮ, ಉಪನಿಷತ್ತುಗಳಿಂದ ಆಯ್ದುಕೊಂಡ ತಾತ್ತ್ವಿಕ ಅಂಶಗಳನ್ನು ಅಳವಡಿಸಿರುವ ಪದ್ಯಗಳನ್ನು ಹುಡುಕುವುದು ಇನ್ನೊಂದು ಅಭ್ಯಾಸಕ್ಕೆ ವಸ್ತುವಾಗಬಲ್ಲದು. ವಿಶ್ವದ ಮೂಲ ಅವಸ್ಥೆ ನಿರ್ಗುಣವೆಂಬ ಭಾರತೀಯ ದರ್ಶನಗಳ ಮೂಲಭೂತ ವಿಚಾರವನ್ನು ಲಕ್ಷಿಸುತ್ತ ಅದರ ಸರ್ವಜ್ಞತ್ವವನ್ನು ಕಾವ್ಯದ ವಸ್ತುವಾಗಿರಿಸಿದ್ದಾನೆ. ಲೋಕಜೀವಿಗಳಿಗೆ ನೀರಸವೆನಿಸುವ ತತ್ತ್ವಜ್ಞಾನವನ್ನು ಪ್ರತಿಪಾದಿಸಿದ್ದರೂ ಕಾವ್ಯದ ಸ್ಪರ್ಶ ಕೊಡುವ

ಮೂಲಕ ಅದನ್ನು ಅತ್ಯಾಕರ್ಷಕವಾಗಿಸಿದ್ದಾನೆ. ಹೀಗೆ ಅನಂತದರ್ಶನವನ್ನು ಅಳವಡಿಸಿಕೊಂಡು ಕಾವ್ಯದ ಸಂರಚನೆಯ ಹಂತದಲ್ಲಿಯೂ ಸಾಂಕೇತಿಕ ಪ್ರಜ್ಞೆಯನ್ನು ಮೆರೆದಿದ್ದಾನೆ.

ಅಂತರಂಗದಲ್ಲಿ ಪಡೆದುಕೊಳ್ಳುವ ಅನುಭಾವವು ವ್ಯಕ್ತಿಗತ ಆಚರಣೆಗೆ ಸೀಮಿತಗೊಳ್ಳುವ ಧರ್ಮವಾಗಿರುತ್ತದೆ. ಇದನ್ನು ಸಾಮೂಹಿಕವಾಗಿ ಆಚರಿಸಲು ಸಾಧ್ಯವಿಲ್ಲ. ಸಮಾಜದಲ್ಲಿ ದಿನನಿತ್ಯ ಆಚರಿಸುವ ಕ್ರಿಯೆಗಳು ಈ ರೂಪದ ಧರ್ಮಾಚರಣೆಗಳಾಗಿರದೆ ಅದರ ಸಂಕೇತಗಳಾಗಿರುತ್ತವೆ. ಈಗ ಲಿಂಗಾಯತ ಸಮಾಜದವರು ಕೈಗೊಳ್ಳುವ ಲಿಂಗಪೂಜೆಯು ಅಂತರಂಗಾಚರಣೆಯ ಸಂಕೇತ ಹಾಗೂ ಲಿಂಗವು ವಿಶ್ವಚೈತನ್ಯದ ಸಂಕೇತ ಬಹಿರಂಗದಲ್ಲಿ ಕೈಗೊಳ್ಳುವ ಲಿಂಗಪೂಜೆಯನ್ನು ಕುರಿತು ಚಾಮರಸ ಕಾವ್ಯದಲ್ಲೆಲ್ಲೂ ಎತ್ತಿ ಹೇಳುವುದಿಲ್ಲ. ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ, ಅಕ್ಕಮಹಾದೇವಿ, ಗೋರಕ್ಷ ಮೊದಲಾದವರಿಗೆ ಪ್ರಭು ಕರುಣಿಸುವ ಇಷ್ಟಲಿಂಗವು ಚಿದ್ರೂಪವೆಂಬುದು ಪ್ರತಿಯೊಂದು ಸಂದರ್ಭದಲ್ಲಿಯೂ ಸ್ಪಷ್ಟವಾಗುತ್ತದೆ. 'ಇಷ್ಟಲಿಂಗದ ಗತಿ'ಯಲ್ಲಿ ಇದಕ್ಕೆ ಅವಶ್ಯವಿರುವ ವಿವರಣೆಯೆಲ್ಲವೂ ದೊರೆಯುತ್ತದೆ. ವಿಶ್ವಚೈತನ್ಯವನ್ನೇ ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡಿರುವ ಕವಿ ಯಾವುದೇ ಮತಾನುಸರಣೆಗೆ ಒಳಗಾಗಿಲ್ಲ. ಹೀಗಿರುವಾಗ ಆತನನ್ನು ಒಂದು ಮತಕ್ಕೆ ಸೀಮಿತಗೊಳಿಸಿ ಆತ ಆ ಮತದ ಪ್ರತಿಪಾದನೆಯನ್ನು ಅನುಸರಿಸಿಕೊಂಡು ಹೋಗಿದ್ದಾನೆಂದು ತಿಳಿಯುವುದೆಂದರೆ ಕವಿಯ ವಿಶ್ವವ್ಯಾಪಕ ದರ್ಶನವನ್ನು ಸಂಕುಚಿತಗೊಳಿಸಿದಂತೆ. ಕಾವ್ಯವು ಅಲ್ಲಮಪ್ರಭುವಿನ ಚರಿತ್ರೆ ಅಥವಾ ಲೀಲೆ ಎಂದು ಪರಿಗಣಿಸಿದಾಗ ಅದರಲ್ಲಿ ದೋಷಗಳು ಗೋಚರಿಸುವಂತೆ ವಸ್ತುವೂ ಒಂದು ಮಿತಿಗೆ ಒಳಪಡುತ್ತದೆ. ಇದಕ್ಕೆ ಬದಲಾಗಿ ನೇರ ನಿರೂಪಣೆಯಿಂದ ಕೂಡಿರುವ ಇಷ್ಟಲಿಂಗದ ಗತಿ, ಸಾಧಕಾಂಗದ ಗತಿ ಹಾಗೂ ಮನೋಲಯದ ಗತಿ ಇವು ದೃಢಪಡಿಸುವ ಶಿವಯೋಗದ ಹಿನ್ನೆಲೆಯಲ್ಲಿ ಪರಿಗಣಿಸಿದಾಗ ಅದು ಅನಂತತೆಯನ್ನು ಪಡೆದುಕೊಳ್ಳುತ್ತದೆ. ಲೋಕವ್ಯವಹಾರವನ್ನು ವಸ್ತುವಾಗಿ ಸ್ವೀಕರಿಸಿದಾಗ ವಸ್ತು ಮಿತಿಗೆ ಒಳಪಡುವುದು ಸಹಜ. ಏಕೆಂದರೆ ಲೋಕವ್ಯವಹಾರವು ಜನನ-ಮರಣಗಳಿಂದ ಸೀಮಿತವಾಗಿರುತ್ತದೆ. ಪ್ರಭುಲಿಂಗಲೀಲೆಯಾದರೋ ಶೂನ್ಯದಿಂದ ಹೊರಬಂದು ಶೂನ್ಯವನ್ನು ತಲುಪುವ ಆತ್ಮೋದ್ಧರಣ ಕ್ರಿಯೆಯನ್ನು ವಸ್ತುವಾಗಿ ಪಡೆದಿರುವುದರಿಂದ ಆ ಶೂನ್ಯಕ್ಕಿರುವ ಅನಂತತೆ ಕಾವ್ಯದ ವಸ್ತುವಿಗೆ ಪ್ರಾಪ್ತವಾಗಿದೆ.

ಇಂಥ ಅನಂತದರ್ಶನವನ್ನು ಪ್ರತಿಪಾದಿಸುವ ಕಾವ್ಯ ಇನ್ನೊಂದಿಲ್ಲ. ಶೂನ್ಯ ಸಂಪಾದನೆ ಇದೇ ವಸ್ತುವನ್ನು ಹೊಂದಿದ್ದರೂ ಅದು ಕಾವ್ಯವಲ್ಲ. ಹೀಗೆ ಪ್ರಭುಲಿಂಗಲೀಲೆ, ಶೂನ್ಯಸಂಪಾದನೆಗಳು ಇದರ

ಎರಡು ಪ್ರಾತಿನಿಧಿಕ ಕೃತಿಗಳು. ಬೇರೆ ಯಾರಾದರೂ ಈ ದರ್ಶನದ ಹಿನ್ನೆಲೆಯಲ್ಲಿ ಕೃತಿರಚನೆಗೆ ತೊಡಗಿದರೆ ಅದು ಈ ಎರಡರಲ್ಲೊಂದರ ಅನುಕರಣೆ ಮಾತ್ರ ಆಗುವುದು ಸಾಧ್ಯ. ಈ ಹಿನ್ನೆಲೆಯಲ್ಲಿ ಪ್ರಭುಲಿಂಗಲೀಲೆಯು ಕನ್ನಡದ Pilgrim's Progress ಎಂದು ಹೇಳಿರುವುದು ಸಮಂಜಸವೆನಿಸುತ್ತದೆ.[೩]

ಅನಂತದರ್ಶನವನ್ನು ಇಷ್ಟೊಂದು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಲು ಸಾಧ್ಯವಾಗದವರು ಚಾಮರಸ ಕಾವ್ಯವನ್ನು ತಮ್ಮತಮ್ಮ ಭಾಷೆಗಳಲ್ಲಿ ಅನುವಾದ ಮಾಡಿ ಮನೋಭಿಲಾಷೆಯನ್ನು ಪೂರೈಸಿಕೊಂಡಿದ್ದಾರೆ. ಆದರೂ ಅವರಿಗೆ ಚಾಮರಸನಲ್ಲಿರುವ ಪ್ರತಿಭೆಯೊಂದಿಗಿನ ಅನುಭಾವದ ರಸಮಿಶ್ರಣವು ಸಿದ್ಧಿಸಿಲ್ಲ! ಹೀಗಾಗಿ 'ತೆಲುಗು, ತಮಿಳು, ಸಂಸ್ಕೃತ ಗ್ರಂಥಗಳಲ್ಲಿ ಕನ್ನಡ ಪ್ರಭುಲಿಂಗಲೀಲೆಯ ಆಶಯವು ವ್ಯಕ್ತವಾಗಿಲ್ಲ'.[೪] ಕವಿಯ ಸಮಗ್ರ ದರ್ಶನವನ್ನು ಗ್ರಹಿಸಿದವರು ಅವನನ್ನು ಕೀರ್ತಿಸುವ ಹಂಬಲದಿಂದ 'ಪ್ರೌಢರಾಯನ ಕಾವ್ಯ' ಮುಂತಾದ ಕೃತಿಗಳಿಗೆ ಕಾರಣರಾಗಿದ್ದಾರೆ.

ಪ್ರೌಢರಾಯನ ಕಾವ್ಯದಲ್ಲಿ ಬರುವ ಚಾಮರಸ-ಕುಮಾರವ್ಯಾಸ ಪ್ರಸಂಗವನ್ನು ದಂತಕತೆಯೆಂದು ತಿರಸ್ಕರಿಸಬಹುದಾದರೂ ಈ ವಿಚಾರವನ್ನು ತನ್ನ ಕಾವ್ಯದಲ್ಲಿ ಸೇರಿಸುವುದಕ್ಕೆ ಅದೃಶ್ಯಕವಿಗೆ ಅವಶ್ಯವೆನಿಸಿದ ಕಾರಣವನ್ನು ಲಕ್ಷಿಸಬೇಕು. ಅವನಿಗೆ ಅನುಭಾವದ ಸ್ಪರ್ಶವಿತ್ತೊ, ಇಲ್ಲವೊ ಎನ್ನುವುದಕ್ಕಿಂತ ಅನುಭಾವಿಗಳಿಂದ ಪ್ರಭುಲಿಂಗಲೀಲೆಯ ವಸ್ತು, ದರ್ಶನ, ನಿರೂಪಣೆ ಮುಂತಾದವುಗಳ ಬಗ್ಗೆ ಕೇಳಿ ತಿಳಿದುಕೊಂಡಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಚಾಮರಸನ ಪ್ರತಿಭೆ ಅವನನ್ನು ಪುಳಕಿತಗೊಳಿಸಿರಬೇಕು, ಅವನಿಗೆ ತನ್ನ ಕಾಣಿಕೆಯನ್ನು ಸಲ್ಲಿಸುವ ಅಭಿಲಾಷೆ ಹೊಂದಿದವನಾಗಿ ಆ ಸನ್ನಿವೇಶವನ್ನು ನಿರ್ಮಿಸಿರಬೇಕು. ಇನ್ನು ಚಾಮರಸನನ್ನು ಕುರಿತಾಗಿ ಕಾವ್ಯ ರಚಿಸಿರುವುದು ಅವನಲ್ಲಿ ಹೊಂದಿರುವ ಭಕ್ತಿಯ ಪರಾಕಾಷ್ಠತೆಯೇ ಸರಿ. 'ಹಿಂದಿನ ಜನ್ಮವೊಂದರಲ್ಲಿ ನಾನು ಕಾಳಿದಾಸನಾಗಿದ್ದೆ' ಎಂದು ದ. ರಾ. ಬೇಂದ್ರೆಯವರು ಹೇಳಿರುವುದು ಇಂಥ ವಿಚಾರದ ಹಿನ್ನೆಲೆಯಲ್ಲಿಯೇ. ಕಳೆದ ಶತಮಾನದಲ್ಲಿ ಮತ್ತು ಈ ದಶಕದಲ್ಲಿ ಪ್ರಭುಲಿಂಗಲೀಲೆಯನ್ನು ಕುರಿತಾಗಿ ವಿಚಾರಸಂಕಿರಣಗಳು ಏರ್ಪಡುತ್ತಲೇ ಇರುವುದನ್ನು ನೋಡುತ್ತೇವೆ. ಏಕೆಂದರೆ 'ಕಾವ್ಯದ ದೃಷ್ಟಿಯಿಂದ ಚಾಮರಸಕೃತಿಯನ್ನು ಪರೀಕ್ಷಿಸಲಾಗಿ ಅವನ ಕಲ್ಪನಾಸಂಪತ್ತಿಯ ಮತ್ತು ಶಬ್ದಶಕ್ತಿಯ ಸಹಜವಿಲಾಸವು ಹೆಜ್ಜೆಹೆಜ್ಜೆಗೆ ಗೋಚರವಾಗುತ್ತದೆ'.[೫] ಇವೆಲ್ಲ ಚಾಮರಸನ ಪ್ರತಿಭಾವಿಲಾಸಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಹೀಗಿರುವಾಗ ಹನ್ನೊಂದು ದಿನಗಳಲ್ಲಿ ಕಾವ್ಯ ರಚಿತವಾಗಿದೆಯೆಂಬ ಮಾತು ಉತ್ಪ್ರೇಕ್ಷೆ ಎನಿಸುತ್ತದೆ.

ಮಾಯಾದೇವಿಯ ಚಿತ್ರಣದಲ್ಲಿ ಕವಿ ಹೊಂದಿರುವ ರತಿದೃಷ್ಟಿಯನ್ನು ಲೋಕವ್ಯವಹಾರದ ಹಿನ್ನೆಲೆಯಲ್ಲಿ ನೋಡಿದರೆ ಅದು ಅಸಹ್ಯವೆಂದು ಅಥವಾ ಅಗ್ರಾಹ್ಯವೆಂದು ತೋರುತ್ತದೆ. ಇದರೊಂದಿಗೆ ನಾಟ್ಯದೃಷ್ಟಿಯೂ ಬೆರೆತಿರುವುದರಿಂದ ಅವುಗಳ ಸಂಯೋಜನೆಯ ಹಿನ್ನೆಲೆಯಲ್ಲಿ ನಿರೂಪಣೆಯನ್ನು ಲಕ್ಷಿಸಬೇಕು. ನಾಟ್ಯದ ವಿವರಣೆಗೆ ರತಿದೃಷ್ಟಿ ಅತ್ಯಾವಶ್ಯಕವಾದುದು. ಶಿರಸ್ಸಿನ ಚಲನೆ, ಭಾವ-ವಿಭಾವ-ಅನುಭಾವ-ವ್ಯಭಿಚಾರೀಭಾವಗಳ ದೃಷ್ಟಿಭೇದಗಳು, ವಿಲಾಸಾಭಿನಯಗಳು, ಅಂಗಾಂಗಗಳ ಚಲನೆ, ಅವು ವಿವಿಧ ರಸಗಳೊಂದಿಗೆ ಸಂಯೋಜಿಸುವುದು ಇವೆಲ್ಲ ನಿರೂಪಿತವಾಗಿರುವುದು ರತಿದೃಷ್ಟಿಯ ಮಿಶ್ರಣದಲ್ಲಿಯೇ. ಅದನ್ನು ವಸ್ತುನಿಷ್ಠವಾಗಿ ನೋಡಬೇಕಾದರೆ ಈ ಎರಡು ಶಾಸ್ತ್ರಗಳ ಪರಿಜ್ಞಾನ ಅವಶ್ಯ. ಹೀಗೆ ಕಾಮಶಾಸ್ತ್ರಜ್ಞನಾಗಿ, ನಾಟ್ಯಶಾಸ್ತ್ರಜ್ಞನಾಗಿ ಅನುಭಾವಿಯಾಗಿ, ಪ್ರತಿಭಾಪೂರ್ಣ ಕವಿಯಾಗಿ ಚಾಮರಸ ಕಾವ್ಯದ ನಿರೂಪಣೆಯಲ್ಲಿ ತೊಡಗಿರುವುದರಿಂದ ಪ್ರಭುಲಿಂಗಲೀಲೆಯನ್ನು ವಿವೇಚಿಸಲು ಈ ಎಲ್ಲ ದೃಷ್ಟಿಗಳೂ ಸಮ್ಮಿಳಿತವಾಗುವುದು ಅವಶ್ಯವಾಗುತ್ತದೆ. ಪರಿಪೂರ್ಣ ನಾಟ್ಯಶಾಸ್ತ್ರಜ್ಞರಾಗಿರುವ ಹಾಗೂ ರತಿಶಾಸ್ತ್ರಜ್ಞರಾಗಿರುವ ಸಂಶೋಧಕರನ್ನು ಮಾಯಾಸಂಪುಟವು ಕೈ ಬೀಸಿ ಕರೆಯುತ್ತಿದೆ.

ಕವಿ ಮಂಗಲಾಚರಣದ ಗತಿಯಲ್ಲಿ ತನ್ನ ಕಾವ್ಯದ ವಸ್ತು ಕಾಳಗದ ಕಥೆಯಲ್ಲ, ಸತ್ತವರ ಕಥೆಯೂ ಅಲ್ಲ, ಅದು ಸತ್ಯಶರಣರ ಕಥೆಯೆಂದು ತಿಳಿಸುತ್ತ ಕೆಳಗಿನ ಪದ್ಯದಲ್ಲಿ ಅದರ ಮಹತಿಯನ್ನು ತಿಳಿಸುತ್ತಾನೆ.

ಕುಱಿಗಳೋಪಾದಿಯಲಿ ಕಬ್ಬಿನ
ಹೊಱಗಣೆಲೆಯನೆ ಮೇದಕಟ ಮೆಲು
ಕಿಱುವುತಲ್ಪಸುಖಕ್ಕೆ ಸೋಲದೆ ಕಬ್ಬಿನೊಳು ರಸವ ।
ನೆಱೆ ಸವಿವ ಗಜದಂತೆ ಭಕ್ತಿಯ
ತೆಱನ ತಿಳಿದಾಚರಿಸಬೇಕೆಂ
ದಱುವವರು ಲಾಲಿಸುವುದೀ ಪ್ರಭುಲಿಂಗಲೀಲೆಯಲಿ ॥ [೬]

ಬಸವಣ್ಣನ ವಚನವೊಂದು ಇದಕ್ಕೆ ಸರಿಜೋಡಿಯಾಗಿ ರೂಪಿತವಾಗಿದೆ.

ಕುಱಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು
ತೆಱನನಱಿಯದೆ ತನಿರಸದ,
ಹೊಱಗಣೆಲೆಯನೆ ಮೇದುವು !
ನಿಮ್ಮನಱಿವ ಮದಕರಿಯಲ್ಲದೆ
ಕುಱಿ ಬಲ್ಲುದೆ, ಕೂಡಲಸಂಗಮದೇವಾ?

[illegible]

ಪ್ರಭುಲಿಂಗಲೀಲೆಯ ಪದ್ಯ ಬಸವಣ್ಣನ ವಚನವನ್ನು ರೂಪಾಂತರಿಸಿದುದಾಗಿದೆ. ಅಲ್ಲಿ ಬರುವ ಗಜ ಹಾಗೂ ಮದಕರಿ ಇವು ಅನುಭಾವಿಗಳನ್ನು ಸಂಕೇತಿಸುವ ಪದಗಳಾಗಿವೆ. ಷಟ್‌ಸ್ಥಲಾಚರಣೆಯು ಎಲ್ಲರಿಗೂ ತಿಳಿಯುವ ಮಾರ್ಗವಲ್ಲ, ಅನುಭಾವಿಗಳು ಮಾತ್ರ ಅದರ ಆನಂದವನ್ನು ಸವಿಯಬಲ್ಲರೆಂಬ ಅರ್ಥವನ್ನು ವಚನದಲ್ಲಿ ಅಳವಡಿಸಲಾಗಿದೆ. ಕುರಿಗಳಿಗೆ ಕಬ್ಬನ್ನು ಮುರಿದು ರಸ ಹೀರುವ ಶಕ್ತಿ ಇರುವುದಿಲ್ಲ. ಕಬ್ಬಿನ ಬೆಳವಣಿಗೆಯಲ್ಲಿ ಪೂರಕ ಪಾತ್ರ ವಹಿಸುವ ಹೊರಗಿನ ಎಲೆಗಳನ್ನು ಅವು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ತಿನ್ನುತ್ತವೆ. ಎಲೆಗಳಲ್ಲಿರುವ ರುಚಿಯಿಂದಲೇ ತೃಪ್ತಿ ಹೊಂದುವ ಅವುಗಳಿಗೆ ಕಬ್ಬಿನಲ್ಲಿರುವ ರಸದ ಕಲ್ಪನೆಯೇ ಉಂಟಾಗುವುದಿಲ್ಲ.

ನವನವೋನ್ಮೇಷಶಾಲಿನಿಯಾದ ಪ್ರತಿಭೆಯಿಂದ ರಚಿತವಾದ ಪ್ರಭುಲಿಂಗಲೀಲೆಯನ್ನು ಅನುಭಾವದ ಸ್ಪರ್ಶವಿಲ್ಲದವರು ಓದಿದಾಗ ಕುರಿಗಳು ಕಬ್ಬಿನ ಹೊರಗಿನ ಎಲೆಯನ್ನು ತಿಂದು ತೃಪ್ತಿಗೊಂಡಂತೆ ಕಾವ್ಯವನ್ನು ವಾಚ್ಯಾರ್ಥದಲ್ಲಿ ಓದಿ ತೃಪ್ತಿಪಡುತ್ತಾರೆಂದು ತಿಳಿಸುತ್ತಾನೆ ಚಾಮರಸ. ಷಟ್‌ಸ್ಥಲಾನುಭವಿಗಳು ಅದರಲ್ಲಿ ಅಳವಡಿಸಿರುವ ಕಾವ್ಯಸೌಂದರ್ಯವನ್ನೂ ಸವಿಯುತ್ತಾರೆಂಬುದು ಆತನ ಅಭಿಪ್ರಾಯ. ಪ್ರಭುಲಿಂಗಲೀಲೆಯಲ್ಲಿ ಎಲ್ಲಿಯೂ ಇತರರನ್ನು ದೂಷಿಸದ, ತನ್ನ ಹೆಗ್ಗಳಿಕೆಯನ್ನು ಹೇಳಿಕೊಳ್ಳದ ಕವಿ ಇಲ್ಲಿ ಆ ಕೆಲಸವನ್ನು ಮಾಡುತ್ತಾನೆಂದರೂ ಸರಿ, ಕಾವ್ಯದ ಧ್ವನಿಯ ವಿಷಯದಲ್ಲಿ ಸೂಚನೆ ಕೊಡುತ್ತಾನೆಂದರೂ ಸರಿ. ಇಂಥ ಪ್ರತಿಭಾಪೂರ್ಣ ಕಾವ್ಯವನ್ನು ಸಹೃದಯರು ಹೆಚ್ಚು ಹೆಚ್ಚು ವಿವೇಚನೆಯಿಂದ ಪರಿಶೀಲಿಸುತ್ತ ಹೋದಂತೆ ಅದು ಧ್ವನಿಪೂರ್ಣತೆಯಿಂದ ಶೋಭಿಸತೊಡಗುತ್ತದೆ, ರಸಸಿದ್ಧಿಯನ್ನು ಪಡೆದುಕೊಳ್ಳುತ್ತದೆ.

ಟಿಪ್ಪಣಿಗಳು

೧. ಅಲ್ಲಮಪ್ರಭುಸಂಪ್ರದಾಯದ । ಸಲ್ಲಲಿತ ಸನ್ಮಾರ್ಗವನು ನಾ ।
ನೆಲ್ಲರಜೀವಂದದಲಿ ಪೇಳುವೆನುಚಿತ ವಚನದಲಿ ॥
ಸೊಲ್ಲಿನೊಳಗಣ ಸೊಂಪನಿಂಪನು । ಬಲ್ಲವರು ಭಾವುಕರು ಭಕ್ತಿಯ ।
ಬಲ್ಲಿದರು ಲಾಲಿಸುವುದೀ ಪ್ರಭುಲಿಂಗಲೀಲೆಯಲಿ ॥
ಪ್ರ. ಲೀ., ಗತಿ ೧, ಪದ್ಯ ೮

೨. ಪ್ರ. ಲೀ.,ಗತಿ ೨೫, ಪದ್ಯ ೧೧

೩. ಸಂ. ಎಮ್. ಎಸ್. ಬಸವಲಿಂಗಯ್ಯ ಮತ್ತು ಎಮ್. ಆರ್. ಶ್ರೀನಿವಾಸಮೂರ್ತಿ, ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ, ಪುಟ ೫೬

೪. ಅದೇ, ಪೀಠಿಕೆ, ಪುಟ ೬೧

೫. ರಂ. ಶ್ರೀ ಮುಗಳಿ , ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೩೪

೬. ಪ್ರ. ಲೀ. ಗತಿ ೧, ಪದ್ಯ ೧೪

೭. ಸಂ. ಬಸವನಾಳ ಶಿವಲಿಂಗಪ್ಪನವರು , ಬಸವಣ್ಣನವರ ಷಟ್‌ಸ್ಥಳದ ವಚನಗಳು, ವ.ಸಂ. ೫೯೯, ಪುಟ ೧೫೬

❊ ❊ ❊ ❊ ❊ ❊

ಗ್ರಂಥಋಣ

ಅಕ್ಕನ ವಚನಗಳು — ಸಂ. ಎಲ್. ಬಸವರಾಜು
ಗೀತಾ ಬುಕ್ ಹೌಸ, ಮೈಸೂರು, ೧೯೯೦

ಅದ್ವೈತಾನಂದದ ವಚನಗಳು — ಸಂ. ಬಿ. ಅರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ತೋಂಟದಾರ್ಯಮಠ, ಗದಗ, ೧೯೮೩

ಅನುಭವಾಮೃತ — ಸಂ: ಹೊಸಕೆರೆ ಚಿದಂಬರಯ್ಯ
ಎಸ್. ಎಸ್. ಎನ್. ಬುಕ್ ಡಿಪೋ
ಬೆಂಗಳೂರು, ೧೯೬೯

ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ — ಬಸವರಾಜ ಕಲ್ಗುಡಿ
ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು, ೨೦೦೧

ಅರಿಸ್ಟಾಟಲನ ಕಾವ್ಯಮೀಮಾಂಸೆ — ಎನ್. ಬಾಲಸುಬ್ರಹ್ಮಣ್ಯ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

ಅಲ್ಲಮನ ವಚನಗಳು — ಸಂ: ಡಾ. ಎಲ್. ಬಸವರಾಜು
ಗೀತಾ ಬುಕ್ ಹೌಸ, ಮೈಸೂರು, ೧೯೬೯

ಅಲ್ಲಮನ ವಚನ ಚಂದ್ರಿಕೆ — ಸಂ: ಡಾ. ಎಲ್. ಬಸವರಾಜು
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,
ಮೂರುಸಾವಿರಮಠ, ಹುಬ್ಬಳ್ಳಿ, ೧೯೮೬

ಅಲ್ಲಮನ ವಚನ ಪ್ರಕೋಶ — ಹ. ನಂ. ವಿಜಯಕುಮಾರ
ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು, ೧೯೮೨

ಅಲ್ಲಮಪ್ರಭುದೇವ — ಡಾ. ಎಚ್. ತಿಪ್ಪೇರುದ್ರಸ್ವಾಮಿ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೭

ಅಲ್ಲಮಪ್ರಭುದೇವರ ವಚನಸಂಪುಟ — ಸಂ. ಡಾ. ವೀರಣ್ಣ ರಾಜೂರ
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩

ಅಲ್ಲಮಪ್ರಭು ಮತ್ತು ಶೈವಪ್ರತಿಭೆ — ಡಿ. ಆರ್. ನಾಗರಾಜ
ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ೧೯೯೯

ಅಲ್ಲಮಪ್ರಭುವಿನ ಟೀಕಿನ ವಚನಗಳು — ಸಂ. ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು
ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ,
ಮೈಸೂರು. ೧೯೮೬

ಅಲಂಕಾರ ಶಾಸ್ತ್ರಕಾರರು ಒಂದು ಸಮೀಕ್ಷೆ — ಡಾ. ಬಿ. ವಿ. ಮಲ್ಲಾಪುರ
ಪ್ರಸಾರಾಂಗ ಕರ್ನಾಟಕ ವಿಶ್ವವಿಧ್ಯಾಲಯ,
ಧಾರವಾಡ, ೨೦೦೦

ಉಪನಿಷತ್ತುಗಳು
(ಅ)ಈಶಾವಾಸ್ಯೋಪನಿಷತ್ — ಸ್ವಾಮಿ ಆದಿದೇವಾನಂದ
ಶ್ರೀ ರಾಮಕೃಷ್ಣಾಶ್ರಮ, ಮೈಸೂರು, ೧೯೮೮
(ಆ) ಕೇನೋಪನಿಷತ್ — ಅದೇ, ೧೯೯೩
(ಇ) ಕಠೋಪನಿಷತ್ — ಅದೇ, ೧೯೮೭
(ಈ) ಪ್ರಶ್ನೋಪನಿಷತ್, — ಅದೇ, ೧೯೯೩
(ಉ) ಮುಂಡಕೋಪನಿಷತ್, — ಅದೇ, ೧೯೯೩
(ಊ) ಐತರೇಯೋಪನಿಷತ್, — ಅದೇ, ೧೯೮೪
(ಋ) ತೈತ್ತಿರೀಯೋಪನಿಷತ್, — ಅದೇ, ೧೯೯೩
(ೠ) ಶ್ವೇತಾಶ್ವತರೋಪನಿಷತ್, — ಅದೇ, ೧೯೯೦
(ಎ) ಈಶೋಪನಿಷತ್, — ಡಿ. ವಿ. ಜಿ.
ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೮೯

ಉಪನಿಷತ್ತುಗಳ ಅರ್ಥಲೋಕ — ಆರ್. ಡಿ. ಹೆಗಡೆ, ಆಲ್ಮನೆ
ನವಕರ್ನಾಟಕ ಪಬ್ಲಿಕೇಷನ್ಸ ಪ್ರೈವೆಟ್ ಲಿಮಿಟೆಡ್,
ಬೆಂಗಳೂರು, ೧೯೯೭

ಉರಿಯುಂಡ ಕರ್ಪೂರ — ಬ. ಗಿ. ಯಲ್ಲಟ್ಟಿ
ಶ್ರೀ ಚೆನ್ನವೀರ ಶಿವಯೋಗಿಗಳ ಯೋಗಾಶ್ರಮ
ವಿಶ್ವಸ್ಥಮಂಡಳ ಮಹಾಲಿಂಗಪುರ, ೧೯೮೭

ಉರಿಲಿಂಗ ಪೆದ್ದಿಗಳ ವಚನಗಳು — ಸಂ. ಡಾ. ಎಚ್. ಪಿ. ಮಲ್ಲೇದೇವರು
ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ೧೯೭೫

ಓಂಕಾರವಾಣಿ — ಶ್ರೀಶೈಲ ಜತ್ತಿ
ಶ್ರೀ ಚೆನ್ನವೀರ ಶಿವಯೋಗಿಗಳ ಯೋಗಾಶ್ರಮ
ವಿಶ್ವಸ್ಥ ಮಂಡಳ ಮಹಾಲಿಂಗಪುರ, ೧೯೯೦

ಕನ್ನಡ ಕಾವ್ಯಾಲಂಕಾರ — ಡಾ. ಕೆ. ಕೃಷ್ಣಮೂರ್ತಿ
ಶಾರದಾ ಮಂದಿರ, ೫೭೮ ಕೃಷ್ಣರಾಜವನಂ
ಮೈಸೂರು ೧೯೫೫

ಕನ್ನಡ ಕಾವ್ಯಾಲಂಕಾರ — ಡಾ. ಕೆ. ಕೃಷ್ಣಮೂರ್ತಿ
ಶಾರದಾ ಮಂದಿರ, ೫೭೮ ಕೃಷ್ಣರಾಜವನಂ
ಮೈಸೂರು, ೧೯೫೫

ಕನ್ನಡ ಗ್ರಂಥಸಂಪಾದನ ಶಾಸ್ತ್ರ — ಡಾ. ಎಂ. ಎಂ. ಕಲಬುರ್ಗಿ
ಸಮಾಜ ಪುಸ್ತಕಾಲಯ ಧಾರವಾಡ, ೧೯೯೫

ಕನ್ನಡ ಸಾಹಿತ್ಯ ಚರಿತ್ರೆ — ರಂ, ಶ್ರೀ. ಮುಗಳಿ
ಉಷಾ ಸಾಹಿತ್ಯಮಾಲೆ ಮೈಸೂರು, ೧೯೭೮

ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ — ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೮

ಕನ್ನಡ ಸಾಹಿತ್ಯ ಸಮೀಕ್ಷೆ — ಜಿ. ಎಸ್. ಶಿವರುದ್ರಪ್ಪ
ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೧೯೯೯

ಕರ್ನಾಟಕ ಕವಿ ಚರಿತೆ ಭಾಗ ೧,೨,೩	ಆರ್. ನರಸಿಂಹಾಚಾರ್ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೨, ೧೯೭೩, ೧೯೭೪
ಕರ್ನಾಟ ಭಾರತಕಥಾ ಮಂಜರಿ	ಸಂ. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ೧೯೫೮
ಕಾಡಸಿದ್ಧೇಶ್ವರ ವಚನಗಳು	ಸಂ ಪ್ರೊ. ಎ. ಎಲ್. ಹಿರೇಮಠ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ ಮೂರುಸಾವಿರಮಠ, ಹುಬ್ಬಳ್ಳಿ, ೧೯೮೬
ಕಾಡಸಿದ್ಧೇಶ್ವರನ ವೀರಶೈವ ಷಟ್‌ಸ್ಥಲ ವಚನಗಳು (ಸ. ವ. ಸಂ.೧೦)	ಸಂ. ಡಾ ವೀರಣ್ಣ ರಾಜೂರ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೩
ಕಾವ್ಯಾರ್ಥ ಚಿಂತನ	ಡಾ. ಜಿ. ಎಸ್. ಶಿವರುದ್ರಪ್ಪ ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರ , ೧೯೯೮
ಕೆರೆಯ ಪದ್ಮರಸ ಮತ್ತು ಆತನ ವಂಶಜರು, ಒಂದು ಅಧ್ಯಯನ	ಡಾ. ಎಫ್. ಟಿ. ಹಳ್ಳಿಕೇರಿ ವಿಕಾಸ ಪ್ರಕಾಶನ ಕಮಲಾಪುರ, ೧೯೯೬
ಕೈವಲ್ಯ ಪದ್ಧತಿ (ಶ್ರೀಮನ್ನಿಜಗುಣ ಶಿವಯೋಗೀಂದ್ರ ವಿರಚಿತ)	ಸ್ವಾಮಿ ಶಂಕರಾನಂದ ಪರಮಹಂಸ ಜಡಿಸಿದ್ಧಾಶ್ರಮ ಹುಬ್ಬಳ್ಳಿ, ೧೯೭೩
ಕೈವಲ್ಯ ಕಲ್ಪವಲ್ಲರಿ (ಶ್ರೀ ಸರ್ಪಭೂಷಣ ಶಿವಯೋಗಿ ಕೃತ)	ಸಂ. ಶಿ. ಶಿ. ಬಸವನಾಳ ಶ್ರೀ ಸರ್ಪಭೂಷಣ ಶಿವಯೋಗಿಶ್ವರ ಮಠ ಬೆಂಗಳೂರು, ೧೯೪೮
ಕೈವಲ್ಯ ನವನೀತವು (ಶ್ರೀ ಶಂಕರಾನಂದ ಯೋಗಿಶ್ವರ ವಿರಚಿತ)	ಸಂ. ಬ್ರಹ್ಮಶ್ರೀ ಶಿವರಾಮ ಶಾಸ್ತ್ರೀ ಟಿ. ಎನ್. ಕೃಷ್ಣಯ್ಯಶೆಟ್ಟಿ ಅಂಡಸನ್ ಬೆಂಗಳೂರು ೧೯೭೯
ಗುರುರಾಜ ಚಾರಿತ್ರ	ಸಂ: ಸಂ. ಶಿ. ಭೂಸನೂರಮಠ ಮುರುಘಾಮಠ ಧಾರವಾಡ, ೧೯೫೦

ಚನ್ನಬಸವಣ್ಣನವರ ವಚನಗಳು — ಸಂ. ಡಾ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೧

ಚಾಮರಸನ ಅಮನಸ್ಕ ಕಾವ್ಯ — ಡಾ. ವ್ಹಿ. ಎಸ್. ಕಂಬಿ
ಶ್ರೀ ವಿದ್ಯಾ ಪ್ರಕಾಶನ ಧಾರವಾಡ, ೧೯೮೨

ಜಕ್ಕಣ್ಣಯ್ಯನ ನಿರಾಳ ಮಂತ್ರಗೋಪ್ಯ — ಸಂ. ಡಾ. ಬಿ. ವ್ಹಿ. ಶಿರೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ,
ಗದಗ , ೧೯೮೨

ಜೇಡರ ದಾಸಿಮಯ್ಯನ ವಚನಗಳು — ಸಂ. ಎಚ್. ದೇವೀರಪ್ಪ
ಸಮಾಜ ಪುಸ್ತಕಾಲಯ ಧಾರವಾಡ, ೧೯೮೬

ತೋಂಟದ ಸಿದ್ಧಲಿಂಗಶಿವಯೋಗಿಗಳ ವಚನಗಳು (ಸ. ವ. ಸಂ. ೧೧) — ಸಂ. ಎಸ್. ಶಿವಣ್ಣ
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೩

ತೌಲನಿಕ ಕಾವ್ಯ ಮೀಮಾಂಸೆ — ಡಾ. ಎಚ್. ತಿಪ್ಪೇರುದ್ರಸ್ವಾಮಿ
ಡಿ. ವಿ. ಕೆ. ಮೂರ್ತಿಕೃಷ್ಣಮೂರ್ತಿಪುರಂ ಮೈಸೂರು,
೧೯೯೮

ದರ್ಶನ — ದೇವಿಪ್ರಸಾದ ಚಟ್ಟೋಪಾಧ್ಯಾಯ
ಅನುವಾದ: ಡಾ. ಜಿ. ರಾಮಕೃಷ್ಣ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಬೆಂಗಳೂರು ೧೯೯೫

ದರ್ಶನಂ ಮೋಕ್ಷಸಾಧನಂ — ಪಾರ್ಶ್ವಕುಮಾರ ಸಾ. ಗುಂಡವಾಡೆ
(ಅನುವಾದ: ದೇವೇಂದ್ರ ಬಿ. ಪಾಟೀಲ)
ಮುಕ್ತಶ್ರೀ ಪ್ರಕಾಶನ ಬೆಳಗಾವಿ, ೨೦೦೦

ದಾರ್ಶನಿಕ ಕವಿ ಚಾಮರಸನ ಜೀವನ, ಸಾಹಿತ್ಯ ತತ್ತ್ವಗಳ ವಿಮರ್ಶಾತ್ಮಕ ಅಧ್ಯಯನ (ಅಪ್ರಕಟಿತ) — ಡಾ. ಜಿ. ಎಸ್. ಘಿವಾರಿ
ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ ಧಾರವಾಡ, ೧೯೭೩

ದೀಕ್ಷಾಬೋಧೆ (ಕೆರೆಯ ಪದ್ಮರಸ ವಿರಚಿತ)	ಪ್ರ. ಸಂ: ಡಾ. ಆರ್. ಸಿ. ಹಿರೇಮಠ ಸಂ. ಡಾ. ಬಿ. ಬಿ. ಹೆಂಡಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೩
ಧರ್ಮ ಮೀಮಾಂಸೆ	ಅನುವಾದ: ಡಾ. ಎನ್.ಜಿ. ಮಹಾದೇವಪ್ಪ ಪ್ರಸಾರಾಂಗ ಕರ್ನಾಟಕ ವಿ. ವಿ. ಧಾರವಾಡ, ೧೯೯೨
ಪಾಶ್ಚಾತ್ಯ ಕಾವ್ಯ ಮೀಮಾಂಸೆ	ವಿ. ಎಂ. ಇನಾಂದಾರ್ ಸಮಾಜ ಪುಸ್ತಕಾಲಯ ಧಾರವಾಡ, ೧೯೯೫
ಪ್ರೌಢರಾಯನ ಕಾವ್ಯ	ಸಂ: ಸಂ. ಶಿ. ಭೂಸನೂರಮಠ ಮುರುಘಾಮಠ ಧಾರವಾಡ, ೧೯೫೭
ಪ್ರಭುದೇವರ ಪುರಾಣ	ಸಂ. ಬುದ್ದಯ್ಯಾಸ್ವಾಮಿ ಮ. ಪುರಾಣಿಕ ಉಳವಿಬಸಪ್ಪನ ಗುಡ್ಡ ಧಾರವಾಡ, ೧೯೪೦
ಬನವಾಸಿ	ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೪
ಪ್ರಭುಲಿಂಗಲೀಲೆ (ಕವಿ ಚಾಮರಸ ವಿರಚಿತ)	ಸಂ. ಡಾ. ಎಂ. ಎಸ್. ಸುಂಕಾಪುರ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೬
ಪ್ರಭುಲಿಂಗಲೀಲೆ (ಚಾಮರಸ ಕೃತ)	ಸಂ. ಪ್ರೊ. ಶಿ.ಶಿ. ಬಸವನಾಳ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ, ೧೯೭೧
ಪ್ರಭುಲಿಂಗಲೀಲೆ–ಗದ್ಯಾನುವಾದ (ಚಾಮರಸ ಕವಿಯ)	ಪ್ರೊ ಬಿ. ಸಿ. ಜವಳಿ, ಶ್ರೀ ಮಲ್ಲಾಬಾದಿ ವೀರಭದ್ರಪ್ಪ ಮಲ್ಲಾಬಾದಿ ಮಹಾಂತಪ್ಪ ಸಹೋದರರು ಪಂಪ ಸಾಹಿತ್ಯ ಪ್ರಕಟನಾಲಯ ದಾವಣಗೆರೆ, ೧೯೬೨
ಪ್ರಭುಲಿಂಗಲೀಲೆ–ಗದ್ಯಾನುವಾದ (ಚಾಮರಸನ)	ಡಾ. ಎಸ್. ವಿದ್ಯಾಶಂಕರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೭೬

ಪ್ರಭುಲಿಂಗಲೀಲೆಯ ಸಂಗ್ರಹ	ಸಂ. ಎಂ. ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೯೬
ಪ್ರಭುಲಿಂಗಲೀಲಾ ಪ್ರವಚನ	ಷ. ಬ್ರ. ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು ಹಿರೇಮಠ ತೆಲಸಂಗ ಭುವನೇಶ್ವರಿ ಪ್ರಕಾಶನ ವಿಜಾಪುರ, ೧೯೯೬
ಬರಕೋ ಪದಾ ಬರಕೋ	ಸಂ. ಡಾ. ಶಿವಾನಂದ ಗುಬ್ಬಣ್ಣವರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೮೧
ಬಸವಣ್ಣನವರ ಷಟ್‌ಸ್ಥಳದ ವಚನಗಳು	ಸಂ ಬಸವನಾಳ ಶಿವಲಿಂಗಪ್ಪನವರು ಮೈಸೂರು ಸರಕಾರ ಬಸವೇಶ್ವರ ಆನೆಯ ಶತಮಾನೋತ್ಸವ ಸಮಿತಿ, ೧೯೬೮
ಭಾರತೀಯ ಕಾವ್ಯಮೀಮಾಂಸೆ	ತೀ. ನಂ. ಶ್ರೀಕಂಠಯ್ಯ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು , ೧೯೭೩
ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ	ಮಲ್ಲೇಪುರಂ. ಜಿ.ವೆಂಕಟೇಶ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦
ಭಾರತೀಯ ತತ್ತ್ವಜ್ಞಾನ	ಎಸ್. ಜಿ. ಸರದೇಸಾಯಿ ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಬೆಂಗಳೂರು, ೧೯೯೪
ಭಾರತೀಯ ದರ್ಶನಗಳು	ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯ ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಬೆಂಗಳೂರು, ೧೯೯೬
ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಭಾಗ ೧,೨	ಸಂ. ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೮

ಮಗ್ಗೆ ಮಾಯಿದೇವ ವಿಭು ಕಂಡ ವೀರಶೈವದರ್ಶನ	ಡಾ. ಎಂ.ಜಿ ನಂಜಂಡಾರಾಧ್ಯ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೨
ಮಹಾಯಾತ್ರೆ	ಡಾ. ಆರ್. ಸಿ. ಹಿರೇಮಠ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೭
ಯೋಗ ಸಿದ್ಧಾಂತ	ಶ್ರೀ ಚೆನ್ನವೀರ ಶಿವಯೋಗಿಗಳು ಶ್ರೀ ಚೆನ್ನವೀರ ಶಿವಯೋಗಿಗಳ ಯೋಗಾಶ್ರಮ ವಿಶ್ವಸ್ತ ಮಂಡಳಿ ಮಹಾಲಿಂಗಪುರ, ೧೯೯೨
ರಸೋ ವೈ ಸ:	ಕುವೆಂಪು ಉದಯಕವಿ ವಾಣಿವಿಲಾಸ ಪುರಂ ಮೈಸೂರು, ೧೯೬೨
ರಾಜಯೋಗ	ಸ್ವಾಮಿ ವಿವೇಕಾನಂದ ಶ್ರೀ ರಾಮಕೃಷ್ಣಾಶ್ರಮ ಮೈಸೂರು, ೧೯೭೪
ಲಿಂಗಚಿದಮೃತ ಬೋಧೆ	ಸಂ. ಡಾ. ಎಂ. ಎಸ್. ಸುಂಕಾಪುರ ಕನ್ನಡ ಅಧ್ಯಯನ ಸಂಸ್ಥೆ ಕರ್ನಾಟಕ ವಿಶ್ವವಿಧ್ಯಾಲಯ ಧಾರವಾಡ, ೧೯೭೫
ಲೋಕಾಯತ	ಗೌರೀಶ ಕಾಯ್ಕಿಣಿ ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಬೆಂಗಳೂರು, ೧೯೯೫
ವಚನಗಳಲ್ಲಿ ವೀರಶೈವಧರ್ಮ	ಎಚ್. ತಿಪ್ಪೇರುದ್ರಸ್ವಾಮಿ ಡಿ. ವಿ. ಕೆ. ಮೂರ್ತಿ, ಮೈಸೂರು ೧೯೮೨
ವಚನ ಪರಿಭಾಷಾ ಕೋಶ (ಸಮಗ್ರ ವಚನ ಸಂಪುಟ ೧೫)	ಸಂ. ಡಾ. ಎಸ್. ವಿದ್ಯಾಶಂಕರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೩
ವಚನಶಾಸ್ತ್ರ ಸಾರ	ಸಂ. ಫ. ಗು. ಹಳಕಟ್ಟಿ ವೀರಶೈವ ಅಧ್ಯಯನ ಸಂಸ್ಥೆ ಗದಗ, ೧೯೮೩

ವಚನ ಸಾಹಿತ್ಯ ಒಂದು ಸಾಂಸಕೃತಿಕ ಅಧ್ಯಯನ — ಪಿ. ವಿ. ನಾರಾಯಣ
ವೀರಶೈವ ಅಧ್ಯಯನ ಸಂಸ್ಥೆ ಗದಗ, ೧೯೮೩

ವೀರಶೈವ ಚಿಂತಾಮಣಿ (ಮಹದ್ದೇವಯೋಗಿ ವಿರಚಿತ) — ಸಂ. ಡಾ. ಆರ್. ಸಿ. ಹಿರೇಮಠ.
ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ವಿಶ್ವವಿಧ್ಯಾಲಯ ಧಾರವಾಡ, ೧೯೭೧

ವೀರಶೈವ ಧರ್ಮದ ಕೈಪಿಡಿ — ಡಾ. ಎಸ್. ಸಿ. ನಂದಿಮಠ
ಅನುವಾದ; ಪ್ರೇಮಾದೇವಿ ಮಳಿಮಠ
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ, ೧೯೯೬

ವೀರಶೈವ ಪುರಾಣಗಳು: ಒಂದು ಅಧ್ಯಯನ — ಡಾ. ಎಸ್. ವಿದ್ಯಾಶಂಕರ
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೮೨

ವಿವೇಕ ಚಿಂತಾಮಣಿ (ಶ್ರೀಮನ್ನಿಜಗುಣ ಶಿವಯೋಗಿ ವಿರಚಿತ) — ಸಂ. ಪ್ರೊ. ಜಿ. ಎಂ. ಉಮಾಪತಿಶಾಸ್ತ್ರಿಗಳು
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ
ಮಂಡಳ, ಮೂರುಸಾವಿರಮಠ, ಹುಬ್ಬಳ್ಳಿ. ೧೯೬೯

ವೇದಗಳು ವೇದಾಂಗಗಳು ಮತ್ತು ವೇದಾಂತ ತತ್ವ — ಬಿ. ಎನ್. ಕೃಷ್ಣಮೂರ್ತಿ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೯

ವೇದಾಂತ ರತ್ನಾಕರ — ಸಂ. ಬ, ಕ. ಪಾಟೀಲ
ಪಿ. ಸಿ. ಶಾಬಾದಿಮಠ್ ಬುಕ್ ಡಿಪೊ, ಗದಗ ೧೯೮೨

ಶಕ್ತಿ ವಿಶಿಷ್ಟಾದ್ವೈತ ದರ್ಶನ — ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು, ೧೯೬೩

ಶರಣರ ಅನುಭಾವ ಸಾಹಿತ್ಯ — ಡಾ. ಎಚ್. ತಿಪ್ಪೇರುದ್ರಸ್ವಾಮಿ
ಡಿ. ವಿ. ಕೆ ಮೂರ್ತಿ ಮೈಸೂರ , ೧೯೬೩

ಶರಣರ ಕುರಿತ ಕನ್ನಡ ಕಾದಂಬರಿಗಳು — ಡಾ. ಜೆ. ಪಿ. ದೊಡಮನಿ
ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಧರ್ಮಪ್ರಸಾರಕ
ಮಂಡಲ, ಇಲಕಲ್ಲ, ೧೯೯೬

ಶಾಸನಗಳಲ್ಲಿ ಶಿವಶರಣರು	ಡಾ. ಎಂ. ಎಂ. ಕಲಬುರ್ಗಿ ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ-ಗದಗ, ೧೯೭೮
ಶಿವತತ್ತ್ವ ಚಿಂತಾಮಣಿ	ಪ್ರ. ಸಂ: ಎಚ್. ದೇವೀರಪ್ಪ ಸ: ಎಸ್ ಬಸಪ್ಪ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಮೈಸೂರ ವಿಶ್ವವಿಧ್ಯಾನಿಲಯ, ಮೈಸೂರು ೧೯೬೦
ಶಿವತತ್ತ್ವ ರತ್ನಾಕರ ಸಂಪುಟ ೧,೨ (ಕೆಳದಿ ಬಸವರಾಜ ಸಂಕಲಿಸಿದ)	ಸಂ. ಮಲ್ಲೇಪುರಂ ಜಿ. ವೆಂಕಟೇಶ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯
ಶಿವಯೋಗ ಚಿಂತಾಮಣಿ (ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿಗಳ)	ಸಂ. ಡಾ. ಉಮಾದೇವಿ, ಹುಬ್ಬಳ್ಳಿ ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಟಾದಾರ್ಯ ಸಂಸ್ಥಾನಮಠ ಗದಗ, ೧೯೮೭
ಶಿವಯೋಗ ಪ್ರದೀಪಿಕಾ (ಚೆನ್ನಸದಾಶಿವಯೋಗಿ ವಿರಚಿತಾ)	ಸಂ. ಡಾ. ಎಂ.ಎಂ. ಕಲಬುರ್ಗಿ ಮತ್ತು ಪಂ. ನಾಗಭೂಷಣಶಾಸ್ತ್ರಿಗಳು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೬
ಶಿವಶರಣೆಯರ ಸಂಪುಟ (ಸಮಗ್ರ ವಚನ ಸಂಪುಟ ೫)	ಸಂ. ಡಾ, ವೀರಣ್ಣ ರಾಜೂರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೩
ಶಿವಾನುಭವ ಸೂತ್ರಂ	ಸಂ. ವೈ. ನಾಗೇಶಶಾಸ್ತ್ರಿ ಮುರುಘಾಮಠ ಧಾರವಾಡ, ೧೯೬೯
ಶ್ರೀ ದೇವಿಮಹಾತ್ಮೆ (ಚಿದಾನಂದಾವಧೂತ ವಿರಚಿತ)	ಸಂ. ಬ. ಕ. ಪಾಟೀಲ ಮಾಸ್ತರ ಬ್ಯಾಹಟ್ಟಿ ಮೆಸರ್ಸ ಪಿ.ಸಿ.ಶಾಬಾದಿಮಠ ಬುಕ್ ಡಿಪೊ ಗದಗ, ೧೯೭೫
ಶ್ರೀ ರಾಮಾಯಣ ದರ್ಶನಂ	ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ೧೯೭೧

ಶ್ರೀ ಸಿದ್ಧರಾಮೇಶ್ವರ ವಚನಗಳು	ಸಂ. ಡಾ. ಆರ್. ಸಿ ಹಿರೇಮಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೮
ಶೂನ್ಯಸಂಪಾದನೆ	ಡಾ. ಎಚ್. ತಿಪ್ಪೇರುದ್ರಸ್ವಾಮಿ ಡಿ. ವಿ. ಕೆ. ಮೂರ್ತಿ,ಮೈಸೂರು ೧೯೯೮
ಶೂನ್ಯಸಂಪಾದನೆ: ಒಂದು ಅಧ್ಯಯನ	ಸಂ. ಡಾ. ಸಾ. ಶಿ. ಮರುಳಯ್ಯ ಶ್ರೀಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ ಮೂರುಸಾವಿರಮಠ, ಹುಬ್ಬಳ್ಳಿ, ೧೯೮೯
ಶೂನ್ಯಸಂಪಾದನೆಯನ್ನು ಕುರಿತು	ಡಾ. ಎಂ. ಚಿದಾನಂದಮೂರ್ತಿ ಸ್ನೇಹಪ್ರಕಾಶನ, ಬೆಂಗಳೂರು, ೧೯೯೦
ಶೂನ್ಯಸಂಪಾದನೆಯ ಪರಾಮರ್ಶೆ	ಪ್ರೊ. ಸಂ. ಶಿ. ಭೂಸನೂರಮಠ ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೩
ಪ್ರಭುದೇವರ ಶೂನ್ಯಸಂಪಾದನೆ (ಶಿವಗಣಪ್ರಸಾದಿ ಮಹಾದೇವಯ್ಯಗಳ)	ಸಂ. ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೧
ಶೂನ್ಯಸಂಪಾದನೆ (ಹಲಗೆಯಾರ್ಯನ)	ಸಂ. ಪ್ರೊ. ಎಸ್. ವಿದ್ಯಾಶಂಕರ ಮತ್ತು ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ೧೯೯೮
ಶೂನ್ಯ ಸಂಪಾದನೆ (ಗುಮ್ಮಳಾಪುರದ ಸಿದ್ಧಲಿಂಗದೇವರ)	ಸಂ. .ಆರ್. ಸಿ ಹಿರೇಮಠ ಕನ್ನಡ ಅಧ್ಯಯನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೨
ಶೂನ್ಯಸಂಪಾದನೆ (ಗೂಳೂರು ಸಿದ್ಧವೀರಣ್ಣೊಡೆಯರ)	ಸಂ: ಸಂ. ಶಿ ಭೂಸನೂರಮಠ ರಾವೂರ ಶ್ರೀ ಸಿದ್ಧಲಿಂಗೇಶ್ವರ ಮಠ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳು, ೧೯೬೫
ಶೂನ್ಯಸಂಪಾದನೆ ಒಂದು ಅವಲೋಕನ	ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೯೬

ಶೈಕ್ಷಣಿಕ ಮನೋವಿಜ್ಞಾನ	ಎನ್. ಬಿ.ಕೊಂಗವಾಡ ವಿದ್ಯಾನಿಧಿ ಪ್ರಕಾಶನ ಗದಗ, ೨೦೦೦
ಷಟ್ಸ್ಥಲ ಪ್ರಭೆ	ಡಾ. ಆರ್. ಸಿ. ಹಿರೇಮಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೬
ಷಣ್ಮುಖಗಳ ಷಟ್‌ಸ್ಥಲ ವಚನಗಳು (ಸಮಗ್ರ ವಚನ ಸಂಪುಟ ೧೪)	ಸಂ. ಡಾ. ವೀರಣ್ಣ ರಾಜೂರ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೩
ಸಕಲ ಪುರಾತನರ ಬೆಡಗಿನ ವಚನಗಳು	ಸಂ. ಡಾ. ಎಂ. ಎಸ್. ಸುಂಕಾಪುರ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೮
ಚಂದಿಮರಸನ ವಚನಗಳು (ಸಮಗ್ರ ವಚನ ಸಂಪುಟ ೭)	ಸಂ. ಡಾ.ಎಸ್.ವಿದ್ಯಾಶಂಕರ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೩
ಸತ್ಯವೇದವು (ಕನ್ನಡ ಬೈಬಲ್)	ಇಂಡಿಯಾ ಸಿಲೋನ್ ದೇಶಗಳ ಸತ್ಯವೇದ ಸಂಘ ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, ೧೯೬೧
ಸರ್ವಜ್ಞನ ವಚನಗಳು	ಸಂ. ಚೆನ್ನಪ್ಪ ಉತ್ತಂಗಿ ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು
ಸಾಹಿತ್ಯ ಶಾಸ್ತ್ರ	ಕರ್ಪೂರ ಶ್ರೀನಿವಾಸರಾವ್ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೧
ಸಿದ್ಧಾಂತ ಶಿಖಾಮಣಿ	ಸಂ. ಶ್ರೀ ಸಿದ್ಧೇಶ್ವರ ಸ್ವಾಮಿಗಳು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೯
ಹರಿಶ್ಚಂದ್ರಕಾವ್ಯ ಸಂಗ್ರಹ ಕೃಷ್ಣಶಾಸ್ತ್ರಿ	ಸಂ. ಟಿ. ಎಸ್. ವೆಂಕಣ್ಣಯ್ಯ ಮತ್ತು ಎ. ಆರ್. ಪ್ರಸಾರಾಂಗ ಮೈಸೂರ ವಿಶ್ವವಿದ್ಯಾನಿಲಯ, ಮೈಸೂರು, ೧೯೯೮

ಹರಿಹರನ ರಗಳೆಗಳು	ಸಂ. ಎಂ. ಎಂ. ಕಲಬುರ್ಗಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯
ಹಿಂದೂ ಧರ್ಮ	ಸ್ವಾಮಿ ಹರ್ಷಾನಂದ ಶ್ರೀ ರಾಮಕೃಷ್ಣಾಶ್ರಮ, ಬೆಂಗಳೂರು, ೧೯೯೦
ಜ್ಞಾನಗಂಗೋತ್ರಿ ಸಂಪುಟ ೫ (ಕಲೆ, ಸಾಹಿತ್ಯ)	ಪ್ರ. ಸಂ. ನಿರಂಜನ ಕರ್ನಾಟಕ ಕೋಆಪರೇಟಿವ್ ಪಬ್ಲಿಷಿಂಗ ಹೌಸ ಲಿಮಿಟೆಡ್ ಬೆಂಗಳೂರು, ೧೯೭೭
ಜ್ಞಾನ, ವಿಜ್ಞಾನ, ತತ್ವಜ್ಞಾನ	ಕಾಕತಕರ ವಾಸುದೇವರಾವ ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೯೮
ಜ್ಞಾನಸಿಂಧು (ಶ್ರೀ ಚಿದಾನಂದಾವಧೂತ ವಿರಚಿತ)	ಸಂ. ಡಾ. ಜಿ. ಎಸ್. ಕಾಪಸೆ ಶ್ರೀ ಹುರಕಡ್ಲಿ ಅಜ್ಜಶಿಕ್ಷಣ ಸಮಿತಿ, ಧಾರವಾಡ, ೧೯೯೦

ಇಂಗ್ಲಿಷ

Aspects of Kashmir Saivism	Dr. B.N. Pandit. Utpal Publications Srinagar, Kashmir, 1977
Educational Psychology	Blair-Jones-Simpson The Macmillan Company, New York, 1964
Immortal Quotations and proverbs	Ed. Dr. P.D.Sharma S.Chand and Company New Delhi, 1992
Selected Poems of T.S.Eliot	T.S.Eliot Faber and Faber 3 Queen Square London, 1972

The Piligrim's Progress — John Bunyan
Everyman's Library
Dulton, New York, 1964

ಇತರ

ಶ್ರೀ ಮದ್ಭಗವದ್ಗೀತಾ (ಹಿಂದಿ) — ಸಂ: ಘನಶ್ಯಾಮದಾಸ ಜಾಲಾಲ
ಗೀತಾ ಪ್ರೆಸ್ ಗೋರಖಪುರ, ೧೯೫೭

ಕುರ್-ಆನ್-ಮಜೀದ
(ಕನ್ನಡ ಲಿಪಿಯಲ್ಲಿ) — ಸಂ: ಟಿ. ಎಫ್. ದೇಸಾಯಿ
ಆರಫಾದ ಬುಕ್ ಹೌಸ
ದುರ್ಗದಬೈಲ ಹುಬಲಿ, ೧೯೯೫

ಕಾಮಿಲ್-ತಾಲಿಮ-ಉಲ್-ಇಸ್ಲಾಂ
(ಹಿಸ್ಸಾದುವಮ್) — ಮುಫ್ತಿ ಮೊಹ್ಮದ್ ಖಿಫಾಯತುಲ್ಲಾ
ಕುತುಬಖಾನಾ ಅರ್ಝೀಝಿಯಾ
ದೆಹಲಿ ೨೦೦೦

ಸೂಫಿ ನಿಯಾಜಿ ಔರ ಜಜ್ಜಮೆಂಟ — ಶಮಾ ನಿಯಾಜಿ
ಗೋಹರಅಲಿ ನಿಯಾಜಿ ಕಲಕತ್ತಾ ೧೯೯೪

ತಾಜಿಯಾ ಕೀ ಹಕೀಕತ್
(ಮೊಹರಂ ಹಬ್ಬದ ನಿಜಾಂಶ) — ಎ.ಚ್.ಪಾಗೆ
ಗೋಹರಅಲಿ ನಿಯಾಜಿ
ಕಲಕತ್ತಾ, ೧೯೪೫

ನಿಘಂಟುಗಳು

ಕನ್ನಡ ಇಂಗ್ಲಿಷ ಡಿಕ್ಷನರಿ — ರೆ. ಎಫ್. ಕಿಟೆಲ್
ಏಷಿಯನ್ ಎಜ್ಯುಕೇಶನಲ್ ಸರ್ವೀಸಸ್
ನ್ಯೂ ಡೆಲ್ಲಿ, ೧೯೪೪

ಮೈಸೂರು ವಿಶ್ವವಿದ್ಯಾಲಯದ
ಇಂಗ್ಲಿಷ-ಕನ್ನಡ ನಿಘಂಟು — ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು, ೧೯೬೫

The Little Oxford Dictionary — Maurice Waite, Oxford University Press, Oxford, Rekha Printers Pvt. Ltd. New Delhi, 1998

ನಿಯತಕಾಲಿಕೆಗಳು

ಪ್ರಜಾಭಿಮಾನಿ ವಾರಪತ್ರಿಕೆ — ಜಿ. ಎಸ್. ವಡಗಾಂವಿ, ಬನಹಟ್ಟಿ, ಸಪ್ಟಂಬರ ೫, ೧೯೯೪

ಬಸವ ಪಥ, ವಚನಗಳಲ್ಲಿ ವಿಶ್ವೋತ್ಪತ್ತಿ ಸಿದ್ಧಾಂತ) — ಪ್ರ. ಸಂ. ಪ್ರೊ. ಬಿ. ವಿರೂಪಾಕ್ಷಪ್ಪ, ಸಂಪುಟ ೧೯, ಡಿಸೆಂಬರ ೧೯೯೭, ಬೆಂಗಳೂರು

ಶರಣವಾಹಿನಿ ಮಾಸಪತ್ರಿಕೆ (ಯಥಾ ಬ್ರಹ್ಮಾಂಡ ತಥಾ ಪಿಂಡಾಂಡ) — ದೇವಯ್ಯಬಾಗ, ನವ್ಹಂಬರ, ೧೯೯೧

❊ ❊ ❊ ❊ ❊ ❊ ❊

AKSHARA GRANTHALAYA
ACC.NO. 050712